ಮಲಯಾಳಂ ಕಥನಸಾಹಿತ್ಯದಲ್ಲಿ ಸ್ತ್ರೀ ನಿರ್ವಚನ

(ಕನ್ನಡ ಅನುವಾದಗಳನ್ನು ಅನುಲಕ್ಷಿಸಿ)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಸಂಶೋಧನಾ ಮಹಾಪ್ರಬಂಧ

ಸಂಶೋಧನೆ

ಮಂಜುಳಾ ಶೆಟ್ಟಿ
ನೋಂದಣಿ ಸಂಖ್ಯೆ ೧೫೦೧೦೫೦೨೦೦೩೩

ಮಾರ್ಗದರ್ಶನ

ಡಾ. ಎ. ಮೋಹನ ಕುಂಟಾರ್
ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಮಲಯಾಳಂ ಕಥನಸಾಹಿತ್ಯದಲ್ಲಿ ಸ್ತ್ರೀ ನಿರ್ವಚನ

(ಕನ್ನಡ ಅನುವಾದಗಳನ್ನು ಅನುಲಕ್ಷಿಸಿ)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಸಂಶೋಧನಾ ಮಹಾಪ್ರಬಂಧ

ಸಂಶೋಧನೆ

ಮಂಜುಳಾ ಶೆಟ್ಟಿ
ನೋಂದಣಿ ಸಂಖ್ಯೆ ೧೪೦೧೦೪೦೨೦೦೨೨

ಮಾರ್ಗದರ್ಶನ

ಡಾ. ಎ. ಮೋಹನ ಕುಂಟಾರ್
ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೨೦

ಸಂಶೋಧಕರ ಪ್ರಮಾಣಪತ್ರ

ಮಲಯಾಳಂ ಕಥನಸಾಹಿತ್ಯದಲ್ಲಿ ಸ್ತ್ರೀ ನಿರ್ವಚನ (ಕನ್ನಡ ಅನುವಾದಗಳನ್ನು ಅನುಲಕ್ಷಿಸಿ) ಎಂಬ ಈ ಮಹಾಪ್ರಬಂಧವನ್ನು ಡಾ. ಎ. ಮೋಹನ ಕುಂಟಾರ್, ಪ್ರಾಧ್ಯಾಪಕರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಭಾಷಾ ನಿಕಾಯದ ಭಾಷಾಂತರ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ, ಹಂಪಿ

ದಿನಾಂಕ: ೧೪-೦೯-೨೦೨೦

(ಮಂಜುಳಾ ಶೆಟ್ಟಿ)
ಸಂಶೋಧನಾ ವಿದ್ಯಾರ್ಥಿನಿ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದೃಢೀಕರಣ ಪತ್ರ

ಮಂಜುಳಾ ಶೆಟ್ಟಿ, ನೋಂದಣಿ ಸಂಖ್ಯೆ ೧೪೦೧೦೪೦೨೦೦೨೨ ಇವರು ನನ್ನ ಮಾರ್ಗದರ್ಶನದಲ್ಲಿ **ಮಲಯಾಳಂ ಕಥನಸಾಹಿತ್ಯದಲ್ಲಿ ಸ್ತ್ರೀ ನಿರ್ವಚನ** (ಕನ್ನಡ ಅನುವಾದಗಳನ್ನು ಅನುಲಕ್ಷಿಸಿ) ಎಂಬ ಸಂಶೋಧನಾ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಭಾಷಾಂತರ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಇಡಿಯಾಗಿ ಅಥವಾ ಬಿಡಿಯಾಗಿ ಎಲ್ಲಿಯೂ ಪ್ರಕಟವಾಗಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ, ಹಂಪಿ

ದಿನಾಂಕ: ೧೪. ೦೬. ೨೦೨೦

ಮಾರ್ಗದರ್ಶಕರು

ಡಾ. ಎ. ಮೋಹನ ಕುಂಟಾರ್
ಪ್ರಾಧ್ಯಾಪಕ, ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾ. ಬಳ್ಳಾರಿ ಜಿ.

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೨. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ೧: ಪ್ರಸ್ತಾವನೆ

ನಾವು ಬದುಕುತ್ತಿರುವ ಸಮಾಜದಲ್ಲಿ ಲಿಂಗಾಧಾರಿತ ಅಸಮಾನತೆ ಇದೆ ಎಂಬ ತಿಳುವಳಿಕೆಯೊಂದಿಗೆ ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ತಾರತಮ್ಯ, ದೌರ್ಜನ್ಯ, ಶೋಷಣೆಗಳಿಗೆ ಒಳಗಾಗಿರುವುದನ್ನು ಗುರುತಿಸುವ, ಈ ಅಸಮಾನತೆಯ ವಿರುದ್ಧ ಧ್ವನಿಯೆತ್ತುವ, ಸಮಸಂಸ್ಕೃತಿಯ ನಿರ್ಮಾಣದೆಡೆಗಿನ ಪ್ರಜ್ಞಾಪೂರ್ವಕವಾದ ಯತ್ನವನ್ನು ಸ್ತ್ರೀವಾದ ಎನ್ನಬಹುದು. ಸ್ತ್ರೀಪರವಾದ ಚಿಂತನೆಯುಳ್ಳ ಪುರುಷರನ್ನೂ ಒಳಗೊಂಡಂತೆ ನಡೆಯುವ ಒಂದು ಜೀವಪರವಾದ ಹೋರಾಟ ಅದು. ಅಮೆರಿಕಾ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಹುಟ್ಟಿ, ಕ್ರಮೇಣ ಜಗತ್ತಿನ ಎಲ್ಲೆಡೆ ಹರಡಿಕೊಂಡ ಸ್ತ್ರೀವಾದಿ ಚಳವಳಿಯ ಪರಿಣಾಮವಾಗಿ ಸಾಹಿತ್ಯದಲ್ಲೂ ಸ್ತ್ರೀವಾದವು ಕಾಣಿಸಿಕೊಂಡಿತು. ಸ್ತ್ರೀವಾದೀ ಅರಿವಿನೊಂದಿಗೆ ಸಾಹಿತ್ಯದ ನಿರ್ಮಾಣ, ಓದು ಮತ್ತು ವಿಶ್ಲೇಷಣೆಗಳ ಬಗ್ಗೆ ವ್ಯಾಪಕ ಚರ್ಚೆಗಳು ನಡೆದವು. ಸಾಹಿತ್ಯದಲ್ಲಿ ಸ್ತ್ರೀತ್ವದ ಶೋಧವು ಸ್ತ್ರೀವಾದಿ ವಿಮರ್ಶೆಯ ಮೊದಲ ಯತ್ನ.

ಸ್ತ್ರೀವಾದದ ಚಿಂತನೆಯಲ್ಲಿ ಲಿಂಗವ್ಯವಸ್ಥೆಯು ಬಹಳ ಮುಖ್ಯ ಸ್ಥಾನವನ್ನು ಪಡೆದಿದೆ. ಆದ್ದರಿಂದಲೇ ಸಾಂಸ್ಕೃತಿಕ ಸಂಕಥನಗಳೆನಿಸಿರುವ ಪುರಾಣ, ಸಾಹಿತ್ಯ, ಜನಪದ ಆಚರಣೆಗಳ ಪುನರ್‌ವ್ಯಾಖ್ಯಾನವು ಸ್ತ್ರೀವಾದದ ಕಾಳಜಿಗಳಲ್ಲಿ ಒಂದು. ಪುರುಷಪ್ರಧಾನವಾದ ಸಾಮಾಜಿಕ ವ್ಯವಸ್ಥೆಯು ಹೆಣ್ಣು ಮತ್ತು ಗಂಡಿನ ಸೃಜನಾತ್ಮಕ ಅಭಿವ್ಯಕ್ತಿಯ ಮೇಲೆ ಪ್ರಭಾವ ಬೀರುತ್ತದೆ. ಮಹಿಳಾ ಸಾಹಿತ್ಯದಲ್ಲಿ ಪುರುಷರನ್ನು ಕುರಿತಾದ ವ್ಯಾಖ್ಯಾನವಿರುವಂತೆ, ಪುರುಷರ ಸಾಹಿತ್ಯಿಕ ಸಂರಚನೆಗಳಲ್ಲಿ ಅಭಿವ್ಯಕ್ತವಾಗಿರುವ ಲಿಂಗವ್ಯವಸ್ಥೆಯ ಪಠ್ಯಗಳನ್ನು ಅರ್ಥೈಸಿಕೊಳ್ಳಬೇಕಾಗಿದೆ.

ಸಾಮಾನ್ಯವಾಗಿ ಸಾಂಸ್ಕೃತಿಕ ಪರಂಪರೆಯ ಸಂರಚನೆಗಳ ವಿಶ್ಲೇಷಣೆಯೇ ಸ್ತ್ರೀವಾದದ ಪ್ರಮುಖ ಗುರಿಯಾದರೂ, ಈ ಯತ್ನವು ಸ್ಪಷ್ಟವಾಗಿ ಕಾಣುವುದು ಸಾಹಿತ್ಯ ವಿಮರ್ಶೆಯಲ್ಲಿ. ಸಾಹಿತ್ಯವು ಕೇವಲ ಇರುವ ವ್ಯವಸ್ಥೆಯ ಪ್ರತಿಪಾದನೆಯಲ್ಲ, ಅದೊಂದು ಪ್ರಜ್ಞಾಪೂರ್ವಕ ನಿರ್ಮಾಣ ಎಂದು ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯು ಭಾವಿಸುತ್ತದೆ. ಹಾಗಾಗಿ ಅಧಿಕಾರ ಸಂಬಂಧ ಮತ್ತು ಲಿಂಗಭೇದ ಸಂಬಂಧಗಳನ್ನು ಸಾಹಿತ್ಯದಲ್ಲಿ ಹೇಗೆ ಅರ್ಥೈಸಲಾಗುತ್ತದೆ ಎಂಬುದಕ್ಕೆ ಒತ್ತು ಕೊಡುತ್ತದೆ. ಸಾಹಿತ್ಯಕೃತಿಗಳಲ್ಲಿ ಇರುವ ಪುರುಷಪಾರಮ್ಯದ ಸಂರಚನೆಯನ್ನು, ಸಾಮಾಜಿಕ ಸಂರಚನೆಗಳಲ್ಲಿನ

ಲಿಂಗತ್ವವು ಭಾಷೆಯಲ್ಲಿ ಲಿಂಗ ರಾಜಕಾರಣಕ್ಕೆ ಕಾರಣವಾಗುವುದನ್ನು ಹಾಗೂ ಪುರುಷಪ್ರಧಾನ ಮೌಲ್ಯಗಳಿಗೆ ಪರ್ಯಾಯವಾಗಿ ಲೇಖಕರು ಪ್ರತಿಪಾದಿಸುವ ಸ್ತ್ರೀಪರ ಮೌಲ್ಯಗಳನ್ನು ಗಮನಿಸುತ್ತದೆ. ಸಾಹಿತ್ಯದಲ್ಲಿ ಸ್ಥಾಪಿತವಾಗಿರುವ ಪುರುಷಶ್ರೇಷ್ಠತೆಯ ವಿರುದ್ಧ ಹೋರಾಡುತ್ತದೆ. ಸಾಹಿತ್ಯದಲ್ಲಿ ಚಿತ್ರಿಸಲಾಗಿರುವ ಸ್ತ್ರೀಜೀವನದ ಅಸಮರ್ಪಕತೆಯನ್ನು ವಿಮರ್ಶಿಸುತ್ತದೆ.

ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಎಂದು ಗುರುತಿಸಲಾಗುವ ಈ ಚಿಂತನಾ ವಿಧಾನವು ಸ್ತ್ರೀಕೇಂದ್ರಿತ ವೈಚಾರಿಕ ನೆಲೆಯೊಂದಿಗೆ ಸಾಹಿತ್ಯದಲ್ಲಿ ಪಡಿಮೂಡಿರುವ ಸ್ತ್ರೀಯ ಚಿತ್ರಣವನ್ನು ಪರಿಶೀಲಿಸುವುದು, ಮಹಿಳಾ ಸಾಹಿತ್ಯಕ್ಕೆ ಬಂದಿರುವ ವಿಮರ್ಶೆಗಳನ್ನು ವಿಶ್ಲೇಷಿಸುವುದು, ಸ್ತ್ರೀ ಪ್ರಶ್ನೆಗಳಿಗೆ ಲೇಖಕ–ಲೇಖಕಿಯರು ತಮ್ಮ ಕೃತಿಗಳ ಮೂಲಕ ಪ್ರತಿಕ್ರಿಯಿಸಿರುವ ಬಗೆಗಳನ್ನು ಗಮನಿಸುವುದು, ವಾತ್ಸಲ್ಯಪರತೆ, ಸ್ವಾಯತ್ತತೆ, ಶಾಂತಿಪ್ರಿಯತೆ ಮುಂತಾದ ಸ್ತ್ರೀಯರ ಮೂಲಸತ್ವ ಎನ್ನಬಹುದಾದ ಸ್ತ್ರೀವಿಶಿಷ್ಟ ಸಂವೇದನೆಯನ್ನು ಗುರುತಿಸುವುದು, ಸ್ತ್ರೀವಿಶಿಷ್ಟ ಪ್ರಜ್ಞೆಯೊಂದಿಗೆ ಸೃಜನಶೀಲ ಮತ್ತು ವೈಚಾರಿಕ ಕೃತಿಗಳನ್ನು ರಚಿಸುವುದು.. ಮುಂತಾದ ನೆಲೆಗಳಲ್ಲಿ ಕೆಲಸ ಮಾಡುತ್ತದೆ.

ದೀರ್ಘ ಇತಿಹಾಸ, ಸಮೃದ್ಧ ಪರಂಪರೆ ಮತ್ತು ಸಂಸ್ಕೃತಿಗಳನ್ನು ಹೊಂದಿರುವ ಭಾರತವು ತನ್ನದೇ ಆದ ಸ್ತ್ರೀವಾದಿ ತಾತ್ವಿಕತೆಯನ್ನು ನಿರ್ವಚಿಸಿಕೊಳ್ಳುವುದು ಸಾಧ್ಯವಿದೆ ಎಂಬ ಅಭಿಪ್ರಾಯದೊಂದಿಗೆ, ಇಪ್ಪತ್ತನೇ ಶತಮಾನದ ಕೊನೆಯ ಭಾಗದಲ್ಲಿ ಭಾರತದಲ್ಲಿ ಸ್ತ್ರೀವಾದಿ ಸಾಹಿತ್ಯ ಅಧ್ಯಯನ ಮತ್ತು ವಿಮರ್ಶೆಗಳು ಆರಂಭವಾದವು. ಭಾರತೀಯ ಸ್ತ್ರೀವಾದವೆಂಬುದು ಇಲ್ಲಿನ ಹೆಣ್ಣಿನ ಅನುಭವದಿಂದಲೇ ರೂಪುಗೊಳ್ಳಬೇಕು ಎಂಬ ಪ್ರತಿಪಾದನೆ ಮತ್ತು ಆಶಯಗಳನ್ನು ನಮ್ಮ ದೇಶದ ಚಿಂತಕರು ಹಾಗೂ ವಿಮರ್ಶಕರು ಹೊಂದಿದ್ದಾರೆ. ವಸಾಹತೀಕರಣ, ಜಾಗತೀಕರಣ ಹಾಗೂ ಆಧುನಿಕ ಶಿಕ್ಷಣದಿಂದ ದತ್ತವಾದ ಹೊಸ ಆಲೋಚನಾಕ್ರಮದ ಪರಿಣಾಮವಾಗಿ ಭಾರತದ ಪಿತೃಪ್ರಧಾನ ಪರಂಪರೆಯ ಸಿದ್ಧ ಚೌಕಟ್ಟುಗಳನ್ನು ಮೀರುವ ಹಾಗೂ ಸಾಂಪ್ರದಾಯಿಕ ಸಮಾಜದ ಏಕಮುಖೀ ಗ್ರಹಿಕೆಗಳನ್ನು ಪ್ರಶ್ನಿಸುವ ಪ್ರಯತ್ನಗಳು ಭಾರತೀಯ ಸಮಾಜ ಮತ್ತು ಸಾಹಿತ್ಯ ಎರಡರಲ್ಲೂ ನಡೆಯುತ್ತಿವೆ.

ಸುಮಾರಾಗಿ ಎಂಭತ್ತರ ದಶಕದ ನಂತರ ಕನ್ನಡ ಮತ್ತು ಇತರ ಭಾರತೀಯ ಭಾಷೆಗಳ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ಸ್ತ್ರೀವಾದದ ವಿಮರ್ಶಾ ನೆಲೆಯು ಸಾಹಿತ್ಯದ ಕುರಿತಾದ ಸ್ತ್ರೀವಾದೀ ತಾತ್ವಿಕತೆಯ ಅಧ್ಯಯನಗಳಿಗೆ ಪ್ರೇರಣೆಯಾಯಿತು. ವಿಮರ್ಶೆಯ ಮುಖ್ಯವಾಹಿನಿಯ ಲಕ್ಷ್ಯಕ್ಕೆ ಬಾರದ ಅಥವಾ ಉದ್ದೇಶಪೂರ್ವಕ ನಿರ್ಲಕ್ಷಿಸಲ್ಪಟ್ಟ ಸಂಗತಿಗಳನ್ನು, ಒಂದು ಸಮುದಾಯದ ಸೃಜನಶೀಲ ಅಭಿವ್ಯಕ್ತಿ ಎನಿಸಿಕೊಂಡಿರುವ ಸಾಹಿತ್ಯದಲ್ಲಿ ಪ್ರಕಟಗೊಳ್ಳುವ ಮಹಿಳಾ ಅನುಭವಗಳನ್ನು ಹಾಗೂ ಅದೃಶ್ಯವಾಗಿರುವ ಮಹಿಳಾ ಧ್ವನಿಯನ್ನು ಶೋಧಿಸುವುದು ಮತ್ತು ವಿಶ್ಲೇಷಿಸುವುದು 'ಕನ್ನಡ ಸ್ತ್ರೀವಾದಿ ಸಾಹಿತ್ಯ ವಿಮರ್ಶೆ'ಯ ಪ್ರಧಾನ ಕಾಳಜಿಯಾಗಿದೆ.

ಕನ್ನಡದಲ್ಲಿ ತೊಂಬತ್ತರ ದಶಕದಲ್ಲಿ ಬಿ. ಎನ್. ಸುಮಿತ್ರಾಬಾಯಿ, ವಿಜಯಾ ದಬ್ಬೆ, ನೇಮಿಚಂದ್ರ, ತೇಜಸ್ವಿನಿ ನಿರಂಜನ ಹಾಗೂ ಸೀಮಂತಿನಿ ನಿರಂಜನ. ಮೊದಲಾದ ಲೇಖಕಿಯರ ಬರಹಗಳ ಮೂಲಕ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ಸ್ಪಷ್ಟ ಹೆಜ್ಜೆಗಳನ್ನು ಗುರುತಿಸಲಾಗಿದೆ. ಅಚಲ, ಮಾನಸ ಮುಂತಾದ ಸ್ತ್ರೀವಾದಿ ಪತ್ರಿಕೆಗಳು, ಕರ್ನಾಟಕ ಲೇಖಕಿಯರ ಸಂಘ ಮುಂತಾದ ಸ್ತ್ರೀವಾದಿ ಮಹಿಳಾ ಸಂಘಟನೆಗಳು ಸ್ತ್ರೀಸಮೂಹದಲ್ಲಿ ವೈಚಾರಿಕ ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡಿವೆ.

ಒಂದು ಸಾಹಿತ್ಯ ಕೃತಿಯಲ್ಲಿನ ಮಹಿಳಾ ಬದುಕಿನ ವಿವರಗಳನ್ನು ಹೊಸ ರೀತಿಯಲ್ಲಿ ನೋಡುವ ಕನ್ನಡದ ಸ್ತ್ರೀವಾದಿ ಚಿಂತನೆಯು, ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವು ಹೊಸ ನೆಲೆಯ ಅಧ್ಯಯನಗಳಿಗೆ ಪ್ರೇರಣೆಯಾಗಿದೆ. ಅನುವಾದ ಸಾಹಿತ್ಯದ ಮೂಲಕ ಆಕರ ಸಾಹಿತ್ಯದ ಮತ್ತು ಸಂಸ್ಕೃತಿಯ ಗ್ರಹಿಕೆ ಹಾಗೂ ವಿಶ್ಲೇಷಣೆಯು ಅಂಥದೊಂದು ಅಧ್ಯಯನದ ನೆಲೆಯಾಗಿದೆ. ಈಗಾಗಲೇ ಈ ದಿಸೆಯಲ್ಲಿ ಹಲವು ಪ್ರಯತ್ನಗಳು ನಡೆದಿವೆ, ನಡೆಯುತ್ತಿವೆ. ಆದರೆ ನಮ್ಮ ನೆರೆಯ ಭಾಷೆಯಾಗಿರುವ ಮಲಯಾಳಂ ಸಾಹಿತ್ಯದ ಬಗ್ಗೆ ಹೆಚ್ಚಿನ ಅಧ್ಯಯನಗಳು ಕನ್ನಡದಲ್ಲಿ ನಡೆದಂತಿಲ್ಲ. ಈ ದೃಷ್ಟಿಯಿಂದ ಕನ್ನಡಕ್ಕೆ ಅನುವಾದವಾಗಿರುವ ಮಲಯಾಳಂ ಕಥನಸಾಹಿತ್ಯದ ಸ್ತ್ರೀ ನಿರ್ವಚನದ ಸ್ವರೂಪ ಮತ್ತು ವಿಶಿಷ್ಟತೆಗಳನ್ನು ಅವಲೋಕಿಸುವ ಕೆಲಸ ಆಗಬೇಕಾಗಿದೆ. ಅನುವಾದ ಸಾಹಿತ್ಯ ವಿಮರ್ಶೆಯ ಮುಂದಿನ ಮಾರ್ಗಗಳನ್ನು ಕಂಡುಕೊಳ್ಳುವ ದೃಷ್ಟಿಯಿಂದಲೂ ಒಂದು ಅವಲೋಕನ ಮತ್ತು ವಿಶ್ಲೇಷಣೆಯ ಅಗತ್ಯವಿದೆ.

ಈ ಹಿನ್ನೆಲೆಯಲ್ಲಿ, ಮಲಯಾಳಂ ಕೃತಿಗಳಲ್ಲಿ ದಾಖಲಾಗಿರುವ ಸ್ತ್ರೀ ಮಾದರಿಗಳು, ಪ್ರಕಟವಾಗಿರುವ ಮಹಿಳಾ ಅನುಭವಗಳು, ಅವು ಎತ್ತುವ ಮಹಿಳಾ ಸಮಸ್ಯೆಗಳು ಮತ್ತು ಪ್ರಶ್ನೆಗಳು, ಪ್ರತಿಪಾದಿಸುವ ಸ್ತ್ರೀ ಸ್ವಾತಂತ್ರ್ಯದ ಸ್ವರೂಪ... ಇವುಗಳನ್ನು ಸ್ತ್ರೀವಾದೀ ಓದಿನ ಹಿನ್ನೆಲೆಯಲ್ಲಿ ಚರ್ಚಿಸುವ ಆಶಯದೊಂದಿಗೆ ಅಧ್ಯಯನವನ್ನು ಆರಂಭಿಸಲಾಗಿದೆ.

೧.೧. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಕನ್ನಡಕ್ಕೆ ಅನುವಾದವಾಗಿರುವ ಮಲಯಾಳಂ ಕಥನಸಾಹಿತ್ಯವನ್ನು ಪ್ರಮುಖ ಆಕರವಾಗಿ ಬಳಸಿಕೊಂಡು ಪ್ರಸ್ತುತ ಅಧ್ಯಯನವನ್ನು ರೂಪಿಸಲಾಗಿದೆ. ಹಾಗಾಗಿ ಈ ಅಧ್ಯಯನವು ಮಲಯಾಳಂ ಸಾಹಿತ್ಯದ ಸ್ತ್ರೀ ನಿರ್ವಚನ ಎನ್ನುವುದಕ್ಕಿಂತಲೂ ಮಲಯಾಳಂ ಸಾಹಿತ್ಯದಿಂದ ಕನ್ನಡ ಸಾಹಿತ್ಯಲೋಕವು ಸ್ವೀಕರಿಸಿದ ಸ್ತ್ರೀ ನಿರ್ವಚನದ ಸ್ವರೂಪವನ್ನು ಮಾತ್ರ ವಿಶ್ಲೇಷಿಸುತ್ತದೆ.

ಮಲಯಾಳಂನಿಂದ ಸುಮಾರು ಎಂಭತ್ತರಷ್ಟು ಕಾದಂಬರಿಗಳು, ನಲವತ್ತರಷ್ಟು ಕಥಾಸಂಕಲನಗಳು ಕನ್ನಡಕ್ಕೆ ಅನುವಾದವಾಗಿರುವುದನ್ನು ಗಮನಿಸಲಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಶನಲ್ ಬುಕ್ ಟ್ರಸ್ಟ್... ಮತ್ತಿತರ ಸಂಸ್ಥೆಗಳ ಮೂಲಕ, ಜೊತೆಗೆ ವೈಯಕ್ತಿಕ ಆಸಕ್ತಿಯ ನೆಲೆಯಲ್ಲಿ ಈ ಭಾಷಾಂತರ ಪ್ರಕ್ರಿಯೆ ನಡೆದಿದೆ. ಈ ಮೂಲಕ ನೆರೆಹೊರೆಯಲ್ಲಿರುವ ಎರಡು ಭಾಷೆಗಳ ನಡುವೆ ಒಂದು ಸಾಹಿತ್ಯಿಕ ಸಂಬಂಧ ಸಾಧ್ಯವಾಗಿದೆ. ತಗಳಿ ಶಿವಶಂಕರ ಪಿಳ್ಳೆ, ಎಂ. ಟಿ. ವಾಸುದೇವನ್ ನಾಯರ್, ವೈಕ್ಕಂ ಮಹಮ್ಮದ್ ಬಶೀರ್, ಕಮಲಾ ದಾಸ್, ಲಲಿತಾಂಬಿಕಾ ಅಂತರ್ಜನಂ, ಬಿ.ಎಂ.ಸುಹರಾ, ಚಂದು ಮೆನೊನ್, ಎಸ್. ಕೆ. ಪೊಟ್ಟೆಕ್ಕಾಟ್ಟ್, ಉರೂಬ್ ಮುಂತಾದ ಲೇಖಕರ ಕೃತಿಗಳು ಕನ್ನಡಕ್ಕೆ ಅನುವಾದವಾಗಿವೆ. ಇದರಿಂದ ಮಲಯಾಳಂನ ಬಹುತೇಕ ಪ್ರಮುಖ ಲೇಖಕರ ಪ್ರಾತಿನಿಧಿಕ ಕೃತಿಗಳು ಕನ್ನಡಕ್ಕೆ ಅನುವಾದವಾಗಿವೆ ಎಂಬುದನ್ನು ತಿಳಿದುಕೊಳ್ಳಬಹುದು.

ಅನುವಾದ ಸಾಹಿತ್ಯವು ಆಕರಭಾಷೆಗೂ ಸ್ವೀಕರಿಸುವ ಭಾಷೆಗೂ, ಹಾಗೆಯೇ ಆಕರಸಂಸ್ಕೃತಿಗೂ ಸ್ವೀಕರಿಸುವ ಸಂಸ್ಕೃತಿಗೂ ನಡುವೆ ಒಂದು ಸಂವಾದವನ್ನು ಏರ್ಪಡಿಸುತ್ತದೆ. ಓದುಗರಂತೆ ಬರಹಗಾರರೂ ಕೂಡ ಅನುವಾದಿತ ಕೃತಿಗಳಿಂದ ಪ್ರೇರಿತರಾಗಬಹುದು.

ಸಾಹಿತ್ಯದ ಅಧ್ಯಯನದ ಮೂಲಕ ಸಮಾಜ ಮತ್ತು ಸಂಸ್ಕೃತಿಗಳ ಅಧ್ಯಯನ ಮಾಡುವುದು ಸಾಧ್ಯವಿದೆ ಎಂಬ ತಿಳುವಳಿಕೆಯ ಭೂಮಿಕೆಯನ್ನು ಆಧರಿಸಿ, ಆಧುನಿಕ ಮಲಯಾಳಂ ಕಥನಸಾಹಿತ್ಯದ ಸ್ತ್ರೀ ನಿರ್ವಚನದ ಸ್ವರೂಪ ಮತ್ತು ವಿಶಿಷ್ಟತೆಗಳನ್ನು ಶೋಧಿಸುವ ಹಾಗೂ ವಿಶ್ಲೇಷಿಸುವ ಆಶಯದೊಂದಿಗೆ ಪ್ರಸ್ತುತ ಅಧ್ಯಯನವನ್ನು ಕೈಗೊಂಡಿದೆ.

ಅಧ್ಯಯನದ ಉದ್ದೇಶ

ಕೈರಳಿ ಸಮಾಜದ ಪಿತೃಪ್ರಧಾನ ಪರಂಪರೆ ಮತ್ತು ಪುರುಷಪರ ನಿಲುವುಗಳಿಗೆ ಮಲಯಾಳಂ ಬರಹಗಾರರು ತೋರಿದ ಪ್ರತಿಕ್ರಿಯೆಯನ್ನು ಕಂಡುಕೊಳ್ಳುವುದು ಮತ್ತು ವಿವೇಚಿಸುವುದು ಪ್ರಸ್ತುತ ಅಧ್ಯಯನದ ಪ್ರಧಾನ ಉದ್ದೇಶವಾಗಿದೆ.

ಸ್ತ್ರೀಯರಾಗಿ ಸ್ತ್ರೀಯರ ಕುರಿತು ಮಲಯಾಳಂ ಲೇಖಕಿಯರು ಹೊಂದಿರುವ ಸಂವೇದನೆಯ ಸ್ವರೂಪವನ್ನು ಶೋಧಿಸುವ ಉದ್ದೇಶವನ್ನು ಇಟ್ಟುಕೊಂಡಿದೆ. ಮಲಯಾಳಂನ ಪುರುಷ ಮತ್ತು ಮಹಿಳಾ ಲೇಖಕರು ಕಟ್ಟಿಕೊಡುವ ಸ್ತ್ರೀ ನಿರ್ವಚನದ ಮಾದರಿಗಳನ್ನು, ಮಲಯಾಳಂ ಕಥನಸಾಹಿತ್ಯವು ಪ್ರತಿಪಾದಿಸುವ ಸ್ತ್ರೀ ಬದುಕಿನ ವಿಶಿಷ್ಟ ವಿನ್ಯಾಸಗಳನ್ನು ಗುರುತಿಸುವ ಆಶಯವಿದೆ.

ಸ್ತ್ರೀವಾದಿ ವಿಮರ್ಶೆಯ ಸರಿಯಾದ ತಿಳುವಳಿಕೆಯು ಸಾಹಿತ್ಯದ ಓದು ಮತ್ತು ಮೌಲ್ಯಮಾಪನಕ್ಕೆ ಹೇಗೆ ಹೊಸ ಅನುಭವ ಅಥವಾ ಹೊಸ ನೋಟವನ್ನು ಒದಗಿಸಬಲ್ಲುದು ಎಂಬುದನ್ನು ಮನವರಿಕೆ ಮಾಡಿಕೊಳ್ಳುವ ಉದ್ದೇಶವೂ ಈ ಅಧ್ಯಯನಕ್ಕಿದೆ.

ಈ ಉದ್ದೇಶಗಳಿಗೆ ಪೂರಕವಾಗುವಂತೆ ಅಧ್ಯಯನದ ಪೂರ್ವದಲ್ಲಿ ಕೆಳಗಿನ ಸಂಶೋಧನಾ ಪ್ರಶ್ನೆಗಳನ್ನು ರೂಪಿಸಿಕೊಳ್ಳಲಾಗಿತ್ತು:

- ಸ್ತ್ರೀಯರ ಸಾಮಾಜಿಕ ಸ್ವಾತಂತ್ರ್ಯ ಮತ್ತು ಪಾಲ್ಗೊಳ್ಳುವಿಕೆಯ ಬಗ್ಗೆ ಮಲಯಾಳಂ ಲೇಖಕರ ನಿಲುವುಗಳೇನು?
- ಸ್ತ್ರೀಯರ ಲೈಂಗಿಕ ಸ್ವಾತಂತ್ರ್ಯದ ಬಗ್ಗೆ ಮಲಯಾಳಂ ಲೇಖಕರ ನಿಲುವುಗಳೇನು?
- ಸ್ತ್ರೀಯರ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಗಳ ಬಗ್ಗೆ ಮಲಯಾಳಂ ಲೇಖಕರ ನಿಲುವುಗಳೇನು?
- ಮಲಯಾಳಂ ಕಥನಸಾಹಿತ್ಯದ ಸ್ತ್ರೀ ನಿರ್ವಚನದಲ್ಲಿ ವಿಶಿಷ್ಟ ವಿನ್ಯಾಸವೇನಾದರೂ ಇದೆಯೆ?

ಮಲಯಾಳಂ ಕಥನಸಾಹಿತ್ಯವನ್ನು ಸ್ತ್ರೀವಾದೀ ಅರಿವಿನೊಂದಿಗೆ ಪ್ರವೇಶಿಸುವ ಮತ್ತು ವಿಶ್ಲೇಷಿಸುವ ಮೂಲಕ ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಮುಖ್ಯವಾಗಿ ಮಲಯಾಳಂ ಭಾಷೆಯ ಕಥೆ ಮತ್ತು ಕಾದಂಬರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಕ್ಕೆ ಭಾಷಾಂತರವಾಗಿರುವುದನ್ನು ಗಮನಿಸಿ, ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಮಲಯಾಳಂನಿಂದ ಕನ್ನಡಕ್ಕೆ ಬಂದಿರುವ ಕಥನಸಾಹಿತ್ಯದ ವಿಶ್ಲೇಷಣೆಗೆ ಸೀಮಿತಗೊಳಿಸಿದೆ. ಇದು ಅನುವಾದಿತ ಪಠ್ಯಗಳನ್ನು ಮಾತ್ರ ಬಳಸಿ ಮಾಡುವ ಅಧ್ಯಯನವಾಗಿದ್ದು, ಆಯ್ದ ಲೇಖಕರ ಪ್ರಾತಿನಿಧಿಕ ಕೃತಿಗಳನ್ನು ಅಧ್ಯಯನಕೆ ಆಯ್ದುಕೊಂಡಿದೆ. ಮಲಯಾಳಂನಿಂದ ಅನುವಾದಿತವಾಗಿರುವ ಕಥನ ಸಾಹಿತ್ಯದ ಸಮಗ್ರ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಕಷ್ಟಸಾಧ್ಯವಾಗಿರುವುದರಿಂದ, ಸ್ತ್ರೀವಾದಿ ದೃಷ್ಟಿಗೆ ಪ್ರಮುಖವೆಂದು ಕಂಡ ಕಥೆ – ಕಾದಂಬರಿಗಳನ್ನು ಮಾತ್ರ ಇಲ್ಲಿ ಅಧ್ಯಯನಕ್ಕೆ ಆಯ್ದುಕೊಂಡಿದೆ. ಕನ್ನಡದಲ್ಲಿ ಸಂಕಲನ ರೂಪದಲ್ಲಿ ಪ್ರಕಟವಾದ ಮಲಯಾಳಂನ ಆಯ್ದ ಕಥೆಗಳನ್ನು ಮಾತ್ರ ಅಧ್ಯಯನಕ್ಕೆ ಗುರುತಿಸಿಕೊಂಡಿದ್ದು, ಸಾಮಾನ್ಯ ದಿನಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಪ್ರಕಟವಾದ ಕತೆ, ಕಾದಂಬರಿಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಲ್ಲ.

ಕನ್ನಡಕ್ಕೆ ಅನುವಾದವಾಗಿರುವ ಮಲಯಾಳಂ ಕಥನಸಾಹಿತ್ಯಕ್ಕೆ ಸಂಬಂಧಿಸಿದಂತೆ, ಚಂದುಮೆನನ್ (ಇಂದುಲೇಖಾ, ಶಾರದ) ಎಸ್.ಕೆ. ಪೊಟ್ಟೆಕ್ಕಾಟ್ಟ್ (ವಿಷಕನ್ನಿಕೆ, ಒಂದು ಊರಿನ ಕಥೆ) ಲಲಿತಾಂಬಿಕ ಅಂತರ್ಜನಂ (ಅಗ್ನಿಸಾಕ್ಷಿ) ವೈಕ್ಕಂ ಮಹಮ್ಮದ್ ಬಶೀರ್ (ನನ್ನಜ್ಜನಿಗೊಂದಾನೆಯಿತ್ತು, ಪಾತುಮ್ಮನ ಆಡು ಮತ್ತು ಬಾಲ್ಯಕಾಲ ಸಖಿ) ತಗಳಿ ಶಿವಶಂಕರ ಪಿಳ್ಳೆ (ಹಗ್ಗ, ಕೆಂಪು ಮೀನು, ಎರಡು ಬಳ್ಳ, ಏಣಿಯ ಮೆಟ್ಟಿಲುಗಳು, ತೋಟಿಯ ಮಗ) ವೆಟ್ಟೂರ್ ರಾಮನ್ ನಾಯರ್ (ಬದುಕಲು ಮರೆತ ಸ್ತ್ರೀ) ಕಮಲಾದಾಸ್ (ಮನೋಮಿ, ನೀರ್‌ಮಾದಳ ಹೂಬಿಟ್ಟ ಕಾಲ) ಎಂ.ಟಿ. ವಾಸುದೇವನ್ ನಾಯರ್ (ಕಾಲ, ದುರ್ಬೀಜ, ಭೀಮಾಯಣ) ಪಿ. ವತ್ಸಲ (ಆಗ್ನೇಯ) ಬಿ.ಎಂ. ಸುಹರಾ (ಬಲೆ) ಸಾರಾ ಜೋಸೆಫ್ (ಆಲಾಹಳ ಹೆಣ್ಣುಮಕ್ಕಳು) ಪಿ.ಕೆ. ಬಾಲಕೃಷ್ಣನ್ (ನಾನಿನ್ನು ನಿದ್ರಿಸುವೆ) ಉರೂಬ್ (ಸುಂದರಿಯರು ಸುಂದರರು) ಸೇತು ಮಾಧವನ್ (ಗುರುತುಗಳು) ಜಿ. ಬಾಲಚಂದ್ರನ್ (ಬಿಡುಗಡೆ) ಕೆ. ಕವಿತ (ಮಾಯಾಸೀತೆ) ಎಂ. ಮುಕುಂದನ್ (ದೇವರ ವಿಕರಾಳಗಳು) ನಾರಾಯಣ್ (ಕೊಚ್ಚರೇತ್ತಿ) ಮಾಡಾಂಬ್ ಕುಂಜುಕುಟ್ಟನ್ (ಅಶ್ವತ್ಥಾಮ) ಏಟುಮಾನೂರ್ ಶಿವಕುಮಾರ್ (ಮರಣತೋರಣ) ಸುಬೈರ್ (ಮಿಸ್ ವರ್ಲ್ಡ್) ಮುಂತಾದ ಲೇಖಕರ ಕೃತಿಗಳನ್ನು ಅಧ್ಯಯನದ ಪ್ರಾಥಮಿಕ ಆಕರಗಳೆಂದು ಗುರುತಿಸಿಕೊಂಡಿದೆ. ಈ ಲೇಖಕರೂ ಸೇರಿದಂತೆ ಹಲವು ಲೇಖಕರ ಕೆಲವು ನೀಳ್ಗತೆ ಹಾಗೂ ಸಣ್ಣಕತೆಗಳನ್ನು ವಿಶ್ಲೇಷಣೆಗೆ ಬಳಸಿಕೊಂಡಿದೆ.

ಪ್ರಸ್ತುತ ಅಧ್ಯಯನವು ಮಲಯಾಳಂನಿಂದ ಕನ್ನಡಕ್ಕೆ ಬಂದಿರುವ ೩೮ ಕಾದಂಬರಿಗಳು, ೧೭ ಕಥಾಸಂಕಲನಗಳು ಹಾಗೂ ೨ ಆತ್ಮಕಥನಗಳನ್ನು ಆಧರಿಸಿದೆ. ಮಲಯಾಳದ ಮೊದಲ ಸಾಮಾಜಿಕ ಕಾದಂಬರಿ ಎನಿಸಿದ 'ಇಂದುಲೇಖಾ' (ಚಂದುಮೆನನ್, ೧೮೮೯) ದಿಂದ ಮೊದಲುಗೊಂಡು ಇಪ್ಪತ್ತೊಂದನೇ ಶತಮಾನದ ಮೊದಲ ಘಟ್ಟದವರೆಗಿನ ಆಯ್ದ ಅನುವಾದಿತ ಕಥನಸಾಹಿತ್ಯವನ್ನು ಈ ಅಧ್ಯಯನದ ಸಂದರ್ಭದಲ್ಲಿ ಗಮನಿಸಿದೆ.

ಆತ್ಮಕಥನದಂತೆ ಭಾಸವಾಗುತ್ತಿದ್ದರೂ ಸಮಕಾಲೀನ ಸಮಾಜದ ಬದುಕನ್ನು ವಿಮರ್ಶಾತ್ಮಕವಾಗಿ ದಾಖಲಿಸುವ ಸ್ತ್ರೀಪರ ನಿರೂಪಣೆಯನ್ನು ಹೊಂದಿರುವ, ಕಮಲಾದಾಸ್ ಅವರ 'ನೀರ್‌ಮಾದಳ ಹೂಬಿಟ್ಟ ಕಾಲ' ಎಂಬ ಕೃತಿ ಹಾಗೂ ಧಾರ್ಮಿಕ ಸಂಸ್ಥೆಯೊಳಗಿನ ಸ್ತ್ರೀಶೋಷಣೆಯನ್ನು ಗುರುತಿಸುವ ಸಿಸ್ಟರ್ ಜೆಸ್ಮಿ ಅವರು ಬರೆದಿರುವ 'ಆಮೆನ್' ಎಂಬ ಕೃತಿಯನ್ನು ಪ್ರಬಂಧದ ವಿಶ್ಲೇಷಣೆಗೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಯನದ ವೈಧಾನಿಕತೆ

ಸಾಹಿತ್ಯವು ಒಂದು ಪ್ರಧಾನ ಅಭಿವ್ಯಕ್ತಿಯ ನೆಲೆಯಾಗಿ, ಸ್ತ್ರೀಯನ್ನು ಯಾವ ರೀತಿಯಲ್ಲಿ ಗ್ರಹಿಸಿದೆ ಮತ್ತು ವ್ಯಾಖ್ಯಾನಿಸಿದೆ ಎಂಬುದನ್ನು ವಿಶ್ಲೇಷಿಸುವ ದೃಷ್ಟಿಯಿಂದ ಇಲ್ಲಿನ ಅಧ್ಯಯನದ ವಿನ್ಯಾಸ ಮತ್ತು ವಿಧಾನಗಳನ್ನು ರೂಪಿಸಿಕೊಂಡಿದೆ.

ವಿಶ್ಲೇಷಣಾತ್ಮಕ, ಪರಿಕಲ್ಪನಾತ್ಮಕ, ವ್ಯಕ್ತಿ ಅಧ್ಯಯನ ಮತ್ತು ತೌಲನಿಕ – ಹೀಗೆ ಬಹುಶಿಸ್ತೀಯ ಮಾದರಿಯಲ್ಲಿ ಪ್ರಸ್ತುತ ಅಧ್ಯಯನವನ್ನು ನಡೆಸಲಾಗಿದೆ. ಕನ್ನಡದಲ್ಲಿ ಪ್ರಕಟವಾದ ಪ್ರಾತಿನಿಧಿಕ ಮಲಯಾಳಂ ಕಾದಂಬರಿಗಳು ಮತ್ತು ಕಥೆಗಳನ್ನು ಸಮಗ್ರವಾಗಿ ಅವಲೋಕಿಸಿ ಒಂದೆಡೆ ದಾಖಲಿಸುವುದು, ಪ್ರಾಥಮಿಕ ಆಕರಗಳನ್ನು ಗುರುತಿಸಿ, ತಲಸ್ಪರ್ಶಿಯಾಗಿ ಓದಿ ವಿಶ್ಲೇಷಿಸುವುದು ಇಲ್ಲಿನ ಅಧ್ಯಯನ ವಿಧಾನವಾಗಿದೆ. ಗ್ರಂಥಾಲಯಗಳಿಗೆ ಭೇಟಿ, ಮಾರ್ಗದರ್ಶಕರೊಂದಿಗೆ ಸಮಾಲೋಚನೆ, ಕ್ಷೇತ್ರದಲ್ಲಿ ಅನುಭವವುಳ್ಳ ವಿದ್ವಾಂಸರೊಂದಿಗೆ ಚರ್ಚೆ... ಹೀಗೆ ಅಧ್ಯಯನದ ದಾರಿ ಮತ್ತು ವಿಶ್ಲೇಷಣೆಯ ಸಮಂಜಸತೆಯನ್ನು ಸ್ಪಷ್ಟಪಡಿಸಿಕೊಂಡಿದೆ.

ಅಧ್ಯಯನದ ತಾತ್ವಿಕತೆ

ಸ್ತ್ರೀವಾದಿ ವಿಮರ್ಶೆಯು ಪುರುಷರು ರೂಪಿಸಿದ, ಪುರುಷಾನುಭವ ಮತ್ತು ಪುರುಷವ್ಯಾಖ್ಯೆಗಳಿಂದ ಕೂಡಿದ ಸಾಹಿತ್ಯ ವಿಮರ್ಶೆಗೆ ಎದುರಾಗಿ ನಿಲ್ಲುವ ವಿಮರ್ಶೆಯಾಗಿದೆ. ಸಾಹಿತ್ಯವು ಬದುಕಿನ ಒಂದು ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗಿರುವುದರಿಂದ ಸಾಹಿತ್ಯ ವಿಶ್ಲೇಷಣೆಯ ಮೂಲಕ ಸಂಸ್ಕೃತಿಯ ವಿಶ್ಲೇಷಣೆ ಸಾಧ್ಯ ಎಂದು ಸ್ತ್ರೀವಾದಿ ವಿಮರ್ಶೆಯು ಗ್ರಹಿಸುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡದ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ತಿಳುವಳಿಕೆಯೊಂದಿಗೆ, ಅನುವಾದಿತ ಮಲಯಾಳಂ ಕಥನಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸ್ತ್ರೀವಾದಿ ಓದು ಮತ್ತು ಸ್ತ್ರೀವಾದಿ ನೆಲೆಯ ವಿಶ್ಲೇಷಣೆ ಈ ಅಧ್ಯಯನದ ಹಿಂದಿನ ಮುಖ್ಯ ತಾತ್ವಿಕತೆಯಾಗಿದೆ.

ಭಾರತದ ಇತರ ಭಾಷೆಗಳಂತೆ, ಆಧುನಿಕ ಮಲಯಾಳಂ ಕಥನಸಾಹಿತ್ಯದಲ್ಲೂ ಧರ್ಮ, ಸಮಾಜ ಮತ್ತು ಪುರುಷ.. ಈ ಎಲ್ಲ ನೆಲೆಗಳಿಂದಲೂ ಶೋಷಣೆಗೆ ಒಳಗಾಗಿರುವ ಸ್ತ್ರೀಯರ ಅನಿಸಿಕೆಗಳಿಗೆ, ಸ್ತ್ರೀಬದುಕಿನ ಪ್ರಶ್ನೆಗಳಿಗೆ ಧ್ವನಿಯಾಗುವ ಪ್ರಯತ್ನ ಕಂಡುಬರುತ್ತದೆ. ಮಲಯಾಳಂನ ಮೊದಲ ಘಟ್ಟದ ಕಾದಂಬರಿ/ಕಥೆಗಳ ಶೀರ್ಷಿಕೆಗಳು ಸ್ತ್ರೀವಾಚಿಗಳಾಗಿದ್ದವು ಎಂಬುದೂ ಗಮನಿಸಬೇಕಾದ ವಿಚಾರ. (ಇಂದುಲೇಖಾ, ಮನೋರಮಾ, ಶಾರದ, ಪಾತುಮ್ಮನ ಆಡು, ಬಾಲ್ಯಕಾಲಸಖಿ, ಬದುಕಲು ಮರೆತ ಸ್ತ್ರೀ, ವಿಷಕನ್ನಿಕೆ ಇತ್ಯಾದಿ) ತಮ್ಮ ಕೃತಿಯೊಳಗೆ ಲೇಖಕರು ಸೃಷ್ಟಿಸುವ ಪಾತ್ರಗಳು ಒಂದು ಕಾಲಘಟ್ಟದ,

ಒಂದು ಸಂದರ್ಭದ, ಒಂದು ನಿರ್ದಿಷ್ಟ ಪ್ರದೇಶ ಮತ್ತು ಸಮುದಾಯದ ಸ್ತ್ರೀಯರ ಬದುಕನ್ನು ಪ್ರತಿನಿಧಿಸುತ್ತವೆ. ಈ ಪ್ರತಿನಿಧೀಕರಣವು ಬಹಳ ವ್ಯಾಪಕವಾಗಿರುತ್ತದೆ.

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ 'ಸ್ತ್ರೀ ನಿರ್ವಚನ' ಎಂದರೆ 'ಸ್ತ್ರೀಯನ್ನು ವಿವರಿಸುವುದು, ಕಾಣಿಸುವುದು, ವ್ಯಾಖ್ಯಾನಿಸುವುದು' ಎಂಬ ಗ್ರಹಿಕೆಯನ್ನು ಇರಿಸಿಕೊಳ್ಳಲಾಗಿದೆ. ಒಂದು ಕೃತಿಯೊಳಗಿನ ಸ್ತ್ರೀ ಪಾತ್ರಗಳು ಪಡೆದುಕೊಂಡಿರುವ ಪ್ರಕಟಣೆ ಮತ್ತು ನಿರೂಪಣೆಯ ಅವಕಾಶಗಳನ್ನು 'ಸ್ತ್ರೀ ನಿರ್ವಚನ' ಎಂದು ಗುರುತಿಸಲಾಗಿದೆ. ಕೃತಿಯೊಳಗೆ ಸ್ತ್ರೀ ಅದೃಶ್ಯಳಾಗಿರುವುದು, ಅಮುಖ್ಯಳಾಗಿರುವುದು ಕೂಡ ಸ್ತ್ರೀಯ ಸ್ಥಿತಿಯನ್ನು ಸಂಕೇತಿಸುವುದರಿಂದ ಅದೂ ಸ್ತ್ರೀ ನಿರ್ವಚನವೇ.

"ಮಲಯಾಳಂನ ಪ್ರಾತಿನಿಧಿಕ ಕೃತಿಗಳ ಸ್ತ್ರೀಪಾತ್ರ ಚಿತ್ರಣದ ವಿಶ್ಲೇಷಣೆ ಹಾಗೂ ವ್ಯಾಖ್ಯಾನದ ಮೂಲಕ ಮಲಯಾಳಂ ಕಥನಸಾಹಿತ್ಯದ ಸ್ತ್ರೀ ನಿರ್ವಚನದ ಸ್ವರೂಪ, ವಿಶಿಷ್ಟತೆ ಮತ್ತು ನೆಲೆಗಳನ್ನು ಕಂಡುಕೊಳ್ಳಬಹುದು" ಎಂಬುದು ಈ ಅಧ್ಯಯನದ ಪೂರ್ವಪ್ರಮೇಯವಾಗಿದೆ.

ಮಲಯಾಳಂ ಕಥನಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಲವು ಅಧ್ಯಯನಗಳು ನಡೆದಿರುವುದನ್ನು ಅಧ್ಯಯನದ ಪೂರ್ವದಲ್ಲಿ ಸಮೀಕ್ಷಿಸಲಾಗಿದೆ. ತಗಳಿ, ವಾಸುದೇವನ್ ನಾಯರ್, ಬಶೀರ್, ಕಮಲಾದಾಸ್ ಮುಂತಾದ ತುಂಬ ಪ್ರಸಿದ್ಧರಾದ ಲೇಖಕರನ್ನು ಬಿಟ್ಟರೆ, ಉಳಿದಂತೆ ವಿಶೇಷವಾದ ಅಧ್ಯಯನಗಳು ನಡೆದಿಲ್ಲ ಎಂಬುದು ಈ ಸಾಹಿತ್ಯ ಸಮೀಕ್ಷೆಯಿಂದ ಕಂಡುಬರುತ್ತದೆ. ಮಲಯಾಳಂ ಲೇಖಕಿಯರ ಬರಹಗಳ ಬಗ್ಗೆ, ಅಲ್ಲಿನ ಕಥನಸಾಹಿತ್ಯದ ಸ್ತ್ರೀಲೋಕದ ಬಗ್ಗೆ ಕನ್ನಡದಲ್ಲಿ ಹೆಚ್ಚಿನ ಅಧ್ಯಯನಗಳು ನಡೆಯಬೇಕಾದ ಅಗತ್ಯವಿದೆ.

ಅಧ್ಯಯನದ ಮಹತ್ವ

ಕನ್ನಡಕ್ಕೆ ಅನುವಾದವಾಗಿರುವ ಮಲಯಾಳಂ ಕಥನಸಾಹಿತ್ಯವನ್ನು ಸ್ತ್ರೀವಾದಿ ವೈಚಾರಿಕತೆಯ ನೆಲೆಗಟ್ಟಿನಲ್ಲಿ, ಸ್ತ್ರೀಸಂವೇದನೆಯ ದೃಷ್ಟಿಯಿಂದ ಪರಿಶೀಲಿಸುವ ಆಶಯದಿಂದ ಈ ಅಧ್ಯಯನವನ್ನು ಮಾಡಲಾಗಿದೆ. ಅನುವಾದಿತ ಮಲಯಾಳಂ ಕಥನಸಾಹಿತ್ಯದ ಬಗ್ಗೆ ಕನ್ನಡದಲ್ಲಿ ವಿಶೇಷವಾದ ಮತ್ತು ಸಮಗ್ರವಾದ ಅಧ್ಯಯನಗಳ ಅಗತ್ಯವಿದೆ. ಈ ದಿಸೆಯಲ್ಲಿ ಮೊದಲ ಪ್ರಯತ್ನವಾಗಿ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಜಾಗತಿಕವಾಗಿ ಸಾಹಿತ್ಯದಲ್ಲಿ ಸ್ತ್ರೀ ನಿರ್ವಚನದ ಕುರಿತಾಗಿ ಸಾಕಷ್ಟು ಅಧ್ಯಯನ, ಚರ್ಚೆಗಳು ನಡೆದಿದ್ದು, ಸ್ತ್ರೀ ಸಂವೇದನೆಯ ಅರಿವನ್ನು ಮೂರು ಘಟ್ಟಗಳಲ್ಲಿ ಗುರುತಿಸಲಾಗಿದೆ:

ಹೆಣ್ತನದ ಘಟ್ಟ: ಈ ಘಟ್ಟದಲ್ಲಿ ಸ್ತ್ರೀಗೆ ಸ್ವತಂತ್ರ ಅಸ್ತಿತ್ವವಿರಲಿಲ್ಲ. ಗಟ್ಟಿಯಾದ ಧ್ವನಿಯಿರಲಿಲ್ಲ. ಹಾಗಾಗಿ ಗಂಡಿನ ನೆರಳಲ್ಲಿಯೆ ಆಕೆಯ ಅಭಿವ್ಯಕ್ತಿ ಮತ್ತು ಹೋರಾಟಗಳು ಅವಕಾಶ ಪಡೆಯುತ್ತವೆ. ಪುರುಷಮೌಲ್ಯಗಳನ್ನೇ ಆಕೆ ಪ್ರತಿಪಾದಿಸುತ್ತಾಳೆ. ಈ ಹಂತದ ಸಾಹಿತ್ಯದಲ್ಲಿ ಕುಟುಂಬ ಸ್ತ್ರೀ (ಕುಟುಂಬಿನಿ), ಆದರ್ಶನಾರಿಯ ಕಲ್ಪನೆಗಳನ್ನು ಹೆಚ್ಚಾಗಿ ಕಾಣಬಹುದಾಗಿದೆ.

ಸ್ತ್ರೀವಾದಿ ಘಟ್ಟ: ಇದು ಸ್ತ್ರೀತ್ವದ ಶೋಧದ ಘಟ್ಟ. ಆಧುನಿಕ ಶಿಕ್ಷಣ ಮತ್ತು ಅರಿವಿನ ಪರಿಣಾಮವಾಗಿ ಪುರುಷನಿರ್ಮಿತ ಸಮಾಜದ ಸ್ತ್ರೀವಿರೋಧಿ ಮೌಲ್ಯಗಳ ವಿರುದ್ಧ ಚಿಂತನೆ, ಅಸಹನೆ ಮತ್ತು ಪ್ರತಿಭಟನೆ ಇಲ್ಲಿ ಆರಂಭವಾಗುತ್ತದೆ. ಸ್ತ್ರೀಯರು ಸಾಮೂಹಿಕ ನೆಲೆಯಲ್ಲಿ ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧ ದಂಗೆ ಏಳುತ್ತಾರೆ. ಸಮಾಜ ವಿಧಿಸುವ ಆದರ್ಶಗಳನ್ನು ತಿರಸ್ಕರಿಸುತ್ತಾರೆ. ಸ್ತ್ರೀತನದ ಹುಡುಕಾಟ ನಡೆಸುತ್ತಾರೆ.

ಸ್ವಾಯತ್ತತೆಯ ಘಟ್ಟ: ಈ ಹಂತದಲ್ಲಿ ಸ್ತ್ರೀಯರು ಸಾಹಿತ್ಯ ಒಂದು ಸ್ವಾಯತ್ತ ಕ್ರಿಯೆ ಎಂಬ ಅರಿವು ಮೂಡಿಸಿಕೊಂಡು ಪುರುಷ ದೃಷ್ಟಿಕೋನದಿಂದ ನಿರ್ಧರಿತವಾಗುವ ಅನುಕರಣೆ ಮತ್ತು ಪ್ರತಿಭಟನೆಯ ಮಾದರಿಗಳನ್ನು ದಾಟುವುದು ಸಾಧ್ಯವಾಯಿತು. ಮಹಿಳಾ ಅನುಭವಗಳ ಅಧ್ಯಯನಕ್ಕೆ, ಮಹಿಳಾಸಾಹಿತ್ಯದ ವಿಶ್ಲೇಷಣೆಗೆ ಪ್ರತ್ಯೇಕವಾದ ಮಹಿಳಾ ಚೌಕಟ್ಟುಗಳ ನಿರ್ಮಾಣವಾಗಬೇಕೆಂಬ ಪ್ರತಿಪಾದನೆ ಕಾಣಿಸಿಕೊಂಡಿತು. ಖ್ಯಾತ ಸ್ತ್ರೀವಾದಿ ಶೋವಾಲ್ಟರ್ 'ಸ್ತ್ರೀಭಾಷೆ, ಸ್ತ್ರೀಪಠ್ಯಗಳು ಮತ್ತು ಅವನ್ನು ಓದುವ ಕ್ರಮಗಳ' ಕುರಿತು ಪ್ರತಿಪಾದಿಸಿದ್ದಾಳೆ. ವಿಮರ್ಶೆಯ ಪರಿಭಾಷೆಯಲ್ಲಿ ಇದನ್ನು 'ಗೈನೊಕ್ರಿಟಿಸಿಸಂ' ಎಂದು ಗುರುತಿಸಲಾಗಿದೆ. ಸ್ತ್ರೀಯರದೇ ಆದ ಶ್ರೀಮಂತ ಸಾಹಿತ್ಯ ಪರಂಪರೆ ಇದ್ದುದನ್ನು ಶೋಧಿಸಿ, ಸಾಧಿಸುವುದು ಹಾಗೂ ಆ ಪರಂಪರೆಯನ್ನು ಮುಂದುವರೆಸುವುದು ಗೈನೊಕ್ರಿಟಿಸಿಸಂನ ಕಾಳಜಿಯಾಗಿದೆ. ಸೈದ್ಧಾಂತಿಕ ಓದುವಿಕೆ ಎಂಬುದು ಮನ್ನಣೆಗೆ ಅರ್ಹವೆ? ಎಂಬ ಗಂಭೀರವಾದ ಪ್ರಶ್ನೆಯನ್ನು ಸ್ತ್ರೀವಾದಿಗಳು ಕೇಳಿದ್ದಾರೆ.

ಜಾಗತಿಕ ಸ್ತ್ರೀವಾದದ ಸ್ಥೂಲ ಒಳನೋಟವನ್ನು ಇಟ್ಟುಕೊಂಡು ಒಟ್ಟು ಭಾರತದ ಕಥನಸಾಹಿತ್ಯದ ಸ್ತ್ರೀ ನಿರ್ವಚನದ ಮಾದರಿಗಳನ್ನು ಈ ಕೆಳಗಿನ ಮೂರು ಹಂತಗಳಲ್ಲಿ ವಿಶ್ಲೇಷಿಸಲು ಸಾಧ್ಯವಿದೆ:

ಮೊದಲ ಹಂತ (ಸಂಪ್ರದಾಯವಾದ): ಈ ಹಂತದಲ್ಲಿ ರಚನೆಯಾದ ಕೃತಿಗಳಲ್ಲಿ ಸ್ತ್ರೀಪರ ಸಂವೇದನೆ ಕಾಣಿಸುವುದಿಲ್ಲ. ಸಮಾಜದಲ್ಲಿ ಹೆಣ್ಣು ಬದುಕುತ್ತಿರುವ ಸಹಜ ಚಿತ್ರಗಳನ್ನು, ಬಹುತೇಕ ಸಾಂಪ್ರದಾಯಿಕವಾದ ಸಾಧ್ವಿ ಮತ್ತು ಗಯ್ಯಾಳಿ ಈ ಎರಡು ಚೌಕಟ್ಟುಗಳಲ್ಲಿ ಈ ಕೃತಿಗಳು ಚಿತ್ರಿಸಿವೆ. ಪರಿಸ್ಥಿತಿಯನ್ನು ಯಥಾವತ್ತಾಗಿ ಚಿತ್ರಿಸುವ, ಅದೇ ರೂಪದಲ್ಲಿ ಉಳಿಸಿಕೊಳ್ಳುವ, ಅಂದರೆ ಪರೋಕ್ಷವಾಗಿ

ಪುರುಷಪ್ರಧಾನ ಸಮಾಜದ ಮೌಲ್ಯವ್ಯವಸ್ಥೆಯನ್ನು ಪೋಷಿಸುವ ಆಶಯವನ್ನು ಈ ಹಂತದ ಕೃತಿಗಳು ಹೊಂದಿರುತ್ತವೆ.

ಎರಡನೇ ಹಂತ (ಸುಧಾರಣಾವಾದ): ಆಧುನಿಕ ಶಿಕ್ಷಣದಿಂದ ದೊರಕಿಸಿಕೊಂಡ ಸುಧಾರಣಾವಾದಿ ಚಿಂತನೆಗಳ ಪ್ರಭಾವದಿಂದ ರಚನೆಯಾದ ಈ ಹಂತದ ಕೃತಿಗಳು ಸ್ತ್ರೀ ಸಂವೇದನೆಯುಳ್ಳ ಕೃತಿಗಳು. ಸಮಾಜ ಹೆಣ್ಣನ್ನು ಎರಡನೇ ದರ್ಜೆಯ ಪ್ರಜೆಯಾಗಿ ನಡೆಸಿಕೊಳ್ಳುತ್ತ ಹೇರಿರುವ ನಿರ್ಬಂಧಗಳಿಂದಾಗಿ ಸ್ತ್ರೀಯರ ಬದುಕು ದುಸ್ತರವಾಗಿದೆ, ಅವರು ಮನೆಯ ಒಳಗೆ ಮತ್ತು ಹೊರಗೆ ನಿರಂತರ ಶೋಷಣೆಗೆ ಒಳಗಾಗಿದ್ದಾರೆ ಎಂಬಿತ್ಯಾದಿ ಸಂಗತಿಗಳನ್ನು ತಣ್ಣಗೆ ನಿರೂಪಿಸುತ್ತ ಸಮಕಾಲೀನ ಸಮಾಜವನ್ನು ವಿಮರ್ಶಿಸುವ ಕೃತಿಗಳು ಈ ಹಂತದಲ್ಲಿ ರಚನೆಯಾದವು. ಈ ಹಂತದ ಕೃತಿಗಳಲ್ಲಿ ಹೆಣ್ಣಿನ ಶೋಷಣೆಯ ನಿರೂಪಣೆಯೊಂದಿಗೆ ಹೆಣ್ಣಿನ ಈ ಪರಿಸ್ಥಿತಿಗೆ ಕಾರಣಗಳನ್ನು ಶೋಧಿಸುವ ಪ್ರಯತ್ನವಿದೆ. ಸ್ತ್ರೀಪರವಾದ ಪ್ರಶ್ನೆಗಳನ್ನು ಹೊಂದಿರುವ, ಆದರ್ಶ ಸ್ತ್ರೀಯ ಸುಧಾರಿತ ಮಾದರಿಗಳಿವೆ. ಸ್ತ್ರೀಯ ಐಡೆಂಟಿಟಿಯ ಶೋಧವಿದೆ. ಸ್ತ್ರೀಯರು ತಮ್ಮ ಸಂಸಾರದ, ಕುಟುಂಬದ ಸಾಮರಸ್ಯಕ್ಕೆ ತೊಂದರೆಯಾಗದಂತೆ ಸಾಮಾಜಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ, ಒಂದು ರೀತಿಯ ಉದಾರವಾದೀ ನೆಲೆಯ ಪಾತ್ರಚಿತ್ರಣಗಳಿವೆ. ಈ ಹಂತದಲ್ಲಿ ಪುರುಷರೊಂದಿಗೆ ಮಹಿಳೆಯರೂ ಓದುವ ಮತ್ತು ಬರೆಯುವ ಚಟುವಟಿಕೆಗಳಲ್ಲಿ ಗಣನೀಯವಾಗಿ ತೊಡಗಿಸಿಕೊಂಡುದನ್ನು ಗುರುತಿಸಬಹುದು.

ಮೂರನೆಯ ಹಂತ (ಪ್ರಶ್ನೆ ಮತ್ತು ಪ್ರತಿರೋಧ): ಈ ಹಂತದಲ್ಲಿ ಪುರುಷಪ್ರಧಾನ ಚಿಂತನೆ ಮತ್ತು ಆಚರಣೆಗಳ ವಿರುದ್ಧ ಸ್ಪಷ್ಟವಾದ ಹೋರಾಟ ಮತ್ತು ಪ್ರತಿಭಟನೆಗಳ ನೆಲೆಯಲ್ಲಿ ಸಾಹಿತ್ಯ ರಚನೆಯಾಗಿದೆ. ಸ್ತ್ರೀಯರನ್ನು ಎರಡನೇ ದರ್ಜೆಯ ಪ್ರಜೆಗಳಾಗಿಸಿರುವ ಪರಂಪರೆಯನ್ನು ವಿರೋಧಿಸುವ, ಮಹಿಳಾ ಸಬಲೀಕರಣಕ್ಕಾಗಿ ಅನುಸರಿಸಬಹುದಾದ ಪರ್ಯಾಯ ದಾರಿಗಳನ್ನು ಸೂಚಿಸುವ, ಪುರುಷರು ವಿನ್ಯಾಸಗೊಳಿಸಿದ ಸಾಮಾಜಿಕ ಸಂರಚನೆಯಲ್ಲಿ ಸ್ತ್ರೀ ತನ್ನ ಅಸ್ಮಿತೆಗಾಗಿ ಚಡಪಡಿಸುವ, ಚಹರೆಯನ್ನು ಸ್ಪಷ್ಟಪಡಿಸಿಕೊಳ್ಳುವ ಪ್ರಯತ್ನಗಳು ಈ ಹಂತದ ಕೃತಿಗಳಲ್ಲಿವೆ. ಪಾರಂಪರಿಕ ಸ್ತ್ರೀ ಪಾತ್ರಗಳ ಪೊಳ್ಳುತನವನ್ನು ಬಯಲಿಗೆಳೆಯುವ, ಗಂಡಸಿನ ಅಸ್ತಿತ್ವವನ್ನೆ ತಿರಸ್ಕರಿಸುವ, ಸಾಂಸ್ಥೀಕರಣಗೊಂಡ ಧರ್ಮದ ನಿಯಮಗಳನ್ನು ಪ್ರಶ್ನಿಸುವ, ಸಮಾಜದ ಕಟ್ಟುಪಾಡುಗಳ ಮಧ್ಯೆ ನಲುಗುವ ಅಸ್ವಸ್ಥ, ಅಸಂತೃಪ್ತ ಸ್ತ್ರೀ ಪಾತ್ರಗಳನ್ನು ಪ್ರತಿಬಿಂಬಿಸುವ ಪ್ರಯತ್ನವಿದೆ. ಪ್ರಧಾನವಾಹಿನಿಯು ಮಾತು ಮತ್ತು ಸಾಹಿತ್ಯದಲ್ಲಿ ಸೃಷ್ಟಿಸಿದ ಶಿಷ್ಟಭಾಷೆಯನ್ನು ಗುಮಾನಿಯಿಂದ ಕಾಣುವ, ನಿರಾಕರಿಸುವ, ಅಗತ್ಯಬಿದ್ದಾಗ ಸ್ತ್ರೀವಿಶಿಷ್ಟವಾದ ಪದಗಳನ್ನು ಹೊಂದಿರುವ ಸ್ವಂತ ಭಾಷೆಯನ್ನು ಸೃಷ್ಟಿಸಿ ಬಳಸುವ ಸ್ವಪ್ರಜ್ಞೆಯಿದೆ. ಮಹಿಳಾ ಚಳವಳಿಗಳಿಂದ ಹಾಗೂ ಸ್ತ್ರೀವಾದೀ ವಿಚಾರಗಳಿಂದ ಪ್ರಭಾವಿತರಾಗಿರುವ ಲೇಖಕಿಯರು

ಹೆಚ್ಚು ಸಕ್ರಿಯರಾಗಿ ಮತ್ತು ವಿಭಿನ್ನವಾಗಿ ಬರೆಯುತ್ತಿರುವುದನ್ನು, ತಮ್ಮ ಬರೆಹದ ಮೂಲಕ ಸ್ಪಷ್ಟ ಪ್ರತಿರೋಧವನ್ನು ದಾಖಲಿಸಿರುವುದನ್ನು ಈ ಅವಧಿಯಲ್ಲಿ ಗುರುತಿಸಬಹುದಾಗಿದೆ.

ಜಾಗತಿಕ ಮತ್ತು ಭಾರತೀಯ ಕಥನಸಾಹಿತ್ಯದ ಸ್ತ್ರೀನಿರೂಪಣೆ ಮತ್ತು ವ್ಯಾಖ್ಯಾನಗಳ ತಿಳುವಳಿಕೆಯೊಂದಿಗೆ ಈ ಅಧ್ಯಯನವನ್ನು ಕೈಗೊಂಡಿದೆ. ಈ ಸಂಪ್ರಬಂಧದಲ್ಲಿ ಮಲಯಾಳಂ ಲೇಖಕ-ಲೇಖಕಿಯರು ಸ್ತ್ರೀ ವಿಷಯಕವಾದ ಚಿಂತನೆಗೆ ಕಥನಪ್ರಕಾರವನ್ನು ಹೇಗೆ ಬಳಸಿಕೊಂಡರು ಎಂಬುದನ್ನು ವಿವೇಚಿಸಲು ಯತ್ನಿಸಲಾಗಿದೆ. ಇಪ್ಪತ್ತೊಂದನೇ ಶತಮಾನದ ಮೊದಲಭಾಗದಲ್ಲಿ ನಿಂತು ಇಪ್ಪತ್ತನೇ ಶತಮಾನದಿಂದ ಇಲ್ಲಿನವರೆಗಿನ ಆಧುನಿಕ ಮಲಯಾಳಂ ಸಾಹಿತ್ಯ ದಾಖಲಿಸಿದ ಸ್ತ್ರೀಪಾತ್ರಗಳ ಚಹರೆಗಳನ್ನು ಗಮನಿಸಿ ವಿಶ್ಲೇಷಿಸುವುದು ಅಧ್ಯಯನದ ಕಾಳಜಿಯಾಗಿದೆ.

ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ದೇಶದಲ್ಲಿಯೆ ಮುಂಚೂಣಿಯಲ್ಲಿ ಗುರುತಿಸಿಕೊಂಡಿರುವ 'ಸ್ತ್ರೀ ಮಲಯಾಳ' (ಕೇರಳ) ರಾಜ್ಯದ ಸಾಹಿತ್ಯಶೋಧವು ಪ್ರಸ್ತುತ ಪ್ರಬಂಧದ ಮುಖ್ಯ ಲಕ್ಷ್ಯವಾಗಿದೆ. ಸಾಂಪ್ರದಾಯಿಕವಾಗಿ 'ಸ್ತ್ರೀ'ಯ ಕುರಿತಾಗಿ ಇರುವ ನಿರ್ವಚನ, ನಂಬಿಕೆಗಳನ್ನು ಭಾರತೀಯ ಹಾಗೂ ಕನ್ನಡದ ನೆಲೆಯಿಂದ ವಿವರಿಸಿಕೊಳ್ಳುವ ಪ್ರಯತ್ನದಲ್ಲಿ ಅಧ್ಯಯನಕ್ಕೆ ತೊಡಗಲಾಗಿದೆ.

ಭಾರತೀಯ ಸಾಹಿತ್ಯ ವಲಯಕ್ಕೆ ಹೊಸದಾಗಿ ಪರಿಚಯವಾದ ಕಾದಂಬರಿ ಮತ್ತು ಸಣ್ಣಕಥೆಗಳನ್ನು ಒಳಗೊಂಡ ಕಥನಸಾಹಿತ್ಯ ಎಂಬ ಹೊಸ ಮಾಧ್ಯಮದ ಮೂಲಕ, ಸ್ತ್ರೀ ಮಲಯಾಳವೆಂದು ಕರೆಸಿಕೊಂಡು, ಮಾತೃಮೂಲೀಯ ಕುಟುಂಬ ಪದ್ಧತಿಯನ್ನು ಹೊಂದಿರುವ ವಿಶಿಷ್ಟ ಸಮಾಜವೆಂದು ತಿಳಿಯಲಾಗಿರುವ ಕೇರಳದ ವಿವಿಧ ಸಮುದಾಯಗಳ ಸ್ತ್ರೀಯರನ್ನು ಕಾಣಿಸುವ ಮತ್ತು ಕೇಳಿಸುವ ಪ್ರಯತ್ನವನ್ನು ಮಲಯಾಳಂ ಲೇಖಕ-ಲೇಖಕಿಯರು ಮಾಡಿದ್ದಾರೆ. ಕೇವಲ ಮನರಂಜನೆಗಾಗಿ ಅಥವಾ ಕಾಲಹರಣಕ್ಕಾಗಿ ಓದುತ್ತಿದ್ದವರು ಗಂಭೀರವಾಗಿ ಚಿಂತಿಸುವಂತೆ ತಮ್ಮ ಬರೆಹದ ಮೂಲಕ ಒಂದು ಸ್ತ್ರೀಪರವಾದ ಎಚ್ಚರವನ್ನು ಮೂಡಿಸಲು ಮಲಯಾಳಂ ಸಾಹಿತಿಗಳು ಪ್ರಯತ್ನಿಸಿರುವುದನ್ನು ಗುರುತಿಸಬಹುದಾಗಿದೆ.

ಭಾರತದಲ್ಲಿ ಸ್ವಾತಂತ್ರ್ಯಪೂರ್ವದ ಶತಕಗಳಲ್ಲಿ ಸ್ತ್ರೀಶಿಕ್ಷಣದ ಬಗ್ಗೆ ದ್ವಂದ್ವವಿಚಾರಗಳು, ಚರ್ಚೆಗಳು ಪ್ರಕಟವಾಗುತ್ತಿದ್ದವು. ಆ ಸಂದರ್ಭದಲ್ಲಿ ಸ್ವ-ಧರ್ಮ, ಸ್ವ-ಸಂಸ್ಕೃತಿಗಳಿಗೂ ಸ್ತ್ರೀ ಸ್ವಾತಂತ್ರ್ಯದ ವಿಚಾರಗಳಿಗೂ ನಡುವೆ ಸಮನ್ವಯವೊಂದನ್ನು ಸಾಧಿಸುವ ಯತ್ನ ಬರೆಹಗಾರರದಾಗಿತ್ತು. ಇಂಥ ಸುಧಾರಣೆ ಅಥವಾ ಸಮನ್ವಯದ ಪ್ರಯತ್ನವೊಂದು ಮಲಯಾಳಂನಲ್ಲಿ ನಡೆದಿದೆಯೆ? ಮತ್ತು ಅದು ಪಾಶ್ಚಾತ್ಯ ಮಾದರಿಗೆ ಭಿನ್ನವಾದ, ಕೇರಳದ ಸಂಸ್ಕೃತಿಗೆ ಒಪ್ಪುವ ವಿಶಿಷ್ಟ ಮಾದರಿಯೊಂದನ್ನು ಪ್ರತಿಪಾದಿಸಿದೆಯೆ? ಈ ಸಮನ್ವಯ ಧೋರಣೆ ಇದ್ದಾಗ್ಯೂ ಮಹಿಳಾ ಸಮಸ್ಯೆಗಳು ಅಥವಾ ಸ್ತ್ರೀ

ವಿಷಯಗಳನ್ನು ಪರಿಶೀಲಿಸಿದ ಉದಾಹರಣೆಗಳು ಅಲ್ಲಿ ಕಾಣಿಸುತ್ತವೆಯೆ? ಮುಂತಾದ ಪ್ರಶ್ನೆಗಳನ್ನು ಮುನ್ನೆಲೆಗೆ ತಂದುಕೊಂಡು ಈ ಅಧ್ಯಯನವನ್ನು ವಿಸ್ತರಿಸಿಕೊಂಡಿದೆ. ಈ ರೀತಿಯ ಅವಲೋಕನದ ಪ್ರಯತ್ನ ಕನ್ನಡದಲ್ಲಿ ವಿಶೇಷವಾಗಿ ನಡೆದಿಲ್ಲ.

ಅಧ್ಯಾಯಗಳ ವರ್ಗೀಕರಣ

ಪ್ರಜ್ಞಾಶೀಲ ಲೇಖಕರು ತಾವು ಬದುಕುವ ಸಮಾಜದ ಮೌಲ್ಯಗಳನ್ನು ತಮ್ಮ ಬರಹದಲ್ಲಿ ನಿಕಷಕ್ಕೆ ಒಡ್ಡುವ ಮೂಲಕ ತಮ್ಮ ಸಂದರ್ಭದ ಚಿಂತನೆಗೆ ಮುಖಾಮುಖಿಯಾಗುತ್ತಾರೆ. ಅದು ಪ್ರತಿಪಾದನೆ ಅಥವಾ ಪ್ರತಿಭಟನೆ ಈ ಎರಡೂ ನೆಲೆಗಳಲ್ಲಿರಬಹುದು. ಹಾಗಾಗಿ ಒಂದು ಕಾಲಘಟ್ಟದ, ಒಂದು ಪರಿಸರದ ಸಾಹಿತ್ಯವನ್ನು ಪರಿಶೀಲಿಸುವ ಮೂಲಕ ಅಲ್ಲಿನ ಬದುಕನ್ನು, ಸಮುದಾಯದ ಚಿಂತನೆಯನ್ನು, ಅವರು ನಂಬುವ ಮೌಲ್ಯಗಳನ್ನು ಕಂಡುಕೊಳ್ಳುವುದು ಸಾಧ್ಯವಿದೆ.

ಸಮಾಜದಲ್ಲಿ ಗಂಡು ಪ್ರಧಾನ ಮತ್ತು ಹೆಣ್ಣು ಅಧೀನ ಸ್ಥಿತಿಯಲ್ಲಿ ಇರುವುದರಿಂದ ಮತ್ತು ಈ ಗ್ರಹಿಕೆಯನ್ನು ಎಲ್ಲರೂ ಸಹಜವೆಂಬಂತೆ ಒಪ್ಪಿಕೊಂಡಿರುವುದರಿಂದ ಹೆಣ್ಣಿನ ಅಸ್ಮಿತೆಗೆ, ಅಭಿವ್ಯಕ್ತಿಗೆ ಅಡಚಣೆಯಾಗಿದೆ. ಈ ಗ್ರಹಿಕೆಯು ನಮ್ಮ ದೈನಂದಿನ ಸಾಮಾಜಿಕ, ಲೈಂಗಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಬದುಕನ್ನು ಮಾತ್ರವಲ್ಲದೆ, ಕಲೆ, ಸಾಹಿತ್ಯದಂಥ ಸೃಜನಶೀಲ ಅಭಿವ್ಯಕ್ತಿಯನ್ನೂ ಪ್ರಭಾವಿಸುತ್ತದೆ. ಒಂದು ಸಾಹಿತ್ಯ ಕೃತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಕೃತಿ ರಚನೆಯಾದ ಕಾಲ, ಸಂದರ್ಭ ಮತ್ತು ಪ್ರದೇಶದ ಸಾಮಾಜಿಕ-ಸಾಂಸ್ಕೃತಿಕ ಸಂರಚನೆಗಳು ಗೋಚರವಾಗುತ್ತವೆ.

ಈ ಚಿಂತನೆಯನ್ನು ಆಧಾರವಾಗಿ ಇಟ್ಟುಕೊಂಡು, ಪ್ರಸ್ತುತ ಅಧ್ಯಯನದ ಅಧ್ಯಾಯಗಳನ್ನು ಈ ಕೆಳಗಿನಂತೆ ವಿಭಜಿಸಿಕೊಂಡು ಅಧ್ಯಯನಕ್ಕೆ ತೊಡಗಲಾಗಿದೆ:

೧. **ಪ್ರಸ್ತಾವನೆ** ಎಂಬ ಅಧ್ಯಾಯದಲ್ಲಿ ಎರಡು ಭಾಗಗಳಿದ್ದು, ಮೊದಲ ಭಾಗದಲ್ಲಿ ಅಧ್ಯಯನದ ಸ್ವರೂಪ, ಉದ್ದೇಶ, ವ್ಯಾಪ್ತಿ, ಅಧ್ಯಯನ ವಿಧಾನ, ತಾತ್ವಿಕತೆ ಮತ್ತು ಮಹತ್ವಗಳನ್ನು ವಿಶದಪಡಿಸಲಾಗಿದೆ. ಎರಡನೆಯ ಭಾಗದಲ್ಲಿ ಮಲಯಾಳಂ ಕಥನಸಾಹಿತ್ಯಕ್ಕೆ ಸಂಬಂಧಿಸಿದಂತೆ ಇದುವರೆಗೆ ಕನ್ನಡದಲ್ಲಿ ನಡೆದಿರುವ ಅಧ್ಯಯನಗಳನ್ನು ಸಮೀಕ್ಷಿಸಲಾಗಿದೆ.

೨. **ಸಾಮಾಜಿಕ ನೆಲೆ** ಎಂಬ ಅಧ್ಯಾಯದಲ್ಲಿ ಮಲಯಾಳಂ ಕಥನಸಾಹಿತ್ಯದಲ್ಲಿ ಕಂಡುಬರುವ ಸ್ತ್ರೀಯ ಸಾಮಾಜೀಕರಣದ ಪ್ರಕ್ರಿಯೆಯನ್ನು ಪರಿಶೀಲಿಸಲಾಗಿದೆ. ಪಿತೃವ್ಯವಸ್ಥೆಯು ವ್ಯಾಖ್ಯಾನಿಸಿರುವ ಪರಂಪರೆ, ಸಂಪ್ರದಾಯ ಮತ್ತು ಧರ್ಮದ ಚೌಕಟ್ಟುಗಳನ್ನು ಸ್ತ್ರೀಯರು ಗ್ರಹಿಸಿದ ಮತ್ತು ಪ್ರತಿಕ್ರಿಯಿಸಿದ ಬಗೆಗಳನ್ನು ಗಮನಿಸಲಾಗಿದೆ. ಮದುವೆ, ಕುಟುಂಬ, ತಾಯ್ತನ ಮುಂತಾದ ಸಾಮಾಜಿಕ ಸಂಸ್ಥೆಗಳಲ್ಲಿ ಹೆಣ್ಣು ಪ್ರಕಟವಾಗಿರುವ ಮತ್ತು ಶೋಷಣೆಗೆ ಒಳಗಾಗಿರುವ ನೆಲೆಯನ್ನು

ವಿಶ್ಲೇಷಿಸಲಾಗಿದೆ. ಸಂಬಂಧಂ ಎಂಬ ಕೇರಳದ ವಿಶಿಷ್ಟ ವೈವಾಹಿಕ ವ್ಯವಸ್ಥೆಯ ಲೈಂಗಿಕ ಮತ್ತು ಆರ್ಥಿಕ ಮುಖಗಳು ಮಲಯಾಳಂ ಸ್ತ್ರೀಯರ ಒಟ್ಟು ಬದುಕನ್ನು ಪ್ರಭಾವಿಸಿರುವುದನ್ನು, ಸ್ವತಂತ್ರ ವೈಚಾರಿಕತೆಯುಳ್ಳ ಸ್ತ್ರೀಯರು ಸಂಬಂಧಗಳಲ್ಲಿ ನಿರಾಸೆ ಹೊಂದಿ ಕುಟುಂಬ ಮತ್ತು ಸಮಾಜದ ಚೌಕಟ್ಟು ಮೀರಿ ಸನ್ಯಾಸದಲ್ಲಿ ಬಿಡುಗಡೆ ಅರಸುವುದನ್ನು ಗುರುತಿಸಿದೆ. ಆಧುನಿಕ ಶಿಕ್ಷಣವು ಸ್ತ್ರೀಯರ ಚಿಂತನೆ ಮತ್ತು ಜೀವನಕ್ರಮಗಳಲ್ಲಿ ತಂದ ಪರಿವರ್ತನೆಯನ್ನು ಗಮನಿಸಿ ವಿವರಿಸಲು ಪ್ರಯತ್ನಿಸಿದೆ.

೩. **ಲೈಂಗಿಕ ನೆಲೆ** ಎಂಬ ಅಧ್ಯಾಯದಲ್ಲಿ ಮಲಯಾಳಂ ಕಥನಸಾಹಿತ್ಯವು ಕಂಡರಿಸುವ ಸಾಧ್ವಿ, ವಿಲಾಸಿನಿ, ಗಯ್ಯಾಳಿ ಮುಂತಾದ ಸ್ತ್ರೀಪಾತ್ರಗಳನ್ನು ಲಿಂಗತ್ವದ ಕಲ್ಪನೆಯನ್ನು ಸದೃಢಗೊಳಿಸುವ ಸಿದ್ಧಮಾದರಿಯ ವಿನ್ಯಾಸಗಳಾಗಿ ಗುರುತಿಸಲಾಗಿದೆ. ಸಾರ್ವತ್ರಿಕ ಸ್ತ್ರೀಯ ಕಲ್ಪನೆಯನ್ನು ನಿರಾಕರಿಸುವ ಕಥನಗಳು ಯಶಸ್ವಿ ಮತ್ತು ತೇಜಸ್ವಿ ಸ್ತ್ರೀಯರ ಮಾದರಿಗಳನ್ನು ಪಡಿಮೂಡಿಸುವ ಮೂಲಕ ಭಾಷೆಯಲ್ಲಿ ಕ್ರಿಯಾಶೀಲವಾಗಿರುವ ಲಿಂಗ ರಾಜಕಾರಣವನ್ನು ವಿರೋಧಿಸಿವೆ. ಸ್ತ್ರೀ–ಪುರುಷರ ನಡುವಿನ ವಿವಾಹಪೂರ್ವ, ವೈವಾಹಿಕ ಹಾಗೂ ವಿವಾಹೇತರ ಲೈಂಗಿಕ ಸಂಬಂಧಗಳಲ್ಲಿ ಪ್ರಕಟವಾಗುವ ಸ್ತ್ರೀಲೈಂಗಿಕತೆಯ ಸ್ವರೂಪವನ್ನು ವಿಶ್ಲೇಷಿಸಿದೆ. ಹೆಣ್ಣನ್ನು ಸ್ವಂತ ಭಾವನೆಯುಳ್ಳ ಜೀವಿಯೆಂದು ನೋಡದೆ, ಅನುಭೋಗ ಮತ್ತು ಪ್ರತಿಷ್ಠೆಯ ಸೊತ್ತಾಗಿ ಮಾತ್ರ ಗ್ರಹಿಸಿರುವ ಪುರುಷರ ಕ್ರೌರ್ಯಕ್ಕೆ ಸ್ತ್ರೀಯರು ತೋರುವ ಪ್ರತಿರೋಧದ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸಿದೆ. ಸಂಕೀರ್ಣವಾಗಿರುವ ಹೆಣ್ಣಿನ ತೃಪ್ತಿಯ ನೆಲೆಗಳು ಹೆಣ್ಣಿಗೆ ಮಾತ್ರ ಸೀಮಿತವಾಗಿರುವ ಸದಾಚಾರದ ವ್ಯಾಖ್ಯೆಯನ್ನು ಬದಲಾಯಿಸುವಂತೆ ಒತ್ತಾಯಿಸುವುದನ್ನು ಗುರುತಿಸಿದೆ. ಸ್ತ್ರೀಯರ ನಡುವಿನ ಸಂಬಂಧದ ಸ್ವರೂಪವು ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಸಾಮುದಾಯಿಕ ಸಖ್ಯದ ಆಶಯದಿಂದ ಹುಟ್ಟಿದ ಪ್ರಾಂಜಲ ಸ್ನೇಹವಾಗಿಯೂ, ಲೈಂಗಿಕ ಕಾಮನೆಗಳನ್ನು ತಣಿಸುವ ಸಲಿಂಗ ಮೈತ್ರಿಯಾಗಿಯೂ ಅರಳಿ ಪರಸ್ಪರರ ಬದುಕಲ್ಲಿ ನೆಮ್ಮದಿ ತರುವುದನ್ನು ಗುರುತಿಸಿದೆ.

೪. **ಆರ್ಥಿಕ ಮತ್ತು ರಾಜಕೀಯ ನೆಲೆಗಳು** ಎಂಬ ಅಧ್ಯಾಯದಲ್ಲಿ ಮಲಯಾಳಂ ಕಥನಸಾಹಿತ್ಯದ ಸ್ತ್ರೀಯರ ಆರ್ಥಿಕ ಚಟುವಟಿಕೆಗಳು ಮತ್ತು ರಾಜಕೀಯ ನಡೆಗಳನ್ನು ಅಭ್ಯಸಿಸಲಾಗಿದೆ. ಸಂಪತ್ತು ಮತ್ತು ಅಧಿಕಾರಕ್ಕೆ, ದುಡಿಮೆ ಮತ್ತು ನೆಮ್ಮದಿಗೆ, ಆರ್ಥಿಕ ಅಸಹಾಯಕತೆ ಮತ್ತು ಹೊಂದಾಣಿಕೆಗೆ, ಲೈಂಗಿಕ ದುಡಿಮೆ ಮತ್ತು ಆರ್ಥಿಕತೆಗೆ ಇರುವ ಸಂಬಂಧಗಳು ಸ್ತ್ರೀಯರ ಬದುಕಿನ ಗತಿಯನ್ನು ನಿರ್ಣಯಿಸುತ್ತವೆ. ಸ್ತ್ರೀಯರನ್ನು ದಾಳವಾಗಿ ಬಳಸಿಕೊಳ್ಳುವ ಅಧಿಕಾರದ ರಾಜಕೀಯ, ಹೆಣ್ಣಿನ ಸೃಜನತೆಯನ್ನು ನಿರ್ಬಂಧಿಸುವ ಲಿಂಗ ರಾಜಕಾರಣ ಹಾಗೂ ಪುರಾಣಸ್ತ್ರೀಯರನ್ನು ಆದರ್ಶ ಸ್ತ್ರೀಪ್ರತಿಮೆಗಳಾಗಿಸಿದ ಭಾಷಿಕ ರಾಜಕಾರಣದ ಮೂಲಕ ಅನಾವರಣಗೊಳ್ಳುವ ಪಿತೃವ್ಯವಸ್ಥೆಯ ಸೂಕ್ಷ್ಮ ಸ್ವರೂಪವನ್ನು ವಿಶ್ಲೇಷಿಸಲಾಗಿದೆ.

೫. **ಸಮಾರೋಪ** ಎಂಬ ಕೊನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಆರಂಭದಲ್ಲಿ ರೂಪಿಸಿಕೊಂಡ ಸಂಶೋಧನಾ ಪ್ರಶ್ನೆಗಳಿಗೆ ಅನುಗುಣವಾಗಿ ಸಾಹಿತ್ಯದಲ್ಲಿ ಸ್ತ್ರೀಯರು ಚಿತ್ರಣಗೊಂಡ ಬಗೆಯನ್ನು ವಿಶ್ಲೇಷಣೆಗೆ ಒಳಪಡಿಸಿ ಕಂಡುಕೊಂಡಂತೆ, ಮಲಯಾಳಂ ಕಥನಸಾಹಿತ್ಯದ ಸ್ತ್ರೀ ನಿರ್ವಚನವನ್ನು ಮಂಡಿಸಲಾಗಿದೆ. ಒಟ್ಟಾರೆಯಾಗಿ ಮಲಯಾಳಂ ಕಥನಸಾಹಿತ್ಯದ ಪ್ರಪಂಚದಿಂದ ಹೊಮ್ಮುವ ಸ್ತ್ರೀ ನಿರ್ವಚನದ ಪ್ರಮುಖ ಚಹರೆಗಳನ್ನು ದಾಖಲಿಸಿದೆ. ಮಲಯಾಳಂ ಲೇಖಕರ ವೈಚಾರಿಕ ನಿಲುವು, ಕಾಳಜಿಗಳನ್ನು ಗುರುತಿಸಿದೆ.

೧.೨. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಯಾವುದೇ ಸಂಶೋಧನೆಗೆ ತೊಡಗುವ ಮುನ್ನ ಆ ಕ್ಷೇತ್ರದಲ್ಲಿ ಮತ್ತು ವಿಷಯದಲ್ಲಿ ಈಗಾಗಲೇ ನಡೆದಿರುವ ಅಧ್ಯಯನಗಳನ್ನು ಗಮನಿಸುವುದು ಅಗತ್ಯವೂ ಅಪೇಕ್ಷಣೀಯವೂ ಆಗಿದೆ. ಇತರರ ಶೋಧಗಳು, ಕಾಣ್ಕೆಗಳು ನಮ್ಮ ಅಧ್ಯಯನಕ್ಕೆ ನೇರವಾಗಿಯೂ ಪರೋಕ್ಷವಾಗಿಯೂ ಅನೇಕ ರೀತಿಯಲ್ಲಿ ಸಹಾಯವಾಗುತ್ತವೆ ಎಂದು ಎಲ್ಲ ಹಿರಿಯ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ಸಂಶೋಧನೆಯ ವಿಷಯಗಳ ಪುನರಾವರ್ತನೆಯಾಗುವುದನ್ನು ತಪ್ಪಿಸಬಹುದು. ನಡೆದ ಅಧ್ಯಯನಗಳನ್ನು ಪರಿಶೀಲಿಸಿ ಮುಂದಿನ ಅಧ್ಯಯನದ ರೀತಿ ಮತ್ತು ನಡೆಗಳನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಪ್ರಸ್ತುತ ಉದ್ದೇಶಿಸಿರುವ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಮಲಯಾಳಂ ಕಥನಸಾಹಿತ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ನಡೆದಿರುವ ಅಧ್ಯಯನಗಳನ್ನು ಈ ಅಧ್ಯಯನದ ಪೂರ್ವದಲ್ಲಿ ಗುರುತಿಸಿ ಸಮೀಕ್ಷಿಸಲಾಗಿದೆ:

ಪಾರ್ವತಿ ಜಿ. ಐತಾಳ್ (೨೦೧೪) ಅವರ Karanth and Thakazhi (A Comparative Study from a feminist Perspective) ಎಂಬ ಗ್ರಂಥವು ಭಾರತದ ಇಬ್ಬರು ಪ್ರಮುಖ ಕಾದಂಬರಿಕಾರರಾದ ತಗಳಿ ಶಿವಶಂಕರ ಪಿಳ್ಳೆ ಹಾಗೂ ಶಿವರಾಮ ಕಾರಂತರ ಆಯ್ದ ಕೃತಿಗಳನ್ನು ಸ್ತ್ರೀವಾದೀ ತಾತ್ವಿಕತೆಯಿಂದ ತೌಲನಿಕವಾಗಿ ಅಧ್ಯಯನ ಮಾಡುವ ಉದ್ದೇಶದಿಂದ ಇಂಗ್ಲೀಷ್‌ನಲ್ಲಿ ಪೂರೈಸಿದ ಪಿಎಚ್.ಡಿ. ಸಂಶೋಧನಾ ನಿಬಂಧದ ಪ್ರಕಟಿತ ರೂಪವಾಗಿದೆ. ಕಾರಂತರ ४೫ ಕಾದಂಬರಿಗಳಲ್ಲಿ ೧೨ ಕಾದಂಬರಿಗಳನ್ನು, ತಗಳಿಯವರ ३೫ ಕೃತಿಗಳಲ್ಲಿ ೭ ಕೃತಿಗಳನ್ನು (ಸ್ತ್ರೀವಾದೀ ಹಿನ್ನೆಲೆಯಿಂದ ಪ್ರಮುಖವೆನಿಸುವ ಕೃತಿಗಳನ್ನು) ಈ ಅಧ್ಯಯನದ ಪ್ರಾಥಮಿಕ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಲೇಖಕರ ಬದುಕು, ಬರೆಹ ಮತ್ತು ಆಯ್ದುಕೊಂಡ ಕೃತಿಗಳ ಕಥಾ ಸಾರಾಂಶವನ್ನು ಸಂಗ್ರಹವಾಗಿ ಈ ನಿಬಂಧದಲ್ಲಿ ಸಂಶೋಧಕಿ ಪರಿಚಯಿಸಿದ್ದಾರೆ. ಎರಡು ಭಿನ್ನ ಪ್ರಾದೇಶಿಕ ಭಾಷೆಗಳಲ್ಲಿ ಬರೆದ ಈ ಸಮಕಾಲೀನ ಲೇಖಕರು ಪಶ್ಚಿಮದ ವಿಚಾರಗಳ ಪ್ರಭಾವವನ್ನೂ, ಗಟ್ಟಿಯಾದ ಸಾಂಸ್ಕೃತಿಕ ಹಿನ್ನೆಲೆಯನ್ನೂ ಹೊಂದಿದವರಾಗಿ, ಸ್ತ್ರೀ ಪ್ರಶ್ನೆಗಳಿಗೆ ತಮ್ಮ ಸೃಜನಶೀಲ ಬರಹದ ಮೂಲಕ ತೋರಿದ

ಪ್ರತಿಕ್ರಿಯೆಯನ್ನು ತಿಳಿಯಲು ಈ ಅಧ್ಯಯನ ಪ್ರಯತ್ನಿಸಿದೆ. ಕಾರಂತ ಮತ್ತು ತಗಳಿ ಕಟ್ಟಿಕೊಡುವ ಸ್ತ್ರೀಲೋಕ ಮತ್ತು ಸ್ತ್ರೀ ನಿರ್ವಚನವನ್ನು ಪ್ರಾತಿನಿಧಿಕ ಕೃತಿಗಳ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಲಾಗಿದೆ. ಸ್ತ್ರೀವಾದ ಒಂದು ಚಳುವಳಿಯಾಗಿ ಇನ್ನೂ ಗಟ್ಟಿಯಾಗಿ ರೂಪುಗೊಳ್ಳದ ಕಾಲಘಟ್ಟದಲ್ಲಿ ಕಾರಂತರು ಮತ್ತು ತಗಳಿಯವರು ಸಮಾಜಕ್ಕೆ ಹೆಣ್ಣನ್ನು ನೋಡುವ, ಗ್ರಹಿಸುವ ಮತ್ತು ಸ್ವೀಕರಿಸುವ ಹೊಸ ದೃಷ್ಟಿಕೋನವನ್ನು ಕೊಟ್ಟಿದ್ದಾರೆ. ಪುರುಷ ಪ್ರಭುತ್ವದ ಸಿದ್ಧಾಂತಕ್ಕೆ ಪ್ರತಿಯಾಗಿ ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಿದ್ದಾರೆ. ಕೃತಿಗಳು ರೂಪುಗೊಂಡ ಸಂದರ್ಭದ ದೃಷ್ಟಿಯಿಂದ ನೋಡಿದರೆ ಈ ಲೇಖಕರು ಪ್ರತಿಪಾದಿಸಿದ ಸಂಗತಿಗಳಿಗೆ ಬಹಳ ಮಹತ್ವ ಪ್ರಾಪ್ತವಾಗುತ್ತದೆ ಎಂದು ಪಾರ್ವತಿ ಜಿ. ಐತಾಳ್ ಅಭಿಪ್ರಾಯಪಡುತ್ತಾರೆ.

ರತ್ನಾವತಿ ಟಿ. (೨೦೦೯) ಅವರು ಕಣ್ಣೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಮಲೆಯಾಳ ಸಾಹಿತ್ಯ ಕೃತಿಗಳ ಕನ್ನಡ ಅನುವಾದಗಳು' ಎಂಬ ಅಪ್ರಕಟಿತ ಪಿಎಚ್.ಡಿ. ಸಂಶೋಧನಾ ಪ್ರಬಂಧವು ಒಟ್ಟು ಆರು ಅಧ್ಯಾಯಗಳಲ್ಲಿ ಭಾಷಾಂತರ ಸಾಹಿತ್ಯವನ್ನು ಮೂಲಪಠ್ಯದೊಂದಿಗೆ ಹೋಲಿಸಿ ಅಲ್ಲಿರುವ ಬದಲಾವಣೆಗಳನ್ನು ಮತ್ತು ಅವಕ್ಕೆ ಕಾರಣಗಳನ್ನು ಹುಡುಕಿ ವಿಮರ್ಶಿಸುವ ಉದ್ದೇಶವನ್ನು ಹೊಂದಿದೆ. ಆ ಮೂಲಕ ಅಂತರ್ ಸಂಸ್ಕೃತಿಗಳ ಸಂಪರ್ಕದ ಪರಸ್ಪರ ಪ್ರಭಾವ ಮತ್ತು ಪರಿಣಾಮಗಳನ್ನು ವಿಶ್ಲೇಷಿಸಲು ಯತ್ನಿಸಿದೆ. ಮೂಲಭಾಷೆಯ ವಿಶಿಷ್ಟ ಶೈಲಿ ಮತ್ತು ಆಶಯಗಳನ್ನು ಅನುವಾದದಲ್ಲಿ ತರುವ ಪ್ರಯತ್ನವು ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ಸಂಶೋಧಕಿ ಪರಿಶೀಲಿಸಿದ್ದಾರೆ. ಪ್ರಬಂಧದ ಮೊದಲ ಅಧ್ಯಾಯದಲ್ಲಿ ಭಾಷಾಂತರದ ಸಿದ್ಧಾಂತಗಳು, ಅನಿವಾರ್ಯತೆ, ಮಹತ್ವ ಮತ್ತು ಸಮಸ್ಯೆಗಳನ್ನು ವಿಶ್ಲೇಷಿಸಿದ್ದಾರೆ. ಎರಡನೇ ಅಧ್ಯಾಯದಲ್ಲಿ ಮಲೆಯಾಳ ಕಾದಂಬರಿ ಸಾಹಿತ್ಯದ ಬೆಳವಣಿಗೆ, ಕನ್ನಡೀಕರಿಸಲಾದ ಪ್ರಮುಖ ಕೃತಿಗಳ ವಿಶಿಷ್ಟತೆ ಮತ್ತು ಅನುವಾದದ ಲೋಪದೋಷಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಮೂರನೆಯ ಅಧ್ಯಾಯವು ಮಲಯಾಳದ ಸಣ್ಣಕತೆ ಪ್ರಕಾರದ ಬೆಳವಣಿಗೆ, ಪ್ರಮುಖ ಲೇಖಕರ ಪ್ರಾತಿನಿಧಿಕ ಕೃತಿ ಕೃತಿಗಳು ಮತ್ತು ಅವುಗಳ ಕನ್ನಡ ಅನುವಾದಗಳನ್ನು ವಿಮರ್ಶಿಸಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮಲೆಯಾಳ ಕಾವ್ಯದ ಬೆಳವಣಿಗೆಯನ್ನು ಚಾರಿತ್ರಿಕವಾಗಿ ಸಮೀಕ್ಷಿಸಿ, ಭಾಷೆಯ ಸ್ವರೂಪ, ವೈಚಾರಿಕ ಧೋರಣೆಗಳು ಮತ್ತು ಸಾಹಿತ್ಯದ ಮುನ್ನಡೆಗಳಲ್ಲಿ ಕಂಡುಬಂದ ಪ್ರಗತಿಯನ್ನು ಗುರುತಿಸಲಾಗಿದೆ. ಐದನೆಯ ಅಧ್ಯಾಯವು ಮಲೆಯಾಳ ನಾಟಕ ಸಾಹಿತ್ಯದ ಬೆಳವಣಿಗೆ, ಪ್ರಮುಖ ನಾಟಕಕಾರರ ಕೃತಿಗಳು ಮತ್ತು ಅವುಗಳ ಕನ್ನಡ ಅನುವಾದಗಳನ್ನು ವಿಶ್ಲೇಷಿಸಿದೆ. ಆರನೇ ಅಧ್ಯಾಯದಲ್ಲಿ ಮಲೆಯಾಳ ಶಾಸ್ತ್ರ ಸಾಹಿತ್ಯ ಮತ್ತು ಇತರ ಗದ್ಯಸಾಹಿತ್ಯ ಕೃತಿಗಳ ವೈಶಿಷ್ಟ್ಯವನ್ನು ಗಮನಿಸಿ ವಿವರಿಸಿದೆ. ಈ ಎಲ್ಲ ಅಧ್ಯಾಯಗಳಲ್ಲೂ ಆಕರಕೃತಿಗಳೊಂದಿಗೆ ಅನುವಾದಗಳ ತೌಲನಿಕ ಸಮೀಕ್ಷೆಯನ್ನು ನಡೆಸಲಾಗಿದೆ. ಅನುವಾದಗಳು ಕನ್ನಡ ಸಾಹಿತ್ಯದ ಮೇಲೆ ಬೀರಿದ ಪ್ರಭಾವವನ್ನು ಗುರುತಿಸಿದೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ

ಬೆಳವಣಿಗೆಯಲ್ಲಿ ಸ್ವತಂತ್ರ ಕೃತಿಗಳ ಹಾಗೆ ಅನುವಾದಿತ ಕೃತಿಗಳು ಕೂಡ ಮುಖ್ಯಪಾತ್ರ ವಹಿಸುವುದನ್ನು ಸಂಶೋಧಕಿ ಕಂಡುಕೊಂಡಿದ್ದಾರೆ.

'ಮಲಯಾಳದ ೧೦ ಕಥೆಗಾರ್ತಿಯರು' ಎಂಬುದು ಶ್ರೀದೇವಿ ಕೆ ನಾಯರ್ (೨೦೦೪) ಅವರು ಬರೆದ ಕೃತಿಯಾಗಿದ್ದು ಪಾರ್ವತಿ ಜಿ. ಐತಾಳ್ ಇದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದು ಮಲಯಾಳದ ದಿಟ್ಟ ಹಾಗೂ ಪ್ರತಿಭಾವಂತ ಕತೆಗಾರ್ತಿಯರ ಬದುಕು-ಬರೆಹ-ಜೀವನ ದೃಷ್ಟಿಗಳನ್ನು ಬೆಳಕಿಗೆ ತರುವ ಸಂದರ್ಶನಗಳು ಹಾಗೂ ಪ್ರತಿಯೊಬ್ಬ ಕತೆಗಾರ್ತಿಯ ಒಂದು ಪ್ರಾತಿನಿಧಿಕ ಕತೆ ಮತ್ತು ಪರಿಚಯ ಲೇಖನಗಳು - ಹೀಗೆ ಸಮಗ್ರ ಚಿತ್ರಣವನ್ನು ಒಳಗೊಂಡ ಒಂದು ವಿಶಿಷ್ಟ ಕೃತಿಯಾಗಿದೆ. ಅಷಿತಾ ಅವರ 'ಅಪೂರ್ಣ ವಿರಾಮಗಳು', ಚಂದ್ರಮತಿ ಅವರ 'ಕವಿತೆಯ ಕಥೆ', ಸಿ.ಎಸ್. ಚಂದ್ರಿಕಾರವರ ಬೆಳದಿಂಗಳು ಮತ್ತು ಹಾವುಗಳು, ಗೀತಾ ಹಿರಣ್ಯನ್ ಅವರ 'ಅಸಂಘಟಿತೆ', ಗ್ರೇಸಿಯವರ 'ಒರೋತ ಮತ್ತು ದೆವ್ವಗಳು', ಮಾಧವಿ ಕುಟ್ಟಿ ಬರೆದ 'ಹಕ್ಕಿಯ ವಾಸನೆ', ಪ್ರಿಯಾ ಎ ಎಸ್ ಅವರ 'ಸ್ವಪ್ನದ ಎಳೆಗಳು', ಸಾರಾ ಜೋಸೆಫ್ ಬರೆದ 'ಪ್ರಕಾಶಿನಿಯ ಮಕ್ಕಳು', ಸಿತಾರಾ ಎಸ್. ಅವರ 'ಅಗ್ನಿ', ಬಿ.ಎಂ. ಸುಹರಾ ಅವರು ಬರೆದ 'ಹುಚ್ಚು' ಎಂಬ ಕತೆಗಳನ್ನು ಈ ಕೃತಿಯಲ್ಲಿ ಸಂಕಲಿಸಿ ನೀಡಲಾಗಿದೆ.

ಹೀಗೆ ಹತ್ತು ಲೇಖಕಿಯರ ಕತೆಗಳನ್ನು ಆಯ್ಕೆ ಮಾಡುವಾಗ ಅವು ಪ್ರಾತಿನಿಧಿಕವೂ, ಲೇಖಕಿಯರ ಭಾಷೆ ಮತ್ತು ಶೈಲಿ, ಅಭಿಪ್ರಾಯಗಳನ್ನು ಪರಿಚಯಿಸುವಂಥವೂ ಆಗಿರುವಂತೆ ನೋಡಿಕೊಂಡಿದ್ದಾರೆ. ಮಲಯಾಳದ ಕತೆಗಾರ್ತಿಯರಲ್ಲಿ ಮಾಧವಿ ಕುಟ್ಟಿಯವರನ್ನು ಹೊರತುಪಡಿಸಿ ಇತರ ಲೇಖಕಿಯರು ಕನ್ನಡಕ್ಕೆ ಪರಿಚಿತರಲ್ಲ. ಆಧುನಿಕ ಮಲಯಾಳ ಸಾಹಿತ್ಯದ ಪ್ರಾತಿನಿಧಿಕ ಬರಹಗಾರ್ತಿಯರು ಎನಿಸಿದ ಲೇಖಕಿಯರ ಬರವಣಿಗೆಯ ಹಿನ್ನೆಲೆ, ಅವರು ನಂಬಿಕೊಂಡು ಬಂದ ತತ್ವ, ಅವರ ನಿಲುವು, ಅನುಭವಗಳನ್ನು ಶೋಧಿಸುವ ಸಂದರ್ಶನ ಲೇಖನ ಮತ್ತು ಸಂಕ್ಷಿಪ್ತ ಪರಿಚಯಗಳೊಂದಿಗೆ, ನಮ್ಮ ನೆರೆಯ ರಾಜ್ಯವೊಂದರ ಅಧಿಕೃತ ಭಾಷೆಯಲ್ಲಿ ಬರೆಯುತ್ತಿರುವ ಲೇಖಕಿಯರನ್ನು ಹಾಗೂ ಅವರ ಧೋರಣೆಗಳನ್ನು ಕನ್ನಡದ ಓದುಗರಿಗೆ ಪರಿಚಯಿಸುವ ಈ ಕೃತಿಯು, ಸಮಕಾಲೀನ ಮಲಯಾಳಂ ಕಥನಸಾಹಿತ್ಯದಲ್ಲಿ ಕಂಡುಬರುವ ಸ್ತ್ರೀ ನಿರ್ವಚನವನ್ನು ಅರಿಯುವ ದಾರಿಯಲ್ಲಿ ಬಹಳ ಮಹತ್ವದ ಆಕರವಾಗಿದೆ.

ಎಲ್.ಸಿ. ಸುಮಿತ್ರಾ ಅವರು ಬರೆದ 'ಓದಿನ ಸುಖ' (೨೦೧೪) ಎಂಬ ಬಿಡಿ ಲೇಖನಗಳ ಸಂಕಲನದಲ್ಲಿ ಮಲಯಾಳಂ ಕಥನಸಾಹಿತ್ಯಕ್ಕೆ ಸಂಬಂಧಿಸಿದಂತೆ ಮೂರು ಲೇಖನಗಳಿವೆ. 'ಜೀವನಪ್ರೀತಿಯ ಮುಖಗಳು' ಎಂಬ ಲೇಖನದ ಮೊದಲ ಭಾಗದಲ್ಲಿ ಕಮಲಾದಾಸ್ ಅವರ ವ್ಯಕ್ತಿತ್ವದ ವಿಶಿಷ್ಟತೆಯ ಬಗೆಗೂ, ಎರಡನೆಯ ಭಾಗದಲ್ಲಿ ಅವರ ಸಾಹಿತ್ಯದ ಕುರಿತೂ ಬರೆದಿದ್ದಾರೆ. ಮಾಧವಿಕುಟ್ಟಿ-ಕಮಲಾದಾಸ್-ಸುರೈಯಾ ಹೀಗೆ ಮೂರು ಹೆಸರು, ಮೂರು ವ್ಯಕ್ತಿತ್ವಗಳಲ್ಲಿ ಅಭಿವ್ಯಕ್ತಗೊಂಡ

ಕಮಲಾದಾಸ್ ಅವರ ಜೀವನಪ್ರೀತಿ ಸರಿಯಾದ ಪೋಷಣೆಯಿಲ್ಲದೆ ಸೊರಗಿ ಅವರ ವೈವಿಧ್ಯಮಯ ಬರೆಹದ ಮೂಲಕ ಅನಾವರಣಗೊಂಡ ಬಗೆಯನ್ನು ಕುರಿತು ಬರೆದಿದ್ದಾರೆ. ಮೂರು ಹೆಸರುಗಳಲ್ಲಿ ಆಕೆ ಬರೆಯುವಂತೆ ಹಾಗೂ ಬದುಕುವಂತೆ ಮಾಡಿದ ಸಂದರ್ಭವನ್ನು ಶೋಧಿಸುವ, ಅರ್ಥಮಾಡಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಈ ಲೇಖನ ಮಾಡಿದೆ. 'ಬಹುಭಾಷೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಅನುವಾದದ ಸ್ಥಾನ' ಎಂಬ ಲೇಖನದಲ್ಲಿ ಭಾವಾನುವಾದ – ರೂಪಾಂತರ – ಅನುವಾದಗಳೆಂಬ ಪರಿಕಲ್ಪನೆಗಳ ಕುರಿತು ಚರ್ಚಿಸುತ್ತಾ ಮೂಲಭಾಷೆಯ ಸೊಗಡು, ಸತ್ವ ಉಳಿಸಿಕೊಳ್ಳುವ ಅನುವಾದವೇ ಸಮರ್ಪಕ ಎಂಬ ವಾದವನ್ನು ಮಂಡಿಸುತ್ತಾರೆ. ಮಲಯಾಳಂನಿಂದ ಕನ್ನಡಕ್ಕೆ ಬಂದ ಕೃತಿಗಳಲ್ಲಿ ಮೂಲ ಕತೆಯ ಸೌಂದರ್ಯಕ್ಕೆ ಮುಕ್ಕಾಗದಂತೆ ಅನುವಾದ ಕಾರ್ಯ ನಡೆದಿದೆ ಎಂಬ ಅಂಶವನ್ನು ಪೂರಕ ಉದಾಹರಣೆಗಳೊಂದಿಗೆ ಗುರುತಿಸುತ್ತಾರೆ. ಭಾಷಾಂತರಕಾರನ ಮುಂದಿರುವ ಸವಾಲು ಮತ್ತು ಹೊಣೆಗಳನ್ನು, ಅನುವಾದದ ಅಗತ್ಯ ಮತು ಪರಿಣಾಮಗಳನ್ನು ಲೇಖಕಿ ವಿಶ್ಲೇಷಿಸುತ್ತಾರೆ. 'ಕೊಚ್ಚರೆತ್ತಿ– ಆದಿವಾಸಿ ಕಥನ' ಎಂಬುದು ಒಂದು ಪುಸ್ತಕ ಪರಿಚಯ ಲೇಖನ. ನಾರಾಯನ್ ಎಂಬ ಆದಿವಾಸಿ ಸಮುದಾಯದ ಲೇಖಕರು ಬರೆದ 'ಕೊಚ್ಚರೆತ್ತಿ' ಕೃತಿಯ ವಸ್ತು, ಆಶಯ, ಮುಂತಾದವನ್ನು ನಾದಾ ಅವರು ಕಾಸರಗೋಡಿನ ಕನ್ನಡ ಆಡುನುಡಿಯನ್ನು ಬಳಸುವ ಮೂಲಕ ಮೂಲ ಸಂಭಾಷಣೆಯ ಸ್ವಾರಸ್ಯ ಅಳಿಯದಂತೆ ಭಾಷಾಂತರಿಸಿದ್ದಾರೆ. ಒಂದು ಸಾಹಿತ್ಯ ಕೃತಿಯಾಗಿ ಮಾತ್ರವಲ್ಲ, ಸಂಸ್ಕೃತಿ ಚಿಂತನೆಯ ಕೃತಿಯಾಗಿಯೂ ಈ ಕಾದಂಬರಿ ಬಹಳ ಮಹತ್ವದ್ದಾಗಿದೆ ಎಂದು ಲೇಖಕಿ ಅಭಿಪ್ರಾಯಪಟ್ಟಿದ್ದಾರೆ.

ಎಂ.ಎನ್. ಕಾರಶ್ಶೇರಿ ಅವರು ಬರೆದ 'ವೈಕಂ ಮುಹಮ್ಮದ್ ಬಶೀರ್' (ಅನು: ಸಾರಾ ಅಬೂಬಕ್ಕರ್, ೨೦೧೫) ಎಂಬ ಕೃತಿಯು ಮಲಯಾಳಂನ ಮಹತ್ವದ ಬರೆಹಗಾರ ಎನಿಸಿದ ವೈಕಂ ಅವರ ಬದುಕಿನ ಶೈಲಿ ಮತ್ತು ಬರೆಹದ ಕಾಳಜಿಗಳನ್ನು ಪರಿಚಯಿಸುವ ಪ್ರಯತ್ನವಾಗಿದೆ. ಅವರು ಬರೆದ ಕೃತಿಗಳನ್ನು ಇಟ್ಟುಕೊಂಡು ಅವರ ನಿರೂಪಣೆಯ ವಿಶಿಷ್ಟತೆ, ಪ್ರೇರಣೆಗಳನ್ನು ವಿಶ್ಲೇಷಿಸುತ್ತದೆ. ಹಾಸ್ಯವನ್ನು ಸಾಮೂಹಿಕ ವಿಮರ್ಶೆಯ ಆಯುಧವಾಗಿ ಬಳಸಿಕೊಂಡ ಬಶೀರ್ ಕಥೆಗಳಲ್ಲಿ ಏಕಾಂಗಿ ವ್ಯಕ್ತಿಗಳ ಚಿತ್ರಣ ಹೆಚ್ಚು. ತಾನು ಸ್ವತಃ ಕಥೆಯ ಪಾತ್ರವಾಗುವ ಬಶೀರ್, ವೈಯಕ್ತಿಕ ಅನುಭವಕ್ಕೆ ಮಹತ್ವ ಕೊಡುತ್ತಾರೆ. ವರ್ತಮಾನವನ್ನು ಸ್ವಂತದ್ದಾದ ನೋಟದಲ್ಲಿ ಗ್ರಹಿಸಲು ಯತ್ನಿಸುತ್ತಾರೆ. ಮಲಯಾಳಂ ಸಣ್ಣ ಕಥೆಗಳ ರೂಪ ಮತ್ತು ಭಾವವನ್ನು ಬದಲಾಯಿಸುವುದರಲ್ಲಿ ಬಶೀರ್ ಅವರ ಕೊಡುಗೆ ದೊಡ್ಡದು. ಅವರ ಕಥೆಗಳ ಲೋಕದಲ್ಲಿ ಸಮಾಜದ ನಿರ್ಲಕ್ಷಿತ ಬಡವರು, ಕಳ್ಳರು, ಖೈದಿಗಳು, ಲೈಂಗಿಕ ಕಾರ್ಯಕರ್ತೆಯರು, ದುಃಖಿತರು, ಅಸಂಘಟಿತರು ಮುಖ್ಯ ಪಾತ್ರಗಳಾಗಿರುತ್ತಾರೆ. ರಸವತ್ತಾಗಿ ಕಥೆ ಹೇಳಿ ಭ್ರಮೆ ಅಥವಾ 'ಫ್ಯಾಂಟಸಿ'ಯನ್ನು ವಾಸ್ತವವೆಂಬಂತೆ ನಿರೂಪಿಸುವ ವೈಕಂ ಶೈಲಿಯನ್ನು, ಮಹತ್ತರ ಪರಿಣಾಮವುಳ್ಳ

ರಾಜಕೀಯ ಅಪಹಾಸ್ಯವನ್ನು ಸರಳವಾಗಿ ನಿರೂಪಿಸುವ ಕಲೆಗಾರಿಕೆಯನ್ನು ವಿಶ್ಲೇಷಿಸುವ ಕೃತಿಯು ಸೂಫಿಯಾಗಿ, ಸಂತನೂ ಆಗಿ ಬದುಕಿದ ಬಶೀರ್ ಅವರ ವ್ಯಕ್ತಿಚಿತ್ರವನ್ನೂ, ಅವರ ಬಾಲ್ಯ, ಯೌವನಕಾಲದ ಸಂಗತಿ–ಸಂದರ್ಭಗಳನ್ನು ಪರಿಚಯಿಸುತ್ತದೆ.

'ಬಶೀರ್ ಕಥೆಗಳು' ಎಂಬ ಕೃತಿಯಲ್ಲಿ ಮೋಹನ ಕುಂಟಾರ್ (೧೯೯೯) ಅವರು ವೈಕಂ ಮುಹಮ್ಮದ್ ಬಶೀರರು ಬರೆದ ಒಂಬತ್ತು ಮಲಯಾಳಂ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಸಂಕಲನದ ಪ್ರವೇಶ ಭಾಗದಲ್ಲಿರುವ ಅವರ 'ವೈಕಂ ಮಹಮ್ಮದ್ ಬಶೀರ್ ಸಾಹಿತ್ಯ' ಎಂಬ ಲೇಖನದಲ್ಲಿ ಕೇರಳದ ಪ್ರಮುಖ ಜನಸಮುದಾಯಗಳು, ಬಶೀರ್ ಅವರ ಸಾಹಿತ್ಯದ ಉದ್ದೇಶ, ಅವರು ಸೃಷ್ಟಿಸುವ ಪಾತ್ರಗಳ ವೈವಿಧ್ಯತೆ, ಅವರು ಬಳಸುವ ಭಾಷೆ, ಶೈಲಿ... ಹೀಗೆ ಬಶೀರ್ ಅವರ ಬರವಣಿಗೆಯ ವಿಶಿಷ್ಟತೆಯನ್ನು ವಿಶ್ಲೇಷಿಸಿದ್ದಾರೆ. ಬಶೀರರ ಬದುಕು ಮತ್ತು ಬರೆಹಗಳನ್ನು, ಅವರಿಗೆ ದೊರೆತ ಪ್ರಶಸ್ತಿಗಳ ವಿವರಗಳನ್ನು ಸಂಕಲನದ ಕೊನೆಯಲ್ಲಿ ನೀಡುವ ಮೂಲಕ ಕನ್ನಡದ ಓದುಗರು ಬಶೀರ್ ಅವರನ್ನು ಗ್ರಹಿಸುವುದಕ್ಕೆ ಸಹಾಯ ಮಾಡಿದ್ದಾರೆ. ಧರ್ಮದ ಕೋಟೆಯೊಳಗೆ ನರಳುವ ಮುಸ್ಲಿಂ ಹೆಣ್ಣುಮಕ್ಕಳ ಪ್ರತಿನಿಧಿಯಾಗಿ 'ನನ್ನಜ್ಜನಿಗೊಂದಾನೆಯಿತ್ತು' ಕತೆಯ ಕುಂಞಿಪಾತುಮ್ಮ ಹಾಗೂ ಕುಂಜುತಚ್ಚಮ್ಮ, ಸ್ತ್ರೀತ್ವ ಹೆಚ್ಚು ಪ್ರಕಟಗೊಳ್ಳುವ 'ಬಾಲ್ಯಕಾಲ ಸಖಿ'ಯ ಸುಹ್ರಾ, ಗಂಡನ ಕ್ರೂರ ಶೋಷಣೆಯನ್ನು ಸಹಜವೆಂದೇ ಒಪ್ಪಿ ರಸನಿಮಿಷವಾಗಿಸಿ ನೆನಪಿಸಿಕೊಳ್ಳುವ 'ಹೂಬಾಳೆ' ಕತೆಯ ಜಮೀಲಬೀಬಿ ಮುಂತಾದ ಪಾತ್ರಗಳ ಮೂಲಕ ಸಮುದಾಯವೊಂದರ ಸಹಜ ಚಿತ್ರಣವನ್ನು ಬಶೀರ್ ಸೃಷ್ಟಿಸುವ ಬಗೆಯನ್ನು, ವ್ಯಂಗ್ಯದ ಮೂಲಕವೇ ಓದುಗನನ್ನು ವಿಚಾರಕ್ಕೆ ಹಚ್ಚುವ ಅವರ ವಿಶೇಷ ಶೈಲಿಯನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಪ್ರಯತ್ನವನ್ನು ಮೋಹನ ಕುಂಟಾರ್ ಅವರು ಈ ಲೇಖನದಲ್ಲಿ ಮಾಡಿದ್ದಾರೆ.

'ವಾಸುದೇವನ್ ನಾಯರ್ ಕತೆಗಳು' ಎಂಬ ಸಂಕಲನದಲ್ಲಿ ಮೋಹನ ಕುಂಟಾರ್ (೨೦೦೧) ಅವರು ಕನ್ನಡಕ್ಕೆ ಅನುವಾದಿಸಿದ ಎಂ.ಟಿ. ವಾಸುದೇವನ್ ನಾಯರ್ ಅವರ ಹನ್ನೊಂದು ಕತೆಗಳಿವೆ. ಜೊತೆಗೆ ಎಂ.ಟಿ.ವಿ. ಕಥಾಸಾಹಿತ್ಯದ ಬಗ್ಗೆ, ಅವರ ಕೃತಿಗಳು, ಪ್ರಶಸ್ತಿಗಳ ಬಗ್ಗೆ ಒಂದು ವಿವರವಾದ ಪರಿಚಯ ಲೇಖನವಿದೆ. ಮಲಯಾಳಂ ಜನ ಸಂಸ್ಕೃತಿಯ ಆಳವಿಸ್ತಾರಗಳನ್ನು ಸಹೃದಯ ಓದುಗರಿಗಾಗಿ ತಮ್ಮ ಕತೆಗಳ ಮೂಲಕ ಕಟ್ಟಿಕೊಟ್ಟ ಲೇಖಕರಾಗಿ, ವ್ಯಕ್ತಿಕೇಂದ್ರಿತ ನೆಲೆಯಲ್ಲಿ, ಮನುಷ್ಯನ ಮನಸ್ಸಿನ ಆಳ ಅಗಲ ನಿರಾಸೆಗಳನ್ನು, ಅನಾಥಪ್ರಜ್ಞೆಯನ್ನು, ಅಸಹಾಯಕತೆಯ ನೋವನ್ನು ಕತೆಯಾಗಿಸಿದ ವಾಸುದೇವನ್ ನಾಯರ್. ಪರಂಪರಾಗತ ಸಾಹಿತ್ಯಕ್ಕೆ ಆಧುನಿಕತೆಯ ಹೊಸ ಜೀವ ತಂದುಕೊಟ್ಟ ಲೇಖಕರು ಎನಿಸಿಕೊಂಡರು. ಹೃದಯದ ಭಾವಗಳಿಗೆ ಹೆಚ್ಚು ಒತ್ತು ಕೊಡುವ, ವ್ಯಕ್ತಿನಿಷ್ಠ ನೆಲೆಯ, ಅಸ್ತಿತ್ವವನ್ನು ಶೋಧಿಸುವ ಅವರ ಕತೆಗಳ ವಿವಿಧ ನೆಲೆಗಳನ್ನು ಇಲ್ಲಿ ಲೇಖಕರು ಕತೆಗಳ ಪ್ರಾಸಂಗಿಕ ವಿವರಗಳೊಂದಿಗೆ ವಿಶ್ಲೇಷಿಸಿದ್ದಾರೆ.

ಮೋಹನ ಕುಂಟಾರ್ ಅವರು ಬರೆದ 'ಕೈರಳಿ' (೨೦೦೪) ಎಂಬ ಲೇಖನಗಳ ಸಂಕಲನದಲ್ಲಿ ಕೇರಳದ ಸಮಾಜ, ಸಂಸ್ಕೃತಿ, ಸಾಹಿತ್ಯ, ಪತ್ರಿಕೋದ್ಯಮ, ಕಾವ್ಯಮೀಮಾಂಸೆ ಮುಂತಾಗಿ ಒಟ್ಟು ಹದಿಮೂರು ವೈವಿಧ್ಯಮಯ ಲೇಖನಗಳಿದ್ದು ಕೇರಳದ ಕಥನಸಾಹಿತ್ಯಕ್ಕೆ ಸಂಬಂಧಿಸಿದಂತೆ ಆರು ಲೇಖನಗಳಿವೆ. 'ಇಂದುಲೇಖಾ – ಸಾಂಸ್ಕೃತಿಕ ಅನುಸಂಧಾನದ ಕತೆ' ಎಂಬ ಲೇಖನದಲ್ಲಿ ಮಲಯಾಳಂನ ಮೊದಲ ಸಾಮಾಜಿಕ ಕಾದಂಬರಿ ಎನಿಸಿಕೊಂಡ 'ಇಂದುಲೇಖಾ' (ಚಂದುಮೆನೊನ್–೧೮೮೯) ಕಾದಂಬರಿಯು ಭಾರತದ ಸಾಂಸ್ಕೃತಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳನ್ನು ಶೋಧಿಸುವ ಪ್ರಯತ್ನವನ್ನು ಮಾಡುವುದನ್ನು ಗುರುತಿಸಿದ್ದಾರೆ. ಕೇರಳದ ತರವಾಡಿನ ಹೆಣ್ಣುಮಕ್ಕಳಿಗೆ ಮದುವೆಯಾಗುವ ಹಕ್ಕಿಲ್ಲ ಎಂಬ ಸಾಂಪ್ರದಾಯಿಕ ವಿಚಾರವೊಂದು ಈ ಕಾದಂಬರಿಯ ಮೂಲಕ ಪ್ರಕಟವಾಗುವುದಲ್ಲದೆ, ಕೃತಿಯು ಕೇರಳದ ಸಾಂಸ್ಕೃತಿಕ ಇತಿಹಾಸದ ವಿವರಗಳನ್ನೂ ನೀಡುತ್ತದೆ ಎಂಬುದನ್ನು ಮೋಹನ ಕುಂಟಾರ್ ಅವರು ಗುರುತಿಸಿದ್ದಾರೆ. 'ವೈಕಂ ಮುಹಮ್ಮದ್ ಬಶೀರ್‌ರ ಸಾಹಿತ್ಯ ಸಂವೇದನೆ' ಎಂಬ ಲೇಖನವು ಬಶೀರ್ ಅವರ ಸಾಹಿತ್ಯದ ಆಶಯ, ಶೈಲಿ, ವಸ್ತು, ಭಾಷೆ ಇತ್ಯಾದಿಗಳನ್ನು ಚರ್ಚಿಸುವಂಥದ್ದು. 'ಮಾನವೀಯತೆಯ ಶೋಧಕ: ತಗಳಿ' ಎಂಬ ಲೇಖನದಲ್ಲಿ ಮಲಯಾಳಂನ ಮಹತ್ವದ ಲೇಖಕರೆನಿಸಿಕೊಂಡಿರುವ ತಗಳಿ ಶಿವಶಂಕರ ಪಿಳ್ಳೆಯವರು ಮಲಯಾಳಂ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುವಲ್ಲಿ ವಹಿಸಿದ ಪಾತ್ರವನ್ನು ವಿಶ್ಲೇಷಿಸಲಾಗಿದೆ. ಈ ಲೇಖನವು ತಗಳಿಯವರ ಬದುಕು, ಶಿಕ್ಷಣ, ಉದ್ಯೋಗ ಮತ್ತು ಇತರ ವಿವರಗಳನ್ನೂ ನೀಡುತ್ತದೆ. 'ತೋಟಿಯ ಮಗ ಕಾದಂಬರಿಯಲ್ಲಿ ವರ್ಗಸಂಘರ್ಷ' ಎಂಬ ಲೇಖನದಲ್ಲಿ ತಗಳಿ ಶಿವಶಂಕರ ಪಿಳ್ಳೆಯವರ 'ತೋಟಿಯುಡೆ ಮಗನ್' ಕಾದಂಬರಿಯ ಮೂಲಕ ತೆರೆದುಕೊಳ್ಳುವ ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷವನ್ನು ವಿಶ್ಲೇಷಿಸಲಾಗಿದೆ. ವರ್ಗಸಂಘರ್ಷದ ಕಿಚ್ಚು ಹಚ್ಚುವ ಮೂಲಕ ಶೋಷಿತವರ್ಗದ ಸಮುದಾಯ ಪ್ರಜ್ಞೆಯನ್ನು ತಗಳಿ ಕೆದಕುತ್ತಾರೆ. ಸಾಮಾಜಿಕ ಪರಿವರ್ತನೆಯತ್ತ ತುಡಿಯುವ ಸಾಹಿತಿಯೊಬ್ಬನ ಕಾಳಜಿ ಈ ಕೃತಿಯ ಮೂಲಕ ವ್ಯಕ್ತವಾಗಿದೆ ಎಂದು ಲೇಖಕರು ಅಭಿಪ್ರಾಯಪಡುತ್ತಾರೆ. 'ಚೆಮ್ಮೀನ್: ಒಂದು ಓದು' ಎಂಬ ಲೇಖನದಲ್ಲಿ, ಅತಿ ಹೆಚ್ಚು ಪ್ರಚಾರ ಪಡೆದ ತಗಳಿಯವರ 'ಚೆಮ್ಮೀನ್' ಕಾದಂಬರಿಯ ಕಥಾವಸ್ತು ಮತ್ತು ಆಶಯಗಳನ್ನು ಪರಿಚಯಿಸುತ್ತಾರೆ. ಬೆಸ್ತ ಸಮಾಜದ ಬದುಕಿನ ಕಷ್ಟಗಳು, ನಂಬಿಕೆಗಳನ್ನು ಅನಾವರಣಗೊಳಿಸುವ ಒಂದು ತ್ರಿಕೋನ ಪ್ರೇಮದ ಕಥೆಯಾಗಿರುವ ಈ ಕೃತಿಯು 'ಕಡಲಿಗೆ ಮೀನು ಹಿಡಿಯಲು ಹೋದ ಬೆಸ್ತನನ್ನು ಪತ್ನಿಯ ಪಾತಿವ್ರತ್ಯವೇ ಕಾಪಾಡುತ್ತದೆ' ಎಂಬ ಬೆಸ್ತರ ಪಾರಂಪರಿಕ ನಂಬಿಕೆಯನ್ನು ಸಮರ್ಥಿಸುವಂತೆ ಕರುತ್ತಮ್ಮನ ಪ್ರೇಮ ಆಕೆಯ ಪತಿ ಪಳನಿಯ ಸಾವಿಗೆ ಕಾರಣವಾಗುವುದನ್ನು ನಿರೂಪಿಸುತ್ತದೆ. ಇದೇ ಸಂಕಲನದಲ್ಲಿ 'ಎಂ.ಟಿ. ವಾಸುದೇವನ್ ನಾಯರ್‌ರ ಕಥಾಸಾಹಿತ್ಯ' ಎಂಬ ವಿವರವಾದ ಪರಿಚಯ ಲೇಖನವೂ ಇದ್ದು

ವಾಸುದೇವನ್ ನಾಯರ್ ಅವರ ಕಥನಸಾಹಿತ್ಯದ ಓದಿಗೆ ಪೂರಕವಾದ ಭೂಮಿಕೆಯನ್ನು ಒದಗಿಸುತ್ತದೆ.

ಮೋಹನ ಕುಂಟಾರ್ (೨೦೦೬) ಅವರ 'ಕೇರಳ ಕಥನ' ಒಂದು ವಿಶಿಷ್ಟ ಸಾಂಸ್ಕೃತಿಕ ಪ್ರದೇಶವಾಗಿ ಗುರುತಿಸಿಕೊಂಡಿರುವ ಕೇರಳ ರಾಜ್ಯದ ಭೌಗೋಳಿಕ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳ ಮೂಲಕ ಅದನ್ನು ಇಡಿಯಾಗಿ ಮತ್ತು ಬಿಡಿಯಾಗಿ ಕಲ್ಪಿಸಿಕೊಳ್ಳುವ ಪ್ರಯತ್ನವಾಗಿ ರೂಪುಗೊಂಡ ಕೃತಿ. ಒಟ್ಟು ೧೪ ಅಧ್ಯಾಯಗಳಲ್ಲಿ ಕೇರಳದ ಕುರಿತಾದ ಈ ಅಧ್ಯಯನವನ್ನು ನಿರೂಪಿಸಲಾಗಿದೆ. ನಮ್ಮ ನೆರೆಯ ಸಂಸ್ಕೃತಿಯಾಗಿರುವ ಕೇರಳದ ಕಥನಸಾಹಿತ್ಯದ ಸ್ತ್ರೀ ನಿರ್ವಚನವನ್ನು ಅರ್ಥಮಾಡಿಕೊಳ್ಳುವುದಕ್ಕೆ ಈ ಕೃತಿಯ ಒಟ್ಟು ಓದು ಒಂದು ಪೂರ್ವಭೂಮಿಕೆಯನ್ನು ಒದಗಿಸುತ್ತದೆ. ಈ ಕೃತಿಯಲ್ಲಿರುವ 'ಕೇರಳ ಮಹಿಳೆ', 'ಹೊಸ ಸಾಮಾಜಿಕ ವ್ಯವಸ್ಥೆಗಳು' ಹಾಗೂ 'ಭಾಷೆ ಮತ್ತು ಸಾಹಿತ್ಯ' ಎಂಬ ಅಧ್ಯಾಯಗಳು ಕೇರಳದ ನಂಬೂದಿರಿ ಸ್ತ್ರೀಯರಿಗಿದ್ದ ಸಾಮಾಜಿಕ ಕಟ್ಟುಪಾಡುಗಳು, ಮರುಮಕ್ಕತ್ತಾಯ ಕಟ್ಟು, ಕೇರಳದ ಮಹಿಳೆಯರನ್ನು ಒಗ್ಗಟ್ಟಿನ ಹೋರಾಟಕ್ಕೆ ಪ್ರಚೋದಿಸಿದ ಹೊಸ ಚಿಂತನೆಗಳು, ಕನ್ನಡ ಮತ್ತು ಮಲಯಾಳಂ ನಡುವಿನ ಅನುವಾದ ಪ್ರಕ್ರಿಯೆ, ಕನ್ನಡ-ಮಲಯಾಳಂ ಸಾಹಿತ್ಯ ಸಂಬಂಧ ಮುಂತಾದ ವಿಚಾರಗಳನ್ನು ತಿಳಿಸುತ್ತವೆ. ಮಲಯಾಳಂ ಕತೆ ಮತ್ತು ಕಾದಂಬರಿಗಳ ವಸ್ತು, ಆಲೋಚನೆಗಳು, ಆಶಯಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಈ ಕೃತಿಯ ಓದು ನೆರವಾಗುತ್ತದೆ.

ಮೋಹನ ಕುಂಟಾರ್ ಅವರ 'ಭಾಷಾಂತರದ ವಿಭಿನ್ನ ನೆಲೆಗಳು' (೨೦೧೦) ಕೃತಿಯಲ್ಲಿ ಭಾಷಾಂತರ ಪ್ರಕ್ರಿಯೆಯ ಕುರಿತಂತೆ ಲೇಖಕರ ಅನುಭವ ಮತ್ತು ಆಲೋಚನೆಗಳನ್ನು ಉಳ್ಳ ೧೨ ಲೇಖನಗಳಿದ್ದು ಐದು ಲೇಖನಗಳು ಪ್ರಸ್ತುತ ಅಧ್ಯಯನದ ಕ್ಷೇತ್ರಕ್ಕೆ ಸಂಬಂಧಿಸಿವೆ. ಸ್ವತಃ ಮಲಯಾಳಂನಿಂದ ಕನ್ನಡಕ್ಕೆ ಕತೆ-ಕಾದಂಬರಿಗಳನ್ನು ಭಾಷಾಂತರಿಸಿದ ಅನುಭವದ ಮೂಲಕ ತಾನು ಕಂಡುಕೊಂಡ ವಿಚಾರಗಳನ್ನು ಸೈದ್ಧಾಂತಿಕವಾಗಿ ಮಂಡಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. 'ಭಾಷಾಂತರ ಪ್ರಕ್ರಿಯೆಯ ನೆಲೆಗಳು' ಎಂಬ ಲೇಖನದಲ್ಲಿ ಪ್ರಾಸಂಗಿಕವಾಗಿ ಎಂ.ಟಿ. ವಾಸುದೇವನ್ ನಾಯರ್ ಅವರ ಕತೆಗಳ ಕನ್ನಡ ಅನುವಾದದ ಪ್ರಸ್ತಾಪವಿದೆ. ಅನುವಾದವೊಂದು ಮೂಲರೂಪದಲ್ಲಿ ಉಳಿದುಕೊಳ್ಳುವ ಸಾಧ್ಯತೆಗಳ ಕುರಿತು ಈ ಲೇಖನ ವಿಶ್ಲೇಷಿಸುತ್ತದೆ. ಅನುವಾದಕನ ಪುನರ್ ಸೃಷ್ಟಿಯ ಹಿಂದಿನ ಜವಾಬ್ದಾರಿಯನ್ನು ಸೂಚಿಸುತ್ತದೆ. 'ಭಾಷಾಂತರದ ವಿಭಿನ್ನ ನೆಲೆಗಳು' ಎಂಬ ಲೇಖನದಲ್ಲಿ ಭಾಷಾಂತರ ಪ್ರಕ್ರಿಯೆಯಲ್ಲಿ ಆಕರಭಾಷೆ, ಲಕ್ಷ್ಯಭಾಷೆ, ಆಕರ ಪರಿಸರ, ಲಕ್ಷ್ಯ ಪರಿಸರಗಳ ಸ್ಥಾನ, ಭಾಷಾಂತರಕೃತಿಯೊಂದು ಲಕ್ಷ್ಯ ಭಾಷೆಯ ಓದುಗನಿಗೆ ಆಕರಭಾಷೆಯ ಸಾಂಸ್ಕೃತಿಕ ಪರಿಸರವನ್ನು ಕಟ್ಟಿಕೊಡಬೇಕು ಎಂದು ಪ್ರತಿಪಾದಿಸುತ್ತಾರೆ. 'ಅನುವಾದಕರಾಗಿ ಸಾರಾ ಅಬೂಬಕರ್ ಸಾಧನೆ' ಎಂಬ ಲೇಖನದಲ್ಲಿ ಮುಸ್ಲಿಂ ಮಹಿಳೆಯರ ಸಂವೇದನೆಯನ್ನು ಕನ್ನಡ ಮತ್ತು ಮಲಯಾಳಂ ಭಾಷೆಗಳ

ಓದುಗರಿಗೆ ತಲುಪಿಸಿದ ಸಾರಾ ಅವರು ಅನುವಾದಿಸಿದ ಕೃತಿಗಳಾಗಿರುವ ಕಮಲಾದಾಸ್ ಅವರ 'ಮನೋಮಿ', ಪಿ.ಕೆ. ಬಾಲಕೃಷ್ಣನ್ ಅವರ 'ನಾನಿನ್ನು ನಿದ್ರಿಸುವೆ', ಸುಹರಾ ಅವರ 'ಬಲೆ' ಮತ್ತು 'ತುರ್ತು ಪರಿಸ್ಥಿತಿಯ ಕರಾಳ ಮುಖಗಳು' ಕೃತಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. 'ಕನ್ನಡದಲ್ಲಿ ವೈಕಂ ಮಹಮ್ಮದ್ ಬಶೀರ್ ಭಾಷಾಂತರ' ಎಂಬ ಲೇಖನದಲ್ಲಿ ವಿಡಂಬನೆ ಮತ್ತು ವೈನೋದಿಕ ಪ್ರಜ್ಞೆಯಿಂದಲೇ ಸಾಹಿತ್ಯಲೋಕದಲ್ಲಿ ಪ್ರಸಿದ್ಧರಾದ ಮಲಯಾಳಂ ಬಾಷೆಯ ಅನನ್ಯ ಲೇಖಕ ವೈಕಂ ಮಹಮ್ಮದ್ ಬಶೀರ್ ಅವರು ಮುಸ್ಲಿಂ ಸಮುದಾಯದ ಜೀವವಿರೋಧಿ ಸಂಪ್ರದಾಯ, ಸ್ತ್ರೀ ವಿರೋಧಿ ನೀತಿ ಮತ್ತು ಮೂಢನಂಬಿಕೆಗಳನ್ನು ಅನಾವರಣಗೊಳಿಸಿದ ಮೊದಲ ಲೇಖಕರಾಗಿ ಓದುಗರನ್ನು ಚಿಂತನೆಗೆ ಹಚ್ಚಿದ ರೀತಿಯನ್ನು ಕೆಲವು ಕೃತಿಗಳ ಸಾಂದರ್ಭಿಕ ಉಲ್ಲೇಖ ಮತ್ತು ಪರಿಚಯದೊಂದಿಗೆ ತಿಳಿಸಿದ್ದಾರೆ. 'ದಶಕದ ಕನ್ನಡ ಅನುವಾದ (೧೯೯೧-೨೦೦೦)' ಎಂಬ ಲೇಖನದಲ್ಲಿ ಅನುವಾದ ಪ್ರಕ್ರಿಯೆಯ ಹಿಂದೆ ವೈಯಕ್ತಿಕ, ಸಾಂಸ್ಥಿಕ, ಸಾಮುದಾಯಿಕ ಎಂಬ ಮೂರು ರೀತಿಯ ಭಿನ್ನತೆಗಳಿರುತ್ತವೆ ಎಂಬ ತಿಳುವಳಿಕೆಯ ಭೂಮಿಕೆಯನ್ನು ಇಟ್ಟುಕೊಂಡು ಅನುವಾದ ಕೃತಿಗಳ ಧೋರಣೆಗಳನ್ನು ಪರಿಶೀಲಿಸಲು ಯತ್ನಿಸಿದ್ದಾರೆ.

ಎ. ಮೋಹನ ಕುಂಟಾರ್ ಅವರ 'ಕನ್ನಡ-ಮಲಯಾಳಂ ಭಾಷಾಂತರ ಪ್ರಕ್ರಿಯೆ' (೨೦೧೪) ಗ್ರಂಥವು ಕನ್ನಡ ಮತ್ತು ಮಲಯಾಳಂ ಭಾಷೆಗಳ ನಡುವಿನ ಅನುವಾದ ಪ್ರಕ್ರಿಯೆಯ ಕಾರಣ, ಪ್ರೇರಣೆ ಮತ್ತು ಸ್ವರೂಪಗಳನ್ನು ವಿಶೇಷವಾಗಿ ಅಧ್ಯಯನ ಮಾಡುವ ಪ್ರಯತ್ನದಲ್ಲಿ ರೂಪುಗೊಂಡ ಕೃತಿಯಾಗಿದೆ. ಲೇಖಕರು ಮಲಯಾಳಂ ಮತ್ತು ಕನ್ನಡ ಎರಡೂ ಭಾಷೆಗಳ ಕುರಿತಾದ ತಿಳುವಳಿಕೆಯನ್ನು ಉಳ್ಳವರಾಗಿದ್ದು ಕನ್ನಡ-ಮಲಯಾಳಂ ಅನುವಾದ ಪ್ರಕ್ರಿಯೆಯ ಪ್ರಭಾವ, ನೆಲೆಗಳು, ಅನುವಾದಕರ ಇತಿಮಿತಿಗಳನ್ನು ಸೋದಾಹರಣವಾಗಿ ವಿಶ್ಲೇಷಿಸಿದ್ದಾರೆ. ಕನ್ನಡದಿಂದ ಮಲಯಾಳಕ್ಕೆ ಹಾಗೂ ಮಲಯಾಳದಿಂದ ಕನ್ನಡಕ್ಕೆ ಅನುವಾದಗೊಂಡ ಕೃತಿಗಳ ಕಾಲ, ಪ್ರಕಾರ, ಲೇಖಕವಾರು ವಿವರಗಳನ್ನು ವ್ಯವಸ್ಥಿತವಾಗಿ ಜೋಡಿಸಿದ ಅನುಬಂಧಗಳನ್ನು ಒದಗಿಸುವ ಮೂಲಕ ಸಂಶೋಧನಾಸಕ್ತರಿಗೆ ಉಪಯುಕ್ತವಾದ ಮಾಹಿತಿಯನ್ನು ಒದಗಿಸಿದ್ದಾರೆ. ಭಾಷಾಂತರ ಅಧ್ಯಯನದ ದಾರಿಯನ್ನು ಖಚಿತಗೊಳಿಸುವ ನಿಟ್ಟಿನಲ್ಲಿ ಈ ಕೃತಿ ಬಹಳ ಮಹತ್ವದ್ದಾಗಿದೆ. ಅನುವಾದಿತ ಮಲಯಾಳಂ ಕೃತಿಗಳನ್ನು ಓದುವ ಕನ್ನಡದ ಓದುಗರಿಗೆ ಉಪಯುಕ್ತವಾದ ಅನುವಾದ ಪದಕೋಶವನ್ನೂ ಕೃತಿಯು ಒದಗಿಸಿದ್ದು ಮಲಯಾಳಂ ಸಮಾಜ-ಸಂಸ್ಕೃತಿಗಳಿಗೆ ಸಂಬಂಧಿಸಿದ ಪಾರಿಭಾಷಿಕ ಪದಗಳನ್ನು ಅರ್ಥಮಾಡಿಕೊಂಡು ಓದುವಲ್ಲಿ ಸಹಕಾರಿಯಾಗಿದೆ.

ಮೋಹನ ಕುಂಟಾರ್ (೨೦೧೮) ಅವರ 'ಮಲಯಾಳ ಸಮಾಜ ಮತ್ತು ಸಂಸ್ಕೃತಿ' ಕೃತಿಯಲ್ಲಿ ಕೇರಳದ ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಮತ್ತು ಕಲಾ ಪರಂಪರೆಗಳಿಗೆ ಸಂಬಂಧಿಸಿದಂತೆ ಒಟ್ಟು ಹತ್ತು

ಸಂಶೋಧನಾ ಲೇಖನಗಳಿದ್ದು ಮಲಯಾಳಂ ಕಥನಸಾಹಿತ್ಯವನ್ನು ವಿಶ್ಲೇಷಿಸುವಲ್ಲಿ ನೆರವಾಗುವ ಮೂರು ಲೇಖನಗಳಿವೆ. 'ಮಲಯಾಳಂ ಸಾಹಿತ್ಯ: ಬಂಡಾಯ ಪರಂಪರೆ' ಎಂಬ ಲೇಖನವು ಮಲಯಾಳಂ ಲೇಖಕರು ಬರವಣಿಗೆಯ ಮೂಲಕ ಸಂಪ್ರದಾಯದ ವಿರುದ್ಧ ತಿರುಗಿ ಬೀಳುವುದನ್ನು ಗುರುತಿಸಿದೆ. ಸಾಮಾಜಿಕ, ಧಾರ್ಮಿಕ ಮತ್ತು ಭಾಷಿಕ ನೆಲೆಗಳಲ್ಲಿ ಅದಾಗಲೇ ಇದ್ದ ಜೀವವಿರೋಧಿಯಾದ ನಂಬಿಕೆಗಳು ಮತ್ತು ಸಿದ್ಧವಿನ್ಯಾಸಗಳನ್ನು ಪ್ರತಿಭಟಿಸುವ ಸಾಹಿತ್ಯವು ರಚನೆಯಾಯಿತು. ಮಲಯಾಳಂ ಲೇಖಕರಾದ ತಗಳಿ, ಬಷೀರ್, ಲಲಿತಾಂಬಿಕಾ ಅಂತರ್ಜನಂ, ಕಮಲಾದಾಸ್, ಪಿ.ವತ್ಸಲಾ, ನಾರಾಯಣ್ ಮುಂತಾದ ಲೇಖಕರು ಕಥನಸಾಹಿತ್ಯದ ಮೂಲಕ ಸೌಮ್ಯವಾಗಿ ಮತ್ತು ವಿಡಂಬನೆಯ ರೂಪದಲ್ಲಿ ಮನೋಧರ್ಮವನ್ನು ಪ್ರಕಟಿಸಿದ ಬಗೆಯನ್ನು ಸೋದಾಹರಣವಾಗಿ ನಿರೂಪಿಸಲಾಗಿದೆ. 'ಕನ್ನಡ ಮಲಯಾಳಂ ಸಣ್ಣ ಕಥೆಗಳು ಪ್ರೇರಣೆಗಳು ಮತ್ತು ಪ್ರಭಾವಗಳು' ಎಂಬ ಲೇಖನವು ಪಾಶ್ಚಾತ್ಯ ಸಾಹಿತ್ಯದಿಂದ ಪ್ರಭಾವಿತವಾದ ಕನ್ನಡ ಮತ್ತು ಮಲಯಾಳಂ ಎರಡು ಭಾಷೆಗಳಲ್ಲಿಯೂ ಸಣ್ಣಕಥೆ ಎಂಬ ಹೊಸ ಸಾಹಿತ್ಯಪ್ರಕಾರವು ಹುಟ್ಟಿಕೊಂಡು ಬಹುಬೇಗ ಜನಪ್ರಿಯವಾಗುವಲ್ಲಿ ಕಾರಣವಾದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಂಗತಿಗಳನ್ನು ವಿಶ್ಲೇಷಿಸುತ್ತದೆ. 'ನಂಬೂದಿರಿ ಸಮುದಾಯದಲ್ಲಿ ಲಿಂಗಸಂಬಂಧಿ ನೆಲೆಗಳು' ಎಂಬ ಲೇಖನವು ಮಲಯಾಳಂ ಕಥನಸಾಹಿತ್ಯದಲ್ಲಿ ಕಂಡುಬರುವ ಸ್ತ್ರೀ ನಿರ್ವಚನದ ಸಾಮಾಜಿಕ ನೆಲೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಸಹಕಾರಿಯಾಗಿದೆ.

ಇದುವರೆಗಿನ ಅಧ್ಯಯನಗಳ ಅವಲೋಕನದಿಂದ ಪ್ರಸ್ತುತ ಅಧ್ಯಯನದ ದಾರಿ, ವಿಧಾನ, ತಾತ್ವಿಕತೆ ಮತ್ತು ಉದ್ದೇಶಗಳನ್ನು ಸ್ಪಷ್ಟಗೊಳಿಸಿಕೊಳ್ಳುವುದು ಸಾಧ್ಯವಾಗಿದೆ. 'ಸ್ತ್ರೀ ಮಲಯಾಳ' ಎಂದೇ ಕರೆಸಿಕೊಳ್ಳುತ್ತಿದ್ದ, ನೂರಕ್ಕೆ ನೂರು ಶೇಕಡಾ ಸಾಕ್ಷರತೆಯನ್ನು ದಾಖಲಿಸಿದ, ಹೆಣ್ಣುಮಕ್ಕಳು ಶಿಕ್ಷಣ ಮತ್ತು ಉದ್ಯೋಗ ನಿಮಿತ್ತ ಊರಿನಿಂದ ದೂರ ಹೋಗುವುದಕ್ಕೆ ಮೊದಲು ಅವಕಾಶ ಕಲ್ಪಿಸಿದ ಕೇರಳದ ಸಾಹಿತ್ಯವು ಸ್ತ್ರೀಯರನ್ನು ಹೇಗೆ ಚಿತ್ರಿಸಿದೆ? ಮೊದಲ ಹಂತದಲ್ಲಿ ಬರೆಯತೊಡಗಿದ ಸ್ತ್ರೀಯರ ಕಾಳಜಿಗಳು ಏನಾಗಿದ್ದವು? ಮಲಯಾಳಂ ಲೇಖಕರು ಮತ್ತು ಲೇಖಕಿಯರು ಕಟ್ಟಿಕೊಡುವ ಸ್ತ್ರೀ ಪಾತ್ರಾಭಿವ್ಯಕ್ತಿಯಲ್ಲಿ ಸಾಮ್ಯತೆ ಅಥವಾ ಭಿನ್ನತೆಗಳಿವೆಯೆ? ಆಧುನಿಕ ಓದಿನಿಂದ ದತ್ತವಾದ ಚಿಂತನಾಕ್ರಮ ಮತ್ತು ಸ್ತ್ರೀ ಪ್ರಜ್ಞೆ ಮಲಯಾಳಂ ಕಥನಸಾಹಿತ್ಯವನ್ನು ಪ್ರಭಾವಿಸಿದೆಯೆ? ಪಿತೃಪ್ರಧಾನ ಮೌಲ್ಯಗಳಿಗೆ ಪ್ರತಿಯಾಗಿ ಸ್ತ್ರೀಪರ ಮೌಲ್ಯಗಳು ಹಾಗೂ ಪರ್ಯಾಯ ಸಾಧ್ಯತೆಗಳನ್ನು ಕೃತಿಗಳು ಪ್ರತಿಪಾದಿಸಿವೆಯೆ? ಇತ್ಯಾದಿ ವಿಚಾರಗಳನ್ನು ಶೋಧಿಸುತ್ತಲೇ ಅಲ್ಲಿನ ಸ್ತ್ರೀ ನಿರ್ವಚನದ ಸ್ವರೂಪವನ್ನು ಖಚಿತಪಡಿಸಿಕೊಳ್ಳುವ ಉದ್ದೇಶದೊಂದಿಗೆ ಪ್ರಸ್ತುತ ಅಧ್ಯಯನವನ್ನು ಮೂರು ಮುಖ್ಯ ಅಧ್ಯಾಯಗಳಲ್ಲಿ ವಿಸ್ತರಿಸಲಾಗಿದೆ.

ಅಧ್ಯಾಯ ೨

ಸಾಮಾಜಿಕ ನೆಲೆ

೨.೧. ಪರಂಪರೆ, ಸಂಪ್ರದಾಯ ಮತ್ತು ಧರ್ಮ

೨.೧.೧. ಪರಂಪರೆಯ ವಾರಸುದಾರಿಣಿಯರು

೨.೧.೨. ಸಂಪ್ರದಾಯವನ್ನು ಒಪ್ಪಿಕೊಂಡವರು

೨.೧.೩. ಸಂಪ್ರದಾಯದ ಗೆರೆ ದಾಟಿದವರು

೨.೧.೪. ಪಿತೃವ್ಯವಸ್ಥೆಯ ಕ್ರೌರ್ಯ: ಮುದುಡುವ ಸ್ತ್ರೀಜೀವಗಳು

೨.೧.೫. ಧರ್ಮ: ಸ್ತ್ರೀದೃಷ್ಟಿ

೨.೨. ಕುಟುಂಬ ಎಂಬ ಕೋಶ: ಸ್ತ್ರೀಶೋಷಣೆಯ ಸಾಂಸ್ಥಿಕ ವ್ಯವಸ್ಥೆ

೨.೨.೧. ಸಂಬಂಧಂ: ಸಡಿಲ ದಾಂಪತ್ಯ

೨.೨.೨. ಮದುವೆ ಎಂಬ ಕೇಂದ್ರ ಕಾಳಜಿ

೨.೨.೩. ಸಂಶಯ ಮತ್ತು ಅವಮಾನ: ದಾಂಪತ್ಯ ವಿಘಟನೆ

೨.೨.೪. ತಾಯ್ತನದ ವಿಭಿನ್ನ ಮಾದರಿಗಳು

೨.೨.೫. ಸನ್ಯಾಸ: ಕುಟುಂಬ ವ್ಯವಸ್ಥೆಯ ನಿರಾಕರಣೆ

೨.೨. ಶಿಕ್ಷಣದಿಂದ ಸ್ವಪ್ರಜ್ಞೆ

ಅಧ್ಯಾಯ ೨: ಸಾಮಾಜಿಕ ನೆಲೆ

ಮಲಯಾಳಂ ಕಥನಸಾಹಿತ್ಯವು ನಿರೂಪಿಸುವ ಸ್ತ್ರೀಯ ಸಾಮಾಜೀಕರಣದ ಪ್ರಕ್ರಿಯೆಯನ್ನು ಈ ಅಧ್ಯಾಯದಲ್ಲಿ ಪರಿಶೀಲಿಸಲಾಗಿದೆ. ಮದುವೆ, ಕುಟುಂಬ, ಬಂಧುತ್ವ, ಶಿಕ್ಷಣ, ಸಂಪ್ರದಾಯ, ಪರಂಪರೆ, ಧರ್ಮ ಮುಂತಾದ ಸಾಮಾಜಿಕ ಸಂಸ್ಥೆಗಳ ಮೂಲಕ ಸ್ತ್ರೀಯರನ್ನು ವ್ಯವಸ್ಥಿತವಾಗಿ ನಿರ್ಬಂಧಿಸಲಾಗಿದೆ. ಈ ನಿರ್ಬಂಧಗಳನ್ನು ಮೀರುವುದಕ್ಕೆ ಪ್ರಯತ್ನಿಸುವ ಸ್ತ್ರೀಯರು ಹುಡುಕಿಕೊಳ್ಳುವ ದಾರಿಗಳನ್ನು, ವಿಮೋಚನೆ ಬಯಸುವ ಸ್ತ್ರೀಯರನ್ನು ಸಮಾಜವು ನಡೆಸಿಕೊಳ್ಳುವ ಬಗೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೨.೧. ಪರಂಪರೆ, ಸಂಪ್ರದಾಯ ಮತ್ತು ಧರ್ಮ

ಭಾರತದ ಸಂದರ್ಭದಲ್ಲಿ ಪರಂಪರೆ, ಸಂಪ್ರದಾಯ ಮತ್ತು ಧರ್ಮಗಳು ಪರಸ್ಪರ ಬೆರೆತುಕೊಂಡ ಮತ್ತು ಬೇರ್ಪಡಿಸಲಾಗದ ಸಂಬಂಧವನ್ನು ಹೊಂದಿವೆ. ಹಲವು ಬಗೆಯ ಆಧ್ಯಾತ್ಮಿಕ ಚಿಂತನೆಗಳು ಮತ್ತು ಮತಧರ್ಮಗಳನ್ನು ಹೊಂದಿರುವ ಭಾರತೀಯರು ಕುಟುಂಬ ಮತ್ತು ಸಮಾಜದ ಚೌಕಟ್ಟುಗಳ ಒಳಗೆ ಬೆಳೆಯುತ್ತ ಅಕ್ಷರಕಲಿಕೆಗೂ ಮೊದಲೇ ಧರ್ಮ ಮತ್ತು ಸಂಪ್ರದಾಯಗಳ ಪಾರಂಪರಿಕ ಜ್ಞಾನವನ್ನು ಹೊಂದಿರುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಶಾಲೆಗಳೂ ಕೂಡ ಈ ಕಲಿಕೆಗೆ ಪೂರಕವಾಗಿಯೆ ಇರುತ್ತವೆ. ಧರ್ಮದ ಸೂಕ್ಷ್ಮಗಳ ಅರಿವಿಲ್ಲದ ಜನರು ಕೂಡ ತಮ್ಮ ಹಿರಿಯರಿಂದ ತಿಳಿದಿರುವ ಸಂಪ್ರದಾಯಗಳನ್ನು ಪ್ರಶ್ನಿಸುವ ಪ್ರಯತ್ನ ಮಾಡದೆ ಸಾಧ್ಯವಾದಷ್ಟು ಮಟ್ಟಿಗೆ ಆಚರಿಸುತ್ತಾರೆ. ಕನ್ನಡಕ್ಕೆ ಅನುವಾದಿತವಾಗಿರುವ ಮಲಯಾಳಂ ಕಥನಗಳಲ್ಲಿ ಬೇರೆ ಬೇರೆ ಸಮುದಾಯಗಳಿಗೆ ಸೇರಿದ ಸ್ತ್ರೀಯರ ನಂಬಿಕೆ, ಆಚರಣೆಗಳು ಅವರ ಬದುಕಿನ ಸಂಕಟ ಮತ್ತು ಪಲ್ಲಟಗಳಿಗೆ ಕಾರಣವಾಗಿರುವುದನ್ನು ವಿಶ್ಲೇಷಿಸಲಾಗಿದೆ.

೨.೧.೧. ಪರಂಪರೆಯ ವಾರಸುದಾರಿಣಿಯರು

ಪರಂಪರೆಯಿಂದ ಬಂದ ವೈಭವ, ಪ್ರತಿಷ್ಠೆಗಳನ್ನು ಉಳಿಸಿಕೊಳ್ಳಲು ಸ್ತ್ರೀಯರು ಸಾಹಸಪಡುತ್ತಾರೆ. ಬದಲಾಗುತ್ತಿರುವ ಕಾಲವು ತಮ್ಮ ಪಾರಂಪರಿಕ ನಂಬಿಕೆ, ಶ್ರದ್ಧೆಗಳನ್ನು ತಿರಸ್ಕರಿಸಿ ಮುಂದೆ ಸಾಗಿರುವುದನ್ನು ಒಪ್ಪಲು ಅವರು ತಯಾರಿಲ್ಲ. ಸನ್ನಿವೇಶ, ಸಂದರ್ಭದ ಅಪೇಕ್ಷೆಗಳಿಗೆ

ಹೊಂದಿಕೊಳ್ಳಲಾಗದೆ ತಮ್ಮದೇ ಭ್ರಮಾಲೋಕದಲ್ಲಿರುವ ಇಂಥ ಸ್ತ್ರೀಯರು ಸಮಕಾಲೀನ ಬದುಕಿಗೆ ಸ್ಪಂದಿಸಲಾಗದೆ ಚಡಪಡಿಸುತ್ತಾರೆ.

ವೈಕ್ಕಂ ಮುಹಮ್ಮದ್ ಬಷೀರ್ ಅವರ ಜನಪ್ರಿಯ ಮಲಯಾಳಂ ಕೃತಿ 'ನನ್ನಜ್ಜನಿಗೊಂದಾನೆಯಿತ್ತು' ಸ್ತ್ರೀವಿರೋಧಿಯಾದ ನಂಬಿಕೆಗಳು ಸ್ತ್ರೀಯರ ಸಹಜ ಬೆಳವಣಿಗೆಯನ್ನು ನಿರ್ಬಂಧಿಸುವುದನ್ನು ನವಿರಾಗಿ ವಿಡಂಬಿಸುತ್ತ ಓದುಗರನ್ನು ಚಿಂತನೆಗೆ ಹಚ್ಚುವ ಕೃತಿ. ಈ ಕೃತಿಯ ಕುಞ್ಞಿತಾಚುಮ್ಮ ತಾನು 'ಆನೆಮಕ್ಕಾರನ ಮಗಳು' ಎಂಬ ಅಂತಸ್ತು ಮತ್ತು ಪ್ರಸ್ತುತ ಕಳೆದುಹೋಗಿರುವ ಪ್ರತಿಷ್ಠೆಯ ಭ್ರಮೆಯಲ್ಲಿ ಬದುಕುತ್ತ ವಾಸ್ತವವನ್ನು ಒಪ್ಪಲು ನಿರಾಕರಿಸುವವಳು. ದೊಡ್ಡ ಆನೆಮಕ್ಕಾರನ ಮಗಳಾಗಿರುವುದರಿಂದ ಯಾರ ಬಗ್ಗೆಯೂ ಮಾತನಾಡುವ 'ಲೈಸೆನ್ಸ್' ಇದೆಯೆಂದು ಭಾವಿಸಿರುವವಳು. ಇಸ್ಲಾಂನಲ್ಲಿ ಹೇಳಲಾಗಿದೆ ಎನ್ನುವ ವಿಚಾರಗಳಲ್ಲಿ ಹೊಂದಿರುವ ಕುರುಡು ನಂಬಿಕೆಯಿಂದಾಗಿ ತನ್ನ ಒಬ್ಬಳೇ ಮಗಳು ಕುಞ್ಞಿಪಾತುಮ್ಮನಿಗೆ 'ಕಾಫರರು'ಗಳ ಆಧುನಿಕ ಶಿಕ್ಷಣವನ್ನೂ, ಮುಕ್ತ ಸಂಚಾರವನ್ನೂ ನಿರಾಕರಿಸುತ್ತಾಳೆ.

ಪ್ರಸ್ತುತ ಸಿರಿತನದ ವೈಭವದಿಂದ ಬಡತನಕ್ಕಿಳಿದ, ಹಿಂದೆ ಇತ್ತೆನ್ನಲಾಗುವ ವೈಭವದ ಭ್ರಮೆಯಲ್ಲಿ ಬದುಕುವ ಒಂದು ಕುಟುಂಬದ ಕೊನೆಯ ಸುಳಿ ಎನ್ನಿಸಿರುವ ಕುಞ್ಞಿಪಾತುಮ್ಮ ಅವಳ ತಾಯಿ ಹೇಳಿದ್ದನ್ನು ನಂಬಿ ನೆರೆಹೊರೆಯವರೊಂದಿಗೆ, ಊರವರೊಂದಿಗೆ ಬೆರೆಯದೆ 'ಆನೆಮಕ್ಕಾರನ ಮೊಮ್ಮಗಳು' ಎಂಬ ಪ್ರತಿಷ್ಠೆಯಲ್ಲಿಯೆ ಬೆಳೆದು ದೊಡ್ಡವಳಾಗಿದ್ದಾಳೆ. ಶ್ರೀಮಂತಿಕೆಯಲ್ಲಿ ಮುಳುಗಿದ್ದರೂ ಶಿಕ್ಷಣದ ಅವಕಾಶವಿಲ್ಲದೆ, ಮೈ ತುಂಬ ಬಂಗಾರದ ಒಡವೆಗಳನ್ನು ಹೇರಿಕೊಂಡು, ದೊಡ್ಡ ಮನೆಯ ಒಳಗೇ ತನ್ನ ಬಾಲ್ಯವನ್ನು ಕಳೆದಿದ್ದಾಳೆ. ತನ್ನ ಕೃತ್ಯಗಳಿಂದಾಗಿ 'ಖಿಯಾಮ'ವು (ಅಂದರೆ ಲೋಕದ ಅವಸಾನವು) ಸಮೀಪಿಸಲು ಕಾರಣಳಾದೇನೆಂಬ ಭಯದಿಂದ ಅಮ್ಮ ಹೇಳಿಕೊಟ್ಟ ಸಂಪ್ರದಾಯದ ಮತ್ತು ಧರ್ಮದ ದಾರಿಯಲ್ಲಿಯೆ ನಡೆದು ಬಂದಿದ್ದಾಳೆ. ಶಾಲೆಗೆ ಹೋಗದೆ ಮನೆಯೊಳಗೇ ಉಳಿದ ಕಾರಣ ಕುಞ್ಞಿಪಾತುಮ್ಮಳಿಗೆ ಲೋಕಜ್ಞಾನವಿಲ್ಲದೆ ಆಧುನಿಕರ ದೃಷ್ಟಿಯಲ್ಲಿ ದಡ್ಡಿಯಾಗಿ ಬೆಳೆಯುವಂತಾಗಿದೆ. ಬೈತಲೆ ಬರುವಂತೆ ತಲೆ ಬಾಚಿಕೊಳ್ಳುವುದು, ಹೂ ಮುಡಿದುಕೊಳ್ಳುವುದು, ಸೀರೆ ಉಡುವುದು.. ಮುಂತಾದವುಗಳನ್ನು ಮಾಡಿದರೆ ಕಾಫರ್ ಸ್ತ್ರೀಯಾಗುವೆನೆಂದೂ, ಅದರಿಂದಾಗಿ ಸತ್ತ ಬಳಿಕ ನರಕವು ಪ್ರಾಪ್ತಿಯಾಗುವದೆಂದೂ ನಂಬಿರುವ ಕುಞ್ಞಿತಾಚುಮ್ಮ ಮಗಳಿಗೂ ಅದನ್ನೇ ಕಲಿಸಿದ್ದಾಳೆ. ತನ್ನ ಅಜ್ಜನಿಗೆ ಇತ್ತೆನ್ನಲಾಗುವ, ನಾಲ್ಕು ಕಾಫರರನ್ನು ತುಳಿದು ಕೊಲ್ಲುವ ಮೂಲಕ ತನ್ನ ಅಸಾಮಾನ್ಯ ಧರ್ಮಪ್ರಜ್ಞೆಯನ್ನು ಸಾಬೀತುಪಡಿಸಿದ ಆನೆಯನ್ನು ಮೊಮ್ಮಗಳು ನೋಡಿಲ್ಲ. ಅದು ನಿಜವಾಗಿರಬಹುದೆ ಎಂಬ ಸಂದೇಹವು ಆಗೀಗ ಮೂಡಿದೆಯಾದರೂ ತನ್ನ ಅಪನಂಬಿಕೆಯನ್ನು ಅಮ್ಮನಲ್ಲಿ ವ್ಯಕ್ತಪಡಿಸುವ ಧೈರ್ಯ ಅವಳಿಗಿಲ್ಲ. ಹಾಗೇನಾದರೂ ಅಮ್ಮನ ನಂಬಿಕೆಯನ್ನು ಪ್ರಶ್ನಿಸಿದರೆ ಪರಂಪರೆಗೆ, ಧರ್ಮಕ್ಕೆ ಕೇಡು ಮಾಡಿದಂತಾಗುವುದು ಎಂದು ನಂಬುವಂತೆ ಅವಳನ್ನು ಬೆಳೆಸಲಾಗಿದೆ. ಹೀಗೆ ಪರಂಪರೆಯ ಕುರಿತಾದ

ಅಂಧಾಭಿಮಾನ ತಾಯಿ ಮತ್ತು ಮಗಳು ಇಬ್ಬರು ಸ್ತ್ರೀಯರ ಬದುಕನ್ನೂ ಅಸ್ವಸ್ಥಗೊಳಿಸಿರುವುದನ್ನು ಕೃತಿಯಲ್ಲಿ ಕಾಣಬಹುದು.

ಎಂ.ಟಿ. ವಾಸುದೇವನ್ ನಾಯರ್ ಅವರು ಬರೆದಿರುವ 'ದುರ್ಬೀಜ' ಕೃತಿಯ ಕುಞ್ಞಿಕಾಳಿಯಮ್ಮ ಹೊಸ ನೋವುಗಳನ್ನು ಮರೆಯಲಿಕ್ಕೋಸ್ಕರ ಹಳೆಯ ಸಮೃದ್ಧಿಯ ದಿನಗಳನ್ನು ಮೆಲುಕುಹಾಕುತ್ತ ಬದುಕುವವಳು. 'ಆಸ್ತಿ, ಸಂಪತ್ತು ಎಲ್ಲ ಹೋದರೂ ಮರ್ಯಾದೆ ದೊಡ್ಡದು' ಎಂಬ ಪ್ರತಿಪಾದನೆಯೊಂದಿಗೆ 'ತಾಳತ್ತೇದಿಲ್ ಮನೆಯ ಕುಞ್ಞಿಕಾಳಿಯಮ್ಮ ಎಂದರೆ ಯಾರು ಎಂಬುದು ಊರವರಿಗೆಲ್ಲ ಗೊತ್ತಿದೆ' ಎಂಬ ಸ್ವಯಂ ಮೇಲರಿಮೆಯ ಪ್ರಜ್ಞೆಯಲ್ಲಿ ವರ್ತಮಾನದ ವಾಸ್ತವವನ್ನು ಮರೆತಿರುವವಳು. ಕಳೆದುಕೊಂಡ ವೈಭವದ ಬಗ್ಗೆ ಹಳಹಳಿಸುತ್ತ, ಐದು ಮಕ್ಕಳನ್ನು ಬೆಳೆಸಲು ಪಟ್ಟ ಕಷ್ಟದ ಕತೆಯನ್ನು ಹೇಳಿಕೊಳ್ಳುತ್ತ ಕೆಲಸವಿಲ್ಲದೆ ನಿರುಪಯುಕ್ತನಾಗಿರುವ ಗೋವಿಂದುಟ್ಟಿಯ ಕಡೆಗೆ ವ್ಯಂಗ್ಯಬಾಣಗಳನ್ನು ಎಸೆಯುತ್ತ, ಸ್ವಗತದಲ್ಲಿ ಮಾತನಾಡಿಕೊಳ್ಳುತ್ತ ಮಲಗಿರುವ ಕುಞ್ಞಿಕಾಳಿಯಮ್ಮ ಕಾಲಸಂದರ್ಭಗಳು ಬದಲಾಗಿರುವ ವಾಸ್ತವವನ್ನು ಒಪ್ಪಲು ನಿರಾಕರಿಸಿರುವವಳು. ಚಲನೆಯಿಲ್ಲದೆ ಮಲಗಿರುವ ತನ್ನ ಹಾಸಿಗೆಯ ವ್ಯಾಪ್ತಿಗೆ ಕಾಲವನ್ನು ನಿರ್ಬಂಧಿಸಿ ತನ್ನ ಗ್ರಹಿಕೆಗಳ ಮಿತಿಯೊಳಗೆ ಬದುಕಿರುವವಳು.

ಕುಞ್ಞಿಕಾಳಿಯಮ್ಮನ ಮಗಳು ಕುಞ್ಞಕ್ಕನಿಗೆ ಪರಂಪರೆಯಲ್ಲಿ ಗೌರವವಿದೆ. ಆದರೆ ವರ್ತಮಾನದಲ್ಲಿ ಬದುಕಲು ಕಳೆದುಹೋದ ವೈಭವದ ದಿನಗಳ ನೆನಪಷ್ಟೇ ಸಾಲದು ಎಂಬ ವಾಸ್ತವದ ಪ್ರಜ್ಞೆಯಿದೆ. ವರಮಾನವಿಲ್ಲದ 'ಗೆದ್ದಲು ಹಿಡಿದು ಸವೆಯುತ್ತಿರುವ ಮನೆಯ ಒಂದು ಭಾಗವೆ ಆಗಿರುವ' ಕುಞ್ಞಕ್ಕ, ಮನೆಯನ್ನು ನಡೆಸಬೇಕಾದರೆ ಪರಂಪರೆಯ ಪ್ರತಿಷ್ಠೆಯ ಹೊಸ್ತಿಲು ದಾಟಿ ಹೊರಗಿಳಿಯಬೇಕಾದ ಸತ್ಯವನ್ನು ಅರ್ಥಮಾಡಿಕೊಂಡಿದ್ದಾಳೆ. ಮನೆಯಲ್ಲಿ ಬೇಯಿಸಲು ಏನೂ ಇಲ್ಲದ ಪರಿಸ್ಥಿತಿಯಲ್ಲಿ 'ಈಂದ್' (ತಾಳೆಮರದ ಹುಡಿ) ಅನ್ನು ಸಂಗ್ರಹಿಸಿ ಅದನ್ನು ಹಿಂಡಿ ತೆಗೆದು ಕುದಿಸಿದ ಗಂಜಿಯನ್ನು ಸಹೋದರರಿಗೆ ಬಡಿಸುತ್ತಾಳೆ. ಎಷ್ಟೋ ರಾತ್ರಿಗಳಲ್ಲಿ ಹಸಿವಿಲ್ಲವೆಂದು ಸುಳ್ಳು ಹೇಳಿ, ಇರುವ ಸ್ವಲ್ಪ ಗಂಜಿಯನ್ನು ತಮ್ಮನಿಗೂ ಅಮ್ಮನಿಗೂ ಸುರಿದುಕೊಟ್ಟು ಉಪವಾಸವಿರುತ್ತಾಳೆ. 'ಗಂಡುಮಕ್ಕಳಿಗೆ ಎರಡು ಸೌಟು ಗಂಜಿ ಕೊಡುವುದಕ್ಕೂ ಸಾಧ್ಯವಾಗದ ಕಷ್ಟ ಈ ಮನೆಯಲ್ಲಿ ಹಿಂದೆಂದೂ ಬಂದಿರಲಿಲ್ಲ' ಎಂದು ವಿಷಾದಿಸುವ ಕುಞ್ಞಕ್ಕನಿಗೆ ತಾನು ಉಪವಾಸವಿರುವ ಬಗ್ಗೆ ಖೇದವಿಲ್ಲ. ಅಮ್ಮನೂ ಸೋದರರೂ ಹೊಟ್ಟೆ ತುಂಬ ಉಣ್ಣುವಂತಾದರೆ ಸಾಕು ಎಂಬ ಬಯಕೆಯಿದೆ. ಕೆಲಸವಿಲ್ಲದ ಗೋವಿಂದನ್ ಕುಟ್ಟಿಯನ್ನು ಕೃಷಿಯ ವ್ಯವಹಾರಗಳನ್ನು ನೋಡಿಕೊಂಡಿರುವುದಕ್ಕಾಗಿ ಕರೆದುಕೊಂಡು ಹೋಗುವ ಪ್ರಸ್ತಾಪವನ್ನು ಭಾವ ಮುಂದಿಟ್ಟಾಗ, ಪ್ರೀತಿಯ ತಮ್ಮನನ್ನು ಕಳುಹಿಸಲು ವ್ಯಥೆಯಾದರೂ 'ಒಂದು ತಟ್ಟೆ ಕಡಿಮೆ ಇಟ್ಟರೆ ಸಾಕಲ್ಲ' ಎಂಬಂಥ ವಾಸ್ತವದ ಅರಿವಿನೊಂದಿಗೆ ಒಪ್ಪಿಕೊಳ್ಳುತ್ತಾಳೆ. ಪ್ರತಿಷ್ಠಿತ ಮನೆತನದ

ಕುಡಿಯಾಗಿರುವ ಮಗ ಇನ್ನೊಬ್ಬರ ತೋಟದಲ್ಲಿ ಸಹಾಯಕನಾಗಿ ದುಡಿಯಲು ಹೋಗುವ ಬಗ್ಗೆ ಕುಞ್ಞಿಕಾಳಿಯಮ್ಮನ ಪ್ರತಿಪಾದನೆಯೆ ಬೇರೆ "ಮರ್ಯಾದೆಯಿಂದ ಬಾಳಬೇಕಾದರೆ ಇದೆಲ್ಲ ಬೇಕಾದದ್ದೆ. ಅವರವರ ಗೌರವಕ್ಕೆ ಕುಂದು ತರುವಂತಹ ಕೆಲಸವೇನಾದರೂ ಮಾಡಿದರೆ ಮಾತ್ರ ಜನರು ತಾತ್ಸಾರದಿಂದ ನೋಡುತ್ತಾರೆ." (ಪು. ೧೫೭) ಮನೆಯ ಬಡತನವು ಮಗನನ್ನು ಪರರ ಆಳಾಗಿಸುತ್ತಿರುವ ಸತ್ಯವನ್ನು ಆಕೆ ಕಾಣಲಾರಳು.

ಅಮ್ಮನ ಪಾರಂಪರಿಕ ಪ್ರತಿಷ್ಠೆಯ ಕೋಟೆಗೆ ಧಕ್ಕೆಯಾಗದಂತೆ ಮನೆ ನಡೆಸುವುದಕ್ಕಾಗಿ ಒದ್ದಾಡುವ ಕುಞ್ಞಕ್ಕ, ಮನೆಯ ಆರ್ಥಿಕ ಪರಿಸ್ಥಿತಿಯನ್ನು ಸ್ವಂತ ತಮ್ಮಂದಿರಲ್ಲೂ ಬಾಯಿಬಿಟ್ಟು ಹೇಳಿದವಳಲ್ಲ. ತನ್ನ ತಲೆಗೂದಲಿಗೆ ಎಣ್ಣೆ ಇಲ್ಲದಿದ್ದರೂ ಬೆಳಗ್ಗೆ ಸಂಜೆ ಎರಡೂ ಹೊತ್ತು ದೀಪಕ್ಕೆ ಎಣ್ಣೆ ಹಾಕಿ ಉರಿಸುವ ಮೂಲಕ ತರವಾಡು ಮನೆಯ ಗೌರವ ಉಳಿಸುತ್ತಾಳೆ. ಪ್ರೀತಿಯ ತಮ್ಮ ಗೋವಿಂದುಟ್ಟಿಯು ಇಸ್ಲಾಂಗೆ ಮತಾಂತರಗೊಂಡ ಸಂಗತಿಯನ್ನು ಸಾಯುತ್ತಿರುವ ಅಮ್ಮನಿಂದ ಮುಚ್ಚಿಡುತ್ತಾಳೆ. ಆ ಮೂಲಕವಾಗಿ ಹಾಸಿಗೆ ಹಿಡಿದಿರುವ ಅಮ್ಮನ ನೆಮ್ಮದಿಯನ್ನೂ, ಮನೆಬಿಟ್ಟಿರುವ ಮಗ ಎಂದಾದರೂ ತಿರುಗಿ ಬಂದಾನೆಂಬ ತಾಯಿಹೃದಯದ ಆಸೆಯನ್ನೂ ಉಳಿಸಿದ್ದಾಳೆ.

ಕುಞ್ಞಿಕಾಳಿಯಮ್ಮನ ಇಬ್ಬರು ಮಗಳಂದಿರು ಆರ್ಥಿಕವಾಗಿ ಅನುಕೂಲವಿರುವ ಮನೆ ಸೇರಿದ್ದಾರೆ. ತಾಯಿಯನ್ನು ತಮ್ಮೊಂದಿಗೆ ತಂದಿಟ್ಟುಕೊಳ್ಳುವ ಇಚ್ಛೆ, ಅನುಕೂಲತೆ ಎರಡು ಹೆಣ್ಣುಮಕ್ಕಳಿಗೂ ಇದೆ. ಆದರೆ ಹೆಣ್ಣುಮಕ್ಕಳನ್ನು ಕೊಟ್ಟ ಮನೆಯ ಅನ್ನದ ಹಂಗಿಗೆ ಬೀಳಲು ಕುಞ್ಞಿಕಾಳಿಯಮ್ಮನ 'ತರವಾಡಿನ' (ಮಾತೃಮೂಲೀಯ ಕುಟುಂಬದ ಮೂಲಮನೆ) ಪ್ರತಿಷ್ಠೆ ಒಪ್ಪುವುದಿಲ್ಲ. 'ನನ್ನ ಕುಟುಂಬದ ಮನೆ ಇರುವಾಗ ಬೇರೆಲ್ಲಿಗೂ ಹೋಗಿ ಇರುವುದು ಇಷ್ಟವಿಲ್ಲ' ಎಂಬ ಸ್ವಾಭಿಮಾನದಿಂದ ಮನೆಯಲ್ಲಿ ಒಪ್ಪೊತ್ತು ಗಂಜಿಗೂ ಬವಣೆಪಡುತ್ತ, ಮದ್ದಿಗೂ ಅನುಕೂಲವಿಲ್ಲದೆ ಆಕೆ ಪ್ರಾಣಬಿಡುವುದಕ್ಕೆ ಪರಂಪರೆಯಿಂದ ಬಂದಿರುವ ಪ್ರತಿಷ್ಠೆಯ ಭ್ರಮೆಯೆ ಕಾರಣವಾಗುತ್ತದೆ.

ಇದೇ ಕೃತಿಯಲ್ಲಿ ಸದಾ ತನ್ನೊಂದಿಗೂ ಇತರರೊಂದಿಗೂ ಮಾತಾಡುತ್ತಲೆ ಇರುವ ಮೈತುಂಬ ಕುಷ್ಠರೋಗದ ವ್ರಣಗಳಿರುವ ಪಾರು ಎಂಬ ಮುದುಕಿಯೊಬ್ಬಳಿದ್ದಾಳೆ. ಯಾರೊಂದಿಗಾದರೂ ಸಂವಹನಕ್ಕಾಗಿ ಕಾಯುತ್ತ ಊರಾಚೆಗಿನ ಬಂಡೆಯ ಮೇಲೆ ಮೈ ಒಣಗಿಸಿಕೊಳ್ಳುತ್ತ ಕುಳಿತುಕೊಂಡಿರುವ ಕಿವಿಕೇಳದ ಮುದುಕಿ ಪಾರು ಊರಿನ ಗತ ಮತ್ತು ವರ್ತಮಾನಗಳ ಸಾಕ್ಷೀಪ್ರಜ್ಞೆಯಂತಿದ್ದಾಳೆ. ಸಂವಾದಕ್ಕೆ ವ್ಯವಧಾನ, ಬಿಡುವು ಎರಡೂ ಇಲ್ಲದ ಹೊಸಕಾಲದ ಧಾವಂತದ ಬದುಕನ್ನು ಅರ್ಥಮಾಡಿಕೊಳ್ಳಲಾಗದೆ ಮಾನವ ಸಂಬಂಧಗಳೆಡೆಗೆ ತುಡಿಯುತ್ತ ಪರಂಪರೆಯ ಪಳೆಯುಳಿಕೆಯಂತೆ ಭಾಸವಾಗುತ್ತಾಳೆ. ಕುಟುಂಬ ಪರಂಪರೆಯಿಂದ ಬಂದ ಗತ್ತು ಗೌರವಗಳನ್ನು ಉಳಿಸಿಕೊಳ್ಳಲು ಹೆಣಗಾಡುವ, ಹೊಸಕಾಲದ ಬದಲಾವಣೆಗಳಿಗೆ ಹೊಂದಿಕೊಳ್ಳಲಾಗದೆ ಹಳೆಯ ವೈಭವದ

ಮೆಲುಕಿನಲ್ಲಿಯೆ ಬದುಕಿರುವ ಕುಞ್ಞಿತಾಚುಮ್ಮ ಮತ್ತು ಕುಞ್ಞಿಕಾಳಿಯಮ್ಮ ಕಳೆದುಹೋದ ಗತವನ್ನು ಮುಷ್ಟಿಯೊಳಗೆ ಹಿಡಿದಿಟ್ಟಿದ್ದೇವೆ ಎಂದು ಭ್ರಮಿಸುವ, ಪರಂಪರೆಯ ವಾರಸುದಾರಿಣಿಯರಂತೆ ಕಾಣಿಸುತ್ತಾರೆ.

೨.೧.೨. ಸಂಪ್ರದಾಯವನ್ನು ಒಪ್ಪಿಕೊಂಡವರು

ಪುರುಷಪ್ರಧಾನವಾದ ಸಾಮಾಜಿಕ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗುವ ಹೊಣೆಯನ್ನು ಸಮಾಜವು ಜಾಣ್ಮೆಯಿಂದ ಹೆಂಗಸರ ಮೇಲೆಯೆ ಹೊರಿಸಿದೆ. ತಮಗೇ ತಿಳಿಯದಂತೆ ಸ್ತ್ರೀಯರು ಸಂಪ್ರದಾಯದ ರಕ್ಷಕಿಯರಾಗುತ್ತಾರೆ. ಮತ್ತು ತಮ್ಮ ನಂಬಿಕೆ, ನಿಷೇಧ, ತಿಳುವಳಿಕೆಗಳನ್ನು ಮುಂದಿನ ತಲೆಮಾರಿಗೆ ದಾಟಿಸುತ್ತಾರೆ. ಹೆಣ್ಣನ್ನು ಮನುಷ್ಯಳಾಗಿಯಲ್ಲದೆ ಕೇವಲ ಸೊತ್ತಾಗಿ ಕಾಣುವ ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಆಕೆಯ ಸ್ವಂತ ಅಭಿಲಾಷೆಗಳಿಗೆ ಬೆಲೆಯಿಲ್ಲ. ಮನೆಯ ಮತ್ತು ಕುಟುಂಬದ ಒಳಿತಿಗಾಗಿ ಆಕೆ ತನ್ನ ವೈಯಕ್ತಿಕ ಬಯಕೆಗಳನ್ನು ತ್ಯಾಗ ಮಾಡಬೇಕಾಗುತ್ತದೆ. ಹೆಣ್ಣಿನ ಬದುಕನ್ನು ಅಸಹನೀಯವಾಗಿಸುವ ವಿಧಿನಿಷೇಧಗಳ ಹಿಂದಿನ ಸ್ವಾರ್ಥವನ್ನು ಗುರುತಿಸದೆ ತಾವು ಜತನದಿಂದ ಪಾಲಿಸುತ್ತ ಕುಟುಂಬದ ಎಳೆಯ ಹೆಣ್ಣುಮಕ್ಕಳಿಗೂ ಶ್ರದ್ಧೆಯಿಂದ ಹೇಳಿಕೊಡುವ ಸಂಪ್ರದಾಯನಿಷ್ಠ ಸ್ತ್ರೀಯರು ಹೆಚ್ಚಿನ ಕೃತಿಗಳಲ್ಲಿ ಕಾಣಸಿಗುತ್ತಾರೆ.

ಲಲಿತಾಂಬಿಕಾ ಅಂತರ್ಜನಂ ಅವರು ಬರೆದಿರುವ 'ಅಗ್ನಿಸಾಕ್ಷಿ' ಕಾದಂಬರಿ ಸಮಾಜವು ಸ್ತ್ರೀಯರಿಗೆ ವಿಧಿಸಿದ ಎಲ್ಲ ಆಚರಣೆ ನಿಷೇಧಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತ, ಇತರರೂ ಪಾಲಿಸುವಂತೆ ಕಾಪಾಡಿಕೊಳ್ಳುವವರು ಕುಟುಂಬದ ಹಿರಿಯ ಮಹಿಳೆಯರೇ ಎಂಬುದನ್ನು ಸ್ಪಷ್ಟವಾಗಿ ಗುರುತಿಸುವ ಕೃತಿ. ಸಾಂಪ್ರದಾಯಿಕ ಮನೆಯೊಂದಕ್ಕೆ ಸೊಸೆಯಾಗಿ ಬರುವ ಹರೆಯದ ಹೆಣ್ಣಿನ ಚಡಪಡಿಕೆಗಳು, ಪತಿಯ ಸಂಗಕ್ಕಾಗಿ ಹಾತೊರೆಯುವ ಪ್ರಕೃತಿಸಹಜವಾದ ಬಯಕೆ, ಅದು ಈಡೇರದೆ ಹೋದಾಗ ಉಂಟಾಗುವ ನಿರಾಸೆ, ಸುಶಿಕ್ಷಿತೆಯಾಗಿಯೂ 'ತೆರೆದ ಎದೆ'ಯಲ್ಲಿ ಇರಬೇಕಾಗುವ ಅನಿವಾರ್ಯತೆ, 'ಲೌಕಿಕ ಸಾಹಿತ್ಯವನ್ನು ಓದಿದ ಹೆಣ್ಣು ಕೆಡುತ್ತಾಳೆ' ಎಂಬ ಎಚ್ಚರದಿಂದ ಕಣ್ಣಿಡುವ ಹಿರಿಯ ಹೆಂಗಸರ ಕಣ್ಣು ತಪ್ಪಿಸಿ ಓದಬೇಕಾದ, ತವರಿನಲ್ಲಿರುವ ಅಣ್ಣನಿಗೂ ಕದ್ದು ಪತ್ರ ಬರೆಯಬೇಕಾದ ಪರಿಸ್ಥಿತಿಗಳು, ಪತ್ನಿಯ ಮೇಲೆ ಅಮಿತವಾದ ಪ್ರೀತಿಯಿದ್ದರೂ ಅಮ್ಮ, ಅತ್ತಿಗೆ ಮುಂತಾದ ಹಿರಿಯ ಮಹಿಳೆಯರ ಮುಂದೆ ಪತ್ನಿಯನ್ನು ಬೆಂಬಲಿಸಲಾರದ ಪತಿಯ ಅಸಹಾಯಕತೆ.. ಈ ಎಲ್ಲ ಸಂಗತಿಗಳು ಕೃತಿಯಲ್ಲಿ ವಿವರವಾಗಿ ನಿರೂಪಿತವಾಗಿವೆ.

ಆಧುನಿಕ ಶಿಕ್ಷಣ ಪಡೆದಿರುವ ಮತ್ತು ಕಾದಂಬರಿ ಓದುವ ಹವ್ಯಾಸವುಳ್ಳ ದೇವಕಿಯ ಸಂಪ್ರದಾಯನಿಷ್ಠೆಯ ಬಗ್ಗೆ ಮನೆಯ ಹಿರಿಯ ಹೆಂಗಸರಿಗೆ ಪೂರ್ಣ ನಂಬಿಕೆಯಿಲ್ಲ. ಸ್ವಾತಂತ್ರ್ಯ

ಹೋರಾಟಗಾರನಾದ ದೇವಕಿಯ ಅಣ್ಣ ಸರಕಾರದ ವಿರುದ್ಧ ಕಾರ್ಯಾಚರಿಸಿ ಜೈಲಿಗೆ ಹೋದ ಕಾರಣವನ್ನೇ ನೆಪವಾಗಿಸಿ ದೇವಕಿ ತವರಿಗೆ ಹೋಗುವುದನ್ನು ನಿಷೇಧಿಸಲಾಗುತ್ತದೆ. ಮರಣಶಯ್ಯೆಯಲ್ಲಿದ್ದ ಅಮ್ಮನನ್ನು ನೋಡುವುದಕ್ಕಾಗಿ ಆ ನಿಷೇಧವನ್ನು ಮೀರಿ ತವರಿಗೆ ಹೋದ ದೇವಕಿಗೆ ಅತ್ತೆಮನೆಯಿಂದ ಬಹಿಷ್ಕಾರದ ಬೆದರಿಕೆ ಹಾಕಲಾಗುತ್ತದೆ. ಈ ಬಹಿಷ್ಕಾರಕ್ಕೆ ಕಾರಣವಾಗುವವರೂ ಮನೆಯ ಹೆಂಗಸರೆ.

ದೇವಕಿಯ ಬದುಕಿನ ದುರಂತಕ್ಕೆ ಕುಟುಂಬದ ಸಂಪ್ರದಾಯನಿಷ್ಠೆಯೆ ಕಾರಣವಾಗಿದೆ. ಉಣ್ಣಿಯಣ್ಣ, ಅನಿಯನ್, ಅಪ್ಪನ್ ನಂಬೂದಿರಿ, ಪಿ.ಕೆ.ಪಿ. ನಂಬೂದಿರಿ ಮುಂತಾಗಿ ಇಲ್ಲಿ ಬರುವ ಪುರುಷರು ಕ್ರೂರಿಗಳಲ್ಲ, ಬಹುಮಟ್ಟಿಗೆ ಉದಾರಿಗಳೇ. ಸಂಪ್ರದಾಯವಾದಿಗಳಾದ ಮನೆಯ ಹಿರಿಯ ಹೆಂಗಸರೇ ದೇವಕಿ ದಾಂಪತ್ಯದಲ್ಲಿ ನಿರಾಶಳಾಗುವುದಕ್ಕೆ ಕಾರಣರಾಗುತ್ತಾರೆ. ಈ ಸ್ತ್ರೀಯರಾದರೂ ಸ್ವಭಾವತಃ ಕೆಟ್ಟವರೇನಲ್ಲ. ದೇವಕಿಯ ಬಗ್ಗೆ ಅವರಿಗೆ ಪೂರ್ವದ್ವೇಷ, ಅಸೂಯೆಗಳಿಲ್ಲ. ಬದಲಿಗೆ ಮನೆತನದ, ಜಾತಿಯ ಸಂಪ್ರದಾಯಗಳನ್ನು ಉಳಿಸಿಕೊಂಡು ಹೋಗುವುದಕ್ಕಾಗಿ ಕಟುವಾಗಿ ವರ್ತಿಸಿದ್ದಾರೆ ಎಂಬುದು ಗಮನಿಸಬೇಕಾದ ಅಂಶ. ದೇವಕಿಯ ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡು, ಸ್ವತಂತ್ರವಾಗಿ ಮನೆಯಿಂದ ಹೊರಗೆ ಹೋಗಲು ನಿಷೇಧವಿರುವ 'ಅಂತರ್ಜನ' ಎಂದು ಕರೆಸಿಕೊಳ್ಳುವ ನಂಬೂದಿರಿ ಸ್ತ್ರೀಯರ ಬದುಕಿನ ಪಾಡನ್ನು ಅನಾವರಣಗೊಳಿಸಲು ಲೇಖಕಿ ಯತ್ನಿಸಿದ್ದಾರೆ.

ಲಲಿತಾಂಬಿಕಾ ಅಂತರ್ಜನಂ ಅವರು ಬರೆದ 'ಮುಚ್ಚಿದ ಮುಖ' ಎಂಬ ಕತೆಯಲ್ಲಿ 'ಒಬ್ಬ ಗಂಡಸನ್ನು ಮುಟ್ಟಿದ ಹೆಣ್ಣು ಮತ್ತೊಬ್ಬನ ಕೈ ಹಿಡಿಯುವುದು ಪಾಪ' ಎಂದು ದೃಢವಾಗಿ ನಂಬಿದ ಪಾಪಿ ಎಂಬ ಮುಗ್ಧೆಯ ದುರಂತ ಬದುಕಿನ ಕಥೆಯಿದೆ. ಬಾಲ್ಯದ ಒಡನಾಡಿಯಾಗಿದ್ದ ಸೋದರಮಾವನ ಮಗನನ್ನು ಪಾಪಿ ಪ್ರೀತಿಸಿದ್ದಳು. ವೇದಾಧ್ಯಯನಕ್ಕಾಗಿ ದೂರದ ಊರಿಗೆ ಹೋದ ಅವನು ಸುಧಾರಣೆಯ ಚಳವಳಿಯಲ್ಲಿ ಭಾಗವಹಿಸಿ, 'ಧರ್ಮಲಂಡನಾದ, ಜುಟ್ಟನ್ನೂ ತೆಗೆದ, ಅನ್ಯರ ಮನೆಯಲ್ಲಿ ಉಂಡ, ಕೊನೆಗೆ ಕಾಂಗ್ರೆಸ್ ಸೇರಿ ಜೈಲಿಗೂ ಹೋದ' ಜಾತಿಭ್ರಷ್ಟನೆನಿಸಿಕೊಂಡ ಕಾರಣ ಮನೆಯವರ ತೀರ್ಮಾನದಂತೆ ಆಕೆ ಜೋತುಬಿದ್ದ ಕೈಗಳ ಮುದುಕ ನಂಬೂದಿರಿಯೊಬ್ಬನ ನಾಲ್ಕನೇ ಹೆಂಡತಿಯಾಗಬೇಕಾಯಿತು. 'ಕೇವಲ ಐನೂರು ರೂಪಾಯಿಯಲ್ಲಿ' ನಡೆದ ಆ ಮದುವೆ ಅವಳ ಪ್ರೀತಿ, ವ್ಯಾಮೋಹ, ಕನಸುಗಳನ್ನು ಸುಟ್ಟುಹಾಕಿತು. ಮುದಿ ಗಂಡನನ್ನು ಕೈಗೊಂಬೆ ಮಾಡಿಕೊಳ್ಳಬಹುದಾದ ವಯಸ್ಸು ಮತ್ತು ಚೆಲುವು ಇದ್ದರೂ ಗಂಡನ ಮನೆಯಲ್ಲಿ ಆಕೆ ಯಾರೊಂದಿಗೂ ಬೆರೆಯದೆ, ಮುದುರಿದ ಮುಖ ಮತ್ತು ಕೆದರಿದ ಕೂದಲಿನೊಂದಿಗೆ ಬೆಳಗ್ಗಿನಿಂದ ರಾತ್ರಿಯವರೆಗೂ ಅಡುಗೆ ಮನೆಯ ಒಲೆಯ ಮುಂದೆ ಕುಳಿತಿರುತ್ತ ಗಂಡನ ನಿರಾಸಕ್ತಿಯ ಕಾರಣದಿಂದ 'ಮದುವೆಯಾಗಿದ್ದರೂ ಕನ್ಯೆಯಾಗಿ' ಉಳಿಯುವಂತಾಯಿತು.

ಮೌನಿಯಾಗಿ, ಅಪರಿಚಿತೆಯಾಗಿ, ಸವತಿಯರ ಮತ್ತು ಊರವರ ದೃಷ್ಟಿಯಲ್ಲಿ ಹುಚ್ಚಿಯಾಗಿ ಬದುಕುವಂತಾದ ಪಾಪಿಯ ಅವಸ್ಥೆಗೆ ನಂಬೂದಿರಿ ಸ್ತ್ರೀ ಪಾವಿತ್ರ್ಯದ ಕುರಿತಾದ ಸಾಮಾಜಿಕ ನಂಬಿಕೆಗಳೆ ಕಾರಣವಾಗಿವೆ. ಸೋದರಮಾವನ ಮಗ ಈ ಹಿಂದೊಮ್ಮೆ ತನ್ನ ಮುಖವನ್ನು 'ಸ್ಪರ್ಶಿಸಿದ' ಕಾರಣದಿಂದ ತಾನು ಇನ್ನೊಬ್ಬನನ್ನು ಸೇರುವ ಅರ್ಹತೆಯಿಲ್ಲದ ಪತಿತೆಯಾಗಿದ್ದೇನೆ ಎಂಬ ಗ್ರಹಿಕೆ ಪಾಪಿಯನ್ನು ಅಸುಖಿಯಾಗಿಸಿದೆ. 'ಓರ್ವ ಅನ್ಯನನ್ನು ನೋಡುವುದು ಮಾತ್ರವಲ್ಲ ಮುಟ್ಟಲೂಬಲ್ಲ ಹೆಣ್ಣು, ಮತ್ತೊಬ್ಬನ ಕೈ ಹಿಡಿಯುವುದು ಅಪರಾಧ. ಇದು ಪಾಪವೆಂದು ನಿಸ್ಸಂಶಯವಾಗಿ ಪುರೋಹಿತ ವರ್ಗದವರು ತೀರ್ಮಾನಿಸಿಯಾರು' (ಪು. ೭, ಕೇರಳ ಕಾಂತಾಸಮ್ಮಿತ) ಎಂಬಂಥ ದಿಗಿಲು ಅವಳನ್ನು 'ವಿವಾಹಿತೆ ಪರಪುರುಷನ್ನ ನೆನೆಯೋದು ಪಾಪವಲ್ಲವೇ ಅದು ಪಾತಿವ್ರತ್ಯ ಭಂಗವಲ್ಲವೇ?' ಎಂಬ ಆರ್ತ ಪ್ರಶ್ನೆಯ ಹಿಂದೆ ಪುರುಷಪಕ್ಷಪಾತಿಯಾದ ಧರ್ಮ ಮತ್ತು ಸಂಪ್ರದಾಯಗಳ ಪ್ರಭಾವವಿರುವುದನ್ನು ನೆರೆಮನೆಯ ಸ್ನೇಹಿತೆ ಗುರುತಿಸುತ್ತಾಳೆ. ಸ್ನೇಹಿತೆಯ ಸಲಹೆಯಂತೆ 'ಈ ಮದುವೇಲಿ ತಾನು ಸಫಲವಾಗಿಲ್ಲ' ಎಂದು ಗಟ್ಟಿಯಾಗಿ ಹೇಳಲು ನಿರ್ಧರಿಸಿ ಪಾಪಿಯು ಪತಿಗೃಹವನ್ನು ಬಿಟ್ಟು ತವರಿಗೆ ಮರಳಿದ ಬಳಿಕ ಹುಚ್ಚಿನಿಂದ ಗುಣಮುಖಳಾದರೂ ತಾನು 'ಪತಿತೆ' ಎಂಬ ಶೋಕದಿಂದ ಮುಕ್ತಳಾಗಲಿಲ್ಲ. ಕೊನೆಗಾಲದಲ್ಲಿ ಮತ್ತೆ ಪತಿಯ 'ಇಲ್ಲಂ'ಗೆ (ಮನೆ) ಮರಳಿ ಪತಿಯಲ್ಲಿ ಕ್ಷಮೆ ಕೇಳಿ 'ಮುತ್ತೈದೆಯಾಗಿ ಜೀವನ್ಮುಕ್ತಿ' ಪಡೆದ ಪಾಪಿಯ ಮಟ್ಟಿಗೆ 'ಸಾವು ವರವಾಗಿ ಬಂದಿರುವುದನ್ನು' ಕತೆ ಗುರುತಿಸಿದೆ. ನಂಬೂದಿರಿ ಹೆಣ್ಣೊಬ್ಬಳ ಮುಖವಸ್ತ್ರದ ಹಿಂದೆ ಮರೆಯಾಗಿ ಉಳಿದ ಸತ್ಯವು ಸಂಪ್ರದಾಯದ ಸ್ತ್ರೀವಿರೋಧಿ ನಿಲುವಿನ ಬಗ್ಗೆ ಗಂಭೀರವಾದ ಪ್ರಶ್ನೆಯನ್ನು ಎತ್ತಿದೆ.

ಸಂಪ್ರದಾಯ ಮತ್ತು ಕುಟುಂಬಗಳ ಚೌಕಟ್ಟಿನ ಒಳಗೆ ಬದುಕುವುದೆ ಹೆಣ್ಣಿಗೆ ಕ್ಷೇಮ; ಅದನ್ನು ಮೀರಲೆಳಸುವ ಹೆಣ್ಣಿಗೆ ನೆಮ್ಮದಿಯಿಲ್ಲ ಎಂದು ಸಮಾಜವು ನಂಬಿಸಿದೆ. ಸ್ವಾತಂತ್ರ್ಯವನ್ನು ಬಯಸಿ ಸಮಾಜದ ಕಟ್ಟುಪಾಡುಗಳನ್ನು ದಾಟುವ ಹೆಣ್ಣಿನ ಬದುಕು ದುರಂತವಾಗುವುದನ್ನು 'ಬಲೆ' ಕಾದಂಬರಿಯು ಗುರುತಿಸುತ್ತದೆ. ಮಲಯಾಳದ ಮೊದಲ ಮುಸ್ಲಿಂ ಲೇಖಕಿ ಎನಿಸಿಕೊಂಡ ಬಿ.ಎಂ.ಸುಹರಾ ಅವರು ಬರೆದಿರುವ ಈ ಕಾದಂಬರಿಯಲ್ಲಿ ಕೇಂದ್ರಪಾತ್ರವಾಗಿರುವ ಫಾತಿಮ್ಮಳನ್ನು ಹೊರತುಪಡಿಸಿ ಅವಳ ತಾಯಿ ಆಯಿಶುಮ್ಮ, ತಂಗಿ ಶರೀಫಾ, ಅಮ್ಮನ ಮನೆಯ ಕೆಲಸದಾಳು ಪಾತ್ತು, ಅಣ್ಣನ ಹೆಂಡತಿ ಬುಷ್ರಾ ಮುಂತಾಗಿ ಹಲವು ಸ್ತ್ರೀ ಪಾತ್ರಗಳಿವೆ. ಸಾಂಪ್ರದಾಯಿಕ ಮುಸ್ಲಿಂ ಸಮುದಾಯದ ಒಳಗೆ ಹೆಣ್ಣನ್ನು ಬೆಳೆಸುವ ಮತ್ತು ನಡೆಸಿಕೊಳ್ಳುವ ರೀತಿಗೆ ಈ ಎಲ್ಲ ಸ್ತ್ರೀ ಪಾತ್ರಗಳೂ ಬದ್ಧವಾಗಿವೆ ಮತ್ತು ಫಾತಿಮ್ಮಳ ಹೊರತಾಗಿ ಎಲ್ಲರೂ ಸಂಪ್ರದಾಯವನ್ನು ಒಪ್ಪಿ ಅನುಸರಿಸಿಕೊಂಡು ಹೋಗುವವರಾಗಿದ್ದಾರೆ. ಅಪ್ಪ ಆಯ್ಕೆ ಮಾಡಿದ ಗಂಡನೊಡನೆ ಬಾಳಲಾಗದೆ, ಹಿರಿಯರ ಮಾತು ಮೀರಿ ತಾನು ಮೆಚ್ಚಿದವನೊಡನೆ ಓಡಿಹೋಗಿ ಕದ್ದು 'ನಿಕಾಹ್' ಮಾಡಿಕೊಂಡ ಫಾತಿಮ್ಮಳ ಬದುಕು

ದುಃಖಾಂತವಾಗುವುದನ್ನು ಕೃತಿ ಕಾಣಿಸುತ್ತದೆ. ಸಂಪ್ರದಾಯದ ಕಟ್ಟುಪಾಡುಗಳನ್ನು ಒಪ್ಪದೆ ತನ್ನ ಆಯ್ಕೆಯಂತೆ ಬದುಕಲೆತ್ನಿಸಿದ ಫಾತಿಮ್ಮಳ ಬದುಕಿನ ದುರಂತಕ್ಕೆ ಸಮಾಜದ ಇಬ್ಬಗೆಯ ನೀತಿಯೆ ಕಾರಣವಾಗಿದೆ.

ಫಾತಿಮ್ಮಳ ತಂದೆ ಕೋಯಕುಟ್ಟಿ ಮೇಷ್ಟ್ರು ಮಕ್ಕಳನ್ನು ಬಹಳ ಶಿಸ್ತಿನಿಂದ ಬೆಳೆಸಿದ್ದಾರೆ. ಅವರ ಹೆಣ್ಣುಮಕ್ಕಳು ಮುಸ್ಲಿಂ ಸಮುದಾಯದ ಕಟ್ಟುಪಾಡುಗಳಿಗೆ ಅನುಗುಣವಾಗಿ ತಲೆಯ ಮೇಲೆ 'ಮಕ್ಕನ' ಹಾಕಿಕೊಂಡೇ ಕಾಲೇಜಿಗೆ ಹೋದವರು. 'ಹೆಣ್ಣುಮಕ್ಕಳು ಒಬ್ಬೊಬ್ಬರೇ ಬಸ್ ಪ್ರಯಾಣ ಮಾಡುವುದು ಬೇಡವೆಂದು' ಕಾಲೇಜಿನ ಹಾಸ್ಟೆಲಿನಲ್ಲಿರಿಸಿ ಓದಿಸಿದ್ದಾರೆ. ಅವರ ಪತ್ನಿಯಾದರೂ ಅಷ್ಟೇ. ಪತಿಯನ್ನು ಅನುಸರಿಸಿ ನಡೆದುಕೊಳ್ಳುವುದೆ ಸ್ತ್ರೀಧರ್ಮವೆಂದು ತನ್ನ ಹೆಣ್ಣುಮಕ್ಕಳಿಗೆ ಎಳವೆಯಲ್ಲೇ ಹೇಳಿಕೊಟ್ಟಿದ್ದಾರೆ. ಫಾತಿಮ್ಮ ಕೂಡ ಮದುವೆಗೆ ಮೊದಲು ಎಂದೂ ತಲೆಯ ಮೇಲೆ ಮಕ್ಕನ ಇಲ್ಲದೆ ಗಂಡಸರ ಮುಂದೆ ಕಾಣಿಸಿಕೊಂಡವಳಲ್ಲ. ಪ್ರಗತಿಪರ ನಿಲುವಿನ, ವಿದ್ಯಾವಂತನಾದ ಪತಿಯ ಒತ್ತಾಯಕ್ಕೆ ಮಣಿದು ಮದುವೆಯ ನಂತರವಷ್ಟೇ 'ಮಕ್ಕನ' ತೆಗೆದಿದ್ದಾಳೆ. ಗಂಡನ ಇಚ್ಛೆಯಂತೆಯೇ ಅವನ ಸ್ನೇಹಿತ ಶರಫ್‌ನ ಒಡನಾಟಕ್ಕೆ ಸಮ್ಮತಿಸಿದ್ದಾಳೆ. ಆಧುನಿಕ ಜೀವನಕ್ರಮಗಳನ್ನು ಒಪ್ಪಿ ಅನುಸರಿಸಿದ್ದಾಳೆ.

ಸಂಪ್ರದಾಯವಾದಿಗಳಾದ ಫಾತಿಮ್ಮಳ ತಂದೆ-ತಾಯಿ, ಸೋದರರು ಸಮಾಜಕ್ಕೆ ಅಂಜಿ ನಡೆದುಕೊಳ್ಳುವವರು. ಪತಿಯನ್ನು ಬಿಟ್ಟು ಒಬ್ಬಳೇ ಬಂದಿಳಿದ ಫಾತಿಮ್ಮಳನ್ನು ಊರವರ ಕಣ್ಣಿಗೆ ಆಹಾರವಾಗದಂತೆ ರಾತ್ರಿ ಹೊತ್ತು ಮನೆಗೆ ಕರೆತರುತ್ತಾರೆ. ಅವಳಿಗೆ ಹಿಡಿದ 'ಸೈತಾನ'ನನ್ನು ಬಿಡಿಸಲು ಮೊಯ್ಲಿಯಾರರನ್ನು ಕರೆದು ಮಂತ್ರಿಸುವ ತಯಾರಿ ನಡೆಸುತ್ತಾರೆ. ಸ್ವಂತಮಗನ ಕುರಿತು ಯೋಚಿಸಿಯಾದರೂ ನಿರ್ಣಯವನ್ನು ಬದಲಾಯಿಸಿಕೊಂಡು ಪತಿಯ ಬಳಿಗೆ ಮರಳುವಂತೆ ಫಾತಿಮ್ಮಳ ಮೇಲೆ ಒತ್ತಡ ತರುತ್ತಾರೆ. ಮನೆಕೆಲಸದ ಪಾತ್ತುವಿಗೆ, ನೆರೆಕರೆಯ ಕದೀಶಳಿಗೆ, ತೋಟದಲ್ಲಿ ಕೆಲಸ ಮಾಡುವವರಿಗೆ.. ಯಾರಿಗೂ ವಿಷಯ ತಿಳಿಯಬಾರದೆಂದು ಮನೆಯಲ್ಲಿ ಸಾಧ್ಯವಾದಷ್ಟು ಮೆತ್ತಗೆ ಮಾತನಾಡುತ್ತ, ಏನೂ ನಡೆದಿಲ್ಲವೆಂಬಂತೆ ಸಹಜವಾಗಿರುತ್ತ ಕುಟುಂಬದ ಗೌರವವನ್ನು ಕಾಪಾಡಿಕೊಳ್ಳಲು ಯತ್ನಿಸುತ್ತಾರೆ. ಇಷ್ಟವಿಲ್ಲದ ಹೆಂಡತಿಯನ್ನು ಯಾವುದೇ ಕಾರಣಕೊಡುವ ಅಗತ್ಯವಿಲ್ಲದೆ ಧುತ್ತೆಂದು ತ್ಯಜಿಸಲು ಅವಕಾಶವೀಯುವ 'ತಲಾಖ್' ಎಂಬ ಸಂಪ್ರದಾಯದ ಆಚರಣೆಯನ್ನು ಪುರುಷರು ತಮಗೆ ಬೇಕಾದಂತೆ ಅರ್ಥೈಸಿಕೊಂಡು ಹೆಣ್ಣನ್ನು ವಂಚಿಸುವುದನ್ನು 'ಬಲೆ' ಕೃತಿಯು ಸ್ತ್ರೀಸಂವೇದನೆಯೊಂದಿಗೆ ವಿಶ್ಲೇಷಿಸುತ್ತದೆ. ಮಗಳ ಸುಖ, ನೆಮ್ಮದಿಗಿಂತಲೂ ಸಮಾಜದಲ್ಲಿ ಗೌರವದಿಂದ ಬದುಕುವುದೆ ಮುಖ್ಯವೆಂಬ ಪೋಷಕರ ಸಾಂಪ್ರದಾಯಿಕ ನಿಲುವು ಫಾತಿಮ್ಮಳಂಥ ಹೆಣ್ಣುಮಕ್ಕಳನ್ನು ತವರಿಗೆ ಎರವಾಗಿಸುತ್ತದೆ. ಕೆಲವೊಮ್ಮೆ ಆತುರದ ಮತ್ತು ತಪ್ಪು ನಿರ್ಧಾರಗಳಿಗೆ ಕಾರಣವಾಗುತ್ತದೆ. ಎರಡನೇ ಪತಿಯಿಂದಲೂ ಪರಿತ್ಯಕ್ತಳಾದಾಗ 'ತಾನೇಕೆ ಹೆಣ್ಣಾಗಿ ಹುಟ್ಟಿದೆ? ಎಲ್ಲ

ಶಿಕ್ಷೆಯೂ ಹೆಣ್ಣಿಗೆ ಮಾತ್ರವೇ ಆಗಿದೆಯೇ?' (ಪು. ೧೭೪) ಎಂದು ಫಾತಿಮ್ಮ ಯೋಚಿಸುತ್ತಾಳೆ. ಇದು ಪ್ರಜ್ಞಾವಂತರಾದ ಎಲ್ಲ ಮಹಿಳೆಯರ ಮನಸ್ಸಿನ ಪ್ರಶ್ನೆಯೂ ಹೌದು. ಸ್ತ್ರೀಯರ ಸಾಮಾಜಿಕ ನೆಲೆಯ ಶೋಷಣೆಗೆ ವಿದ್ಯಾವಂತೆ, ಉದ್ಯೋಗದಲ್ಲಿರುವಾಕೆ ಎಂಬಂಥ ರಿಯಾಯಿತಿಗಳಿಲ್ಲ.

ಎಸ್.ಪಿ. ಮಹಮ್ಮದ್ ಅವರು ಬರೆದಿರುವ 'ದೇವರ ಕಣ್ಣು' ಕಾದಂಬರಿಯ ಬಾಲಕ ಕೋಯಾನ ಅಕ್ಕ ಉಮ್ಮು ಮತ್ತು ಅಮ್ಮ ಸಮಾಜವು ಬಯಸುವಂತೆ ಬದುಕುವವರು. 'ಅತಿ ಕಡಿಮೆ ಮಾತನಾಡುವವಳಾಗಿರುವ' ಕೋಯಾನ ಅಮ್ಮ 'ದೀವರು (ಮುಸ್ಲಿಮರಲ್ಲದವರು) ಕೊಟ್ಟದ್ದನ್ನು ತಿನ್ನಬಾರದು. ಅವರು 'ಬಿಸ್ಮಿ' ಹೇಳುವುದಿಲ್ಲ' ಎಂಬಂಥ ಹಲವು ವಿಧಿನಿಷೇಧಗಳ ಕಟ್ಟುಪಾಡಿನೊಳಗೆ ಮಕ್ಕಳನ್ನು ಬೆಳೆಸುವ ಸಂಪ್ರದಾಯಶೀಲೆ. ಉದ್ಯೋಗನಿಮಿತ್ತ ದೂರದ ಊರಲ್ಲಿದ್ದು ಅಪರೂಪಕ್ಕೆ ಮನೆಗೆ ಬರುವ ಪತಿಯಲ್ಲಿ ಮನದ ಭಾವನೆಗಳನ್ನು, ಲೈಂಗಿಕ ಅಪೇಕ್ಷೆಗಳನ್ನು ಬಾಯಿಬಿಟ್ಟು ಹೇಳಿದವಳಲ್ಲ. 'ಸಂಜೆ ಬೇಗ ಬನ್ನಿ' ಎಂದು ತಾನು ಸಮಾಗಮಕ್ಕೆ ಕಾದಿರುವುದನ್ನು ಪರೋಕ್ಷವಾಗಿ ಸೂಚಿಸುವ ಲಜ್ಜಾವತಿ. ಒಬ್ಬನೇ ಮಗನ ಜೀವಕ್ಕೆ ಮಾವನಿಂದಲೆ ಅಪಾಯ ಇರುವುದನ್ನು ಅರಿತಾಗಲೂ ನೇರವಾಗಿ ವಿರೋಧಿಸುವ ಪ್ರಯತ್ನ ಮಾಡದೆ ಮಗನನ್ನು ಗಂಡನಿರುವ ಊರಿಗೆ ಕಳಿಸಿಕೊಡುವ ಪರ್ಯಾಯ ಮಾರ್ಗ ಅನುಸರಿಸುತ್ತಾಳೆ.

ಹೆಣ್ಣನ್ನು 'ಕೆಡಬಹುದಾದ ಸೊತ್ತು' ಎಂದು ಗ್ರಹಿಸಿ ರಕ್ಷಿಸುವ ಪ್ರಯತ್ನವನ್ನು ಕುಟುಂಬ ಮತ್ತು ಸಮಾಜ ಎರಡೂ ಸೇರಿ ಮಾಡುತ್ತವೆ. ಐದನೇ ತರಗತಿಯ ಬಳಿಕ ಹುಡುಗಿ ದೊಡ್ಡವಳಾಗುತ್ತಿದ್ದಾಳೆ ಎಂಬ ಕಾರಣಕ್ಕೆ ಉಮ್ಮುವಿನ ಶಾಲೆ ಬಿಡಿಸುತ್ತಾರೆ. 'ಬೆಳೆದ ಹೆಣ್ಣನ್ನು ತಕ್ಷಣ ಮದುವೆ ಮಾಡಿ ಕಳಿಸುವಂತೆ' ಮಂತ್ರವಾದಿ ತಂಙಳ್ ಅಪ್ಪಣೆ ಕೊಡಿಸುವಾಗ ಉಮ್ಮು ಇನ್ನೂ ಮೈನೆರೆದಿರುವುದಿಲ್ಲ. ಉಮ್ಮುವಿನ ಕೈ 'ಲಕ್ಷಣದ ಕೈ' ಎಂದು ಕೊರವಂಜಿ ಕಣಿ ಹೇಳುವುದು, ಉಮ್ಮುವಿನ 'ಕೈಗುಣ' ಒಳ್ಳೆಯದಾಗಿರುವುದರಿಂದ ಅವಳು ಬಿತ್ತಿದ್ದೆಲ್ಲ ಒಳ್ಳೆಯ ಮೊಳಕೆ ಬರುವುದು, ಮಳೆ ಬಂದ ಮರುದಿನ ಉಮ್ಮು ಅವರೆಯ ಬೀಜ ನೆಡುವುದು, ಮೊಳಕೆ ಕುಕ್ಕಲು ಬರುವ ಪಾರಿವಾಳಗಳನ್ನು ಹೆದರಿಸಲು ಬೆರ್ಚಪ್ಪನನ್ನು ನಿಲ್ಲಿಸಿ, ಬೇಲಿ ಕಟ್ಟಿ ಸಸಿಗಳನ್ನು ರಕ್ಷಿಸಿಕೊಳ್ಳುವುದು, ದೊಡ್ಡಪ್ಪ ಕೋಳಿಯ ಕತ್ತು ಕುಯ್ಯುವುದು... ಇಂಥ ಲಿಂಗಾಧರಿತ ಕೆಲಸಗಳ ವಿವರ ಕೃತಿಯುದ್ಧಕ್ಕೂ ಬರುತ್ತದೆ. ಕರ್ನಾಟಕವಾಗಲಿ ಕೇರಳವಾಗಲಿ, ಹಿಂದೂವಾಗಲಿ, ಮುಸ್ಲಿಂ ಆಗಲಿ, ಹೆಣ್ಣಿನ ಕುರಿತಾದ ಸಾಂಪ್ರದಾಯಿಕ ಗ್ರಹಿಕೆಗಳಲ್ಲಿ, ಕುಟುಂಬದ ಒಳಗಿನ ಶ್ರಮವಿಭಜನೆಯಲ್ಲಿ ದೊಡ್ಡ ವ್ಯತ್ಯಾಸವೇನೂ ಇಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಉಮ್ಮು ಮೈನೆರೆದ ಕಾರಣಕ್ಕೆ ಒಮ್ಮಿಂದೊಮ್ಮೆಗೇ ತಮ್ಮನಿಂದಲೂ ಮುಟ್ಟಿಸಿಕೊಳ್ಳಲಾಗದಂತೆ ಅಸ್ಪೃಶ್ಯಳಾಗಿ, ಮುಚ್ಚಿದ ಕೋಣೆಯೊಳಗೆ ಬಂಧಿಯಾಗುತ್ತಾಳೆ. ಕೃತಿಯಲ್ಲಿ ಋತುಮತಿಯಾದ ಹೆಣ್ಣಿಗೆ

ಮಾಡುವ ಆಚರಣೆಗಳ ಉಲ್ಲೇಖವಿದೆ. ಈ ಆಚರಣೆಗಳೆಲ್ಲ ಮುಂದಿನ ಸಂತಾನೋತ್ಪತ್ತಿಯ ಕೆಲಸಗಳಿಗೆ ಆಕೆಯನ್ನು ತಯಾರು ಮಾಡುವಂಥದ್ದಾಗಿವೆ. ದೊಡ್ಡವಳಾದ ಉಮ್ಮುವಿನ ವೇಷ ಒಮ್ಮೆಲೇ ಬದಲಾಗುತ್ತದೆ. ಇನ್ನಾಕೆ ಕೋಯಾನೊಂದಿಗೆ ಮಲಗುವಂತಿಲ್ಲವೆಂದು ಅಮ್ಮ ಹೇಳುತ್ತಾರೆ. 'ಪುರುಷ ಭೂತಗಳು ಯೌವನಸ್ಥ ಹೆಣ್ಣನ್ನು ಆಕ್ರಮಿಸುತ್ತವೆ' ಎಂಬ ಸಾಂಪ್ರದಾಯಿಕ ನಂಬಿಕೆಯಿಂದಾಗಿ 'ಭೂತಗಳು ಮೈನೆರೆದ ಹೆಣ್ಣುಮಕ್ಕಳನ್ನು ಹುಡುಕುತ್ತಾ ಅಲೆಯುತ್ತಿರಬಹುದಾದ' ತೋಟಕ್ಕೆ ತಾನಿನ್ನು ಬರಲಾರೆ ಎಂದು ಉಮ್ಮು ನಿರಾಕರಿಸುತ್ತಾಳೆ. ಅದುವರೆಗೂ ಬಿಡುಬೀಸಾಗಿ ಸಂಚರಿಸುತ್ತಿದ್ದ ಉಮ್ಮುವಿನ ಚಲನೆಗೆ ಈಗ ನಿರ್ಬಂಧಗಳಿವೆ. ಅಂಗಳಕ್ಕೆ ಅಪರಿಚಿತ ಗಂಡಸರು ಬಂದರೆ ಬಾಣದಂತೆ ಒಳಗೋಡಿ ಅವಿತುಕೊಳ್ಳುತ್ತಾಳೆ. ತನ್ನ ಇಷ್ಟಾನಿಷ್ಟಗಳನ್ನು ಕೇಳುವ ಪ್ರಮೇಯವೆ ಇಲ್ಲದೆ ಮದುವೆ ಮಾಡಿಕೊಟ್ಟ ಬಗ್ಗೆ ಉಮ್ಮುವಿಗೇನೂ ಬೇಸರವಿಲ್ಲ. ಲಜ್ಜೆ, ಸಂಭ್ರಮ, ಸಂತೋಷಗಳಿಂದಲೆ ಗಂಡನ ಮನೆಗೆ ಹೋಗುತ್ತಾಳೆ. ವ್ಯವಸ್ಥೆಯನ್ನು ಪ್ರಶ್ನಿಸದೆ ಅನುಸರಿಸುವುದೆ ಸಹಜವೆಂಬಂತೆ ಹೆಣ್ಣುಮಕ್ಕಳನ್ನು ಸಂಪ್ರದಾಯದ ಕೋಟೆಯೊಳಗೆ ಬೆಳೆಸಲಾಗುತ್ತದೆ.

ಕೋಯಾ ಮತ್ತು ತಂಗಿ ಆಯಿಸೇಯಿ ಮನೆಯಿಂದ ಶಾಲೆಗೆ ಹೋಗುವಾಗ ಮಸೀದಿಯವರೆಗೂ ತಂಗಿಯೇ ಅಣ್ಣನ ಪುಸ್ತಕಗಳನ್ನು ಹೊತ್ತುಕೊಳ್ಳಬೇಕಾಗಿದೆ. ಅಲ್ಲಿಂದಾಚೆಗೆ ಅವರ ದಾರಿ ಬೇರೆಯಾಗುವ ಕಾರಣ ನಂತರದ ದಾರಿಯಲ್ಲಿ ಕೋಯಾ ತನ್ನ ಚೀಲವನ್ನು ತಾನೇ ಹೊರುತ್ತಾನೆ. ವಯಸ್ಸಿನಲ್ಲಿ ಚಿಕ್ಕವಳಾದರೂ ಎರಡು ಚೀಲಗಳ ಭಾರವನ್ನು ಒಬ್ಬಳೇ ಹೊತ್ತುಕೊಳ್ಳುವಂತೆ ಆಯಿಸೇಯಿಯನ್ನು ಬೆಳೆಸಲಾಗಿದೆ. ಪುರುಷನಿಗೆ ವಿಧೇಯಳಾಗಿರುವುದು, ಅನುಸರಿಸುವುದು ಮುಂತಾದವನ್ನು ಬಾಲ್ಯದಲ್ಲಿಯೇ ಹೆಣ್ಣುಮಕ್ಕಳಿಗೆ ಅಭ್ಯಾಸ ಮಾಡಿಸಲಾಗುತ್ತದೆ. ಹೆಣ್ಣು ಜನ್ಮದ ಬಗ್ಗೆ ಕೀಳರಿಮೆಯನ್ನು ಮೂಡಿಸಿ ದಾಸ್ಯವನ್ನು ಸಹಜವಾಗಿ ಒಪ್ಪಿಕೊಳ್ಳುವಂತೆ ಮಾಡಲಾಗುತ್ತದೆ.

'ದುರ್ಬೀಜ' ಕಾದಂಬರಿಯ ನಬೀಸಳಿಗೆ ತಮ್ಮನ ಮೇಲೆ ಸಿಟ್ಟು ಬಂದರೂ ಜಗಳಾಡದೆ ಸುಮ್ಮನಿರುತ್ತಾಳೆ. ಏಕೆಂದರೆ ಅದರಿಂದ ಕಷ್ಟಪಡಬೇಕಾದುದು ಅವಳೇ. ತಮ್ಮ ಹೊಡೆದು ಪರಚಿದರೂ ಅವಳು ತಿರುಗಿ ಹೊಡೆಯುವ ಹಾಗಿಲ್ಲ. ಉಮ್ಮ ಏನಾದರೂ ನೋಡಿದರೆ "ಹೆಣ್ಣೆ, ಆ ಚೆಕ್ಕನ ಹತ್ರ ಏನದು ನಿನ್ನ ಜಗಳ? ನೀನೇನು ಚಿಕ್ಕ ಹುಡುಗಿಯೆ? ಬೆಳೆದೋಳಲ್ಲವೆ? ನಾಳೆ ಮದುವೆಯಾಗೋ ಹೆಣ್ಣೆಂದು ನೆನಪಿರಲಿ" (ಪು. ೭೧) ಎಂದು ಅವಳನ್ನೇ ಗದರಿಸಿ, ಭವಿಷ್ಯದಲ್ಲಿ ಒಂದು ಸಂಸಾರವನ್ನು ನಡೆಸುವ ಗುರುತರವಾದ ಹೊಣೆಯು ಅವಳ ಮೇಲಿರುವುದನ್ನು ನೆನಪಿಸುತ್ತಾಳೆ. ಬೆಳೆದ ಹೆಣ್ಣುಮಕ್ಕಳು 'ಸುಲ್ತಾನರಂತೆ ತಿರುಗಾಡುವ ತಮ್ಮಂದಿರ ಪೆಟ್ಟು ಗುದ್ದುಗಳನ್ನೆಲ್ಲ ಮಾತನಾಡದೆ ಸಹಿಸಿಕೊಂಡಿರಬೇಕು. ನಗಲೂಬಾರದು, ಅಳಲೂಕೂಡದು' ಎನ್ನುವಂಥ ನಿರ್ಬಂಧದ ಮೂಲಕ ಮುಸ್ಲಿಂ ಹೆಣ್ಣುಮಕ್ಕಳನ್ನು, ಭವಿಷ್ಯದಲ್ಲಿ ಗಂಡನ ಮನೆಯೊಳಗೆ ಬದುಕಬೇಕಾಗುವ ಸಂದರ್ಭದಲ್ಲಿ ಬರಬಹುದಾದ ಕಷ್ಟಗಳನ್ನು

ಸಹಿಸಿಕೊಂಡು ಸಂಸಾರದ ಒಳಗಿರುವಂತೆ ಮಾನಸಿಕವಾಗಿ ಸಿದ್ಧಗೊಳಿಸಲಾಗುತ್ತದೆ. ಹೀಗೆ ಹೆಣ್ಮಕ್ಕಳನ್ನು ಎಳವೆಯಿಂದಲೂ ಸಹಿಷ್ಣುಗಳಾಗಿ, ಸಂಪ್ರದಾಯದ ಗೆರೆಗಳ ಒಳಗಿರುವಂತೆ ತಯಾರು ಮಾಡುವವರು ಮನೆಯ ಹಿರಿಯ ಸ್ತ್ರೀಯರು ಎಂಬುದನ್ನು ಗಮನಿಸಬಹುದು.

ಕಾಡಲ್ಲಿ ವಾಸಿಸುವ ಅರೆಯನ್ನರ ಬದುಕಿನ ಕುರಿತಾಗಿ ನಾರಾಯನ್ ಅವರು ಬರೆದಿರುವ 'ಕೊಚ್ಚರೇತ್ತಿ' ಎಂಬ ಕಾದಂಬರಿಯು ನಾಡಾದರೇನು ಕಾಡಾದರೇನು, ಸಮಾಜ, ಧರ್ಮ ಮತ್ತು ಪುರುಷ ಈ ಮೂರರಿಂದಲೂ ಹೆಣ್ಣು ಶೋಷಣೆಗೆ ಒಳಗಾಗುವ ವಾಸ್ತವವನ್ನು ಪ್ರತಿಪಾದಿಸುತ್ತದೆ. "ಹೆಂಗಸರಿಗೆ ದಮ್ಮಿದ್ರೂ ಯಾರತ್ರ ತೋರಿಸ್ಲಿಕ್ಕೆ? ಅಪ್ಪನೂ ಅಣ್ಣನೂ ಸೇರಿ ಹಿಡಿದುಕೊಟ್ರೆ ಹೊರಟು ಹೋಗಬೇಡ್ವೆ?" (ಪು. ೧೮) ಎಂದು ಕುಞಿಪೆಣ್ಣಿಗೆ ಅತ್ತಿಗೆ ಬುದ್ಧಿಹೇಳುತ್ತಾಳೆ. ಕೊಚ್ಚುಪಿಳ್ಳೆ ಮಾಸ್ತರರಿಂದಾಗಿ ಅಕ್ಷರ ಕಲಿಯತೊಡಗಿದ ಅರೆಯನ್ನರ ಮಕ್ಕಳು ಶಾಲೆಗೆ ಹೋಗುವಾಗ ಹುಡುಗಿಯರದೊಂದು ಗುಂಪು, ಹುಡುಗರದೊಂದು ಗುಂಪಾಗಿ ಪ್ರತ್ಯೇಕವಾಗಿ ಹೋಗುತ್ತಾರೆ. ಮುಟ್ಟಾದ ಹೆಣ್ಣಿನ ಕೈಲಿ ಕಬ್ಬಿಣ ಅತ್ಯಗತ್ಯ ಇರಬೇಕು ಎಂಬ ನಂಬಿಕೆ, ಮೈ ನೆರೆದಾಗ, ಹೆರಿಗೆಯಾದಾಗ ಸೂತಕದ ಮನೆಯಲ್ಲಿರಿಸಿ ಪ್ರತ್ಯೇಕವಾಗಿರಿಸಿ ಹೆಣ್ಣಿಗೆ ಮಾಡುವ ಆರೈಕೆ, 'ಏನಾದ್ರೂ ಒಳ್ಳೆಯ ಗಳಿಗೆ ಬರುವಾಗಲೆ ಮುಟ್ಟು' ಎಂಬಂಥ ಮಾತುಗಳು ಅರೆಯನ್ನರ ಸ್ತ್ರೀ-ಸಂಬಂಧಿಯಾದ ಸಾಂಪ್ರದಾಯಿಕ ಗ್ರಹಿಕೆಗಳು ಹಾಗೂ ವಿಧಿ-ನಿಷೇಧಗಳನ್ನು ತಿಳಿಸುತ್ತವೆ. ಕೊಚ್ಚುರಾಮ ಇಷ್ಟಪಡುವ ಕುಞಿಪೆಣ್ಣಿನ ದೇಹದ ವರ್ಣನೆಯೂ ಕೃತಿಯಲ್ಲಿ ಸಾಂದರ್ಭಿಕವಾಗಿ ಬರುತ್ತದೆ. ತಂದೆ ತಾಯಿಯಿಲ್ಲದ ಕೊಚ್ಚುರಾಮ ಚಿಕ್ಕಪ್ಪನ ಮನೆಯಲ್ಲಿ ಬೆಳೆಯಬೇಕಾದಾಗ ಚಿಕ್ಕಮ್ಮ ತೋರುವ ಅಸಹನೆ, ಕ್ರೌರ್ಯಗಳು ಕೂಡ ಹೆಣ್ಣನ್ನು ರಾಕ್ಷಸಿಯಾಗಿ ಚಿತ್ರಿಸುವ ಒಂದು ಸಾಂಪ್ರದಾಯಿಕ ಮಾದರಿ. ಕಾಡಿನಲ್ಲಿ ಬದುಕುವ ಅರೆಯನ್ನರಲ್ಲೂ ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯಿರುವುದು, ಲಿಂಗ ಅಸಮಾನತೆಯನ್ನು ಪೋಷಿಸುವ ಕಟ್ಟುಪಾಡುಗಳಿರುವುದು, ಹೆಣ್ಣಿಗೆ ವರನನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿಲ್ಲದಿರುವುದು ತಿಳಿದುಬರುತ್ತದೆ. ಲಿಂಗಾಧರಿತ ವಿಭಜನೆಗಳು ಕಾಡಿನ ಬದುಕಲ್ಲೂ ಇರುವುದನ್ನು 'ಕೊಚ್ಚರೇತ್ತಿ' ಗಮನಿಸುತ್ತದೆ.

೨.೧.೩. ಸಂಪ್ರದಾಯದ ಗೆರೆ ದಾಟಿದವರು

ಸಂಪ್ರದಾಯದ ಹೆಸರಲ್ಲಿ ತನ್ನ ಸಹಜ ಅಸ್ಮಿತೆಗೆ ತೊಂದರೆಯಾದಾಗ, ನಿತ್ಯದ ಬದುಕು ಉಸಿರುಗಟ್ಟಿಸುತ್ತಿದೆ ಎನಿಸಿದಾಗ ಸ್ತ್ರೀಯರು ಸಂಪ್ರದಾಯದ ವಿರುದ್ಧ ತಿರುಗಿ ಬೀಳುವುದನ್ನು ಕೆಲವು ಕೃತಿಗಳಲ್ಲಿ ಕಾಣಬಹುದು. ವ್ಯಾವಹಾರಿಕ ಮೌಲ್ಯಗಳನ್ನು ಮಾತ್ರ ಎತ್ತಿ ಹಿಡಿಯುವ ಸಮಾಜದ ದೃಷ್ಟಿಯಲ್ಲಿ ಸಂಪ್ರದಾಯದ ಭಂಜಕಿಯರಂತೆ ತೋರುವ ಸ್ತ್ರೀಯರು ಕೆಲವೊಮ್ಮೆ ಸಂಪ್ರದಾಯದ ಗೆರೆಗಳನ್ನು ಮೀರಿ ಮಾನವೀಯತೆಯೆಡೆಗೆ ತುಡಿಯುವವರಾಗಿರುವುದು ಗಮನ ಸೆಳೆಯುತ್ತದೆ.

ತಕಳಿ ಶಿವಶಂಕರ ಪಿಳ್ಳೈ ಅವರು ಬರೆದಿರುವ 'ಹಗ್ಗ' ಕಾದಂಬರಿಯು ಮೂರು ಭಾಗಗಳಲ್ಲಿ ಪ್ರಕಟವಾಗಿದ್ದು, ಕೇರಳದ ವಿವಿಧ ಸಮುದಾಯಗಳ ಸಾಮಾಜಿಕ ಮತ್ತು ಕೌಟುಂಬಿಕ ಬದುಕಿನ ಬಗ್ಗೆ ಬಹಳಷ್ಟು ವಿಚಾರಗಳನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ಈ ಕೃತಿಯಲ್ಲಿ ಬರುವ ಕಲ್ಯಾಣಿ, ಪಾಪೆ, ಚಕ್ಕಿ, ಕೋಡಾಂತ್ರ ಕುಂಜಮ್ಮ... ಈ ಸ್ತ್ರೀಪಾತ್ರಗಳು ತಾವು ನಂಬಿದ ನಿಲುವಿಗೆ ಬದ್ಧರಾಗಿ, ಸಂಪ್ರದಾಯದ ಗೆರೆಗಳನ್ನು ದಾಟುವುದನ್ನು ಗಮನಿಸಬಹುದು.

ಇಲ್ಲಿನ ಒಂದು ವಿಶಿಷ್ಟ ಪಾತ್ರವಾಗಿರುವ ಶೀಲಾಂತಿಪಿಳ್ಳಿ ಕಲ್ಯಾಣಿಯಮ್ಮ ಓದುಬರೆಹ ಬಲ್ಲವಳು. ಸಂಪ್ರದಾಯಕ್ಕಿಂತ ಬದುಕಿನ ಸಂತೋಷ ದೊಡ್ಡದು ಎಂದು ನಂಬಿದವಳು. 'ತಿರುವಾತಿರ' (ಆರ್ದ್ರಾ ನಕ್ಷತ್ರದ ದಿನ ಸ್ತ್ರೀಯರು ಪತಿಯ ಶ್ರೇಯಸ್ಸಿಗಾಗಿ ಆಚರಿಸುವ ವಿಶೇಷ ಹಬ್ಬ) ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವವಳು. ಮಹಾವಿದ್ವಾಂಸನಾಗಿದ್ದ ತನ್ನ ಸಂಬಂಧಕಾರನ ಸಂಸರ್ಗದಿಂದ ಕಾವ್ಯ, ಪುರಾಣಗಳಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದಾಳೆ. 'ಅಕ್ಷರಗಳು ಸ್ಫುಟವಾಗಿಯೂ ಸುಂದರವಾಗಿಯೂ ಇರುತ್ತವೆ. ಕೆಲವೊಮ್ಮೆ ಚಿತ್ರಗಳೂ ಇರುತ್ತವೆ. ಅಕ್ಷರ ತಪ್ಪುಗಳು ಇರುವುದೇ ಇಲ್ಲ' ಎಂದು ಊರವರೆಲ್ಲ ಮೆಚ್ಚಿಕೊಳ್ಳುವಂತೆ ಕಾವ್ಯ ಮತ್ತು ಪುರಾಣಗ್ರಂಥಗಳನ್ನು ಅಚ್ಚುಕಟ್ಟಾಗಿ ಪ್ರತಿಮಾಡುತ್ತಾಳೆ. ಆಕೆ ಪ್ರತಿ ತೆಗೆಯುವ ಪುರಾಣಗಳು ಊರಿನಲ್ಲಿ ವಿಶೇಷ ಬೇಡಿಕೆಯನ್ನು ಹೊಂದಿದ್ದು ಅವಳಿಗೆ ಸ್ವಂತ ವರಮಾನವನ್ನೂ ತರುತ್ತವೆ.

'ಹುಟ್ಟಿದ್ದೇ ಸೂಲಗಿತ್ತಿಯಾಗಲು' ಎಂಬಂಥಾ ನೈಪುಣ್ಯ ಮತ್ತು ಲವಲವಿಕೆಗಳನ್ನು ಹೊಂದಿರುವ ಕಲ್ಯಾಣಿ ಪ್ರತಿಫಲಾಪೇಕ್ಷೆಯಿಲ್ಲದೆ ಊರಿನ ನಾಯರ್ ಮಹಿಳೆಯರ ಹೆರಿಗೆ ಮಾಡಿಸುವವಳು. ಹಾಗಾಗಿ ಯಾವ ಮನೆಗೆ ಹೋದರೂ ಕುಲೀನರಿಗೆ ನೀಡುವ ಆತಿಥ್ಯವು ಸಿಗುತ್ತದೆ. ಊರಿನ ಎಲ್ಲ ಮನೆಗಳಲ್ಲೂ ಅವಳು ಹೆರಿಸಿದ ಮಕ್ಕಳಿವೆ. ತಮ್ಮನ್ನು ಗರ್ಭಕೋಶದಿಂದ ಭೂಮಿಗೆ ಸುರಕ್ಷಿತವಾಗಿ ಬರಮಾಡಿಕೊಂಡ ಕಲ್ಯಾಣಿಯನ್ನು ಊರಿನ ಎಲ್ಲ ಮಕ್ಕಳೂ 'ಅಮ್ಮಾ' ಎಂದೇ ಕರೆಯುತ್ತಾರೆ. ಮನೆಯವರ ವಿರೋಧವನ್ನು ಲೆಕ್ಕಿಸದೆ ಮುಸಲ್ಮಾನರ ಹೆಣ್ಣೊಬ್ಬಳನ್ನು ಹೆರಿಸಿದ ಕಲ್ಯಾಣಿಯ 'ಹರೆಯದ ಸಾಹಸಕೃತ್ಯ'ವೊಂದರ ವಿವರಣೆ ಕೃತಿಯಲ್ಲಿದೆ. "ಹೆಣ್ಣೊಬ್ಬಳು ಉಸಿರಾಡಲಾಗದೆ ಒದ್ದಾಡುತ್ತಿದ್ದಾಳೆ. ಎರಡು ಜೀವಗಳೂ ಬೇರೆಬೇರೆ ಆಗಬೇಕು. ಹೆರಿಗೆ ಮಾಡಿಸುವವಳು ಜಾತಿ ನೋಡಬಾರದೆಂದೆ ನನಗಾಗ ಅನಿಸಿದ್ದು. ನನಗೆ ಗೊತ್ತು; ದೊಡ್ಡ ಹಾರುವರ ಮನೆಯ ಅಮ್ಮಾವ್ರೂ ಹೊಲತಿಯೂ ಒಂದೇ ರೀತಿ ಹೆರುವುದು. ಸಾಬ ಮತ್ತು ಸಾಬರವಳು ಬಂದು ಕರೆದಾಗ ನಾನು ಅದಾವುದನ್ನೂ ನೆನೆಯಲಿಲ್ಲ. ಬಸುರಿಯೊಬ್ಬಳ ಉಸಿರಾಟ ಸಲೀಸಾಗಬೇಕೆಂದಷ್ಟೆ ಯೋಚಿಸುತ್ತಿದ್ದೆ. ಯಾವುದೊ ಆವೇಶ ಬಂದ ಹಾಗೆ ತಕ್ಷಣ ಹೊರಟೆ. ಹೋಗ್ತಾ ದಾರಿಯಲ್ಲೆ ಬೇಣದ ಕಾಡು, ಎರಮತ್ರ ಬನಗಳಿಂದೆಲ್ಲ ಕೆಲವು ಮದ್ದಿನ ಸೊಪ್ಪು, ಬಳ್ಳಿ, ಹುಲ್ಲುಗಳನ್ನು ಸಂಗ್ರಹಿಸಿದ್ದೆ. ನಾನಾಗ ಹಾರುತ್ತ ಸಾಗುತ್ತಿದ್ದೆ." (ಪು. ೫೧೩, ಹಗ್ಗ-ಭಾಗ ೧)

ಸಂಪ್ರದಾಯದ ನಂಬಿಕೆಗಳಿಗಿಂತ ಜೀವದ ಬೆಲೆ ದೊಡ್ಡದು ಎಂಬಂಥ ಉದಾತ್ತ ನಿಲುವು ಕಲ್ಯಾಣಿಯ ಸಂಕಲ್ಪವನ್ನು ದೃಢವಾಗಿಸಿದೆ. ನಸುಕು ಹರಿಯುವ ಹೊತ್ತಿಗೆ ಹುಟ್ಟಿದ ಮಗುವನ್ನು ಮೂರು ಬಾರಿ ಮುದ್ದಿಸುವಾಗಲೂ ಆ ಮಗು 'ನಾಲ್ಕನೆಯ ವೇದದವರದು' ಎಂಬ ವಿಚಾರ ಅವಳನ್ನು ತಡೆದಿಲ್ಲ. "ಜಾತಿ ಯಾವುದಾದರೇನು, ಮಕ್ಕಳೆಲ್ಲ ಹುಟ್ಟಿದಾಗ ಒಂದೇ. ಅದು ದೇವರಲ್ಲವೆ, ದೇವರು! ಆಮೇಲೆ ತಾನೆ ಮನುಷ್ಯನಿಗೆ ಕಿಲುಬು ಹಿಡಿಯುವುದು. ಹುಟ್ಟಿ ಬಂದಾಗ ಮಗೂಗೆ ಜಾತಿ ಇದೆಯೆ? ಮೇಲ್ ಕೀಳ್ ಎಂಬುದಿದೆಯೆ?" (ಪು. ೫೧೪, ಅದೇ) ಜೀವವಿರೋಧಿಯಾದ ಸಂಪ್ರದಾಯದ ವಿರುದ್ಧ ಸಿಡಿದೇಳುವ ಕಲ್ಯಾಣಿಯ ಗಟ್ಟಿತನಕ್ಕೆ ಈ ಘಟನೆ ಉತ್ತಮ ಉದಾಹರಣೆಯಾಗಿದೆ.

ಪತಿ ಬಿಟ್ಟುಹೋದ ಬಳಿಕ ಮತ್ತೆ ಸಂಬಂಧ ಮಾಡಿಕೊಳ್ಳುವುದಕ್ಕೆ ಒಪ್ಪದೆ ಒಂಟಿಯಾಗಿ ಉಳಿದ ಕಲ್ಯಾಣಿ ವಿರಾಗಿನಿಯಲ್ಲ. 'ಅಮ್ಮ' ಎಂದು ಕರೆಯುವ ಯುವಕರಲ್ಲೂ ಆಸೆ ಹುಟ್ಟಿಸುವ ಮೈಮಾಟ ಮತ್ತು ವಯ್ಯಾರದ ವರ್ತನೆಯವಳು. 'ವಿರಹವೆಂದರೆ ಏನೆಂದು ಅರಿಯದ ಅದೃಷ್ಟವಂತೆ'ಯಾಗಿರುವ ಕಲ್ಯಾಣಿ ತನಗಿಷ್ಟವಾದ ಪುರುಷರೊಂದಿಗೆ ದೈಹಿಕ ಸಂಬಂಧ ಬೆಳೆಸುವವಳು. ಆದರೆ ಆ ಸಂಬಂಧಗಳನ್ನು ಬದುಕಿಗೆ ಅಂಟಿಸಿಕೊಂಡಿಲ್ಲ. ಯೌವನಕಾಲದಲ್ಲಿ ಚೆಲುವನಾದ ಕ್ಲಾಸಿಫೈಯರ್‌ನನ್ನು ಬಯಸಿ ಕೂಡಿ ಬಸುರಿಯಾಗುತ್ತಾಳೆ. ತನ್ನ ಗರ್ಭಕ್ಕೆ ಕಾರಣರಾದವರಾರು ಎಂಬ ಸತ್ಯವನ್ನು ಓರಗೆಯ ಗೆಳತಿಯರಿಗೂ ಹೇಳುವುದಿಲ್ಲ. ಕಲ್ಯಾಣಿಯ ಉಬ್ಬಿದ ಹೊಟ್ಟೆ ಕುಟುಂಬದ ಯಜಮಾನರಾದ ಅವಳ ಮಾವ ಪರಮು ಆಶಾನ್‌ರ ದೃಷ್ಟಿಗೆ ಅನಿರೀಕ್ಷಿತವಾಗಿ ಬಿದ್ದು ಅವರು ಅತೀವ ಸಿಟ್ಟಿನಿಂದ ಬಡಿಗೆಯೆತ್ತಿ ಹೊಡೆಯಲು ಬಂದಾಗ ಸೊಂಟದ ಮೇಲಿದ್ದ ಅಡ್ಡಸೀರೆಯನ್ನು ಕಳಚಿ ಮಾವನ ಮುಂದೆ ಬೆತ್ತಲಾಗಿ ನಿಂತು ಅವರನ್ನು ಕಕ್ಕಾಬಿಕ್ಕಿಯಾಗಿಸಿ ಹೊಡೆತದಿಂದ ತಪ್ಪಿಸಿಕೊಳ್ಳುತ್ತಾಳೆ.

ಊರಿಗೆಲ್ಲ ಗೌರವಸ್ಥರಾದ ಮಾವನ ಮುಂದೆ ಹಾಗೆ ಬೆತ್ತಲೆಯಾಗುವುದು ಬೇರೆಯವರ ಕಣ್ಣಿಗೆ 'ಅತಿ' ಎನಿಸಬಹುದಾದ ವರ್ತನೆಯಾದರೂ ಕಲ್ಯಾಣಿಯ ಮಟ್ಟಿಗೆ ಅದು ಆ ಸಂದರ್ಭಕ್ಕೆ ಸ್ವರಕ್ಷಣೆಗಾಗಿ ತೋರಿದ ಪ್ರತಿಕ್ರಿಯೆ ಅಷ್ಟೇ. ಅನಧಿಕೃತವಾದ ಗರ್ಭವನ್ನು ಧರಿಸಿದ್ದು ಮತ್ತು ಏಟು ತಪ್ಪಿಸಿಕೊಳ್ಳುವುದಕ್ಕಾಗಿ ಹಿರಿಯರಾದ ಮಾವನ ಮುಂದೆ ಬಟ್ಟೆ ಬಿಚ್ಚಿ ನಿಂತುದು... ಈ ಎರಡು ರೀತಿಯ ಅಪರಾಧಗಳಿಗಾಗಿ ಸಂಪ್ರದಾಯಸ್ಥರಾದ ಮಾವ ಮತ್ತು ಕುಟುಂಬದ ಇತರರ ದೃಷ್ಟಿಯಲ್ಲಿ 'ಮಾಡಬಾರದುದನ್ನು ಮಾಡಿ ಮ್ಲೇಚ್ಛೆಯೂ ಪಾಪಿಯೂ' ಆಗಿರುವ ಬಗ್ಗೆ ಕಲ್ಯಾಣಿಗೆ ಅಪರಾಧಿ ಭಾವವಿಲ್ಲ. ಇಷ್ಟವಾದವನ ಗರ್ಭವನ್ನು ಧರಿಸಲು ಸ್ತ್ರೀ ಸ್ವತಂತ್ರಳು ಎಂಬ ಅಂಶವನ್ನು ಕಾವ್ಯಪುರಾಣಗಳನ್ನು ಓದಿ ಅರ್ಥಮಾಡಿಕೊಂಡಿರುವ ಸ್ವತಂತ್ರ ನಿಲುವಿನ ಕಲ್ಯಾಣಿಯ ಪಾತ್ರದ ಮೂಲಕ ಲೇಖಕರು ಪ್ರತಿಪಾದಿಸಿದ್ದಾರೆ.

ಸ್ತ್ರೀಯ ತಾಯ್ತನದ ಹಕ್ಕನ್ನು ಪ್ರತಿಪಾದಿಸುವ ಕಲ್ಯಾಣಿ 'ಗರ್ಭಕ್ಕೆ ಕಾರಣನಾದವನ ಹೆಸರು ಹೇಳಿದರೆ, ಮಾವ ಕಾಶಿಗೆ ಹೋಗುವುದಿಲ್ಲವೆಂದರೂ ಈ ಕಲ್ಯಾಣಿ ಹೆಸರನ್ನು ಹೇಳಲಾರಳು' ಎಂಬಂಥ ಅಚಲತೆಯುಳ್ಳವಳು. ಸೋದರಸೊಸೆಯ ನಗ್ನ ದೇಹವನ್ನು ನೋಡಿದ ತಪ್ಪಿಗೆ ಹಾಗೂ ಕುಟುಂಬದ ಮಾನಹೋದ ಕಾರಣಕ್ಕೆ ವಿಚಲಿತರಾದ ಆಶಾನ್ ಅವರು ಕಾಶಿಗೆ ಹೊರಟು ನಿಂತಾಗಲೂ ಪ್ರಿಯಕರನ ಹೆಸರನ್ನು ಅವಳು ಬಹಿರಂಗಪಡಿಸುವುದಿಲ್ಲ. ಕಲ್ಯಾಣಿ ತನ್ನ ಪ್ರಿಯಕರನ ಹೆಸರು ಹೇಳದಿರುವುದಕ್ಕೆ ಇರುವ ಕಾರಣವೊಂದೇ: ತನ್ನ ಗರ್ಭಕ್ಕೆ ಕಾರಣವಾದ ಗಂಡಸನ್ನು ಅವಳು ಪ್ರೀತಿಸಿದ್ದಾಳೆ. ಆ ಪ್ರೀತಿಯ ಕುರುಹಾಗಿ ತನ್ನ ಸ್ವಂತ ಆಯ್ಕೆಯಿಂದ ಗರ್ಭವನ್ನು ಧರಿಸಿದ್ದಾಳೆ. ನಾಳೆ ಮಗ ಬೆಳೆದು ತನ್ನ ಅಪ್ಪ ಯಾರೆಂದು ಪ್ರಶ್ನಿಸಿದರೂ ಹೇಳುವುದಿಲ್ಲವೆಂದೇ ನಿರ್ಣಯಿಸಿದ್ದಾಳೆ. 'ಅಪ್ಪ ಯಾರೆಂದು ಗೊತ್ತಿಲ್ಲದ ಒಬ್ಬ ಮನುಷ್ಯನಾಗಿ ಆ ಮಗು ಬೆಳೆದು ದೊಡ್ಡವನಾಗಲಿ. ಅದೇನೂ ದೊಡ್ಡ ವಿಷಯವಲ್ಲ' ಎಂಬುದು ಅವಳ ನಿಲುವು. ಮಹಿಳೆಯೊಬ್ಬಳು ತನ್ನ ಮಗು 'ಹೊತ್ತ ಮತ್ತು ಹೆತ್ತ ಅಮ್ಮನ' ಅಸ್ಮಿತೆಯನ್ನು ಮಾತ್ರ ಪಡೆದು ಗುರುತಿಸಿಕೊಳ್ಳಲಿ ಎಂದು ನಿರ್ಣಯಿಸುವುದು ಬಹಳ ವಿಶಿಷ್ಟವಾದ ಸಂಗತಿ. ಇಷ್ಟಪಟ್ಟು ಕೂಡಿ ಗರ್ಭಕ್ಕೆ ಕಾರಣನಾದವನು 'ವಸ್ತ್ರ ಕೊಡುತ್ತೇನೆ' ಎಂದಾಗ ನಿರಾಕರಿಸಿ ಸ್ವತಂತ್ರಳಾಗಿ ಉಳಿಯುವ ಕಲ್ಯಾಣಿಯಮ್ಮನಿಗೆ 'ಒಬ್ಬನ ಹೆಂಡತಿ' ಎಂಬ ಹಂಗು, ನಿರ್ಬಂಧಗಳು ಇಷ್ಟವಿಲ್ಲ. ಒಂಟಿ ತಾಯಿಯಾಗಿರುವ ನಿರ್ಣಯಕ್ಕೆ ಬದ್ಧಳಾಗಿ ಯಾರ ಹಂಗೂ ಇಲ್ಲದೆ ಮಗನನ್ನು ಸುಸಂಸ್ಕೃತನಾಗಿ ಬೆಳೆಸುತ್ತಾಳೆ. ಮಗ ಬೆಳೆದ ಬಳಿಕವೂ ಅಪ್ಪನ ಹೆಸರನ್ನು ಬಹಿರಂಗಪಡಿಸದೆ 'ಸ್ತ್ರೀಯ ಗರ್ಭಕ್ಕೆ ಒಂದು ಅಧಿಕೃತತೆ ಬೇಕು' ಎಂದು ವಿಧಿಸಿರುವ ಸಾಮಾಜಿಕ ಸಂಪ್ರದಾಯಕ್ಕೆ ಸಡ್ಡು ಹೊಡೆಯುತ್ತಾಳೆ.

ಹೊಲೆಯ ಚೋಮನ ಮಗಳಾದ ಪಾಪೆ ಕೂಡ ಸ್ವತಂತ್ರ ನಿಲುವಿನ ಸ್ವಾಭಿಮಾನಿ. ದುಡಿಯುವ ವರ್ಗದ ಹಕ್ಕು, ಅಸ್ಮಿತೆಗಳ ಬಗ್ಗೆ ಗಂಭೀರವಾಗಿ ಯೋಚಿಸುವವಳು. ಯೂನಿಯನ್ ಮೆರವಣಿಗೆಗಳಲ್ಲಿ ಮುಂದಿರುತ್ತಿದ್ದ ವರ್ಗಪ್ರಜ್ಞೆಯುಳ್ಳ ಹೋರಾಟಗಾರ್ತಿ. ಕೆಳವರ್ಗದವರ ಹಕ್ಕುಗಳಿಗಾಗಿ ಹೋರಾಡುತ್ತಿದ್ದ ಕಾರ್ಮಿಕ ನಾಯಕ ಸುರೇಂದ್ರನ್‌ನ ಮೋಹಕ ರೂಪು ಮತ್ತು ಚಕ್ಕಳಗುಳಿಯಿಡುವ ಮಾತುಗಳಿಂದ ಆಕರ್ಷಿತಳಾಗಿ ಅವನನ್ನು ಕೂಡಿ ಗರ್ಭಿಣಿಯಾಗುತ್ತಾಳೆ. ಹಾಗಾದ ಬಳಿಕ ಸುರೇಂದ್ರನೊಂದಿಗಿನ ದೈಹಿಕ ಸಂಬಂಧವನ್ನು 'ಅದು ಬೇಡ' ವೆಂದು ಸ್ಪಷ್ಟವಾಗಿ ನಿರಾಕರಿಸಿ ತನ್ನ ಮಗುವನ್ನು 'ತನ್ನದು ಮಾತ್ರ' ಆಗಿ ಹೆತ್ತು ಬೆಳೆಸುತ್ತಾಳೆ. ಮುಂದೆಂದೂ ಅವಳು ಹಿಂದಿನ ಪ್ರೇಮಸಂಬಂಧವನ್ನು ಮುಂದುವರಿಸುವುದಿಲ್ಲ. ಮಾತ್ರವಲ್ಲ ಅವನು ನೀಡಬಂದ ಯಾವತ್ತೂ ಸಹಾಯವನ್ನು ನಿರಾಕರಿಸುತ್ತಾಳೆ. 'ಅವಳನ್ನು ಮದುವೆ ಮಾಡಿಕೊಳ್ಳಲು, ಒಂದು ಹಿತ್ತಲು ಖರೀದಿಸಿ ಮನೆ ಕಟ್ಟಿಸಿಕೊಡಲು, ಪ್ರತಿ ತಿಂಗಳೂ ಇಂತಿಷ್ಟು ಹಣ ಕೊಡಲೂ ಸುರೇಂದ್ರ ತಯಾರಾಗಿದ್ದ. ಅವಳಿಗೆ ಬೇಡವಂತೆ.' (ಪು. ೧೩೫೬, ಹಗ್ಗ–ಭಾಗ ೩)

ಆ ಬಸಿರಿನ ಹೊಣೆಗಾರ ಯಾರು ಎಂದು ಯಾರಾದರೂ ಕೇಳಿದ್ದರೆ ಅವಳ ದಿಟ್ಟ ಜಾಯಮಾನದಂತೆ 'ಅದ್ರ ಉಸಾಬ್ರಿ ನಿಂಗ್ಯಾಕೆ? ಜಗತ್ನ ಒಡ್ಯನೆ ಅಂತ ಇಟ್ಕಳಿ. ನನ್ ಒಟ್ಟೆ ಒಳೀಕ್ ತಾನೆ ಕೂಸು ಮಲ್ಗಿರಾದು?' ಎಂಬಂಥ ಚುರುಕು ಉತ್ತರದಿಂದ ಬಾಯಿ ಮುಚ್ಚಿಸಬಹುದಾದವಳು ಪಾಪೆ. ಗೆಳತಿಯರು 'ಕೂಸಿಗೆ ಒಬ್ಬ ಅಪ್ಪ ಇದ್ದಾನೆ ಅನ್ನೋಕಾದ್ರೂ ಏನಾದರೊಂದು ಮಾಡುವಂತೆ, ಹೇಳೆ' ಎಂದು ಒತ್ತಾಯಿಸಿದರೆ 'ಅಪ್ಪ ಇಲ್ದೇನೂ ಒಂದ್ ಕೂಸ್ನ ಬೆಳ್ಸೋಕಾಯ್ತದ ಅಂತ ನೋಡ್ತಿವ್ನಿ' ಎಂಬುದು ಅವಳ ಖಚಿತ ಉತ್ತರ. ತಾನು ಬಸುರಿಯಾಗುವ ಮೊದಲೆ ಸುರೇಂದ್ರನಿಗೆ ಹೆಂಡತಿ ಮಕ್ಕಳಿರುವರೆಂದು ಪಾಪೆಗೆ ಗೊತ್ತಿತ್ತು. ಸುರೇಂದ್ರನ ಹೆಂಡತಿಯ ಸ್ಥಾನ ಸಿಗಲಾರದು ಎಂಬುದನ್ನು ತಿಳಿದೇ ಅವನ ಸಂಗ ಮಾಡಿದ್ದಾಳೆ. ಸಲೀಲ ಸುರೇಂದ್ರನ ಮಗನೆಂದು ಊರಲ್ಲಿ ಎಲ್ಲ ಜಾತಿಯವರು ಹೇಳಿದರೂ ಪಾಪೆಯ ನಾಲಿಗೆಯಿಂದ ಅದು ಎಂದೂ ಹೊರಬರಲಿಲ್ಲ. 'ಸಲೀಲನನ್ನು ತನ್ನ ಮನೆಯ ಮಗುವಾಗಿ ಸಾಕುವೆನೆಂಬ' ಸುರೇಂದ್ರನ ಹೆಂಡತಿಯ ಔದಾರ್ಯದ ಕೊಡುಗೆಯನ್ನೂ ಅವಳು ಸ್ವೀಕರಿಸಿಲ್ಲ.

ಹೀಗೆ 'ಗರ್ಭದಲ್ಲಿಯೆ ಹುಟ್ಟಿಕೊಂಡ ದ್ವೇಷದಿಂದಾಗಿ' ಪಾಪೆಯ ಮಗ ಸಲೀಲ ತನ್ನ ಜನ್ಮಕ್ಕೆ ಕಾರಣನಾದ ಸುರೇಂದ್ರನಿಗೆ ಪ್ರತಿನಾಯಕನಾಗಿ ಬೆಳೆಯುತ್ತಾನೆ. ಸ್ವಂತ ಅಪ್ಪನನ್ನು 'ವರ್ಗಶತ್ರು' ಎಂದು ಗ್ರಹಿಸುವ ಸಲೀಲನ ಸಿಟ್ಟು 'ಬಸಿರಿನಲ್ಲೆ ಹುಟ್ಟಿಕೊಂಡದ್ದು' ಎಂಬ ವಿಚಾರವನ್ನು ಸ್ವತಃ ಸುರೇಂದ್ರನೂ ಗುರುತಿಸಿದ್ದಾನೆ. ಹೆಣ್ಣಿನ ಶೋಷಣೆ, ಅವಲಂಬನೆಗಳಿಗೆ ಕಾರಣವಾಗುವ ಪಿತೃತ್ವದ ದೃಢೀಕರಣವನ್ನು ಸ್ಪಷ್ಟವಾಗಿ ನಿರಾಕರಿಸುವ ಪಾಪೆಯ ಈ ಪ್ರತಿರೋಧದ ನಿಲುವೇ ಸಲೀಲನು ಮುಂದೆ ನಕ್ಸಲನಾಗುವುದಕ್ಕೂ ಪರೋಕ್ಷವಾಗಿ ಕಾರಣವಾಗಿದೆ. ಗಂಡನಿಲ್ಲದ ಸ್ತ್ರೀ 'ತನಗೆ ಬೇಕೆನಿಸಿದಾಗ ತನಗಿಷ್ಟವಾದವನಿಂದ ತನಗಾಗಿ ಮಗುವನ್ನು ಪಡೆಯುವ' ಮತ್ತು ಅದನ್ನು ತಂದೆಯ ಹೆಸರಿನ ಹಂಗಿಲ್ಲದೆ ಸಮರ್ಥವಾಗಿ ಬೆಳೆಯಿಸುವ ಸಾಧ್ಯತೆ, ಸ್ವತಂತ್ರ ಆಲೋಚನೆಗಳನ್ನು ಕಲ್ಯಾಣಿ ಮತ್ತು ಪಾಪೆಯರು ಪ್ರತಿಪಾದಿಸುತ್ತಾರೆ.

ಊರಿನ ದೇವಳದ ಪಾರಂಪರಿಕ ಕಸಮುಸುರೆಯವಳಾದ ಚಕ್ಕಿಗೆ ಒಬ್ಬ ವಸ್ತ್ರ ಕೊಟ್ಟಿದ್ದ. ಆತ ಬಿಟ್ಟೂ ಹೋದ. ಆಮೇಲೆ ಅವಳಿಗೆ ಯಾರೂ ವಸ್ತ್ರ ಕೊಡಲಿಲ್ಲ. ಗಂಡಿನ ಸಂಗ ಬೇಕೆನಿಸುವ ಕ್ಷಣಗಳಲ್ಲಿ ಇತರ ಕೆಲಸದಾಳುಗಳಲ್ಲಿ ಯಾರನ್ನಾದರೂ ಆಸೆಯಿಂದ ಮಾತನಾಡಿಸಲು ಅವಳು ಪ್ರಯತ್ನಿಸುತ್ತಾಳೆ. ಆದರೆ ಅವರಿಂದ ತಕ್ಕ ಸ್ಪಂದನೆ ದೊರೆತಿಲ್ಲ. ದೇಹಸುಖದ ಬಯಕೆಯನ್ನು ಬಾಯಿಬಿಟ್ಟು ಹೇಳಲಾಗದೆ ಒಳಗೊಳಗೇ ಕೊರಗುವ ಹೆಣ್ಣಿನ ಭಾವನೆಗಳು ಕೃತಿಯಲ್ಲಿ ಹೀಗೆ ಅಭಿವ್ಯಕ್ತವಾಗಿವೆ: "ಅವಳದೂ ಒಂದು ಹೆಣ್ಣು ಜನ್ಮ. ಯಾವಾಗಲಾದರೂ ಒಮ್ಮೊಮ್ಮೆ ಅವಳಿಗೂ ಓರ್ವ ಹೆಣ್ಣಾಗಬೇಕೆಂದೆನ್ನಿಸುವುದಿಲ್ಲವೇ. ಆದರೆ ಹೆಣ್ಣಾಗಲು ಸಾಧ್ಯವಾಗುತ್ತಿರಲಿಲ್ಲ. ಹೆಣ್ಣಾಗಬೇಕಾದರೆ ಗಂಡು ಅಗತ್ಯ. ಅವಳು ಕೆಲವೊಮ್ಮೆ

ಹಾಸಿಗೆಯಲ್ಲಿ ತಡಕಾಡುವಳು. ಗಂಡಿರುವುದಿಲ್ಲ ಅಲ್ಲಿ." (ಪು. ೮೭, ಹಗ್ಗ-ಭಾಗ ೧) ಇಂಥ ಸಂದರ್ಭದಲ್ಲಿ ಕೇವಲ ಕಸಮುಸುರೆಯವಳಾದ ಅವಳಲ್ಲಿ ಸೌಂದರ್ಯವನ್ನೂ, ಬೆಲೆಯನ್ನೂ ಕಂಡ ಶೇಷಯ್ಯನ್ ಎಂಬ 'ಎರಡು ಪಣಂ ಮಾತ್ರ ಕೊಡಬಲ್ಲ ಬಡಬ್ರಾಹ್ಮಣನಿಗೆ' ಒಪ್ಪಿಸಿಕೊಳ್ಳುತ್ತಾಳೆ. ಈ ಹೊಸ ಲೈಂಗಿಕ ಸಂಬಂಧದಿಂದ ಚಕ್ಕಿಯ ಬದುಕಲ್ಲಿ ಒಂದು ಲಾಲಿತ್ಯ, ಕಸಗುಡಿಸುವ ನಿತ್ಯಕಾಯಕದಲ್ಲಿ ತಾಳ, ಲಯಗಳು ಹುಟ್ಟಿಕೊಂಡಿವೆ. ಬ್ರಾಹ್ಮಣನಾದ ಶೇಷಯ್ಯನ್ ಅವಳ ತಾಯಿಯ ಬಯಕೆಯಂತೆ 'ಒಳ್ಳೆ ಹೊತ್ತು ನೋಡಿ, ನಾಕು ಜನಾನ ಕರ್ದು' ವಸ್ತ್ರ ಕೊಡಲಾರನೆಂದು ತಿಳಿದ ಬಳಿಕವೂ ತೀವ್ರ ಕಾವು ತುಂಬಿದ ಅವನ ಪ್ರೀತಿಯನ್ನು ಚಕ್ಕಿ ಒಪ್ಪಿಕೊಂಡಿದ್ದಾಳೆ. ಪ್ರತಿ ರಾತ್ರಿ ದೇವಸ್ಥಾನದಲ್ಲಿ ಉಳಿದ ಅನ್ನ ಮತ್ತು ಅವಳ ಅಮ್ಮನಿಗಾಗಿ ಒಳ್ಳೆಯ ಎಲೆ ಅಡಕೆಗಳೊಂದಿಗೆ ಬರುವ, ಯಾವತ್ತೂ ಅವಳನ್ನು ಪ್ರೀತಿಸುವ ಶೇಷಯ್ಯನ್‌ನ ಸಂಗದಲ್ಲಿ ಸಂತೃಪ್ತಿ ಕಂಡುಕೊಳ್ಳುತ್ತಾಳೆ.

ಇದೇ ಕೃತಿಯಲ್ಲಿ ಕೋಡಾಂತ್ರ ಕುಂಜಮ್ಮ ಎಂಬ ಒಬ್ಬಾಕೆ ಮುಗ್ಧೆಯಿದ್ದಾಳೆ. ಯಾವ ಹೆಂಗಳೆಯರಾದರೂ ತಿರುಗಿ ನೋಡುವಂಥ ಚೆಲುವನಾದ ಕ್ಲಾಸಿಫೈಯರ್ ಕೊಚ್ಚುಪಿಳ್ಳೆಯನ್ನು ಗಂಧರ್ವನೆಂದೇ ಭಾವಿಸಿ ಕೂಡಿ ಅವನ ಮಗುವನ್ನು ಹೆತ್ತಿರುವ ಕುಂಜಮ್ಮ ಹೊರಪ್ರಪಂಚವನ್ನು ಕಂಡಿಲ್ಲ. ಅಧಿಕೃತ ಸಂಬಂಧಕಾರನಾದ ಶೇಷಯ್ಯನ್‌ನನ್ನು ಎಂದೂ ಮುಟ್ಟಿಸಿಕೊಳ್ಳದೆ ಮತ್ತೊಮ್ಮೆ ಎಂದಾದರೂ ತನ್ನ ಗಂಧರ್ವ ಬರುವನೆಂದೇ ನಂಬಿ ವರ್ಷಗಟ್ಟಲೆ ಕಾಯುತ್ತಾಳೆ. ತಾನು ಇಷ್ಟಪಟ್ಟ ಆ ಮಧುರ ಸಂಗದ ನೆನಪಾದಾಗೆಲ್ಲ ಅವನ ಪ್ರತಿರೂಪವೆ ಆಗಿರುವ ಮಗಳನ್ನು ಬರಸೆಳೆದು ನಿಡಿದು ನಿಡಿದಾಗಿ ಮುತ್ತಿಕ್ಕುತ್ತಾಳೆ. ತೆಕ್ಕೆಯಲ್ಲಿರುವುದು ಪುಟ್ಟ ಮಗಳು ಎಂಬ ಪ್ರಜ್ಞೆಯೆ ಇಲ್ಲದಂತೆ. ಅಮ್ಮನ ಉಸಿರುಗಟ್ಟಿಸುವ ಅಪ್ಪುಗೆ, ಮುತ್ತುಗಳನ್ನು ತಾಳಲಾರದೆ ಮಗಳು ಅಳುತ್ತಿದ್ದರೂ ಪರಿವೆಯಿಲ್ಲದಂತೆ. ಅವಳ ಸಾಕುತಾಯಿಯಂತಿರುವ ನಂಗ ಗುರುತಿಸುವಂತೆ "ಮಿಂದು ಒದ್ದೆ ಕೂದಲನ್ನು ಬೆನ್ನ ಮೇಲೆ ಹರವಿ, ಬೊಟ್ಟಿಟ್ಟು, ಮೊಲೆಕಚ್ಚೆ ಕಟ್ಟಿ, ಸಾಲಂಕೃತಳಾಗಿ ಓಡಾಡುವಳು. ಮಲ್ಲಿಗೆ ಹೂ ಕೊಯ್ದು ರಾಶಿ ಹಾಕುವಳು. ಕೆಲವೊಮ್ಮೆ ಸುಮ್ಮನೆ ದುರುಗುಟ್ಟಿ ನೋಡುತ್ತಲೆ ಇರುವಳು. ಆಗ ಮಗಳು ಹೆದರಿ ಅಮ್ಮಾ ಎಂದು ಕೂಗಿದರೆ ಅಮ್ಮ ಬೆಳ್ಳಗೆ ನಗುವಳು; ಅಪ್ಪಿ ಹಿಡಿವಳು; ಮುದ್ದಿಕ್ಕುವಳು." (ಪು. ೨೯೫, ಅದೇ) ಆ ಅಪ್ಪುಗೆ, ಮುದ್ದುಗಳ ರೀತಿಯು ತಾಯಿ ಮಗಳನ್ನು ಆಲಿಂಗಿಸುವ ಹಾಗಲ್ಲದೆ ಬೇರೆಯಾಗಿರುವುದನ್ನು ನಂಗ ಗುರುತಿಸಿದ್ದಾಳೆ. ಹಾಗೆ ಗುರುತಿಸುವುದಕ್ಕೂ ಕಾರಣವಿದೆ 'ಅಮ್ಮ ಮಗಳನ್ನು ಸೀತ್ಕಾರದೊಂದಿಗೆ ಮುತ್ತಿಡುವಳೇನು? ಮೈ, ಮೈ ಒಂದಾಗುವ ಹಾಗೆ ಆಲಿಂಗಿಸುವಳೇನು?' (ಪು. ೨೯೬, ಅದೇ)

ಎಂದೋ ಒಮ್ಮೆ ದೊರೆತ ಪ್ರಣಯಸುಖದ ಹಿತವಾದ ಅನುಭವವೆ ಕುಂಜಮ್ಮಳ ಉನ್ಮಾದಕ್ಕೆ ಕಾರಣವಾಗಿದೆ. ಅದನ್ನು ಬಾಯಿಬಿಟ್ಟು ವ್ಯಕ್ತಪಡಿಸಲು ಕುಂಜಮ್ಮಳಿಗೆ ತಿಳಿಯದು. ಹಿರಿಯಳಾದ

ನಂಗಳಿಗೆ ಕುಂಜಮ್ಮಳ ಬಯಕೆ ಅರ್ಥವಾಗುತ್ತದೆ. ತರವಾಡಿನಲ್ಲಿ ಮತ್ತೊಮ್ಮೆ 'ಗಂಧರ್ವ ಗಾಯನ' ಜರುಗಿದರೆ ಕುಂಜಮ್ಮನ ಬುದ್ಧಿ ತಿಳಿಯಾದೀತು ಎಂದು ಯೋಚಿಸುತ್ತಾಳೆ. ಗಂಧರ್ವ ಗಾಯನವೆಂದರೆ ಪುರುಷನ ಸಂಪರ್ಕ. ಮತ್ತೊಮ್ಮೆ ಪುರುಷನ ಹಿತವಾದ ಸಂಸರ್ಗದ ಸುಖ ಒದಗಿದರೆ ಕುಂಜಮ್ಮ ಸರಿಹೋದಾಳು, ಅದೊಮ್ಮೆ ನಡೆಯಲಿ ಎಂದು ಬಯಸುತ್ತಾಳೆ. ಸಂಪ್ರದಾಯದ ಪ್ರಕಾರ ಸಂಬಂಧ ಮಾಡಿಕೊಂಡಿರುವ ಬ್ರಾಹ್ಮಣ ಊರಲ್ಲೇ ಇರುವಾಗಲೂ ಕುಂಜಮ್ಮಳಿಗೆ ಅಗತ್ಯವಿರುವ ಪುರುಷಸುಖವು ಕುಂಜಮ್ಮ ಬಯಸಿದ ಗಂಧರ್ವನಂಥ ಪುರುಷನಿಂದಲೆ ದೊರೆಯಲಿ ಎಂದು ನಂಗ ಮತ್ತು ಕುಂಜಮ್ಮ ಇಬ್ಬರೂ ಆಶಿಸಿದ್ದಾರೆ. ಸಾಮಾಜಿಕ ವ್ಯವಸ್ಥೆಯು ನಿರ್ದೇಶಿಸಿರುವ ಸಂಬಂಧಂ ಎಂಬ ಸಂಪ್ರದಾಯದ ಕಟ್ಟುಪಾಡುಗಳಲ್ಲಿ, ದಾಂಪತ್ಯದ ಪವಿತ್ರತೆಯಲ್ಲಿ ನಂಗ ಮತ್ತು ಕುಂಜಮ್ಮ ಇಬ್ಬರಿಗೂ ನಂಬಿಕೆಯಿಲ್ಲ.

ಪಿ. ವತ್ಸಲ ಅವರು ಬರೆದಿರುವ 'ಆಗ್ನೇಯ' ಸಂಪ್ರದಾಯದ ಗೆರೆಗಳನ್ನು ದಾಟಿ, ಪುರುಷನ ಹಂಗಿಲ್ಲದೆ ಸ್ವಂತ ಅಸ್ತಿತ್ವವನ್ನು ಕಟ್ಟಿಕೊಳ್ಳುವ ನಂಗೇಮ ಎಂಬ ನಂಬೂದಿರಿ ಸ್ತ್ರೀಯೊಬ್ಬಳ ಹೋರಾಟದ ನೈಜ ಕಥನ. ಕಾದಂಬರಿಯ ಆರಂಭದಲ್ಲಿರುವ ಲೇಖಕಿಯ ಮಾತುಗಳು ಕೃತಿಯ ಆಶಯವನ್ನು ಸ್ಪಷ್ಟಪಡಿಸುತ್ತವೆ: "ಮಹಿಳೆಯೊಬ್ಬಳು ಸಂಪ್ರದಾಯಗಳ ವಿರುದ್ಧದ ಬದುಕನ್ನು ಸವಾಲಾಗಿ ಸ್ವೀಕರಿಸಿದ, ಮಹಿಳೆಗೆ ಸಮಾಜ ತೋರುತ್ತಿರುವ ಅಲಕ್ಷ್ಯಕ್ಕೆ ವಿರುದ್ಧವಾಗಿ ಹೋರಾಡಿ ಬದುಕಿದ ಮೊದಲ ಸ್ತ್ರೀವಾದಿಯನ್ನು ಅಂದು ನಾನು ಭೇಟಿಯಾಗಿದ್ದೆ." ಪತಿಯ ಸಮಾಜಸೇವೆ ದಾಂಪತ್ಯಕ್ಕೆ ಮುಳುವಾದಾಗ ಎದೆಗುಂದದೆ ಪುಟ್ಟ ಮಗುವಿನೊಂದಿಗೆ ಬೇಸಾಯ ಮಾಡಿ ಸ್ವಂತ ನೆಲೆ ಕಂಡುಕೊಂಡವಳು ನಂಗೇಮ. ಸ್ವಾವಲಂಬಿಯಾಗಿ ಬದುಕುವ ವಿಶ್ವಾಸದಿಂದ ಸ್ವಂತ ಪರಿಶ್ರಮದ ಮೇಲೆ ನಂಬಿಕೆಯಿಟ್ಟು ತನ್ನೆಡೆಗೆ ಚಾಚಿದ ಪುರುಷರ ಸಹಾಯಹಸ್ತಗಳನ್ನು ಸೌಮ್ಯವಾಗಿ ನಿರಾಕರಿಸುತ್ತಾಳೆ. ಅಂತರ್ಜನ ಎಂದು ಕರೆಸಿಕೊಳ್ಳುವ ನಂಬೂದಿರಿ ಮಹಿಳೆಯರು ಮನೆಯಿಂದ ಒಬ್ಬೊಬ್ಬರೇ ಹೊರಗಿಳಿಯುವುದಕ್ಕೂ ನಿರ್ಬಂಧವಿದ್ದ ಕಾಲದಲ್ಲಿ ಸ್ವತಂತ್ರ ನೆಲೆಗಾಗಿ ತವರು ಮತ್ತು ಗಂಡನ ಮನೆಯಿಂದ ಹೊರಗೆ ಬರುತ್ತಾಳೆ. ಸಮಾಜದ ದೃಷ್ಟಿಯಲ್ಲಿ ಅಸ್ಪೃಶ್ಯರೆನಿಸಿಕೊಂಡಿದ್ದ ಕೆಳವರ್ಗದ ಜನರ ಸಹಾಯ ಪಡೆದು ಕಾಡಿನ ನಡುವೆ ನೆಲೆ ಕಟ್ಟಿಕೊಂಡು ಬೇಸಾಯ ಆರಂಭಿಸುತ್ತಾಳೆ. ಆ ನೆಲದಲ್ಲಿ ಕೃಷಿ ಸುಲಭವಲ್ಲ ಎಂದು ಎಲ್ಲರೂ ಧೈರ್ಯಗೆಡಿಸಿದಾಗ ವಿಚಲಿತಳಾಗದೆ ಹಠದಿಂದ ಕೆಲಸ ಮಾಡಿ ಉತ್ತಮ ಬೆಳೆ ಪಡೆದು ಊರ ಜನರ ಗೌರವ ಗಳಿಸುತ್ತಾಳೆ. 'ನನ್ನ ಮನೆಯ ಇಂಜಿನಿಯರ್ ನಾನೇ' ಎಂಬ ದೃಢತೆಯಿಂದ ತಾನೇ ಸ್ವಂತ ವಿನ್ಯಾಸ ರೂಪಿಸಿ ಮಗನಿಗಾಗಿ ಸುಂದರವಾದ ಮನೆ ಕಟ್ಟಿಸುತ್ತಾಳೆ.

ಮಗ ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಮನೆಯಿಂದ ದೂರವಾದಾಗ, ಅಮ್ಮನ ಇಚ್ಛೆಗೆ ವಿರುದ್ಧವಾಗಿ ನಾರಾಯಣನ್ ನಾಯರ್‌ನ ಮಗಳನ್ನು ಮದುವೆಯಾದಾಗ ನಿರಾಶಳಾದರೂ ನಂಗೇಮ ಧೃತಿಗೆಡದೆ ಸ್ವಾಭಿಮಾನದ ಬದುಕು ಸಾಗಿಸುತ್ತಾಳೆ. ಪೊಲೀಸರಿಂದ ತಪ್ಪಿಸಿಕೊಂಡು ಭೂಗತರಾಗಿದ್ದ

ಮಗ ಮತ್ತು ಅವನ ಸಂಗಡಿಗರಿಗೆ ಊಟ ಹಾಕಿ, ಅವರ ಸುಳಿವನ್ನು ಅಡಗಿಸಿ, ಪರೋಕ್ಷವಾಗಿ ಮಣ್ಣಿನ ಮಕ್ಕಳ ಹೋರಾಟಕ್ಕೆ ಬೆಂಬಲವನ್ನೂ ಸೂಚಿಸುತ್ತಾಳೆ. ವೃದ್ಧಾಪ್ಯದಲ್ಲಿ ತಾಯಿಗೆ ಆಸರೆಯಾಗಬೇಕಾಗಿದ್ದ ಮಗ ಪೋಲೀಸರಿಗೆ ಸೆರೆಯಾದಾಗಲೂ ಅವಳ ಆತ್ಮವಿಶ್ವಾಸ ಕಡಿಮೆಯಾಗಿಲ್ಲ. ಕಷ್ಟಪಟ್ಟು ಆಯುಷ್ಯವಿಡೀ ದುಡಿದು ಗಳಿಸಿದ ಹೊಲ ಮತ್ತು ಮನೆಗಳ ಮೇಲಿನ ಮೋಹವನ್ನು ತೊರೆದು ಮಗನನ್ನು ಬಿಡಿಸಿಕೊಂಡು ಬರುವುದನ್ನು ಪ್ರಥಮ ಆದ್ಯತೆಯಾಗಿಸುತ್ತಾಳೆ. ತನ್ನ ಅಸ್ತಿತ್ವವೇ ಆಗಿದ್ದ ವಯನಾಡಿನ ಕೃಷಿ ಚಟುವಟಿಕೆಗಳನ್ನು ಕೈಬಿಟ್ಟು, ಭೂಮಿಯನ್ನು ಪಾಲುಗೇಣಿಗೆ ಕೊಟ್ಟು, ಕೃಷಿ ಮಾಡುವುದಕ್ಕೆಂದು ಇಟ್ಟಿದ್ದ ಮೊತ್ತವನ್ನು ಮಗನ ಬಿಡುಗಡೆಗಾಗಿ ಮೀಸಲಿಟ್ಟು ಮಗಳ ಮನೆಯಲ್ಲಿ ನೆಲೆಸುತ್ತಾಳೆ.

ಸಂಪ್ರದಾಯದ ವಿರುದ್ಧ ಈಜಿದ ದಿಟ್ಟ ಮಹಿಳೆ ನಂಗೇಮ ಕ್ರಾಂತಿಯಲ್ಲಿ ನೇರವಾಗಿ ತೊಡಗಿಸಿಕೊಂಡಿಲ್ಲ. ಅವಕಾಶವಂಚಿತರ ಪರವಾದ ಹೋರಾಟದಲ್ಲಿ ತೊಡಗಿಸಿಕೊಂಡ ಪತಿಯಿಂದಾಗಿ ತಾನು ಮತ್ತು ತನ್ನ ಮಕ್ಕಳು ಕಷ್ಟಕ್ಕೆ ಈಡಾದ ಬಗ್ಗೆ ಅವಳಿಗೆ ನೋವಿದೆ. ಅಪ್ಪನ ದಾರಿಯನ್ನು ಮಗ ತುಳಿಯದಿರಲಿ ಎಂಬುದು ಅವಳ ಹಾರೈಕೆಯೂ ಆಗಿತ್ತು. ಆದರೆ ಅವಳ ಎಲ್ಲ ಪ್ರಯತ್ನಗಳನ್ನು ಮೀರಿ ಮಗ ಪರಿಸರವನ್ನು ಉಳಿಸುವ ಕಾಳಜಿಯ ನಕ್ಸಲ್ ಹೋರಾಟದಲ್ಲಿ ತೊಡಗಿಸಿಕೊಂಡಾಗ ಮೊದಲಿಗೆ ಅತೀವ ಚಿಂತೆಗೊಳಗಾಗುತ್ತಾಳೆ. ಮಗನ ನಿಷ್ಠೆ ಅಚಲವೆಂಬುದು ಸ್ಪಷ್ಟವಾದಾಗ ತನ್ನ ನಿಲುವನ್ನು ಬದಲಾಯಿಸಿಕೊಳ್ಳುತ್ತಾಳೆ. ಗಂಡಸರಿಗೆ ಸಮವಾಗಿ ನಿಂತು ಗುಡ್ಡ, ಕಾಡಿನ ನಡುವೆ ಹೊಲ-ತೋಟ ಮಾಡಿಕೊಂಡು ಪರಿಸರದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಒಳ್ಳೆಯ ಬೆಳೆ ತೆಗೆದು ಎಲ್ಲರಿಂದಲೂ ಸೈ ಅನಿಸಿಕೊಂಡ ನಂಗೇಮಳಿಗೆ ಮಣ್ಣಿನ ಮಕ್ಕಳ ಮೇಲೆ ಸಹಾನುಭೂತಿಯಿದೆ. ಶ್ರಮತತ್ವದಲ್ಲಿ ನಂಬಿಕೆಯಿದೆ. ನಿಧಾನವಾಗಿ ಮಗನ ಕಾಳಜಿಯನ್ನು ಅರ್ಥಮಾಡಿಕೊಳ್ಳುತ್ತಾಳೆ. ಅವನ ಹೋರಾಟಕ್ಕೆ ಪರೋಕ್ಷವಾಗಿ ಬೆಂಬಲ ಕೊಡುತ್ತಾಳೆ. ಮಧ್ಯರಾತ್ರಿಯಲ್ಲಿ ಮಗನ ಗೆಳೆಯರಿಗೆ ಅಡುಗೆ ಮಾಡಿ ಹೊಟ್ಟೆ ತುಂಬ ಬಡಿಸುವ ನಂಗೇಮಳಲ್ಲಿ ಕಾಣುವುದು ಕೇವಲ ತಾಯ್ತನದ ಮೋಹವಲ್ಲ, ಆಳುವವರು, ಅಧಿಕಾರಸ್ಥರು ನಡೆಸಿರುವ ದಬ್ಬಾಳಿಕೆಯನ್ನು ಅರ್ಥ ಮಾಡಿಕೊಳ್ಳುವ, ಶೋಷಿತರ ಪರವಾದ ಹೋರಾಟಕ್ಕೆ ತಮ್ಮಂಥ ಸಾಮಾನ್ಯರ ಸಹಾಯ, ಅನುಕಂಪಗಳ ಅಗತ್ಯವಿದೆ ಎಂಬ ಅರಿವು.

ಯೌವನದಲ್ಲಿಯೇ ಪತಿಯನ್ನು ಕಳೆದುಕೊಂಡ ನಂಬೂದಿರಿ ಮನೆತನದ ಹೆಣ್ಣೊಬ್ಬಳು ರೂಢಿಗಿಂತ ಭಿನ್ನವಾಗಿ ಮನೆಯ ಹೊಸ್ತಿಲು ದಾಟಿ, ಮಣ್ಣಿನ ಮಕ್ಕಳಾದ ಕೆಳವರ್ಗದವರ ನೆರವು ಪಡೆದು ನಿರಂತರ ಹೊಲದಲ್ಲಿ ದುಡಿದು ಊರವರ ಗೌರವವನ್ನು ಗಳಿಸುವ, ಆ ಮೂಲಕ 'ಪುರುಷರಿಗೆ ಮಾತ್ರ' ಮೀಸಲಾಗಿದ್ದ ಕ್ಷೇತ್ರದಲ್ಲಿ ಅವಕಾಶ ಸಿಕ್ಕಿದರೆ ಮಹಿಳೆಯರೂ ಗೆಲುವನ್ನು ಸಾಧಿಸಬಹುದು ಎಂಬುದನ್ನು

ಪ್ರತಿಪಾದಿಸುವ 'ಆಗ್ನೇಯ'ದ ನಂಗೇಮ ಹೆಣ್ಣಿನ ಅದಮ್ಯ ಇಚ್ಛಾಶಕ್ತಿಯ ಪ್ರತೀಕವಾದ ಒಂದು ವಿಶಿಷ್ಟ ಸ್ತ್ರೀಮಾದರಿಯಾಗಿ ಕಾಣುತ್ತಾಳೆ.

ಸ್ತ್ರೀವಾಚಿ ಶೀರ್ಷಿಕೆಯನ್ನು ಹೊಂದಿ, ಸ್ತ್ರೀಯ ಅಂತರಂಗದ ಭಾವನೆಗಳನ್ನು ಸ್ತ್ರೀಪರ ಕಾಳಜಿ ಮತ್ತು ಪ್ರಗತಿಪರ ಧೋರಣೆಯೊಂದಿಗೆ ನಿರೂಪಿಸುವ ಕೃತಿ 'ಬದುಕಲು ಮರೆತ ಸ್ತ್ರೀ'. ವೆಟ್ಟೂರ್ ರಾಮನ್ ನಾಯರ್ ಅವರು ಈ ಕಾದಂಬರಿಯನ್ನು ಬರೆದಿದ್ದಾರೆ. ಪವಿತ್ರ ಪ್ರೇಮದ ಹುಚ್ಚುಭ್ರಮೆಯಲ್ಲಿ ಸಹಜವಾಗಿ ಬದುಕುವುದನ್ನೇ ಮರೆತವಳಾಗಿ ಮೂವತ್ತು ವಸಂತಗಳನ್ನು ಕಳೆದ ಹೆಣ್ಣೊಬ್ಬಳು 'ಏಕಕಾಲದಲ್ಲಿ ಹೃದಯವಂತನೂ ವಂಚಕನೂ ಆಗಿದ್ದ' ಪ್ರಿಯಕರನ ಮೋಸವನ್ನು ತಿಳಿದುಕೊಂಡ ಬಳಿಕ ಮಧ್ಯವಯಸ್ಸಿನಲ್ಲಿ ಮದುವೆಯಾಗಲು ನಿರ್ಧರಿಸಿ ಹೊಸದಾಗಿ ಬದುಕು ಆರಂಭಿಸುವುದು ಇಲ್ಲಿನ ಕಥಾವಸ್ತು. ಓದು, ನಟನೆಗಳಲ್ಲಿ ಅಭಿರುಚಿ ಹೊಂದಿರುವ ವಿದ್ಯಾವಂತೆ ಭಾಮಾ, ಉತ್ತಮ ನಟನೂ, ಚಿತ್ರಕಾರನೂ, ಸಂಗೀತ ಬಲ್ಲವನೂ ಆಗಿರುವ ಸಹಪಾಠಿ ಚಂದ್ರುವನ್ನು ಗಾಢವಾಗಿ ಪ್ರೀತಿಸಿ ಅವನೊಂದಿಗೆ ಮಧುರದಾಂಪತ್ಯದ ಕನಸು ಕಂಡವಳು. ಅವರಿಬ್ಬರ ವಿವಾಹ ನಿಶ್ಚಯವಾಗಿ ಇನ್ನೇನು ಮದುವೆ ಕೆಲವೇ ದಿನಗಳಿವೆ ಎನ್ನುವಾಗ ವಿಷಮಶೀತಜ್ವರದಿಂದ ಚಂದ್ರು ಮರಣ ಹೊಂದುತ್ತಾನೆ. ಆಘಾತದಿಂದ ಹೊರಬರಲಾಗದೆ, ಕಾಲೇಜು, ಸಂಗೀತ, ನಟನೆ ಮುಂತಾಗಿ ಎಲ್ಲದರಲ್ಲೂ ಆಸಕ್ತಿ ಕಳೆದುಕೊಳ್ಳುವ ಭಾಮಾ ತಾರುಣ್ಯದ ಇಪ್ಪತ್ತಾರು ವರ್ಷಗಳನ್ನು ಪ್ರಿಯಕರನ ನೆನಪಲ್ಲೆ 'ಅವಿವಾಹಿತ ವಿಧವೆಯಾಗಿ' ಕಳೆಯುತ್ತಾಳೆ. ಅವಳ ಕೈಹಿಡಿಯಬಯಸಿ, ಒಪ್ಪಿಗೆಗಾಗಿ ಎರಡು ವರ್ಷಕಾಲ ಕಾದಿದ್ದ ರಾಜನನ್ನು ಕಟುನುಡಿಗಳಿಂದ ತಿರಸ್ಕರಿಸುತ್ತಾಳೆ. 'ನನ್ನ ಪರಿಶುದ್ಧತೆಗೇನೂ ಕುಂದು ಬಂದಿಲ್ಲ. ನನ್ನ ಚಂದ್ರೂಗೆ ನಾನು ದ್ರೋಹ ಬಗೆದಿಲ್ಲ. ಇನ್ನು ಮುಂದೆ ಅವನ ಜೊತೆಗೇ ಬದುಕುತ್ತೇನೆ' ಎಂಬ ದೃಢ ಸಂಕಲ್ಪದಿಂದ ಕೋಣೆಯಲ್ಲಿ ಚಂದ್ರುವಿನ ಫೋಟೊ ಇಟ್ಟುಕೊಂಡು ವಿರಾಗಿನಿಯಂತೆ ಬದುಕುತ್ತಾಳೆ.

ಕನಕಳ ಸ್ನೇಹದಿಂದಾಗಿ ಭಾಮಾಳಿಗೆ ತಾನು ಇದುವರೆಗೂ 'ತನ್ನವನು ಮಾತ್ರ' ಎಂದು ನಂಬಿದ್ದ ಚಂದ್ರು ತನ್ನೊಂದಿಗೆ ಹಸೆಮಣೆಯೇರಲು ಸಿದ್ಧನಾಗಿದ್ದ ಸಂದರ್ಭದಲ್ಲಿ ಅವನಿಗೆ ತನಗಿಂತಲೂ ಹಳೆಯ ಪ್ರೇಯಸಿ ಮತ್ತು ಮೂರು ವರ್ಷ ವಯಸ್ಸಿನ ಮಗುವಿದ್ದ ಸತ್ಯ ಗೊತ್ತಾಗುತ್ತದೆ. ಸರ್ವಸ್ವವೆಂದು ನಂಬಿದ್ದ ಗಂಡಸಿನ ವಂಚನೆ ಬಯಲಾದಾಗ ಭಾಮಾ ತೋರುವ ಪ್ರತಿಕ್ರಿಯೆ ಜೀವನ್ಮುಖಿಯಾದುದು. ಅದುವರೆಗಿನ ಅವಳ ಎಲ್ಲ ಯಾತನೆಗಳೂ ಹೇಳಹೆಸರಿಲ್ಲದಂತೆ ಮಾಯವಾಗುತ್ತವೆ. ಹಿಂದೊಮ್ಮೆ ತಾನು ನಿರಾಕರಿಸಿದ್ದ ರಾಜನ ಸಂಬಂಧವನ್ನು ನಿಶ್ಚಿಂತೆಯಿಂದ ಒಪ್ಪಿಕೊಳ್ಳುತ್ತಾಳೆ. ಪ್ರಸ್ತುತ ಪತ್ನಿಯನ್ನು ಕಳೆದುಕೊಂಡು ಮೂರು ಹೆಣ್ಣುಮಕ್ಕಳ ಪಾಲನೆಯಲ್ಲಿ ಹೆಣಗಾಡುತ್ತಿರುವ ರಾಜನ ಬವಣೆಗಳನ್ನು ಪ್ರತ್ಯಕ್ಷ ಕಂಡು ಅನುಕಂಪ ಹೊಂದುವ ಭಾಮಾ ತಾನು ಈ ಹಿಂದೆ ಮಾಡಿದ ತಪ್ಪನ್ನು 'ತಡವಾಗಿಯಾದರೂ ಸರಿಪಡಿಸಿಕೊಳ್ಳಲು' ನಿರ್ಧರಿಸುತ್ತಾಳೆ. ವಿಧುರನಾದ ರಾಜನ ಕೈಹಿಡಿದು ಆ ಮಕ್ಕಳಿಗೆ ತಾಯಿಯಾಗುವ

ತನ್ನ ಮನದಿಂಗಿತವನ್ನು ರಾಜನಿಗೆ ಸ್ಪಷ್ಟವಾಗಿ ತಿಳಿಸಿ ಬದುಕನ್ನು ಹೊಸದಾಗಿ ಆರಂಭಿಸುವ ಸಂಕಲ್ಪ ಮಾಡುತ್ತಾಳೆ.

ನಡುವಯಸ್ಸಿನಲ್ಲಿ ಮದುವೆಯಾಗಲು ಹೊರಟ ತನ್ನ ಬಗ್ಗೆ ಸಮಾಜವು ಆಡಿಕೊಳ್ಳಬಹುದು ಎಂಬ ಅರಿವು ಭಾಮಾಳಿಗಿದೆ. 'ನಲವತ್ತಾರರ ವಯಸ್ಸಿನಲ್ಲಿ ಒಬ್ಬಳು ಸ್ತ್ರೀ ಮದುವೆಯಾಗಲು ನಿರ್ಧರಿಸಿರುವ ಬಗ್ಗೆ ಜಗತ್ತು ಅಚ್ಚರಿಪಡಬಹುದು. ಅವಳದು ಅಕ್ಷಮ್ಯ ಅಪರಾಧವೆಂದು ನಿಂದಿಸಲೂಬಹುದು' ಎಂದು ತಿಳಿದಿದೆ. ಆದರೆ 'ಬದುಕಲು ಮರೆತ ಒಬ್ಬ ಹೆಣ್ಣಿನ ಅಂತರಾಳದ ವೇದನೆಗಳೇನಾಗಿದ್ದವೆಂಬುದರ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯ ಜಗತ್ತಿಗಿಲ್ಲವಲ್ಲ!' ಎಂಬ ಧೈರ್ಯ, ಆತ್ಮವಿಶ್ವಾಸ ಮತ್ತು ದೃಢತೆಗಳೊಂದಿಗೆ ಭಾಮಾ ತನ್ನೊಳಗೆ ಒಣಗಿಹೋಗಿದ್ದ ಮಧುರಭಾವಗಳನ್ನು ಚಿಗುರಿಸಿಕೊಳ್ಳುವ ಮನಸ್ಸು ಮಾಡುತ್ತಾಳೆ. ಹೆಣ್ಣಿಗೊಂದು ನ್ಯಾಯ ಗಂಡಿಗೊಂದು ನ್ಯಾಯ ಎಂಬಂತೆ ವರ್ತಿಸುವ ಸಮಾಜದ ಇಬ್ಬಗೆಯ ಧೋರಣೆಯ ಕುರಿತು ಅವಳಿಗೆ ಅಸಹನೆಯಿದೆ. ೧೯೫೨ ರಲ್ಲಿ ಈ ಕೃತಿಯನ್ನು ಬರೆದಿರುವ ವೆಟ್ಟೂರ ರಾಮನ್ ನಾಯರ್ ಅವರು ಆ ಕಾಲದಲ್ಲಿಯೆ ಸ್ತ್ರೀಯರ ಬದುಕು ಮತ್ತು ಚಿಂತನೆಗಳಲ್ಲಿ ಸ್ವಾತಂತ್ರ್ಯದ ಅಗತ್ಯವನ್ನು ಮನಗಂಡಿದ್ದರು ಎಂಬುದು ಈ ಕೃತಿಯ ಮೂಲಕ ತಿಳಿದುಬರುತ್ತದೆ.

ಇದೇ ಕೃತಿಯ ಇನ್ನೊಂದು ಪಾತ್ರವಾಗಿರುವ ಕನಕ ವೃತ್ತಿಯಲ್ಲಿ ವೈದ್ಯೆಯಾಗಿದ್ದು ಸಾಮಾಜಿಕ ಸಂಪ್ರದಾಯಗಳನ್ನು ಮೀರಿ ಸಂತೃಪ್ತಿಯಿಂದ ಬಾಳಿದವಳು. ಮದುವೆಯಾಗದೆಯೆ ತಾಯಿಯಾಗಿ, ಮಗುವಿನ ಜವಾಬ್ದಾರಿಯನ್ನು ತಾನೊಬ್ಬಳೇ ಹೊತ್ತು ಬೆಳೆಸಿದವಳು. ಇತರ ಸ್ತ್ರೀಯರಂತೆ 'ಒಬ್ಬ ಪುರುಷನ ಪ್ರೀತಿ-ಅನುಕಂಪ ಯಜಮಾನಿಕೆಗಳಿಗೆ ವಿಧೇಯಳಾಗಲು' ಕನಕಳಿಗೂ ಆಸೆಯಿತ್ತು. ಆದರೆ ಪ್ರೇಮಿಸಿ ಕೂಡಿದವನಲ್ಲಿ 'ಒಬ್ಬ ಗಂಡನ ಜವಾಬ್ದಾರಿಯ ಭಾವನೆ ಇರಲಿಲ್ಲ'ವೆಂಬುದು ಸ್ಪಷ್ಟವಾದ ಬಳಿಕ ಕನಕ ಚಂದ್ರುವನ್ನು ಮದುವೆಯಾಗುವಂತೆ ಕಾಡಲಿಲ್ಲ. ಈ ಪ್ರೇಮಸಂಬಂಧದಿಂದ ಅವಳು ಗರ್ಭಿಣಿಯಾದುದು ತಿಳಿದು ಚಂದ್ರು ಆನಂದಪಟ್ಟುದನ್ನು ಕಂಡ ಬಳಿಕ ಅವನನ್ನು ದ್ವೇಷಿಸುವುದೂ ಸಾಧ್ಯವಾಗಲಿಲ್ಲ. ಅಧಿಕೃತವಾದ ಮದುವೆಯಿಲ್ಲದೆ ಗರ್ಭ ಧರಿಸುವ ಸ್ತ್ರೀಗೆ 'ತಾಯ್ತನವೆಂಬುದು ಅಗ್ನಿಪರೀಕ್ಷೆ' ಯಾಗಿರುವುದರಿಂದ 'ಒಂದು ವೇಳೆ ತಾನು ಧರಿಸಿದ ಗರ್ಭವನ್ನು ನೀಡಿದ ವ್ಯಕ್ತಿಯೇ ಅದನ್ನು ಅಲ್ಲಗಳೆದರೆ' ಎಂಬ ಭಯ ಕನಕಳಿಗೆ ಇದ್ದೇ ಇತ್ತು. ಅವಳ ಪ್ರಕಾರ 'ವಿವಾಹವೆಂಬ ದುರ್ಬಲವಾದ ಬಳ್ಳಿಗೆ ಕಬ್ಬಿಣದ ಸಂಕೋಲೆಗಿಂತಲೂ ಹೆಚ್ಚು ಶಕ್ತಿಯಿದೆ ಎಂದು ಒಬ್ಬ ಸ್ತ್ರೀಗೆ ಅನ್ನಿಸುವುದು' ಇಂತಹ ಒಂದು ಕ್ಷಣದಲ್ಲಿ. ಆದರೆ ಚಂದ್ರು ಮಗುವಿನ ಪಿತೃತ್ವವನ್ನು ನಿರಾಕರಿಸದೆ ಸಂತೋಷದಿಂದ ಒಪ್ಪಿಕೊಂಡ ಕಾರಣಕ್ಕಾಗಿ 'ತನ್ನ ಬದುಕನ್ನು ಸರ್ವನಾಶ ಮಾಡಿದವನೆಂಬುದನ್ನು ಮರೆತು' ಚಂದ್ರುವನ್ನು ಉದಾರವಾಗಿ ಕ್ಷಮಿಸಿ ತನ್ನ ಬದುಕಿನಿಂದ ಬೀಳ್ಕೊಟ್ಟಳು. ತನ್ನದಾದ ಒಂದು ಮಗು ಬೇಕು ಎಂದು ಬಯಸಿದ್ದ ಕನಕಳಿಗೆ ಆ ಮಗುವಿಗೆ ತಂದೆಯಾಗಿ ಓರ್ವ ಪುರುಷ

ಜೀವಿತಾವಧಿಯ ಕಾಲ ತನ್ನೊಂದಿಗಿರಬೇಕು ಎಂಬ ಹಠವಿಲ್ಲ. ಸ್ತ್ರೀಯೊಬ್ಬಳು ಅಧಿಕೃತ ಪತಿಯಿಂದಲೆ ಗರ್ಭ ಧರಿಸಬೇಕು ಎಂಬ ಸಾಮಾಜಿಕ ನಿಯಮದಲ್ಲಿ ಅವಳಿಗೆ ನಂಬಿಕೆಯಿಲ್ಲ.

ಕನಕ ಮತ್ತು ಚಂದ್ರು 'ಮದುವೆಯಾಗದಿದ್ದರೂ ಸಹ ದಂಪತಿಗಳ ಹಾಗೆ' ಬದುಕಿದ್ದಾರೆ. ಕನಕಳ ಹೆರಿಗೆಯ ಬಳಿಕ ಚಂದ್ರು ತನ್ನೂರಿಗೆ ಮರಳಿದ ನಂತರವೂ ಆಗಾಗ ಹಣವನ್ನೂ ಅಪರಾಧ ಪ್ರಜ್ಞೆಯುಳ್ಳ ಪತ್ರಗಳನ್ನೂ ಕಳುಹಿಸಿದ್ದಾನೆ. ತನ್ನ ಮಗನಿಗೆ 'ಅವನೇ ತಂದೆ'ಯೆಂದು ಎಲ್ಲರೆದುರು ಬೆರಳು ಮಾಡಿ ತೋರಿಸುವ ಅವಕಾಶವನ್ನು ಕಲ್ಪಿಸಿಕೊಟ್ಟದ್ದು ನಿಜವಾಗಿಯೂ ಅವನ ದೊಡ್ಡ ಗುಣವೆಂದು ಭಾವಿಸಿರುವ ಕನಕಳಿಗೆ ಚಂದ್ರು ಮೋಸ ಮಾಡಿದ್ದಾನೆಂಬ ಭಾವವಿಲ್ಲ. ಯಾಕೆಂದರೆ ಈ ಪ್ರೇಮಸಂಬಂಧ ಮತ್ತು ತಾಯ್ತನಗಳು ಅವಳ ಸ್ವಂತ ಆಯ್ಕೆಯ ಪ್ರಕಾರವೆ ನಡೆದಿವೆ. ತನ್ನ ಭವಿಷ್ಯವೆಂಬುದು ಸಂಪೂರ್ಣವಾಗಿ ತನ್ನ ಕೈಯಲ್ಲೇ ಇದೆ ಎಂಬುದು ತಿಳಿದಿದೆ. ಜೀವನ ನಿರ್ವಹಣೆಗಾಗಿ ಇನ್ನೊಬ್ಬರನ್ನು ಆಶ್ರಯಿಸದೆ ಇರುವುದಕ್ಕಾಗಿ ಅವಳು ಸಂಗೀತದೆಡೆಗೆ ತನ್ನ ಸರ್ವ ಗಮನವನ್ನೂ ಹರಿಸಿ ಉತ್ತಮ ಗಾಯಕಿ ಎಂಬ ಹೆಸರು, ಹಣ ಮತ್ತು ಸಾಕಷ್ಟು ಕೀರ್ತಿಗಳನ್ನು ಸಂಪಾದಿಸಿದ್ದಾಳೆ. ಮೂರು ವರ್ಷಗಳ ನಂತರ ಚಂದ್ರು ಮರಳಿ ಬಂದಾಗ ಕನಕಳಿಗೆ ಸಂತೋಷವಾಗಿಲ್ಲ. ಏಕೆಂದರೆ ಅವಳು ಈಗಾಗಲೇ ಅವನನ್ನು ಮರೆಯಲು ನಿರ್ಧರಿಸಿದ್ದಾಳೆ. 'ಬಹಳ ದೈನ್ಯತೆಯಿಂದಲೂ, ಸಂಕೋಚದಿಂದಲೂ' ಅವನು ತನ್ನ ವಿವಾಹದ ವಿಷಯವನ್ನು ಪ್ರಸ್ತಾಪಿಸಿ ಅನುಮತಿ ಕೇಳಿದಾಗ ಸ್ವಲ್ಪವೂ ತಡಮಾಡದೆ ಅದಕ್ಕೆ ಒಪ್ಪಿ ತಮ್ಮ ಸಂಬಂಧವನ್ನು ಶಾಶ್ವತವಾಗಿ ಕೊನೆಗೊಳಿಸಿದ್ದಾಳೆ. ಹಾಗೆ ಶಾಶ್ವತವಾಗಿ ಅವನನ್ನು ಬೀಳ್ಕೊಡುವುದಕ್ಕೆ ಮುನ್ನ ಸಾಕಷ್ಟು ದೂರಾಲೋಚನೆಯಿಂದ ಅವನನ್ನು ಸ್ಟುಡಿಯೋಗೆ ಕರೆದೊಯ್ದು ಮಗುವನ್ನು ಹಿಡಿದು ಅವನೊಂದಿಗೆ ನಿಂತು ಫೋಟೊ ತೆಗೆಸಿ ಇರಿಸಿಕೊಂಡಿದ್ದಾಳೆ.

ಮಗ ಬೆಳೆದ ನಂತರ 'ನಿನ್ನ ಅಪ್ಪ ಇವನೇ' ಎಂದು ಧೈರ್ಯವಾಗಿ ತೋರಿಸುವುದಕ್ಕಾಗಿ ಇನ್ನೇನು ಕಡಿದುಕೊಳ್ಳಲಿರುವ ಸಂಬಂಧವನ್ನು ಫೋಟೊದಲ್ಲಿ ಸ್ಥಾಪಿಸುವ, ಹಿಡಿದಿಡುವ ಕನಕಳಿಗೆ ಒಂದರ್ಥದಲ್ಲಿ ಚಂದ್ರುವಿನಿಂದ ಬಿಡುಗಡೆ ಬೇಕಾಗಿತ್ತು. ಬದ್ಧತೆಯಿಲ್ಲದ, ಬಲವಂತದ ಸಂಬಂಧದಲ್ಲಿ ಅವಳಿಗೆ ನಂಬಿಕೆಯಿಲ್ಲ. ಚಂದ್ರುವಿನಿಂದ ದೂರವಾದ ಬಳಿಕ ಇನ್ನಾರಿಗೂ ಮನಸ್ಸು ಕೊಡದೆ, ಯಾರ ಆಸರೆಯೂ ಇಲ್ಲದೆ ಕೊನೆಯವರೆಗೂ ಒಬ್ಬಳೇ ಇರಬಲ್ಲೆನೆಂಬ ವಿಶ್ವಾಸದೊಂದಿಗೆ ಬದುಕಿದ್ದಾಳೆ. ಹಲವು ವಿವಾಹ ಪ್ರಸ್ತಾಪಗಳು ಬಂದಾಗಲೂ ಒಪ್ಪಿಕೊಳ್ಳದೆ ಒಂಟಿಯಾಗಿಯೆ ಉಳಿದಿದ್ದಾಳೆ. ಅದಕ್ಕೆ ಕಾರಣವೂ ಇದೆ. 'ಹಳೆಯದನ್ನೆಲ್ಲ ಮರೆತು ಒಬ್ಬನನ್ನು ಜೀವನಪೂರ್ತಿ ವಂಚಿಸುವುದು ಅಥವಾ ಎಲ್ಲವನ್ನೂ ಮನಬಿಚ್ಚಿ ಹೇಳಿ ಅವನ ಕರುಣೆ-ಸಹಾನುಭೂತಿಗಳಿಗೆ ಸೆರಗೊಡ್ಡಿ ಕಾಯುವುದು ಅರ್ಥಹೀನ' ಎಂಬುದು ಕನಕಳ ಅನಿಸಿಕೆ. ಹಾಗೆ ತನ್ನನ್ನು ಮೆಚ್ಚಿದ ಪುರುಷರನ್ನು ತಿರಸ್ಕರಿಸಿ ನಿರಾಶೆಪಡಿಸುವುದರಲ್ಲಿ ಒಳಗೊಳಗೇ ಆನಂದವನ್ನೂ ಪಟ್ಟುಕೊಂಡಿದ್ದಾಳೆ. ಹಾಗೆಂದು ಪ್ರೇಮಿಸಿದ ಒಬ್ಬನಿಗೆ ನಿಷ್ಠಳಾಗಿ, ವಿಧೇಯಳಾಗಿ

ಉಳಿಯಬಯಸಿ ಕನಕ ವಿರಾಗಿನಿಯಾಗಿಲ್ಲ. ಮನವೊಪ್ಪಿದ ಯುವಕರೊಂದಿಗೆ ದೈಹಿಕ ಸಂಪರ್ಕ ಬೆಳೆಸಿ ಸುಖಪಟ್ಟಿದ್ದಾಳೆ; ಅವರು ನೀಡಿದ ಆರ್ಥಿಕ ಸಹಾಯವನ್ನು ಬೇಡವೆನ್ನದೆ ಸ್ವೀಕರಿಸಿದ್ದಾಳೆ.

ಸ್ತ್ರೀಯ ಪಾವಿತ್ರ್ಯವನ್ನು ಕೊನೆಯ ಸೀಮೆಯ ತನಕವೂ ನಿರಂತರವಾಗಿ ಕಾಪಾಡಿಕೊಂಡು ಬರುವುದರಲ್ಲಿ ವಿಶ್ವಾಸವಿಲ್ಲದ ಕನಕಳಿಗೆ ಆದರ್ಶದ ಹುಚ್ಚು ಭ್ರಮೆಗಳಿಲ್ಲ. ಬದುಕಿನ ಮೌಲ್ಯನಿರ್ಣಯದಲ್ಲಿ ಗೊಂದಲಗಳಿಲ್ಲ. ಆಗಿಹೋದ ಘಟನೆಗಳ ಬಗ್ಗೆ ಖೇದವಿಲ್ಲ. ಯಾವ ಪುರಸ್ಕಾರವೂ ಇಲ್ಲದ ತ್ಯಾಗದಲ್ಲಿ ನಂಬಿಕೆಯಿಲ್ಲ. ಎಂತಲೇ ಯಾರಿಗೂ ಹೊರೆಯಾಗದೆ, ಯಾರ ಅನುಕಂಪವನ್ನೂ ಬೇಡದೆ, ಪುರುಷರ ಅವಲಂಬನೆಯಿಲ್ಲದೆ ಸ್ವತಂತ್ರವಾಗಿ ಜೀವಿಸಿದ್ದಾಳೆ. ಮಗನನ್ನು ಅವನ ಇಚ್ಛೆಯಂತೆ ಚೆನ್ನಾಗಿ ಓದಿಸಿ ಒಬ್ಬ 'ಒಳ್ಳೆಯ ಪ್ರಾಕ್ಟೀಸ್ ಹೊಂದಿರುವ ಡಾಕ್ಟರ್' ಆಗಿಸಿ ತೃಪ್ತಳಾಗಿದ್ದಾಳೆ. 'ಯಾವ ಸಂಬಂಧವೂ ಅನಿವಾರ್ಯವಲ್ಲ' ಎಂಬುದು ಸ್ವಂತ ಅನುಭವದಿಂದ ಕನಕ ಕಲಿತುಕೊಂಡ ಪಾಠವಾಗಿದೆ. ತನ್ನೊಂದಿಗಿನ ಸಂಬಂಧಕ್ಕೆ ನ್ಯಾಯ ಒದಗಿಸದೆ ಪಲಾಯನ ಮಾಡಿದ ಚಂದ್ರು ಭಾಮಳ ಭಾವನೆಗಳೊಂದಿಗೆ ಆಟವಾಡಿರುವುದನ್ನು ತಿಳಿದಾಗ ಬಹಳಷ್ಟು ಎಚ್ಚರಿಕೆಯಿಂದ ಭಾಮಳಿಗೆ ಈ ಕಟುವಾಸ್ತವವನ್ನು ಮನಗಾಣಿಸಿ ಭ್ರಮೆಯ ಲೋಕದಿಂದ ಹೊರತರುವಲ್ಲಿ ಯಶಸ್ವಿಯಾಗುತ್ತಾಳೆ. ಕನಕ ಗೊಡ್ಡು ಸಂಪ್ರದಾಯದ ಬೇಲಿಗಳನ್ನು ಮುರಿದು ಜೀವಪರವಾಗಿ ಬದುಕುವ ಸ್ವತಂತ್ರ ಚಿಂತನೆಯುಳ್ಳ ಸುಶಿಕ್ಷಿತ ಸ್ತ್ರೀಯಾಗಿದ್ದಾಳೆ. ಕನಕಳ ಅಮ್ಮನಾದರೂ ಅಷ್ಟೆ. 'ತನಗಿಂತ ಹೆಚ್ಚು ಓದಿರುವ, ಹೆಚ್ಚು ಲೋಕಾನುಭವವುಳ್ಳ ಮಗಳ ಜೀವನದಲ್ಲಿ ತನ್ನ ಗೊಡ್ಡುನಂಬಿಕೆ ಸಂಪ್ರದಾಯಗಳನ್ನು' ಹೇರಿ ಅಡ್ಡಿಪಡಿಸಿದವರಲ್ಲ. ಮಗಳ ಸ್ವಾವಲಂಬೀ ಬದುಕಿಗೆ ಒತ್ತಾಸೆಯಾಗಿ ನಿಂತವರು ಎಂಬುದನ್ನು ಗಮನಿಸಬಹುದು.

'ನನ್ನಜ್ಜನಿಗೊಂದಾನೆಯಿತ್ತು' ಕಾದಂಬರಿಯ ಕುಞ್ಞಪಾತುಮ್ಮಳಿಗೆ ಅಪ್ಪ ಕೋರ್ಟುವ್ಯಾಜ್ಯದಲ್ಲಿ ಮನೆ, ಚಿನ್ನ, ಮುಂತಾದ ಸಂಪತ್ತನ್ನೆಲ್ಲ ಕಳೆದುಕೊಂಡು ಸಾಮಾನ್ಯ ವ್ಯಕ್ತಿಯಾದ ಬಳಿಕ ತನ್ನ ನಂಬಿಕೆಗಳ ಪೊಳ್ಳುತನದ ಅರಿವಾಗುತ್ತದೆ. ಹುಟ್ಟಿ ಬೆಳೆದ ಊರು ಮನೆ ಬಿಟ್ಟು ಬಂದ ಅಪ್ಪ ಅಮ್ಮನೊಂದಿಗೆ ಪರಿಚಯವಿಲ್ಲದ ಹೊಸ ಹಳ್ಳಿಯ ಒಂದು ಪುಟ್ಟ ಗುಡಿಸಲಿನಲ್ಲಿ ವಾಸ ಮಾಡುವಂತಾದಾಗ ಮನೆಯಿಂದ ಹೊರಬಂದು ಸಾಮಾನ್ಯ ಜನರೊಂದಿಗೆ ಬೆರೆಯುವ ಮತ್ತು ಸುತ್ತಲಿನ ಬದುಕಿನ ವಾಸ್ತವವನ್ನು ಗ್ರಹಿಸುವ ಅವಕಾಶವಾಗುತ್ತದೆ. ನೆರೆಕರೆಯಲ್ಲಿ ವಾಸಕ್ಕೆ ಬಂದ ಸುಶಿಕ್ಷಿತ ಹೆಣ್ಣು ಆಯಿಶಾಳ ಗೆಳೆತನ ದೊರೆಯುತ್ತದೆ. ಅವಳ ಅಣ್ಣ ನಿಸ್ಸಾರ್ ಅಹಮದ್‌ನ ಕಡೆಗಿನ ಆಕರ್ಷಣೆ ಹಾಗೂ ಅವರ ಕುಟುಂಬದ ಸಾಹಚರ್ಯದಿಂದ ಅದುವರೆಗೂ ಅಮ್ಮನಿಗೆ ವಿಧೇಯಳಾಗಿದ್ದ ಕುಞ್ಞಪಾತುಮ್ಮ ಬದಲಾಗುತ್ತಾಳೆ. ಇದುವರೆಗೂ ತಾನು ನಂಬಿದ್ದೆಲ್ಲ ಸುಳ್ಳು ಎಂದು ಅರಿತುಕೊಳ್ಳುತ್ತಾಳೆ. ಆಯಿಶಾಳಿಂದ ಅಕ್ಷರ ಕಲಿತು, ನಡೆನುಡಿಗಳನ್ನು ತಿದ್ದಿಕೊಳ್ಳುತ್ತಾಳೆ. ಅಮ್ಮನ ವಿರೋಧ ಕಟ್ಟಿಕೊಳ್ಳಬೇಕಾಗುವುದೆಂದು

ತಿಳಿದೂ ಸತ್ಯ ಮಾತಾಡುವ ಧೈರ್ಯ ಮಾಡುತ್ತಾಳೆ. ಮಗಳ ಮೈಯಲ್ಲಿ ಸೈತಾನ ಸೇರಿಕೊಂಡಿದೆ ಎಂದು ಭಾವಿಸಿ ಅದನ್ನು ಉಚ್ಚಾಟಿಸಲು ಅಮ್ಮ ಮತ್ತು ಅಪ್ಪ ಕರೆಸಿದ ಮೌಲವಿಯ ಕೈಯಿಂದ ಬೆತ್ತ ಎಳೆದು ತುಂಡುಮಾಡುವ ಧೈರ್ಯ ತೋರುತ್ತಾಳೆ. ಸ್ತ್ರೀವಿರೋಧಿಯಾಗಿರುವ ಸಂಪ್ರದಾಯದ ತಪ್ಪು ನಿರ್ವಚನವನ್ನು ಒಪ್ಪದೆ, ಆಚರಣೆಗಳ ಸರಿಯಾದ ಅರ್ಥವನ್ನು ಶೋಧಿಸುವ ವೈಚಾರಿಕತೆಯನ್ನು ಅನಕ್ಷರಸ್ಥೆಯೂ ಮುಗ್ಧೆಯೂ ಆಗಿರುವ ಕುಞಿಪಾತುಮ್ಮ ಬೆಳೆಸಿಕೊಳ್ಳುತ್ತಾಳೆ. ಕೃತಿಯ ಕೊನೆಯಲ್ಲಿ ಜೀವವಿರೋಧಿಯಾದ ಪರಂಪರೆಯ ಹಿಡಿತದಿಂದ ತಾನು ಹೊರಬರುವುದಲ್ಲದೆ, ತನ್ನಮ್ಮನನ್ನೂ ಹೊರತರುತ್ತಾಳೆ. ಬದಲಾಗಿರುವ ಕಾಲಘಟ್ಟದಲ್ಲಿ ತನ್ನಜ್ಜನಿಗೆ ಇತ್ತೆನ್ನಲಾದ ಆನೆ ಕೇವಲ ಒಂದು 'ಕುಯ್ಯಾನೆ' (ಕ್ರಿಮಿ) ಆಗಿತ್ತು ಎಂಬ ಸತ್ಯವನ್ನು ಅಮ್ಮನೂ ಒಪ್ಪಿಕೊಳ್ಳುವಂತೆ ಮಾಡುತ್ತಾಳೆ.

'ದುರ್ಬೀಜ' ಕಾದಂಬರಿಯ ಕುಞ್ಞಕ್ಕ ಕುಪ್ಪಸ ತೊಡುವುದು ತನ್ನ ಹಕ್ಕು ಎಂದು ಭಾವಿಸಿದ್ದ ಆತ್ಮಾಭಿಮಾನಿಯಾಗಿದ್ದಳು ಮತ್ತು ತಾಳತ್ತೇದಿಲ್ ತರವಾಡಿನ ಮಟ್ಟಿಗೆ 'ಕುಪ್ಪಸ ತೊಟ್ಟ ಮೊತ್ತಮೊದಲ ಹೆಣ್ಣಾ'ಗಿದ್ದಳು. ನಂಬೂದಿರಿಗಳ ಮನೆಯ ಓಣಂ ದಿನಗಳ ಹಾಡು ಕುಣಿತಗಳ ಆಚರಣೆಯಲ್ಲಿ ಭಾಗವಹಿಸುವ ಆಹ್ವಾನ ಬಂದಾಗ "ಅವರ ಮನೆಯೊಳಗೆ ಕಾಲಿಡಬೇಕಿದ್ರೆ ರವಿಕೆ ಕಳಚಿ ಕಂಕುಳಲ್ಲಿಟ್ಟುಕೊಂಡು ತಾನೇ ಹೋಗ್ಬೇಕು? ಅದು ನನ್ನಿಂದ ಸಾಧ್ಯವಿಲ್ಲ" (ಪು. ೪೧) ಎಂದು ಖಡಾಖಂಡಿತವಾಗಿ ನಿರಾಕರಿಸಿ ದೊಡ್ಡ ಗಲಾಟೆಗೆ ಕಾರಣಳಾಗುತ್ತಾಳೆ. ತೆರೆದೆದೆಯಿಂದ ಇರಬೇಕಾದ ಅಸಹ್ಯಕ್ರಮವನ್ನು ಇಷ್ಟಪಡದ ಅನೇಕ ಹೆಣ್ಣುಮಕ್ಕಳು ಕುಪ್ಪಸ ಹಾಕಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆಯುವುದಕ್ಕಾಗಿ ಇಸ್ಲಾಂಗೆ ಮತಾಂತರಗೊಳ್ಳುತ್ತಿದ್ದ ವಿಶೇಷವಾದ ಉಲ್ಲೇಖವೊಂದು 'ದುರ್ಬೀಜ' ಕೃತಿಯಲ್ಲಿ ಸಿಗುತ್ತದೆ. ಗೋವಿಂದನ್ ಕುಟ್ಟಿಯ ಮತಾಂತರದ ಸಂದರ್ಭದಲ್ಲಿ ಕಪ್ಪು ಬಳೆಗಳನ್ನು ಧರಿಸಿದ ಬೆಳ್ಳಗಿನ ಕೈಗಳನ್ನು ಕಂಡು ಅಚ್ಚರಿಪಡುತ್ತಾನೆ. "ಮತಾಂತರ ಮಾಡ್ಕೊಂಡು ಕುಪ್ಪಸ ಹಾಕ್ಕೊಳ್ಳೋಕೆ ಹೆಂಗಸರೂ ಬರ್ತಾರೆ. ನಮ್ಮೂರಿನ ಅಕ್ಕಸಾಲಿಗನ ಮಗಳು ಕುಪ್ಪಸ ಹಾಕ್ಕೊಂಡು ಇಸ್ಲಾಂ ಧರ್ಮಕ್ಕೆ ಸೇರಿದ್ದು ಹೋದ ತಿಂಗಳಲ್ವೆ?" (ಪು. ೨೨೫) ಅವನ ಜೊತೆಗಾರನ ಈ ಮಾತಿನಿಂದ ಮಹಿಳೆಯರೂ ಮತಾಂತರಗೊಳ್ಳುವುದಕ್ಕಾಗಿ ಬರುವ ವಿಷಯ ತಿಳಿಯುತ್ತದೆ. ಹೆಣ್ಣುಮಕ್ಕಳು ಇಸ್ಲಾಂಗೆ ಮತಾಂತರಗೊಳ್ಳುವುದನ್ನು 'ಕುಪ್ಪಾಯ ತೊಡುವುದು' ಎಂದು ಗುರುತಿಸಲಾಗುತ್ತಿದ್ದುದಕ್ಕೆ ಇದೇ ಕಾರಣವಿರಬಹುದು.

ಇದೇ ಕೃತಿಯ ಚುಮ್ಮುಕುಟ್ಟಿಯಮ್ಮನದು ಒಂದು ವಿಶಿಷ್ಟವಾದ ಸ್ತ್ರೀಪಾತ್ರ. ಖಾಯಂ ಆಗಿ ಒಬ್ಬ ಗಂಡನಿರದೆ ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ಪುರುಷರನ್ನು ಗಂಡನೆಂದು ಒಪ್ಪಿ ಬಾಳುವ ಮೂಲಕ ಸಮಾಜದಲ್ಲಿ ಸ್ತ್ರೀಗೆ ಮಾತ್ರ ವಿಧಿಸಲಾಗಿರುವ ಏಕಪತಿತ್ವದ ಕಟ್ಟುಪಾಡನ್ನು ಮುರಿದವಳು ಆಕೆ. ಅಪ್ಪುಕುಟ್ಟನ್, ನಂಬಿಯಾರ್, ಕುಂಗನ್ ನಾಯರ್... ಹೀಗೆ ಬೇರೆ ಬೇರೆಯವರೊಡನೆ ಬಾಳ್ವೆ ಮಾಡಿ

'ನೀತಿಗೆಟ್ಟವಳು' ಎನಿಸಿಕೊಂಡವಳು. ಅವಳು ಕಳವು ಮಾಲನ್ನು ಇರಿಸಿಕೊಳ್ಳುವವಳು ಎಂಬ ಗುಮಾನಿಯೂ ಊರವರಿಗಿದ್ದು ಅವಳ ಬಗ್ಗೆ ಗುಸುಗುಸು ಮಾತನಾಡಿಕೊಳ್ಳುತ್ತಾರೆ. ಊರವರಿಗೆ ತನ್ನ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲವೆಂದು ತಿಳಿದಿದ್ದರೂ ಚುಮ್ಮುಕುಟ್ಟಿಯಮ್ಮ ಒಂದಿಷ್ಟೂ ವಿಚಲಿತಳಾದವಳಲ್ಲ. ವೈಭವದ ವಸ್ತ್ರ ಒಡವೆ ಧರಿಸಿ ಊರಿನ ಅನಭಿಷಿಕ್ತ ರಾಣಿಯಂತೆ ಬದುಕಿದ್ದಾಳೆ. ಜಾತ್ರೆ ಮುಂತಾದ ಕಾರ್ಯಕ್ರಮಗಳಿಗೆ ಸುಂದರವಾಗಿ ಅಲಂಕರಿಸಿಕೊಂಡು ತೆರಳುತ್ತಾಳೆ. ಊರಿನಿಂದ ಬಹಿಷ್ಕೃತನಾದ ಯುವಕ ಗೋವಿಂದನ್ ಕುಟ್ಟಿ ಕೊರೆವ ರಾತ್ರಿಯಲ್ಲಿ ಆಶ್ರಯ ಬೇಡಿ ಬಂದಾಗ ಮನೆಗೆ ಸೇರಿಸಿಕೊಳ್ಳುತ್ತಾಳೆ. 'ಚುಮ್ಮುಕುಟ್ಟಿಯಮ್ಮನ ಇತಿಹಾಸ ಬಲ್ಲವರು ಇಂದು ಆಕೆಯ ಜೊತೆ ಸೇರುವುದಿಲ್ಲ'ವಾದ್ದರಿಂದ ಬಂದು ಹೋಗುವ ಮಂದಿಯ ಕಾಟವಿಲ್ಲದೆ ಅವಳ ಮನೆಯಲ್ಲಿ ಆರಾಮವಾಗಿ ದಿನಗಳೆಯುವುದು ಗೋವಿಂದನ್ ಕುಟ್ಟಿಗೆ ಸುಲಭವಾಗುತ್ತದೆ. ಆದರೆ ಚುಮ್ಮುಕುಟ್ಟಿ ಅವನಿಗೆ ಆಸರೆ ನೀಡಿದುದರ ಹಿಂದೆ ಇಂಥ ವ್ಯಾವಹಾರಿಕ ಕಾರಣಗಳಿಲ್ಲ. ಅಸಹಾಯಕನಾಗಿರುವ ಗೋವಿಂದನ್ ಕುಟ್ಟಿಯಲ್ಲಿ ಅವನದೇ ವಯಸ್ಸಿನವನಾದ ತನ್ನ ಗತಿಸಿದ ಮಗನನ್ನು ಕಾಣುವ ಚುಮ್ಮುಕುಟ್ಟಿಯಮ್ಮನ ಧೈರ್ಯ, ಅನುಕಂಪ, ಹೃದಯವಂತಿಕೆಗಳು ಒಟ್ಟು ಸ್ತ್ರೀಕುಲದ ಜೀವಪರ ಮೌಲ್ಯಗಳಾಗಿ ಪ್ರಕಟವಾಗುತ್ತವೆ.

'ದುರ್ಬೀಜ' ಕಾದಂಬರಿಯಲ್ಲಿ ಬರುವ ಕೊಳನಬಟ್ಟದ ಚಕ್ಕಮ್ಮ ಯೌವನದಲ್ಲಿ ಊರ ಗಂಡಸರನ್ನು ತನ್ನ ತಾಳಕ್ಕೆ ತಕ್ಕಂತೆ ಕುಣಿಸಿದವಳು. ಮಗಳು ಸುಂದರಿಯನ್ನೂ ತನ್ನ ದಾರಿಯಲ್ಲಿಯೆ ನಡೆಸುತ್ತಾಳೆ. ಮದ್ಯ ತಯಾರಿಸಿ, ಮಣ್ಣಿನಲ್ಲಿ ಅಡಗಿಸಿಟ್ಟು, ಶ್ರೀಮಂತರಿಗಷ್ಟೇ ಒದಗಿಸುತ್ತಾಳೆ. ರುಚಿಯಾದ ಮೀನಿನ ಊಟ, ಮದ್ಯ, ಹಾಗೂ ಅಗತ್ಯವಿದ್ದವರಿಗೆ ಮಲಗುವ ವ್ಯವಸ್ಥೆಯನ್ನೂ ಒದಗಿಸುವ ಅವಳ ಮನೆ ಯಾವಾಗಲೂ ಗಂಡಸರಿಂದ ಗಿಜಿಗುಡುತ್ತಿರುತ್ತದೆ. ಅವಳನ್ನು ಕಂಡಾಗ ಮಹಿಳೆಯರು ತಮ್ಮೊಳಗೆ ಪಿಸುಗುಡುತ್ತಾರೆ ಎಂಬುದನ್ನು ಬಿಟ್ಟರೆ ಊರ ಸಂಭಾವಿತರು, ಪ್ರತಿಷ್ಠಿತರು... ಯಾವ ಪುರುಷರಿಗೂ ಅವಳ ಬಗ್ಗೆ ಆಕ್ಷೇಪವಿಲ್ಲ. ಆದಾಯದ ಮೂಲವಾಗಿರುವ ತನ್ನ ಕಸುಬಿನ ಬಗ್ಗೆ ಚಕ್ಕಮ್ಮನಿಗೆ ಕೀಳರಿಮೆಯಿಲ್ಲ. ಅಧಿಕೃತವಾದ ಒಬ್ಬ ಗಂಡನನ್ನು ಹೊಂದಿರುತ್ತಲೇ ಮನೆಯನ್ನು ಅನೈತಿಕ ವ್ಯವಹಾರದ ಕೇಂದ್ರವಾಗಿಸಿ ತನ್ನ ಮತ್ತು ಮಗಳ ಸೌಂದರ್ಯವನ್ನು ಜಾಣ್ಮೆಯಿಂದ ಬಳಸಿಕೊಳ್ಳುವ ಚಕ್ಕಮ್ಮ ಸಂಪ್ರದಾಯವು ಸ್ತ್ರೀಯರಿಗೆ ವಿಧಿಸಿರುವ ಸದಾಚಾರದ ಗೆರೆಗಳನ್ನು ದಾಟಿದ್ದಾಳೆ.

'ಕೊಚ್ಚರೇತ್ತಿ' ಕೃತಿಯ ಕುಞಿಪೆಣ್ಣು ಅರೆಯನ್ನರ ಸಂಪ್ರದಾಯದಂತೆ ತನ್ನ ಹಕ್ಕಿನ ಗಂಡನಾಗಬೇಕಾದ ನಾರಾಯಣನನ್ನು ಮದುವೆಯಾಗಲು ಒಪ್ಪದೆ ಕೊಚ್ಚುರಾಮನನ್ನು ಇಷ್ಟಪಡುತ್ತಾಳೆ. ದುರುಳನಾದ ನಾರಾಯಣ ಅವಳ ಇಚ್ಛೆಗೆ ವಿರುದ್ಧವಾಗಿ ಮುಟ್ಟಲು ಬಂದಾಗ ಮಾನರಕ್ಷಣೆಗಾಗಿ ಕುಡುಗೋಲು ಹಿಡಿದು ದಿಟ್ಟವಾಗಿ ಎದುರಿಸುತ್ತಾಳೆ. ತನ್ನ ಪ್ರೇಮವನ್ನು ಕೊಚ್ಚುರಾಮನೊಂದಿಗೆ ನೇರವಾಗಿ ಅಭಿವ್ಯಕ್ತಿಸುತ್ತಾಳೆ ಮಾತ್ರವಲ್ಲ ಮನೆಯವರು ಬಲವಂತಿಸಿದರೆ ತಾನು ನೀರಿಗೆ ಹಾರಿ ಪ್ರಾಣ

ಕಳೆದುಕೊಳ್ಳುತ್ತೇನೆಂಬ ನಿಶ್ಚಯವನ್ನೂ ಮಾಡುತ್ತಾಳೆ. 'ಬಯಸಿದವನನ್ನಲ್ಲದೆ ಬೇರೆಯವನನ್ನು ಸೇರಲಾರೆ' ಎಂಬ ಮಾನಸಿಕ ಶುದ್ಧತೆಯ ಈ ಕಲ್ಪನೆ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ವಿಶಿಷ್ಟವಾದುದಾಗಿದೆ ಮಾತ್ರವಲ್ಲ ಆತ್ಮಹತ್ಯೆ ಹೆಣ್ಣಿನ ಮಟ್ಟಿಗೆ ವ್ಯವಸ್ಥೆಯನ್ನು ಪ್ರತಿಭಟಿಸುವ ಒಂದು ವಿಧಾನವೂ ಹೌದು. ಆಕೆಯನ್ನು ಬಯಸಿದ್ದ ಮಾವನ ಮಗ ನಾರಾಯಣ ಇನ್ನಾಕೆ ತನಗೆ ಸಿಗುವವಳಲ್ಲವೆಂದು ಖಾತರಿಯಾದಾಗ, 'ತನಗಿಲ್ಲದ್ದು ಯಾರಿಗೂ ಸಿಗದಿರಲಿ' ಎಂಬ ಪುರುಷಕ್ರೌರ್ಯದಲ್ಲಿ ಆಕೆ ಮೀಯುವ ನೀರಿಗೆ 'ಆಕರಿಕೆ ಸೊಪ್ಪು' ಹಾಕಿ ನರಳುವಂತೆ ಮಾಡಿದರೂ ಅವಳು ತನ್ನ ನಿಲುವಿನಿಂದ ಹಿಂದೆ ಸರಿಯುವುದಿಲ್ಲ. ಕೆಲಸದಲ್ಲಿ ಜಾಣೆಯಾದ ಅವಳ ಮೇಲೆ ಪ್ರೀತಿಯಿರುವ ಅಪ್ಪ ಮತ್ತು ಅಣ್ಣನ ಬೆಂಬಲದಿಂದಾಗಿ ಕುಞಿಪೆಣ್ಣು ಸಮುದಾಯದ ಕ್ರಮವನ್ನು ಮೀರಿ ಕೊಚ್ಚುರಾಮನನ್ನೆ ವರಿಸುವುದು ಸಾಧ್ಯವಾಗುತ್ತದೆ. ಮದುವೆಯ ಬಳಿಕ ಮುಟ್ಟಾದಾಗಲೂ ಸಮುದಾಯದ ವಾಡಿಕೆಯಂತೆ ಸೂತಕದ ಮನೆಯಲ್ಲಿ ಕೂರದೆ, ಗಂಡನೇ ನಿರ್ಮಿಸಿಕೊಟ್ಟ ದಿಣ್ಣೆಯಲ್ಲಿ ಗಂಡನ ಕಾವಲಿನಲ್ಲಿ ಆಕೆ ಮಲಗುತ್ತಾಳೆ. ಅಕ್ಷರ ಕಲಿಯದ ಕುಞಿಪೆಣ್ಣು ತೋರುವ ಈ ದಿಟ್ಟತನದ ಹಿಂದೆ ಕಾಡಬದುಕನ್ನು ಪ್ರವೇಶಿಸುತ್ತಿರುವ ಆಧುನಿಕತೆಯ ನೆರಳಿದೆ. ಅನ್ಯಾಯವೆಂದು ಅನಿಸಿದ್ದನ್ನು ಪ್ರಕಟವಾಗಿ ಎದುರಿಸುವ ಗಟ್ಟಿತನವಿದೆ. ಪರಿವರ್ತನೆಯಿಂದ ಒಳಿತಾಗುವುದಿದ್ದರೆ ಅದನ್ನು ದಿಟ್ಟವಾಗಿ ಒಪ್ಪಿಕೊಳ್ಳುವ, ಅದಕ್ಕಾಗಿ ಸಂಪ್ರದಾಯವನ್ನು ಮೀರಲು ಹಿಂಜರಿಯದ ಸ್ತ್ರೀಯ ಆತ್ಮಸ್ಥೈರ್ಯವಿದೆ.

ಸಾರಾ ಜೋಸೆಫ್ ಅವರ ರಚನೆಯಾಗಿರುವ 'ಕೊನೆಯ ಸೂರ್ಯಕಾಂತಿ' ಇಳಿವಯಸ್ಸಿನ ಮಹಿಳೆಯೊಬ್ಬಳ ಪ್ರೇಮದ ಕತೆ. ಸೂಸನ್ನಾ ಪಾರಂಪರಿಕ ಮಾದರಿಗಳಿಗಿಂತ ಭಿನ್ನವಾದ ಮತ್ತು ವಿಶಿಷ್ಟವಾದ ಒಂದು ಸ್ತ್ರೀ ಪ್ರತಿಭಟನೆಯ ಮಾದರಿಯಾಗಿದ್ದಾಳೆ. ತನಗಿಂತ ಬಹಳ ಕಿರಿಯನಾದ ಹುಡುಗನನ್ನು ಅವಳು ಪ್ರೇಮಿಸಿದ್ದಾಳೆ. ಕಾಣೆಯಾಗಿರುವ ಅವನಿಗಾಗಿ ಕಾಯುತ್ತ ಮತ್ತಷ್ಟು ಮುದುಕಿಯಾಗಿದ್ದಾಳೆ. 'ಕನ್ನಡಿ ಆಕೆಯ ಕೈ ಬಿಡುವಷ್ಟು' ವಯಸ್ಸಾಗಿರುವಾಗಲೂ 'ಗುಲಾಬಿಯಿನ್ನೂ ಕೆಂಪಗಿದೆ, ನಿನ್ನ ಸ್ಪರ್ಶಕ್ಕಾಗಿ ಹಾತೊರೆಯುತ್ತ, ಬಣ್ಣ ಕಳಕೊಂಡು ಬಾಡಿ ಹೋಗಲೆಂದು' ಎಂಬಂಥ ಪ್ರಣಯಗೀತೆಯನ್ನು ಹಾಡಿಕೊಳ್ಳುತ್ತ ಆಶಾವಾದಿಯಾಗಿ ಕಾದಿದ್ದಾಳೆ. ಇದಕ್ಕಾಗಿ ಮನೆಯಲ್ಲೂ ಸಮಾಜದಲ್ಲೂ ಬಹಳಷ್ಟು ಪ್ರಶ್ನೆ, ವ್ಯಂಗ್ಯ, ಅವಮಾನಗಳನ್ನು ಎದುರಿಸಿದ್ದಾಳೆ. 'ನ್ಯಾಯಾಧೀಶರುಗಳಿಗೆ ಹೆದರದೆ, ಅವರ ಲಜ್ಜೆಗೆಟ್ಟ ಕಥೆಗಳೆಡೆಗೆ ಲಕ್ಷ್ಯವೀಯದೆ, ಅವರ ತೀರ್ಪಿನ ಬಗ್ಗೆ ನಾಚಿಕೆಪಡದೆ' ತನ್ನ ಪ್ರೀತಿಯ ಗುಂಗಿನಲ್ಲಿ ಅವನನ್ನು ಹುಡುಕುತ್ತ ಓಣಿಗಳಲ್ಲಿ ಅಲೆಯುತ್ತಾಳೆ. ಕೊನೆಗೊಮ್ಮೆ ಹುಚ್ಚಾಸ್ಪತ್ರೆಯಲ್ಲಿ ಇಹದ ಗೊಡವೆಯಿಲ್ಲದೆ ಮಲಗಿದ್ದ ಪ್ರಿಯಕರನ ಗುರುತು ಹಿಡಿಯುತ್ತಾಳೆ. ಕೋಣೆಯ ಮಲಮೂತ್ರಗಳ ವಾಸನೆಗೆ ಸ್ವಲ್ಪವೂ ಅಸಹ್ಯಸಿಕೊಳ್ಳದೆ ಅವನಿಗೆ ತನ್ನ ಗುರುತಾದೀತು ಎಂಬ ನಿರೀಕ್ಷೆಯಲ್ಲಿ ಬಲು ಪ್ರೀತಿಯಿಂದ ಅವನನ್ನು ಉಪಚರಿಸುತ್ತಾಳೆ. ಭೌತಿಕ ಐಶ್ವರ್ಯ, ಅಂತಸ್ತುಗಳನ್ನು ಉಳ್ಳ ಮತ್ತು 'ಒಬ್ಬ ಹೆಣ್ಣಿಗೆ

ಆತ್ಮೀಯರಾಗುವ ಸಾಮರ್ಥ್ಯವಿದ್ದ' ತನ್ನವರೆಲ್ಲರನ್ನೂ ಬಿಟ್ಟು ಶುದ್ಧ ಪ್ರೀತಿಯೆಡೆಗೆ ತುಡಿಯುವ ಸೂಸನ್ನಾ ಸಮಾಜದ ಯಾವ ಒತ್ತಡಕ್ಕೂ ಮಣಿಯದೆ ತನಗೆ ಬೇಕಾದ್ದನ್ನು ಆಯ್ದುಕೊಳ್ಳುವ ಮೂಲಕ ಹೆಣ್ಣಿನ ಆಯ್ಕೆಯ ಸ್ವಾತಂತ್ರ್ಯವನ್ನು ಎತ್ತಿಹಿಡಿಯುತ್ತಾಳೆ. ಇನ್ನೊಬ್ಬರನ್ನು ಅವಲಂಬಿಸಿರಬೇಕಾದ ಇಳಿವಯಸ್ಸಿನಲ್ಲಿ ಶುದ್ಧಪ್ರೇಮದ ಹಂಬಲ ಮತ್ತು ಆಯ್ಕೆಯ ಸ್ವಾತಂತ್ರ್ಯವನ್ನು ಬಯಸಿ ಮನೆಯಿಂದ ಹೊರಗಿಳಿಯುತ್ತಾಳೆ. ಈ ಮೂಲಕವಾಗಿ ಸಮಾಜದ ರೀತಿ–ನೀತಿ, ನಿರ್ಬಂಧಗಳ ಬೇಲಿಯನ್ನು, 'ಕುಟುಂಬದ ಮರ್ಯಾದೆ' ಎಂಬ ಮಿಥ್ಯೆಯನ್ನು ತಿರಸ್ಕರಿಸುತ್ತಾಳೆ.

'ದೇವರ ಕಣ್ಣು' ಕಾದಂಬರಿಯ ನಫೀಸಕ್ಕ ಗಂಡ ಬಿಟ್ಟವಳೆಂಬ ಮುಜುಗರವಿಲ್ಲದೆ, ಚೆಲ್ಲು ಚೆಲ್ಲಾಗಿ ವರ್ತಿಸುತ್ತ, ಎಗ್ಗಿಲ್ಲದೆ ನಗುತ್ತ ಮನೆಯ ಯಜಮಾನನಾದ ದೊಡ್ಡಪ್ಪನ ಕೆಂಗಣ್ಣಿಗೆ ಗುರಿಯಾಗುವವಳು. 'ಕಟ್ಟಿಕೊಂಡವ ಓಡಿ ಹೋದದ್ದು ಅವಳ ನಾಲಗೆಯಿಂದ, ಪಾಪ ಅವನೀಗ ಅಂಗಡಿ ಇಟ್ಟುಕೊಂಡು ಚಿಲ್ಲರೆ ವ್ಯಾಪಾರ ಮಾಡುತ್ತಿದ್ದಾನೆ, ಅವಳನ್ನು ಮನೆಗೆ ಸೇರಿಸಬಾರದು' ಎಂದು ಘರ್ಜಿಸುವ ದೊಡ್ಡಪ್ಪ ಕೂಡ ಅವಳ ಬರುವಿಕೆಯನ್ನು ತಡೆಯಲಾರರು. 'ಅವಳ ಗಂಡ ತುಂಬಾ ಹೊಡೆಯುತ್ತಿದ್ದ, ಅವಳು ಪ್ರತಿಭಟಿಸಿದ್ದಕ್ಕೆ ಬಿಟ್ಟುಹೋದ' ಎಂಬ ಸತ್ಯವನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. ಹೆಂಗಸರ ದೃಷ್ಟಿಯಲ್ಲಿ 'ಭಯಂಕರ ಘೋರ್ಸಿನವಳು' ಆಗಿರುವ ನಫೀಸಕ್ಕ ಹೂವಿನಂತೆ ರೊಟ್ಟಿ ತಟ್ಟುವ ಜಾಣೆಯಾಗಿ ಎಲ್ಲರಿಗೂ ಬೇಕಾದವಳು. ಯಾರಿಗೂ ತಿಳಿಯದಂತೆ ಒಂದು ರೊಟ್ಟಿಯನ್ನು ಬಾಲಕ ಕೋಯಾನಿಗೀಯುವ, ತೊಡೆ ಮೇಲೆ ಮಲಗಿಸಿಕೊಂಡು ಬೆಚ್ಚಗೆ ಅಪ್ಪಿ ಮುದ್ದಿಸುವ, ರಾತ್ರಿ ಒತ್ತಿ ಮಲಗುವ ನಫೀಸ ತಣಿಯದ ಬಯಕೆಗಳ ಪ್ರತೀಕವಾಗಿದ್ದಾಳೆ. ಸಮಾಜವು ನಿರೀಕ್ಷಿಸುವಂತೆ ತ್ಯಜಿಸಿದ ಗಂಡನಿಗಾಗಿ ಅಳುತ್ತ ಕೂರುವ ದುಃಖತಪ್ತ ಹೆಣ್ಣಾಗಿ ಉಳಿಯದೆ, ಕುಞಯಮ್ಮದು ಮಾಷ್ಟ್ರ ಒಲುಮೆಗೆ ಸ್ಪಂದಿಸಿ ಬದುಕಲ್ಲಿ ಮತ್ತೊಮ್ಮೆ ಉತ್ಸಾಹ ತುಂಬಿಕೊಳ್ಳುವ ತುಂಬು ಜೀವನಪ್ರೀತಿಯ ನಿರ್ಭಿಡೆಯ ಹೆಣ್ಣಾಗಿದ್ದಾಳೆ.

'ಹಗ್ಗ' ಕಾದಂಬರಿಯಲ್ಲಿ ಎರಮತ್ರ ಮಠದ ಸ್ವಚ್ಛತೆಯ ಕೆಲಸ ಮಾಡುತ್ತಿರುವ ಕುಂಜಿತೇವಿ, ಮಾಣಿ ಹಾಗೂ ಕುಂಜಿಕ್ಕ ಎಂಬ ಮಹಿಳೆಯರ ನಡುವೆ ಊರಿನ ಮಹಾಸ್ವಾಮಿಯವರು (ಮಹಾರಾಜ) ಹಾಗೂ ಮಹಾರಾಣಿಯ ಕುರಿತಾಗಿ ನಡೆಯುವ ಮಾತುಕತೆಯೊಂದನ್ನು ಇಲ್ಲಿ ಉದಾಹರಿಸಬಹುದು. ಬಾಲ್ಯಕಾಲದಲ್ಲೊಮ್ಮೆ ಮಹಾರಾಜರ ಸಂಭ್ರಮದ ಮೆರವಣಿಗೆಯನ್ನು ಖುದ್ದಾಗಿ ಕಂಡಿರುವ ಕುಂಜಿತೇವಿಗೆ ರಾಜರಾಣಿಯರ ಬಗ್ಗೆ ಅಪಾರವಾದ ಗೌರವ, ಭಕ್ತಿಗಳಿವೆ. ಆದರೆ ಇದುವರೆಗೂ ಮಹಾರಾಜರನ್ನು ಕಂಡಿರದ ಕುಂಜಕ್ಕನಿಗಿರುವುದು 'ಅರಸರು ಹ್ಯಾಗಿರ್ತಾರೆ?' ಎಂಬ ಕುತೂಹಲ ಮಾತ್ರ, ಮೈತುಂಬ ಬಂಗಾರದ ಆಭರಣಗಳನ್ನು ಹೊಂದಿರುವ ರಾಜಪತ್ನಿಯ ವರ್ಣನೆ ಕೇಳಿ 'ನಾವೂ ಹೆಣ್ಣು, ಅವ್ರೂ ಹೆಣ್ಣು' ಎಂದು ಮಾಣಿ ನಿಟ್ಟುಸಿರಿಟ್ಟು ಸುಮ್ಮನಾಗುತ್ತಾಳೆ. 'ಒಂದು ಜಗಳ ಬೇಕೇ ಬೇಕು'

ಎಂಬಂಥ ಸ್ವಭಾವದವಳಾದ ಕುಂಜಿಕ್ಕ ಮೇಲುವರ್ಗದ ಮಹಿಳೆಯರ ಶ್ರೇಷ್ಠತೆಯನ್ನು ಪ್ರಶ್ನಿಸದೆ ಒಪ್ಪಿಕೊಳ್ಳುವವಳಲ್ಲ. "ನಾನು ಅಂಥವರನ್ನು ಕಂಡಿಲ್ಲ. ಆದ್ರೂ ನಂಗೆ ಒಂದ್ ವಿಷ್ಯ ಗೊತ್ತು... ನಾವೂ ಹೆಣ್ಣುಗಳು; ಆಕೇನೂ ಹೆಣ್ಣು. ನಾವು ಬಸಿರಾಗೋ ಹಾಗೇ, ನಾವು ಹೆರೋ ಹಾಗೇ ಆಕೇನೂ ಬಸಿರಾಗೋದು ಮತ್ತು ಹೆರೋದು" (ಪು. ೭, ಹಗ್ಗ–ಭಾಗ ೧) ಎಂದು ಕಡ್ಡಿಮುರಿದಂತೆ ಹೇಳುತ್ತಾಳೆ. "ಹಾಗೆಲ್ಲ ಹೇಳ್ಬಾರ್ದು, ಸಿರಿಹೊಟ್ಟೆ ತುಂಬೋದು, ಸಿರಿಹೊಟ್ಟೆ ಇಳಿಯೋದು ಅಂತ ಹೇಳ್ಬೇಕು" ಎಂದು ಕುಂಜಿತೇವಿ ಬುದ್ಧಿ ಹೇಳಿದರೂ ಕುಂಜಿಕ್ಕ ಸುಮ್ಮನಾಗುವುದಿಲ್ಲ. ರಾಜದ್ರೋಹದ ಆ ಮಾತುಗಳನ್ನು ಕೇಳಲಾಗದೆ ಇತರ ಹೆಂಗಸರು ಕಿವಿ ಮುಚ್ಚಿಕೊಂಡು ದೂರ ಸರಿದರೂ, ಯಾರ ಕಿವಿಗಾದರೂ ಬಿದ್ದರೆ ಎಂಬ ಭಯದಿಂದ ಕುಂಜಿತೇವಿ ಗದರಿಸಿದರೂ "ನಮ್ಮ ಹೇಲಿಗೆ ದುರ್ವಾಸ್ನೆ ಇರೋ ಹಾಗೆ ಅವ್ರ ಹೇಲಿಗೂ ದುರ್ವಾಸ್ನೆ ಇರುತ್ತೆ. ಯಾವಾಗಾದ್ರೊಂದೊದ್ಸಲ ನಾವು ಹೂಸು ಬಿಡ್ತೀವಿ. ಅವ್ರೂ ಹೂಸು ಬಿಡ್ತಾರೆ. ಅವ್ರಿಗೂ ಗುಟ್ಟಿನ ಗೆಣೆಕಾರರು ಇರ್ತಾರೆ. ನಮ್ಗೇನೈತೋ ಅಷ್ಟೇ ಅವ್ರಿಗೂ ಇರೋದು" ಎಂದು ಕುಂಜಿಕ್ಕ ಹೇಳಿಯೇ ಹೇಳುತ್ತಾಳೆ. ಸ್ತ್ರೀಯರು ಯಾವ ಜಾತಿ, ಅಂತಸ್ತುಗಳಿಗೆ ಸೇರಿದವರಾಗಿದ್ದರೂ ಅಂತಿಮವಾಗಿ ಅವರು ಇತರರಂತೆಯೆ ಎಲ್ಲ ಸ್ತ್ರೀಗುಣಗಳನ್ನು ಹೊಂದಿದವರೇ ಎಂಬುದು ಅವಳ ನಿಲುವು. "ನಾನು ಹೇಳ್ತಿರೋದು ಸತ್ಯಾನೇ ಅಲ್ವಾ? ಸತ್ಯ ಹೇಳೋದು ತಪ್ಪಾ? ಅಪರಾಧಾನಾ?" ಎಂದು ಗಟ್ಟಿಯಾಗಿ ಕೇಳುವ ಕುಂಜಿಕ್ಕಳ ಕೆಚ್ಚಿನಲ್ಲಿ ಸಂಪ್ರದಾಯದ ಹೆಸರಿನಲ್ಲಿ ತಮ್ಮನ್ನು ಕೀಳಾಗಿ ನಡೆಸಿಕೊಳ್ಳುವ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಆಕ್ರೋಶವಿರುವುದನ್ನು ಗುರುತಿಸಬಹುದು.

ಮೇಲಿನ ಉದಾಹರಣೆಗಳಲ್ಲಿ ಗಮನಿಸಬಹುದಾದಂತೆ ಸ್ತ್ರೀಯರು ಸಮಾಜವು ವಿಧಿಸಿರುವ ಸಂಪ್ರದಾಯ, ನಂಬಿಕೆಗಳಿಂದ ಬದುಕು ಸಾಗುವುದಿಲ್ಲ ಎಂಬುದು ಸ್ಪಷ್ಟವಾದಾಗ ಇನ್ನೊಬ್ಬರಿಗೆ ತೊಂದರೆಯಾಗದಂತೆ ಸಂಪ್ರದಾಯದ ಚೌಕಟ್ಟುಗಳನ್ನು ನವಿರಾಗಿ ದಾಟುತ್ತಾರೆ. ಆ ಮೂಲಕ ವರ್ತಮಾನದ ಬದುಕನ್ನು ಸಹ್ಯವಾಗಿಸಿಕೊಳ್ಳುತ್ತಾರೆ. ವ್ಯವಸ್ಥೆಯ ಭಂಜನೆ ಈ ಸ್ತ್ರೀಯರ ಉದ್ದೇಶವಲ್ಲ. ಯಾವುದೇ ತಾತ್ವಿಕ ಪ್ರೇರಣೆಯಿಲ್ಲದೆ ಸಂದರ್ಭದ ಒತ್ತಡಕ್ಕೆ ಪ್ರತಿಕ್ರಿಯೆ ಎಂಬಂತೆ ಸಹಜವಾಗಿ ಈ ಮೀರುವ ಪ್ರಕ್ರಿಯೆ ನಡೆಯುತ್ತದೆ.

೨.೧.೪. ಪಿತೃವ್ಯವಸ್ಥೆಯ ಕ್ರೌರ್ಯ: ಮುದುಡುವ ಸ್ತ್ರೀಜೀವಗಳು

ಸಮಾಜದ ನಿರ್ಬಂಧಗಳು ಹೆಣ್ಣಿನ ಬದುಕನ್ನು ಅತಂತ್ರಗೊಳಿಸುತ್ತವೆ. ಪಿತೃಪ್ರಧಾನ ಸಮಾಜದ ಸ್ವಾರ್ಥಕ್ಕೆ ಸ್ತ್ರೀಯರ ಬದುಕು ಬಲಿಯಾಗುವುದನ್ನು ಹಲವು ಕೃತಿಗಳು ಗುರುತಿಸಿವೆ. ಜೀವನವನ್ನೆಲ್ಲ ಕುಟುಂಬದ ಹಿತಕ್ಕಾಗಿ ಸವೆಸುವ ಸ್ತ್ರೀಯರ ಸ್ವಂತ ಭಾವನೆ, ಅಭಿಪ್ರಾಯಗಳಿಗೆ ಮನೆಯಲ್ಲಿ ಬೆಲೆ ಸಿಗುವುದಿಲ್ಲ. ಸಮಾಜದ ಸ್ತ್ರೀವಿರೋಧಿ ಧೋರಣೆಯು ಪುರುಷರ ಬೇಜವಾಬ್ದಾರಿಯ ಮತ್ತು ಕ್ರೌರ್ಯದ ವರ್ತನೆಗಳನ್ನು ಗಣನೀಯ ಸಂಗತಿಯೇನಲ್ಲ ಎಂಬಂತೆ ನಿರ್ಲಕ್ಷಿಸುತ್ತದೆ. ಇದರಿಂದಾಗಿ

ಸ್ತ್ರೀಯರು ಆತಂಕಕ್ಕೆ ಒಳಗಾಗಬಹುದು. ಅಸುರಕ್ಷತೆಯು ಗಾಢವಾದಾಗ ಸಂಸಾರದಿಂದ ವಿಮುಖರಾಗಬಹುದು. ವಿವಶರಾಗಿ ಕುಟುಂಬದ ಹೊರಗಿನ ಸಂಬಂಧಗಳಲ್ಲಿ ನೆಮ್ಮದಿ ಹುಡುಕಲು ಯತ್ನಿಸಬಹುದು. ಅದರಿಂದಾಗಿ ಇನ್ನಷ್ಟು ಸಮಸ್ಯೆಗಳು ಎದುರಾಗಬಹುದು. ಸ್ತ್ರೀಯರ ಭಾವನೆಗಳನ್ನು ಗೌರವಿಸುವುದರಿಂದ ಸಮಾಜದ ಸ್ವಾಸ್ಥ್ಯ ಮತ್ತು ಸಂಸಾರದ ಸಾಮರಸ್ಯಗಳನ್ನು ಕಾಪಾಡುವುದು ಸಾಧ್ಯವೆಂಬುದನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಸಂಸಾರದ ನಿರ್ವಹಣೆ ಮತ್ತು ನಿರ್ಧಾರಗಳಲ್ಲಿ ಪತಿ-ಪತ್ನಿ ಇಬ್ಬರಿಗೂ ಸಮಾನ ಅಧಿಕಾರ ಮತ್ತು ಜವಾಬ್ದಾರಿಗಳಿರಬೇಕು ಎಂಬ ಪ್ರತಿಪಾದನೆ ಕೃತಿಗಳಲ್ಲಿ ವ್ಯಕ್ತವಾಗಿದೆ.

ಸೇತು ಮಾಧವನ್ ಬರೆದ 'ಗುರುತುಗಳು' ಸ್ತ್ರೀ ಗುರುತನ್ನು, ಹೆಣ್ಣಿನ ಹೆಜ್ಜೆಗಳನ್ನು ಹುಡುಕುವ ಕಾದಂಬರಿ. ಸ್ತ್ರೀ ಶಿಕ್ಷಣ, ಉದ್ಯೋಗ, ಮದುವೆ, ತಾಯ್ತನ ಮುಂತಾದ ಹಲವು ಪ್ರಶ್ನೆಗಳನ್ನು ಸ್ತ್ರೀಪ್ರಜ್ಞೆಯೊಂದಿಗೆ ವಿಶ್ಲೇಷಿಸುತ್ತದೆ. ಪ್ರಿಯಂವದಾ, ನೀತೂ ಮತ್ತು ರೇವತಿ ಎಂಬ ಮೂವರು ವಿದ್ಯಾವಂತೆಯರು ಈ ಕಾದಂಬರಿಯಲ್ಲಿ ಗುರುತಿಸಬಹುದಾದ ಪ್ರಮುಖ ಸ್ತ್ರೀಪಾತ್ರಗಳು. ಉನ್ನತ ಶಿಕ್ಷಣ ಪಡೆದು ಉತ್ತಮ ಉದ್ಯೋಗದಲ್ಲಿರುವ ಪ್ರಿಯಂವದಾ ಹಾಗೂ ರೇವತಿ, ಮೀನಾಕ್ಷಿಪಾಳೆಯ ಎಂಬ ಊರಿನ ಭೂಮಿಕೆಯಲ್ಲಿ ನಿಂತು, ಸಮಕಾಲೀನ ಬದುಕು ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷ ಪಾರಮ್ಯದ ಅಸಹಿಷ್ಣುತೆಗಳನ್ನು ಎದುರಿಸುವ ಪ್ರಯತ್ನ ಮಾಡುತ್ತಾರೆ. ಹೆಣ್ಣು ಶರೀರ ಮಾತ್ರವೆ ಆಗಿರುವ ಪುರುಷಾಧಿಪತ್ಯಕ್ಕೆ ಪ್ರತಿರೋಧ ತೋರುತ್ತ ತನ್ನತನವನ್ನು, ಸ್ತ್ರೀತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಾರೆ.

ಕಲಿಯಲು ಜಾಣೆಯಾಗಿದ್ದು ಓದು ಮುಂದುವರೆಸುವ ಅಪೇಕ್ಷೆ ಹೊಂದಿದ್ದವಳು ಪ್ರಿಯಾ. ಆದರೆ 'ಹರೆಯದ ಹುಡುಗಿಯನ್ನು ಹಾಸ್ಟೆಲಲ್ಲಿ ಬಿಡುವಂಥ ದುರ್ಗತಿ ಇನ್ನೂ ಬಂದಿಲ್ಲ' ವೆಂದು ಅಜ್ಜಿ ವಿರೋಧಿಸಿದ ಕಾರಣ ಕಲಿಕೆ ನಿಲ್ಲಿಸಬೇಕಾಯಿತು. ಈಗಲೇ ಮದುವೆ ಬೇಡವೆಂದೂ, ತಾನು ಮುಂದೆ ಓದಬೇಕಾಗಿದೆ ಎಂದೂ ತರವಾಡಿನ ಮೂಲೆಯಲ್ಲಿ ಅವಳು ಅತ್ತಾಗ 'ಆಲಿಸಲು ಯಾರೂ ಇರಲಿಲ್ಲ.' ಶ್ರೀಮಂತ ಮನೆತನದ ಶಂಕರ್ ಮೆನೊನ್ ದೊಡ್ಡ ಕಾರಿನಲ್ಲಿ ಹೆಣ್ಣು ಕೇಳಲು ಬಂದಾಗ, ಪ್ರೈಮರಿ ಸ್ಕೂಲು ಹೆಡ್ಮಾಸ್ತ್ರಾಗಿದ್ದ ತಂದೆಗೆ ಉಳಿದೆಲ್ಲ ಅಂಶಗಳೂ ಗೌಣವಾಗಿ 'ಅವಳ ಪರಮಭಾಗ್ಯ' ಎಂಬಂತೆ ಆ ಮನೆಗೆ ಸೊಸೆಯಾಗಿ ಕಳಿಸಿಕೊಡಲಾಯಿತು. ವಧುಪರೀಕ್ಷೆಗೆ ಬಂದ ರಂಜಿತ್‌ನ ತಂದೆ, ಕನ್ಯೆಯ ಮುಖದ ಐಸಿರಿ ಮತ್ತು ಕುಲೀನ ವರ್ತನೆಯಿಂದಲೆ 'ಈಕೆ ತನ್ನ ಮಗನಿಗೆ ಸರಿಯಾದ ಕುಲವಧು' ಎಂದು ನಿಶ್ಚಯಿಸಿ, ಯಾರೊಂದಿಗೂ ಹೊಂದಿಕೊಳ್ಳದೆ ಕುಟುಂಬಕ್ಕೆ ಸಮಸ್ಯೆಯಾಗಿರುವ ತನ್ನ ಹಟಮಾರಿ ಮಗನನ್ನು 'ಪಳಗಿಸಿ ದಾರಿಗೆ ತರುತ್ತಾಳೆ' ಎಂಬ ನಂಬಿಕೆಯಿಂದ ಪ್ರಿಯಾಳನ್ನು ಸೊಸೆಯಾಗಿ ತಂದುಕೊಂಡರು. ಕುಟುಂಬದ ಪುರೋಹಿತರು ಜಾತಕ ಹೊಂದುವುದಿಲ್ಲ ಎಂದಾಗ ಬೇರೆ ಜ್ಯೋತಿಷಿಗಳನ್ನು ಅರಸಿ ಜಾತಕಗಳನ್ನು ಹೊಂದಿಸಿಕೊಂಡರು. ಈ ವಿವಾಹದಿಂದ ಒಬ್ಬಾಕೆ ಹೆಣ್ಣಿನ

ಬದುಕು ಹಾಳಾಗುತ್ತದೆ ಎಂಬ ಅರಿವಿದ್ದೂ ಮಗನಿಗಾಗಿ ಒಳ್ಳೆಯ ಹುಡುಗಿಯನ್ನೇ ಆಯ್ಕೆ ಮಾಡುವ ಹಿರಿಯರ ನಿರ್ಧಾರದ ಹಿಂದೆ, ಗಂಡು ಕೆಟ್ಟರೂ ಹೆಣ್ಣು ಆತನನ್ನು ಸಹಿಸಿಕೊಂಡು, ಸಂಸಾರವನ್ನು ನಿಭಾಯಿಸಬಲ್ಲಳು ಎಂಬ ಪಾರಂಪರಿಕವಾದ ಸ್ತ್ರೀವಿರೋಧಿ ಧೋರಣೆಯನ್ನು ಗುರುತಿಸಬಹುದು.

ಅಮೆರಿಕೆಯಲ್ಲಿ ಓದಿ ಉದ್ಯೋಗದಲ್ಲಿದ್ದ ರಂಜಿತ್‌ನನ್ನು ಮದುವೆಯಾಗಿ ಅಮೆರಿಕಕ್ಕೆ ತೆರಳಿದ ಪ್ರಿಯಂವದಾಳಿಗೆ ಪತಿಯ ಭಾವರಹಿತವಾದ ಸಾಂಗತ್ಯದಲ್ಲಿ ಬದುಕಲು ಸಾಧ್ಯವಾಗಲಿಲ್ಲ. ಕೇವಲ ಕಾಮತೃಪ್ತಿಗಾಗಿಯಷ್ಟೇ ಹೆಂಡತಿಯನ್ನು ಸಮೀಪಿಸುವ ಅವನ ಮೃಗೀಯ ವರ್ತನೆಯೊಂದಿಗೆ ಹೊಂದಿಕೊಳ್ಳುವುದಾಗದೆ ಕೊರಗುತ್ತಾಳೆ. ಒಂದು ಮಗು ಹುಟ್ಟಿದ ಬಳಿಕವೂ ಗಂಡನ ವರ್ತನೆಯಲ್ಲಿ ಪ್ರೀತಿ ಕಾಣದೆ ವ್ಯವಹಾರವೆ ಕಂಡಾಗ ಪ್ರತಿದಿನದ ಜಗಳ ವಾಗ್ವಾದಗಳಿಂದ ಬೇಸತ್ತ ಪ್ರಿಯಾ ಪತಿಯಿಂದ ದೂರವಾಗುವ ಗಟ್ಟಿ ನಿರ್ಧಾರ ಮಾಡುತ್ತಾಳೆ. ಪುಂಡು ಪಾಳೇಗಾರನಾಗಿಯಷ್ಟೆ ಭಾಸವಾಗುವ ಪತಿಯ ಪಾಶವೀಶಕ್ತಿಗೆ ಪ್ರತಿಯಾಗಿ ನಿಲ್ಲುವ ವ್ಯಗ್ರತೆಯಲ್ಲಿ ಸ್ವಯಂ ಕರಗಿಹೋಗುವ ತನ್ನ ಅಸ್ತಿತ್ವವನ್ನು ಅರಸುವುದಕ್ಕಾಗಿಯೆ ಪ್ರಿಯಾ ಗಂಡನಿಂದ ಬಿಡುಗಡೆಗೆ ಹಾತೊರೆಯುತ್ತಾಳೆ ಎಂಬುದು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ.

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯ ಸೌಂದರ್ಯವೆ ಅವಳಿಗೆ ಶತ್ರುವಾಗಿದೆ. ಒಂಟಿಯಾದ ಹೆಣ್ಣು ಚೆಲುವೆಯೂ ಆಗಿದ್ದರೆ ಸದಾ ತನ್ನನ್ನು ಅನುಭವಿಸಲು ಯತ್ನಿಸುವವರಿಂದ ರಕ್ಷಿಸಿಕೊಳ್ಳಬೇಕಾಗುತ್ತದೆ. ಗೋವಾದ ಸೆಮಿನಾರ್‌ನಲ್ಲಿ ಪರಿಚಯವಾಗುವ ಸಣ್ಣ ವಯಸ್ಸಿನ ಯುವಕರು ಮಧ್ಯವಯಸ್ಸಿನ ಪ್ರಿಯಾಳಿಗೆ ನಿರಂತರ ಪ್ರೇಮನಿವೇದನೆಯ ಎಸ್.ಎಂ.ಎಸ್.ಗಳನ್ನು ಕಳುಹಿಸಿ ರೇಜಿಗೆ ಉಂಟುಮಾಡುತ್ತಾರೆ. ಕಟುವಾದ ಮರುಸಂದೇಶ ಕಳಿಸಿ ಅವರು ತನ್ನ ಪಾಲಿಗೆ 'ಮಕ್ಕಳಂತೆ' ಎಂಬುದನ್ನು ನೆನಪಿಸಿ ತಪ್ಪಿಸಿಕೊಳ್ಳಬೇಕಾಗುತ್ತದೆ. ಅಪಾರ ಬುದ್ಧಿವಂತನೆಂದು ಅಭಿಮಾನಿಸುವ ಪ್ರೊಫೆಸರರನ್ನು ಏಕಾಂತದಲ್ಲಿ ಭೇಟಿಯಾದ ಪ್ರಿಯಾಳಿಗೆ ಆತ ತನ್ನ ಸೌಂದರ್ಯದ ಆರಾಧಕನಾಗಿ ಮಾರ್ಪಟ್ಟಿರುವುದು ತಿಳಿದು ಆಘಾತವಾಗುತ್ತದೆ. ಅವರು ಕೈ ಹಿಡಿದೆಳೆದು ಕೂರಿಸಿದಾಗ ಬಾಲ್ಯದಲ್ಲಿ ಮಾವನ ಮಗ ಉಣ್ಣಿ ತನ್ನನ್ನು ಬಲವಾಗಿ ತಬ್ಬಿ ಚುಂಬಿಸಿದ ನೆನಪಾಗಿ ಅಸಹ್ಯಪಡುತ್ತಾಳೆ. ದಿಕ್ಕು ತೋಚದ ಅಸಹಾಯಕ ಸ್ಥಿತಿಯಲ್ಲಿ ತಾನು ಅತೀವ ಯಾತನೆ ಪಟ್ಟ ಆ ಕ್ಷಣವನ್ನೂ, ತಾನು ಹೆಣ್ಣು, ತನ್ನ ದೇಹ ಸುಂದರವಾಗಿದೆ ಎಂಬ ಅಂಶಗಳನ್ನೂ ಪ್ರೊಫೆಸರ್ ಮತ್ತೆ ನೆನಪಿಸಿದಂತೆ ಭಾಸವಾಗುತ್ತದೆ. ಸಂಶೋಧನೆ ನಡೆಸುವ ಹುಡುಗಿಯರ ಮೇಲೆ ವಯಸ್ಸಾಗಿರುವ ಕೆಲವು ರಿಸರ್ಚ್ ಗೈಡ್‌ಗಳು ಕೆಟ್ಟ ಸಲಿಗೆ ತೆಗೆದುಕೊಳ್ಳುವುದರ ಬಗ್ಗೆ ಅವಳಿಗೆ ಅರಿವಿದೆ. ಮುಖತಃ ಭೇಟಿಗೆ ಮುನ್ನ ಪ್ರೊಫೆಸರರ ಬೌದ್ಧಿಕತೆಯನ್ನು ಮೆಚ್ಚಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡಬಯಸಿದ್ದ ಪ್ರಿಯಾ, ಅವರೊಂದಿಗಿನ ಸಂಪರ್ಕವನ್ನೇ ಕಡಿದುಕೊಳ್ಳಲು ನಿರ್ಧರಿಸಿ ಅವರ ಮಿಂಚಂಚೆ ವಿಳಾಸವನ್ನು

ಅಳಿಸಿಬಿಡುತ್ತಾಳೆ. ಪ್ರಿಯಂವದಾಳಂಥ ಸುಶಿಕ್ಷಿತೆಯೂ, ಸ್ವಾವಲಂಬಿಯೂ ಆಗಿರುವ ಹೆಣ್ಣು ಕೂಡ ಪುರುಷನ ಕೆಟ್ಟ ದೃಷ್ಟಿಯಿಂದ ದೂರವಾಗುವುದಕ್ಕೆ ಅವನಿಂದ ಮರೆಯಾಗಿ ಉಳಿಯುವ ವಿಧಾನವನ್ನು ಅನುಸರಿಸುವುದು ವಿಶೇಷವಾಗಿದೆ. ಪ್ರೊಫೆಸರರ ವರ್ತನೆ ತಪ್ಪು ಎಂದು ನೇರವಾಗಿ ಅವರ ಮುಖಕ್ಕೆ ಹೇಳದೆ, ಮುಖಾಮುಖಿಯಾಗಿ ಎದುರಿಸದೆ, ಅವರಿಂದ ತಪ್ಪಿಸಿಕೊಳ್ಳುವ ದಾರಿಯನ್ನಷ್ಟೆ ಪ್ರಿಯಾ ಆಯ್ದುಕೊಂಡಿದ್ದಾಳೆ. ದೂರು ಹೇಳಿದವರ ಸದಾಚಾರವನ್ನೆ ಶಂಕಿಸುವ ಪಿತೃವ್ಯವಸ್ಥೆಯ ನಿರ್ಬಂಧಗಳು ಸ್ತ್ರೀಯರ ಅಸಹಾಯಕತೆಗೆ ಕಾರಣವಾಗಿವೆ.

ಇಂಥ ಅನುಭವಗಳ ಪರಿಣಾಮವಾಗಿ ಪ್ರಿಯಾ ಸಂಬಂಧಗಳು ತನ್ನ ಬದುಕಿನಲ್ಲಿ ಉಳಿಸಿದ ಎಲ್ಲ ಗುರುತುಗಳಿಂದ ಕಳಚಿಕೊಳ್ಳಬಯಸುತ್ತಾಳೆ. ಹಿಮಾಲಯದ ಬಿಳಿ ಪೆಂಗ್ವಿನ್‌ಗಳ ಗುಂಪಿನಲ್ಲಿ ಸೇರಿಕೊಂಡು ತನ್ನ ಚಹರೆಯನ್ನು ಮರೆಸಲು ಯತ್ನಿಸುತ್ತಾಳೆ. ಹಿಮದ ಶಿಖರದಲ್ಲಿ ಗುಂಪಾಗಿ ಅಲೆವ ಪೆಂಗ್ವಿನ್‌ಗಳು ಅವಳ ಕಣ್ಣಿಗೆ 'ಪೂರ್ವಜನ್ಮದಲ್ಲಿ ಪತಿಯನ್ನು ಕಳೆದುಕೊಂಡ, ಪತಿಯಿಂದ ಪರಿತ್ಯಕ್ತರಾದ ವಿಧವೆಯರು' ಎಂಬಂತೆ ಭಾಸವಾಗುತ್ತವೆ. ಬದುಕು ಕೊಟ್ಟ ಆಘಾತಗಳು ಪ್ರಿಯಾಳ ನೆಮ್ಮದಿಯ ಕನಸನ್ನು ಒಡೆದಿವೆ. ಲೌಕಿಕದ ಬದುಕಿಗೆ ಅಂಟಿಕೊಳ್ಳುವುದರಿಂದ ನೋವು ಮಾತ್ರ ದಕ್ಕುವುದೆಂದು ಅರ್ಥವಾದಾಗ ಶಾಶ್ವತವಾದ ಶಾಂತಿಯನ್ನು ಅರಸಿ ಅಧ್ಯಾತ್ಮದೆಡೆಗೆ ತುಡಿಯುತ್ತಾಳೆ. ಬಹುತೇಕ ಸ್ತ್ರೀಯರಂತೆ ತನ್ನ ವೈರಾಗ್ಯವನ್ನು ಚಿಂತನೆಗಷ್ಟೇ ಸೀಮಿತವಾಗಿಸದೆ, ಶಾಂತಿಯನ್ನರಸಿ ಶೈತ್ಯಪ್ರದೇಶಕ್ಕೆ ಹೊರಡುವ ಮೂಲಕ ತನ್ನ ಗುರುತನ್ನು ಕಂಡುಕೊಳ್ಳುತ್ತಾಳೆ. ಪ್ರಿಯಂವದಾಳ ಸ್ವತಂತ್ರ ವೈಚಾರಿಕತೆ ಮತ್ತು ಸ್ಪಷ್ಟ ನಿರ್ಧಾರಗಳ ಹಿಂದೆ ಅವಳ ಓದು ಮತ್ತು ಆರ್ಥಿಕತೆಯ ಹಿನ್ನೆಲೆಯಿದೆ. ಹಣ, ಪ್ರತಿಷ್ಠೆ ಎಲ್ಲ ಇದ್ದೂ ನೆಮ್ಮದಿಯಿಲ್ಲದೆ ಚಡಪಡಿಸುವ ಅವಳ ಬದುಕಿನ ಒಂಟಿತನಕ್ಕೆ ಸಾಮಾಜಿಕ ವ್ಯವಸ್ಥೆಯ ಸ್ವಾರ್ಥವೆ ಕಾರಣವಾಗಿದೆ.

ಪ್ರಿಯಾಳ ಕಛೇರಿಯಲ್ಲಿ ಕೆಲಸ ಮಾಡುವ ಪತ್ರಕರ್ತೆ ರೇವತಿ ತನ್ನ ನೇರ ನಡೆನುಡಿ ಮತ್ತು ಉಡುಗೆಯ ಶೈಲಿಗಳಿಂದ 'ಕಾಮ್ರೇಡ್' ಆಗಿ, 'ಫೂಲನ್‌ದೇವಿ'ಯಾಗಿ ಗುರುತಿಸಿಕೊಂಡವಳು. ಒಬ್ಬ ಒಳ್ಳೆಯ ಹುಡುಗನ ಕೈಹಿಡಿದು ಅವನ ಮಕ್ಕಳ ತಾಯಾಗಿ 'ಸತಿ ಸಾವಿತ್ರಿ'ಯಂತೆ ಬದುಕುವ ಕನಸನ್ನು ಅಂತರ್ಯದಲ್ಲಿ ಹೊಂದಿರುವ ರೇವತಿಗೆ ಗಂಡುವೇಷ ತೊಟ್ಟು ತಿರುಗಾಡುವ ತನ್ನಲ್ಲಿ ಗಂಡಸುತನ ಹೆಚ್ಚಾಗುತ್ತ ಆಗುತ್ತ, ತಾನೊಂದು 'ಬಾರ್ಡರ್‌ಲೈನ್ ಕೇಸ್' ಆಗಿ ಬದಲಾಗಬಹುದೆಂಬ ಭಯವೂ ಇದೆ. ಮೀನಾಕ್ಷಿಪಾಳ್ಯದ ಪರಿಸರದ ತುಂಬಾ 'ಎಲ್ಲವನ್ನೂ ಅವಚಿ ಹಿಡಿದು ಮಣಿಸುವ ತೀವ್ರವಾದ ಗಂಡುಸ್ವಭಾವ' ಇರುವ ಕಾರಣ 'ತನ್ನನ್ನು ತಾನಾಗಿಸಿರುವಂಥ ಫೆಮಿನಿಟಿ' ಸೋರಿಹೋಗಿ ತಾನು ಸಂಪೂರ್ಣ ಶರಣಾಗಬಹುದಾದ ಅಪಾಯವನ್ನು ಗುರುತಿಸಿ ಅಲ್ಲಿನ ಕೆಲಸಕ್ಕೆ ರಾಜೀನಾಮೆ ಇತ್ತು ಹೊರಬಂದಿರುವ ರೇವತಿ ಹೆಣ್ಣಿಗೆ ಅರಳುವ ಅವಕಾಶಗಳನ್ನು ನಿರಾಕರಿಸುವ ಪರಿಸರದ ಬಗ್ಗೆ

ಎಚ್ಚರವುಳ್ಳ ಸ್ವಪ್ರಜ್ಞೆಯುಳ್ಳ ಹೆಣ್ಣಾಗಿದ್ದಾಳೆ. ಒಂದು ಇಡೀ ಪರಿಸರವೆ ಗಂಡಾಗಿ ಹೆಣ್ಣನ್ನು ಮಣಿಸುವ ಈ ಸಂಗತಿ ಸ್ತ್ರೀತ್ವದ ಶೋಧದ ದಾರಿಯಲ್ಲಿನ ಒಂದು ಗಂಭೀರ ಪ್ರಶ್ನೆಯಾಗಿ ಅವಳನ್ನು ಕಾಡಿದೆ. 'ವೀರಾಂಗನೆಯರ ಮಟ್ಟಿಗೆ ಬಂದೂಕುಗಳು ಖಡ್ಗಗಳೂ ಭರ್ಚಿಗಳೂ ಎಲ್ಲ ಅಂತರಂಗದೊಳಗೇ ಇರುತ್ತವೆ' ಎಂಬಂಥಾ ಆತ್ಮವಿಶ್ವಾಸವೂ ಅಲುಗಾಡುವಂತೆ ಮೀನಾಕ್ಷಿಪಾಳೆಯದ ಘಟನೆಗಳು ರೇವತಿಯ ಮನಸ್ಸು ಕದಡುತ್ತವೆ. ವ್ಯವಸ್ಥೆಯ ಅನ್ಯಾಯದ ವಿರುದ್ಧ ಧ್ವನಿಯೆತ್ತಲಾಗದ ಅಸಹಾಯಕತೆ ಅವಳ ಸ್ಥೈರ್ಯವನ್ನು ಕುಂದಿಸುತ್ತದೆ.

ಮಾನಸಿ ಅವರು ಬರೆದ 'ದೇವಿಮಹಾತ್ಮೆ' ಕತೆಯು ವಿವಾಹವೆಂಬ ಅಧಿಕೃತ ಸಂಬಂಧವು ತಾಯ್ತನದ ಮೌಲ್ಯವನ್ನು ಬಳಸಿಕೊಂಡು ಸ್ತ್ರೀಯರನ್ನು ಶೋಷಿಸುವ ಪಿತೃಪ್ರಧಾನ ವ್ಯವಸ್ಥೆಯ ಪಕ್ಷಪಾತ ಧೋರಣೆಯನ್ನು ಕಾಣಿಸುತ್ತದೆ. ಮೊನಚು ವ್ಯಂಗ್ಯದ ನಿರೂಪಣಾ ಶೈಲಿಯನ್ನು ಬಳಸುವ ಮೂಲಕ, ಹೆಣ್ಣನ್ನು ಕೀಳಾಗಿ ನಡೆಸಿಕೊಳ್ಳುವ ಕೌಟುಂಬಿಕ ವ್ಯವಸ್ಥೆಯನ್ನು ವಿಡಂಬಿಸುವ ಪ್ರಯತ್ನವನ್ನು ಕತೆಗಾರ್ತಿ ಮಾಡಿದ್ದಾರೆ. ಜಗಳ, ಅಳು, ಶಾಪ ಮುಂತಾದವೇನೂ ಇಲ್ಲದೆ, ಎಲ್ಲೂ ಅತಿಯೆನಿಸದೆ ನಾಜೂಕಾಗಿರುವ ಸ್ತ್ರೀವಿಶಿಷ್ಟವೆನಿಸುವ ಮೌನ ಪ್ರತಿಭಟನೆಯನ್ನು ಹೊಂದಿರುವ ಕತೆಯು ಪತಿವ್ರತೆ, ಸಾಧ್ವಿ... ಮುಂತಾದ ಹೆಣ್ಣಿನ ಪಾರಂಪರಿಕ ವ್ಯಾಖ್ಯಾನವನ್ನು ಸ್ತ್ರೀಸಂವೇದನೆಯೊಂದಿಗೆ ವಿಶ್ಲೇಷಿಸುತ್ತದೆ.

ಕತೆಯ ನಿರೂಪಕಿ ಅಮ್ಮ ಮತ್ತು ಅಜ್ಜಿ ಕಲಿಸಿದ ಸ್ತ್ರೀಮೌಲ್ಯಗಳನ್ನು ಶಿರಸಾ ಪಾಲಿಸುವ ಸಂಕಲ್ಪವುಳ್ಳವಳು. 'ಸ್ತ್ರೀಯರು ಲಕ್ಷ್ಮಿಯರು ಮತ್ತು ಸರಸ್ವತಿಯರು' ಎಂದು ಅವಳ ಅಮ್ಮ ಹೇಳಿಕೊಟ್ಟಿದ್ದಾಳೆ. "ಪುರುಷರು ನಮ್ಮನ್ನು ದೇವಿ ಎಂದು ಕರೆದು ಪೂಜಿಸುವುದರಿಂದ ಮನುಷ್ಯರಂತೆ ನಮಗೆ ಹಸಿವು-ಬಾಯಾರಿಕೆಗಳಿವೆ ಎಂಬುದನ್ನು ಮರೆಯುತ್ತಾರೆ. ಹಾಗೆ ನೋಡಿದರೆ ಅದರಲ್ಲಿ ಅವರದೇನೂ ತಪ್ಪಿಲ್ಲ. ದೇವಿಯರನ್ನಾಗಿಸಿ ಪೂಜಿಸಲು ಸಿದ್ಧರಿರುವವರ ನಡುವೆ ಮನುಷ್ಯರಾಗಿ ಮುಂದುವರಿಯುತ್ತಿರುವುದು ನಮ್ಮದೇ ತಪ್ಪು" (ಪು. ೭೫, ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು) ಎಂದಾಕೆ ಯೋಚಿಸುತ್ತಾಳೆ. "ಕತ್ತರಿಸಿ ತೆಗೆದ ರೆಕ್ಕೆಗಳನ್ನು ಮತ್ತು ಮಸುಕಾದ ಮನಸ್ಸುಗಳನ್ನು ಬದಲಿಗೆ ತೆಗೆದುಕೊಂಡು ನಮ್ಮನ್ನು ಊಟ ಬಟ್ಟೆ ಕೊಟ್ಟು ಸಾಕುವ ಪುರುಷರ ಬಗ್ಗೆ ನನಗೆ ಯಾವಾಗಲೂ ಕೃತಜ್ಞತೆ ತೋರುತ್ತದೆ. ನಾವು ಮನುಷ್ಯರಾಗಿ ಹುಟ್ಟಿ ದೇವಿಯರಾಗಬೇಕಾದವರು. ದೇವಿಯರಿಗೆ ಸಿಟ್ಟು ಬರಬಾರದು. ಅಜ್ಜಿ ಹೇಳಿದಂತೆ ನಾವೆಲ್ಲ ಶೀಲವತಿಯರಾಗಿರಬೇಕು" (ಪು. ೭೬, ಅದೇ) ಎಂದೆಲ್ಲ ಯೋಚಿಸುವ ನಾಯಕಿ 'ಹೆಣ್ಣಿಗೆ ಸಹನೆಯಿರಬೇಕು' ಎಂಬ ವಿಷಯವನ್ನು ಒಂದು ಜ್ಞಾನೋದಯವಾದಂತೆ ಅರಿತುಕೊಂಡ ಬಳಿಕ ಮನುಷ್ಯಲಕ್ಷಣವಾಗಿದ್ದ ಮನಸ್ಸು ಮತ್ತು ರೆಕ್ಕೆಗಳನ್ನು ಕೊಟ್ಟು, ಬದಲಿಗೆ ಅರಶಿನ ಕುಂಕುಮಗಳನ್ನು ಪಡೆದು 'ಆರ್ಷಭಾರತದ ಎಲ್ಲ ಆದರಣೀಯ ಸ್ತ್ರೀಯರಂತೆ' ತಾನೂ ದೇವಿಯಾಗಿಬಿಡುತ್ತಾಳೆ.

ಸ್ತ್ರೀಯರು ಮಾನವತ್ವದಿಂದ ದೇವಿಯಾಗುವ ಬಗೆಯನ್ನು ವಿಡಂಬನಾತ್ಮಕವಾಗಿ ವಿವರಿಸುವ ಈ ಕತೆಯ ನಿರೂಪಕಿ ಸುಶಿಕ್ಷಿತೆ. ಯೋಚಿಸಿ, ವಿಮರ್ಶಿಸಿ, ವಿಷಯಗಳನ್ನು ಅರ್ಥಮಾಡಿಕೊಳ್ಳಬಲ್ಲವಳು. ಅಮ್ಮ ಹೇಳಿದ ವೇದವಾಕ್ಯದಂತೆ 'ಮಾನವರಾದ ಪುರುಷರಿಗೆ ಸಿಟ್ಟು ಬರಬಹುದು, ದೇವಿಯರಿಗೆ ಸಿಟ್ಟು ಬರಬಾರದು' ಎಂಬ ಸಂಗತಿಯನ್ನು ಚೆನ್ನಾಗಿ ತಿಳಿದುಕೊಂಡು ಅಂತೆಯೇ ನಡೆದುಕೊಳ್ಳುವವಳು. ಇತರ ಸ್ತ್ರೀಯರೂ 'ಹಾಗಿದ್ದರೇ ಒಳ್ಳೆಯದು' ಎನ್ನುವ ಸಲಹೆ ನೀಡುತ್ತಾಳೆ. ಪತಿಯಾದವನನ್ನು ಯಾವ ಕಾರಣಕ್ಕೂ ಪ್ರಶ್ನಿಸದೆ ಒಪ್ಪಿಕೊಳ್ಳುವುದೆ ಪತ್ನಿಗೆ ಆದರ್ಶ. ಯಾಕೆಂದರೆ "ಅವನ ಆರೋಗ್ಯ ಮತ್ತು ಆನಂದಗಳು ತಾನು ಸುರಕ್ಷಿತ ಭಾವದಿಂದ ಜೀವಿಸಬಹುದಾದ ಮನೆಯ ಮತ್ತು ತನ್ನ ದೇಹದ ರಕ್ಷಣೆಗೆ ತಾನು ಕೊಡಬೇಕಾದ ಬೆಲೆಯಲ್ಲವೆ? ಸದಾ ಭಯಪಡುತ್ತ ಅಪರಾಧಿ ಭಾವದಿಂದ ಕಳೆಯಬೇಕಾದ ವಾತಾವರಣದಲ್ಲಿ ನಮ್ಮನ್ನು ಕಾಯುವವರು ನಮಗೆ ಬಹಳ ಮುಖ್ಯವಲ್ಲವೆ?" (ಪು. ೭೭, ಅದೇ) ಎಂದು ಯೋಚಿಸುವವಳು. ಕುಟುಂಬ ಮತ್ತು ಸಮಾಜಗಳು ಕಲಿಸಿಕೊಟ್ಟಂತೆ ಮನೆಯೊಳಗಿನ ಎಲ್ಲ ಬಗೆಯ ಕ್ರೌರ್ಯ, ಹಿಂಸೆಗಳನ್ನು ಸಹಿಸಿಕೊಂಡು ಆದರ್ಶ ಮಡದಿಯಾಗಿ ಬಾಳುವ ಹೊರತು ಸ್ತ್ರೀಯರಿಗೆ ಅನ್ಯ ಆಯ್ಕೆಯಿಲ್ಲದೆ ಇರುವುದನ್ನು ಕತೆ ಪ್ರತಿಪಾದಿಸುತ್ತದೆ.

ನಿರೂಪಕಿಯ ಸ್ನೇಹಿತನೂ, ಎರಡು ಮಕ್ಕಳ ತಂದೆಯೂ ಆದ ಲಾಲಾಜಿ 'ಕುಟುಂಬದಲ್ಲಿ ಹೆಣ್ಣಿನ ಅಸ್ತಿತ್ವ ಅಶುಭಸೂಚಕ' ಎಂದು ನಂಬುವವನು. ಗಂಡುಮಗುವಿನ ಆಸೆಯಿಂದ, ಮೊದಲ ಎರಡು ಪತ್ನಿಯರೂ ಜೀವಂತ ಇರುವಾಗಲೆ ಎಳೇ ವಯಸ್ಸಿನ ಹೆಣ್ಣನ್ನು ಮೂರನೆಯ ಹೆಂಡತಿಯಾಗಿ ತಂದಿದ್ದಾನೆ. ಪುತ್ರಸಂತಾನಕ್ಕಾಗಿ ಮೂರನೆಯ ಮದುವೆಯಾಗುವಾಗ ಅವನು 'ಅನುಭವಿಸುವ ದುಃಖ' ಅವಳಿಗೆ ಅರ್ಥವಾಗುತ್ತದೆ. 'ಗಂಡು ಮಕ್ಕಳು ಬೆಳೆದು ನಿಲ್ಲದಿದ್ದರೆ ನಮಗೆ ಆಧಾರ ಯಾರು?' ಅವನ ಮೂರನೇ ಪತ್ನಿಯಾಗಿ ಬರುವವಳನ್ನು ಕೈ ಹಿಡಿದು ಮನೆಯೊಳಗೆ ಕರೆತರುವವಳು ಮೊದಲ ಪತ್ನಿಯೇ. ಗಂಡು ಮಗುವನ್ನು ಹೆರಲಿಕ್ಕಾಗಿ ಕರೆತಂದ ನವವಧುವಾದರೋ ಅದೇ ದಿನ ತನ್ನ ಜವಾಬ್ದಾರಿಯನ್ನು ಅರಿತುಕೊಂಡಿರುವ ಕಾರಣ ಅಲ್ಲಿಂದ ನಂತರ 'ಅವಳು ನಗಲೇ ಇಲ್ಲ.' ನವವಧುವಿನೊಡನೆ ಪತಿಯು ಶಯ್ಯಾಗೃಹಕ್ಕೆ ಹೋಗುವುದನ್ನು ಕಂಡ್ತುಳತೊಡಗಿದ ಎರಡನೇ ಪತ್ನಿಯನ್ನು ಸಮಾಧಾನಿಸುತ್ತ ಮೊದಲನೆಯವಳು ಗಹಗಹಿಸಿ ನಗುತ್ತಾಳೆ. ಗಂಡು ಮಗು ಹುಟ್ಟುವವರೆಗೂ ಈ ಸನ್ನಿವೇಶವು ಪುನರಾವರ್ತನೆಯಾಗುತ್ತದೆ ಎಂದು ಅವಳಿಗೆ ತಿಳಿದಿದೆ. ತನ್ನ ಸ್ಥಾನಕ್ಕೆ ಎರಡನೆಯವಳು ಬಂದಾಗ ಅವಳು ಪಟ್ಟಿರಬಹುದಾದ ದುಃಖ ಈಗ ಎರಡನೆಯವಳದಾಗಿದೆ. ಗಂಡು ಮಗುವನ್ನು ಹೆರದಿದ್ದರೆ ಆ ದುಃಖ ಮೂರನೆಯವಳ ಪಾಲಿಗೂ ದಾಟಬಹುದಾಗಿದೆ. ಪುರುಷನನ್ನು ಯಾವಾಗಲೂ ಉತ್ತಮ ಫಲವತ್ತತೆಯ ಶಕ್ತಿಯುಳ್ಳ ದೋಷರಹಿತನೆಂದೇ ಪರಿಗಣಿಸುವ ಹಾಗೂ ಎಷ್ಟಾದರೂ ವಿವಾಹವಾಗುವ ಸ್ವಾತಂತ್ರ್ಯವನ್ನು ಒದಗಿಸುವ ವ್ಯವಸ್ಥೆಯ ಕುರಿತು ಹೆಣ್ಣುಮನಸ್ಸು

ವ್ಯಕ್ತಪಡಿಸುವ ಸ್ಪಷ್ಟವಾದ ವ್ಯಂಗ್ಯವಿರೋಧವನ್ನು ಈ ಕತೆಯಲ್ಲಿ ಗುರುತಿಸಬಹುದು. ಮದುವೆಯನ್ನು ಹೆಣ್ಣಿನ ಹೆರುವ ಸಾಮರ್ಥ್ಯದೊಂದಿಗೆ ತಾಳೆಹಾಕುವ ಪಿತೃವ್ಯವಸ್ಥೆಯಲ್ಲಿ ಹೆರದೆ ಇರುವುದು ಅಥವಾ ಗಂಡುಮಗುವನ್ನು ಹೆರದೆ ಇರುವುದು... ಈ ಎರಡು ಸಂದರ್ಭಗಳೂ ಹೆಣ್ಣಿನ ಶೋಷಣೆ ಮತ್ತು ಅತಂತ್ರತೆಗಳಿಗೆ ಕಾರಣವಾಗಿರುವುದನ್ನು ಕತೆ ಗುರುತಿಸುತ್ತದೆ.

ಕತೆಯಲ್ಲಿ ಬರುವ ಮನೆಕೆಲಸದಾಕೆ ವೀಣಾ ಕ್ಷಮಯಾಧರಿತ್ರಿಯಂಥ ಸಹನೆಯ ಹೆಣ್ಣುಮಗಳು. ಓದಿಕೊಂಡವಳಲ್ಲ. ಕೇವಲ ಹದಿನೈದು ದಿನದ ಮಗುವನ್ನು ಬೆನ್ನ ಮೇಲೆ ಕಟ್ಟಿಕೊಂಡು ಕೆಲಸ ಮಾಡುತ್ತಾಳೆ. ವೀಣಾಳ ಗಂಡ ಪತ್ನಿಯ ದುಡಿಮೆಯಲ್ಲಿ ಬದುಕುವ ಸೋಮಾರಿ. ಹಗಲಿಡೀ ಅಂಗಳದ ಹಗ್ಗದ ಮಂಚದಲ್ಲಿ ಹುಕ್ಕಾ ಸೇದುತ್ತ ಕುಳಿತುಕೊಳ್ಳುವ ಗಂಡನ ಹೊಡೆತ ಬಡಿತ ಕಿರುಕುಳಗಳನ್ನು ಮಗುವಿನ ಮುಖ ನೋಡಿ ಸಹಿಸಿಕೊಂಡು ಆಕೆ ಬದುಕುತ್ತಿದ್ದಾಳೆ. ಒಂದು ರಾತ್ರಿ ವೀಣಾಳ ಗಂಡ ಹೆಂಡತಿಯ ಮೇಲಿನ ಯಾವುದೋ ಸಿಟ್ಟಿಗೆ ಜ್ವರದಿಂದ ಮೈಸುಡುತ್ತಿದ್ದ ಎಳೆಯ ಮಗುವನ್ನು ಮನೆಯೊಳಗಿರಿಸಿಕೊಂಡು ಅವಳನ್ನು ಮನೆಯಿಂದ ಹೊರಗೆ ಹಾಕುತ್ತಾನೆ. ಜ್ವರದಿಂದ ಸುಡುವ ಮಗುವಿನ ಅಳುವನ್ನು ಕೇಳಿಸಿಕೊಳ್ಳುತ್ತ 'ಇನ್ನೇನು ಈಗ ಗಂಡ ಮನೆಯ ಬಾಗಿಲು ತೆರೆದಾನು' ಎಂಬ ನಿರೀಕ್ಷೆಯಲ್ಲಿ ರಾತ್ರಿಯಿಡೀ ಮನೆಯ ಹೊರಗೆ ಕುಳಿತುಕೊಳ್ಳುತ್ತಾಳೆ. ಬೆಳಗಾದ ಬಳಿಕ ಅಳುತ್ತಿದ್ದ ಮಗುವನ್ನು ಎತ್ತಿಕೊಂಡು ಗಂಡ ಮನೆಯಿಂದ ಹೊರಗೆ ಹೋಗಿದ್ದಾನೆ. ಅವಳು ಅಂಗಲಾಚುತ್ತಾ ಹಿಂಬಾಲಿಸಿದಾಗ ಮಗುವನ್ನು ಚರಂಡಿಗೆ ಎಸೆದುಬಿಡುತ್ತೇನೆಂದು ಹೆದರಿಸಿದ್ದಾನೆ. ಮೂಗಿನ ಮೇಲೆಯೆ ಸಿಟ್ಟು ಹೊಂದಿರುವ ಗಂಡ ಹಾಗೆ ಮಾಡಿದರೂ ಮಾಡಿಯಾನು ಎಂಬ ಭಯಕ್ಕೆ ಅವಳು ಒಂದು ಹೆಜ್ಜೆಯನ್ನೂ ಮುಂದಿಡದೆ ನಿಂತಿದ್ದಾಳೆ. ಮೊಲೆಹಾಲು ಕುಡಿವ ಮಗುವನ್ನು ಗಂಡ ಬಲವಂತದಿಂದ ಎಳೆದುಕೊಂಡು ಹೋದರೂ ವಿರೋಧಿಸಲಾರದ ಈ ಅಸಹಾಯಕಿ ತಾಯಿ 'ಅವನು ಅವರ ಮಗ ತಾನೆ? ನಾವು ಹೆಂಗಸರ ಪಾಲಿಗೆ ಮಕ್ಕಳೂ ಇಲ್ಲ' ಎಂದು ಯೋಚಿಸುತ್ತಾಳೆ. 'ಅವನನ್ನು ಒಮ್ಮೆ ನೋಡಿದರೆ ಸಾಕು' ಎಂದು ಹಂಬಲಿಸುತ್ತ ಎಲ್ಲೋ ಇರಬಹುದಾದ ಮಗುವಿನ ಧ್ಯಾನದಲ್ಲಿ 'ಮಡುಗಟ್ಟಿ ಒಣಗಿದ ಮೊಲೆಹಾಲು ಹಾಗೂ ಇಂಗಿಹೋದ ಕಣ್ಣೀರಿನ ಭಾರವನ್ನು' ತಾಳಿಕೊಳ್ಳುತ್ತಾಳೆ. 'ದೇವರು ಯಾಕೆ ಹೆಣ್ಣುಮಕ್ಕಳನ್ನು ಹುಟ್ಟಿಸ್ತಾರೆ? ಎಲ್ಲರನ್ನೂ ಗಂಡುಮಕ್ಕಳನ್ನಾಗಿ ಮಾಡ್ಬಹುದಿತ್ತು' (ಪು. ೭೮, ಅದೇ) ಎಂಬ ಮಾತುಗಳಲ್ಲಿ ಪಿತೃವ್ಯವಸ್ಥೆಯ ನಿರ್ದಯತೆಯ ಕುರಿತಾದ ವೀಣಾಳ ಆಕ್ರೋಶ ಮತ್ತು ಹತಾಶೆ ವ್ಯಕ್ತವಾಗಿವೆ.

ವೀಣಾಳ ಮೊಲೆಹಾಲು ಸೋರಿ ಮಡುಗಟ್ಟಿದ ರವಕೆಯನ್ನೂ, ಹಾಲು ತುಂಬಿ ಕಲ್ಲಿನಂತಾದ ಮೊಲೆಗಳನ್ನೂ ನೋಡಿ 'ಅಳುವುದರಲ್ಲಿ ನಂಬಿಕೆಯಿಲ್ಲದ' ನಿರೂಪಕಿಗೆ ವ್ಯಥೆಯುಂಟಾಗುತ್ತದೆ. ತಾನೆಂದೂ ಕಂಡಿರದ, ಯಾರೆಂದೇ ಗೊತ್ತಿಲ್ಲದ ದೇವರಲ್ಲಿ ಅವಳು ಆರ್ತಳಾಗಿ ಕೇಳಿಕೊಳ್ಳುತ್ತಾಳೆ:

"ದೇವರೇ, ನಮ್ಮೆಲ್ಲರ ಎಷ್ಟು ರೆಕ್ಕೆಗಳನ್ನು ಬೇಕಾದರೂ ನಾವು ನಿನಗೆ ಕೊಡುತ್ತೇವೆ. ವೀಣಾಗೆ ಅವಳ ಮಗುವನ್ನು ಕೊಡಿಸು." (ಪು. ೭೯, ಅದೇ) ಆದರೆ ದೇವರಿಗೆ ಕರುಣೆ ಬರಲಿಲ್ಲ. ವೀಣಾಳ ಗಂಡ ಮಗುವನ್ನು ಮರಳಿಸಲಿಲ್ಲ. ಇನ್ನು ಮರಳಿಸುವುದೂ ಇಲ್ಲ ಎಂಬುದು ಸ್ಪಷ್ಟವಾದಾಗ ನಿರೂಪಕಿಯು ತನ್ನ ಅಮ್ಮ, ಅಜ್ಜಿ ಹೇಳಿಕೊಟ್ಟ ಸ್ತ್ರೀಯು 'ಕ್ಷಮಯಾಧರಿತ್ರಿಯಾಗಿರಬೇಕು' ಎಂಬ ವೇದವಾಕ್ಯವನ್ನು ನೆನಪಿಸಿಕೊಳ್ಳುತ್ತಾಳೆ. "ಹೆಣ್ಣು ಭೂಮಿದೇವಿಯಂತೆ ಸಹನಾಶೀಲೆಯಾಗಬೇಕು. ಪುರುಷರು ಮನುಷ್ಯರಾಗಿ ಹುಟ್ಟಿ ಮನುಷ್ಯರಾಗಿ ಸಾಯುತ್ತಾರೆ. ನಾವು ಮನುಷ್ಯರಾಗಿ ಹುಟ್ಟಿ ದೇವಿಯರಾಗಬೇಕಾದವರು" (ಪು. ೭೯, ಅದೇ) ಎಂದು ವೀಣಾಳಿಗೂ ತಿಳಿಹೇಳುತ್ತಾಳೆ. ಗಂಡ ಒಯ್ದಿರುವ ಮಗುವಿನ ನೆನಪಲ್ಲೇ ಬದುಕಿರುವ ವೀಣಾಳಿಗೆ ತನ್ನ ಮಗುವನ್ನು ಒಮ್ಮೆ ಕಾಣುವಾಸೆ. 'ಅವನೀಗ ನಡೀಲಿಕ್ಕೆ ಶುರು ಮಾಡಿರಬಹುದು. ಈಗ ನನ್ನನ್ನು ನೋಡಿದರೆ ಅವನಿಗೆ ಗುರುತು ಸಿಗಲಾರದು. ನಾನು ಎತ್ತಿಕೊಂಡರೆ ಅವನು ಗಟ್ಟಿಯಾಗಿ ಅತ್ತಾನು' (ಪು. ೭೯, ಅದೇ) ಹೀಗೆ ಸದಾ ಮಗುವಿನ ಕನವರಿಕೆ. ಹೆತ್ತ ಕರುಳಿನ ಕುರಿತಾದ ಅಮಿತ ವಾತ್ಸಲ್ಯವೆ ಹೆಣ್ಣಿನ ದೌರ್ಬಲ್ಯವಾಗಿದೆ. ಅದೇ ಅವಳ ಶೋಷಣೆಗೂ ಕಾರಣವಾಗಿದೆ. ಮಕ್ಕಳನ್ನು ತ್ಯಜಿಸಲಾಗದೆ ಸ್ತ್ರೀಯರು ಮನೆಯೊಳಗಿನ ವಿವಿಧ ಹಿಂಸೆಗಳನ್ನು ಸಹಿಸಿಕೊಳ್ಳುತ್ತಾರೆ. ಪಿತೃವ್ಯವಸ್ಥೆ ಅದನ್ನೇ ಅಸ್ತ್ರವಾಗಿ ಬಳಸಿ ಸ್ತ್ರೀಯರ ಮೇಲೆ ನಿರಂತರ ದಬ್ಬಾಳಿಕೆ ನಡೆಸಿದೆ.

ಪತಿಯ ಆಸರೆಯನ್ನು ನಂಬಿ ಬದುಕಬೇಕಾಗಿರುವ ಸ್ತ್ರೀ ಸದಾ ಸಂಕೋಲೆಯೊಳಗೆ ಬದುಕುತ್ತಿದ್ದಾಳೆ ಮತ್ತು ಕ್ರಮೇಣ ಆ ಸಂಕೋಲೆಗಳಿಗೆ ಹೊಂದಿಕೊಂಡಿದ್ದಾಳೆ. ಸ್ವಾತಂತ್ರ್ಯದ ಕಲ್ಪನೆಯೆ ಇಲ್ಲದ ಸ್ತ್ರೀಗೆ ಕೆಲವೊಮ್ಮೆ ಬಿಡುಗಡೆ ಎಂಬುದು ಗೊಂದಲ ಉಂಟುಮಾಡುವಂಥದ್ದಾಗಿದೆ. ಅಷಿತಾ ಅವರು ಬರೆದಿರುವ 'ಅಪೂರ್ಣ ವಿರಾಮಗಳು' ಕತೆಯ ಅನ್ನಮ್ಮನನ್ನು ಅವಳ ಪತಿ ಮೋಸದಿಂದ ತ್ಯಜಿಸಿದ್ದಾನೆ. ಮಲಯಾಟ್ಟೂರಿನ ಚರ್ಚಿಗೆ ಪ್ರಾರ್ಥನೆಗೆಂದು ಕರೆತಂದು ಅವಳನ್ನು ಅಲ್ಲೇ ಬಿಟ್ಟುಹೋಗಿದ್ದಾನೆ. ದಿಕ್ಕುಗಾಣದೆ ತಿರುಗುತ್ತಿದ್ದ ಅನ್ನಮ್ಮಳನ್ನು ಸಾಮಾಜಿಕ ಕಾರ್ಯಕರ್ತೆಯೊಬ್ಬಳು ಕರೆತಂದು ಹುಚ್ಚಾಸ್ಪತ್ರೆಗೆ ಸೇರಿಸಿದ್ದಾಳೆ. ಕಾರಣವಿಲ್ಲದೆ ನಗುವುದು, ಅಳುವುದು, ಮಣಮಣಿಸುವುದು... ಇತ್ಯಾದಿ ಅಸಹಜ ವರ್ತನೆಗಳನ್ನು ಹೊಂದಿದ್ದ ಅನ್ನಮ್ಮ ಪತಿ ತನ್ನನ್ನು ತ್ಯಜಿಸಿರುವ ಸತ್ಯವನ್ನು ನಿಧಾನವಾಗಿ ಅರ್ಥಮಾಡಿಕೊಂಡಿದ್ದಾಳೆ. ಹಾಗಾಗಿ 'ಈಗವಳು ನಗುವುದೂ ಇಲ್ಲ ಅಳುವುದೂ ಇಲ್ಲ.' ಸಮಾಜಕ್ಕೆ ಹೆಣ್ಣಿನ ವರ್ತನೆಯ ಹಿಂದಿನ ಸೂಕ್ಷ್ಮಗಳು ಅರ್ಥವಾಗವು. ಅವಳ ಕಾಯಿಲೆ ಈಗ ಗುಣವಾಗಿದೆ ಎಂದು ಪ್ರಮಾಣಿಸಿ, ಜಿಲ್ಲಾ ಕಲೆಕ್ಟರ್ ನೇತೃತ್ವದ ಸಮಿತಿಯು ಊರಿಗೆ ಹೋಗುವ ಬಸ್ ಚಾರ್ಜು ಕೊಟ್ಟು ಆಸ್ಪತ್ರೆಯಿಂದ ಬಿಡುಗಡೆ ಮಾಡಿಬಿಡುತ್ತದೆ.

ಬಿಡುಗಡೆಯೆ ಅನ್ನಮ್ಮಳ ಬದುಕನ್ನು ಅತಂತ್ರವಾಗಿಸಿದೆ. ಯಾಕೆಂದರೆ ಅವಳಿಗೆ ಹೋಗಲು ಮನೆಯಿಲ್ಲ. ಆಸ್ಪತ್ರೆಯ ಕೋಣೆಯೊಳಗಿನ ಸಂಕೋಲೆಯ ಚಿರಪರಿಚಿತ ಶಬ್ದ ಕಿವಿಗೆ ಬೀಳದೆ ಗಾಬರಿಯಾಗಿರುವ ಅನ್ನಮ್ಮ 'ನಾನು ಹೋಗುವುದಿಲ್ಲ' ಎಂದು ಸಮಿತಿಯ ಸದಸ್ಯರ ಮುಂದೆ ಬೊಬ್ಬಿಡುವುದು ಅರ್ಥಪೂರ್ಣವಾಗಿದೆ. ಆದರೆ ಆಸ್ಪತ್ರೆಯಲ್ಲಿ ಐನೂರು ಜನರಿಗೆ ಮಾತ್ರ ಸರಕಾರದ ಅನುದಾನ ಲಭ್ಯವಿದ್ದು ಹೆಚ್ಚುವರಿಯಾಗಿ ಇರುವ ಮೂವತ್ತು ಜನರನ್ನು ತಕ್ಷಣ ಬಿಡುಗಡೆ ಮಾಡಲೇಬೇಕಾಗಿರುವ 'ಆಡಳಿತಾತ್ಮಕ ಕಾರಣದಿಂದಾಗಿ ಗುಣ ಹೊಂದಿರುವ' ಅನ್ನಮ್ಮಳನ್ನು ಬಿಡುಗಡೆ ಮಾಡಿದ್ದಾರೆ. ಆಸ್ಪತ್ರೆಯಿಂದ ಹೊರಬಿದ್ದ ಅನ್ನಮ್ಮ ಎಲ್ಲಿಗೆ ಹೋಗುವುದೆಂದು ತಿಳಿಯದ ಅನಿಶ್ಚಿತತೆಯಲ್ಲಿ ಮತ್ತೊಮ್ಮೆ ಅಕ್ಷರಶಃ ಬೀದಿಗೆ ಬಿದ್ದಿದ್ದಾಳೆ. ಗಮ್ಯವಿಲ್ಲದೆ ಯಾರ್ಯಾರನ್ನೋ ಅನುಸರಿಸಿ ನಡೆಯುತ್ತ ಪೋಲೀಸಿನವನು ಸೇರಿದಂತೆ ಹಲವು ಪುರುಷರ ಆಸೆಯ ಕಣ್ಣು, ಸಿಳ್ಳೆ, ಕೈಸನ್ನೆಗಳಿಗೆ ಆಹಾರವಾಗುತ್ತ ಪೋಲಿ ಪ್ರಶ್ನೆಗಳಿಗೆ ಸುಮ್ಮಗೆ ಮುಗುಳ್ನಗುತ್ತ ಆಸ್ಪತ್ರೆಯಲ್ಲಿ ಅವಳಿಗೆ ತೊಡಿಸಲಾಗಿದ್ದ 'ಅಜ್ಞಾತ ಸಂಕೋಲೆಗಳ ನೆನಪಿನಲ್ಲಿ' ಕಾಲುಗಳನ್ನು ಎಳೆಯುತ್ತ ನಡೆಯುವ ಅನ್ನಮ್ಮಳ ಮಟ್ಟಿಗೆ ಹುಚ್ಚಾಸ್ಪತ್ರೆಯೆ ಸುರಕ್ಷಿತವಾಗಿತ್ತು. ತನ್ನದಲ್ಲದ ತಪ್ಪಿಗೆ ಒಬ್ಬಾಕೆ ಹೆಣ್ಣಿನ ಬದುಕು ಅತಂತ್ರವಾಗಿದೆ. ಆಸರೆಯಿಲ್ಲದ ಹೆಣ್ಣಿಗೆ ಸ್ವತಂತ್ರವಾಗಿಸುವ ಬಿಡುಗಡೆಗಿಂತ ಒಂದು ನಿರ್ದಿಷ್ಟ ನೆಲೆಯನ್ನು ಒದಗಿಸುವ ಬಂಧನವೆ ಪ್ರಿಯವಾಗಿರುವ ಕಠೋರ ವಾಸ್ತವವನ್ನು ಕತೆ ಗುರುತಿಸಿದೆ.

ಬಡವರು ಸಿರಿವಂತರ ಸೇವೆಗೆ ಮತ್ತು ಉಪಯೋಗಕ್ಕೆ ಇರುವವರು, ಹಣವಿದ್ದರೆ ಅವರ ಹೆಣ್ಣುಗಳನ್ನು ಸುಲಭವಾಗಿ ವಶಪಡಿಸಿಕೊಳ್ಳಬಹುದು, ಅವರಿಗೆ ಇಚ್ಛೆ ಇರಲಿ ಇಲ್ಲದಿರಲಿ ಅನುಭವಿಸಬಹುದು ಎಂಬುದು ಪುರುಷರ ಭಾವನೆಯಾಗಿದೆ. 'ದುರ್ಬೀಜ' ಕೃತಿಯಲ್ಲಿ ಊರಿನ ಮುಂದಾಳುವಾದ ಶೇಖರನ್ ನಾಯರ್‌ನ ಮಗನಾಗಿರುವ ವಕೀಲಿಕೆ ಓದುವ ಕೊಚ್ಚಪ್ಪ ಮನೆಯ ಕೆಲಸದ ಹುಡುಗಿ ಮೀನಾಕ್ಷಿಯನ್ನು ಕೆಡಿಸುತ್ತಾನೆ. ದೂರಸಂಬಂಧಿಯಾದ ಸುಶಿಕ್ಷಿತ ಯುವಕನೇ ಅತ್ಯಾಚಾರವೆಸಗಿದ್ದನ್ನು ಯಾರಲ್ಲೂ ಹೇಳಿಕೊಳ್ಳುವ ಧೈರ್ಯ, ಧ್ವನಿ ಎರಡೂ ಮೀನಾಕ್ಷಿಯಲ್ಲಿ ಇಲ್ಲ. ಮಗನಿಂದ ಬಸುರಾದವಳನ್ನು ಪತ್ನಿಯ ತಮ್ಮನಾದ ಗೋವಿಂದನ್ ಕುಟ್ಟಿಗೆ ಉಪಾಯವಾಗಿ ಮದುವೆ ಮಾಡಿಸುವ ಶೇಖರನ್ ನಾಯರ್ ಮತ್ತು ಅವನ ಮಗ ಕೊಚ್ಚಪ್ಪ ಇಬ್ಬರಿಗೂ ಹೆಣ್ಣು ಅಂದರೆ ಸ್ವಂತ ಭಾವನೆಗಳಿಲ್ಲದ ಅನುಭೋಗದ ಸೊತ್ತು ಮಾತ್ರ ಎಂಬ ಭಾವವಿದೆ. ಮೀನಾಕ್ಷಿಯ ಅಭಿಪ್ರಾಯವನ್ನು ಕೇಳುವ ಅಗತ್ಯವೆ ಇಲ್ಲದೆ ಎರಡೂ ಕಡೆಯ ಖರ್ಚು ವಹಿಸಿಕೊಂಡು ಮದುವೆ ಮಾಡಿ ಪತಿಯ ಮನೆಗೆ ಕಳುಹಿಸಿಬಿಡುತ್ತಾರೆ. ಆದರೆ ತಾನು 'ಕೆಟ್ಟುಹೋದವಳು' ಎಂಬ ಕೀಳರಿಮೆ, ಅಪರಾಧಿಪ್ರಜ್ಞೆಗಳಿಂದ ನರಳುವ ಬಡಹುಡುಗಿ ಮೀನಾಕ್ಷಿ, ಸರಳ ಸ್ವಭಾವದ ಗಂಡನಿಗೆ ಮೋಸ ಮಾಡಲು ಮನಸ್ಸೊಪ್ಪದೆ ನಿಜಸಂಗತಿ ತಿಳಿಸಿ 'ನನ್ನನ್ನು ಕೊಂದುಬಿಡಿ' ಎಂದು ಹಲುಬುತ್ತಾಳೆ. ಗೋವಿಂದನ್ ಕುಟ್ಟಿಯಾದರೂ

ಪತ್ನಿಯ ಮನಸ್ಸಿನಲ್ಲೇನಿದೆಯೆಂದು ಅರ್ಥಮಾಡಿಕೊಳ್ಳದೆ ಮೀನಾಕ್ಷಿಯನ್ನು ಅವಳ ತಾಯಿಯಮನೆಗೆ ಕರೆದೊಯ್ದು ಬಿಡುತ್ತಾನೆ.

ಅತ್ಯಾಚಾರ ಸಂತ್ರಸ್ತೆಯನ್ನೇ ಕಲಂಕಿನಿಯೆಂದು ಬಿಂಬಿಸುವ ಸಾಮಾಜಿಕ ವ್ಯವಸ್ಥೆಯು ಅತ್ಯಾಚಾರಗೈದ ಪುರುಷನನ್ನು ಯಾವ ರೀತಿಯಲ್ಲೂ ಶಿಕ್ಷಿಸುವುದಿಲ್ಲ. ಮೀನಾಕ್ಷಿಯನ್ನು ಕೆಡಿಸಿದವನಿಗೆ ಯಾವುದೇ ಸಮಸ್ಯೆಯಿಲ್ಲದೆ ಶ್ರೀಮಂತ ಹೆಣ್ಣಿನೊಂದಿಗೆ ಮದುವೆಯಾಗುತ್ತದೆ. ನಿರಪರಾಧಿಯಾದ ಮೀನಾಕ್ಷಿ ಕೊಚ್ಚಪ್ಪ ಮತ್ತು ಗೋವಿಂದನ್... ಇಬ್ಬರಿಂದಲೂ ತಿರಸ್ಕೃತಳಾಗಿ, ತವರಿಗೆ ಭಾರವಾಗಿ, ಸರಿಯಾದ ಆರೈಕೆಯಿಲ್ಲದೆ ಚೊಚ್ಚಲ ಹೆರಿಗೆಯಲ್ಲಿ ಪ್ರಾಣಬಿಡುತ್ತಾಳೆ. ತನ್ನದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವ ಮೀನಾಕ್ಷಿಗೆ ಅಭಿವ್ಯಕ್ತಿಯ ಅವಕಾಶವಾಗಲಿ, ಆಯ್ಕೆಯ ಸ್ವಾತಂತ್ರ್ಯವಾಗಲೀ ಇಲ್ಲ. ಅತ್ಯಾಚಾರದ ಕಹಿನೆನಪು ಮತ್ತು ಪತಿಯ ನಿಷ್ಕಪಟ ಪ್ರೀತಿಗಳ ನಡುವೆ ಸಮತೋಲ ಸಾಧಿಸಲಾಗದೆ, ಪತಿಗೆ ಮೋಸ ಮಾಡಲು ಮನವೊಪ್ಪದ ಮುಗ್ಧೆಯೊಬ್ಬಳ ಬದುಕು ದುರಂತವಾಗುತ್ತದೆ. ಮದುವೆಗೆ ಮೊದಲೆ ಗರ್ಭಿಣಿಯಾಗಿದ್ದ ವಿಚಾರವನ್ನು ಪತಿಯಿಂದ ಮುಚ್ಚಿಡುವ ಅವಕಾಶವಿದ್ದರೂ ಬಳಸಿಕೊಳ್ಳುವುದು ಮೀನಾಕ್ಷಿಗೆ ಸಾಧ್ಯವಾಗಿಲ್ಲ. ಹೆಣ್ಣನ್ನು ಕೇವಲ 'ಕೆಡಬಹುದಾದ ಸೊತ್ತಾಗಿ' ನಡೆಸಿಕೊಳ್ಳುವ ಪುರುಷಪಕ್ಷಪಾತಿಯಾದ ಸಾಮಾಜಿಕ ನೀತಿಯು ಮೀನಾಕ್ಷಿಯ ಬದುಕಿನ ದುರಂತಕ್ಕೆ ಕಾರಣವಾಗಿದೆ.

ಸಭ್ಯರೂ, ಸುಶೀಲೆಯರೂ ಆದ ಸ್ತ್ರೀಯರು ಪುರುಷಪ್ರಧಾನ ಅಧಿಕಾರವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾಗುವುದನ್ನು ಚಂದುಮೇನೋನ್ ಒ. ಅವರು ಬರೆದಿರುವ 'ಶಾರದ' ಕೃತಿಯಲ್ಲಿ ಚಿತ್ರಿಸಲಾಗಿದೆ. ಕ್ರೌರ್ಯ, ದುರಭಿಮಾನ ಮತ್ತು ವಿವೇಚನಾರಹಿತ ವರ್ತನೆಗಳಿಂದ ಕೂಡಿದ ಇಲ್ಲಿನ ಪುರುಷರು ತರವಾಡಿನ ಎಲ್ಲ ಹಳವಂಡಗಳು ಮತ್ತು ತಂತ್ರಗಾರಿಕೆಗಳ ಪ್ರತೀಕವಾಗಿದ್ದಾರೆ. ಅದಕ್ಕೆ ಪ್ರತಿಯಾಗಿ ನೈತಿಕತೆ ಮತ್ತು ಸ್ವಾಭಿಮಾನಗಳಿಂದ ಬದುಕಿದ ಕಲ್ಯಾಣಿಯಮ್ಮನ ಪಾತ್ರದ ಪ್ರಕಟಣೆಯಿದೆ. ಸರಳತೆ, ಸಾತ್ವಿಕತೆ, ಸೌಂದರ್ಯಗಳೇ ಹೆಣ್ಣಾಗಿ ಮೈವೆತ್ತಿರುವ ಶಾರದೆಯ ಚಿತ್ರಣವಿದೆ. ಈ ಸ್ತ್ರೀನಿರೂಪಣೆಯು ಪುರುಷಪಾತ್ರಗಳ ಮೂಲಕವೆ ವ್ಯಕ್ತವಾಗಿದೆ. ಪುರುಷನ ಅಧಿಕಾರಲಾಲಸೆಗೆ ಬಲಿಯಾಗುವ ಕಲ್ಯಾಣಿಯಂಥ ಸ್ತ್ರೀಯ ಅಸಹಾಯಕತೆಯನ್ನು ಮತ್ತು ಅಂಥ ಸ್ಥಿತಿಯಲ್ಲೂ ಅವಳ ವರ್ತನೆಯ ಉದಾತ್ತತೆಯನ್ನು ಕಾದಂಬರಿಯು ನಿರೂಪಿಸುತ್ತದೆ.

ಶ್ರೀಮಂತ ಆಳರಸರ ಕುಟುಂಬದ ಪೂಂಜೊಲಕ್ಕರ ಮನೆತನದ ಕಲ್ಯಾಣಿಗೆ ಆಕೆಯ ಚಿಕ್ಕಪ್ಪ 'ಕಾರಣವನ್' (ತರವಾಡಿನ ಯಜಮಾನ) ನಿರ್ಣಯಿಸಿದ 'ಸಂಬಂಧ'ವು (ನಂಬೂದಿರಿ ಬ್ರಾಹ್ಮಣರ ಹಿರಿಯ ಮಗನನ್ನು ಉಳಿದು ಇತರ ಗಂಡುಮಕ್ಕಳು ನಾಯರ್ ಸ್ತ್ರೀಯರೊಡನೆ ಮಾಡಿಕೊಳ್ಳುವ ಕೂಡಿಕೆ ರೀತಿಯ ವಿವಾಹ) ಸಮ್ಮತವಿಲ್ಲ. ಮನೆತನದ ವ್ಯವಹಾರದ ದೃಷ್ಟಿಯಿಂದ ಶ್ರೀಮಂತನಾದ ಬ್ರಾಹ್ಮಣನೊಂದಿಗೆ ನೆರವೇರಿದ ಮದುವೆಯನ್ನು ಒಪ್ಪಲಾರದೆ ಬುದ್ಧಿಹೀನನೂ, ಮುದುಕನೂ ಆದ

ಪುರುಷನೊಂದಿಗೆ ಬಾಳಲು ಸಾಧ್ಯವಿಲ್ಲವೆಂದು ನಿರ್ಧರಿಸುತ್ತಾಳೆ. ತನ್ನ ಅಭಿಪ್ರಾಯವನ್ನು ಬಹಿರಂಗವಾಗಿ ಪ್ರಕಟಿಸುವ ಧೈರ್ಯವಿಲ್ಲದೆ, ಸ್ವಂತದ್ದಾದ ಕೆಲವು ಆಭರಣಗಳನ್ನು ತೆಗೆದುಕೊಂಡು ಮನೆಯಿಂದ ತಪ್ಪಿಸಿಕೊಂಡು, ಕಾಶಿಗೆ ಹೋಗಿ ಸ್ವತಂತ್ರವಾಗಿ ಬದುಕುವ ಉದ್ದೇಶದೊಂದಿಗೆ ಹೊರಡುತ್ತಾಳೆ. ಬ್ರಾಹ್ಮಣರೊಂದಿಗೆ ಮಾತ್ರ ಸಂಬಂಧವನ್ನು ಹೊಂದಬೇಕಾದ ತರವಾಡಿನ ಸಂಪ್ರದಾಯಕ್ಕೆ ವಿರುದ್ಧವಾಗಿ, ಕಾಶಿಯಲ್ಲಿ ಭೇಟಿಯಾದ ಚಿತ್ರಕಾರ ರಾಮನ್ ಮೇನೋನ್‌ನನ್ನು ಇಷ್ಟಪಟ್ಟು ದಾಂಪತ್ಯ ಸಂಬಂಧವನ್ನು ಹೊಂದಿ ಶಾರದೆ ಎಂಬ ಹೆಣ್ಣುಮಗುವನ್ನು ಪಡೆಯುತ್ತಾಳೆ. ಪತಿಯು ವ್ಯವಹಾರದಲ್ಲಿ ನಷ್ಟ ಹೊಂದಿ ಆರ್ಥಿಕ ಸಂಕಷ್ಟದಲ್ಲಿರುವಾಗಲೂ 'ಮಲಯಾಳಂ ನಾಡಿಗೆ ಎಂದೂ ಮರಳುವ ಇಷ್ಟವಿಲ್ಲದೆ' ಕಾಶಿಯಲ್ಲೇ ಉಳಿದುಕೊಂಡು ಕೆಲವೇ ವರ್ಷಗಳಲ್ಲಿ ಅನಾರೋಗ್ಯದಿಂದ ಮರಣ ಹೊಂದುತ್ತಾಳೆ. ಕಲ್ಯಾಣಿಯ ಮರಣಾನಂತರ ಅವಳ ಇಚ್ಛೆಯಂತೆ 'ಪೂಂಜೊಲಕ್ಕರ ಮನೆಯ ಸಂತತಿಯಾದ ಶಾರದೆಗೆ ಮನೆತನದ ಸ್ಥಿತಿಗತಿಗೆ ಅನುಗುಣವಾದ ಶಿಕ್ಷಣ ಇತ್ಯಾದಿಗಳನ್ನು ಕೊಡಿಸಿ ಯೋಗ್ಯ ನೆಲೆಗೆ ತರುವುದಕ್ಕಾಗಿ' ಕೇರಳಕ್ಕೆ ಮರಳುವ ರಾಮನ್ ನಾಯರ್ ಕಾನೂನಿನ ಸಂಘರ್ಷಕ್ಕೆ ಇಳಿಯಬೇಕಾಗುತ್ತದೆ. ಸಂಬಂಧಗಳಿಗಿಂತ ಸಂಪತ್ತೇ ಮಹತ್ವದ್ದೆಂದು ಭಾವಿಸಿರುವ ತರವಾಡಿನ ಪುರುಷರ ಸ್ವಾರ್ಥ ಮತ್ತು ಹೀನ ಮನಸ್ಥಿತಿಯು ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸುವ ಕ್ಷುಲ್ಲಕ ವ್ಯವಹಾರಕ್ಕೆ ತೊಡಗುವುದನ್ನು ಕಾದಂಬರಿಯಲ್ಲಿ ಕಾಣಬಹುದು.

ತರವಾಡಿನ ಅನೂಚಾನ ಪರಂಪರೆಯಂತೆ ಕಲ್ಯಾಣಿಯಮ್ಮನ ಸ್ವಂತ ಮಗಳಾದ ಶಾರದಳಿಗೆ ಪಾಲು ಕೊಡಬೇಕಾಗುವುದನ್ನು ತಪ್ಪಿಸುವುದಕ್ಕಾಗಿ ಅವಳು ಕಲ್ಯಾಣಿಯ ಮಗಳೇ ಅಲ್ಲವೆಂದು ನಿರಾಕರಿಸುವ, ಆ ಬಗ್ಗೆ ಪೂರಕ ಸಾಕ್ಷಿಗಳನ್ನು ಸೃಷ್ಟಿಸುವ ಒಂದು ವ್ಯವಸ್ಥಿತ ಸಂಚನ್ನು ಕುಟುಂಬದ ಪುರುಷರು ಹೂಡುತ್ತಾರೆ. ಆಸ್ತಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಸ್ವಂತ ವಂಶದ ಕುಡಿಯಾಗಿರುವ ಶಾರದೆಯ ಹುಟ್ಟಿನ ಮೂಲವನ್ನೆ ನಿರಾಕರಿಸುವ 'ಅಚ್ಚನ್' (ರಾಜವಂಶದ ಪುರುಷರಿಗೆ ಇರುವ ಪದವಿ) ಮನೆಯವರು ಶತಮಾನಗಳಿಂದಲೂ ಹೆಣ್ಣು ತನ್ನ ಅಸ್ತಿತ್ವಕ್ಕೆ, ಕನ್ಯತ್ವಕ್ಕೆ, ಶೀಲಕ್ಕೆ... ಸಾಕ್ಷಿ ಕೊಡಬೇಕಾಗುವ ಲೈಂಗಿಕ ರಾಜಕೀಯವನ್ನು ನೆನಪಿಸುತ್ತಾರೆ. ಶಾರದೆಯನ್ನು 'ಕಲ್ಯಾಣಿಯ ಪತಿಯು ಪಠಾಣ ಸ್ತ್ರೀಯೊಂದಿಗೆ ಹೊಂದಿದ್ದ ವ್ಯಭಿಚಾರ ಸಂಬಂಧದಿಂದ ಹುಟ್ಟಿದ ಕಾನೂನುಬಾಹಿರ ಸಂತಾನವೆಂಬಂತೆ' ಸುಳ್ಳುಕತೆಯನ್ನು ಸೃಷ್ಟಿಸಿ ನಂಬಿಸಲು ಯತ್ನಿಸುವ ವಂಚಕ ವೈತ್ತಿಪಟ್ಟರ್ ಮತ್ತು ಅವನಿಗೆ ನೆರವಾಗುವ ಆಳು ಕೃಷ್ಣನ್ ಅಧಿಕಾರ, ಆಸ್ತಿಗಾಗಿ ಯಾವ ಮಟ್ಟಕ್ಕಾದರೂ ಇಳಿಯುವ ಪುರುಷನೀತಿಯ ಪ್ರತೀಕವಾಗಿದ್ದಾನೆ.

ನಾಯರ್ ಸಮುದಾಯದ ಮರುಮಕ್ಕತ್ತಾಯ ಕಟ್ಟು ಹೆಣ್ಣಿಗೆ ಆರ್ಥಿಕ ಭದ್ರತೆಯನ್ನು ಒದಗಿಸುವ ಆಶಯವುಳ್ಳದ್ದು. ಭೂಮಿಯ ಒಡೆತನವು ಸೋದರಿಯರು ಮತ್ತು ಅವರ ಹೆಣ್ಣು ಸಂತತಿಯಲ್ಲಿ

ಮುಂದುವರೆಯುವ ಈ ಪದ್ಧತಿಯಲ್ಲಿ ಹಿರಿಯ ಸೋದರ ತರವಾಡಿನ ಯಜಮಾನನಂತೆ ವರ್ತಿಸುತ್ತ, ಸೋದರಿಯ ಮಕ್ಕಳನ್ನು ನಿರ್ಲಕ್ಷಿಸುತ್ತ, ಇನ್ನೊಂದು ತರವಾಡು ಮನೆಯಲ್ಲಿರುವ ತನ್ನ ಮಡದಿ ಮಕ್ಕಳಿಗಾಗಿ ಹಾಗೂ ತನ್ನ ಸುಖಭೋಗಗಳಿಗಾಗಿ ಸೋದರಿಯರ ತರವಾಡಿನ ಆಸ್ತಿಯನ್ನು ವಿನಿಯೋಗಿಸುವುದನ್ನು 'ಶಾರದ' ಕಾದಂಬರಿಯು ಗುರುತಿಸುತ್ತದೆ. ಪುರುಷರ ದುರಭಿಮಾನ, ಕ್ರೌರ್ಯ, ವಿವೇಚನಾರಹಿತ ವರ್ತನೆ, ಮೋಸದ ತಂತ್ರಗಾರಿಕೆಗಳಿಗೆ ಪ್ರತಿಯಾಗಿ ನೈತಿಕತೆ ಮತ್ತು ಸ್ವಾಭಿಮಾನಗಳಿಂದ ಬದುಕಿದ ಕಲ್ಯಾಣಿ ಹಾಗೂ ಸರಳತೆ, ಸಾತ್ವಿಕತೆಗಳನ್ನು ತುಂಬಿಕೊಂಡಿರುವ ಶಾರದೆಯ ಪಾತ್ರಗಳನ್ನು ಕೃತಿಯಲ್ಲಿ ನಿರೂಪಿಸಲಾಗಿದೆ.

ಪ್ರತಿಷ್ಠೆ ಮತ್ತು ಸಂಪತ್ತಿನ ಆಸೆಯಿಂದ ಮನೆಯ ಹೆಣ್ಣುಮಕ್ಕಳನ್ನು ರೂಪ, ವಯಸ್ಸು ಮತ್ತು ಅರ್ಹತೆಗಳಲ್ಲಿ ಸಮಾನರಲ್ಲದ ಪುರುಷರಿಗೆ 'ಸಂಬಂಧ' ಮಾಡಿಕೊಡುವ ಸ್ವಾರ್ಥವನ್ನೂ ಕುಟುಂಬದ ಹಿರಿಯನಾದ ಕಾರಣವರ್‌ಗಳು ಹೊಂದಿದ್ದುದನ್ನು ಸಮಕಾಲೀನ ಇತರ ಕೃತಿಗಳಲ್ಲೂ ಗಮನಿಸಬಹುದು. ಸಾಮಾಜಿಕ ಮತ್ತು ಸಾಂಸಾರಿಕ ವ್ಯವಸ್ಥೆಯೊಳಗಿನ ಸ್ವಾರ್ಥ, ವಂಚನೆಗಳು ಸ್ತ್ರೀಯರ ನೆಮ್ಮದಿಯ ಬದುಕಿಗೆ ಮುಳುವಾಗಿವೆ. ಸಮಾಜದ ವಾಸ್ತವ ಸ್ತ್ರೀಯರ ಪ್ರತಿನಿಧಿಗಳಾಗಿ ವ್ಯವಸ್ಥೆಯ ಸ್ವಾರ್ಥಕ್ಕೆ ಮುದುಡುವ ಸ್ತ್ರೀತ್ವವನ್ನು ಕಥಾಪಾತ್ರಗಳು ಪ್ರತಿಬಿಂಬಿಸುತ್ತವೆ.

೨.೧.೫. ಧರ್ಮ: ಸ್ತ್ರೀದೃಷ್ಟಿ

ಮಲಯಾಳಂ ಕಥನಸಾಹಿತ್ಯದ ಸ್ತ್ರೀಯರು ಧರ್ಮದ ಮೂಲದಲ್ಲಿ ತಮ್ಮ ಸಮಸ್ಯೆಗಳಿಗೆ ಕಾರಣ ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ಯತ್ನಿಸಿದ್ದಾರೆ. ನಿತ್ಯಜೀವನದ ಸಮಸ್ಯೆಗಳ ಪರಿಹಾರಕ್ಕೆ ದೇವರ ಕುರಿತಾದ ಶ್ರದ್ಧೆಯನ್ನು ಬಳಸಿಕೊಂಡಿದ್ದಾರೆ. ಕಾಣದ ಶಕ್ತಿಯ ಕೃಪೆಯಿದ್ದರೆ ಇಂದಲ್ಲ ನಾಳೆಯಾದರೂ ತಾವು ಬಯಸಿದ್ದು ಈಡೇರುವುದು ಎಂಬ ವಿಶ್ವಾಸವಿಟ್ಟಿದ್ದಾರೆ. ಜೊತೆಜೊತೆಗೇ ಧಾರ್ಮಿಕ ತತ್ವಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಇನ್ನೊಬ್ಬರಿಗೆ ತೊಂದರೆಯಾಗದಂತೆ ಸಾಮರಸ್ಯದಿಂದ ಬದುಕುವುದು ಸಾಧ್ಯವಿದೆ ಎಂಬುದನ್ನು ಕಂಡುಕೊಂಡಿದ್ದಾರೆ. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅನಾಚಾರಗಳನ್ನು, ಧರ್ಮದ ಸಾಂಸ್ಥೀಕರಣದಿಂದ ಉಂಟಾಗಿರುವ ಅಪಾಯಗಳನ್ನು ಗುರುತಿಸಿದ್ದಾರೆ ಮತ್ತು ಅಗತ್ಯವೆನಿಸಿದಾಗ ಅದರ ವಿರುದ್ಧ ಧ್ವನಿ ಎತ್ತಿದ್ದಾರೆ. ಲೇಖಕಿಯರ ಕೃತಿಗಳಲ್ಲಿ ಇಂಥ ಪ್ರಯತ್ನಗಳನ್ನು ವಿಶೇಷವಾಗಿ ಗಮನಿಸಬಹುದು.

ಖದೀಜಾ ಮುಮ್ತಾಝ್ ಅವರ 'ಮುಂಬೆಳಕು' ಧಾರ್ಮಿಕ ನೆಲೆಯ ಸ್ತ್ರೀವ್ಯಾಖ್ಯಾನದ ಒಂದು ಹೊಸ ಪ್ರಯತ್ನವಾಗಿ ಗುರುತಿಸಬಹುದಾದ ಕಾದಂಬರಿ. ಇಸ್ಲಾಂನ ಧಾರ್ಮಿಕ ನಿಯಮಗಳ ಕುರಿತು ಕೆಲವು ಪ್ರಶ್ನೆಗಳನ್ನು ಎತ್ತುವ ಈ ಕೃತಿಯನ್ನು ಬರೆದವರು, ಅನುವಾದಿಸಿದವರು ಇಬ್ಬರೂ ಮುಸ್ಲಿಂ

ಮಹಿಳೆಯರು. 'ಸತ್ಯವಿಶ್ವಾಸಿಯಲ್ಲ, ಸತ್ಯಾನ್ವೇಷಕಿಯಾಗು' ಎಂಬ ಪ್ರೇರಣೆ ಈ ಕಾದಂಬರಿಯ ರಚನೆಗೆ ಪ್ರೇರಣೆಯಾಗಿದೆ ಎಂದು ಲೇಖಕಿ ಹೇಳಿಕೊಂಡಿದ್ದಾರೆ. ಧಾರ್ಮಿಕ ನಿಯಮಗಳ ಕುರಿತು ಪ್ರಶ್ನೆಗಳನ್ನು ಕೇಳುವುದು ಒಂದು ಸಾಮೂಹಿಕ ಜವಾಬ್ದಾರಿ ಎಂಬುದು ಈ ಲೇಖಕಿಯ ನಿಲುವು. ಗಂಡು ಹೇಳಿದ್ದನ್ನೇ ಸತ್ಯವೆಂದು ನಂಬುವ ಸಾಮಾನ್ಯ ಹೆಣ್ಣಿಗಿಂತ ಭಿನ್ನವಾದ, ಸತ್ಯಾನ್ವೇಷಣೆಯ ಒಂದು ವಿಶಿಷ್ಟ ಪ್ರಯತ್ನವನ್ನು ಕಥೆಯ ಕೇಂದ್ರಪಾತ್ರವಾಗಿರುವ ಸಬಿತಾಳ ಮೂಲಕ ಲೇಖಕಿ ನಡೆಸಿದ್ದಾರೆ. ಪ್ರಧಾನವಾಗಿ ಧಾರ್ಮಿಕ ಒಲವಿನಿಂದ ಬರೆದುದಾಗಿರುವ ಈ ಕೃತಿ ಇಸ್ಲಾಂನ ಅನ್ವೇಷಣೆ ನಡೆಸುವ ಸಾಧ್ಯತೆ ಮತ್ತು ಅವಕಾಶಗಳು ಸ್ತ್ರೀಗೆ ಹೆಚ್ಚಾಗಿವೆ ಎಂದು ಪ್ರತಿಪಾದಿಸುತ್ತದೆ. ಪುರುಷರಂತೆ ಅಂಧವಿಶ್ವಾಸದಿಂದ ಧರ್ಮವನ್ನು ಒಪ್ಪಿಕೊಳ್ಳದೆ ಪ್ರಶ್ನೆಗಳ ಮೂಲಕ ಸಂಶಯಗಳನ್ನು ನಿವಾರಿಸಿಕೊಂಡು ಇನ್ನಷ್ಟು ಧರ್ಮಪರವಾಗಿ ಬದುಕುವುದು ಸಾಧ್ಯ ಎಂಬುದು ಇಲ್ಲಿನ ಆಶಯ. ಕೃತಿಯು ನಾಯಕಿ ಪ್ರಧಾನವಾಗಿದ್ದು ಧರ್ಮದ ಕುರಿತಾದ ಪುರುಷರ ಸಿದ್ಧ ವ್ಯಾಖ್ಯಾನಗಳನ್ನು ಶೋಧಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಪತಿಯ ಬೆಂಬಲವೂ ಅವಳಿಗಿರುವಂತೆ ಲೇಖಕಿ ಪ್ರಜ್ಞಾಪೂರ್ವಕವಾಗಿ ಕಾಣಿಸಿದ್ದಾರೆ.

ಎಂ.ಬಿ.ಬಿ.ಎಸ್. ಓದಿರುವ ಸಬಿತಾ ಹಿಂದೂ ಸ್ತ್ರೀಯಾಗಿದ್ದು ಸಹಪಾಠಿಯಾಗಿದ್ದ ಮುಸ್ಲಿಂ ಯುವಕನನ್ನು ಪ್ರೇಮಿಸಿ, ಅವನನ್ನು ಮದುವೆಯಾಗುವುದಕ್ಕಾಗಿಯೆ ಮತಾಂತರಗೊಂಡವಳು. ಶಿಕ್ಷಣ, ಅಭಿವ್ಯಕ್ತಿ ಮತ್ತು ಧಾರ್ಮಿಕ ಜಿಜ್ಞಾಸೆಗೆ ಲಿಂಗಬೇಧವಿಲ್ಲದೆ ಮುಕ್ತವಾಗಿರುವ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನೆಲೆಯಿಂದ ಬಂದವಳಾದ ಕಾರಣ ಹೊಸದಾಗಿ ತಾನು ಪ್ರವೇಶಿಸಿದ ಮತದ ತತ್ವಗಳ ಬಗ್ಗೆ ವಸ್ತುನಿಷ್ಠವಾಗಿ ವಿಶ್ಲೇಷಣೆ ಮಾಡುವುದು ಅವಳಿಗೆ ಸಾಧ್ಯವಾಗಿದೆ. ಪತಿಯೊಂದಿಗೆ ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುತ್ತ, ಇಸ್ಲಾಂನ ಆದರ್ಶಗಳನ್ನು ಮತ್ತು ವರ್ತಮಾನದ ಬದುಕನ್ನು ವಿಮರ್ಶೆಗೆ ಒಳಪಡಿಸುತ್ತಾಳೆ. ಇಸ್ಲಾಂ ಪವಿತ್ರಗ್ರಂಥಗಳಲ್ಲಿ ಉಲ್ಲೇಖಿಸಲಾದ ಸ್ತ್ರೀಯರ ಮತ್ತು ಅವರ ಮೂಲಕ ಪುರುಷರ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲು ಹಾಗೂ ಮರುವ್ಯಾಖ್ಯಾನಿಸಲು ಪ್ರಯತ್ನಿಸುತ್ತಾಳೆ. ಪೈಗಂಬರರ ನಿಕಟ ಸಂಬಂಧಿಗಳಾಗಿದ್ದ ಹಾಜರಾ ಮತ್ತು ಆಯಿಷಾರ ಬದುಕಿನ ದೃಢತೆ ಅವಳಿಗೆ ಹೆಚ್ಚು ಧೈರ್ಯವನ್ನು ಕೊಡುತ್ತದೆ. ಆ ಮಹಿಳೆಯರೊಡನೆ ಇಸ್ಲಾಮಿಕ್ ಜಗತ್ತಿನಲ್ಲಿ ಸ್ತ್ರೀತ್ವದ ಅತ್ಯುಚ್ಚ ಮಟ್ಟದಲ್ಲಿ ಹೋರಾಡಿದವಳಾಗಿ ತನ್ನನ್ನು ಗುರುತಿಸಿಕೊಳ್ಳುತ್ತಾಳೆ. ಅರೇಬಿಯಾದ ಮರಳುಗಾಡಿನ ಪ್ರಯಾಣದಲ್ಲಿ ಒಂದು ವಿಶಿಷ್ಟವಾದ ದಿವ್ಯ ಅನುಭವವನ್ನೂ ಪಡೆಯುತ್ತಾಳೆ.

ಮಹಿಳೆಯ ಸಂಚಾರಕ್ಕೆ ಮೇರೆಯಿಲ್ಲ, ಆದರೆ ಆಕೆ ಪ್ರಜ್ಞಾಪೂರ್ವಕವಾಗಿ, ಸ್ವಯಂ ಒಪ್ಪಿಕೊಂಡು ಇಸ್ಲಾಮಿನ ಗಡಿಯೊಳಗೆ ಇರುತ್ತಾಳೆ ಎಂದು ಕೃತಿ ಪ್ರತಿಪಾದಿಸುತ್ತದೆ. ಒಬ್ಬಾಕೆ ಹೆಣ್ಣಿನ ಯಾತ್ರೆಯಿಂದ ಕತೆ ಆರಂಭವಾಗುತ್ತದೆ ಮತ್ತು ಮರುಯಾತ್ರೆಯೊಂದಿಗೆ ಮುಕ್ತಾಯವಾಗುತ್ತದೆ. ಕೇರಳದಿಂದ ಗಲ್ಫ್ (ಮಕ್ಕಾ) ರಾಷ್ಟ್ರಕ್ಕೆ ಉದ್ಯೋಗನಿಮಿತ್ತ ಹೊರಟ ಸಬಿತಾ ಕೃತಿಯ ಕೊನೆಯಲ್ಲಿ ತಾಯ್ನಾಡಿಗೆ ಮರಳುವ

ನಿರ್ಧಾರ ಕೈಗೊಂಡು ಇಸ್ಲಾಂ ಧರ್ಮದ ಕುರಿತಾಗಿ ಅವಳಿಗಿದ್ದ ಸಂದೇಹಗಳನ್ನು, ಪತಿಯ ಬಗೆಗಿದ್ದ ಅಸಮಾಧಾನವನ್ನು, ಸಹೋದ್ಯೋಗಿಯ ಬಗೆಗಿದ್ದ ತಪ್ಪು ತಿಳುವಳಿಕೆಯನ್ನು ನೀಗಿಕೊಂಡು ಸ್ವಚ್ಛ ಮನಸ್ಸಿನಿಂದ ತಿರುಗಿ ಬರುತ್ತಾಳೆ. ವಿಮಾನವೇರಲು ಹೊರಟಿರುವ ಪತ್ನಿ ಒಂದು ತಾರೆಯಂತೆ ಪ್ರಕಾಶಿಸುತ್ತಿದ್ದಾಳೆ, ಹೆಂಡತಿಯನ್ನು ಸಂಶಯಿಸಿದ ತಾನೋ ಹೆಚ್ಚು ವಯಸ್ಸಾದವನಂತೆ, ಸೊರಗಿದವನಂತಿದ್ದೇನೆ ಎಂದು ಸ್ವತಃ ಆಕೆಯ ಪತಿಯೆ ಭಾವಿಸುವುದು ವಿಶೇಷವಾಗಿದೆ.

'ಮುಂಬೆಳಕು' ಕೃತಿಯ ಮೂಲ ಮಲಯಾಳಂ ಕೃತಿಯ ಹೆಸರು 'ಬರ್ಸ' ಅಂದರೆ 'ಮುಖ ತೆರೆದಿಟ್ಟವಳು' ಎಂದರ್ಥ. ಸಬಿತಾ ರಶೀದನ ಪ್ರೀತಿಗಾಗಿ ಇಸ್ಲಾಂಗೆ ಮತಾಂತರಗೊಂಡರೂ ತನ್ನ ಮೂಲ ಹೆಸರನ್ನು ಬದಲಾಯಿಸದೆ, ಪರ್ದಾ ಧರಿಸದೆ ಸಹಜ ಪರಿಸರದಲ್ಲಿ 'ಮುಖದೊಂದಿಗೆ ಮನಸ್ಸನ್ನೂ ತೆರೆದಿಟ್ಟುಕೊಂಡು' ಬದುಕಲು ಬಯಸಿದ್ದಾಳೆ. ಸ್ತ್ರೀಯನ್ನು ಮರೆಯಲ್ಲಿಡುವ ಧರ್ಮದ ನಿಜ ಬೆಳಕನ್ನು ಕಾಣಬಯಸಿದ್ದಾಳೆ. ಮುಸ್ಲಿಮರ ಪವಿತ್ರ ಸ್ಥಳ ಎನಿಸಿರುವ ಮಕ್ಕಾದಲ್ಲಿ ಉದ್ಯೋಗನಿಮಿತ್ತ ಕೆಲವು ವರ್ಷ ಕಳೆಯಬೇಕಾದಾಗ ಮನೆ ಮತ್ತು ಆಸ್ಪತ್ರೆಯ ವಾತಾವರಣದಲ್ಲಿ ಸ್ತ್ರೀ ಎಂಬ ಕಾರಣಕ್ಕೆ, ಭಾರತೀಯಳೆಂಬ ಕಾರಣಕ್ಕೆ ಅವಳಿಗೆ ದಕ್ಕುವ ವಿಶೇಷ ಅನುಭವಗಳು ಕೃತಿಯಲ್ಲಿವೆ. ಹೊರದೇಶಗಳಲ್ಲಿ ವಾಸಿಸುತ್ತಿರುವ ಭಾರತೀಯ ಮಹಿಳೆಯ ಅನುಭವಗಳು ಪುರುಷರ ಅನುಭವಗಳಿಗಿಂತ ಭಿನ್ನವಾಗಿರುವುದನ್ನು ಕೃತಿ ದಾಖಲಿಸಿದೆ. ಮಕ್ಕಾದ ಮನೆಕೆಲಸದ ಹೆಂಗಸರ ಹೀನಾಯ ಪರಿಸ್ಥಿತಿ, ಪರದೆಯ ಒಳಗೆ ಸ್ವೇಚ್ಛೆಯಿಂದ ನಡೆದುಕೊಳ್ಳುವ ಮುಸ್ಲಿಂ ಮಹಿಳೆಯರು, ಗುಲಾಮ ಸ್ತ್ರೀಯರನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಹಾಗೂ ಗುಲಾಮಿ ಸ್ತ್ರೀಯರನ್ನು ಹೆಂಡತಿಯಂತಲ್ಲದೆ 'ಮಗನ ತಾಯಿ'ಯಾಗಿ ಮಾತ್ರ ಒಪ್ಪಿಕೊಳ್ಳಲು ಅವಕಾಶವಿದ್ದ ಪ್ರಾಚೀನ ಪದ್ಧತಿ, ಸ್ತ್ರೀತ್ವದ ಬೆಂಬಲದಿಂದ ಬೆಳೆದ ಪ್ರವಾದಿಗಳು ನಿರ್ವಚಿಸಿದಂತೆ ಇಸ್ಲಾಂ ಮಹಿಳೆಯರು ಧಾರ್ಮಿಕ ಅಸ್ಮಿತೆ, ಅನುಭವಗಳಿಂದ ದೂರವುಳಿದು ನೇಪಥ್ಯಕ್ಕೆ ಸರಿಯುವಂತಾದದ್ದು... ಮುಂತಾದ ಸಂಗತಿಗಳನ್ನು ಕೃತಿಯಲ್ಲಿ ಸಾಂದರ್ಭಿಕವಾಗಿ ಚರ್ಚಿಸಲಾಗಿದೆ.

ಕಮಲಾದಾಸ್ ಅವರು ಬರೆದ 'ಗಾಡಿಯೆತ್ತುಗಳು' ಎಂಬ ನೀಳ್ಗತೆಯ ಗಾಯಕಿ ಅನಸೂಯಾಬಾಯಿ ತನ್ನ ಕುಲವೃತ್ತಿಯಂತೆ ಪುರುಷರ ಸಂತೋಷಕ್ಕಾಗಿ ಹಾಡುವವಳು. ಶ್ರೀಮಂತ ಪುರುಷರನ್ನು ಸಂಗೀತದ ಮೂಲಕ ಆಕರ್ಷಿಸಿ ತನ್ನವರಾಗಿಸಿಕೊಂಡು ಸಂಪತ್ತು ಒಡವೆಗಳನ್ನು ಗಳಿಸುವುದು ಅವಳ ವೃತ್ತಿಧರ್ಮದ ಭಾಗವೆ ಆಗಿದೆ. ಆದರೆ ಕುಲವೃತ್ತಿಗೂ ಚಾರಿತ್ರ್ಯಕ್ಕೂ ಸಂಬಂಧವಿದೆಯೆಂದು ಆಕೆ ಭಾವಿಸಿಲ್ಲ. ಒಮ್ಮೆ ಡಾಕ್ಟರ್ ಸಾದಿಕ್ ಅಲಿಯ ಪ್ರೇಮಕ್ಕೆ ಬಿದ್ದ ಬಳಿಕ ಇತರ ಗಂಡಸರೆದುರು ಹಾಡುವುದನ್ನೇ ನಿಲ್ಲಿಸಿ, ಪ್ರೇಮದ 'ಪಾವಿತ್ರ್ಯ'ವನ್ನು ಉಳಿಸಿಕೊಳ್ಳುತ್ತಾಳೆ. ತಾನು ಸಾದಿಕ್‌ನ ಪತ್ನಿಯೆಂದೇ ಭಾವಿಸಿ ಒಪ್ಪಿ ನಡೆದುಕೊಳ್ಳುತ್ತಾಳೆ. ಇಸ್ಲಾಂನಲ್ಲಿ ಬಹುಪತ್ನಿತ್ವಕ್ಕೆ ಅವಕಾಶವಿರುವುದರಿಂದ ಸಾದಿಕ್‌ನ

ಪ್ರೇಮವನ್ನು ಅಧಿಕೃತವಾಗಿ ಪಡೆಯುವುದಕ್ಕಾಗಿ ಇಸ್ಲಾಂ ಧರ್ಮಕ್ಕೆ ಮತಾಂತರವಾಗುವ ಪ್ರಯತ್ನವನ್ನೂ ಮಾಡುತ್ತಾಳೆ. ಧರ್ಮವು ಬದುಕಿಗಿಂತ ದೊಡ್ಡದಲ್ಲ ಎಂದು ಅನಸೂಯಾಬಾಯಿ ನಂಬಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಇದೇ ಕತೆಯ ಚಂದ್ರಿ ಕೊಲೆಗಾರನೊಬ್ಬನ ತಂಗಿ ಎಂಬ ಕಾರಣಕ್ಕೆ ತನ್ನ ಕುಲಬಾಂಧವರಿಂದ, ಸಮಾಜದಿಂದ ತಿರಸ್ಕಾರಕ್ಕೆ ಒಳಗಾದವಳು. ವಿದ್ಯಾವಂತನೂ, ಸುಧಾರಣೆಯ ಚಳವಳಿಗಳಲ್ಲಿ ತೊಡಗಿಸಿಕೊಂಡವನೂ ಆದ ಅಣ್ಣ ಜಗನ್ನಾಥನ ಪ್ರಭಾವದಿಂದಾಗಿ ವೈಚಾರಿಕತೆಯನ್ನು ಬೆಳೆಸಿಕೊಂಡಿದ್ದ ಚಂದ್ರಿ 'ದೇವರ ಮುಂದೆ ಎಲ್ಲರೂ ಒಂದೇ' ಎನ್ನುವ ಕ್ರೈಸ್ತಮತವು ಬದುಕಿಗೆ ಭದ್ರತೆ, ಗೌರವಗಳನ್ನು ಒದಗಿಸಬಲ್ಲದು ಎಂಬ ನಂಬಿಕೆಯಿಂದ 'ಕ್ರಿಸ್ತೀನ'ಳಾಗಿದ್ದಾಳೆ. ದೇವರನ್ನೂ, ದೇವಾಲಯವನ್ನೂ ಬದಲಾಯಿಸುವುದರಿಂದ ನೆಮ್ಮದಿಯ ಬದುಕು ಲಭ್ಯವಾಗುವುದಾದರೆ ಇನ್ನೊಂದು ಮತವನ್ನು ಒಪ್ಪಿಕೊಳ್ಳುವುದರಲ್ಲಿ ತಪ್ಪೇನಿಲ್ಲ ಎಂಬುದು ಅವಳ ನಿಲುವು. ಅವಳ ಪೂರ್ವಾಶ್ರಮದ ಜಾತಿಯಾಗಿರುವ 'ತೋಟಿ'ಯ ಕುಲದ ಕೀಳರಿಮೆ ಮತ್ತು ಅಪವಿತ್ರತೆಯಿಂದ ಪಾರಾಗುವುದಕ್ಕಾಗಿ ಸನ್ಯಾಸದೀಕ್ಷೆ ತೆಗೆದುಕೊಂಡು 'ಕನ್ಯಾಸ್ತ್ರೀ' ಆಗುತ್ತಾಳೆ.

ಕ್ರಿಸ್ತೀನಳ ಪ್ರಕಾರ 'ದೇವರ ವಧು'ವಾಗುವುದೆಂದರೆ ಎಲ್ಲ ಕೀಳ್ಮೆಗಳನ್ನು ಮೀರಿ ಮಾನಸಿಕವಾಗಿ ಪವಿತ್ರಳಾಗುವುದು. ಹೊರತು ತನ್ನ ಚೆಲುವಿಕೆಯನ್ನು ನಾಶಪಡಿಸಿಕೊಳ್ಳುವುದಲ್ಲ. ಹಾಗಾಗಿ ಸನ್ಯಾಸವನ್ನು ಸ್ವೀಕರಿಸಿದಾಗಲೂ ಸೌಂದರ್ಯವನ್ನು ಕಳೆದುಕೊಳ್ಳಲು ಆಕೆ ಒಪ್ಪಿಲ್ಲ. 'ನಿನ್ನ ಸೌಂದರ್ಯ ಬೇಗ ನಾಶವಾಗಲೆಂದು ಏಸುವನ್ನು ಪ್ರಾರ್ಥಿಸು' ಎಂಬ ಮದರ್ ಸುಪೀರಿಯರ್ ಸಲಹೆಯನ್ನು ಪಾಲಿಸದೆ ಸೌಂದರ್ಯವನ್ನು ಉಳಿಸಿಕೊಂಡಿದ್ದಾಳೆ. ಕ್ರಮೇಣ ಹೊಸಧರ್ಮದ ಕುರಿತಾದ ಕ್ರಿಸ್ತೀನಳ ನಂಬಿಕೆಗಳು ಸುಳ್ಳಾಗುತ್ತವೆ. ಎಲ್ಲೋ ರೋಮ್‌ನಲ್ಲಿ ಹುಟ್ಟಿದ, ಎಂದೂ ಬೊಂಬಾಯಿಗೆ ಬಾರದ ಏಸುವು ರಾತ್ರಿಯ ಭಯಪಡಿಸುವ ಏಕಾಂತದಲ್ಲಿ 'ಅವನ ವಧುವಾಗಿರುವ ತನ್ನನ್ನು ತಡವಿ ಧೈರ್ಯತುಂಬುವ' ಬಗ್ಗೆ ಅವಳಿಗೆ ವಿಶ್ವಾಸ ಬರುವುದಿಲ್ಲ. ಚರ್ಚಿನ ಫಾದರ್ ಮತ್ತು ಸಿಸ್ಟರ್ ನಡುವಿನ ಅನೈತಿಕ ಸಂಬಂಧವು ತಿಳಿದು ಬಂದಾಗ ಸನ್ಯಾಸದಲ್ಲಿ ನಂಬಿಕೆ ಕಳೆದುಕೊಳ್ಳುತ್ತಾಳೆ. 'ನಿಲುವಂಗಿ ಧರಿಸಿದವರ ಕಾಮಪೂರಣಕ್ಕೆ ತಯಾರಾಗುವುದಕ್ಕಿಂತ ನರೇನ್‌ನ ಪ್ರೇಮವನ್ನು ಸ್ವೀಕರಿಸುವುದೇ ಮೇಲು' ಎಂದು ತೀರ್ಮಾನಿಸಿ ತಾನು ಹಿಂದೊಮ್ಮೆ ತಿರಸ್ಕರಿಸಿದ್ದ ಪ್ರಿಯಕರನನ್ನು ಸೇರುವುದಕ್ಕಾಗಿ ಕಾನ್ವೆಂಟಿನ ಕಾವಲುಗಾರನಿಗೆ ತನ್ನ ಬೆಳ್ಳಿಯ ಉಡಿದಾರವನ್ನು ಲಂಚವಾಗಿತ್ತು ತಪ್ಪಿಸಿಕೊಂಡು ಹೋಗುತ್ತಾಳೆ.

ಹೆಣ್ಣಿನ ಧ್ವನಿಯನ್ನು ಹತ್ತಿಕ್ಕುವ ಮೂಲಕ ವ್ಯವಸ್ಥೆಯನ್ನು ಮುಂದರಿಸಿಕೊಂಡು ಹೋಗುವುದು ಸಾಮಾಜಿಕ ಮಾತ್ರವಲ್ಲ ಧಾರ್ಮಿಕ ಸಂಸ್ಥೆಗಳಲ್ಲೂ ಒಪ್ಪಿತವಾದ ಸಂಗತಿಯಾಗಿದೆ. ಇಹದ ಬಂಧನಗಳಿಂದ ಮುಕ್ತಿ ದೊರಕಿಸುವುದೆಂದು ಭಾವಿಸಲಾಗುವ ಸನ್ಯಾಸವೆಂಬ ಧಾರ್ಮಿಕ

ವ್ಯವಸ್ಥೆಯಲ್ಲೂ ಕನ್ಯಾಸ್ತ್ರೀಯರ ಶೋಷಣೆ ನಡೆಯುತ್ತದೆ. ಅವರ ದೇಹಕ್ಕೂ ಜೀವಕ್ಕೂ ಭದ್ರತೆಯಿಲ್ಲ. ಅವರನ್ನು ಅನ್ಯರ ಸಹವಾಸಕ್ಕೆ ಒದಗದಂತೆ ತುಂಬ ಬಿಗಿಯಾದ ಶಿಸ್ತಿನಲ್ಲಿ ಇರಿಸಲಾಗುತ್ತದೆ. ರಾತ್ರಿ ಹತ್ತು ಗಂಟೆಯ ನಿಶ್ಶಬ್ದ ಗಂಟೆಯ ಬಳಿಕ ಮೌನ ಮುರಿದು ಪಿಸುಮಾತನಾಡಿದ ತಪ್ಪಿಗೆ ಮುಂಜಾವದವರೆಗೂ ಚಾಪೆಲ್‌ನಲ್ಲಿ ಮೊಳಕಾಲೂರಿ ಪ್ರಾರ್ಥಿಸುವಂಥ ಶಿಕ್ಷೆಯನ್ನು ನೀಡಲಾಗುತ್ತದೆ. ಚರ್ಚಿನ ಫಾದರ್ ಅರ್ಧರಾತ್ರಿಯಲ್ಲಿ ಸಿಸ್ಟರ್‌ರ ಕೋಣೆಗೆ ಹೋದುದನ್ನು ಅಕಸ್ಮಾತ್ ಕಂಡ ಕಾರಣಕ್ಕೆ ಎಳೆಯ ಕನ್ಯಾಸ್ತ್ರೀ ಅಗಸ್ತೀನಳನ್ನು ಸಾಯಿಸಲಾಗುತ್ತದೆ. ಸಂಶಯಾಸ್ಪದವಾಗಿ ಅಕಾಲಮರಣವನ್ನು ಹೊಂದಿದ ಅಗಸ್ತೀನ ಅನಂತರದ ರಾತ್ರಿಗಳಲ್ಲಿ ತನಗೆ ಪ್ರಿಯವಾಗಿದ್ದ ದೀವಿಹಲಸಿನ ಮರದ ಕೆಳಗೆ ಪ್ರೇತವಾಗಿ ಕಾಣಿಸಿಕೊಂಡು ಸಾವಿಗೆ ಮುನ್ನ ಕ್ರಿಸ್ತೀನಳಲ್ಲಿ ಹೇಳಲು ಯತ್ನಿಸಿದ್ದ ಕಠೋರಸತ್ಯವನ್ನು ದೃಢಪಡಿಸಲು ಪ್ರಯತ್ನಿಸುತ್ತಾಳೆ. ಅಗಸ್ತೀನಳ ಪ್ರೇತವನ್ನು ಕಂಡ ಬಳಿಕ 'ಆ ರಾತ್ರಿ ಅಗಸ್ತೀನಳ ಮಾತುಗಳನ್ನು ಕೇಳುತ್ತಿದ್ದರೆ ಬದುಕುತ್ತಿದ್ದಳೆ?' ಎಂಬಂಥ ಯೋಚನೆ ಕ್ರಿಸ್ತೀನಳ ಮನಸ್ಸನ್ನು ಅಸ್ವಸ್ಥಗೊಳಿಸಿ ಸನ್ಯಾಸದಿಂದ ವಿಮುಖಗೊಳಿಸುತ್ತದೆ. ಧರ್ಮದ ಹೆಸರಿನಲ್ಲಿ ಮಾನವೀಯತೆಯನ್ನು ಬಲಿಕೊಡಲು ಸ್ತ್ರೀಯರು ಸಿದ್ಧರಿಲ್ಲ. ನೆಮ್ಮದಿಗಾಗಿ ಅಪ್ಪಿಕೊಂಡಿದ್ದ ಮತಾಚರಣೆಯು ಸ್ತ್ರೀ ಶೋಷಣೆಯ ಇನ್ನೊಂದು ಮುಖ ಎಂಬುದು ಗೊತ್ತಾದಾಗ ಅದನ್ನು ತಿರಸ್ಕರಿಸುತ್ತಾರೆ.

ಸ್ವ-ಇಚ್ಛೆಯಿಂದ ಸನ್ಯಾಸಿನಿಯಾಗಿ ಕಾನ್ವೆಂಟು ಜೀವನವನ್ನು ಕಣ್ಣಾರೆ ಕಂಡು ಅನುಭವಿಸಿ ನಿರಾಶರಾಗಿ ಇಳಿವಯಸ್ಸಿನಲ್ಲಿ ಅಲ್ಲಿಂದ ಹೊರಬಂದ ಸಿಸ್ಟರ್ ಜೆಸ್ಮಿ ಅವರ ಸ್ವ-ನಿರೂಪಣೆಯುಳ್ಳ 'ಆಮೆನ್' ಎಂಬ ಹೆಸರಿನ ಆತ್ಮಕಥನವು 'ದೇವರ ವಧು'ಗಳಾಗಿರುವ ಕ್ರೈಸ್ತ ಸನ್ಯಾಸಿನಿಯರ ಮೇಲೆ ನಡೆಯುವ ಸುಶಿಕ್ಷಿತ ಹಲ್ಲೆ, ದೌರ್ಜನ್ಯಗಳನ್ನು ಬಯಲಿಗೆಳೆಯುತ್ತದೆ. ಕೇರಳದ ಚರ್ಚು ಮತ್ತು ಕಾನ್ವೆಂಟುಗಳ ಸುಭದ್ರ ಗೋಡೆಗಳ ಒಳಗೆ ಅತ್ಯಂತ ಸಹಜವೆಂಬಂತೆ ನಡೆಯುವ ಸಲಿಂಗಕಾಮ ಮತ್ತು ಪಾದ್ರಿಗಳ ಕಾಮಲಾಲಸೆಯ ಕುರಿತಾಗಿ ಬಹಳಷ್ಟು ಸಂಗತಿಗಳನ್ನು ಹೊರಜಗತ್ತಿಗೆ ಅನಾವರಣಗೊಳಿಸುತ್ತದೆ. ರಿಟ್ರೀಟ್‌ನ ಬಳಿಕ ನಡೆಯುವ ತಪ್ಪೊಪ್ಪಿಗೆಯ ಸಂದರ್ಭದಲ್ಲಿ ತನ್ನ ಬಳಿ ಬರುವ ಎಲ್ಲರನ್ನೂ ಅವರ ಅನುಮತಿ ಪಡೆದೇ ಚುಂಬಿಸುತ್ತಿದ್ದ ಪಾದ್ರಿಯು 'ಪರಸ್ಪರರನ್ನು ಪವಿತ್ರ ಚುಂಬನದೊಂದಿಗೆ ಹಾರೈಸಿರಿ' ಎಂಬ ದೇವವಾಕ್ಯವನ್ನು ತಾನು ಪಾಲಿಸುತ್ತಿದ್ದೇನೆ ಎಂಬ ಸಮರ್ಥನೆಯನ್ನು ನೀಡುತ್ತಿದ್ದುದನ್ನು ಲೇಖಕಿ ನೋವಿನಿಂದ ನೆನಪಿಸಿಕೊಂಡಿದ್ದಾರೆ.

ರಿಫ್ರೆಶರ್ ಕೋರ್ಸಿಗಾಗಿ ಬೆಂಗಳೂರಿಗೆ ಬಂದಿಳಿದ ಸಿಸ್ಟರ್ ಜೆಸ್ಮಿಯ ಆತಿಥೇಯರಾಗಿದ್ದ ಫಾದರ್ ಏಕಾಂತವನ್ನು ಸಾಧಿಸಿ ಜೆಸ್ಮಿಯನ್ನು ಅಪ್ಪಿಕೊಳ್ಳುವುದಲ್ಲದೆ ಅದುವರೆಗೂ 'ಪುರುಷನನ್ನು ನೋಡಿಲ್ಲದ' ಜೆಸ್ಮಿಯ ಎದುರು ನಗ್ನರಾಗುತ್ತಾರೆ. ಜೆಸ್ಮಿಯೂ ನಗ್ನಳಾಗುವಂತೆ ಆಗ್ರಹಿಸಿ ಯಶಸ್ವಿಯಾಗುತ್ತಾರೆ.

ಅನಿರೀಕ್ಷಿತವಾಗಿ ಎದುರಿಸಬೇಕಾಗುವ ಇಂಥ ಸಂದರ್ಭಗಳಲ್ಲಿ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ಅರಿಯದೆ ತನ್ನಂಥ ಸುಶಿಕ್ಷಿತೆಯರೂ ಗೊಂದಲಕ್ಕೆ ಒಳಗಾಗುವುದನ್ನು ಲೇಖಕಿ ನಿರೂಪಿಸಿದ್ದಾರೆ.

ಹಿಸ್ಟೆರಕ್ಟಮಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ವಿಶ್ರಾಂತಿಯಲ್ಲಿದ್ದ ಒಬ್ಬ ಸಿಸ್ಟರ್ ಬಗೆಗೆ ಕಾನ್ವೆಂಟಿನ ಸುಪೀರಿಯರ್ 'ಅವಳ ಗರ್ಭಕೋಶ ತೆಗೆದು ಒಗೆದದ್ದು ನನಗಂತೂ ಸಮಾಧಾನವನ್ನು ಉಂಟುಮಾಡಿದೆ' ಎಂದು ಪ್ರತಿಕ್ರಿಯಿಸುತ್ತಾರೆ. ಅವರು ಹೀಗೆನ್ನಲು ಕಾರಣವಿದೆ; 'ಹಿಂದೊಮ್ಮೆ ಅವಳು ಪಾದ್ರಿಯೊಂದಿಗೆ ರಾತ್ರಿ ಕಳೆಯುತ್ತಿದ್ದ ಸಂದರ್ಭದಲ್ಲಿ ಸಾರ್ವಜನಿಕರ ಕೈಯಲ್ಲಿ ಸಿಕ್ಕಿ ಬಿದ್ದು' ಕಾನ್ವೆಂಟಿಗೆ ಮುಜುಗರವನ್ನು ಉಂಟುಮಾಡಿದ್ದಾಳೆ. ಆ ಪ್ರಕರಣದ ಬಳಿಕ ಅವಳು ಬೇರೆ ಎಲ್ಲಿಯಾದರೂ ರಾತ್ರಿ ಕಳೆಯಬೇಕಾಗಿ ಬಂದಾಗ ಕಾನ್ವೆಂಟಿನ ಸಿಸ್ಟರ್‌ನವರಿಗೆ 'ಏನೋ ಒಂದು ವಿಧದ ಭಯ ಕಾಡುತ್ತಿತ್ತು.' ಸುಪೀರಿಯರ್ ಆತಂಕಿತರಾಗಿರುವುದು ಆ ಯುವ ಕನ್ಯಾಸ್ತ್ರೀಯಲ್ಲಿ ಸನ್ಯಾಸ ಸ್ವೀಕರಿಸಿದ ಬಳಿಕವೂ ಪ್ರಖರವಾಗಿರುವ ಲೈಂಗಿಕ ಆಸಕ್ತಿಯ ಬಗೆಗಲ್ಲ; ಅವಳು ತಪ್ಪಿತಸ್ಥಳಾಗಿ ಸಿಕ್ಕಿಬಿದ್ದು ಕನ್ಯಾಸ್ತ್ರೀಯರ ಮಠದ ಗೌರವ ಕಳೆಯುತ್ತಿರುವ ಬಗ್ಗೆ. ಕಾನ್ವೆಂಟಿನ ಕಟ್ಟುನಿಟ್ಟಾದ ಶಿಕ್ಷಣ ಮತ್ತು ಕಟ್ಟುಪಾಡುಗಳು ಹೆಣ್ಣಿನ ಸಹಜ ದೈಹಿಕ ಅಗತ್ಯವಾಗಿರುವ ಕಾಮವಾಂಛೆಯನ್ನು ತಡೆಯಲು ಸಮರ್ಥವಾಗಿಲ್ಲ. ಕೃತಕ ಶಿಸ್ತಿನ ವಾತಾವರಣದಲ್ಲಿ ಹತ್ತಿಕ್ಕಲಾದ ಲೈಂಗಿಕತೆಯ ತೃಪ್ತಿಗೆ ಕನ್ಯಾಸ್ತ್ರೀಯರು ಪರ್ಯಾಯ ದಾರಿಗಳನ್ನು ಶೋಧಿಸಲು ಕಾರಣವಾಗಿದೆ.

ಸಿಸ್ಟರ್ ಜೆಸ್ಮಿ ಏಕಾಂಗಿಯಾಗಿ ಚರ್ಚಿನ ಅನಾಚಾರಗಳ ವಿರುದ್ಧ ಯುದ್ಧ ಸಾರಿದಾಗ ಚರ್ಚಿನಿಂದ ಪ್ರಕಟವಾಗುವ ಪತ್ರಿಕೆಯೊಂದು ಮುಖಪುಟದಲ್ಲಿ ಜೆಸ್ಮಿಯ ಭಾವಚಿತ್ರದೊಂದಿಗೆ ಕೀಳು ಅಭಿರುಚಿಯಲ್ಲಿ ವರದಿ ಮಾಡುತ್ತದೆ. ಸಂಪಾದಕರು 'ಆಮೆನ್: ಸಿಸ್ಟರ್ ಜೆಸ್ಮಿಯ ಆತ್ಮಚರಿತ್ರೆ; ಒಬ್ಬ ವೇಶ್ಯೆಯ ತಪ್ಪೊಪ್ಪಿಗೆ' ಎಂಬಂಥಾ ಶೀರ್ಷಿಕೆಯಲ್ಲಿ ಒಂದು ಕವರ್ ಸ್ಟೋರಿಯನ್ನು ಬರೆಯುತ್ತಾರೆ. ಒಬ್ಬಾಕೆ ಹೆಣ್ಣನ್ನು ದಮನಿಸಬೇಕಾದಾಗ, ಅವಳ ಪ್ರತಿಭಟನೆಯ ಧ್ವನಿಯನ್ನು ಅಡಗಿಸಬೇಕಾದಾಗ ಸಮಾಜವು ಬಳಸುವ ಸುಲಭದ ಅಸ್ತ್ರವೆಂದರೆ ಅವಳ ಚಾರಿತ್ರ್ಯವಧೆಯೇ ಆಗಿದೆ. ಪುರುಷನಿಗಾದರೆ ಅಂಥ ವಿಧಾನ ಉಪಯೋಗವಾಗುವುದಿಲ್ಲ. ಚಾರಿತ್ರ್ಯಶುದ್ಧಿ ಎಂಬುದು ಪುರುಷರ ಮಟ್ಟಿಗೆ ಒಂದು ಮೌಲ್ಯವೆ ಅಲ್ಲ. ಹೆಣ್ಣಿಗಾದರೆ ಅದೇ ಸರ್ವಸ್ವವೆಂದು ನಂಬಿಸಲಾಗಿದೆ.

ದೇವರಿಗೆ ಅರ್ಪಿಸಲಾದ ಪವಿತ್ರ ಕನ್ಯಾಸ್ತ್ರೀಯರ ಮಠದಲ್ಲಿ ನಡೆಯುವ ದಬ್ಬಾಳಿಕೆ, ಸಲಿಂಗಕಾಮ ಸಂಬಂಧಗಳು, ಕನ್ಯಾಸ್ತ್ರೀಯರ ಲೈಂಗಿಕ ಸಂಬಂಧದಿಂದ ಉಂಟಾದ ಬಸಿರನ್ನು ಇಲ್ಲವಾಗಿಸಲು ನಡೆಸುವ ರಹಸ್ಯ ಗರ್ಭಪಾತಗಳು.. ಇತ್ಯಾದಿಗಳನ್ನು ಇಂದು ಮೇನೋನ್‌ರವರು ಬರೆದಿರುವ 'ಮಮ್ಮಿ' ಎಂಬ ಕತೆಯಲ್ಲೂ ಕಾಣಬಹುದು. 'ಅತಿ ರಮ್ಯ ಯೌವನವನ್ನು ಕಠಿಣವಾದ ಯತಿಬದುಕಿಗೆ ಪರಿವರ್ತಿಸುವುದರ' ಕಷ್ಟವು ರೋಸ್ ಎಂಬ ಚೆಲುವೆಯ ಬದುಕನ್ನು ಅನುರಾಗ ಮತ್ತು ವೈರಾಗ್ಯಗಳ

ನಡುವಿನ ಸಂಘರ್ಷವಾಗಿಸುವುದನ್ನು ಈ ಕತೆಯು ನಿರೂಪಿಸುತ್ತದೆ. ಕನ್ಯಾಸ್ತ್ರೀಯೊಬ್ಬಳ ಗರ್ಭಪಿಂಡವನ್ನು ರಹಸ್ಯವಾಗಿ ಜಾರಿಸಿ ಶೌಚಾಲಯದ ಕಸದ ಡಬ್ಬದಲ್ಲಿ ಇರಿಸಲಾಗಿದೆ. ಮಠದ ಕಠೋರ ಬದುಕಿನಿಂದ ರೋಸಿಹೋದ ಎಳೆಯ ಕನ್ಯಾಸ್ತ್ರೀಯೊಬ್ಬಳು ನೇಣು ಹಾಕಿಕೊಳ್ಳುತ್ತಾಳೆ. ಇಂಥ ಘಟನೆಗಳು ಬೇರೆ ಬೇರೆ ಮಠಗಳಲ್ಲಿ ಮತ್ತೆ ಮತ್ತೆ ನಡೆಯುತ್ತಲೇ ಇರುತ್ತವೆ. ಕನ್ಯಾಸ್ತ್ರೀಯರ ಹೆಸರು ಮಾತ್ರ ಬೇರೆಯಾಗಿರುತ್ತದೆ ಎಂಬುದನ್ನು ಗಮನಿಸಬಹುದು. ಧರ್ಮದ ಹೆಸರಿನಲ್ಲಿ ಎಳೆಯ ವಯಸ್ಸಿನ ಕನ್ಯೆಯರಿಗೆ ವಿಧಿಸಲಾಗುವ ಬಲವಂತದ ಬ್ರಹ್ಮಚರ್ಯೆಯು ಅವರ ಕನಸುಗಳು, ಭಾವನೆಗಳು ಮತ್ತು ಸ್ತ್ರೀತ್ವದ ಮಾರ್ದವಗಳನ್ನು ನಾಶ ಮಾಡಿ ಅಸೂಯೆ, ಗುಮಾನಿ, ಸಿಟ್ಟು, ಕರ್ಕಶತೆ ಮತ್ತು ಯಾಂತ್ರಿಕತೆಗಳನ್ನು ಕಲಿಸುತ್ತದೆ. ಲೌಕಿಕದ ಕಾಮನೆಗಳಿಂದ ಮುಕ್ತಿ ನೀಡಬೇಕಾದ ಧರ್ಮವೆಂಬುದು ಎತ್ತರದ ಗೋಡೆಗಳ ಕೋಟೆಯೆನಿಸಿ ಅದರಿಂದ ಬಿಡುಗಡೆಗಾಗಿ ಕನ್ಯಾಸ್ತ್ರೀಯರು ನಿರಂತರ ಚಡಪಡಿಸುವುದನ್ನು ಕತೆ ದಾಖಲಿಸಿದೆ.

ಧರ್ಮದ ನಿರ್ವಚನವು ಜೀವಪರವಾಗಿರಬೇಕೆಂಬುದು ಸ್ತ್ರೀಯರ ಗ್ರಹಿಕೆಯಾಗಿದೆ. ಬದುಕಿಗೆ ಅವಶ್ಯ ಎನಿಸಿದಾಗ, ಮಾನವೀಯತೆಗೆ ಧಕ್ಕೆಯಾಗುತ್ತಿದೆ ಎಂದು ಸ್ಪಷ್ಟವಾದಾಗ, ಸಮಾಜವು ವಿಧಿಸಿದ ಧರ್ಮದ ಕಟ್ಟುಪಾಡುಗಳನ್ನು, ನಿರ್ಬಂಧಗಳನ್ನು ಮೀರಲು ಸ್ತ್ರೀಯರು ಹಿಂಜರಿಯುವುದಿಲ್ಲ. 'ದುರ್ಬೀಜ' ಕಾದಂಬರಿಯಲ್ಲಿನ ಮೂವರು ಮಹಿಳೆಯರು ಈ ಅಭಿಪ್ರಾಯಕ್ಕೆ ನಿದರ್ಶನವಾಗಿದ್ದಾರೆ. ಪ್ರತಿಷ್ಠಿತ ತಾಳತ್ತೇದಿಲ್ ತರವಾಡಿನವಳಾದ ಕುಞ್ಞಕಾಳಿಯಮ್ಮ ಚಂಡಮಾರುತವು ಬೀಸಿ ಅಲ್ಲೋಲಕಲ್ಲೋಲವಾಗಿದ್ದ ಒಂದು ನಡುರಾತ್ರಿಯಲ್ಲಿ ರಾಮನಾಮವನ್ನು ಜಪಿಸುತ್ತಿದ್ದ ಹೊತ್ತಿನಲ್ಲಿ ಅಂಗಳಕ್ಕೆ ಬಂದು ಆಶ್ರಯ ಬೇಡಿದ ಕುಞ್ಞಾರಕ್ಕಾರನ ಬಸುರಿ ಪತ್ನಿ ಮತ್ತು ಮಕ್ಕಳನ್ನು ಮನೆಯೊಳಕ್ಕೆ ಬಿಟ್ಟುಕೊಳ್ಳುತ್ತಾಳೆ. ಮುಸಲ್ಮಾನರನ್ನು ಮನೆಯೊಳಕ್ಕೆ ಬಿಟ್ಟುಕೊಳ್ಳುವುದರಿಂದ ತನ್ನ ಮನೆತನ ಮತ್ತು ಜಾತಿಯ ಸಂಪ್ರದಾಯಗಳಿಗೆ ಅಪಚಾರವಾದೀತೆಂದು ಗೊತ್ತಿದ್ದೂ ಮಾನವೀಯತೆಗೆ ಮಹತ್ವ ಕೊಡಲು ನಿಶ್ಚಯಿಸುತ್ತಾಳೆ. "ಬೆಳಗಾಗೋ ಹೊತ್ತಿಗೆ ಯಾರು ಯಾರನ್ನು ಕಾಣುತ್ತೇವೆಂಬುದು ನಿಶ್ಚಿತವಿಲ್ಲದ ಅಂಥ ಪರಿಸ್ಥಿತಿಯಲ್ಲಿ ನಾವು ಮಡಿಮೈಲಿಗೆ ಅಂತ ಯಾವುದನ್ನೂ ನೋಡಲಿಲ್ಲ" (ಪು. ೮೧) ಹಾಗೆ ಆ ರಾತ್ರಿ ಅಲ್ಲಿ ಮಲಗಿದ ತಿತ್ತುಮ್ಮ ಹೆತ್ತ ಮಗು ನಬೀಸ ಊರವರ ಬಾಯಲ್ಲಿ 'ತಾಳತ್ತೇದಿಲ್ ತರವಾಡಿನಲ್ಲಿ ಹುಟ್ಟಿದ ಮಗು'ವೆನಿಸಿಕೊಂಡು ಕುಞ್ಞಕಾಳಿಯಮ್ಮ ಜಾತ್ಯತೀತವಾದ ಔದಾರ್ಯಕ್ಕೆ ನಿದರ್ಶನವಾಗಿ ಬೆಳೆಯುತ್ತಾಳೆ.

ಇದೇ ಕೃತಿಯ ಚುಮ್ಮುಕುಟ್ಟಿಯಮ್ಮ ಊರವರ ದೃಷ್ಟಿಯಲ್ಲಿ ಚರಿತ್ರಹೀನೆ. ಶಾಶ್ವತವಾದ ಒಬ್ಬ ಗಂಡನಿರದಿದ್ದರೂ ಭಾರೀ ಸೀರೆ, ಆಭರಣಗಳನ್ನು ಧರಿಸಿ ಹೆಗ್ಗಡಿತಿಯಂತೆ ಗತ್ತಿನಿಂದ ನಡೆವ ಚುಮ್ಮುಕುಟ್ಟಿಯಮ್ಮನ ಬಗ್ಗೆ ಊರ ಹೆಂಗಳೆಯರೆಲ್ಲ ವ್ಯಂಗ್ಯಮಾತುಗಳಿಂದ ಟೀಕಿಸುತ್ತಿರುತ್ತಾರೆ.

'ಮತಾಂತರ ಮಾಡ್ಕೊಂಡ ನಾಯರ್' ಆಗಿರುವ ಗೋವಿಂದನ್ ಕುಟ್ಟಿಯನ್ನು ಊರಿನವರೆಲ್ಲ ಬಹಿಷ್ಕರಿಸಿದಾಗ 'ಮಾಪ್ಲೆಯಾದ್ರೂ ನಾಯರಾದ್ರೂ ನನ್ನ ಜಗಲಿ ದಾಟಿ ಬಂದ ಮೇಲೆ ಅವರ ಹೊಣೆ ನನ್ನದು' ಎಂಬಂಥಾ ಧೈರ್ಯದಿಂದ ಮನೆಯಲ್ಲಿ ಇರಿಸಿಕೊಳ್ಳುತ್ತಾಳೆ. ಯಾವ ಪ್ರಶ್ನೆಯನ್ನೂ ಕೇಳದೆ, ಅತ್ಯಂತ ಸಹಜವಾಗಿ ಅವನನ್ನು ಮನೆಯೊಳಗೆ ಬರಮಾಡಿಕೊಂಡು ತಲೆಯೊರೆಸಲು ಬಟ್ಟೆ ಕೊಟ್ಟು, ಊಟವಿಕ್ಕಿ ಪುತ್ರವಾತ್ಸಲ್ಯದಿಂದ ಕಾಣುತ್ತಾಳೆ. ಆಕೆ ತನ್ನ ಬಗ್ಗೆ ಏನೂ ಕೇಳಲಿಲ್ಲವೆಂಬುದು ಸ್ವತಃ ಗೋವಿಂದನ್ ಕುಟ್ಟಿಗೇ ಆಶ್ಚರ್ಯವಾಗುತ್ತದೆ. ಹೆಂಗಸರು ಅನಗತ್ಯ ಕುತೂಹಲಿಗಳು, ಊರ ಸುದ್ದಿ ತಿಳಿದುಕೊಳ್ಳುವಲ್ಲಿ, ಮಾತಾಡುವಲ್ಲಿ ಅವರಿಗೆ ಅತೀವ ಆಸಕ್ತಿ ಎಂಬ ಸಾಮಾನ್ಯ ಗ್ರಹಿಕೆ ಅವನದು. ಆದರೆ ಮುಂದಿನ ದಿನಗಳಲ್ಲೂ ಚುಮ್ಮುಕುಟ್ಟಿಯಮ್ಮ ಅಂಥ ಆಸಕ್ತಿಯನ್ನು ತೋರಿಸದೆ ಅವನಿರುವಷ್ಟು ದಿನ ಚೆನ್ನಾಗಿ ನಡೆಸಿಕೊಳ್ಳುತ್ತಾಳೆ. ಪುರುಷರು ವಿಧಿಸಿದ ಧರ್ಮದ ನಿರ್ವಚನವನ್ನು ವಿರೋಧಿಸಿ, ಕಳಕೊಂಡ ಸಂಬಂಧಗಳನ್ನು ಹೊಸನೆಲೆಗಳಲ್ಲಿ ಕಂಡುಕೊಂಡು ಬದುಕನ್ನು ಸಹ್ಯವಾಗಿಸಿಕೊಳ್ಳುವ ಸ್ತ್ರೀಧರ್ಮ ಇಲ್ಲಿದೆ. 'ತಲೆ ಬೋಳಿಸ್ಕೊಂಡು ನಾಲ್ಕನೇ ವೇದದವನಾಗಿಬಿಟ್ರೆ ಸ್ವರ್ಗ ಸಿಗತ್ತೇನು?' ಎಂಬ ಚುಮ್ಮುಕುಟ್ಟಿಯಮ್ಮನ ಪ್ರಶ್ನೆಯಲ್ಲಿ ಪುರುಷರ ನಡುವೆ ದ್ವೇಷ ಕಲಹ ಭೇದಗಳನ್ನು ಹುಟ್ಟುಹಾಕುವ ಧರ್ಮದ ಕುರಿತಾಗಿ ಅಸಹನೆಯಿದೆ. ಧರ್ಮಕ್ಕಿಂತ ಬದುಕು ದೊಡ್ಡದು ಎಂಬ ಮಹತ್ವದ ಪ್ರತಿಪಾದನೆಯಿದೆ.

ಗೋವಿಂದನ್ ಕುಟ್ಟಿ ಮತಾಂತರಗೊಂಡು ಅಬ್ದುಲ್ಲನಾದುದು ಅವನ ಮುಸ್ಲಿಂ ಗೆಳೆಯನ ತಾಯಿಯಾಗಿರುವ ತಿತ್ತುಮ್ಮಳಿಗೂ ಒಪ್ಪಿಗೆಯಿಲ್ಲ. 'ಅದ್ಯಾಕೆ ಆ ಹುಡುಗನಿಗೆ ಹೀಗೆ ಮಾಡಬೇಕೆನ್ನಿಸಿತೋ' ಎಂದು ಯೋಚಿಸುತ್ತಾಳೆ. ಅವನು 'ಟೊಪ್ಪಿ ಹಾಕಿಕೊಂಡು' ಬಂದಿದ್ದಾನೆಂಬುದು ತಿಳಿದಾಗ "ನಿಜ ಯೇಳ್ಬೇಕೂಂದ್ರೆ ನಂಗೆ ತುಂಬ ಬ್ಯಾಸರಾಯ್ತು ಕಣ್ರೀ. ನಮಗೆ ಅರ್ಥ ಆಗಲ್ಲ. ಅವರಲ್ಲಿ ಜಾತಿಬಿಟ್ಟ ಅಂದ್ರೆ ಅವರ ಪಾಲಿಗೆ ಅವನು ಸತ್ತಂಗೆ. ಅವರಿಗೆ ಈಗ ಎಷ್ಟೊಂದು ಕಷ್ಟ ಆಗಬೋದು ಅನ್ನೋದನ್ನ ನಮಗೆ ಯೋಚಿಸೋಕೂ ಆಗಲ್ಲ" (ಪು. ೨೫೫) ಎಂದು ಪತಿಯಲ್ಲಿ ಹೇಳುತ್ತಾಳೆ. ಮನೆಯೊಳಗೇ ಇರುವ ಸಾಮಾನ್ಯ ಗೃಹಿಣಿಯಾಗಿರುವ ತಿತ್ತುಮ್ಮಳ ಮಾತುಗಳು ಮತಧರ್ಮಗಳ ಬಗೆಗಿನ ಸ್ತ್ರೀದೃಷ್ಟಿಯ ಪ್ರತಿಪಾದನೆಯಾಗಿವೆ. ಯಾವುದೇ ಧರ್ಮವಾದರೂ ಇನ್ನೊಬ್ಬರ ಬದುಕಿಗೆ ತೊಂದರೆ ಕೊಡುವಂತಿರಬಾರದು ಎಂಬುದು ಇಲ್ಲಿನ ಸರಳವಾದ ಆಶಯ.

ಹೆಣ್ಣಿನ ಪಾಲಿಗೆ ಧರ್ಮವೆಂಬುದು ಒಂದು ಬದುಕಿನ ಕ್ರಮ ಮಾತ್ರವೆ ಆಗಿದೆ ಹೊರತು ಜೀವವಿರೋಧಿಯಾದ ಕಂದಾಚಾರಗಳಲ್ಲಿ ಅವಳಿಗೆ ನಂಬಿಕೆಯಿಲ್ಲದಿರುವುದನ್ನು ಲಲಿತಾಂಬಿಕ ಅಂತರ್ಜನಂ ಅವರು ಬರೆದಿರುವ 'ವಿಧಿಬಲ' ಎಂಬ ಸಣ್ಣ ಕತೆ ನಿರೂಪಿಸುತ್ತದೆ. ಸಾಂಪ್ರದಾಯಿಕ ನಂಬೂದಿರಿ ಮನೆತನದ ಸಾಧ್ವಿಯಾದ ಗೃಹಿಣಿಯೊಬ್ಬಳನ್ನು ಪತಿಯ ಎರಡನೇ ಹೆಂಡತಿಯ

ಕುತಂತ್ರದಿಂದ ಕಲಂಕಿನಿಯಾಗಿ ಬಿಂಬಿಸಿ ಮನೆಯಿಂದ ಹೊರದಬ್ಬಲಾಗುತ್ತದೆ. ಮಾಡದ ತಪ್ಪಿಗೆ ಶಿಕ್ಷೆಯಾಗಿ ಪತಿಯಿಂದ ಪರಿತ್ಯಕ್ತಳಾಗಿ ತನ್ನ ಹತ್ತು ವರ್ಷದ ಮಗನಿಗಾಗಿ ಹಲುಬುತ್ತಿದ್ದ ಅನಾಥೆಯನ್ನು 'ಬ್ಯಾರಿಗಳು' ಎಳೆದು ತಳ್ಳಿಕೊಂಡು ಕರೆದೊಯ್ಯುತ್ತಾರೆ. ಹೀಗೆ ಅನ್ಯಮತೀಯರ ವಶವಾಗಿ ಅವರ ಆಸರೆಯಲ್ಲಿ ಬದುಕಬೇಕಾಗುವ ನಂಬೂದಿರಿ ಸ್ತ್ರೀ ಅನಿವಾರ್ಯವಾಗಿ ಇಸ್ಲಾಂಗೆ ಮತಾಂತರ ಹೊಂದಿ ಮತ್ತೆ ಮದುವೆಯಾಗಿ ಎರಡು ಮಕ್ಕಳನ್ನೂ ಪಡೆಯುತ್ತಾಳೆ.

ಹುಟ್ಟಿ ಬೆಳೆದ ಧರ್ಮವು ಬೀದಿಗೆಸೆದ ಹೊತ್ತಿನಲ್ಲಿ ಆಸರೆ ಕೊಟ್ಟ ಹೊಸ ಧರ್ಮವನ್ನು ಒಪ್ಪಿಕೊಂಡರೂ ಈ ನಂಬೂದಿರಿ ಮಹಿಳೆ ಪೂರ್ವದ ಬದುಕಿನ ನೆನಪುಗಳಿಂದ ಮುಕ್ತಳಾಗಿಲ್ಲ. 'ನಾರಾಯಣ' ದೇವರ ಸ್ಮರಣೆಯನ್ನು ಮರೆತಿಲ್ಲ. ಅಲ್ಲಾಹುವಿನಷ್ಟೇ ಸಲೀಸಾಗಿ ನಾರಾಯಣನ ನಾಮವನ್ನು ನಾಲಿಗೆಯಲ್ಲಿ ಇರಿಸಿಕೊಂಡಿದ್ದಾಳೆ. ಮೊದಲ ಪತಿಯ ಮನೆಯಲ್ಲಿ ಬಿಟ್ಟು ಬಂದ ಹಿರಿಮಗನನ್ನು ಸಾಯುವುದಕ್ಕೆ ಮೊದಲು ಒಮ್ಮೆ ನೋಡಬೇಕೆಂಬುದು ಅವಳ ಮಹದಾಸೆಯಾಗಿದೆ. ಈಗ ನಂಬೂದಿರಿ ಮನೆಯ ಯಜಮಾನನಾಗಿರುವ ಹಿರಿಯ ಮಗನೂ ಮಮತಾಮಯಿಯಾಗಿದ್ದ ಅಮ್ಮನ ನೆನಪನ್ನು ಮರೆತಿಲ್ಲ. ಕೊನೆಗೂ ಆ ಮಹಿಳೆ ಮಗನ ತೊಡೆಯಲ್ಲಿ ತಲೆಯಿಟ್ಟು ತುಳಸೀದಳಸಹಿತ ನೀರನ್ನು ಸೇವಿಸುತ್ತ ನಾರಾಯಣ ನಾಮಜಪವನ್ನು ಕೇಳುತ್ತ ಸಂತೃಪ್ತಳಾಗಿ ಪ್ರಾಣಬಿಡುತ್ತಾಳೆ. ಸಾಯುವುದಕ್ಕೆ ಮುನ್ನ ಪ್ರಸ್ತುತ ತಬ್ಬಲಿಗಳಾಗಿರುವ ತನ್ನ ಈಗಿನ ಎರಡು ಮಕ್ಕಳ ಬದುಕಿನ ಪೋಷಣೆಯ ವ್ಯವಸ್ಥೆಯ ಹೊಣೆಯನ್ನು ನಂಬೂದಿರಿ ಮಗನಿಗೆ ಹೊರಿಸಿ ನಿಶ್ಚಿಂತಳಾಗಿ ಸಾಯುತ್ತಾಳೆ. ತಾಯಿ ಮಗುವಿನ ನಡುವಿನ ಹೊಕ್ಕಳಬಳ್ಳಿಯ ಸಂಬಂಧವು ಯಾವುದೇ ಧರ್ಮ, ಸಂಪ್ರದಾಯದ ನಿಯಮಗಳಿಗಿಂತ ಹೆಚ್ಚು ಸತ್ಯವಾದದ್ದು ಎಂಬ ಅಂಶವನ್ನು ಕತೆಯು ಧ್ವನಿಸುತ್ತದೆ.

ಪ್ರಸ್ತುತ 'ಮ್ಲೇಚ್ಛರವಳಾಗಿರುವ ಹೆತ್ತತಾಯಿಯನ್ನು ಸ್ಪರ್ಶಿಸಿದ್ದಕ್ಕೆ' ಪ್ರಾಯಶ್ಚಿತ್ತವಾಗಿ ನಂಬೂದಿರಿ ಮಗನಿಗೆ ಸಾಕಷ್ಟು ದೊಡ್ಡ ಮೊತ್ತದ ಹಣವೂ ಗದ್ದೆಯೂ ನಷ್ಟವಾಗುವುದು ಜಾತಿಧರ್ಮದ ಹೆಸರಲ್ಲಿ ಮನುಷ್ಯ ನಿರ್ಮಿಸಿಕೊಂಡಿರುವ ಕಟ್ಟಳೆಗಳ ವಿಡಂಬನೆಯಾಗಿದೆ. ಮಾನವೀಯ ಸಂಬಂಧಗಳಿಗೆ ಹೆಚ್ಚು ಪ್ರಾಮುಖ್ಯವನ್ನು ಕೊಡುವ ಹೆಣ್ಣಿನ ದೃಷ್ಟಿಯಲ್ಲಿ ಧರ್ಮವೆಂಬುದು ನಿರ್ದಿಷ್ಟ ದೇವರು, ಪ್ರಾರ್ಥನೆಯ ವಿಧಿ, ವೇಷಭೂಷಣ... ಇಷ್ಟೇ ಆಗಿರದೆ ಒಟ್ಟು ಜೀವನದೃಷ್ಟಿಯಾಗಿದೆ. ಹಾಗಾಗಿಯೆ ಎರಡು ಧರ್ಮಗಳಲ್ಲೂ ಏಕರೀತಿಯ ಶ್ರದ್ಧೆ ಇರಿಸಿಕೊಂಡು ಬದುಕುವುದು ಈ ಕತೆಯ ಮಹಿಳೆಗೆ ಸಾಧ್ಯವಾಗಿದೆ.

'ಹಗ್ಗ' ಕಾದಂಬರಿಯಲ್ಲಿ ತಲೆಮಾರುಗಳಿಂದ ಜೀತದಾಳಾಗಿದ್ದ ಕೆಳವರ್ಗದ ಮಂದಿ ಮಕ್ಕಳಿಗೆ ವಿದ್ಯೆ, ಸಮಾಜದಲ್ಲಿ ಗೌರವ ಮುಂತಾದ ಕಾರಣಗಳಿಗಾಗಿ ಕ್ರೈಸ್ತಮತಕ್ಕೆ ಸೇರುತ್ತಾರೆ. ಹಾಗೆ ಸತ್ಯವೇದಕ್ಕೆ ಸೇರಿ 'ಶಮಯಲ್' ಆಗಿ ಪರಿವರ್ತನೆಯಾದ ಶೀತಂಗನ ಜೊತೆ ಅವನ ಹೆಂಡತಿ ಕೊಚ್ಚುಲಕ್ಕಿಯೂ ಹೊಸ ದೇವರನ್ನು ಒಪ್ಪಿಕೊಂಡಿದ್ದಾಳೆ. ಆದರೆ ಇನ್ನು ಹಿಂದಿನಂತೆ ಹೊಲೆಕಾಡಿನಲ್ಲಿ ಬೇತಾಳಕ್ಕೆ ಬಲಿ

ಕೊಡಬೇಕಾಗಿಲ್ಲ ಎಂಬುದನ್ನು ಅವಳು ಒಪ್ಪಲಾರಳು. "ಬೇತಾಳ ಸಿಟ್ಟಾದರೆ ಉಳಿಗಾಲವಿಲ್ಲ. ಕರಿಕಾಳಿ ಕುಲನಾಶ ಮಾಡ್ತಾಳೆ. ಇಗರ್ಜಿಗೆ ಬಂದ ಒಡೆಯರು ಹೇಳಿದರು ಮತಾಂತರ ಮಾಡಿಕೊಳ್ಳಬೇಕೆಂದು; ಮಾಡಿಕೊಂಡೆವು. ಇನ್ನೊಂದು ದೇವರಿಗೆ ಕೂಡ ಮಣಿಯಬೇಕು ಅಷ್ಟೆ. ಹೆಚ್ಚು ಹೆಚ್ಚು ದೇವರುಗಳಿಗೆ ಬಗ್ಗುವುದು ಒಳ್ಳೆಯದೆ. ನಮ್ಗೆ ಬ್ಯಾತಾಳ್ಲೂ ಬ್ಯಾಕು; ಯೇಸುದ್ಯಾವ್ರೂ ಬ್ಯಾಕು" (ಪು. ೪೪೫, ಭಾಗ ೧) ಎಂಬುದು ಅವಳ ನಿಲುವು.

ಆಧುನಿಕ ಕಾಲದ ಆರ್ಥಿಕತೆಯೊಂದಿಗೆ ಬೆಸೆದುಕೊಂಡಿರುವ ಧರ್ಮವು ಮುಗ್ಧ ಜನರನ್ನು ತನ್ನ ಅಗತ್ಯಕ್ಕೆ ಬೇಕಾದಂತೆ ಬಳಸಿಕೊಳ್ಳುತ್ತದೆ. ಒಂದು ಕಾಲದಲ್ಲಿ ಹಸಿವು ಮತ್ತು ಸಾಮಾಜಿಕ ಅವಮಾನದಿಂದ ಮುಕ್ತಿ ಸಿಕ್ಕಿದರೆ ಸಾಕು ಎಂಬ ಆಸೆಯಿಂದ ಅನ್ಯಧರ್ಮಕ್ಕೆ ಮತಾಂತರಗೊಂಡ ಜನರು ಆರ್ಥಿಕತೆ ಉತ್ತಮಗೊಂಡ ಬಳಿಕ ತಾವು ಹಸಿವಿಗಾಗಿ ಕ್ರಮಿಸಿದ ದಾರಿಯ ಪ್ರಾಮಾಣಿಕತೆಯನ್ನು ಸಂಶಯಿಸಬಹುದು. ಬಿಟ್ಟುಬಂದ ಬದುಕಿನ ನಂಬಿಕೆ, ತತ್ವಗಳಿಂದ ಕಳಚಿಕೊಳ್ಳಲಾಗದೆ ಚಡಪಡಿಸಬಹುದು. ಒಂದು ಜೀವಿತಕಾಲದಲ್ಲಿ ಎರಡು ಭಿನ್ನವಾದ ಮತಗಳಲ್ಲಿ ಬದುಕಿದ ತಮ್ಮ ನಿಜವಾದ ನೆಲೆ ಯಾವುದು ಎಂಬ ಗೊಂದಲಕ್ಕೆ ಒಳಗಾಗಬಹುದು. ಇ.ಕೆ. ಷೀಬಾ ಅವರು ಬರೆದಿರುವ 'ಅಕ್ಕಮ್ಮ ಮತ್ತವರ ವಿಚಾರಧಾರೆಗಳು' ಎಂಬ ಕತೆಯು ಅಂಥದೊಂದು ವಸ್ತುವನ್ನು ವಿಶ್ಲೇಷಿಸುತ್ತದೆ. ಗೊಂದಲಕ್ಕೆ ಒಳಗಾಗಿರುವ ಅಕ್ಕಮ್ಮ ಎಂಬ ಕೆಳವರ್ಗದ ಸ್ತ್ರೀಯೊಬ್ಬಳ ಮಾನಸಿಕ ತಳಮಳವನ್ನು ತೆರೆದಿಡುತ್ತದೆ. ದಶಕಗಳ ಹಿಂದೆ ಸಮುದಾಯದ ಹಲವು ಕುಟುಂಬಗಳೊಂದಿಗೆ ನರಕದಂತಿದ್ದ ಕೇರಿಯನ್ನು ತ್ಯಜಿಸಿ ಕ್ರೈಸ್ತ ಮತವನ್ನು ಸ್ವೀಕರಿಸಿದವಳು. ಹೊಸ ಮತದ ಮೂಲಕವಾಗಿ ಕೈತುಂಬ ಕೆಲಸ, ಹೊಟ್ಟೆತುಂಬ ಊಟ, ತಲೆಗೊಂದು ಸೂರು... ಹೀಗೆ ಒಂದು ನೆಮ್ಮದಿಯ ನೆಲೆಯನ್ನು ಪಡೆದು ಓದಿ ಒಳ್ಳೆಯ ಸಂಪಾದನೆ ಹೊಂದಿರುವ ಮಗ, ಸೊಸೆ, ಮೊಮ್ಮಕ್ಕಳೊಂದಿಗೆ ಸುಖವಾಗಿದ್ದಾಳೆ. ಈಗ ಅವಳ ಬೆಳೆದ ಮಗ ವಾಸು ಸಂಘಪರಿವಾರದ ಸುಮೇರನ ಪ್ರಭಾವಕ್ಕೆ ಒಳಗಾಗಿ ಮೂಲಧರ್ಮಕ್ಕೆ ಮರಳಲು ಉತ್ಸುಕನಾಗಿದ್ದಾನೆ. ಸಂಘದ ಮೂಲಕ ವಾಸಕ್ಕೆ ಸ್ವಂತಮನೆ ಹಾಗೂ ಮಕ್ಕಳಿಗೆ ಆಂಗ್ಲಮಾಧ್ಯಮ ಶಾಲೆಯಲ್ಲಿ ಶಿಕ್ಷಣದ ಅವಕಾಶವೂ ದೊರೆಯಲಿರುವುದರಿಂದ ಸ್ವಧರ್ಮಕ್ಕೆ ಮರಳುವುದೆ ಸೂಕ್ತವೆಂದು ವಾದಿಸುತ್ತಿದ್ದಾನೆ. 'ಬೇಲಿ ಹಾಕಿದ, ಬೇರೊಬ್ಬರ ಆಶ್ರಯದ ಜೀವನ ಬೇಡ. ಹಿಂತಿರುಗೋಣ'ವೆಂದು ಒತ್ತಾಯಿಸುತ್ತಿದ್ದಾನೆ.

ಅಕ್ಕಮ್ಮ ಕಾಲೊನಿ ಬಿಟ್ಟು ಬರುವಾಗ ಧರ್ಮಕ್ಕೆ ಯಾವುದೇ ಮಹತ್ತರ ಸ್ಥಾನ ನೀಡಿರಲಿಲ್ಲ. ಬಂದ ಮೇಲೆ ಒಪ್ಪಿಕೊಂಡ ಹೊಸ ಧರ್ಮ, ನಂಬಿಕೆಗಳನ್ನು ಒಂದು ಅನಿವಾರ್ಯ ಆಚರಣೆಯನ್ನಾಗಿ ಮಾತ್ರ ಸ್ವೀಕರಿಸಿದ್ದಳು. ಅದರ ಬಗ್ಗೆ ವಿಶೇಷ ಆಲೋಚನೆಯನ್ನೇನೂ ಮಾಡಿರಲಿಲ್ಲ. ಹೊಟ್ಟೆಯ ಹಸಿವನ್ನು ತೀರಿಸುವುದು ಮಾತ್ರ ಆಗ ಮುಖ್ಯವಾಗಿತ್ತು. ಫಾದರ್ ಶಾಮುವೇಲು ಹೇಳಿದಂತೆ ಪ್ರತಿದಿನ ಜಪ,

ವಾರಕ್ಕೊಮ್ಮೆ ಚರ್ಚಿನಲ್ಲಿ ಪ್ರಾರ್ಥನೆ, ಕಾಲಕಾಲದ ಹಬ್ಬಗಳ ಆಚರಣೆ ಮಾಡಿದ್ದಳು ಅಷ್ಟೆ. ಮಾಡಿ ಮಾಡಿ ಅಭ್ಯಾಸವಾಗಿ ಈಗ ಅದೆಲ್ಲವೂ ದಿನನಿತ್ಯದ ಬದುಕಿನ ಭಾಗವಾಗಿವೆ. 'ಇಲ್ಲೇ ತೀರಿಹೋದರೆ ಎದೆಯ ಮೇಲೆ ಶಿಲುಬೆಯಿಟ್ಟು ಪೆಟ್ಟಿಗೆಯೊಳಗಿಟ್ಟು ಸಂಸ್ಕಾರ ಮಾಡೋದಿಲ್ವೇ ಇವರು' ಎಂದು ಅಕ್ಕಮ್ಮನ ಗಂಡ ಬದುಕಿದ್ದಾಗ ಕಳವಳಿಸುತ್ತಿದ್ದ. ಹಾಗೇ ಆಯಿತು. ಮೊದಲ ಸಾವು ಅವನದೆ ಆದಾಗ 'ಸತ್ತು ಶವಪೆಟ್ಟಿಗೆಯಲ್ಲಿ ಮಲಗೋಕೂ ಕೊಳೆತು ಮಣ್ಣಿನಡಿಯಲ್ಲಿ ಬಹಳಕಾಲ ಮಲಗೋಕೂ' ತೀರಾ ಇಷ್ಟವಿಲ್ಲದವನನ್ನು ಮಣ್ಣಿನಡಿಯಲ್ಲಿ ಮಲಗಿಸಬೇಕಾಗಿ ಬಂತು. ಈ ವಿಚಾರ ನೆನಪಾದಾಗೆಲ್ಲ ಅಕ್ಕಮ್ಮ ಖೇದಗೊಳ್ಳುತ್ತಾಳೆ.

ಅಕ್ಕಮ್ಮನ ಜೀವನದಲ್ಲಿ ಈಗ ಕಷ್ಟಗಳಿಲ್ಲ. ಆದರೂ ಆಗಾಗ್ಗೆ, ಅದರಲ್ಲೂ ವಿಶೇಷವಾಗಿ ಗಂಡನ ಮರಣಾನಂತರ ಅಸಂತೋಷವೆ ಉಮ್ಮಳಿಸಿ ಬರುತ್ತಿರುವುದಕ್ಕೆ 'ಸನಾತನ ಧರ್ಮವನ್ನು ಬದಲಿಸಿಕೊಂಡು ಶಿಲೆಗೆ ಪೂಜೆ ನಿಂತದ್ದರಿಂದ ಇರಬಹುದೆ?' ಎಂಬೊಂದು ಆಲೋಚನೆ ಆಕೆಯನ್ನು ಒಳಗೇ ಕೊರೆಯುತ್ತಿತ್ತು. ಈ ಅಪರಾಧಿಪ್ರಜ್ಞೆಯಿಂದಾಗಿಯೆ 'ನಾವೆಲ್ಲರೂ ಹುಟ್ಟಿದ್ದು ಸನಾತನ ಧರ್ಮದಲ್ಲಿ. ಎಷ್ಟೇ ಪ್ರಲೋಭನೆ, ಆಮಿಷ ಒಡ್ಡಿದರೂ ಬೇರೊಂದು ಧರ್ಮದ ಆಶ್ರಯದೊಳಗೆ ಸೇರಬಾರದಾಗಿತ್ತು' (ಪು. ೧೩, ಕಥಾ ಸಮಾಹಾರಂ) ಎಂಬ ಸುಮೇರನ ಮಾತುಗಳನ್ನು ಕೇಳಿದಾಗ ತಲೆ ಕೆಳಗೆ ಹಾಕಿ ನಿಲ್ಲುವಂತಾಯಿತು.

ಹಿಂದಿನ ಬದುಕಿನಲ್ಲಿ ಅನುಭವಿಸಿದ ಅವಮಾನ, ಕೀಳರಿಮೆಗಳನ್ನು ಅಕ್ಕಮ್ಮ ಮರೆತಿಲ್ಲ. 'ಇಲ್ಲಿಗೆ ಬರುವಾಗ ತಮಗೆ ಹಸಿವು ಬಿಟ್ಟು ಬೇರೇನೂ ಮುಖ್ಯವಾಗಿರಲಿಲ್ಲ' ಎಂಬುದು ನೆನಪಿದೆ. ಆದರೆ ಹೊಸ ಕಾಲದವನಾದ ಮಗ ತನಗಿಂತ ಹೆಚ್ಚು ತಿಳಿದವನು ಎಂದು ನಂಬಿದ್ದಾಳೆ. ಹಾಗಾಗಿ ತನ್ನ ಅನುಭವ ಮತ್ತು ಮಗನ ತಿಳುವಳಿಕೆಗಳ ನಡುವೆ ಯಾವುದನ್ನು ಆಯ್ಕೆ ಮಾಡುವುದೆಂದು ತಿಳಿಯದೆ ಒದ್ದಾಡುತ್ತಾಳೆ. ಹಸಿವು, ನೆಲೆ ಮುಂತಾದ ಭೌತಿಕ ಸಮಸ್ಯೆಗಳು ಪರಿಹಾರವಾದ ಬಳಿಕ ಮನುಷ್ಯರಿಗೆ ಐಡೆಂಟಿಟಿಯ ಪ್ರಶ್ನೆ ನೆನಪಾಗುತ್ತದೆ. ಪಾಪಭೀತಿ ಕಾಡುತ್ತದೆ. 'ಸ್ವಂತ ಬೇರುಗಳಿರುವ ನೆಲದ ಕಡೆಗೆ ಹಿಂತಿರುಗಬೇಕು' ಅನಿಸುತ್ತದೆ.

ಇಳಿವಯಸ್ಸಿನ ಅಕ್ಕಮ್ಮನನ್ನು ಪ್ರಧಾನವಾಗಿ ಕಾಡುತ್ತಿರುವ ಸಂಗತಿ ಸಾವಿನ ನಂತರದ್ದಾಗಿದೆ. 'ತಾನು ಸತ್ತರೆ ಶವಪೆಟ್ಟಿಗೆಯೊಳಗಿಟ್ಟ ತನ್ನ ಸ್ವಂತ ಮುಖವು ಸಮಾಧಿಯೊಳಗೆ ಕೊಳೆತ ಶರೀರವನ್ನು ನೆನಪಿಸಿಕೊಂಡಾಗ ಅಕ್ಕಮ್ಮ ಒಮ್ಮೆ ದಿಗಿಲುಗೊಂಡರು. ಬೆಂಕಿಯಾಗಿ ಹೊಗೆಯಾಗಿ ಗಾಳಿಯಾಗಿ ಆಕಾಶದಲ್ಲಿ ಸೇರಿಹೋಗಬೇಕೆಂದು ಅವರೊಳಗಿನ ಗಟ್ಟಿಧ್ವನಿ ಸದ್ದು ಮಾಡುತ್ತಿತ್ತು.' (ಪು. ೧೪, ಅದೇ) ಪರಂಪರೆ, ಧರ್ಮ ಮುಂತಾದವುಗಳ ಬಗ್ಗೆ ಸುಮೇರ ಹೇಳುವುದೆಲ್ಲವೂ ಸರಿಯಾಗಿದೆ ಎಂದು ಈಗೀಗ

ಅನಿಸುತ್ತಿರುವುದರಿಂದ 'ಗತಿಸಿಹೋದ ಅಜ್ಜ ಮುತ್ತಜ್ಜರ ಆತ್ಮಗಳೊಂದಿಗೆ ಸೇರಿಕೊಳ್ಳುವುದೆ ಒಳ್ಳೆಯದು' ಎಂದು ಅಂತಿಮವಾಗಿ ಅಕ್ಕಮ್ಮ ತೀರ್ಮಾನಿಸುತ್ತಾಳೆ.

ಶತಮಾನಗಳಿಂದಲೂ ಧರ್ಮಗಳ ಹೆಸರಿನಲ್ಲಿ ಕಚ್ಚಾಡುತ್ತಿರುವ, ಸಮುದಾಯಗಳ ಮೇಲಿನ ಸ್ವಾಮ್ಯಕ್ಕಾಗಿ ರಕ್ತದ ಹೊಳೆ ಹರಿಸುತ್ತಿರುವ ಪುರುಷ ಸಮುದಾಯದ ಜೀವವಿರೋಧಿ ನೀತಿಗಳಿಗೆ ಪ್ರತಿಯಾಗಿ, ಮತಾಂಧತೆಯನ್ನು ಮೀರಿದ, ಮಾನವೀಯ ನೆಲೆಯಲ್ಲಿ ಪ್ರಾಯೋಗಿಕವಾಗಿ ಯೋಚಿಸುವ ವಿಶಾಲ ನಿಲುವಿನ ಸ್ತ್ರೀಯರನ್ನು ಮಲಯಾಳಂ ಕೃತಿಗಳು ಸೃಷ್ಟಿಸಿವೆ. ಜೀವಪರವಾದ ಖಚಿತ ಅಭಿಪ್ರಾಯಗಳನ್ನು ಹೊಂದಿದ ವಿಶಿಷ್ಟವಾದ ಸ್ತ್ರೀದೃಷ್ಟಿಯನ್ನು ಕಾಣಿಸಿವೆ.

೨.೨. ಕುಟುಂಬ ಎಂಬ ಕೋಶ: ಸ್ತ್ರೀಶೋಷಣೆಯ ಸಾಂಸ್ಥಿಕ ವ್ಯವಸ್ಥೆ

ಕುಟುಂಬದ ಒಳಗೆ ವಿವಿಧ ಸಂಬಂಧಗಳನ್ನು ಜೋಡಿಸುವ ಮತ್ತು ಹಿಡಿದಿಡುವ ಹೊಣೆಯನ್ನು ಹೊತ್ತು ಕುಟುಂಬಿನಿಯರಾಗಿ ಬದುಕುವ ಸ್ತ್ರೀಯರ ಮಾದರಿಗಳನ್ನು ಭಾರತೀಯ ಸಮಾಜವು ಒಪ್ಪಿಕೊಂಡಿದೆ. ತರವಾಡು, ಕುಟುಂಬ ಎಂಬ ತಮ್ಮವರೇ ತುಂಬಿರುವ ಸಂಬಂಧಗಳ ಕೋಶದ ಒಳಗೆ ಸ್ತ್ರೀಯರ ಶೋಷಣೆಗೆ ಪೂರಕವಾದ ಮತ್ತು ಇದೇನೂ ಅಸಹಜವಲ್ಲ ಎಂಬಂತೆ ಭಾಸವಾಗುವ ಸಾಂಸ್ಥಿಕ ವ್ಯವಸ್ಥೆ ಕೇರಳದಲ್ಲೂ ಇರುವುದನ್ನು ಕಥನಗಳು ಕಾಣಿಸಿವೆ.

ವಿವಾಹ ಮತ್ತು ತಾಯ್ತನ ಇವೆರಡು ಪ್ರಕ್ರಿಯೆಗಳೂ ಕುಟುಂಬದ ಒಳಗೆ ಹೆಣ್ಣಿನ ನಿಯಮಿತ ಶೋಷಣೆಗೆ ಅವಕಾಶ ಒದಗಿಸಿವೆ. ತಾಯಿ, ಪತ್ನಿ, ಮಗಳು, ಸೋದರಿ, ಅಜ್ಜಿ, ಅತ್ತೆ... ಮುಂತಾದ ಕೌಟುಂಬಿಕ ಪಾತ್ರಗಳನ್ನು ನಿರ್ವಹಿಸುತ್ತ ಕುಟುಂಬದ ಹಿತವೇ ತಮ್ಮ ಹಿತವೆಂದು ಭಾವಿಸಬೇಕಾದ ಅನಿವಾರ್ಯತೆಗೆ ಸ್ತ್ರೀಯರನ್ನು ಸಿಲುಕಿಸಲಾಗಿದೆ. ಇಂಥ ಸ್ತ್ರೀಯರು ಮಲಯಾಳಂ ಕೃತಿಗಳಲ್ಲಿ ಬಹುಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಅಪರೂಪದ ಸಂದರ್ಭಗಳಲ್ಲಿ ಈ ಅನಿವಾರ್ಯತೆಯನ್ನು ಮೀರಿ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವ ಭಿನ್ನವಾದ ಸ್ತ್ರೀಮಾದರಿಗಳನ್ನೂ ಗುರುತಿಸಬಹುದಾಗಿದೆ.

೨.೨.೧. ಸಂಬಂಧಂ : ಸಡಿಲ ದಾಂಪತ್ಯ

'ಸಂಬಂಧಂ' ಎಂಬುದು ಕೇರಳದಲ್ಲಿ ಮಾತ್ರ ರೂಢಿಯಲ್ಲಿದ್ದ ಒಂದು ವಿಶೇಷ ದಾಂಪತ್ಯ ವ್ಯವಸ್ಥೆ. ಕೇರಳದ ನಂಬೂದಿರಿ ಮನೆತನದಲ್ಲಿ ಕುಟುಂಬದ ಹಿರಿಯ ಮಗನಿಗೆ ಮಾತ್ರ ಸ್ವಜಾತೀಯ ಕನ್ಯೆಯೊಂದಿಗೆ ವಿವಾಹ ಮಾಡಿಕೊಳ್ಳುವ ಅವಕಾಶವಿದೆ. ಅವನ ಉಳಿದ ಸೋದರರು ನಾಯರ್ ಅಥವಾ ಇತರ ಸಮುದಾಯದ ಹೆಣ್ಣುಮಕ್ಕಳನ್ನು ಅಧಿಕೃತವಾಗಿ 'ಕೂಡಿಕೆ' ಮಾಡಿಕೊಳ್ಳುತ್ತಾರೆ. ಹೀಗೆ

ಕೂಡಿಕೆ ಮಾಡಿಕೊಂಡ ಹೆಣ್ಣು ಸಾಮಾನ್ಯವಾಗಿ ತವರಿನಲ್ಲಿಯೆ ಉಳಿಯುತ್ತಾಳೆ. ಕೆಲವೊಮ್ಮೆ ಅವಳ ನಂಬೂದಿರಿ ಪತಿ ಅವಳಿಗಾಗಿಯೆ ಹೊಸ ನಿವಾಸದ ಏರ್ಪಾಡು ಮಾಡಬಹುದು.

ನಂಬೂದಿರಿ, ಅಯ್ಯರ್ ಅಥವಾ ತುಳು ಬ್ರಾಹ್ಮಣರೊಂದಿಗೆ ಸಂಬಂಧಂ ಮಾಡಿಕೊಳ್ಳುವುದು ತರವಾಡಿನ ಏಳಿಗೆಗೆ ಕಾರಣವಾಗುವುದೆಂದು ಭಾವಿಸಲಾಗಿದ್ದರಿಂದ, ಒಂದೆಡೆ ನೆಲೆನಿಲ್ಲದೆ ಊರೂರು ಸುತ್ತುವ ವಿದ್ವಾಂಸರಾದ ಬ್ರಾಹ್ಮಣರೊಂದಿಗೆ ಅಥವಾ ತಮ್ಮ ಸ್ವಂತ ಹೊಟ್ಟೆ ಹೊರೆಯಲೂ ಅನುಕೂಲವಿಲ್ಲದ ಬಡಬ್ರಾಹ್ಮಣರೊಂದಿಗೆ ಹೆಣ್ಣುಮಕ್ಕಳ ಸಂಬಂಧವನ್ನು ನೆರವೇರಿಸಲಾಗುತ್ತಿತ್ತು. ಸಂಬಂಧ ಮಾಡಿಕೊಂಡ ಬ್ರಾಹ್ಮಣನಿಗೆ ಅಶನಾರ್ಥವೂ ದೊರೆಯುತ್ತಿತ್ತು. ಐಶ್ವರ್ಯವಂತ ತರವಾಡುಗಳ ಹೆಣ್ಣುಮಕ್ಕಳನ್ನು ಸಂಬಂಧ ಮಾಡಿಕೊಂಡ ಬ್ರಾಹ್ಮಣನು ಹೆಂಡತಿಯ ಮನೆಯಲ್ಲೇ ಉಳಿದುಕೊಳ್ಳುವುದಕ್ಕೂ ಅವಕಾಶವಿತ್ತು. ಆದರೆ ಹೀಗೆ ಹೆಂಡತಿಯ ಮನೆಯಲ್ಲಿ ಉಳಿದುಕೊಂಡವರಿಗೆ ವಿಶೇಷ ಗೌರವವಿರಲಿಲ್ಲ.

ಹೆಚ್ಚಿನ ಸಂಬಂಧಂ ಕೂಡಿಕೆಗಳು ಹೆಣ್ಣಿನ ತವರಿಗೆ ಪ್ರತಿಷ್ಠೆಯನ್ನೂ, ಆರ್ಥಿಕ ಸಹಾಯವನ್ನು ದೊರಕಿಸುತ್ತವೆ. ಈ ಸಂಬಂಧದಿಂದ ಜನಿಸಿದ ಮಕ್ಕಳಿಗೆ ತಂದೆಯ ಹೆಸರು ಸಿಗುತ್ತದೆ. ಆದರೆ ತಂದೆಯ ಆಸ್ತಿಯಲ್ಲಿ ಪಾಲಿಲ್ಲ. ತಂದೆಯ ಮನೆಯಲ್ಲಿ ಅವರಿಗೆ ಸ್ಥಾನವಿಲ್ಲ. ನಂಬೂದಿರಿ ಪುರುಷ ಒಂದಕ್ಕಿಂತ ಹೆಚ್ಚು ಸ್ತ್ರೀಯರನ್ನು ಸಂಬಂಧ ಮಾಡಿಕೊಳ್ಳಬಹುದು. ಹಾಗೆಯೆ ನಂಬೂದಿರಿ ಪತಿ ತೀರಿಕೊಂಡರೆ ಅಥವಾ ಕೈಬಿಟ್ಟರೆ ಹೊಸ ಸಂಬಂಧ ಮಾಡಿಕೊಳ್ಳಲು ನಾಯರ್ ಸ್ತ್ರೀಗೂ ಅವಕಾಶವಿದೆ. ಸಂಬಂಧಕಾರ ಪತಿಯು ಜೀವಮಾನಪರ್ಯಂತ ಜೊತೆಯಲ್ಲಿರುವನೆಂಬ ಖಾತರಿ ಪತ್ನಿಗಿಲ್ಲ. ಹೆಣ್ಣಿನ ಸ್ವಂತ ಆಯ್ಕೆ ಅಭಿಪ್ರಾಯಗಳಿಗೆ ಅವಕಾಶವಿಲ್ಲದ, ಅವಳಿಗೆ ಆರ್ಥಿಕ ಭದ್ರತೆಯನ್ನು ನೀಡದ 'ಸಂಬಂಧಂ' ಅನ್ನು ಸ್ತ್ರೀಶೋಷಣೆಗೆ ಎಡೆಮಾಡಿಕೊಡುವ ಪುರುಷಪರ ವ್ಯವಸ್ಥೆಯ ಸಾಂಸ್ಥಿಕ ರೂಪವೆನ್ನಬಹುದು.

'ಸಂಬಂಧಂ' ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ತಮಗೆ ಇಷ್ಟವಾದ ಪುರುಷನಿಂದ ವಸ್ತ್ರ (ಪುಡವಾ) ಪಡೆದು ಅವನನ್ನು ಹೊಂದುವ, ಇಷ್ಟವಿಲ್ಲದ ಗಂಡನೊಂದಿಗೆ ಮಲಗಲು ನಿರಾಕರಿಸುವ, ಪತಿ ಬಿಟ್ಟುಹೋದರೆ ಮರುಮದುವೆಯಾಗುವ ಹಾಗೂ ಮದುವೆಯಿಲ್ಲದೆ ಗರ್ಭದಲ್ಲಿ ಅಂಕುರಿಸಿದ ಮಗುವಿಗೆ 'ಅಧಿಕೃತ ಅಪ್ಪನನ್ನು' ದೊರಕಿಸಿಕೊಡುವ ಅವಕಾಶಗಳು ಲಭ್ಯವಾಗುತ್ತಿದ್ದವು ಎಂದು ತಿಳಿದುಬರುತ್ತದೆ.

'ಹಗ್ಗ' ಕಾದಂಬರಿಯಲ್ಲಿ ಕೇರಳದ ನಾಯರ್ ಸಮುದಾಯಗಳಲ್ಲಿ ಪ್ರಚಲಿತವಾಗಿದ್ದ ಸಂಬಂಧಂ ವ್ಯವಸ್ಥೆಯ ಸಾಮಾಜಿಕ, ಲೈಂಗಿಕ ಮತ್ತು ಆರ್ಥಿಕ ಆಯಾಮಗಳ ಪೂರ್ಣ ಚಿತ್ರಣವಿದೆ. ಕೋಡಾಂತ್ರ ಕುಂಜಮ್ಮಳೊಂದಿಗೆ 'ಸಂಬಂಧಂ' ನಿಂದಾಗಿ ಶೇಷಯ್ಯನ್ ಅಯ್ಯರ್ ಮಟ್ಟಿಗೆ 'ಹೆಂಡತಿ ಮನೆಯಲ್ಲಿ ರಾತ್ರಿ ಮಲಗುವ ಹಕ್ಕನ್ನು ಆ ಮೂಲಕ ಪಡೆಯಲಾಗಿದೆ.' ಮೊದಲ ರಾತ್ರಿಯಲ್ಲಿ ಸಜ್ಜೆಮನೆಯೊಳಗೆ

ಬಂದಾಗ ಆತ ಕುಂಜಮ್ಮನಲ್ಲಿ ಕೇಳಿದ ಮೊದಲ ಪ್ರಶ್ನೆ 'ನಿನಗೆ ಎಷ್ಟನೇ ತಿಂಗಳು?' ಎಂಬುದಾಗಿತ್ತು. ಕುಂಜಮ್ಮ ಕಂಡಿರುವಳು ಎನ್ನಲಾದ ಗಂಧರ್ವ 'ಎರಮತ್ರ ಮಠದಲ್ಲಿ ವಾಸಿಸುತ್ತಿರುವವನೇ?' ಎಂದೂ ಕೇಳುತ್ತಾನೆ. ಕುಂಜಮ್ಮಳ ಗರ್ಭದಲ್ಲಿ ಬೆಳೆಯುತ್ತಿರುವ ಮಗುವಿಗೆ ಅಗತ್ಯವಿರುವ ಅಪ್ಪನ ಹೆಸರಿಗಾಗಿ ಮಾತ್ರ ಈ ಸಂಬಂಧ ನಡೆದಿದೆಯೆಂಬ ಅರಿವು ಶೇಷಯ್ಯನ್‌ಗೂ ಇದೆ. ಮೊದಲ ರಾತ್ರಿಯಲ್ಲೇ ಕುಂಜಮ್ಮಳಿಂದ ತಿರಸ್ಕೃತನಾದ ಬಳಿಕ ಅವನೆಂದೂ ಕೋಡಾಂತ್ರ ಮನೆಯೊಳಗೆ ಕಾಲಿಟ್ಟಿಲ್ಲ. ಆದರೆ ಪ್ರತಿದಿನವೂ ಸಂಜೆ ಬಂದು ಅಂಗಳದಲ್ಲೇ ನಿಂತು ಆ ಮನೆಯಿಂದ ತನಗೆ ಬರಬೇಕಾದ ಅಕ್ಕಿ ವಗೈರೆಗಳನ್ನು ಲೆಕ್ಕವಿಟ್ಟು ಪಡೆದುಕೊಂಡು ತನ್ನ ಊರಿಗೆ ಕಳುಹಿಸುತ್ತಾನೆ. "ನೀವು ಮಾತ್ರ ನನಗೆ ಅಡುಗೆಗೆ ಬೇಕಾದ ಅಕ್ಕಿ, ತೆಂಗಿನಕಾಯಿ, ಉಪ್ಪು, ಮೆಣಸಿನಕಾಯಿಗಳನ್ನೆಲ್ಲ ದಿನವೂ ಕೊಟ್ಟುಬಿಡಿ. ದೂರದ ತಿರುವನಂತಪುರದಲ್ಲಿರುವ ಒಂದು ಬಡಬ್ರಾಹ್ಮಣ ಕುಟುಂಬ ಬದುಕಿಕೊಳ್ಳಲಿ" (ಪು. ೭೦, ಭಾಗ ೧) ಶೇಷಯ್ಯನ್‌ನ ಈ ಮಾತುಗಳು ಸಂಬಂಧಂ ವ್ಯವಸ್ಥೆಯ ವ್ಯಾವಹಾರಿಕತೆಯನ್ನು ಸೂಚಿಸುತ್ತವೆ.

ನಾಯರ್ ತರವಾಡುಗಳ ಮಟ್ಟಿಗೆ 'ತಂದೆ' ಎಂಬುದು ಕೇವಲ ಹೆಸರು ಮಾತ್ರವೆ ಆಗಿತ್ತಲ್ಲದೆ ಮಕ್ಕಳನ್ನು ಮುದ್ದಿಸುವ, ಸಾಕಿ ಬೆಳೆಸುವ ಯಾವ ಜವಾಬ್ದಾರಿಯೂ ತಂದೆ ಎನಿಸಿಕೊಂಡವನಿಗೆ ಇರಲಿಲ್ಲ. ಅವು ತರವಾಡಿನ ಮಕ್ಕಳಾಗಿರುತ್ತಿದ್ದವು. ತರವಾಡಿನ ಯಜಮಾನರಾದ ಕಾರಣವರ್ (ಹಿರಿಯ ಮಾವ) ಆ ಮಕ್ಕಳನ್ನು ಪೋಷಿಸುತ್ತಿದ್ದರು. 'ಹಗ್ಗ' ಕಾದಂಬರಿಯ ಕೋಡಾಂತ್ರದ ಕುಂಜಮ್ಮನ ಅಮ್ಮನಿಗೆ ವಸ್ತ್ರ ಕೊಟ್ಟ ಬ್ರಾಹ್ಮಣ ಹೆಂಡತಿ ತೀರಿಕೊಂಡ ಬಳಿಕ ತರವಾಡಿನಿಂದ ಹೊರಟುಹೋಗಿದ್ದಾನೆ. ಆಮೇಲೆ ಆತನಿಗೆ ಅಲ್ಲಿ ಸ್ಥಾನವಿಲ್ಲ. ಕುಂಜಮ್ಮನ ನಾಲಿಗೆ 'ಅಪ್ಪಾ' ಎಂದು ಉಚ್ಚರಿಸುವ ಶ್ರಮವನ್ನು ತೆಗೆದುಕೊಂಡಿದ್ದಿಲ್ಲ. ಕುಂಜಮ್ಮನಿಗೆ ವಸ್ತ್ರ ಕೊಟ್ಟ ಕಾರಣಕ್ಕೆ ಅವಳ ಗರ್ಭದಲ್ಲಿ ಹುಟ್ಟಿದ ಮಗುವಿಗೆ ಅಧಿಕೃತ ತಂದೆಯಾಗಿರುವ ಶೇಷಯ್ಯನ್ ಆ ಮಗುವನ್ನು ನೋಡಿಯೆ ಇಲ್ಲ. ಹೀಗೆ ತರವಾಡುಗಳಲ್ಲಿ 'ಅಪ್ಪಾ ಎಂದು ಉಚ್ಚರಿಸಬೇಕಾದ ಅಗತ್ಯವೇ ಇಲ್ಲದೆ' ಕುಂಜಮ್ಮಂದಿರು ಬೆಳೆಯುವುದು ಸಂಬಂಧಂ ವ್ಯವಸ್ಥೆಯಲ್ಲಿ ಬಹಳ ಸಹಜವಾಗಿರುವುದನ್ನು ಕೃತಿಯು ಗುರುತಿಸಿದೆ. 'ಅಪ್ಪ ಎತ್ತಿ ಮುದ್ದಾಡುವುದು! ಮಕ್ಕಳಿಗೆ ಈ ಅನುಭವ ಆಗಿನ ತರವಾಡುಗಳಲ್ಲಿ ದೊರೆಯುತ್ತಿರಲಿಲ್ಲ. ಅಪ್ಪ ಇಲ್ಲದಿದ್ದರೂ ಮಕ್ಕಳು ಬೆಳೆಯುವರು' (ಪು. ೯೮, ಭಾಗ ೧) ಕೋಡಾಂತ್ರ ಕುಂಜಮ್ಮನ ಮಗುವಿನ ತಂದೆಯಾಗಿರುವ ಕೊಚ್ಚುಪಿಳ್ಳೆಯು ಮುದ್ದಾಗಿದ್ದ ಮಗುವನ್ನು ಎತ್ತಿಕೊಂಡು ಸ್ವಲ್ಪ ಸುಖ ಹೊಂದಲು ಬಯಸಿದಾಗ 'ಅದಕ್ಕೆ ಅಭ್ಯಾಸವಾದೀತು. ಮಗೂನ ಮಲಗಿಸಿಬಿಡಿ' ಎಂದು ಕುಂಜಮ್ಮ ಹೇಳಲು ಇದೇ ಕಾರಣವಾಗಿದೆ.

ವಸ್ತ್ರ ಕೊಟ್ಟವನು ತರವಾಡಿನತ್ತ ತಲೆ ಹಾಕದೆ ವರ್ಷಗಳೇ ಕಳೆದ ಬಳಿಕ ಅವನಿಂದ ವಸ್ತ್ರ ತೆಗೆದುಕೊಂಡ ಹೆಣ್ಣು ವಿವಾಹೇತರ ಸಂಬಂಧದಿಂದ ಗರ್ಭಿಣಿಯಾದ ಸಂದರ್ಭದಲ್ಲಿ ಮತ್ತೆ ಆ ಸಂಬಂಧಕಾರನನ್ನು

ಕರೆಸಿ ಅವಳ ಪಕ್ಕದಲ್ಲಿ ಮಲಗಿಸಿ ಅವಳ ಗರ್ಭಕ್ಕೆ ಒಂದು ಅಧಿಕೃತತೆಯನ್ನು ದೊರಕಿಸುವಂಥ ವಿಶಿಷ್ಟ ಪ್ರಸಂಗಗಳು 'ಹಗ್ಗ' ಕಾದಂಬರಿಯಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಕೊನ್ನೋತ್ತು ತರವಾಡಿನ ಚುಟ್ಟಿಕುಂಜಮ್ಮನಿಗೆ ವಸ್ತ್ರ ನೀಡಿದ್ದ ಭಟ್ಟ ತರವಾಡಿನ ಬಡತನದಲ್ಲಿ ಉಪವಾಸ ಬೀಳಲಾಗದೆ ಬಿಟ್ಟು ಹೋಗಿದ್ದ. ಚುಟ್ಟಿಕುಂಜಮ್ಮ 'ಉಪವಾಸದಿಂದ ಹುಟ್ಟಿಕೊಂಡ ಧೈರ್ಯ'ದಿಂದ ದೇವಳದ ದೋಣಿಯವನಾಗಿದ್ದ ಕುಜಂಗರಶಾರೆಯ ಸಂಗ ಮಾಡಿದಳು. ಹೊಟ್ಟೆಯ ಹಸಿವು ತಣಿಸಿದ ದೋಣಿಯವನು ಅವಳ ಗರ್ಭಕ್ಕೂ ಕಾರಣನಾದ ವಿಷಯ ಊರಿಗೆ ತಿಳಿಯುವ ಮುನ್ನ ಚುಟ್ಟಿಯ ಸಂಬಂಧಕಾರ ಬ್ರಾಹ್ಮಣನನ್ನು ಮರಳಿ ಕರೆಸಿದ. 'ಮೂವತ್ತೈದು ಪಣಂನಷ್ಟು ದೊಡ್ಡ ಮೊತ್ತವೆ ಹೌದು. ಅದನ್ನು ಆತ ಬ್ರಾಹ್ಮಣನಿಗೆ ಕೊಟ್ಟ. ಎರಡು ದಿನಕ್ಕೆ ಬೇಕಾದ ಅಕ್ಕಿ ವಗೈರೆಗಳನ್ನೂ ಕೊಟ್ಟ. ಆ ಬ್ರಾಹ್ಮಣ ಮುರಿದು ಬೀಳುವಂತಿದ್ದ ಮಠದ ಅಡುಗೆ ಮನೆಯಲ್ಲಿ ಸ್ವತಃ ಅಟ್ಟು ಉಂಡ, ಚುಟ್ಟಿಕುಂಜಮ್ಮನ ಜೊತೆಯಲ್ಲಿ ರಾತ್ರಿ ಮಲಗಿದ.' (ಪು. ೩೮೨, ಭಾಗ ೧) ಹೀಗೆ ಐವತ್ತು ಬೆಳ್ಳಿಪಣಂ ಖರ್ಚು ಮಾಡಿ 'ಮಾನ ಕಾಪಾಡಿದ' ಕುಜಂಗರಶಾರ್‌ನೊಂದಿಗೆ ಹೊರಟುಹೋಗುವ ನಿರ್ಧಾರವನ್ನೂ ಚುಟ್ಟಿಕುಂಜಮ್ಮ ಕೈಗೊಂಡಿದ್ದಳು. ಆದರೆ ಅವನು ಹೆದರಿಕೊಂಡು ದೋಣಿಯ ಪಥ ಬದಲಾಯಿಸಿ ಹೋಗಿಬಿಟ್ಟ ಕಾರಣದಿಂದಾಗಿ 'ತರವಾಡಿನ ಮಾನ ಉಳಿಯಿತು.' ಇಂಥ ಗುಪ್ತಪ್ರಣಯಗಳು ಗುಪ್ತವಾಗುಳಿಯದೆ ಊರವರ ಮಾತಿಗೆ ಆಹಾರವಾಗಿರುತ್ತಿದ್ದುದು ಸಂಬಂಧಂ ಎಂಬ ಆಪತ್ಕಾಲೀನ ದಾಂಪತ್ಯ ವ್ಯವಸ್ಥೆಯ ಅರ್ಥಹೀನತೆಯನ್ನು ಎತ್ತಿ ತೋರುವಂತಿವೆ.

ಊರಿನ ಅನೇಕ ಹೆಣ್ಣುಗಳಿಗೆ ವಸ್ತ್ರ ನೀಡಿ ಅವರ ಗರ್ಭದ ಮಾನ ಉಳಿಸುವ, ತನ್ನ ಔದಾರ್ಯಕ್ಕೆ ಪ್ರತಿಫಲವಾಗಿ ಅಕ್ಕಿ, ಬೇಳೆ, ಕಾಯಿಗಳನ್ನು ಪಡೆದುಕೊಳ್ಳುವ ಶೇಷಯ್ಯನ್‌ಗೆ ಸ್ವಂತ ಕುಟುಂಬವನ್ನು ಹೊರೆಯಲು ಅದೇ ಪ್ರಧಾನ ಆದಾಯವಾಗಿದೆ. ಚೀರಟ್ಟ ತರವಾಡಿನ ಚಕ್ಕಿ ಕುಂಜಮ್ಮನಿಗೆ ಅವನು ಕೊಟ್ಟ ಅಡ್ಡಸೀರೆ, ಅಂಗವಸ್ತ್ರಗಳನ್ನು ಚೀರಟ್ಟದವರೇ ಒದಗಿಸಿದ್ದರು. ಅವನ್ನು ಕೊಂಡುಕೊಡುವಷ್ಟು ಅನುಕೂಲತೆ ಅವನಿಗಿರಲಿಲ್ಲ ಎಂಬುದಕ್ಕಿಂತಲೂ ಹಾಗೆ ಅವನಿಂದ ವಸ್ತ್ರ ಕೊಡಿಸಲೇಬೇಕಾದ ಅನಿವಾರ್ಯತೆ ಚೀರಟ್ಟ ಮನೆಯವರಿಗಿತ್ತು ಎಂಬುದನ್ನು ಇಲ್ಲಿ ಗಮನಿಸಬೇಕು. ಏಕೆಂದರೆ ಚಕ್ಕಿ ಕುಂಜಮ್ಮ ಮದುವೆಯಿಲ್ಲದೆ ಗರ್ಭವತಿಯಾಗಿದ್ದಳು. "ಅನೇಕಾನೇಕ ಹೆಣ್ಣುಗಳು ಬಸಿರಾದಾಗ ಹೊಣೆ ವಹಿಸಿಕೊಂಡೆ. ಅನೇಕಾನೇಕ ಕುಟುಂಬಗಳ ಮಾನ ಕಾಪಾಡಿದೆ. ಬಹಳಷ್ಟು ಮಕ್ಕಳು ನನ್ನನ್ನು ಅಪ್ಪಾ ಎಂದು ಕರೆಯುತ್ತಾರೆ. ಎಲ್ಲ ಕುಟುಂಬಗಳೂ ಎಂಜಲು ಭಿಕ್ಷೆ ಕೊಟ್ಟರು ಅಷ್ಟೆ" (ಪು. ೩೪೪, ಭಾಗ ೧) ಇಳಿವಯಸ್ಸಿನ ಶೇಷಯ್ಯನ್ ನೋವಿನಿಂದ ಆಡುವ ಈ ಮಾತುಗಳಲ್ಲಿ ಸಂಬಂಧಂ ಎಂಬ ಸ್ತ್ರೀ-ಪುರುಷ ಬಾಂಧವ್ಯದ ದುರ್ಬಲತೆ ವ್ಯಕ್ತವಾಗಿದೆ. ಶೇಷಯ್ಯನ್‌ನ ಮಗ ವೆಂಕಿಟಿ ಈ ಪರಂಪರೆಯನ್ನು ಮುಂದುವರೆಸಲು ನಿರಾಕರಿಸುತ್ತಾನೆ.

ಕೋನ್ನೋತ್ತು ಮನೆಯ ಕಾಳಿಕುಂಜಮ್ಮನಿಗೆ ಡೊಳ್ಳು ಹೊಟ್ಟೆಯ ಒಬ್ಬ ಭಟ್ಟನೊಡನೆ ಸಂಬಂಧವಾಗಿದೆ. ಆದರೆ ಅವಳು ಬಲಿಷ್ಠಕಾಯದ ಕೆಲಸದಾಳು ಪರಮನ್‌ನೊಂದಿಗೆ ಪ್ರಣಯ ಸಂಬಂಧ ಹೊಂದಿದ್ದಾಳೆ. ಅವನ ಮಗುವನ್ನು ಹೆತ್ತು ಅವಳು ತೀರಿಕೊಂಡಾಗ ರೂಢಿಯಂತೆ ಅವಳಿಗೆ ವಸ್ತ್ರ ಕೊಟ್ಟ ಬ್ರಾಹ್ಮಣ ತರವಾಡಿನಿಂದ ಹೊರಟುಹೋಗಲು ಸಜ್ಜಾಗುತ್ತಾನೆ. ಆದರೆ ಮನೆಯ ಹಿರಿಯತ್ತೆ ಹಿರಿಯ ಮಾವನಿಗೆ ಹೇಳಿ ಆ ಬ್ರಾಹ್ಮಣನನ್ನು ಉಳಿಸಿಕೊಳ್ಳುತ್ತಾಳೆ. ಯಾಕೆಂದರೆ ಮನೆಯಲ್ಲಿ ಕಾಳಿಗಿಂತ ಒಂದು ವರ್ಷ ಹಿರಿಯಳಾದ ಇಟ್ಟಿಕುಂಜಿ ಎಂಬ ಕುಂಜಮ್ಮ ಇದ್ದಾಳೆ. 'ಹೆಣ್ಣಿದ್ದಲ್ಲಿ ಕಳಂಕ ಬರುವುದು. ಇಟ್ಟಿಕುಂಜಿಗೆ ಒಂದು ವಸ್ತ್ರ ಕೊಡಿಸೋಣ' ಎಂಬುದು ಹಿರಿಯತ್ತೆಯ ದೂರಾಲೋಚನೆ. ಒಮ್ಮೆ ವಸ್ತ್ರ ಕೊಡಿಸಿಬಿಟ್ಟರೆ ಮತ್ತೆ ಆ ಹೆಣ್ಣು ದಾರಿತಪ್ಪಿದರೂ ಮನೆತನದ ಹೆಸರು ಕೆಡುವ ಭಯವಿರುವುದಿಲ್ಲ.

ಮನೆಯ ಹಿರಿಯರು, ಮುಖ್ಯವಾಗಿ ಕಾರಣವರ್ ಅವರು ನಿಶ್ಚಯಿಸಿದ ಸಂಬಂಧವನ್ನು ನಿರಾಕರಿಸುವ ಅಧಿಕಾರ ತರವಾಡಿನ ಹೆಣ್ಣುಮಕ್ಕಳಿಗಿಲ್ಲ. ಕೋಡಾಂತ್ರ ಮನೆಯ ಕಾರಣವರ್ ಅವರು ಒಬ್ಬ ತುಳು ಬ್ರಾಹ್ಮಣನೊಂದಿಗೆ ನಿಶ್ಚಯಿಸಿದ ಸಂಬಂಧವನ್ನು 'ನನಗಿಷ್ಟವಿಲ್ಲ' ಎಂದು ಸ್ಪಷ್ಟವಾಗಿ ನಿರಾಕರಿಸಿದ ಸೊಸೆ ಕುಂಜಮ್ಮ ಮತ್ತು ಅವಳ ಪ್ರಿಯಕರನಾದ ಮನೆಯಾಳು ಕಂಡಶ್ಶಾರ್‌ನ ಅದೇ ಘಳಿಗೆಗೆ ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ. 'ಒಂದೊಂದು ಒದೆಯೊಂದಿಗೆ ಕಂಡಶ್ಶಾರ್ ಮತ್ತು ಕುಂಜಮ್ಮನ ಕತೆ ಮುಗಿದು' ತರವಾಡಿನ ಮರ್ಯಾದೆ ಉಳಿಯುತ್ತದೆ. ಕುಟುಂಬದ ಅಜ್ಜಿಯರು ಈ ದುರಂತಕತೆಯನ್ನು ವಂಶಪಾರಂಪರ್ಯವಾಗಿ ದಾಟಿಸುತ್ತ ಮನೆಯ ಕಿರಿಯ ಕುಂಜಮ್ಮಂದಿರು ಚೌಕಟ್ಟು ದಾಟಲು ಹೆದರುವಂತೆ ನೋಡಿಕೊಳ್ಳುತ್ತಾರೆ. ಮಂಗಲಶೇರಿ ತರವಾಡಿನ ಯಜಮಾನ ಇರವಿಪಿಳ್ಳೆ ದೊಡ್ಡ ಮೊತ್ತದ ಸಾಲಮಾಡಿ ಕುಟುಂಬದ ಚಿಕ್ಕ ಪ್ರಾಯದ ಹನ್ನೊಂದು ಮಂದಿ ಹುಡುಗಿಯರು ಮೈನೆರೆಯುವ ಮೊದಲೇ ಅವರ ಓರಗೆಯ ಹುಡುಗರೊಂದಿಗೆ ಸಂಪ್ರದಾಯದಂತೆ 'ಕೆಟ್ಟ್ ಕಲ್ಯಾಣಂ' ನಡೆಸುತ್ತಾರೆ. ಹಿರಿಯತ್ತೆ ಕೊಚ್ಚುಂಜೂಲಿಯಮ್ಮನ ಅಭಿಪ್ರಾಯದಂತೆ 'ಹೆಣ್ಣಿರುವಲ್ಲಿ ಕಳಂಕ ಬರುತ್ತದೆ. ಒಬ್ಬಳು ಹುಡುಗಿಗೆ ಹದಿನಾಲ್ಕು ದಾಟಲಿದೆ.' ಅದಕ್ಕೂ ಮೊದಲೆ ಕೆಟ್ಟ್ ಕಲ್ಯಾಣಂ ಅನ್ನು ಅತ್ಯಗತ್ಯವಾಗಿ ಮಾಡಲೇಬೇಕೆಂದು ಕಾರಣವರ್ ಅವರನ್ನು ಒಪ್ಪಿಸುವವರು ಮನೆಯ ಹಿರಿಯ ಮಹಿಳೆಯರು.

ಪತ್ನಿ, ಮಕ್ಕಳನ್ನು ಸಾಕುವ ಹೊಣೆಯಿಲ್ಲದ ಸಂಬಂಧಂ ವ್ಯವಸ್ಥೆಯಲ್ಲಿ ನಂಬೂದಿರಿ ಪುರುಷರು ಎಷ್ಟು ಸಂಬಂಧಗಳನ್ನಾದರೂ ಹೊಂದಲು ಅವಕಾಶವಿತ್ತು. ಶೀಲಾಂತಿಪಿಳ್ಳೆ ಕಲ್ಯಾಣಿಯಮ್ಮನ ಗಂಡ, ಮಹಾವಿದ್ವಾಂಸನಾಗಿದ್ದ ಅವನ ತಂದೆ ಊರು ಸುತ್ತುವುದಕ್ಕೆ ಹೊರಟು ಸ್ಥಾಪಿಸಿಕೊಂಡ ಸಂಬಂಧಗಳನ್ನು ನೆನಪಿಸಿಕೊಳ್ಳುವ ಪ್ರಸಂಗವೊಂದನ್ನು ಇಲ್ಲಿ ಉದಾಹರಿಸಬಹುದು. ಗರ್ಭಿಣಿಯಾಗಿದ್ದ ಹೆಂಡತಿ ಉಣ್ಣಿಚಿರುತೆಯನ್ನು ಬಿಟ್ಟು ವರ್ಷಾನುಗಟ್ಟಳೆ ತಿರುಗಾಟದಲ್ಲಿದ್ದ ಪಂಡಿತ ಈಶ್ವರ ನಂಬೂದಿರಿಪ್ಪಾಡ್ ಮರಳಿ ಹೆಂಡತಿಯ ಮನೆಗೆ ಬಂದಾಗ ಅವಳು ಇನ್ನೊಬ್ಬ ನಂಬೂದಿರಿ

ಪಂಡಿತನೊಂದಿಗೆ 'ಬಾಂಧವ್ಯ' ಮಾಡಿಕೊಂಡು ಗರ್ಭಿಣಿಯಾಗಿದ್ದಳು. "ಪರಸ್ಪರ ಪರಿಚಿತರಾಗಿದ್ದ ಈ ಇಬ್ಬರು ವಿದ್ವಾಂಸರೂ ಮುಖಾಮುಖಿಯಾಗುತ್ತಲೆ ನಗತೊಡಗಿದರು. ನಕ್ಕದ್ದೇ ನಕ್ಕದ್ದು. ಹೊಟ್ಟೆ ಹುಣ್ಣಾಗುವ ಹಾಗೆ ನಕ್ಕರು. ಅಪ್ಪನೊಡನೆ ಆಗಿನ ನಂಬೂದಿರಿ 'ಬೇಸರಾಯ್ತೇ ಈಶ್ವರಾ?' ಎಂದು ಕೇಳಿದ. ಅಪ್ಪನಿಗೆಲ್ಲಿಯ ಬೇಸರ! 'ಸರ್ಹೋಯ್ತು. ಛೇ. ಇಲ್ಲ. ಇದೋ ನಾವು ಹೊರಟೆವು' ಎಂದು ಅಲ್ಲಿಂದ ಹೊರಟ." (ಪು. ೪೦೧, ಭಾಗ ೧) ತನ್ನ ಅಪ್ಪ ಅಂಬಲಪುಳಕ್ಕೂ ಬಂದಿದ್ದ ಕಾರಣ 'ಅಲ್ಲಿಯೂ ಅಪ್ಪನಿಗೆ ಮಗನೊ ಮಗಳೊ ಇರಬಹುದೆಂದೂ' ಕಲ್ಯಾಣಿಯಮ್ಮನ ಗಂಡ ಅತ್ಯಂತ ಸಹಜವೆಂಬಂತೆ ಹೇಳಿದ್ದ.

ಸಂಬಂಧಂ ವ್ಯವಸ್ಥೆಯಲ್ಲಿ ಇಷ್ಟವಿಲ್ಲದ ಪತಿಯೊಂದಿಗೆ ಮಲಗಲು ನಿರಾಕರಿಸುವ ಮುಕ್ತ ಅವಕಾಶವಿದ್ದ ಬಗೆಗೆ 'ಹಗ್ಗ' ಕಾದಂಬರಿಯಲ್ಲಿ ಉಲ್ಲೇಖವಿದೆ. ಅಂಥ ಸಂದರ್ಭಗಳಲ್ಲಿ ಸಂಬಂಧಕಾರ ಪತಿಯೊಬ್ಬ ತನ್ನನ್ನು ತಿರಸ್ಕರಿಸಿದ ಪತ್ನಿಯ ವಿರುದ್ಧ ಯಾವುದೇ ಆಕ್ರೋಶ ತೋರಿಸದೆ ಎದ್ದು ಹೊರನಡೆಯಬೇಕಿತ್ತು. ಇದೇ ಕಾರಣಕ್ಕಾಗಿ ಇಟ್ಟುಣ್ಣಾನ್‌ನಿಗೆ ಮೂರು ಬಾರಿ ಮದುವೆಯಾಗಿದೆ. ಅವನು ಮೊದಲು ಮದುವೆಯಾದ ಪಾಪಮ್ಮ ಮೊದಲ ರಾತ್ರಿಯಂದು ಅವಳ ಮನೆಗೆ ಹೋದಾಗ ಪತಿಯ ಚಾಪೆಯನ್ನು ಸುತ್ತಿ ಕೋಣೆಯಿಂದ ಹೊರಗಿಟ್ಟು ಒಳಗಿನಿಂದ ಅಗಳಿ ಹಾಕಿಕೊಳ್ಳುವ ಸರಳ ವಿಧಾನದ ಮೂಲಕ ಅವನೊಂದಿಗಿನ ಸಂಬಂಧವು ತನಗೆ ಇಷ್ಟವಿಲ್ಲವೆಂದು ಸೂಚಿಸುತ್ತಾಳೆ. ಇಟ್ಟುಣ್ಣಾನ್ ಏನೂ ಹೇಳದೆ ಅವನ ಮನೆಗೆ ಮರಳಬೇಕಾಗುತ್ತದೆ. ಬಳಿಕ ಮದುವೆಯಾದ ಚಿರುತೆಯು ಒಂದು ರಾತ್ರಿ ಪತಿಯು ಮನೆಗೆ ಬರುವ ಹೊತ್ತಿನಲ್ಲಿ ಕೋಣೆಯ ಬಾಗಿಲು ಮುಚ್ಚಿ ಅಗುಳಿ ಹಾಕಿಕೊಂಡು ಗೆಳೆಯನೊಂದಿಗೆ ಒಳಗಿದ್ದಳು. ಅವರ ಪಿಸುದನಿಯ ಸಂಭಾಷಣೆ ಕೇಳಿಕೊಂಡು ಕುದಿಯುತ್ತ ಮರಳಬೇಕಾಯಿತು. ಅವಳನ್ನು ಕೊಂದುಬಿಡುವಷ್ಟು ಸಿಟ್ಟು ಬಂದರೂ 'ಊರಿನಲ್ಲಿ ಬೇರೆ ಹೆಣ್ಣುಗಳಿಲ್ಲವೆ?' ಎಂಬ ಗೆಳೆಯನ ಸಲಹೆಯನ್ನು ಸ್ವೀಕರಿಸಿ ಅವನು ಅರಕಾಡು ನಾಣಿಯನ್ನು ಮೂರನೆಯ ಮಡದಿಯಾಗಿ ಸ್ವೀಕರಿಸಿದ.

ಒಬ್ಬಳಿಗೆ 'ವಸ್ತ್ರ' ಕೊಟ್ಟ ಬಳಿಕ ಅವಳೊಂದಿಗೆ ದೇಹಸಂಬಂಧವನ್ನು ಹೊಂದಿದ್ದರೂ ಇಲ್ಲದಿದ್ದರೂ ಅವಳು ಹೆರುವ ಮಕ್ಕಳಿಗೆ ತಂದೆ ಎನಿಸಿಕೊಳ್ಳುವ ಅನಿವಾರ್ಯತೆ ಸಂಬಂಧಕಾರನಿಗಿತ್ತು. ಕಾಳಿಕುಂಜಮ್ಮನಲ್ಲಿ ಆಳು ಪರಮನ್‌ನಿಂದ ಹುಟ್ಟಿದ ಮಗು ಲಕ್ಷ್ಮಿ ತನ್ನ ಅಮ್ಮನಿಗೆ ವಸ್ತ್ರ ಕೊಟ್ಟವ ತರವಾಡಿನಲ್ಲೇ ಇದ್ದಾಗಲೂ ಅವನನ್ನು ಎಂದೂ 'ಅಪ್ಪಾ' ಎಂದು ಕರೆದಿಲ್ಲ. ತನ್ನನ್ನು ಎತ್ತಿ ಮುದ್ದಿಸುವ ಪರಮನ್ ಎಂದರೆ ಮಗುವಿನ ಮುಖ ಅರಳುತ್ತದೆ. ಅದನ್ನು ಕಂಡಾಗ ಸ್ವತಃ ಮಗುವಿನ ಅಪ್ಪನ ಸ್ಥಾನದಲ್ಲಿದ್ದ ಬ್ರಾಹ್ಮಣ 'ಲಕ್ಷ್ಮಿಗೆ ಪರಮನ್ ಎಂದರೆ ಪರಮಾನ್ನವೆ' ಎಂದು ಉದ್ಗರಿಸುತ್ತಾನೆ. ಆ ಮಗು ಆಳು ಪರಮನ್‌ಗೆ ಹುಟ್ಟಿದ್ದು ಎಂಬುದು ಮನೆಯ ಮಹಿಳೆಯರಿಗೂ ಊರಿನವರಿಗೂ ತಿಳಿದಿದೆ. ಆದರೆ

ಯಾರೂ ಬಹಿರಂಗವಾಗಿ ಆ ಬಗ್ಗೆ ಚರ್ಚಿಸದೆ ತರವಾಡು ಮನೆಗಳಲ್ಲಿ ಅಂಥದ್ದೆಲ್ಲ ಸಹಜವೆಂಬಂತೆ ಸುಮ್ಮನಿರುತ್ತಾರೆ.

ಕೆಲವು ನಾಯರ್ ತರವಾಡುಗಳಲ್ಲಿ ನಾಯರ್ ಪುರುಷರೊಂದಿಗೆ ಸಂಬಂಧ ಮಾಡಿಕೊಳ್ಳುವ ಕ್ರಮವಿದ್ದುದರ ಬಗ್ಗೆಯೂ 'ಹಗ್ಗ' ಕೃತಿಯಲ್ಲಿ ಉಲ್ಲೇಖವಿದೆ. ಅಂಥಲ್ಲಿಯೂ ಸಂಬಂಧಕಾರನು ಪತ್ನಿಗಾಗಿ ಆಸ್ತಿ ಮನೆ ಮಾಡಿ ಕರೆಸಿಕೊಳ್ಳುವ ಕ್ರಮವಿರಲಿಲ್ಲ. ಪತ್ನಿ ವರ್ಷಕ್ಕೆ ಆರು ತುಂಡು ಪಂಚೆ, ಬೈರಾಸು, ಆರು ಸೇರು ಎಣ್ಣೆ, ತಿರುವಾತಿರ ಹಬ್ಬಕ್ಕೆ ನೂರು ನೇಂದ್ರಕಾಯಿಗಳು... ಇಷ್ಟನ್ನು ಕಳಿಸಿಕೊಟ್ಟರೆ ಪತ್ನಿಯ ಬಾಬ್ತು ಖರ್ಚು ಮುಗಿದಂತೆ. ಮಾತೃಮೂಲೀಯ ವ್ಯವಸ್ಥೆಯಲ್ಲಿ ಪುರುಷ ಗಳಿಸಿದ ಆಸ್ತಿ, ಸಂಪತ್ತು ಎಲ್ಲವೂ ಅವನ ತವರಿಗೆ ಸೇರುತ್ತಿತ್ತು. ಹಿರಿಯ ನಾಯರ್ ಪುರುಷನ ಪತ್ನಿ ಮಾತ್ರ ಹಿರಿಯತ್ತೆಯಾಗಿ ಪತಿಯ ತರವಾಡಿನಲ್ಲಿ ಇರಬಹುದಾಗಿತ್ತು. ತರವಾಡಿನ ಸ್ತ್ರೀಯರ ಆಸೆ, ಅಗತ್ಯಗಳನ್ನು ಕಾರಣವರ್ ಅವರಿಗೆ ತಲುಪಿಸುವ ಮಾಧ್ಯಮವಾಗಿ ಈ ಹಿರಿಯತ್ತೆ ಇರುತ್ತಿದ್ದಳು. ಕಾರಣವರ್ ತೀರಿಕೊಂಡನೆಂದರೆ ಅಶನಾರ್ಥದ ವ್ಯವಸ್ಥೆಯೊಂದಿಗೆ ಅವಳು ಆ ಮನೆ ಬಿಟ್ಟು ತನ್ನ ತರವಾಡಿಗೆ ಮರಳಬೇಕಿತ್ತು.

ಹಣವಿದ್ದರೆ ಸುಖವಾಗಿರಬಹುದು ಎಂಬ ಕಲ್ಪನೆಯು ಎಳೆಯ ಹೆಣ್ಣುಮಕ್ಕಳು ತಂದೆಯ ವಯಸ್ಸಿನ ವರನೊಂದಿಗೆ ಸಂಬಂಧಂ ವ್ಯವಸ್ಥೆಗೆ ಕೊರಳೊಡ್ಡುವಂತೆ ಮಾಡಿದೆ. ಚಂದುಮೆನೊನ್ ಅವರು ಬರೆದಿರುವ 'ಇಂದುಲೇಖಾ' ಕಾದಂಬರಿಯ ಎಳೆಯ ಹುಡುಗಿ ಕಲ್ಯಾಣಿಕುಟ್ಟಿಗೆ ಸೂರಿ ನಂಬೂದಿರಿಪ್ಪಾಡರೊಂದಿಗೆ ಸಂಬಂಧ ಮಾಡುವ ಸನ್ನಾಹ ನಡೆದಿರುವುದು ಗೊತ್ತೇ ಇಲ್ಲ. ಅವಳಿಗೆ ವಿಷಯ ತಿಳಿಸುವುದಾಗಲೀ, ಒಪ್ಪಿಗೆ ಪಡೆಯುವುದಾಗಲೀ ಮುಖ್ಯವೆಂದು ಹಿರಿಯರು ಭಾವಿಸಿಯೆ ಇಲ್ಲ. ಅವಳು 'ಇಂಗ್ರೇಜಿ' ಕಲಿತಿಲ್ಲವಾದ ಕಾರಣ ತಮ್ಮ ತೀರ್ಮಾನಕ್ಕೆ ಬದಲು ಹೇಳುವ ಸಂಭವವಿಲ್ಲವೆಂದು ನಂಬಿದ್ದಾರೆ. ಹೆಂಗಸರೆಲ್ಲ ಸೇರಿ ನೂಕುನುಗ್ಗಲುಗಳೊಂದಿಗೆ ನಡುಮನೆಯ ಪಡುವಣದ ಬಾಗಿಲಿಂದ ಪಾಪದ ಕಲ್ಯಾಣಿಕುಟ್ಟಿಯನ್ನು ಹಿಡಿದು 'ಜೀವದ ಒಂದು ಹಂದಿ ಅಥವಾ ಬೇರೆ ಯಾವುದೋ ಪ್ರಾಣಿಯನ್ನು ಹಿಡಿದು ಗೂಡಿನೊಳಕ್ಕೆ ಹಾಕುವಂತೆ' ಪ್ರಸ್ತದ ಕೋಣೆಯೊಳಕ್ಕೆ ತಳ್ಳಿ ಬಾಗಿಲನ್ನು ಹೊರಗಿನಿಂದ ಮುಚ್ಚಿಕೊಳ್ಳುತ್ತಾರೆ. ಹಾಗೆ ದಾಂಪತ್ಯವೆಂದರೇನು ಎಂಬ ಕಲ್ಪನೆಯೂ ಇಲ್ಲದ ಚಿಕ್ಕವಯಸ್ಸಿನ ಹುಡುಗಿಗೆ ಗುರುತು ಪರಿಚಯವಿಲ್ಲದ ಅನುಭವೀ ವ್ಯಕ್ತಿಯೊಂದಿಗೆ 'ಸಂಬಂಧ'ವು ಸ್ಥಾಪನೆಯಾಗುತ್ತದೆ. ಮರುದಿನ ಬೆಳಗ್ಗೆ 'ಹುಡುಗಿಯನ್ನು ಹಿಡಿದು ಒಂದು ಪಲ್ಲಕ್ಕಿಯೊಳಕ್ಕೆ ನೂಕಿ, ಬೀಗ ಹಾಕಿ' ಸೂರಿ ನಂಬೂದಿರಿಪಾಡರು ತನ್ನ ತರವಾಡಿಗೆ ಕರೆದುಕೊಂಡು ಹೋಗುತ್ತಾರೆ. ತಂದೆಯ ವಯಸ್ಸಿನ ವ್ಯಕ್ತಿಯೊಂದಿಗೆ ಬಲವಂತವಾಗಿ ರಾತ್ರಿಯನ್ನು ಕಳೆಯಬೇಕಾಗಿ ಬರುವ ಬಾಲಕಿಯ ಮನಸ್ಥಿತಿಯನ್ನು ತಿಳಿದುಕೊಳ್ಳುವ ಕಾಳಜಿಯನ್ನು ಯಾರೂ ಹೊಂದಿಲ್ಲ. ಮನೆಯವರ ಪ್ರಕಾರ ಹೆಣ್ಣಾಗಿ

ಹುಟ್ಟಿದ ಮೇಲೆ ಇದೆಲ್ಲ ಸಹಜವಾದ ಮತ್ತು ಸಹಿಸಿಕೊಳ್ಳಬೇಕಾದ ವಿದ್ಯಮಾನವಷ್ಟೆ ಆಗಿದೆ. ಇದನ್ನು ವಿರೋಧಿಸಬಹುದು ಎಂಬ ಕಲ್ಪನೆಯೆ ಇಲ್ಲದಂತೆ ತರವಾಡಿನ ಹೆಣ್ಣುಮಕ್ಕಳನ್ನು ಬೆಳೆಸಲಾಗುತ್ತದೆ.

'ಅಗ್ನಿಸಾಕ್ಷಿ' ಕೃತಿಯಲ್ಲಿನ ತಂಗಂ, ಧರ್ಮಸಮ್ಮತವಾದ 'ಸಂಬಂಧಂ'ನಿಂದ ಅಪ್ಫನ್ ನಂಬೂದಿರಿಗೆ ಹುಟ್ಟಿದವಳಾದರೂ ಸಾಮಾಜಿಕ ನಿಯಮಗಳನುಸಾರ ಶೂದ್ರಳಾಗಿರುವ ಮಗಳನ್ನು ಮುಟ್ಟಿ ಮುದ್ದಾಡಲಾರದೆ ಅವಳಪ್ಪ ಕೊರಗುವುದನ್ನು ಕಾಣಬಹುದು. ಮುಂದಕ್ಕೆ ಓದುತ್ತೇನೆಂದು ಹಠಹಿಡಿದು ಮಗಳು ಉಪವಾಸ ಮಾಡಿ ಬಸವಳಿದ ಸಂದರ್ಭದಲ್ಲಿ ಮನಸ್ಸು ತಡೆಯದೆ ಅರ್ಧರಾತ್ರಿಯಲ್ಲಿ ಅವಳ ಕೋಣೆಗೆ ಬಂದು ನೇವರಿಸಿ ಮುತ್ತಿಟ್ಟು ಹರಸುವ ಅಪ್ಪನೆಂಬ ಪುರುಷನೂ ಇಲ್ಲಿ ವ್ಯವಸ್ಥೆಯ ಬಲಿಪಶುವೇ ಆಗಿದ್ದಾನೆ. ಅಪ್ಪನ ಕೊನೆಯ ಕ್ಷಣಗಳ ಸಂದರ್ಭದಲ್ಲಿ ಅಪ್ಪನ ದೇಹವನ್ನು ತಂಗಂ ಮುಟ್ಟಿದ್ದರಿಂದಾಗಿ, ಆತ ಅಶುದ್ಧಿಯಲ್ಲಿ ಸತ್ತ ಎಂದು ಪರಿಗಣಿಸಿ, ಶುದ್ಧ ಮಾಡುವ ಕ್ರಿಯೆಗಳನ್ನು ನಡೆಸಲಾಗುತ್ತದೆ. ಇದಂತೂ 'ಸಂಬಂಧಂ' ಎಂಬ ವೈವಾಹಿಕ ವ್ಯವಸ್ಥೆಯ ಮೂಲಕ ಹುಟ್ಟಿಕೊಳ್ಳುವ ಸಂಬಂಧಗಳ ವಿಡಂಬನೆಯಾಗಿದೆ.

೨.೨.೨. ಮದುವೆ ಎಂಬ ಕೇಂದ್ರ ಕಾಳಜಿ

ವಿವಾಹವೆಂಬುದು ಪುರುಷಪ್ರಧಾನ ವ್ಯವಸ್ಥೆಯನ್ನು ಮುಂದುವರಿಸುವ ಮತ್ತು ಕೌಟುಂಬಿಕ ಅಧಿಕಾರದ ಕೇಂದ್ರದಲ್ಲಿ ಪುರುಷನನ್ನು ಇರಿಸುವ ಸಾಂಸ್ಥಿಕ ವ್ಯವಸ್ಥೆ. ಸ್ತ್ರೀಯ ಏಕಾಕಿ ಬದುಕು ಪರಿಪೂರ್ಣವಲ್ಲ, ಮದುವೆಯು ಹೆಣ್ಣಿಗೆ ಭದ್ರತೆ ಮತ್ತು ಗೌರವಗಳನ್ನು ಒದಗಿಸುತ್ತದೆ ಎಂದು ಸಮಾಜವು ನಂಬಿದೆ. ಹಾಗಾಗಿ ವಿವಾಹವು ಹೆಣ್ಣಿಗೆ ಅನಿವಾರ್ಯ ಆಯ್ಕೆಯಾಗಿದೆ. ಸ್ತ್ರೀಯರು ಶಿಕ್ಷಣ ಮತ್ತು ಉದ್ಯೋಗಗಳನ್ನು ದೊರಕಿಸಿಕೊಂಡು ಸ್ವಾವಲಂಬಿಗಳಾದ ಬಳಿಕವೂ 'ಮದುವೆ ಅನ್ನುವುದು ಹೆಣ್ಣಿನ ಬದುಕಿಗೆ ಭರವಸೆಯನ್ನು ಒದಗಿಸುವಂಥದ್ದು' ಎಂದೇ ಭಾವಿಸಲಾಗಿದೆ. ಹಾಗಾಗಿ ಇಷ್ಟವಿರಲಿ, ಇಲ್ಲದಿರಲಿ ಸ್ತ್ರೀಯರು ಮದುವೆ ಎಂಬ ವ್ಯವಸ್ಥೆಯನ್ನು ಒಪ್ಪಿಕೊಳ್ಳಲೇಬೇಕಾಗಿದೆ. ಎಷ್ಟು ಕಷ್ಟವಾದರೂ ಹೊಂದಿಕೊಂಡು ಗಂಡನ ಮನೆಯಲ್ಲಿ ಬಾಳುವೆ ಮಾಡಬೇಕು ಎಂಬ ಉಪದೇಶದೊಂದಿಗೆ ಹೆಣ್ಣುಮಕ್ಕಳನ್ನು ಬೆಳೆಸಲಾಗುತ್ತದೆ. ತವರುಮನೆಯಲ್ಲಿನ ಎಲ್ಲ ಸ್ವಾತಂತ್ರ್ಯ, ಸೌಕರ್ಯಗಳನ್ನು ಮರೆತು, ಅಭಿವ್ಯಕ್ತಿಯ ಸ್ವಾತಂತ್ರ್ಯ ಮತ್ತು ವಿರೋಧಿಸುವ ಶಕ್ತಿಗಳನ್ನು ಕಳೆದುಕೊಂಡು, ತಮ್ಮದೆಂಬ ಸ್ವಂತ ಅಸ್ತಿತ್ವವೆ ಇಲ್ಲದವರಂತೆ ಅವರು ಪತಿಗೃಹದಲ್ಲಿ ಬದುಕುತ್ತಾರೆ.

ಕಮಲಾದಾಸ್ ಅವರು ತಮ್ಮ ಹದಿಹರೆಯದ ಭಾವನೆ–ಅನುಭವಗಳನ್ನು ಕಥನರೂಪದಲ್ಲಿ ದಾಖಲಿಸಿರುವ 'ನೀರ್‌ಮಾದಳ ಹೂ ಬಿಟ್ಟ ಕಾಲ' ಕೃತಿಯಲ್ಲಿ ಸ್ತ್ರೀಯ ಅನುಭವಲೋಕಕ್ಕೆ ಹತ್ತಿರವಾದ ಪ್ರೇಮ, ಮದುವೆ, ತಾಯ್ತನ ಮುಂತಾದ ವಿಚಾರಗಳ ಸಾಂದರ್ಭಿಕ ನಿರೂಪಣೆಯಿದೆ. ಕಮಲಾ ಅವರು

'ಆಮಿ'ಯಾಗಿದ್ದ ಕಾಲಘಟ್ಟದ ಸ್ತ್ರೀಬದುಕಿನ ವಿವರಗಳಿವೆ. ಆಮಿಯ ತಂದೆಯ ವಾಹನಚಾಲಕ ನರೇಶ 'ಹೆಣ್ಣುಮಕ್ಕಳು ಹುಟ್ಟಿದರೆ ಮದುವೆ ಮಾಡಿ ಕೊಡಬೇಕಾಗುತ್ತದೆ' ಎಂಬ ಹೆದರಿಕೆಯಿಂದ ಮದುವೆಯನ್ನೇ ಮಾಡಿಕೊಂಡಿಲ್ಲ. ಸಾಲಾಗಿ ಏಳು ಮಂದಿ ಹೆಣ್ಣುಮಕ್ಕಳನ್ನು ಹೆತ್ತ ಧೋಬಿ ಕಾಶೀರಾಮನ ಹೆಂಡತಿ ಡ್ರೈವರ್ ನರೇಶನ ಪ್ರಕಾರ ಸರಿಯಾದ ಹೆಣ್ಣಲ್ಲ. 'ನಾನಾಗಿದ್ದರೆ ಇಂಥ ಹೆಂಡತಿಯನ್ನು ಸಹಿಸಿಕೊಳ್ಳಲಾರೆ' ಎಂದು ಅಭಿಪ್ರಾಯಪಡುತ್ತಾನೆ. ಧೋಬಿಯ ಹಿರಿಮಗಳು ಪಾರ್ವತಿಗೆ 'ಹುಬ್ಬು ಕೂಡ ನರೆತ ವೃದ್ಧ ವರನೊಂದಿಗೆ' ಮದುವೆಯಾಗುವಾಗ ಅವಳಮ್ಮನ ಸೊಂಟದಲ್ಲಿ ಒಂದು ವರ್ಷದ ಮಗುವಿದೆ. ಗ್ಯಾರೇಜಿನ ಯುವಕ ನೌಷಾದ್‌ನೊಂದಿಗೆ ಸಲುಗೆಯಿಂದ ವರ್ತಿಸುತ್ತಿದ್ದ ಹದಿಹರೆಯದ ಮಗಳು ಕುಲದ ಮಾನ ಕಳೆದಾಳೆಂಬ ಭಯದಲ್ಲಿ ಧೋಬಿಯು ತರಾತುರಿಯಲ್ಲಿ ಪಾರ್ವತಿಗೆ ಗಂಡು ಗೊತ್ತುಮಾಡಿದ್ದಾನೆ. ಪಾರ್ವತಿಯ ವರನು ಅವಳಿಗಿಂತ ಕನಿಷ್ಠ ಮೂವತ್ತು ವರ್ಷಗಳಷ್ಟು ಹಿರಿಯನಾಗಿರುವ ವಿಚಾರವು ಆಮಿಯ ಹೊರತಾಗಿ ಯಾರಿಗೂ ಅಸಹಜವೆನಿಸುವುದಿಲ್ಲ.

ಮಗಳ ಗಂಡ ರಾಮ ಪ್ರೊಷಾದ್‌ನಿಗೆ ಸುಮಾರು ತನ್ನಷ್ಟೇ ವಯಸ್ಸಾಗಿರುವುದು ಪಾರ್ವತಿಯ ತಂದೆ ಕಾಶೀರಾಮನಿಗೆ ತಿಳಿದಿದೆ. ಆದರೆ ಯಾವುದೇ ದುರ್ವ್ಯಸನಗಳಿಲ್ಲದೆ 'ಹಣ ಸಂಪಾದಿಸಿ ಬ್ಯಾಂಕಲ್ಲಿ ಇಡುತ್ತಿರುವುದರಿಂದ' ಅಳಿಯ ಒಳ್ಳೆಯವನು ಎಂಬುದು ಕಾಶೀರಾಮನ ಅಭಿಪ್ರಾಯ. ಅಳಿಯನ ಮೊದಲ ಹೆಂಡತಿಯ ಮಕ್ಕಳು ಮದುವೆ ಆಗಿ ಹೋಗಿರುವುದರಿಂದ ಪಾರ್ವತಿಯನ್ನು 'ಕಣ್ಣಿನೊಳಗಿನ ಕೃಷ್ಣಮಣಿಯಂತೆ ನೋಡಿಕೊಳ್ತಾನೆ' ಎಂದು ತಂದೆಗೆ ವಿಶ್ವಾಸವಿದೆ.

ಮದುವೆಗೆ ಮೊದಲು ತಾನು ಇಷ್ಟಪಟ್ಟಿದ್ದ ನೌಷಾದ್‌ನೊಡನೆ ಓಡಿಹೋಗಲು, ಅವನಿಗಾಗಿ ಇಸ್ಲಾಂ ಮತವನ್ನು ಸ್ವೀಕರಿಸಲೂ ತಯಾರಿದ್ದ ಪಾರ್ವತಿಯ ಮನಸ್ಥಿತಿ ಮದುವೆಯ ನಂತರ ಬದಲಾಗಿರುವುದನ್ನು ಗಮನಿಸಬಹುದು. ತಂದೆಯ ಮನೆಯಲ್ಲಿರುವಾಗ ಪಾರ್ವತಿ ಬಹಳ ಆಸೆಪಟ್ಟಿದ್ದ ಕ್ಯೂಟೆಕ್ಸ್, ಪೌಡರು, ರೇಶ್ಮೆರಿಬ್ಬನು, ಬಳೆಗಳು, ಬೇಕಾದಷ್ಟು ಐಸ್‌ಕ್ರೀಂ.. ಮುಂತಾದವನ್ನು ಮದುವೆಯ ನಂತರವೂ ಅವಳು 'ಚಾಚಾ' ಎಂದೇ ಸಂಬೋಧಿಸುವ ಗಂಡನು ಉದಾರವಾಗಿ ಒದಗಿಸುತ್ತಿದ್ದಾನೆ. ಹಾಗಾಗಿ 'ತಾನು ಸುಖವಾಗಿದ್ದೇನೆ' ಎಂದು ಆಕೆ ಭಾವಿಸಿದ್ದಾಳೆ. ಕೇವಲ ಪ್ರೇಮವೈಫಲ್ಯ ಹೊಂದಿದ ಕಾರಣಕ್ಕೆ 'ನಾನೇನೂ ಸಾಯುವುದಿಲ್ಲ, ಅಷ್ಟು ದಡ್ಡಿಯಲ್ಲ' ಎನ್ನುತ್ತಾಳೆ. ನೌಷಾದ್‌ಗೆ ಅನಾರೋಗ್ಯವೆಂದು ತಿಳಿದಾಗ ಮನಸ್ಸು ತಡೆಯದೆ ಗುಟ್ಟಾಗಿ ಅವನನ್ನು ಕಾಣಲು ಹೋಗುವ ಪಾರ್ವತಿಗೆ ತನ್ನ ಗಂಡನ ಬಗ್ಗೆಯಾಗಲೀ ತಂದೆಯ ಬಗ್ಗೆಯಾಗಲೀ ರೋಷವಿಲ್ಲ. ಅನಕ್ಷರಸ್ಥೆಯಾದ ಪಾರ್ವತಿ ತವರಿನ ಆರ್ಥಿಕ ಪರಿಸ್ಥಿತಿಯ ಅರಿವಿದೆ. ಹೆಂಡತಿಯನ್ನು ಸಾಕುವ ಸಾಮರ್ಥ್ಯವಿಲ್ಲದ ನೌಷಾದ್‌ನ ಜೊತೆಗೇನಾದರೂ ಓಡಿಹೋಗಿದ್ದರೆ ಹೊತ್ತಿನ ಗಂಜಿಗೂ ಕಷ್ಟಪಡಬೇಕಾಗಿತ್ತು ಎಂಬ ತಿಳುವಳಿಕೆಯಿದೆ. ಹಾಗಾಗಿ ಮನಸ್ಸನ್ನು

ನಿಯಂತ್ರಿಸಿಕೊಂಡು ಬದುಕುವ ಕಲೆಯನ್ನು ಕಲಿತಿದ್ದಾಳೆ. ಪ್ರೀತಿ ಪ್ರೇಮಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ರಾಮಪ್ರೊಷಾದ್ ಚಾಚಾನನ್ನು ಗಂಡನೆಂದು ಒಪ್ಪಿ ಸಂಸಾರ ನಡೆಸಿದ್ದಾಳೆ.

ಕಲಿಯುವ ಮನಸ್ಸುಳ್ಳ ಸ್ಥಿತಿವಂತ ಕುಟುಂಬದ ಹೆಣ್ಣುಮಕ್ಕಳ ಪಾಲಿಗೆ ಆ ಕಾಲದಲ್ಲಿ ಸಿಗುತ್ತಿದ್ದುದು ಶಾಸ್ತ್ರೀಯ ಸಂಗೀತ, ಹೊಲಿಗೆ ಮತ್ತು ಒಂದಷ್ಟು ಸಂಸ್ಕೃತ ಮಾತ್ರ ಎಂಬ ವಿಚಾರವನ್ನು ಕಮಲಾದಾಸ್ ನೆನಪಿಸಿಕೊಂಡಿದ್ದಾರೆ. ಕಮಲಾ ಅವರ ತಾಯಿ, ಕವಯಿತ್ರಿ ಬಾಲಾಮಣಿಯಮ್ಮ ಸ್ವಂತವಾದೊಂದು ಇಚ್ಛೆ ಎಂಬುದಿಲ್ಲದೆ ಗಂಡ ಹೇಳಿದಾಗ ಕಲ್ಕತ್ತೆಯ ಕೇರಳೀಯ ಮಹಿಳಾ ಸಮಾಜದ ಅಧ್ಯಕ್ಷೆಯಾಗಿ, ಬೇಡವೆಂದಾಗ ಸಮಾಜಕ್ಕೆ ರಾಜೀನಾಮೆ ಕೊಟ್ಟು ಬಂದುದನ್ನು ದಾಖಲಿಸಿದ್ದಾರೆ. ಕಲ್ಕತ್ತೆಯ ನಗರದಲ್ಲಿ ಇದ್ದಷ್ಟು ಕಾಲ ಪತಿಯ ಇಚ್ಛೆಯಂತೆಯೆ ಸದಾ ಖಾದಿ ಸೀರೆಯನ್ನು ಉಡುತ್ತ, ಊರಿಗೆ ಹೋದಾಗ ಮಾತ್ರ ಮುಂಡು ಉಡುತ್ತಿದ್ದ ಅಮ್ಮ ಆರ್ಥಿಕ ಅನುಕೂಲವಿದ್ದರೂ ಬೆಲೆಬಾಳುವ ಪಟ್ಟೆಸೀರೆಯಂಥ ಬಟ್ಟೆಗಳನ್ನು ಎಂದೂ ಧರಿಸಲಿಲ್ಲ. ಕಣ್ಣಿಗೆ ಕಾಡಿಗೆ, ಪೌಡರು, ಸುಗಂಧದ್ರವ್ಯಗಳನ್ನು ಬಳಸಲಿಲ್ಲ. ಎಲ್ಲ ಹೆಂಗಸರಂತೆ ಅಡುಗೆಕೋಣೆಯನ್ನು ಹೊಗದೆ ಸದಾ ಮಹಡಿಯ ಕೋಣೆಯಲ್ಲಿ ಕವಿತೆ ಬರೆಯುವುದರಲ್ಲಿ ವ್ಯಸ್ತರಾಗಿರುತ್ತಿದ್ದರು. ಸಂಪಾದಿಸುವ ಗಂಡ ಮನೆಯ ಯಜಮಾನನಾಗಿದ್ದಾಗ ಅವರ ಅಗತ್ಯಗಳನ್ನು ಪೂರೈಸುತ್ತ ಗೌರವದಿಂದ ಬದುಕಿದ್ದ ಬಾಲಾಮಣಿಯಮ್ಮ 'ಅಪ್ಪ ಸತ್ತ ನಂತರ ನನಗೆ ಮನೆಯೇ ಇಲ್ಲದಾಯಿತು' ಎಂದು ವಿಷಾದಿಸುವುದನ್ನು ಕಮಲಾ ಗಮನಿಸಿದ್ದಾರೆ.

ತೋಟಿ ಭೋಟೂ ನಾಲ್ಕು ಗಂಡುಮಕ್ಕಳನ್ನು 'ತನ್ನಂತೆ ತೋಟಿಯಾಗಬಾರದು' ಎಂಬ ಹಂಬಲದಿಂದ ಶಾಲೆಗೆ ಕಳಿಸಿ ಓದಿಸುತ್ತಿದ್ದಾನೆ. ಒಬ್ಬಳೇ ಮಗಳನ್ನು ಓದಿಸಲು ಆಸಕ್ತಿಯಿಲ್ಲ. ಅವಳನ್ನು ಓದಿಸಿದ್ರೆ 'ನನಗೇನಾದ್ರೂ ಪ್ರಯೋಜನವಿದೆಯೆ?' ಎಂಬುದು ಅವನ ತರ್ಕ. ಅವಳನ್ನು ಒಬ್ಬ ತೋಟಿಗೆ ಮದುವೆ ಮಾಡಿಕೊಟ್ಟು 'ಹೆಣ್ಣುಮಗಳ ಜವಾಬ್ದಾರಿಯಿಂದ' ಮುಕ್ತವಾಗುವ ಯೋಚನೆ ಮಾಡಿದ್ದಾನೆ. ಹೆಚ್ಚಿನ ಸಂದರ್ಭಗಳಲ್ಲಿ ಮದುವೆ ಎಂಬುದು ಹೆಣ್ಣಿನ ಒಟ್ಟು ಬದುಕಿನ ಗತಿಯನ್ನು ನಿರ್ಧರಿಸುವುದನ್ನು ಗಮನಿಸಬಹುದು.

ಎಲ್ಲ ಹೆಣ್ಣುಮಕ್ಕಳಿಗೂ 'ಮೀನು ಹುರಿಯುವುದು ಮತ್ತು ಕೆಳಗಡೆ ಶಕ್ತಿ ಹಾಕಿ ಹೆರುವುದು' ಈ ಎರಡು ವಿಷಯಗಳನ್ನು ಕಲಿಸಲೇಬೇಕು ಎಂದು ಮನೆಕೆಲಸದ ಕುಂಜಾತ್ತು ಅಭಿಪ್ರಾಯಪಡುತ್ತಾಳೆ. 'ಅದೆರಡೇ ಕೆಲಸಕ್ಕೆ ದೇವರು ಹೆಣ್ಣುಮಕ್ಕಳನ್ನು ಸೃಷ್ಟಿಸಿದ್ದ' ಎಂದು ಸಿಡುಕುವ ಪಾರುಕುಟ್ಟಿಗೂ ಸರಿಯಾದ ಗಂಡು ಸಿಕ್ಕಿದರೆ ಮದುವೆಯಾಗುವ ಕನಸಿದೆ. ದುಡಿದು ಎರಡು ಬಳೆ, ಮೂರೂವರೆ ಪವನಿನ ಗುಂಡುಚೈನ್ ಮಾಡಿಸಿಕೊಂಡ ನಂತರವೆ ಮದುವೆಯಾಗಬೇಕು ಎಂದು ಪಾರುಕುಟ್ಟಿ ನಿರ್ಧರಿಸಿದ್ದಾಳೆ. 'ಮದುವೆಯ ನಂತರ ಹೆರಿಗೆ, ಮಕ್ಕಳೂಂತ ಆದರೆ ಬಂಗಾರ ತಗೊಳ್ಳೋಕೆ ಹಣ ಇರೊಲ್ಲ' ಎಂಬುದು ಅವಳ ಲೆಕ್ಕಾಚಾರ. 'ಖರ್ಚಿಗೆ ಹಣ ಕೊಡ್ತವೆ ಎಂದಾದರೆ ಯಾವ ಪ್ರಾಣಿಯನ್ನಾದರೂ ಮದುವೆ ಆಗಲು'

ಪಾರುಕುಟ್ಟಿ ತಯಾರಿದ್ದಾಳೆ. ಸ್ವಂತ ಆದಾಯವಿಲ್ಲದ ಸ್ತ್ರೀಗೆ ಮದುವೆ ಎಂದರೆ ಖರ್ಚಿಗೆ ಹಣ ಒದಗಿಸಬಹುದಾದ ಒಂದು ದಾರಿ ಮಾತ್ರ. ಗಂಡ ಎಂಬವನು 'ಹೆಗ್ಗಣವಾದ್ರೂ, ಗಂಡುಬೆಕ್ಕಾದ್ರೂ' ಅವಳಿಗೆ ಆಕ್ಷೇಪವಿಲ್ಲ.

ಮದುವೆಯ ವಯಸ್ಸು ಕಳೆದರೂ ಆರ್ಥಿಕ ಹಿನ್ನೆಲೆಯಿಂದಾಗಿ ಅವಿವಾಹಿತೆಯಾಗಿ ಉಳಿದಿರುವ ಪಾರುಕುಟ್ಟಿ, ಧೋಬಿಯ ಮಗಳ ಮದುವೆ ವಯಸ್ಸಾದ ವರನೊಂದಿಗೆ ನಿಶ್ಚಯವಾದಾಗ 'ಪಾರ್ವತಿ ಅದೃಷ್ಟವಂತೆ' ಎಂದು ಅಭಿಪ್ರಾಯಪಡುತ್ತಾಳೆ. ಯಾಕೆಂದರೆ 'ಸ್ವಂತ ಮನೇಲಿ ಅವಳು ಗಂಜಿಯಾದರೆ ಗಂಜಿ ಕುಡಿದು ಬದುಕಬಹುದು.' ಇನ್ನೊಬ್ಬರ ಹಂಗಿಲ್ಲದೆ ಸ್ವಂತ ಮನೆಯಲ್ಲಿ ಬದುಕುವ ಕನಸಿಗಾಗಿ ಸ್ತ್ರೀಯರು ವರನ ವಯಸ್ಸು, ಚೆಲುವು, ಆರೋಗ್ಯಗಳ ವಿಚಾರದಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ.

ದುಡಿದರೂ ದುಡಿಯದಿದ್ದರೂ ಮನೆಯ ಯಜಮಾನನೆನಿಸಿಕೊಳ್ಳುವ ಗಂಡನು ಹೆಂಡತಿಯನ್ನು ಹೊಡೆದು ಬಡಿದು ದಂಡಿಸುವುದನ್ನು ಸಹಜವೆಂಬಂತೆ ತಿಳಿಯಲಾಗಿದೆ ಮತ್ತು ಬಹುಪಾಲು ಸ್ತ್ರೀಯರು ಅದನ್ನು ಒಪ್ಪಿ ನಡೆಯುತ್ತಾರೆ. ಹೊಡೆಯುವುದು ಗಂಡನ ಹಕ್ಕು ಎಂಬ ಅನಾರೋಗ್ಯಕರ ಗ್ರಹಿಕೆಯನ್ನು ವೈಕ್ಕಂ ಮುಹಮ್ಮದ್ ಬಶೀರ್ ಅವರ 'ಸೊಟ್ಟಕಾಲಿನವಳು' ಕತೆ ವಿಡಂಬಿಸುತ್ತದೆ. ಈ ಕತೆಯಲ್ಲಿ 'ಹೆಂಡತಿಯನ್ನು ಪ್ರೀತಿಸುವ ಗಂಡ ಮಾತ್ರ ಅವಳನ್ನು ಹೊಡೆಯುತ್ತಾನೆ, ಹೊಡೆಯದ ಗಂಡ ಹೆಂಡತಿಯನ್ನು ಪ್ರೀತಿಸುವವನಲ್ಲ' ಎಂದು ಸುಶಿಕ್ಷಿತ ಮಹಿಳೆಯರೇ ವಿಶ್ಲೇಷಿಸುತ್ತಾರೆ. ಪತಿಯೊಂದಿಗೆ ಖುಶಿಯಾಗಿರುವ ಸೊಟ್ಟಕಾಲಿನ ಮಹಿಳೆಯನ್ನು ನೋಡುತ್ತ ಅವಳ ಕುರಿತು ಮಾತನಾಡುವ ಇಬ್ಬರು ಅವಿವಾಹಿತ ಮಹಿಳೆಯರು 'ಗಂಡನನ್ನು ಹೊಂದಿ ಸುರಕ್ಷಿತಳಾಗಿರುವ' ಅವಳ ಭಾಗ್ಯದ ಬಗ್ಗೆ ಅಸೂಯೆಪಡುತ್ತಾರೆ. 'ನಮ್ಮ ಕೂದಲು ಜಗ್ಗಿ ಸೊಂಟಕ್ಕೆ ಬಡಿಯುವುದಕ್ಕಾದರೂ ಒಬ್ಬ ಗಂಡನೆಂಬವ ಇದ್ದಾನೆ ಎಂಬುದು ಒಂದು ಭರವಸೆಯಲ್ಲವೆ?' ಎಂದು ದುಃಖಿತರಾಗಿ ನಿಟ್ಟುಸಿರಿಡುತ್ತಾರೆ.

ಕಮಲಾದಾಸ್ ಅವರು ಬರೆದ 'ಡಾಕ್ಟರನ ಸಾವು' ಕಥೆಯಲ್ಲಿ ಪತಿಯ ಸೇವೆಯಲ್ಲಿಯೆ ಬದುಕು ಸವೆಸಿ ಮುದಿಯಾದ ಡಾಕ್ಟರರ ಹೆಂಡತಿ ರೂಪವತಿಯಲ್ಲ. ವಿದ್ಯಾವಂತೆಯೂ ಅಲ್ಲ. ಈ ಕಾರಣಗಳಿಂದಾಗಿ ಪತಿಯ ನಿರ್ಲಕ್ಷ್ಯಕ್ಕೆ ಒಳಗಾಗಿ ಸದಾ ಕೀಳರಿಮೆಯಿಂದ ಬಾಳಿದವಳು. ಅವಳಲ್ಲಿ ಆಸಕ್ತಿ, ಅನುರಾಗಗಳಿಲ್ಲದ ಪತಿಯಿಂದ ಅವಳಿಗೆ ಮಕ್ಕಳಾಗಿಲ್ಲ. ಮಗು ಬೇಕೆಂಬ ಅಪಾರ ಆಸೆಯಿದ್ದರೂ ಅವಳು ದಾಂಪತ್ಯದ ಚೌಕಟ್ಟು ಮೀರಿಲ್ಲ. ಯಾವತ್ತೂ ಗೊಣಗದ, ಸದಾ ಕೆಲಸ ಮಾಡುತ್ತಲೇ ಇರುವ, ಹಾಸಿಗೆಯ ಚೌಕಟ್ಟು ಸೋಕಿದಾಕ್ಷಣ ಸುಖವಾಗಿ ನಿದ್ರೆ ಮಾಡುವ, ಎಲ್ಲ ಆಕಾಂಕ್ಷೆಗಳನ್ನು ಅಡಗಿಸಿಕೊಂಡು ಪತಿಗೆ ಅನುರೂಪಳಾಗಿ ಬಾಳಿದ ಸಾಂಪ್ರದಾಯಿಕ ಮಾದರಿಯ ಈ ಪತ್ನಿ 'ತಾನು ಬದುಕಿರುವುದಕ್ಕೆ ಎಲ್ಲರಿಂದಲೂ ಕ್ಷಮೆಯಾಚಿಸುವ ಭಾವ'ವಿದ್ದವಳು. ವೈವಾಹಿಕ ಚೌಕಟ್ಟಿನ ಒಳಗೆ

ಮಾತ್ರ ತಾನು ಸುರಕ್ಷಿತೆ ಎಂದು ನಂಬಿರುವ ಸಾಮಾನ್ಯ ಗೃಹಿಣಿಯಾಗಿರುವ ಈಕೆಗೆ ಪತಿಯಿಂದ ಬೇರೆಯಾಗಿ ಬದುಕಬಹುದಾದ ಕಲ್ಪನೆ ಕೂಡ ಇಲ್ಲ.

ಮದುವೆಯಾಗದೆ ಗರ್ಭಿಣಿಯಾಗಿ ಅವಮಾನಕ್ಕೆ ಒಳಗಾಗಬೇಕಾದ ಸ್ತ್ರೀಗೆ ವಿವಾಹವು ರಕ್ಷೆಯಾಗಿ ಒದಗಿಬರುತ್ತದೆ. ಕಮಲಾದಾಸ್ ಅವರು ಬರೆದ 'ಮಧ್ಯಾಹ್ನ' ಕಥೆಯ ಶಾರದೆ ಶ್ರೀಮಂತನಾದ ಪ್ರಿಯಕರನಿಂದ ಗರ್ಭಿಣಿಯಾಗಿದ್ದಾಳೆ. ಗರ್ಭದ ಅಧಿಕೃತತೆಗಾಗಿ ಪ್ರಿಯಕರನ ಸೇವಕನನ್ನು ಮದುವೆಯಾಗುತ್ತಾಳೆ. ತನ್ನ ಮಗು ಪ್ರಿಯಕರನ ರೂಪವನ್ನು ಹೊತ್ತರೆ ಎಂಬ ಭಯ ಶಾರದೆಗಿಲ್ಲ. ಒಡೆಯರ ಮಗು ಪತ್ನಿಯ ಹೊಟ್ಟೆಯಲ್ಲಿರುವುದು ಅವಳ ಪತಿ ಶಂಕರನಿಗೆ ತಿಳಿದಿದೆ. ಆಗಿಹೋದುದರ ಬಗ್ಗೆ ಶಾರದೆಗೆ ಹಳಹಳಿಕೆ ಇಲ್ಲ. ಪ್ರಿಯಕರನ ಮೇಲೆ ಪ್ರೀತಿಯೂ ಮಾಸಿಲ್ಲ. ಆದರೆ ಮದುವೆಯ ಬಳಿಕವೂ ಪ್ರೇಮಸಂಬಂಧವನ್ನು ಮುಂದುವರಿಸುವುದು ಅವಳಿಗೆ ಒಪ್ಪಿಗೆಯಿಲ್ಲ. 'ನಾನು ಒಬ್ಬರ ಹೆಂಡತಿ. ಇನ್ನು ಯಾರೂ ನನ್ನನ್ನು ಮುಟ್ಟಲು ಒಪ್ಪಲಾರೆ' ಎಂಬುದು ಅವಳ ನಿಲುವು. ಪತ್ನಿಯನ್ನು ಗೌರವದಿಂದ ನಡೆಸಿಕೊಳ್ಳುವ ಶಂಕರನ ವರ್ತನೆಯ ಹಿಂದೆ ಒಡೆಯ-ಆಳು ಸಂಬಂಧದ ನಿರ್ಬಂಧವಿದೆ. ಆದರೆ ಪತ್ನಿಯ ಪ್ರಿಯಕರನನ್ನು ಸಹಿಸಿಕೊಳ್ಳಬೇಕಾದ ಈ ಅನಿವಾರ್ಯ ಔದಾರ್ಯವನ್ನು ಶಾರದೆ ಅಸಹ್ಯಿಸಿಕೊಳ್ಳುತ್ತಾಳೆ. ಶಂಕರನ ಈ ನಿಲುವಿನಿಂದ ತನ್ನ ಭದ್ರತೆಗೆ ಅಪಾಯವುಂಟಾಗುವ ಸಾಧ್ಯತೆಯಿರುವುದನ್ನು ಗುರುತಿಸಿ ಅಸ್ವಸ್ಥಳಾಗುತ್ತಾಳೆ. ಹೊಂದಾಣಿಕೆಯ ದೃಷ್ಟಿಯಿಂದ ನಡೆಯುವ ಇಂಥ ವಿವಾಹಗಳಲ್ಲಿ ಪತಿ ಪತ್ನಿಯರ ನಡುವೆ ಸಹಜವಾದ ಪ್ರೇಮ ಹುಟ್ಟುವುದಿಲ್ಲ. ಪತಿ ಮತ್ತು ಪ್ರಿಯಕರ ಎರಡು ಸಂಬಂಧಗಳಲ್ಲೂ ವಿಶ್ವಾಸ ಹೊಂದಲಾರದೆ ಶಾರದೆ ಅಸುಖಿಯಾಗುತ್ತಾಳೆ.

ಕೆ.ಪಿ. ಸುಧೀರಾ ಅವರ 'ಕಾಣದ ಪುಟಗಳು' ಎಂಬ ಕತೆಯಲ್ಲಿ ವಿವಾಹಿತೆಯಾದ ವಿಮಲಾ ಇನ್ನೂ ಮದುವೆ ಆಗಿರದ ಶಾರಿಕಾಳನ್ನು 'ಮದುವೆಯಾದ ನಂತರ ಈ ರೀತಿಯ ತಮಾಷೆಗಳಿಗೆ ಜೀವನದಲ್ಲಿ ಅವಕಾಶವಿರುವುದಿಲ್ಲ ಹುಡುಗೀ' ಎಂದು ಎಚ್ಚರಿಸುತ್ತಾಳೆ. ಮದುವೆಯೆಂದರೆ ಸ್ವಾತಂತ್ರ್ಯಹರಣ ಎಂಬ ತಿಳುವಳಿಕೆ ಅವಳ ಮಾತಿನಲ್ಲಿದೆ. ತನ್ನ ಬುದ್ಧಿವಂತಿಕೆ ಮತ್ತು ಉತ್ಸಾಹಗಳಿಂದ ಕಛೇರಿಯಲ್ಲಿ 'ಮಿಂಚಿನಂತಹ ಹುಡುಗಿ' ಎನಿಸಿಕೊಂಡಿದ್ದ ಶಾರಿಕಾ 'ಈ ಗಾದೆ ಮಾತನ್ನು ನಾನು ತಿದ್ದಿ ಬರೆಯುತ್ತೇನೆ' ಎಂದು ಸಂಕಲ್ಪಿಸುತ್ತಾಳೆ. ಆದರೆ ಅವಳು 'ಆತ್ಮವಿಶ್ವಾಸವಿಲ್ಲದ ಮತ್ತು ಎಂದೂ ಇಷ್ಟಪಡಲು ಸಾಧ್ಯವಿಲ್ಲದ ಒಬ್ಬ ವ್ಯಕ್ತಿಯಾಗಿದ್ದ' ತನ್ನ ಮೇಲಧಿಕಾರಿಯನ್ನು ವಿವಾಹವಾಗಬೇಕಾಗಿ ಬರುತ್ತದೆ. "ಅವರು ಎಂದೂ ನನ್ನನ್ನು ಕ್ರೂರವಾಗಿ ಅಳಿಸಿದ್ದು ಮಾತ್ರ. ಇನ್ನು ನಗಿಸುತ್ತಾರೆ ಎಂಬ ನಂಬಿಕೆಯಿಲ್ಲ. ಅಪ್ಪನ ನಿರ್ಧಾರವನ್ನು ಅಮ್ಮನಿಲ್ಲದ ನಾನು ಸ್ವೀಕರಿಸಲೇಬೇಕು. ಶರತ್ಕಾಲದ ಮರಗಳ ಶಿಖರಗಳಲ್ಲಿ ಕುಳಿತುಕೊಳ್ಳುವ ಒಂಟಿ ಹಕ್ಕಿಯಂತಾಗಿದೆ ನನ್ನ ಮನಸ್ಸು" (ಪು. ೭೮, ನೆರಳು ಮರಗಳಿಲ್ಲದ ದಾರಿ)

ಶಾರಿಕಾಳ ಪತ್ರದ ಈ ಸಾಲುಗಳಲ್ಲಿ ಇಚ್ಛೆಯಿಲ್ಲದ ಮದುವೆಗೆ ಒಡ್ಡಿಕೊಳ್ಳಬೇಕಾದ ಹೆಣ್ಣಿನ ಅಸಹಾಯಕತೆ ವ್ಯಕ್ತವಾಗಿದೆ.

ಸಿ.ಎಸ್. ಚಂದ್ರಿಕಾ ಅವರು ಬರೆದ 'ಬೆಳದಿಂಗಳು ಮತ್ತು ಹಾವುಗಳು' ಕಥೆಯ ನಾಯಕಿ ಅತ್ಯುತ್ತಮ ಕ್ರಾಂತಿಕಾರಿ ಎನಿಸಿಕೊಂಡವನನ್ನು ಮೆಚ್ಚಿ ತಾನೇ ಮದುವೆಯ ಪ್ರಸ್ತಾಪ ಮುಂದಿಟ್ಟವಳು. ಅವನಿಗೆ 'ಮದುವೆ ಎಂದರೆ ಬಂಧನ, ಮಕ್ಕಳು ನನ್ನ ದೌರ್ಬಲ್ಯವಾದಾರು' ಎಂಬ ಭಾವನೆಯಿತ್ತು. ತನಗಾಗಿ ಮನೆಯವರು ನಿಶ್ಚಯಿಸಿದ ಸಂಬಂಧವನ್ನು ನಿರಾಕರಿಸಿ ಮನೆ ಬಿಟ್ಟು ಅವನ ಬಳಿಗೆ ಬಂದಿದ್ದಾಳೆ. ಹಾಗೆ 'ಒಂದು ಭೀಕರ ಗಳಿಗೆಯಲ್ಲಿ' ತಾವು ಮದುವೆಯಾಗುವುದೆಂದು ನಿರ್ಧರಿಸಿದೆವು ಎಂದು ಅವಳಿಗನ್ನಿಸಿದೆ. 'ಈ ಮದುವೆ ಅನ್ನುವುದು ಒಂದು ಭಿಕ್ಷೆಯಾಗಿತ್ತೆ?' ಎಂಬ ಸಂದೇಹ ಮದುವೆಯ ಬಳಿಕ ಅವಳನ್ನು ಕಾಡಿದೆ. ಅವನಿಂದ ಬೇಡಿ ಪಡೆದ ಮದುವೆಯ ಔದಾರ್ಯದಲ್ಲಿ ತೃಪ್ತೆಯಾಗಿರುವುದು ಸಾಧ್ಯವಾಗಿಲ್ಲ. ಅಪಮಾನದ ನೋವು ಅವಳ ಪ್ರೀತಿಯ ಶಕ್ತಿಯನ್ನು ಕಳೆಗುಂದಿಸುತ್ತದೆ. ಅವಳು ವಿಸ್ಮಯಗೊಳ್ಳುವಂತೆ ಬದಲಾಗುತ್ತ ಹೋದ ಅವನು ಕ್ರಮೇಣ ಪತಿಯಂತಲ್ಲದೆ ಮಗುವಾಗಿ ತಾಯ್ತನವನ್ನು ಅರಸುವಾಗ ಅವನ ವಿಲಕ್ಷಣ ವರ್ತನೆಗೆ ಕಾರಣ ಹುಡುಕುತ್ತಾಳೆ. ಪತಿಗೆ ಅಂಟಿರುವ ಮಾರಕ ಕಾಯಿಲೆ ಏಡ್ಸ್ ಈ ಪರಿವರ್ತನೆಗೆ ಕಾರಣವೆಂದು ತಿಳಿದ ಬಳಿಕ ಉದ್ದೇಶಪೂರ್ವಕವಾಗಿ ಅವನನ್ನು ಕೂಡುವ ಮೂಲಕ ಸಾವನ್ನು ಆಹ್ವಾನಿಸಿಕೊಳ್ಳುತ್ತಾಳೆ. ಸ್ವಲ್ಪದರಲ್ಲೇ ತನ್ನನ್ನೂ ಕಾಡಬಹುದಾದ ನಿಶ್ಶಕ್ತಿ ಮತ್ತು ತಲೆಸುತ್ತುಗಳ ನಿರೀಕ್ಷೆಯಲ್ಲಿರುತ್ತ ಅವನನ್ನು ಮದುವೆಯಾದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾಳೆ. ಪತಿಯ ಪ್ರೀತಿಗಾಗಿ ತನ್ನವರನ್ನೆಲ್ಲ ಬಿಟ್ಟು ಬಂದ ಹೆಣ್ಣಿಗೆ ಪತಿಯನ್ನು ಬಿಟ್ಟು ಬೇರೆ ಅಸ್ತಿತ್ವವಿಲ್ಲ. ಮತ್ತೆ ತವರಿಗೆ ಮರಳುವ ಅವಕಾಶವಿಲ್ಲ. ಹಾಗಾಗಿ ಪತಿಯ ಸಂಗದಿಂದ ತನ್ನ ನಾಶ ಖಚಿತವೆಂದು ತಿಳಿದಾಗಲೂ ಅವನನ್ನೇ ಆಶ್ರಯಿಸಬೇಕಾದ ಅನಿವಾರ್ಯತೆಯಿದೆ.

'ಗಾಡಿಯೆತ್ತುಗಳು' ನೀಳ್ಗತೆಯ ಅಪ್ರತಿಮ ಚೆಲುವೆಯಾಗಿರುವ ಮೋಹಿನಿಯನ್ನು ಆಗರ್ಭ ಶ್ರೀಮಂತನಾದ ರೆಡ್ಡಿ ಕೇವಲ ಪ್ರತಿಷ್ಠೆಗಾಗಿ ಮದುವೆಯಾಗಿದ್ದಾನೆ. ಬಡತನದಲ್ಲಿ ಹುಟ್ಟಿದರೂ ಶ್ರೀಮಂತಿಕೆಯ ಎಲ್ಲ ಸೌಕರ್ಯಗಳನ್ನು ಅನುಭವಿಸುವ ಅವಕಾಶ ಪಡೆದಿರುವ ತಾನು 'ಅಮ್ಮ ಹೇಳುವಂತೆ ಮಹಾ ಭಾಗ್ಯವಂತೆಯೆ ಹೌದು' ಎಂದು ಮೋಹಿನಿಯೂ ಭಾವಿಸಿದ್ದಾಳೆ. ವಯಸ್ಸು ಮೀರಿದ ರೆಡ್ಡಿಯೊಂದಿಗೆ ಅವಳದು ಅಕ್ಷರಶಃ ತಂದೆ ಮಗಳ ಸಂಬಂಧವಾಗಿದೆ. ಶ್ರೀಮಂತಿಕೆ ತುಳುಕುವ ಅವನ ಮನೆಯ ಅಲಂಕಾರದ ಬೊಂಬೆಯಾಗಿ ಉಳಿಯುವ ಮೋಹಿನಿಗೆ ಲೈಂಗಿಕ ಸುಖದ ಅನುಭವವೇ ಇಲ್ಲದೆ ಬೇರೆಬೇರೆ ಪುರುಷರ ಸ್ನೇಹ, ಒಡನಾಟದಲ್ಲಿ ನೆಮ್ಮದಿಯಾಗಿರುತ್ತಾಳೆ. 'ಯಾವ ಹೂವಿನ ಮೇಲೂ ಕೂರದೆ ಸುಮ್ಮನೆ ಹಾರುತ್ತಿರುವ ಬಣ್ಣದ ಚಿಟ್ಟೆಯಂತೆ ಉಲ್ಲಾಸವಾಗಿರುವ' ಮೋಹಿನಿ,

ರೆಡ್ಡಿಯ ಮಟ್ಟಿಗೆ ಮನೆಯಲ್ಲಿರುವ ಇತರ ಆಧುನಿಕ ಮತ್ತು ಕಲಾತ್ಮಕ ಸಾಮಗ್ರಿಗಳಂತೆ ಒಂದು ಮನಮೋಹಕವಾದ ಸೊತ್ತು ಮಾತ್ರ ಆಗಿದ್ದಾಳೆ.

ಅಪಘಾತದಲ್ಲಿ ಮೋಹಿನಿಯ ಚೆಲುವು ನಾಶವಾಗಿ ಆಸ್ಪತ್ರೆಯಲ್ಲಿ ಜೀವಂತ ಶವವಾಗಿ ಮಲಗಿದ ಬಳಿಕ ರೆಡ್ಡಿ ಹೆಂಡತಿಯನ್ನು ನೋಡಲು ಬರುವುದನ್ನೂ ನಿಲ್ಲಿಸಿಬಿಡುತ್ತಾನೆ. ಅದಕ್ಕಾಗಿ ತನ್ನ ಅಮೂಲ್ಯ ಸಮಯವನ್ನು ಆತ ವಿನಿಯೋಗಿಸಲಾರ. ಸೌಂದರ್ಯದ ಖನಿಯಾಗಿ ಚೇತೋಹಾರಿಯಾಗಿದ್ದವಳ ಈಗಿನ ಅಸಹ್ಯ ರೂಪ ಅವನಿಗೆ ಜಿಗುಪ್ಸೆ ಉಂಟುಮಾಡುತ್ತದೆ. ವ್ಯವಹಾರಚತುರನಾದ ರೆಡ್ಡಿಯ ಮಟ್ಟಿಗೆ ಈ ಮದುವೆ ಒಂದು 'ನಷ್ಟದ ವ್ಯಾಪಾರ'ವಾಗಿದೆ. ಒಂದು ಅಪರೂಪದ ಅಲಂಕಾರಿಕ ಸಾಮಗ್ರಿಯಾಗಿ ಅವನು ತೊಡಗಿಸಿದ ದುಬಾರಿ ಬಂಡವಾಳ ನಷ್ಟವಾಗಿದೆ ಎಂದೇ ಅವನ ಭಾವನೆಯಾಗಿದೆ. ಹರೆಯದ ಹೆಣ್ಣುಮಕ್ಕಳ ಭಾವನೆ, ಅಗತ್ಯಗಳ ಬಗ್ಗೆ ವಿಚಾರವನ್ನೇ ಮಾಡದೆ 'ಮಗಳ ಮದುವೆಯೊಂದು ನಡೆದರೆ ಸಾಕು' ಎಂದು ಯೋಚಿಸುವ ಪೋಷಕರು ವರನ ಕೌಟುಂಬಿಕ ಹಿನ್ನೆಲೆ ಮತ್ತು ಆರ್ಥಿಕತೆಗಳನ್ನು ನೋಡಿ ಅವನ ಯೋಗ್ಯತೆಯನ್ನು ನಿರ್ಧರಿಸುತ್ತಾರೆ.

ಇದೇ ಕತೆಯಲ್ಲಿ ಬರುವ ಬಾರ್‌ನ ಕೆಲಸಗಾರ ಆರ್ತರ್ ನೆನಪಿಸಿಕೊಳ್ಳುವಂತೆ ಅವನ ಪತ್ನಿ 'ಒಳ್ಳೆಯ ಕವಯಿತ್ರಿಯಂತೆ' ಮಾತಾಡುತ್ತಿದ್ದವಳು. "ನಾನು ಪ್ರೋತ್ಸಾಹಿಸಿದ್ದರೆ ಆಕೆ ಖ್ಯಾತ ಕವಯಿತ್ರಿಯಾಗುತ್ತಿದ್ದಳು. ನನ್ನನ್ನು ಮದುವೆಯಾದದ್ದರಿಂದ ಆಕೆ ಸಾಮಾನ್ಯಳಾಗಿ ಬದುಕಿ ಸಾಮಾನ್ಯಳಾಗಿ ತೀರಿಕೊಂಡಳು" (ಪು. ೫೫೪, ಕಮಲಾದಾಸ್ ಸಮಗ್ರ ಕಾದಂಬರಿಗಳು) ಇವು ಪತ್ನಿ ತೀರಿಕೊಂಡ ಬಳಿಕ ಅವನ ಪಶ್ಚಾತ್ತಾಪದ ನುಡಿಗಳು. ಮದುವೆ ಆಕೆಯ ಅಭಿರುಚಿ, ಅಭಿವ್ಯಕ್ತಿಗಳನ್ನು ಮಸುಕಾಗಿಸಿದರೂ ಆಕೆ ವೈವಾಹಿಕ ವ್ಯವಸ್ಥೆಯ ಚೌಕಟ್ಟನ್ನು ಮೀರದೆ ಆರ್ತರ್‌ನ ಮಟ್ಟಿಗೆ 'ಹಳೆಯ ಗಡಿಯಾರದ ಗಂಟೆಯಂತೆ' ಒಳ್ಳೆಯ ಪತ್ನಿಯಾಗಿ ಸಂಸಾರ ಸಾಗಿಸಿದ್ದಾಳೆ. ಆರ್ತರ್‌ನ ಅಭಿಪ್ರಾಯದಂತೆ ಒಳ್ಳೆಯ ಪತ್ನಿಯರಾಗಿರುವುದೆ ಸ್ತ್ರೀತ್ವದ ಸಾರ್ಥಕತೆಯೆಂದು ಬಹುಪಾಲು ಮಹಿಳೆಯರು ನಂಬಿ ಬದುಕುವುದನ್ನು ಕೃತಿಗಳು ಗುರುತಿಸಿವೆ.

ಪತ್ನಿಯಾದವಳು ಪತಿಗೆ ವಿಧೇಯಳಾಗಿ, ಅನುರೂಪಳಾಗಿ ನಡೆದುಕೊಳ್ಳುವುದೆ ಪಾತಿವ್ರತ್ಯವೆಂದು ನಿರೂಪಿಸುವ 'ಪತಿವ್ರತೆ' ಎಂಬ ಕತೆಯನ್ನು ಕಮಲಾದಾಸ್ ಬರೆದಿದ್ದಾರೆ. ಪತಿಯ ನಿರ್ದೇಶದಂತೆ, ಅವನ ವೃತ್ತಿಜೀವನದ ಯಶಸ್ಸಿಗಾಗಿ, ಅವನ ಬಾಸ್ ಜೊತೆ ಸಹಕರಿಸಬೇಕಾಗಿ ಬಂದ ಆಕೆ, ಕ್ರಮೇಣ 'ಸಾಹಿತ್ಯ ಸಂಗೀತ ಎಲ್ಲಾ ಬಲ್ಲ ಪಂಡಿತನಾಗಿದ್ದ' ಆ ವ್ಯಕ್ತಿಯ ಮೇಲೆ 'ಪ್ರೇಮದಂಥ ಒಂದು ಭಾವನೆ' ಹೊಂದಿ ಅವನ ಸಂಗವನ್ನು ಇಷ್ಟಪಟ್ಟಿದ್ದಾಳೆ. ಅವಳ ವ್ಯಭಿಚಾರದಿಂದಾಗಿಯೆ ಗಂಡನ ವೃತ್ತಿಜೀವನವು ಅದ್ಭುತವಾದ ಬೆಳವಣಿಗೆಯನ್ನು ಕಾಣುವಂತಾಗಿದೆ. ಪರಿಣಾಮವಾಗಿ ಪತಿಯು ಆಕೆಯನ್ನು ತನ್ನ ಬಾಸ್‌ನಷ್ಟೇ ಆದರದಿಂದ ಕಾಣುವಂತಾಗಿದೆ. 'ನಾವು ಆದರ್ಶ ದಂಪತಿಗಳಲ್ಲವಾ' ಎಂದಾತ

ಖುಶಿಯಿಂದ ಕೇಳುವಾಗ 'ತಮ್ಮ ನಡುವೆ ಕಲಹವಿಲ್ಲದ್ದರಿಂದ ನಿಜವಾಗಿರಬಹುದೆಂದು' ಭಾವಿಸಿದ್ದಾಳೆ. 'ನನ್ನ ಭಾಗ್ಯದೇವತೆ ನೀನು' ಎಂದು ಪತಿ ಸಂಭ್ರಮಿಸಿ ಮುತ್ತಿಡುವಾಗ ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೆ ಗಲಿಬಿಲಿಗೊಳ್ಳುತ್ತಾಳೆ.

ತನ್ನನ್ನು ಪ್ರೀತಿಸಬಲ್ಲ ಲೆಕ್ಚರರ್ ಒಬ್ಬನ ಹೆಂಡತಿಯಾಗಿ ಚಿಕ್ಕ ಊರಿನಲ್ಲಿ ಬಾಳುವ ಆಸೆ ಅವಳಿಗಿತ್ತು. 'ಆತ ಹೆಡ್‌ಮಾಸ್ತರನ ಜತೆ ಮಲಗಲು ಬಲವಂತ ಮಾಡ್ತಿರಲಿಲ್ಲ! ನನಗೆ ಹೇಳಿ ಮಾಡಿಸಿದ ಜೋಡಿಯಾಗಿರುತ್ತಿದ್ದ. ಮಾಗಿ ಕಾಲದಲ್ಲಿ ಬೆಚ್ಚಗೆ ಅಪ್ಪಿ ಮಲಗಬಹುದಿತ್ತು' (ಪು. ೬೭, ಕೇರಳ ಕಾಂತಾಸಮ್ಮಿತ) ಎಂಬ ಹಗಲುಗನಸು ಕಾಣುತ್ತಾಳೆ. ಈ ಮದುವೆ ಅವಳಿಗೆ ಇಷ್ಟವಿರಲಿಲ್ಲ. ದಾಂಪತ್ಯ ಬದುಕಿಗೆ ಶಾರೀರಿಕವಾಗಿ ಸಿದ್ಧಳಿಲ್ಲದ ವಯಸ್ಸಿನಲ್ಲಿ ಕೇವಲ ಅಪ್ಪನ ಸ್ವಾರ್ಥಕ್ಕಾಗಿ ನಡೆದ ತರಾತುರಿಯ ಮದುವೆಯು ಅವಳ ಕನಸುಗಳನ್ನು ನಾಶಮಾಡಿದೆ. 'ಅಶ್ಲೀಲ ಚೇಷ್ಟೆ, ಬೆವರು ನಾತ, ಬಲಾತ್ಕಾರ'ಗಳ ಅನುಭವ ನೀಡಿ ಜಿಗುಪ್ಸೆ ಮೂಡಿಸಿದೆ. ಗೆಳತಿಯರೊಂದಿಗೆ ಶಿಕ್ಷಣ ಮುಂದುವರಿಸಲು ಬಯಸಿದ್ದವಳಿಗೆ 'ಏಸುವಿನ ಶಿಲುಬೆಯಂತಿದ್ದ ಹಾಸಿಗೆ' ಲಭಿಸಿದೆ. ಬಾಸ್ ಜತೆಗಿನ ಅವಳ ಸಂಬಂಧವನ್ನು 'ಹಾದರ'ವೆಂದು ಜರೆದು ದೂರವಾದ ಸಂಬಂಧಿಕರು ಗಂಡನ ಕ್ಷಮಾಗುಣವನ್ನು ಕೊಂಡಾಡಿ ಅವನ ಆತ್ಮವಿಶ್ವಾಸವನ್ನು ಹೆಚ್ಚಿಸಿರುವುದನ್ನು ಗಮನಿಸಿ ಆಕೆ ಅಸ್ವಸ್ಥಳಾಗಿದ್ದಾಳೆ. ಪತಿಯೇ ತನ್ನನ್ನು ವ್ಯಭಿಚಾರಿಣಿಯಾಗಿಸಿದ ಸತ್ಯವನ್ನು ಬಹಿರಂಗಪಡಿಸಲಾರದೆ, ಪಾತಿವ್ರತ್ಯದ ಮುಳ್ಳು ತುಂಬಿದ ಹಾದಿಯಲ್ಲಿ ನಡೆದು ಬಳಲಿದ್ದಾಳೆ. ಕನ್ನಡಿಯಲ್ಲಿ ಕಾಣುವ ತನ್ನ ದೇಹವು 'ಯಾರಿಗೆ ಸೇರಿದ್ದು? ಪತಿಗೋ ಅವನ ಬಾಸ್‌ಗೋ' ಎಂಬ ಜಿಜ್ಞಾಸೆಗೆ ಒಳಗಾಗುತ್ತಾಳೆ. ಹೆಣ್ಣಿಗೆ ರಕ್ಷೆಯನ್ನು ಒದಗಿಸುವುದೆಂದು ತಿಳಿಯಲಾದ ಮದುವೆಯೆ ಅವಳ ದುಸ್ಥಿತಿಗೆ ಕಾರಣವಾಗುವುದನ್ನು ಕತೆ ಗುರುತಿಸಿದೆ.

ಹೆಣ್ಣುಮಕ್ಕಳನ್ನು ಸಕಾಲದಲ್ಲಿ ಮದುವೆ ಮಾಡಿಕೊಡುವುದೇ ಪೋಷಕರ ಆದ್ಯ ಕರ್ತವ್ಯ ಎಂದು ಭಾವಿಸುವ ಸಮಾಜದಲ್ಲಿ ಆರ್ಥಿಕ ಶಕ್ತಿಯಿಲ್ಲದ ಕುಟುಂಬಗಳ ಮಟ್ಟಿಗೆ ಹೆಣ್ಣಿನ ಮದುವೆಯೆಂಬುದು ಒಂದು ದೊಡ್ಡ ಸಮಸ್ಯೆಯಾಗುವುದನ್ನು ತಕಳಿ ಶಿವಶಂಕರ ಪಿಳ್ಳೆಯವರು ಬರೆದ 'ಮಾಥನ ಕಥೆ' ಎಂಬ ಸಣ್ಣಕತೆಯು ತೆರೆದಿಡುತ್ತದೆ. ಹಣದ ಲೆಕ್ಕವೂ ತಿಳಿಯದ ಮಾಥ ಮತ್ತು ಮರಿಯ ಎಂಬ ಅನಕ್ಷರಸ್ಥ ದಂಪತಿಗಳು ಮಗಳು ಥೇಸ್ಸಾಳ ಮದುವೆಗೆಂದು ಜೀವನಪೂರ್ತಿ ಅರೆಹೊಟ್ಟೆಯಲ್ಲಿ ದುಡಿದು ಧಣಿಗಳಲ್ಲಿ ದುಡ್ಡು ಕೂಡಿಡುತ್ತಾರೆ. ಶಕ್ತಿಮೀರಿದ ದುಡಿತದ ಫಲವಾಗಿ ಕಾಯಿಲೆಗೆ ತುತ್ತಾದ ಮಾಥ ತನ್ನ ಆರೋಗ್ಯಕ್ಕಾಗಿ ಖರ್ಚು ಮಾಡುವ ಸಾಮರ್ಥ್ಯವಿಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ನಾಗವಲ್ಲಿ ಆರ್.ಎಸ್. ಕುರುಪ್ ಅವರು ಬರೆದಿರುವ 'ಮಾಂಗಲ್ಯ' ಎಂಬ ಕತೆಯಲ್ಲಿನ ಹಾವಾಡಿಗನ ಪಾಲಿಗೆ ಯೌವನ ತುಂಬಿದ ಮಗಳು 'ಒಂದು ಸಜೀವ ಪ್ರಶ್ನೆಯಾಗಿ' ಕಾಣುತ್ತಾಳೆ. 'ನಮಗೊಂದು

ಗಂಡುಮಗುವನ್ನು ಯಾಕೆ ಕೊಡಲಿಲ್ಲ?' ಎಂದು ದೇವರ ಮುಂದೆ ಆರ್ತಳಾಗುವ ತಾಯಿಯನ್ನು ಮಗಳು ಗಮನಿಸಿದ್ದಾಳೆ. ತಾನು ಬದುಕಿದ್ದರೆ ತಂದೆ ತಾಯಿಗೆ ಸಮಸ್ಯೆಯೇ ಆಗಿ ಉಳಿಯುವುದನ್ನು ಅರಿತ ಮಗಳು ತನ್ನನ್ನು ಮದುವೆಯಾಗಲು ಬಯಸಿ ವಿಷದ ಹಾವಿಗೆ ಬಲಿಯಾದ ಯುವಕನನ್ನು ಕಡಿದ ಹಾವಿನಿಂದಲೆ ತಾನೂ ಸಾವನ್ನು ತಂದುಕೊಳ್ಳುತ್ತಾಳೆ. ಹೆಣ್ಣಿಗೆ ಅನಿವಾರ್ಯವೆಂದು ಸಮಾಜವು ವಿಧಿಸಿರುವ ಮದುವೆಯು ಆಕೆಯ ಜೀವಕ್ಕೆ ಮುಳುವಾಗಿದೆ.

'ದನಗಳ ಸಂತೆ' ಎಂಬ ಕತೆಯಲ್ಲಿ ಲೇಖಕಿ ಕಮಲಾದಾಸ್ ಅವರು ಮದುವೆಗೆ ಸಿದ್ಧವಾಗಿರುವ ಕನ್ಯೆಯನ್ನು ವರನ ಮುಂದೆ ಪ್ರದರ್ಶಿಸುವ ಪ್ರಕ್ರಿಯೆಯನ್ನು ಬೇರೆಬೇರೆ ತಳಿಯ ಜಾನುವಾರುಗಳನ್ನು ಮಾರಾಟ ಮಾಡುವ ದನಗಳ ಸಂತೆಗೆ ಹೋಲಿಸಿದ್ದಾರೆ. ಒಂದು ರಾತ್ರಿಗೆ ಆಶ್ರಯ ಕೇಳಿ ಬಂದ ಪರವೂರಿನ ಅಪರಿಚಿತನನ್ನು ಅವಿವಾಹಿತನೆಂದು ಭಾವಿಸಿ ಆಸ್ಥೆಯಿಂದ ಆದರಿಸಿ ಅವಿವಾಹಿತ ಮೊಮ್ಮಗಳನ್ನು ಪ್ರದರ್ಶಿಸಿ ಅವನು ಒಪ್ಪಿಯಾನೆಂದು ಕಾಯುವ ಅಜ್ಜಿಯ ಅಸಹಾಯಕತೆ, ನಿರಾಸೆಗಳನ್ನು ಚಿತ್ರಿಸಿದ್ದಾರೆ. ಈ ಬಾರಿಯಾದರೂ ತನ್ನ ಮದುವೆಯಾಗುವುದೆಂಬ ನಿರೀಕ್ಷೆಯಿಂದ ಅಜ್ಜಿಯ ಸೂಚನೆಯಂತೆ ಇದ್ದುದರಲ್ಲಿ ಒಳ್ಳೆಯ ಬಟ್ಟೆ ಧರಿಸಿ ಅವನ ಕಣ್ಣಿಗೆ ಸುಂದರಿಯಾಗಿ ಕಾಣುವಂತೆ ಸುಳಿದಾಡುವ ಮೊಮ್ಮಗಳು ಸಂತೆಯಲ್ಲಿ ವಿಕ್ರಯವಾಗದೆ ಉಳಿದ ಬಡಪಾಯಿ ದನವನ್ನು ನೆನಪಿಸುವಂತಿದ್ದಾಳೆ. ಆತನಿಗೆ ಮದುವೆಯಾಗಿದೆಯೆಂದು ತಿಳಿದು ಹತಾಶರಾಗುವ ಅಜ್ಜಿ ಮತ್ತು ಮೊಮ್ಮಗಳು ಇಬ್ಬರೂ ಹೆಣ್ಣಿಗೆ ವಿವಾಹವು ಅನಿವಾರ್ಯ ಮತ್ತು ಅಂತಿಮ ಎಂದು ನಂಬಿಸಿರುವ ಸಮಾಜದ ಸ್ವಾರ್ಥದಿಂದಾಗಿ ದುಃಖಿಗಳಾಗಿದ್ದಾರೆ.

ಮದುವೆಯು ಹೆಣ್ಣಿನ ಆಸೆ, ಆಕಾಂಕ್ಷೆ, ಅಭಿರುಚಿಗಳನ್ನು ಮರೆಸುವುದನ್ನು 'ನೀರಾ... ಒಂದು ಬೇಸಿಗೆ ಕಾಲದ ಕನಸು' ಎಂಬ ಕತೆಯಲ್ಲಿ ಇ.ಕೆ. ಷೀಬಾ ಅವರು ಗುರುತಿಸಿದ್ದಾರೆ. ದೂರದೂರಿಗೆ ಮದುವೆಯಾಗಿ ಹೋದ ಬಾಲ್ಯದ ಗೆಳತಿ ನೀರಾಳನ್ನು ಅನಿರೀಕ್ಷಿತವಾಗಿ ಭೇಟಿಯಾದ ತಪನ್ ಪ್ರಸ್ತುತ ಆಕೆ ಸಂಪೂರ್ಣವಾಗಿ ಬದಲಾಗಿರುವುದನ್ನು ಗಮನಿಸಿ ಚಕಿತನಾಗುವುದನ್ನು ಲೇಖಕಿ ನಿರೂಪಿಸಿದ್ದಾರೆ. ಹಳದಿ ಬಣ್ಣವನ್ನು ಎಳ್ಳಷ್ಟೂ ಇಷ್ಟಪಡದೆ 'ಅದು ವಿಷಾದದ ಬಣ್ಣ, ಆಲಸ್ಯದ ಬಣ್ಣ' ಎಂದೆಲ್ಲ ವಾದಿಸುತ್ತಿದ್ದವಳು ಈಗ ಸುಕ್ಕು ಸುಕ್ಕಾದ ಹಳದಿ ಸೀರೆಯಲ್ಲಿ ತನ್ನ ಸೌಂದರ್ಯದ ಬಗ್ಗೆ ಗಮನವೆ ಇಲ್ಲದೆ ಕೈಯಲ್ಲಿ ತರಕಾರಿಯ ಚೀಲ ಹಿಡಿದು ಸೋತವಳಂತೆ ನಡೆಯುತ್ತಿದ್ದಾಳೆ. ಬಾಲ್ಯದಲ್ಲಿ ಅವನ ಕೈಹಿಡಿದು ಊರುತುಂಬ ಸುತ್ತಾಡಿದ್ದವಳು ಈಗ ಜೊತೆಯಾಗಿ ನಡೆಯುತ್ತಿರುವ ತಮ್ಮನ್ನು ಜನರು ಗಮನಿಸಿಯಾರೊ ಎಂಬ ಆತಂಕದಲ್ಲಿ ಜನಸಂದಣಿಯಿಲ್ಲದ ದಾರಿಯನ್ನು ಆಯ್ಕೆ ಮಾಡುತ್ತಾಳೆ. ಸುಂದರವಾದ ಕಪ್ಪು ಅಕ್ಷರಗಳಲ್ಲಿ ಆರ್ದ್ರವಾದ ಕವಿತೆಗಳನ್ನು ಬರೆಯುತ್ತಿದ್ದವಳು ಈಗ ತಾನು ಬರೆಯುತ್ತಿದ್ದೆ ಎಂಬುದನ್ನೇ ಮರೆತುಬಿಟ್ಟಿದ್ದಾಳೆ. ಕೆಂಡದಲ್ಲಿ ಸುಟ್ಟ ಮೆಕ್ಕೆಜೋಳವನ್ನು ತಿನ್ನಲು

ಇಷ್ಟಪಡುತ್ತಿದ್ದಳು ಈಗ ದಾರಿಯಲ್ಲಿ ಮೆಕ್ಕೆಜೋಳ ಮಾರುವುದನ್ನು ಕಂಡರೂ ಲಕ್ಷಿಸದೆ, ಗೆಳೆಯ 'ತಿನ್ನೋಣವೆ' ಎಂದರೂ ಬೇಡವೆಂದು ಮುಂದುವರಿಯುತ್ತಾಳೆ. 'ಹೃದಯದ ಭಾಗದಲ್ಲಿ ಗಾಯವಾದ ಹಕ್ಕಿಮರಿಯಂತೆ' ಕಾಣುವ ಕೆಂಪುಸಿಂಧೂರವು ನೀರಾಳ ಲವಲವಿಕೆ, ಉತ್ಸಾಹ, ಜೀವನೋತ್ಸಾಹ, ಆತ್ಮವಿಶ್ವಾಸಗಳನ್ನು ಕಸಿದುಕೊಂಡು ಬದುಕನ್ನು ಯಾಂತ್ರಿಕವಾಗಿಸಿದೆ. ಹುಟ್ಟಿ ಬೆಳೆದ ಮನೆಯ ಸುಭದ್ರ ಮತ್ತು ಪರಿಚಿತ ಆವರಣದಿಂದ ಬೇರೊಂದು ಆವರಣಕ್ಕೆ ಸೊಸೆಯಾಗಿ ಹೋಗುವ ಸ್ತ್ರೀಯರು ಅಲ್ಲಿನ ನಿರೀಕ್ಷೆಗಳಿಗೆ ತಕ್ಕಂತೆ ಬದಲಾಗುವುದು ಅನಿವಾರ್ಯವಾಗಿದೆ. ಸ್ಥಾನಪಲ್ಲಟವು ಅನಿವಾರ್ಯವಲ್ಲದ ಪುರುಷನಿಗಾದರೆ ಇಂಥ ಆತಂಕಗಳಿರುವುದಿಲ್ಲ.

ಸ್ತ್ರೀಯನ್ನು ಎಂದೆಂದೂ ಅಧೀನಳಾಗಿ ಇರತಕ್ಕ ದೇಹ ಮಾತ್ರ ಎಂದು ಭಾವಿಸುವ ಸಮಾಜವು ಅವಳಿಗೂ ಒಂದು ಮನಸ್ಸಿದೆ, ಇಚ್ಛೆಗಳಿವೆ ಎಂದು ಗ್ರಹಿಸಿಯೆ ಇಲ್ಲ. ಜೀವಮಾನವಿಡೀ ನಿಭಾಯಿಸಬೇಕಾದ ಮದುವೆಯಂಥಾ ಮಹತ್ವದ ಸಂಬಂಧದಲ್ಲೂ ಅವಳ ಆಯ್ಕೆಗಳಿಗೆ, ಸ್ವಂತ ನಿರ್ಧಾರಗಳಿಗೆ ಅವಕಾಶವನ್ನು ಕೊಟ್ಟಿಲ್ಲ. ವಿವಾಹ ಎಂಬುದು ಅವಳ ಇಷ್ಟಾನಿಷ್ಟಗಳನ್ನು ಪರಿಗಣಿಸದೆ ನಡೆಯುವ ಒಂದು ಅನಿವಾರ್ಯವಾದ ವಿಧಿಯಾಗಿದೆ. ಹಲವು ಸಂದರ್ಭಗಳಲ್ಲಿ ವಿವಾಹವು ಹೆಣ್ಣಿನ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ. ಅವಳ ಸ್ವಂತ ವ್ಯಕ್ತಿತ್ವವನ್ನು ನಾಶಮಾಡುತ್ತದೆ. ಈ ವಿಚಾರದ ವಿಶ್ಲೇಷಣೆಗೆ ಮಲಯಾಳಂ ಲೇಖಕರು ಮತ್ತು ಲೇಖಕಿಯರು ತಮ್ಮ ಕೃತಿಗಳನ್ನು ಬಳಸಿಕೊಂಡಿದ್ದಾರೆ.

೨.೨.೩. ಸಂಶಯ ಮತ್ತು ಅವಮಾನ: ದಾಂಪತ್ಯ ವಿಘಟನೆ

ಹೆಣ್ಣು ಯಾವ ಧರ್ಮದಲ್ಲಾದರೂ, ಯಾವ ದೇಶದಲ್ಲಾದರೂ ತನ್ನ ಪತಿನಿಷ್ಠೆಯನ್ನು ಸಾಬೀತುಪಡಿಸಬೇಕಾಗುತ್ತದೆ. ಹಾಗೆ ಸಾಬೀತುಪಡಿಸಲು ಸಾಧ್ಯವಾಗದೆ ಹೋದಾಗ ದಾಂಪತ್ಯಕ್ಕೆ, ಕೆಲವೊಮ್ಮೆ ಬದುಕಿಗೂ ಎರವಾಗಬೇಕಾಗುತ್ತದೆ. ಪತಿಯ ಈ ಸಂಶಯ ಸ್ವಭಾವದಿಂದ ರೋಸಿಹೋಗುವ ಸ್ತ್ರೀಯರು ಪತಿಯ ಬಗೆಗಿನ ಪ್ರೇಮ ಮತ್ತು ನಿಷ್ಠೆಗಳನ್ನು ಎಂದೆಂದಿಗೂ ಮರೆತುಬಿಟ್ಟು ದಾಂಪತ್ಯದ ಚೌಕಟ್ಟು ದಾಟಬಹುದು. ತನ್ನ ಮೇಲೆ ಪ್ರೀತಿಯಿಲ್ಲದ ಅಥವಾ ತಾನು ಪ್ರೀತಿಸಲಾಗದ ಪತಿಯನ್ನು ತ್ಯಜಿಸುವ, ವಂಚಿಸುವ ಅಥವಾ ಪತಿಯ ವಿರುದ್ಧ ತಿರುಗಿಬೀಳುವ ಮೂಲಕ ತಮ್ಮ ಸಿಟ್ಟು ತೀರಿಸಿಕೊಳ್ಳಬಹುದು. ದಾಂಪತ್ಯ ವ್ಯವಸ್ಥೆಯೊಳಗೆ ಅನುಭವಿಸುವ ದೈಹಿಕ ಅಥವಾ ಮಾನಸಿಕ ಹಿಂಸೆ, ನಿರಾಸೆ ಮತ್ತು ಅವಮಾನಗಳಿಗೆ ಸ್ತ್ರೀಯರು ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸುವುದನ್ನು ಮಲಯಾಳಂ ಕಥನಲೋಕದಲ್ಲಿ ಕಾಣಬಹುದು. ಮದುವೆ ಎಂಬ ವ್ಯವಸ್ಥೆಯ ಪವಿತ್ರತೆಯಲ್ಲಿ ನಂಬಿಕೆಯಿಲ್ಲದ ಸ್ತ್ರೀಯರು ವಿಚ್ಛೇದನ ಮತ್ತು ವೈಧವ್ಯಗಳನ್ನು 'ಬಿಡುಗಡೆಯ ನಿರಾಳತೆ'ಯೊಂದಿಗೆ ಸಂತೋಷವಾಗಿ ಸ್ವೀಕರಿಸಬಹುದು.

ಪರಸ್ಪರರ ಮೇಲಿನ ಪ್ರೀತಿ ಮತ್ತು ವಿಶ್ವಾಸಗಳಿಂದ ರೂಪುಗೊಳ್ಳಬೇಕಾದ ದಾಂಪತ್ಯವೆಂಬ ಮಧುರ ಸಂಬಂಧವು ಪತಿಯ ಸಂದೇಹದಿಂದ ಟೊಳ್ಳಾಗುವುದನ್ನು 'ಬಲೆ' ಕಾದಂಬರಿ ಬಹಳ ಪರಿಣಾಮಕಾರಿಯಾಗಿ ಗುರುತಿಸುತ್ತದೆ. ಮೊದಲ ಪತಿ ತನ್ನನ್ನು ಸಂದೇಹಿಸಿದನೆಂದು ಫಾತಿಮ್ಮ ಅವನಿಂದ ದೂರವಾಗುವ ನಿರ್ಧಾರ ಮಾಡುತ್ತಾಳೆ. ಸಂಶಯಪಿಶಾಚಿಯೂ, ಸ್ವಾರ್ಥಿಯೂ ಆಗಿರುವ ಎರಡನೇ ಪತಿಯ ಸಂಕುಚಿತ ಬುದ್ಧಿಗೆ ಹೊಂದಿಕೊಳ್ಳಲಾಗದೆ ಅವನೊಂದಿಗಿನ ದಾಂಪತ್ಯಕ್ಕೂ ಎರವಾಗುತ್ತಾಳೆ. ಅವಳು ಮಾಡದ ತಪ್ಪುಗಳನ್ನು ಹೊರಿಸಿ ಎರಡನೇ ಪತಿ ಟಪ್ಪಾಲಿನಲ್ಲಿ ತಲಾಖ್ ಕಳುಹಿಸುತ್ತಾನೆ.

ಫಾತಿಮ್ಮ ತನ್ನ ತಪ್ಪು ತಿಳುವಳಿಕೆಗಳಿಂದಾಗಿ ಮೊದಲ ಪತಿಯೊಡನೆ ಹೊಂದಿಕೊಳ್ಳಲಾಗದೆ ಅವನನ್ನು ತ್ಯಜಿಸಿದ್ದಾಳೆ. ಆದರೆ ಎರಡನೇ ಮದುವೆಯೊಂದಿಗೆ ಅವಳ ವೈಯಕ್ತಿಕ ಸ್ವಾತಂತ್ರ್ಯವೇ ಮುಗಿದುಹೋಗುತ್ತದೆ. ಎದುರು ಮನೆಯ ಯುವಕ ಯಾವಾಗಲೂ ತಮ್ಮ ಮನೆಯ ಕಡೆಗೇ ಮುಖಮಾಡಿ ನಿಂತಿರುತ್ತಾನೆ ಎಂಬ ಕಾರಣಕ್ಕೆ ಶರಫ್ ವಾಸದ ಮನೆಯನ್ನು ಬದಲಾಯಿಸುತ್ತಾನೆ. ಮುದುಕ ಮೌಲವಿಗಳು ಸಿಕ್ಕುವುದಿಲ್ಲ ಎಂಬ ಕಾರಣಕ್ಕಾಗಿ ತನ್ನ ಮಕ್ಕಳಿಗೆ ಖುರಾನ್ ಪಾಠವನ್ನೂ ನಿಲ್ಲಿಸುತ್ತಾನೆ. ಯುವಕರಾದ ಮೌಲವಿಗಳನ್ನು ಮನೆಪಾಠಕ್ಕೆ ನೇಮಿಸಿದರೆ ಫಾತಿಮ್ಮ ಅವರೊಂದಿಗೆ ಸಲುಗೆ ಬೆಳೆಸಿಕೊಳ್ಳುವಳು ಎಂಬ ಸಂಶಯ ಅವನಿಗೆ. ಸ್ವಂತ ತಂಗಿ ಶರೀಫಳೊಡನೆ ಮಾತನಾಡಬೇಕೆಂದರೂ ಅವನೇ ಫೋನ್ ಮಾಡಿ ಸಂಪರ್ಕಿಸಿ ಕೊಡುತ್ತಾನೆ. ತಂಗಿಯ ಗಂಡನೊಂದಿಗೆ ಮಾತನಾಡುವಂತಿಲ್ಲ. ತವರಿಗೆ ಪತ್ರ ಬರೆಯುವುದಾದರೂ ಶರಫ್‌ನ ಅನುಮತಿ ಪಡೆಯಬೇಕಾಗುತ್ತದೆ. ಮನೆಯವರನ್ನು ಭೇಟಿಯಾಗಬೇಕೆಂದರೂ ಅಷ್ಟೇ ನಿರ್ಬಂಧಗಳಿರುತ್ತವೆ. ಬರೆದ ಪತ್ರಗಳು ಶರಫ್‌ನ ಕಣ್ಣಲ್ಲಿ ಸೆನ್ಸಾರ್ ಆಗಿಯೆ ರವಾನೆಯಾಗುತ್ತವೆ. ಫೋನ್ 'ಎಂಗೇಜ್ಡ್' ಇದ್ದರೂ ಸಂಶಯಿಸುತ್ತಾನೆ. ಮಾತುಮಾತಿಗೂ 'ನೀನು ಈ ಹಿಂದೆ ಒಬ್ಬ ಪತಿಯನ್ನು ವಂಚಿಸಿದವಳು' ಎಂಬಂಥ ಕಟುನುಡಿಗಳಿಂದ ಹೀಯಾಳಿಸುತ್ತಾನೆ. ಎರಡನೇ ಹೆರಿಗೆ ಕಷ್ಟವಾಗಿ ಶಸ್ತ್ರಚಿಕಿತ್ಸೆ ಮಾಡಬೇಕಾದಾಗ ಕುಟುಂಬ ಯೋಜನೆ ಮಾಡಿಸಿಕೊಂಡುದೂ ಅವನಿಗೆ ಇಷ್ಟವಾಗುವುದಿಲ್ಲ. "ಆದರೆ ತಾನೇ ನಿನಗೆ ಮನ ಬಂದಂತೆ ಅಲಂಕರಿಸಿಕೊಂಡು ಓಡಾಡಲು ಸಾಧ್ಯ ಅಲ್ಲವಾ?" (ಪು. ೧೩೨) ಎಂದು ಅವಳ ಉಮ್ಮಾನ ಎದುರಿಗೇ ನಿಂದಿಸುತ್ತಾನೆ.

ವಿದ್ಯಾವಂತನೂ, ಪ್ರಗತಿಪರನೂ ಆಗಿದ್ದ ಫಾತಿಮ್ಮಳ ಮೊದಲ ಪತಿ ಅವಳ ಖರ್ಚಿನ ಮೇಲೆ ಎಂದೂ ನಿರ್ಬಂಧ ಹೇರಿರಲಿಲ್ಲ. ತನಗೆ ಬೇಕಾದಂತೆ ಪತಿಯ ಹಣವನ್ನು ಖರ್ಚು ಮಾಡುವ ಸ್ವಾತಂತ್ರ್ಯ ಅವಳಿಗಿತ್ತು. ಆದರೆ ಶರಫ್ ಆಕೆಯ ಎಲ್ಲ ಖರ್ಚಿಗೂ ಕಡಿವಾಣ ಹಾಕುತ್ತಾನೆ. ಮಾತ್ರವಲ್ಲ 'ಆಕೆಗಾಗಿಯೇ ತಾನು ಒಳ್ಳೆಯ ಸಂಬಳದ ಉದ್ಯೋಗವನ್ನು ತೊರೆಯಬೇಕಾಯಿತು. ಹಾಗಾಗಿ ಈ

ಆರ್ಥಿಕ ಸಂಕಷ್ಟಕ್ಕೆ ಆಕೆಯೆ ಹೊಣೆ' ಎಂಬಂತೆ ದೂರುತ್ತಾನೆ. ಫಾತಿಮ್ಮ ತೀವ್ರ ಹೊಟ್ಟೆನೋವಿನಿಂದ ಬಳಲುತ್ತಿದ್ದರೂ ವೈದ್ಯರಲ್ಲಿಗೆ ಕರೆದೊಯ್ಯುವ ಕಾಳಜಿ ಶರಫ್‌ಗಿಲ್ಲ. ಅವಳ ತಂಗಿ ಮತ್ತು ತಂಗಿಯ ಗಂಡ ಫಾತಿಮ್ಮಳನ್ನು ವೈದ್ಯರಲ್ಲಿಗೆ ಕರೆದೊಯ್ಯುವುದೂ ಸಮ್ಮತವಿಲ್ಲ. ತಂದೆಯ ಮಾತು, ವರ್ತನೆಗಳನ್ನು ಗಮನಿಸುತ್ತ ಬೆಳೆದ ಇಬ್ಬರು ಗಂಡುಮಕ್ಕಳು ಕೂಡಾ ಅಮ್ಮನಲ್ಲಿ ಪ್ರೀತಿ ಆದರ ತೋರದೆ ಆಕೆಯ ವೇದನೆಗೆ ಕಾರಣರಾಗುತ್ತಾರೆ. ಅವಳ ಅಸೌಖ್ಯದಿಂದಾಗಿ ಮನೆಯಲ್ಲಿ ಒಳ್ಳೆಯ ತಿಂಡಿ ಸಿಗುತ್ತಿಲ್ಲವೆಂದು ಗಂಡನೂ ಮಕ್ಕಳೂ ಅಸಮಾಧಾನ ತೋರುತ್ತಾರೆ.

ಕೇವಲ ತಲಾಖ್ ಎಂಬ ಪದವನ್ನು ಮೂರು ಬಾರಿ ಉಚ್ಚರಿಸುವ ಮೂಲಕ ಪತ್ನಿಗೆ ವಿಚ್ಛೇದನ ನೀಡಬಹುದಾದ ಒಂದು ಅವಕಾಶವನ್ನು ಪುರುಷನಿಗೆ ಮಾತ್ರ ಕಲ್ಪಿಸಿರುವ ಒಂದು ಸಮುದಾಯದಲ್ಲಿ ಸ್ತ್ರೀ ಎಂಥ ಅನಿಶ್ಚಿತ ಮತ್ತು ಅಸಹಾಯಕ ಸ್ಥಿತಿಯಲ್ಲಿ ಬಾಳಬೇಕಾಗುತ್ತದೆ ಎಂಬುದನ್ನು ಮೂಲಕ ಲೇಖಕಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಎರಡನೆಯ ಮದುವೆಯಲ್ಲಿ ಮೊದಲ ಎರಡು ವರ್ಷಗಳನ್ನು ಬಿಟ್ಟರೆ, ಆ ಬಳಿಕದ ಬದುಕಿನ ಅವಧಿಯಲ್ಲಿ ಫಾತಿಮ್ಮ ನಿರಂತರ ಮೊದಲ ಪತಿಯ ಒಳ್ಳೆಯತನವನ್ನೂ ಬಿಟ್ಟು ಬಂದ ಮಗನನ್ನೂ ನೆನಪಿಸಿಕೊಂಡು ಕೊರಗುತ್ತಿರುತ್ತಾಳೆ. ಸ್ತ್ರೀಯರ ಅನಿಸಿಕೆಗಳಿಗೆ ಬೆಲೆಯನ್ನೇ ಕೊಡದ ಏಕಪಕ್ಷೀಯವಾದ ಕೌಟುಂಬಿಕ ವ್ಯವಸ್ಥೆಯ ಕ್ರೌರ್ಯಕ್ಕೆ ಫಾತಿಮ್ಮಳ ಬದುಕು ಬಲಿಯಾಗಿದೆ.

ಕಮಲಾದಾಸ್ ಅವರು ಬರೆದ 'ಚಂದನದ ಮರಗಳು' ಕತೆಯಲ್ಲಿ ಬಾಲ್ಯದ ಗೆಳತಿಯರಾದ ಶೀಲಾ ಮತ್ತು ಕಲ್ಯಾಣಿ ಮೆಡಿಕಲ್ ಓದಿ ವೈದ್ಯೆಯರಾಗಿರುವವರು. ಇಬ್ಬರಿಗೂ ಅವರ ಆಯ್ಕೆಯಲ್ಲದ ವರನೊಂದಿಗೆ ಮದುವೆಯಾಗಿದೆ. ಸುಂದರನೂ, ದೃಢಕಾಯನೂ ಆಗಿರುವ ತನ್ನ ಡಾಕ್ಟರ್ ಪತಿಯ ಬಗ್ಗೆ ಕಲ್ಯಾಣಿಗೆ ಹೆಮ್ಮೆಯಿಲ್ಲ. ಶೀಲಾಳ ಪತಿಯೇ ವಾಸಿ ಎಂದುಕೊಳ್ಳುತ್ತಾಳೆ. ಏಕೆಂದರೆ ಶೀಲಾಳಿಗಿಂತ ಇಪ್ಪತ್ತು ವರ್ಷ ಹಿರಿಯವನಾದರೂ ಅವಳ ಪತಿಯು ಘನತೆಯಿಂದ ವರ್ತಿಸುತ್ತಾನೆ. ಆದರೆ ಕಲ್ಯಾಣಿಯ ಪತಿ ಸುಂದರ ಯುವಕನಾಗಿರುವುದು ಹೌದಾದರೂ ಉತ್ತಮ ನಡವಳಿಕೆ ತಿಳಿಯದವನಾಗಿದ್ದ. ತನ್ನ ಕೀಳರಿಮೆಯಿಂದ ಮೃಗದಂತೆ ವರ್ತಿಸುತ್ತಿದ್ದ. ಇತರರ ಮುಂದೆ ಅವಳನ್ನು ಲೇ, ಹೆಣ್ಣೇ, ಲೌಡೀ ಎಂದೆಲ್ಲ ಕರೆಯುತ್ತಿದ್ದ. ಪತಿಗೆ ತನ್ನ ಮೇಲೆ ಸ್ವಲ್ಪವೂ ಗೌರವವಿಲ್ಲವೆಂದು ತೀರ್ಮಾನಿಸುವ ಕಲ್ಯಾಣಿ ವಿಚ್ಛೇದನ ಪಡೆಯಲು ಮುಂದಾಗುತ್ತಾಳೆ. 'ನನಗೆ ರಾತ್ರಿಗಳನ್ನು ಸಹಿಸಲು ಸಾಧ್ಯವಾಗ್ತಾ ಇಲ್ಲ. ಆತ ನನ್ನ ಆರೋಗ್ಯವನ್ನೇ ಕೆಡಿಸುತ್ತಿದ್ದಾನೆ' ಎಂದು ಗೆಳತಿಯಲ್ಲಿ ಹೇಳಿಕೊಳ್ಳುವಲ್ಲಿ ಕಲ್ಯಾಣಿ ಗಂಡನ ಸಾಂಗತ್ಯವನ್ನು ಅಸಹ್ಯಿಸಿಕೊಳ್ಳುವುದನ್ನು ಗುರುತಿಸಬಹುದು. ಬಯಸುವ ಪತಿಯಿಂದ ತಾನಾಗಿಯೆ ವಿಚ್ಛೇದನ ಪಡೆಯುವ ಕಲ್ಯಾಣಿ ಅವನಿಂದ ದೂರವಾಗಬೇಕೆಂದೇ ಆಸ್ಟ್ರೇಲಿಯಾಕ್ಕೆ ತೆರಳುತ್ತಾಳೆ. ಶ್ರೀಮಂತ ವಿದೇಶೀಯನೊಬ್ಬನನ್ನು ಮದುವೆಯಾಗಿ ಅವನು ಗತಿಸಿದ ಬಳಿಕ ಸ್ವದೇಶಕ್ಕೆ ಮರಳುತ್ತಾಳೆ. ಪ್ರಸ್ತುತ ಬೇರೆ ಹೆಣ್ಣನ್ನು ಮದುವೆಯಾಗಿ ಸುಖವಾಗಿರುವ ಮಾಜಿ ಪತಿಯೊಂದಿಗೆ ಮತ್ತೆ ಸ್ನೇಹ

ಬೆಳೆಸುತ್ತಾಳೆ. ಅವನೊಂದಿಗೆ ರಾತ್ರಿಗಳನ್ನು ಕಳೆಯುವ ಬಗ್ಗೆಯೂ ಅವಳಿಗೆ ಆಕ್ಷೇಪವಿಲ್ಲ. ಆದರೆ ತನ್ನ ಸ್ವತಂತ್ರ ಅಸ್ತಿತ್ವವನ್ನು ಅವಮಾನಿಸುವವನನ್ನು ಪತಿಯಾಗಿ ಒಪ್ಪಿಕೊಳ್ಳಲಾರಳು.

ಬಾಲ್ಯದ ಗೆಳತಿಯರೂ ಒಡನಾಡಿಗಳೂ ಆಗಿದ್ದ ಶೀಲಾ ಮತ್ತು ಕಲ್ಯಾಣಿಕುಟ್ಟಿ ಪರಸ್ಪರ ಲೈಂಗಿಕ ಆಕರ್ಷಣೆಗೆ ಒಳಗಾಗಿ ಸಲಿಂಗಕಾಮ ಸಂಬಂಧ ಹೊಂದಿದ್ದವರು. 'ಗಂಡಾಗಿ ಅಭಿನಯಿಸಿ' ತನ್ನನ್ನು ತೃಪ್ತಿಪಡಿಸಿದ ಕಲ್ಯಾಣಿಯನ್ನು ಮರೆಯುವುದಾಗಲೀ, ಮದುವೆಗೆ ಮುನ್ನ ಕಲ್ಯಾಣಿ ಕೊಟ್ಟ ಸುಖ ಮತ್ತು ತೃಪ್ತಿಗಳನ್ನು ತನ್ನ ಪತಿಯಿಂದ ಪಡೆಯುವುದಾಗಲೀ ಶೀಲಾಗೆ ಎಂದೂ ಸಾಧ್ಯವಾಗಿಲ್ಲ. ಪತಿಯೊಂದಿಗಿನ ಸಮಾಗಮದ ಕ್ಷಣಗಳಲ್ಲೂ ಕಲ್ಯಾಣಿಯೊಂದಿಗಿನ ಶಾರೀರಿಕ ಸುಖದ ಅನುಭವವನ್ನು ನೆನಪಿಸಿಕೊಳ್ಳುತ್ತ ಪತಿಯಿಂದ ಮಾನಸಿಕವಾಗಿ ದೂರವೆ ಉಳಿದುಬಿಡುತ್ತಾಳೆ. ಮಾತಿನಲ್ಲಿ ಪತಿಯನ್ನು ಅವಮಾನಿಸಲು ಯತ್ನಿಸುವುದು, ಪರಪುರುಷರೊಂದಿಗೆ ವ್ಯಭಿಚಾರ ನಡೆಸಿ ಪತಿಯನ್ನು ವಂಚಿಸಬೇಕೆಂದು ಬಯಸುವುದು... ಇವು ಹೊಂದಾಣಿಕೆಯಿಲ್ಲದ ದಾಂಪತ್ಯದ ಬಗ್ಗೆ ಆಕೆಯ ಅಸಹನೆಯನ್ನು ತೋರುತ್ತವೆ.

ವಿದೇಶದಿಂದ ಮರಳಿರುವ ಕಲ್ಯಾಣಿಯ ಮರುಭೇಟಿಯ ನೆನಪು ಶೀಲಾಳಲ್ಲಿ ರೋಮಾಂಚನ ಉಂಟುಮಾಡುತ್ತದೆ. 'ಪ್ರಾಣಸ್ನೇಹಿತೆಯನ್ನು ಆಲಂಗಿಸಿ ಅವಳ ಬಿಸಿಯಪ್ಪುಗೆಯಲ್ಲಿ, ಮತ್ತು ಬರಿಸುವ ಚುಂಬನದಲ್ಲಿ ಪರಿಪೂರ್ಣತೆಯನ್ನು ಪಡೆಯಲು ಹವಣಿಸುವ ಹೆಣ್ಣುಮಗಳಾಗಿ ರೂಪಾಂತರ ಹೊಂದಿದೆ. ಪ್ರಿಯತಮೆಯ ಶರೀರ ಸ್ಪರ್ಶದಿಂದ ಮೈಮರೆಯುತ್ತಿದ್ದ ಹದಿಹರೆಯದ ಹುಡುಗಿಯಾಗಿ ಮಾರ್ಪಟ್ಟೆ' (ಪು. ೧೦೪, ಕಮಲಾದಾಸ್‌ರವರ ನೀಳ್ಗಥೆಗಳು) ಇವು ಅವಳ ಸ್ವಗತದ ಹಂಬಲಿಕೆ. ಗಂಡನ ಪಕ್ಕದಲ್ಲಿ ಮಾತನಾಡುತ್ತಾ ಮಲಗುವುದು ಇಷ್ಟವಿಲ್ಲದ ಶೀಲಾಳಿಗೆ ಗಂಡನೆಂದರೆ 'ತನ್ನಿಂದ ಕತ್ತರಿಸಿ ತೆಗೆಯಬೇಕಾದ ಒಂದು ರೋಗಗ್ರಸ್ಥ ಅಂಗದಂತೆ' ತೋರುತ್ತದೆ. "ಮಡಿವಂತರಿಂದ ನಿರ್ಮಿಸಲ್ಪಟ್ಟ ಗೃಹಸ್ಥಾಶ್ರಮ ನನಗೆ ಬೇಡ. ಮತ್ತೊಬ್ಬರ ಬಾಯಿಯಿಂದ ಹರಿಯುವ ಮಂದದ್ರವ ನನ್ನ ಬಾಯಿಗೆ ಅಗತ್ಯವಿಲ್ಲ. ದಿನದ ಕೆಲಸ ಮುಗಿಸಿ ಆಯಾಸದಿಂದ ದಣಿದ ನನ್ನ ಶರೀರಕ್ಕೆ ಕಾಮದ ವಿಕೃತಭಾರ ಸಹಿಸಲು ಸಾಧ್ಯವಿಲ್ಲ" (ಪು. ೮೦, ಅದೇ) ಎಂಬಂಥಾ ಅಸಹ್ಯಭಾವದೊಂದಿಗೆ ಪತಿಯ ಸಾಮೀಪ್ಯವನ್ನು ಮನಸಾ ಒಪ್ಪಿಕೊಳ್ಳಲಾರದ ಶೀಲಾಳಿಗೆ ಕಲ್ಯಾಣಿಯ ಸಾಹಚರ್ಯ ಮಾತ್ರ ಇಷ್ಟವಾಗುತ್ತದೆ. ಗೆಳತಿಯ ದೇಹದ ಸುಗಂಧವು ಉಲ್ಲಾಸವನ್ನು ತರುತ್ತದೆ.

ತನ್ನನ್ನು ಪ್ರೀತಿಯಿಂದ ಮಾತನಾಡಿಸುವ, ಗೌರವಿಸುವ ಒಬ್ಬಾತನನ್ನು ಹುಡುಕಲು ನಿರ್ಧರಿಸಿ ಹೆಣ್ಣೊಬ್ಬಳು ದಾಂಪತ್ಯದಿಂದ ಹೊರಬರುವ ಈ ಕತೆಯಲ್ಲಿ ತನಗೆ 'ಗಂಡ ಬೇಡ' ಎಂದು ನಿರ್ಧರಿಸುವವಳು ಕಲ್ಯಾಣಿ. ತನ್ನನ್ನು ಬಯಸುವ ಪತಿಯಿಂದ ಅವಳು ವಿಚ್ಛೇದನ ಪಡೆದಿರುವುದು ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ. ಸ್ವತಂತ್ರ ನಿಲುವುಳ್ಳ ಕಲ್ಯಾಣಿ ಗಂಡನ ವರ್ತನೆಯನ್ನು

ಅಸಹ್ಯಿಸಿಕೊಳ್ಳುವುದು, ಇಂಥವನೊಂದಿಗೆ ಬದುಕಲು ಸಾಧ್ಯವಿಲ್ಲ ಎಂದು ತೀರ್ಮಾನಿಸುವುದು ಮತ್ತು ಗಂಡನಿಂದ ಬೇರೆಯಾಗುವ ನಿರ್ಧಾರವನ್ನು ಕಾರ್ಯರೂಪಕ್ಕಿಳಿಸುವುದು ಒಂದು ವಿಶಿಷ್ಟವಾದ ಸ್ತ್ರೀನಡೆ. ಗೆಳತಿಯ ಒಡೆಯುತ್ತಿರುವ ದಾಂಪತ್ಯವನ್ನು ಸರಿಪಡಿಸಲು ಶೀಲಾ ಪ್ರಯತ್ನಿಸುವುದಿಲ್ಲ. 'ಅವಳಿಗೆ ಅವರ ಜೊತೆ ಬಾಳ್ವೆ ಬೇಡವೆಂದಾದರೆ ವಿವಾಹ ವಿಚ್ಛೇದನ ಪಡೆದು ಬೇರೆಲ್ಲಾದರೂ ಕೆಲಸ ನೋಡಲಿ. ಅದರಲ್ಲೇನು ತಪ್ಪು' ಎಂಬುದು ಅವಳ ಧೋರಣೆಯಾಗಿದೆ.

ನಿರಂತರವಾಗಿ ಶೀಲಾಳ ಸಂಗದಲ್ಲಿರಲು ಬಯಸುವ ಕಲ್ಯಾಣಿಗೆ ಶೀಲಾಳ ತಂದೆಯೇ ತನಗೂ ತಂದೆಯೆಂಬುದು ಗೊತ್ತಾದ ಬಳಿಕವೂ ಗೆಳತಿಯನ್ನು 'ಪ್ರೇಮಿಸದೆ ಇರುವುದು' ಸಾಧ್ಯವಾಗಿಲ್ಲ. 'ನೀನು ನನ್ನ ಸಹೋದರಿಯೆಂದು ತಿಳಿದೂ ನನಗೆ ನನ್ನನ್ನೇ ನಿಯಂತ್ರಿಸಲು ಸಾಧ್ಯವಾಗಲಿಲ್ಲ' ಎಂದು ಒಪ್ಪಿಕೊಳ್ಳುವ ಕಲ್ಯಾಣಿ ಮೊದಲ ಪತಿಯಿಂದ ವಿಚ್ಛೇದನ ಪಡೆದು ಆಸ್ಟ್ರೇಲಿಯಾಕ್ಕೆ ಹೊರಡುವ ಮೊದಲು ಗೆಳತಿಯಲ್ಲಿಗೆ ಬಂದು 'ನಿನ್ನನ್ನು ನಾನು ಸಾಕುತ್ತೇನೆ. ನನ್ನ ಜೀವಕ್ಕಿಂತಲೂ ಹೆಚ್ಚಾಗಿ ನೋಡಿಕೊಳ್ಳುತ್ತೇನೆ' ಎಂದು ಆಹ್ವಾನಿಸಿದ್ದಾಳೆ. ತನ್ನಂತೆಯೇ ಶೀಲಾ ಕೂಡ ಪತಿಯಿಂದ ಬೇರೆಯಾಗಿ ಸ್ವತಂತ್ರವಾಗಲಿ ಎಂಬುದು ಕಲ್ಯಾಣಿಯ ಅಪೇಕ್ಷೆ. ಮದುವೆಯಿಂದಾಗಿ ನಿಂತುಹೋಗಿರುವ ಸಲಿಂಗಸಂಬಂಧವನ್ನು ಮತ್ತೆ ಆರಂಭಿಸಲು ಕಲ್ಯಾಣಿ ಉತ್ಸುಕಳಾಗಿದ್ದಾಳೆ.

'ನಾನು ಶ್ರೀಮಂತ ಹಾಗೂ ಸಂತುಷ್ಟ ವಿಧವೆ' ಎಂದು ಗಟ್ಟಿಯಾಗಿ ನಕ್ಕು ನುಡಿಯುವ ಕಲ್ಯಾಣಿಗೆ ತನ್ನ ವೈಧವ್ಯದ ಬಗ್ಗೆ ವಿಷಾದವಿಲ್ಲ. ಮೊದಲ ಸಂಬಂಧದ ವಿಚ್ಛೇದನದ ಬಗ್ಗೆಯೂ ಖೇದವಿರಲಿಲ್ಲ. 'ಪಾಪ ಒಳ್ಳೆಯ ಮನಸ್ಸಿನವನಾಗಿದ್ದ' ಕಲ್ಯಾಣಿಯ ಎರಡನೆಯ ಗಂಡ ಅವಳನ್ನು ಹೆಂಡತಿಯಾಗಿ ಪಡೆದಾಗ ಕೊಹಿನೂರು ರತ್ನ ದೊರೆತಂತೆ ಸಂಭ್ರಮಪಟ್ಟಿದ್ದ. ಶ್ರೀಮಂತಿಕೆಯ ಬದುಕಿನ ಎಲ್ಲ ಸುಖಗಳನ್ನು ಕಲ್ಯಾಣಿಗೆ ಒದಗಿಸಿದ್ದ. ಆದರೆ ಆ ಸುಖವೈಭೋಗಗಳನ್ನು ಸವಿಯಲು ಅಗತ್ಯವಾದ ಬಯಕೆ ಅವಳಿಗಿಲ್ಲ. ಒಮ್ಮೆಯೂ 'ಹಸಿದಿರಲು' ಸಾಧ್ಯವಾಗದುದಕ್ಕೆ ಕಲ್ಯಾಣಿ ಸಂಕಟಪಡುತ್ತಾಳೆ. ಹಸಿವೇ ಇಲ್ಲದೆ ರುಚಿ ತಿಳಿಯುವುದು ಹೇಗೆ? ಕೊನೆಗೊಮ್ಮೆ ಗಂಡ ತೀರಿಕೊಂಡಾಗ 'ನಾನು ಸ್ವತಂತ್ರಳಾದೆ' ಎಂದು ಕಲ್ಯಾಣಿ ಭಾವಿಸುವುದು ಗಮನಿಸಬೇಕಾದ ಅಂಶ.

ಪುರುಷರಿಗಿಂತ ಸ್ತ್ರೀಯರಲ್ಲಿಯೆ ಹೆಚ್ಚು ಆಸಕ್ತಿ ಹೊಂದಿರುವ ಕಲ್ಯಾಣಿ ಮೊದಲ ಪತಿ ಸುಧಾಕರನಿಗೆ ಎರಡನೆಯ ಪತ್ನಿಯಲ್ಲಿ ಹುಟ್ಟಿದ ಮಗಳು ಅಮ್ಮಿಣಿಯನ್ನು ಒಲಿಸಿಕೊಂಡು ತನ್ನೊಂದಿಗೆ ಆಸ್ಟ್ರೇಲಿಯಾಕ್ಕೆ ಕರೆದೊಯ್ಯಲು ಉತ್ಸುಕಳಾಗಿದ್ದಾಳೆ. ತಡೆಯಲೆತ್ನಿಸಿದ ಶೀಲಾಳಿಗೆ 'ಅಮ್ಮಿಣಿ ತನ್ನ ಖಾಸಗಿ ಬದುಕು, ಅದರಲ್ಲಿ ಯಾರೂ ತಲೆಹಾಕಬಾರದು' ಎನ್ನುತ್ತಾಳೆ. "ಅಮ್ಮಿಣಿ ನನ್ನನ್ನು ತುಂಬಾ ಪ್ರೀತಿಸುತ್ತಾಳೆ. ಅವಳಿಗೆ ನನ್ನೊಂದಿಗಿರಲು ಆಸೆ. ಅಮ್ಮಿಣಿ ಮತ್ತು ನನ್ನ ನಡುವಿನ ಸಂಬಂಧ ಮದುವೆಗಿಂತಲೂ ದೃಢವಾಗಿರುತ್ತದೆ" (ಪುಟ ೯೪, ಅದೇ) ಎಂಬ ಮಾತುಗಳಲ್ಲಿ ಕಲ್ಯಾಣಿ ಅಮ್ಮಿಣಿಯೆಡೆಗೆ

ಆಕರ್ಷಿತಳಾಗಿರುವುದು ಸ್ಪಷ್ಟವಾಗಿದೆ. ಸ್ತ್ರೀಸಂಗದಲ್ಲಿ ವಿಶ್ವಾಸ, ಸೆಳೆತ ಎರಡೂ ಹೊಂದಿರುವ ಕಲ್ಯಾಣಿಗೆ 'ನಾಟಕವಾಡುವ ಗಂಡಸರ' ಬಗ್ಗೆ ಉತ್ತಮ ಅಭಿಪ್ರಾಯವಿಲ್ಲ. ಸ್ತ್ರೀಯರ ಸಂತೃಪ್ತಿಯ ಬದುಕಿಗೆ ಗಂಡಸರ ಅವಶ್ಯಕತೆ ಇಲ್ಲವೆಂದೇ ಅವಳ ಭಾವನೆ. ಅವಳ ಪ್ರಕಾರ 'ಬರೇ ಪ್ರಾಣಿಗಳು' ಆಗಿರುವ ಗಂಡಸರು ಶುದ್ಧ ಪ್ರೇಮಕ್ಕೆ ಅರ್ಹರೇ ಅಲ್ಲ.

'ಮುಂಬೆಳಕು' ಕಾದಂಬರಿಯಲ್ಲಿ ಪ್ರೇಮಕ್ಕಾಗಿ ಮನೆ, ಊರು ಮತ್ತು ಸ್ವಂತ ಧರ್ಮವನ್ನು ತೊರೆದು ಬಂದು ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುತ್ತಿರುವ ಸಬಿತಾಳ ಚಾರಿತ್ರ್ಯವನ್ನು ಪತಿ ರಶೀದ್ ಸಂಶಯಿಸುತ್ತಾನೆ. ಸಂಶಯವನ್ನು ನೇರವಾಗಿ ಕೇಳಿ ಪರಿಹರಿಸದೆ, ಸಹೋದ್ಯೋಗಿಯಲ್ಲಿ ವಿಚಾರಿಸಿದ್ದು ಸಬಿತಾಳಿಗೆ ತಿಳಿದಾಗ ಅವಳ ಆತ್ಮಾಭಿಮಾನಕ್ಕೆ ಅವಮಾನವಾಗುತ್ತದೆ. ಆದರೆ ಆಕೆ ಗಂಡನಿಗೆ ಯಾವ ಸಮರ್ಥನೆಯನ್ನೂ ನೀಡಬಯಸದೆ ಅವನಾಗಿ ಸತ್ಯವನ್ನು ತಿಳಿದುಕೊಳ್ಳಲಿ ಎಂದು ಸುಮ್ಮನಿದ್ದುಬಿಡುತ್ತಾಳೆ. ಅವನು ಕಾಯಿಲೆ ಬಿದ್ದಾಗ ಕೊಂಚವೂ ಬೇಸರಿಸದೆ ಶುಶ್ರೂಷೆಯನ್ನೂ ಮಾಡುತ್ತಾಳೆ. ಸ್ವಲ್ಪ ಸಮಯ ಗಂಡ-ಹೆಂಡಿರ ನಡುವೆ ಅತೃಪ್ತಿಯ ತೆರೆಯೊಂದು ಕಾಣಿಸಿಕೊಂಡರೂ ತಾಳ್ಮೆ, ಸೇವಾಪರತೆ ಮುಂತಾದ 'ತಿರುಗಿಬೀಳದೆ ಅನುಸರಿಸಿಕೊಂಡು ಹೋಗುವ' ಸ್ತ್ರೀಗುಣಗಳಿಂದ ರಶೀದನ ಅನುಮಾನ ನಿವಾರಣೆಯಾಗಿ ಸಬಿತಾ ವೈವಾಹಿಕ ಬದುಕಿನಲ್ಲಿ ಗೆಲ್ಲುವುದನ್ನು ಗಮನಿಸಬಹುದು.

ಕೆ.ಪಿ. ಸುಧೀರಾ ಅವರು ಬರೆದಿರುವ 'ಮರಳಿನ ಅರಮನೆಯ ರಾಣಿ' ಕತೆಯ ನಾಯಕಿಯ ಪತಿ ಮದ್ಯಪಾನಿಯಾಗಿರಲಿಲ್ಲ. ಹೆಂಡತಿಯನ್ನು ಹೊಡೆಯುವ ದುಷ್ಟನೂ ಅಲ್ಲ. ಆದರೆ ಸಂಶಯ ಸ್ವಭಾವದವನಾಗಿದ್ದ. ತನ್ನ ಹೆಂಡತಿ ಕೆಲಸಕ್ಕೆ ಹೋಗುವುದು 'ಕಂಡವರನ್ನೆಲ್ಲ ವಶೀಕರಿಸುವ ಉದ್ದೇಶದಿಂದ' ಎಂದು ಸಂದೇಹಿಸುತ್ತಿದ್ದ. ವಿದ್ಯಾವಂತನ ಈ ಸಂಸ್ಕಾರಶೂನ್ಯತೆಯಿಂದ ನಿರಂತರ ತನ್ನ ಆತ್ಮಸತ್ವಕ್ಕೆ ಹಾನಿಯುಂಟಾದಾಗ 'ಒಂಟಿತನದ ಅಸ್ವಸ್ಥತೆಯಲ್ಲೂ ಸ್ವಸ್ಥತೆಯಿದೆ' ಎಂದು ಮನಗಂಡ ನಾಯಕಿ 'ಕೊಡವಿದಷ್ಟೂ ಬಿಗಿಯಾಗುವ ದಾಂಪತ್ಯದ ಗಂಟನ್ನು' ಕಿತ್ತೊಗೆದು ಸ್ವತಂತ್ರಳಾಗಲು ನಿರ್ಧರಿಸುತ್ತಾಳೆ.

ನಿಷ್ಕಲಂಕ ಸ್ನೇಹ ಸ್ವಭಾವದ ಚುರುಕು ಹುಡುಗಿಯಾಗಿದ್ದ ಮಿನಿ ಎಂಬ ಹೆಣ್ಣುಮಗಳ ವೈವಾಹಿಕ ಬದುಕು ಪತಿಯ ಸಂಶಯ ಸ್ವಭಾವದಿಂದಾಗಿ ಛಿದ್ರವಾಗುವುದನ್ನು ಲಲಿತಾಂಬಿಕ ಅಂತರ್ಜನಂ ಅವರು ಬರೆದಿರುವ 'ಕಂಬನಿಯ ನಗುಮೊಗ' ಕತೆಯಲ್ಲಿ ಕಾಣಬಹುದು. 'ಪರಮ ಪತಿವ್ರತೆಯಾಗಿದ್ದರೂ ಮಾನಕ್ಕಾಗಿ ಸತ್ತುಹೋದ' ಮಿನಿಯಂಥಾ ಸ್ತ್ರೀಯರು ನೋವು, ಅವಮಾನಗಳನ್ನು ನುಂಗಿಕೊಂಡು ನೆಮ್ಮದಿಯ ಮುಖವಾಡ ಧರಿಸಿ 'ಕಂಬನಿಯ ನಗುಮೊಗದಂತೆ' ಬದುಕಬೇಕಾಗುವ ದುರಂತವನ್ನು ಕತೆ ಚಿತ್ರಿಸುತ್ತದೆ.

ಕಮಲಾದಾಸ್ ಅವರು ಬರೆದ 'ಹೀಗೊಂದು ಮಧುಚಂದ್ರ' ಎಂಬ ಕತೆಯಲ್ಲಿ ಹದಿನೈದು ವರ್ಷಗಳ ಬಳಿಕ ಮತ್ತೆ ಹೊಸ ಹುರುಪಿನಿಂದ ಸಂಬಂಧವನ್ನು ಶುರುಮಾಡುವ ಸುಳ್ಳು ಭರವಸೆಯೊಂದಿಗೆ ಮಧುಚಂದ್ರಕ್ಕೆ ಹೊರಡುವ ದಂಪತಿಗಳಿಬ್ಬರೂ ದಾಂಪತ್ಯದ ಚೌಕಟ್ಟಿಗೆ ನಿಷ್ಠರಾಗಿಲ್ಲ. ಅನೈತಿಕ ಸಂಬಂಧವೇ ಅವರ ದಾಂಪತ್ಯದ ವಿಘಟನೆಗೂ ಪತ್ನಿಯ ಸಾವಿಗೂ ಕಾರಣವಾಗುತ್ತದೆ. ಮಧುಚಂದ್ರದ ಪ್ರಯಾಣದ ದಾರಿಯುದ್ದಕ್ಕೂ ಪತ್ನಿ ತಮ್ಮ ನಡುವಿನ ಪ್ರೀತಿಯಿಲ್ಲದ ರಾತ್ರಿಗಳನ್ನು ನೆನಪಿಸಿಕೊಳ್ಳುತ್ತಾಳೆ. ಬದುಕನ್ನು 'ಚಿಂದಿಬಟ್ಟೆಯಂತೆ ವಿರೂಪವಾಗಿಸಿದ' ಗಂಡನನ್ನು ದ್ವೇಷಿಸುತ್ತಾಳೆ. ಆದರೆ ಅವಳಿಗೆ ಪತಿಯನ್ನು ಕೊಲ್ಲಿಸುವ ಇರಾದೆಯಿಲ್ಲ. ಪತಿ ಅವಳನ್ನು ಕೊಲ್ಲುವುದಕ್ಕಾಗಿ ಹಂತಕನಿಗೆ ಸುಪಾರಿ ನೀಡಿರುತ್ತಾನೆ. ತನ್ನ ಕೊಲೆಯ ಕಾರಣವೇ ತಿಳಿಯದೆ, ಪಕ್ಕದಲ್ಲೇ ಇರುವ ಪತಿ ತನ್ನನ್ನು ರಕ್ಷಿಸಲಿಲ್ಲವೇಕೆ ಎಂಬ ಪ್ರಶ್ನೆಗೆ ಉತ್ತರವೂ ಸಿಗದ ಅಚ್ಚರಿಯಲ್ಲೇ ಆಕೆ ಸಾಯುತ್ತಾಳೆ. ದಾಂಪತ್ಯವನ್ನು ಗಂಡು ಹೆಣ್ಣಿನ ನಡುವಿನ ಒತ್ತಾಯದ ಸಾಂಗತ್ಯವಾಗಿಸಿರುವ ನಮ್ಮ ಸಾಮಾಜಿಕ ವ್ಯವಸ್ಥೆ ಹೆಣ್ಣಿನ ಕನಸುಗಳನ್ನು ನಾಶಪಡಿಸುವುದನ್ನು, ಸಮರ್ಥನೆಯ ಅವಕಾಶವನ್ನೇ ಕೊಡದೆ ಆಕೆಯ ಬದುಕುವ ಹಕ್ಕನ್ನು ಕಸಿದುಕೊಳ್ಳುವುದನ್ನು ಮಲಯಾಳಂ ಕೃತಿಗಳು ಚರ್ಚಿಸಿವೆ.

ಕೃಷ್ಣನ್ ಕುಟ್ಟಿ ಅವರು ಬರೆದ 'ಕತ್ತಲಲ್ಲಿ ಪರಿಮಳ ಬೀರುವ ಮಲ್ಲಿಗೆ ಹೂ' ಕಥೆಯ ಗೌರಿಗೆ ಇಷ್ಟಪಟ್ಟವನನ್ನು ಮದುವೆಯಾಗುವುದು ಸಾಧ್ಯವಾಗಿಲ್ಲ. ಶ್ರೀಮಂತನಾದ ರವಿ ವರದಕ್ಷಿಣೆ ಬೇಡವೆಂದ ಕಾರಣಕ್ಕೆ ಗೌರಿಯ ಮನೆಯವರ ದೃಷ್ಟಿಯಲ್ಲಿ ಹೀರೋ ಆಗಿಬಿಟ್ಟ ಕಾರಣ ಅವಳ ಇಚ್ಛೆಯನ್ನು ಕೇಳದೆ ಮದುವೆ ಮಾಡಿಕೊಡಲಾಗಿದೆ. ಮೊದಲ ರಾತ್ರಿಯಲ್ಲಿ ಗಂಡನಿಂದಲೇ ಬಲಾತ್ಕಾರದ ಅನುಭವ ಪಡೆದ ಗೌರಿಗೆ ಎಂದೂ ಅವನನ್ನು ಪ್ರೀತಿಸಲು ಸಾಧ್ಯವಾಗಲಿಲ್ಲ. ಶ್ರೀಮಂತನಾದ ಪತಿಯ ಮದ್ಯಪಾನ, ವ್ಯಭಿಚಾರ, ಒರಟು ವರ್ತನೆ ಎಲ್ಲವನ್ನೂ ನುಂಗಿ ಅವನೊಂದಿಗೆ ಯಾಂತ್ರಿಕವಾಗಿ ಸಂಸಾರ ನಡೆಸಿದ್ದಾಳೆ. ಕ್ಯಾನ್ಸರ್‌ನಿಂದಾಗಿ ಅವಳ ಒಂದು ಸ್ತನವನ್ನು ಕತ್ತರಿಸಿ ತೆಗೆದ ಬಳಿಕ ಅನುಕಂಪ ತೋರುವ ಬದಲಿಗೆ 'ಒತ್ತೆ ಮೊಲೆಯೋಳು' ಎಂದು ಗಂಡ ತಾತ್ಸಾರ ತೋರಿದಾಗ ಮಾತ್ರ ಅವಮಾನ, ನೋವು ಸಹಿಸಲಾಗದೆ ಮಗುವಿನೊಂದಿಗೆ ತವರಿಗೆ ಮರಳುತ್ತಾಳೆ. ಮುಂದೆ ಗಂಡನಿಗೆ ಅಸೌಖ್ಯವಾಗಿ ತೀರಿಕೊಂಡು ಮೃತದೇಹವನ್ನು ಊರಿಗೆ ತಂದಾಗಲೂ ಗೌರಿ ಅಳುವುದಿಲ್ಲ. ತನ್ನನ್ನು 'ಬಲಾತ್ಕರಿಸಿ ಸುಖ ಪಡುವ, ಕಾಯಿಲೆ ತಂದಿಟ್ಟ ವಿರೂಪದ ಹೆಸರಿನಲ್ಲಿ ಅವಮಾನಿಸಿ ನೋಯಿಸುವ' ವ್ಯಕ್ತಿಯನ್ನು ಪ್ರೀತಿಸುವುದು ಹೇಗೆ ಎಂಬುದು ಅವಳ ಸಮರ್ಥನೆ. ಗೌರಿ ಸಾಯುವ ಹೊತ್ತಿನಲ್ಲಿ ತಾನು ಈ ಹಿಂದೆ ಬಯಸಿದ್ದ ಗೋಪುವನ್ನು ಕಂಡು, ಇದುವರೆಗೂ ಬಚ್ಚಿಟ್ಟಿದ್ದ ತನ್ನ ಪ್ರೇಮವನ್ನು ನಿವೇದಿಸಿಕೊಂಡು, ಅವನ ಕೈಗಳಲ್ಲಿ ತನ್ನ ಕೈಗಳನ್ನಿಟ್ಟು ಹಗುರಾದ ಮನಸ್ಸಿನಿಂದ ಪ್ರಾಣಬಿಡುವುದನ್ನು ಗಮನಿಸಬಹುದು. ತಾಳಿ ಕಟ್ಟಿದವನು ಎಂಬ ಒಂದೇ ಕಾರಣಕ್ಕೆ ಗಂಡನ ಎಲ್ಲ ಅಪಸವ್ಯಗಳನ್ನು ಸಹಿಸಲು ಸಿದ್ಧಳಿಲ್ಲದ,

ಅವನ ಸಾವಿನಿಂದಲೂ ವಿಚಲಿತಳಾಗದ ಹೆಣ್ಣು ತನಗಿಷ್ಟವಾದವನ ಸಾಂಗತ್ಯವನ್ನು ಹೊಂದಲು ಬದುಕಿನ ಕೊನೆಯ ಕ್ಷಣದವರೆಗೂ ಬಯಸುತ್ತಾಳೆ.

ಪತಿಯ ಸಂಶಯಸ್ವಭಾವವು ದಾಂಪತ್ಯದ ವಿಘಟನೆಗೆ ಕಾರಣವಾಗುವಂತೆ ಪತ್ನಿಯ ಸಂಶಯಸ್ವಭಾವವೂ ಗಂಡಹೆಂಡಿರ ನಡುವಿನ ಸಂಬಂಧವು ಸೊರಗುವುದಕ್ಕೆ ಕಾರಣವಾಗಬಹುದು. ಅಂಥದೊಂದು ಚಿತ್ರಣವು ಕಮಲಾದಾಸ್ ಅವರು ಬರೆದ 'ಗಾಡಿಯೆತ್ತುಗಳು' ಕಥೆಯಲ್ಲಿದೆ. ಖ್ಯಾತ ವೈದ್ಯ ಸೂರ್ಯನಾರಾಯಣರಾವ್ ಅವರ ಪತ್ನಿ ಕಾಮೇಶ್ವರಿ ದೇವಿ ಆಧುನಿಕ ಶಿಕ್ಷಣ ಪಡೆದ ಶ್ರೀಮಂತ ಹಿನ್ನೆಲೆಯ, ಕಾಮಾಸಕ್ತಿಯಿಲ್ಲದ ಮಹಿಳೆ. ಆದರೆ ಪತಿಯೊಂದಿಗೆ ವ್ಯವಹರಿಸುವ ಎಲ್ಲ ಸ್ತ್ರೀಯರನ್ನೂ ಸಂದೇಹಿಸುತ್ತಾಳೆ. ಮನೆಕೆಲಸದ ಹೆಂಗಸರು ವಯಸ್ಸು ದಾಟಿದವರೂ, ಅನಾಕರ್ಷಕ ರೂಪಿನವರೂ ಆಗಿರುವಂತೆ ನೋಡಿಕೊಳ್ಳುತ್ತಾಳೆ. ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಬೆಳೆದು ಪ್ರಸ್ತುತ ಪೂರ್ಣಾವಧಿ ಗೃಹಿಣಿಯಾಗಿದ್ದು ಮನೆಯ ಹೊರಗಿನ ವ್ಯವಹಾರಗಳ ಪರಿಚಯವೇ ಇಲ್ಲದಿರುವ ಕಾಮೇಶ್ವರಿಗೆ ಪತಿಯ ಹೊರಸಂಬಂಧಗಳ ಬಗ್ಗೆ ಅನುಮಾನ ಮತ್ತು ಅಸಹನೆಯಿರುವುದು ಸಹಜವೇ ಆಗಿದೆ. ಸದಾ ಆಸ್ಪತ್ರೆಯ ಕೆಲಸಗಳ ಬಗ್ಗೆಯೆ ಯೋಚಿಸುತ್ತ ಸಂಸಾರದ ಬಗ್ಗೆ ನಿರ್ಲಿಪ್ತನಾಗಿರುವ ಪತಿ ಪರಿಶುದ್ಧನಲ್ಲ ಎಂದು ತೀರ್ಮಾನಿಸಿ ಪತಿಯೊಂದಿಗೆ ದಾಂಪತ್ಯ ಸಂಬಂಧವನ್ನು ಆಕೆ ಎಂದೋ ಕಡಿದುಕೊಂಡಿದ್ದಾಳೆ. ತನ್ನಿಂದ ದೈಹಿಕ ಸುಖ ಲಭಿಸುತ್ತಿಲ್ಲವಾಗಿ ಪತಿಯು ಅನ್ಯ ಸ್ತ್ರೀಯರೊಂದಿಗೆ ಲೈಂಗಿಕ ಸಂಬಂಧ ಹೊಂದಿರಲೇಬೇಕು ಎಂದು ಭಾವಿಸುತ್ತಾಳೆ. 'ನನಗೆ ನೀವು ಈಗಲೂ ಅಪರಿಚಿತರೇ. ಆಸ್ಪತ್ರೆಯೇ ನಿಮ್ಮ ನಿಜವಾದ ಪತ್ನಿ' ಎಂದು ಕಟಕಿಯಾಡುವ ಕಾಮೇಶ್ವರಿ, ಆಸ್ಪತ್ರೆಗೆ ಸಂಬಂಧಿಸಿದ ಆರೋಪದಲ್ಲಿ ಪತಿಯನ್ನು ಪೋಲೀಸರು ಅರೆಸ್ಟ್ ಮಾಡಿದ ಬಳಿಕ ಸಾರ್ವಜನಿಕವಾಗಿ ಪತಿಯೊಂದಿಗೆ ಕಾಣಿಸಿಕೊಳ್ಳುವುದಕ್ಕೂ ನಿರಾಕರಿಸುತ್ತಾಳೆ. ಇದು ಒಲ್ಲದ ಸಂಬಂಧವನ್ನು ನಿರಾಕರಿಸಲು ಸ್ತ್ರೀಯರು ಬಳಸುವ ಒಂದು ಸರಳವಾದ ವಿಧಾನವೂ ಹೌದು. ಹೀಗೆ ಪತಿಯ ಅಸ್ತಿತ್ವವನ್ನು ತಿರಸ್ಕರಿಸುವ ಶಕ್ತಿಯನ್ನು ಕಾಮೇಶ್ವರಿಗೆ ಕೊಟ್ಟದ್ದು ಅವಳ ತವರಿನ ಶ್ರೀಮಂತಿಕೆ ಮತ್ತು ಪತಿಯ ಸೌಮ್ಯಸ್ವಭಾವಗಳು ಎಂಬ ಅಂಶಗಳನ್ನು ಇಲ್ಲಿ ಗಮನಿಸಬೇಕು.

ದಾಂಪತ್ಯದ ಹಿಂಸೆಗಳಿಗೆ ಹೆಣ್ಣು ಕಂಡುಕೊಳ್ಳುವ ಪರಿಹಾರಾತ್ಮಕ ವರ್ತನೆಗಳು ಅಧ್ಯಯನಯೋಗ್ಯವಾಗಿವೆ. 'ಗಾಡಿಯೆತ್ತುಗಳು' ಕತೆಯ ಮೆನೋನ್ ಕೆಲಸದ ಹೆಣ್ಣುಗಳನ್ನು ಬಳಸಿಕೊಳ್ಳುವುದು ತಿಳಿದಿದ್ದರೂ ಅವನ ಹೆಂಡತಿ ಏನೊಂದೂ ತಿಳಿಯದವಳಂತೆ ಅನುಸರಿಸಿಕೊಂಡು ಹೋಗುವ 'ನಿಜವಾದ ಧರ್ಮಪತ್ನಿ' ಯಾಗಿದ್ದಾಳೆ. ಆದರೆ ಸ್ವತಃ ಲಂಪಟನಾದ ಮೆನೋನ್‌ಗೆ ಪತ್ನಿಯ ನಿಷ್ಠೆಯ ಬಗ್ಗೆ ಶಂಕೆ. ಅವಳ ಕೆನ್ನೆಯಲ್ಲಿ ಗಂಡಸರು ಶೇವಿಂಗ್ ಬಳಿಕ ಹಚ್ಚುವ ಲೋಷನ್ ಸುಗಂಧದ ಅನುಭವ ಅವನಿಗಾಗುತ್ತದೆ. ಯೌವನ ಇಳಿದ ಬಳಿಕ ಹೆಣ್ಣಿನಲ್ಲಿ ಲೈಂಗಿಕ ಬಯಕೆಗಳು ಇರುವುದಿಲ್ಲ,

ಇರಬಾರದು ಎಂದು ತೀರ್ಮಾನಿಸುವ ಪುರುಷಪರ ನಿಲುವು ಅವನದು. 'ದೊಡ್ಡ ಮಕ್ಕಳ ತಾಯಾಗಿ ಮೊಲೆಗಳ ಬಿರುಸು ಕಳಕೊಂಡಿದ್ದರೂ ಈಕೆ ಅಭಿಸಾರಿಕೆಯಾಗಿ ಬದಲಾಗುತ್ತಿರುವ' ಸಂದೇಹದಿಂದ ಕುಡಿದು ಬಂದು ನಡುರಾತ್ರಿಯಲ್ಲಿ ಹೆಂಡತಿಗೆ ಒದೆಯುತ್ತಾನೆ. ಇನ್ನು ಸಹಿಸುವುದು ಸಾಧ್ಯವಿಲ್ಲ ಎಂದಾದಾಗ ಅವನ ಪತ್ನಿ ಈ ನರಕದಿಂದ ಪಾರಾಗುವ ಕೊನೆಯ ದಾರಿ ಹುಡುಕುತ್ತಾಳೆ. ಈ ಹಿಂದೆ ತನ್ನನ್ನು ಬಯಸಿದ್ದ ಮಾವನ ಮಗನಿಗೆ ಪತ್ರ ಬರೆದು ಕರೆಸಿಕೊಳ್ಳುತ್ತಾಳೆ. ಮತ್ತು ಅವನು ಬಂದ ರಾತ್ರಿಯೇ 'ಸಂಶಯಾಸ್ಪದವಾಗಿ ಸತ್ತ' ಪತಿಯ ಕ್ರಿಯೆಗಳನ್ನು ಮುಗಿಸಿ ತನ್ನ ಮಕ್ಕಳನ್ನು ಕರೆದುಕೊಂಡು ಮಾವನ ಮಗನೊಂದಿಗೆ ಊರಿಗೆ ಹೊರಡುತ್ತಾಳೆ.

ಯಾವ ಕಾಲಕ್ಕೂ ಗಂಡನ ಸಂಶಯ ಮತ್ತು ಹಿಂಸೆಯಿಂದ ಹೆಣ್ಣಿಗೆ ಬಿಡುಗಡೆಯಿಲ್ಲ ಎಂಬ ಅಂಶವನ್ನು ವಿಷಾದದಿಂದ ಕಾಣಿಸುವ ಮಲಯಾಳಂ ಕೃತಿಗಳು ಮದುವೆಯಾಗುವುದು ಅಥವಾ ಆಗದಿರುವುದು, ಪತಿಯೊಂದಿಗೆ ಬಾಳುವುದು ಅಥವಾ ಅವನನ್ನು ತ್ಯಜಿಸುವುದು... ಇಂಥ ಮುಕ್ತ ಆಯ್ಕೆಗಳು ಹೆಣ್ಣಿಗೆ ಬೇಕಾಗಿವೆ ಎಂದು ಪ್ರತಿಪಾದಿಸಿವೆ. ಸಂಶಯ, ಅವಮಾನಗಳಿಂದ ನೋಯಿಸುವ, ನಂಬಿಕೆಗಳಿಗೆ ದ್ರೋಹ ಬಗೆಯುವ ಮತ್ತು ತಮ್ಮ ಅಸ್ತಿತ್ವವನ್ನೆ ಇಲ್ಲವಾಗಿಸುವ ಒಲ್ಲದ ದಾಂಪತ್ಯದಿಂದ ಸ್ತ್ರೀಯರು ಬಿಡುಗಡೆ ಪಡೆದು ನಿರಾಳವಾಗಿ ಬದುಕಬಹುದಾದ ಸಾಧ್ಯತೆಗಳನ್ನು ತೋರಿವೆ. ಪರಸ್ಪರರಲ್ಲಿ ಒಲುಮೆ, ವಿಶ್ವಾಸ ಹೊಂದಿ ಬಾಳಲಾಗದ ಅಸಹನೀಯ ವೈವಾಹಿಕ ಸಂಬಂಧದಲ್ಲಿ ಬಲವಂತವಾಗಿ ಉಳಿದುಕೊಂಡು ಆತ್ಮವಂಚನೆ ಮಾಡಿಕೊಳ್ಳುವುದಕ್ಕಿಂತಲೂ ಅದರಿಂದ ಬಿಡಿಸಿಕೊಳ್ಳುವುದೇ ಸೂಕ್ತವೆಂಬಂತೆ ಕಾಣಿಸಿವೆ.

ವೈಧವ್ಯ

ಕೇರಳದ ಸಾಮಾಜಿಕ ವ್ಯವಸ್ಥೆಯಲ್ಲಿ ವೈಧವ್ಯದ ಬಗ್ಗೆ ವಿಶೇಷ ನಂಬಿಕೆ, ಆಚರಣೆ ಅಥವಾ ನಿರ್ಬಂಧಗಳಿರುವಂತೆ ಕಂಡುಬರುವುದಿಲ್ಲ. 'ಬಲೆ' ಕೃತಿಯಲ್ಲಿ ಪತಿ ಸತ್ತ ಕಾರಣಕ್ಕೆ ಹೆಣ್ಣಿನ ಮುತ್ತೈದೆತನದ ಲಕ್ಷಣಗಳನ್ನು ಕಳಚುವ ಚಿತ್ರಣವೊಂದಿದೆ. 'ನೀರ್ ಮಾದಳ ಹೂ ಬಿಟ್ಟ ಕಾಲ' ಕೃತಿಯಲ್ಲಿ ಆಮಿಯ ಬಾಲ್ಯದ ನೆನಪುಗಳಲ್ಲಿ ಅಮ್ಮಿಯಾರ್ ಎಂಬ ಕೆಂಪು ಸೀರೆಯ ಬ್ರಾಹ್ಮಣ ಹೆಂಗಸು ಪಟ್ಟೆ ಸೀರೆಗೆ ಆಸೆಪಟ್ಟು ಅದನ್ನು ಕೊಳ್ಳುವುದಕ್ಕೆಂದು ಆಮಿಯ ಅಮ್ಮನಲ್ಲಿ ಹಣ ಕೇಳುವ, ಆಕೆ ಕೊಟ್ಟ ಹಣ ಪಟ್ಟೆಸೀರೆ ಕೊಳ್ಳಲು ಸಾಲದೆಂದು ಬಿಟ್ಟು ಹೋಗುವ ಘಟನೆಯ ಒಂದು ಸಾಂದರ್ಭಿಕ ಉಲ್ಲೇಖವಿದೆ.

ಉಳಿದಂತೆ ಇತರ ಕೃತಿಗಳಲ್ಲಿ ವಿಧವೆಯರ ಮತ್ತು ಮುತ್ತೈದೆಯರ ಬದುಕಲ್ಲಿ ದೊಡ್ಡ ವ್ಯತ್ಯಾಸ ಕಾಣುವುದಿಲ್ಲ. ಕನ್ನಡ ಸಾಹಿತ್ಯ ಸೇರಿದಂತೆ ಭಾರತೀಯ ಸಾಹಿತ್ಯದಲ್ಲಿ ಬಹಳವಾಗಿ ಚರ್ಚಿಸಲ್ಪಟ್ಟಿರುವ

ಬಾಲವಿಧವೆಯರ ಸಮಸ್ಯೆಗಳು, ವಿಧವೆಯರ ಕುರಿತಾದ ಸಾಮಾಜಿಕ ಮತ್ತು ಧಾರ್ಮಿಕ ನಿಷೇಧಗಳು ಮಲಯಾಳಂ ಸಾಹಿತ್ಯದಲ್ಲಿ ಪ್ರಸ್ತಾಪಿಸಲ್ಪಟ್ಟಿಲ್ಲ. ಪ್ರಚಲಿತವಿದ್ದ ಸಂಬಂಧಂ ವ್ಯವಸ್ಥೆಯಲ್ಲಿ ಮರುಮದುವೆಗೆ ಮುಕ್ತ ಅವಕಾಶವಿದ್ದುದು ಇದಕ್ಕೆ ಕಾರಣವಾಗಿರಬಹುದು.

'ಬಲೆ' ಕಾದಂಬರಿಯ ಆಯಿಶುಮ್ಮ ವಿಧವೆಯಾದ ಸಂದರ್ಭದಲ್ಲಿ ಅವಳ ಮಗನ ಮನಸ್ಸಿನಲ್ಲಿ ಮೂಡುವ ಯೋಚನೆಗಳ ಮೂಲಕ ಕೇರಳದ ಮುಸ್ಲಿಂ ಮಹಿಳೆಯರ ಅವಲಂಬಿತ ಪರಿಸ್ಥಿತಿ ವ್ಯಕ್ತವಾಗಿದೆ. ಆಯಿಶುಮ್ಮನ ಕುಟುಂಬವನ್ನು ರಕ್ಷಿಸುವುದಕ್ಕಾಗಿಯೆ ಕೋಯಿಕ್ಕುಟ್ಟಿ ಅವಳನ್ನು ಮದುವೆ ಮಾಡಿಕೊಂಡುದಾಗಿತ್ತು. ಮದುವೆಯಾದ ದಿನದಿಂದಲೂ 'ಉಮ್ಮಾನ ಬದುಕೆಲ್ಲವೂ ಬಾಪ್ಪಾ ಎಂಬ ಬೊಟ್ಟಿನ ಸುತ್ತಲೂ ಸುತ್ತುವುದರಲ್ಲೇ ಕಳೆದು ಹೋಗುತ್ತಿತ್ತು' ಎಂದು ಮಗ ನೆನಪಿಸಿಕೊಳ್ಳುವಲ್ಲಿ ಪತಿಯ ಇಚ್ಛೆಯನ್ನು ಅನುಸರಿಸುವುದಲ್ಲದೆ ಬೇರೊಂದು ದಾರಿಯ ಕಲ್ಪನೆಯಾಗಲಿ ಸ್ವಾತಂತ್ರ್ಯವಾಗಲಿ ಆಯಿಶುಮ್ಮನಿಗೆ ಇರಲಿಲ್ಲ ಎಂಬ ಅಂಶವು ವಿದಿತವಾಗುತ್ತದೆ.

ಪತಿ ತೀರಿಕೊಂಡ ತಕ್ಷಣ ಆಯಿಶುಮ್ಮರನ್ನು ಹೆಂಗಸರು ಒಳಗೆ ಕರೆದುಕೊಂಡು ಹೋಗುತ್ತಾರೆ. ಇನ್ನು ಆಕೆ ಅನ್ಯ ಪುರುಷರ ಕಣ್ಣಿಗೆ ಬೀಳದಂತೆ ನಾಲ್ಕು ತಿಂಗಳು ಮತ್ತು ಹತ್ತು ದಿವಸ ಬಿಳಿ ಬಟ್ಟೆ ಉಟ್ಟು ದೇವರನ್ನು ನೆನೆಯುತ್ತಾ ಒಳಗೆ ಕುಳಿತುಕೊಳ್ಳಬೇಕು. ಅವರ ಕಿವಿಯ 'ಆಲಿಕ್ಕತ್ತು'ಗಳನ್ನು, 'ಮಣಿಕ್ಕಾದಿಲ' ಮತ್ತು 'ಕೊಂಬನ್'ಗಳನ್ನು ಕೂಡಾ ಮಹಿಳೆಯರು ತಕ್ಷಣವೇ ಕಳಚುತ್ತಾರೆ. ಭಾರತದ ಬಹುತೇಕ ಎಲ್ಲ ಸಮುದಾಯಗಳಲ್ಲಿ ಇರುವಂತೆ, ಮಹಿಳೆಯೊಬ್ಬಳನ್ನು 'ಸುಮಂಗಲಿ'ಯ ಸ್ಥಾನದಿಂದ 'ವೈಧವ್ಯ'ದ ಸ್ಥಿತಿಗೆ ಭೌತಿಕವಾಗಿ ದಾಟಿಸುವ ಈ ಪ್ರಕ್ರಿಯೆಯನ್ನು ಇಲ್ಲೂ ಹೆಂಗಸರೇ ನಿರ್ವಹಿಸುವುದು ಗಮನಾರ್ಹವಾಗಿದೆ.

೨.೨.೪. ತಾಯ್ತನದ ವಿಭಿನ್ನ ಮಾದರಿಗಳು

ಭಾರತೀಯ ಸಮಾಜವು ಸ್ತ್ರೀಯನ್ನು ತಾಯಿ ಎಂದೇ ಗುರುತಿಸಿದೆ. ಮದುವೆಯಾದವಳು ತಾಯಿಯಾದಾಗಷ್ಟೆ ಅವಳ ಬದುಕು ಪರಿಪೂರ್ಣ ಎನ್ನಲಾಗುತ್ತದೆ. ಬಹುಪಾಲು ಸ್ತ್ರೀಯರು ಈ ಪಾರಂಪರಿಕ ಗ್ರಹಿಕೆಯನ್ನು ಒಪ್ಪಿ ನಡೆದುಕೊಳ್ಳುತ್ತಾರೆ ಕೂಡ. ಸಮಾಜದ ಭಯಕ್ಕಾಗಿ ಹೆತ್ತ ಮಗುವನ್ನು ತ್ಯಜಿಸಿದವರು, ತಾವು ಹೆರದ ಇತರರ ಮಕ್ಕಳಿಗೆ ಅಮ್ಮನಾಗಿ ವಾತ್ಸಲ್ಯದ ಹೊಳೆ ಹರಿಸುವವರು, ಪರಸ್ಪರ ಅನುರಾಗವಿಲ್ಲದೆ ಅರ್ಥ ಕಳೆದುಕೊಂಡಿರುವ ದಾಂಪತ್ಯದಲ್ಲಿ ನಿರಾಶರಾಗಿ ತಾಯಿಯಾಗಲು ನಿರಾಕರಿಸುವವರು, ಪ್ರೀತಿಯಿಲ್ಲದ ಪತಿಯ ಪ್ರತಿರೂಪವನ್ನು ಹೊರಲು ಇಷ್ಟವಿಲ್ಲದವರು... ಹೀಗೆ ಹಲವು ಬಗೆಯ ತಾಯ್ತನದ ಮಾದರಿಗಳನ್ನು ಮಲಯಾಳಂ ಕಥೆ ಕಾದಂಬರಿಗಳಲ್ಲಿ ಕಾಣಬಹುದು. ಅಪ್ಪನ ಹೆಸರಿಲ್ಲದೆ ತನ್ನದು ಮಾತ್ರ ಆಗಿರುವ ಮಗುವನ್ನು ಹೆತ್ತು ಬೆಳೆಸಬಯಸುವ, ಹೆತ್ತ ಮಗು

ಪತಿಯಂತೆಯೆ ಇರುವ ಕಾರಣಕ್ಕೆ ಅದನ್ನು ಮುದ್ದಿಸಲು ಅಸಹ್ಯಿಸಿಕೊಳ್ಳುವ, ಅಧಿಕೃತವಾದ ಒಬ್ಬ ಪತಿಯನ್ನು ಹೊಂದಿಲ್ಲದವಳು ಬಸುರಾಗುವಂತಿಲ್ಲವೆಂಬ ಸಾಮಾಜಿಕ ನಿರ್ಬಂಧಕ್ಕೆ ಸಡ್ಡು ಹೊಡೆದು ಗರ್ಭಧರಿಸಿ ಅಸಹಜವಾಗಿ ಹೆತ್ತು ಸಮಾಜವನ್ನೇ ದಂಗುಬಡಿಸುವ ವಿಶಿಷ್ಟವಾದ ಸ್ತ್ರೀ ಮಾದರಿಗಳನ್ನೂ ಗುರುತಿಸಬಹುದು.

ಮಮತೆಯ ಮಾತೆ

ಹೆಣ್ಣಿನ ಮಟ್ಟಿಗೆ ಪತಿನಿಷ್ಠೆಗೆ ಇಲ್ಲದ ಶಕ್ತಿ ಮಾತೃವಾತ್ಸಲ್ಯಕ್ಕಿದೆ ಎಂಬುದನ್ನು ಪ್ರತಿಪಾದಿಸುವ 'ರಾತ್ರಿಯಲ್ಲಿ' ಎಂಬ ಕತೆಯಲ್ಲಿ ಕಮಲಾದಾಸ್ ಅವರು ಪ್ರಣಯ ಮತ್ತು ತಾಯ್ತನಗಳ ನಡುವಿನ ಸಂಘರ್ಷವನ್ನು ನಿರೂಪಿಸಿದ್ದಾರೆ. 'ಗಾಢವಾಗಿ ಪ್ರೀತಿಸಲ್ಪಡುವ' ಹಂಬಲದಿಂದ ಪರಪುರುಷನ ಸಂಗದಲ್ಲಿರುವ ಸ್ತ್ರೀಯೊಬ್ಬಳ ತಾಕಲಾಟ ಈ ಕತೆಯಲ್ಲಿದೆ. ಮದುವೆಯಾಗಿ ಮೂರು ವರ್ಷ ಕಳೆದ ಕೂಡಲೇ ಅವಳ ಗಂಡ ಪೂರ್ಣವಾಗಿ ಬದಲಾಗಿದ್ದಾನೆ. ಅವನಿಗೆ ಹೆಂಡತಿಯನ್ನು ಪ್ರೀತಿಸಲು ತಿಳಿಯದು. ಅವಳು ಯಾವ ಸೀರೆ ಉಟ್ಟರೂ ಆತ ಗಮನಿಸುತ್ತಿಲ್ಲ. ಕೆಲಸ ಮುಗಿಸಿ ಮನೆಗೆ ಬಂದ ಕೂಡಲೆ ಪುಸ್ತಕದ ಹುಳುವಾಗಿಬಿಡುತ್ತಿದ್ದ ಆ ಮನುಷ್ಯ ತನ್ನ ಕಾಮವಾಂಛೆಯನ್ನು ಪೂರೈಸುತ್ತಿಲ್ಲ; ಪೂರೈಸುವ ವಿಶ್ವಾಸವೂ ಇಲ್ಲ ಎಂಬುದು ಖಚಿತವಾಗಿ ಸುಮತಿ ವೈವಾಹಿಕ ಬದುಕಿನ ಮೇಲೆ ಜಿಗುಪ್ಸೆಗೊಳ್ಳುತ್ತಾಳೆ. 'ಮುದ್ದು ಮಾಡದ, ಅರಸಿಕ'ನಾದ ಪತಿಯನ್ನು ಗುಲಾಮಳಂತೆ ಅನುಸರಿಸುವುದು ಅಸಾಧ್ಯವೆನಿಸಿದಾಗ ಅವಳಿಗೊಂದು ವಿಷಯ ಹೊಳೆಯಿತು: 'ಅನುರಾಗ ಮತ್ತು ವೈವಾಹಿಕ ಬದುಕನ್ನು ಬೇರೆಬೇರೆಯಾಗಿ ಕಾಣಬೇಕು.' ಹಾಗೆ ಅವಳ ಬದುಕಿಗೆ ರಾಜ ಎಂಬ ಪರಪುರುಷ ಪ್ರಿಯಕರನಾಗಿ ಬರುವಂತಾಗಿದೆ.

ಕೇವಲ ಪ್ರೇಮಕ್ಕಾಗಿ ಬಾಹ್ಯಸಂಬಂಧ ಬೆಳೆಸಿರುವ ಸುಮತಿಗೆ ತಾನು ಮಾಡುತ್ತಿರುವುದು ತಪ್ಪೆಂದು ತಿಳಿದಿದೆ. ಆದರೆ ಪತಿಗೆ ದ್ರೋಹ ಮಾಡುತ್ತಿದ್ದೇನೆ ಎಂಬಂಥ ಅಳುಕಿಲ್ಲ. ಗಂಡನಿಗೆ ಅವಳು ಏನೂ ಕೊರತೆ ಮಾಡಿಲ್ಲ. ನೋವು ಕೊಟ್ಟಿಲ್ಲ. 'ಆತ ಎಲ್ಲ ವಿಷಯಗಳಲ್ಲೂ ಸಂತೃಪ್ತ.' ಅವಳ ಪ್ರೇಮ ಸಂಬಂಧ ಗಂಡನಿಗೆ ತಿಳಿದಿಲ್ಲ. 'ಗೊತ್ತಿಲ್ಲದೆ ಇರುವುದು ಅವನನ್ನು ಹೇಗೆ ನೋಯಿಸಬಲ್ಲುದು?' ಎಂದು ತರ್ಕಿಸುತ್ತಾಳೆ. ಅಲ್ಲದೆ ಅವಳು 'ಸೀತೆಯಾಗಲಿ, ಸತಿಯಾಗಲಿ ಆಗಿರಲಿಲ್ಲ' ವಾದ ಕಾರಣ ಪತಿವ್ರತೆಯ ಸೋಗಿನಲ್ಲಿ ಬದುಕಬೇಕಾದ ಅನಿವಾರ್ಯತೆಯೂ ಇಲ್ಲ. 'ತಾನು ತಪ್ಪಾದ ದಾರಿಯಲ್ಲಿ ಹೋಗಿದ್ದೇನೆ ನಿಜ. ಆದರೆ ಸರಿಯಾದ ದಾರಿಯ ಪಕ್ಕದಲ್ಲೇ ಬೇರೆ ದಾರಿಗಳು ಏಕಿರುತ್ತವೆ?' ಎಂಬ ವಿಶಿಷ್ಟವಾದ ಪ್ರಶ್ನೆಯೊಂದು ಸುಮತಿಯನ್ನು ಕಾಡಿದೆ. ಆಕೆ ಉದ್ದೇಶಪೂರ್ವಕವಾಗಿ ವಿವಾಹೇತರ ಸಂಬಂಧದಲ್ಲಿ ತೊಡಗಿಲ್ಲ. ಪರಿಸ್ಥಿತಿಯೆ ಅವಳನ್ನು ನಡೆಸಿದೆ.

ದಿನದಿನಕ್ಕೂ ಗಾಢವಾಗುತ್ತಿರುವ ಪ್ರೀತಿಯನ್ನು ಕೊಂದುಬಿಡೋಣವೆಂದೂ ಕೆಲವೊಮ್ಮೆ ಸುಮತಿಯ ಮನಸ್ಸಿಗೆ ಬಂದಿದೆ. ಆದರೆ ಬಹುವಾಗಿ ಪ್ರೀತಿಸುವ ರಾಜನ ಕಣ್ಣೀರು ತಡೆದಿದೆ. ಪತಿಯನ್ನು ಬಿಟ್ಟು ಪ್ರಿಯಕರನೊಂದಿಗೆ ಹೋಗಿಬಿಡುವ ವಿಚಾರವನ್ನೂ ಪರಿಶೀಲಿಸಿದ್ದಾಳೆ. ಆದರೆ 'ಗಂಡನ ಹೃದಯವನ್ನು ಛಿದ್ರಗೊಳಿಸಿ' ರಾಜನೊಂದಿಗೆ ಹೋಗಿಬಿಡಲು ಸುಮತಿಗೆ ಸಾಧ್ಯವಾಗುತ್ತಿಲ್ಲ. ಹಾಗೆ ಹೊರಟುಹೋದರೆ ಮಗುವಿಗೆ ತೊಂದರೆಯಾಗುತ್ತದೆ. ಗಂಡನ ಪರಿಸ್ಥಿತಿ ಕೆಡುತ್ತದೆ. ಒಬ್ಬರನ್ನು ನೋಯಿಸಿ ತನ್ನ ಸಂತೋಷವು ಸ್ಥಿರವಾಗಿರಲಾರದು ಎಂದು ಭಾವಿಸಿದ್ದಾಳೆ. ಹಾಗಾಗಿ, ಎಲ್ಲರ ಕ್ಷೇಮದ ದೃಷ್ಟಿಯಿಂದ ವಿವಾಹದ ಚೌಕಟ್ಟಿನ ಒಳಗೇ ಉಳಿದಿದ್ದಾಳೆ.

ಪ್ರಿಯಕರ ಸೀಟಿಯ ಸಂಕೇತದ ಮೂಲಕ ಉತ್ಕಟವಾಗಿ ಆಹ್ವಾನಿಸುತ್ತಿರುವ ರಾತ್ರಿಯಲ್ಲಿ ಸುಡುವ ಜ್ವರದಿಂದ ಮಲಗಿರುವ ಮಗುವಿನ ಬಗೆಗಿನ ವಾತ್ಸಲ್ಯವು ಸುಮತಿಯನ್ನು ತಡೆಯುತ್ತದೆ. ಮದುವೆಗೆ ಮೊದಲು ಶ್ರೀಕೃಷ್ಣನನ್ನು ತನ್ನವನು ಎಂಬ ಪ್ರೇಮಾತಿಶಯದ ಭಕ್ತಿಯೊಂದಿಗೆ ಆರಾಧಿಸುತ್ತಿದ್ದವಳು. ಮಗುವಿಗೆ ಹಿಡಿದಿರುವ ಜ್ವರ ಬಿಡದೆ ಏರುತ್ತಲೇ ಹೋದಾಗ 'ರಾಜನ ಪ್ರೀತಿ ಇಲ್ಲದೆಯೂ ಬದುಕಬಹುದು' ಎಂದು ನಿರ್ಧರಿಸಿ 'ಇವತ್ತು ಮಗುವಿನ ಜ್ವರ ಬಿಟ್ಟರೆ ಇನ್ನೆಂದೂ ಪ್ರಿಯಕರನನ್ನು ಸಂಧಿಸುವುದಿಲ್ಲ'ವೆಂದು ದೇವರಿಗೆ ವಚನ ಕೊಡುತ್ತಾಳೆ. ದೇವರು ಅವಳ ತಪ್ಪನ್ನು ಮನ್ನಿಸಿದ ಎಂಬಂತೆ ಮಗುವಿನ ಜ್ವರ ಬಿಡುತ್ತದೆ. ದೇವರಿಗೆ ಕೊಟ್ಟ ಮಾತಿನಂತೆ ಸುಮತಿ ಪ್ರಣಯಸಂಬಂಧವನ್ನು ಕಡಿದುಕೊಳ್ಳುತ್ತಾಳೆ. ಪ್ರೀತಿಯೆಂಬ ಉರಿವ ಪಂಜನ್ನು ಹೊತ್ತು ಓಡುವ ಸ್ಪರ್ಧೆಯಲ್ಲಿ ಇದುವರೆಗೂ ಓಡಿ ದಣಿದಿರುವುದರಿಂದ 'ಇನ್ನು ಈ ಪಂಜನ್ನು ಯಾರಿಗಾದರೂ ವರ್ಗಾಯಿಸಬೇಕು' ಎಂದು ನಿಶ್ಚಯಿಸಿ ಶುದ್ಧಮನಸ್ಕಳಾಗಿ ಮುಂದಕ್ಕೆ ಕೃಷ್ಣನನ್ನು ಪ್ರೇಮಿಸುತ್ತ ಬದುಕುವ ಸಂಕಲ್ಪ ಮಾಡುತ್ತಾಳೆ.

ಮನಸ್ಸಿನ ಸಂತೋಷಕ್ಕಾಗಿ ಪ್ರೇಮಸಂಬಂಧವೊಂದನ್ನು ಸ್ಥಾಪಿಸಿಕೊಂಡಿದ್ದ ಹೆಣ್ಣೊಬ್ಬಳು 'ಮಗುವಿಗಿಂತ ಪ್ರೇಮ ದೊಡ್ಡದಲ್ಲ' ಎಂದು ನಿರ್ಣಯಿಸಿ ದಾಂಪತ್ಯಕ್ಕೆ ನಿಷ್ಠಳಾಗುವುದನ್ನು ಈ ಕತೆಯಲ್ಲಿ ಗಮನಿಸಬಹುದು. ಸುಮತಿಯು ಬಾಹ್ಯಸಂಬಂಧವನ್ನು ತೊರೆದುದು ತಾನು ಮಾಡುತ್ತಿರುವುದು ತಪ್ಪು, ಸದಾಚಾರಕ್ಕೆ ವಿರುದ್ಧವಾದುದು ಎಂಬ ಅಪರಾಧೀ ಪ್ರಜ್ಞೆಯಿಂದಲ್ಲ. ಬದಲಿಗೆ ಕೇವಲ ಮಗುವಿನ ಮೇಲಿನ ಅತಿಶಯ ಪ್ರೀತಿ, ಮಗುವಿನ ಜೀವಕ್ಕೆ ಅಪಾಯವಾದೀತೆಂಬ ಭಯ ಮತ್ತು ಹರಕೆಯ ಬಗೆಗಿನ ಬದ್ಧತೆಯಿಂದ ಮಾತ್ರ.

ಕಮಲಾದಾಸ್ ಅವರು ರಚಿಸಿದ 'ತುಪ್ಪದ ಪಾಯಸ' ಕತೆ ಅಮ್ಮನ ಇರುವಿಕೆಯ ಮಹತ್ವವನ್ನು ನಿರೂಪಿಸುವ ಆಶಯವನ್ನು ಹೊಂದಿದೆ. ಕೆಲಸಕ್ಕೆ ಹೋಗದೆ ಮನೆಯಲ್ಲೇ ಇರುವ ಹೆಣ್ಣು ಅಮ್ಮನಾಗಿ, ಮಡದಿಯಾಗಿ ನಿಭಾಯಿಸಿದ ಹೊಣೆಗಳ ತೂಕ ಅರ್ಥವಾಗುವುದು ಅವಳು ಇಲ್ಲವಾದಾಗಲೆ ಎಂಬ ಸತ್ಯವನ್ನು ತಣ್ಣಗೆ ನಿರೂಪಿಸುತ್ತ ಮನೆ ಮತ್ತು ಬದುಕಿನ ತುಂಬ ಉಳಿದುಕೊಳ್ಳುವ ಅಮ್ಮನ

‘ಚಹರೆ’ಗಳನ್ನು ಶೋಧಿಸುತ್ತದೆ. ಅಮ್ಮ ಚಪಾತಿ ಮಾಡಲು ಕೂರುತ್ತಿದ್ದ ಮಣೆ, ಬೆಳಗ್ಗೆ ಆಸ್ಥೆಯಿಂದ ಬುತ್ತಿ ಕಟ್ಟಿ ಕೊಡುವಾಗ ಅವಳ ಬಲಗೈಯಲ್ಲಿ ಮೆತ್ತಿದ್ದ ಅರಶಿನದ ಪುಡಿ, ವೆರಾಂಡದಲ್ಲಿ ಅವಳು ನೆಟ್ಟ ಗುಲಾಬಿ ಗಿಡ, ಬೆಳಗ್ಗೆ ಅವಳುಟ್ಟಿದ್ದ ಸೀರೆ, ಅವಳಾಡಿದ ಮಾತು... ಹೀಗೆ ‘ಅಡುಗೆ ಮನೆ ಸಾಹಿತ್ಯ’ ಎಂದು ಹಣೆಪಟ್ಟಿ ಅಂಟಿಸಬಹುದಾದ ಧಾರಾಳ ವಿವರಗಳು ಇಲ್ಲಿವೆ. ಒಟ್ಟು ಬದುಕಿನ ನಿರ್ದೇಶಕಿಯಾಗಿದ್ದವಳು ಯಾವ ಮುನ್ಸೂಚನೆ ಇಲ್ಲದೆ ಸತ್ತು ಹೋದಾಗಲೂ ಮಕ್ಕಳಿಗಾಗಿ ತುಪ್ಪದ ಪಾಯಸ ಮಾಡಿಟ್ಟು ಹೋಗಿದ್ದಾಳೆ. ಅವರಮ್ಮ ಕೊನೆಯದಾಗಿ ಅವರಿಗಾಗಿ ತಯಾರಿಸಿದ ತುಪ್ಪದ ಪಾಯಸವನ್ನು ಮಕ್ಕಳು ಆಸೆಯಿಂದ ತಿನ್ನಲಿ ಎಂಬ ಅಭಿಪ್ರಾಯದಿಂದ ತಿನ್ನಗೊಡುವ ಅಪ್ಪನಿಗೆ ಅವಳಿಲ್ಲದ ಮನೆ, ಮಕ್ಕಳನ್ನು ನಿಭಾಯಿಸುವುದು ಹೇಗೆಂದು ತಿಳಿಯದೆ ಕುಸಿದುಹೋಗಿದ್ದಾನೆ. ಇಲ್ಲಿನ ಮುಖ್ಯ ಪಾತ್ರಗಳಿಗೆ ಅಪ್ಪ ಮತ್ತು ಅಮ್ಮ ಎಂಬ ರೂಢನಾಮಗಳಷ್ಟೇ ಇರುವುದೊಂದು ವಿಶೇಷತೆ.

ಅಮ್ಮನಾಗಿ, ಪತ್ನಿಯಾಗಿ ತುಂಬುಸಂಸಾರ ನಡೆಸಿದ ಹೆಣ್ಣು ಕಾಲವಾದ ಬಳಿಕವೂ ಅವಳ ಅಸ್ಮಿತೆ ಉಳಿದುಕೊಳ್ಳುತ್ತದೆ. ಇ. ಹರಿಕುಮಾರ್ ಅವರು ಬರೆದಿರುವ ‘ಡಾಕ್ಟರ್ ಗುರಾಮಿಯ ಆಸ್ಪತ್ರೆ’ ಕತೆಯಲ್ಲಿ ರಾಗಿಣಿ ಎಂಬ ಅನ್ವರ್ಥನಾಮವನ್ನು ಹೊಂದಿರುವ, ಮಮತೆಯ ಗಣಿಯೇ ಆಗಿದ್ದ ಅಮ್ಮ ಅಸೌಖ್ಯದಿಂದ ತೀರಿಕೊಂಡಿದ್ದಾಳೆ. ಆದರೆ ಗಂಡ ಮಕ್ಕಳೊಂದಿಗೆ ಅವಳು ವಾಸವಾಗಿದ್ದ ಬಾಡಿಗೆಮನೆಯ ತುಂಬ ಅವಳ ನೆನಪುಗಳಿವೆ. ಅವಳು ಬೆಳಗ್ಗೆ ಹಾಕುತ್ತಿದ್ದ ಸುಪ್ರಭಾತ, ಮನೆಯ ಮೀನಿನ ಟ್ಯಾಂಕ್‌ನಲ್ಲಿರುವ ಮೀನುಗಳೊಂದಿಗೆ ಅವಳು ಏರ್ಪಡಿಸಿಕೊಂಡಿದ್ದ ಜೀವಪ್ರೀತಿಯ ಸಂಬಂಧ, ಒಂದು ಪುಟ್ಟ ಸ್ವಂತ ಮನೆಯನ್ನು ಹೊಂದುವ ಅವಳ ಕನಸು.. ಇವೆಲ್ಲವೂ ಗಂಡನಿಗೂ ಮಗನಿಗೂ ಚೆನ್ನಾಗಿ ನೆನಪಿದೆ. ಅವಳ ಬಹುಕಾಲದ ಅಪೇಕ್ಷೆಯಂತೆ ಅವರ ಹೊಸಮನೆಯೂ ವಾಸ್ತವ್ಯಕ್ಕೆ ಸಿದ್ಧವಾಗಿದೆ. ಆದರೆ ಅಲ್ಲಿ ವಾಸಿಸುವುದಕ್ಕೆ ಅವಳೇ ಇಲ್ಲವಾಗಿದ್ದಾಳೆ. ಸತ್ತು ಹೋದ ಮಡದಿ ತಿರುಗಿ ಬರುತ್ತಾಳೆಂದು ನಂಬಿ, ಹಳೆಯಮನೆಯ ಕೋಣೆಕೋಣೆಗಳಲ್ಲೂ ಅವಳ ಚಹರೆಗಳನ್ನು ಗುರುತಿಸುತ್ತ ಸುಖವಾಗಿರಲು ಬಯಸುವ ಗಂಡ ಮತ್ತು ‘ಅಮ್ಮನ ಕೈಹಿಡಿದುಕೊಂಡು ನಡೆಯುತ್ತಿರುವಂತೆ’ ಆಗಾಗ ಕನಸು ಕಾಣುವ ಮಗ ಇಬ್ಬರೂ ಅಮ್ಮನ ವಾಸನೆ ತುಂಬಿರುವ ಮನೆಯನ್ನು ಬಿಟ್ಟು ಹೊಸಮನೆಗೆ ಹೋಗುವುದು ಬೇಡವೆಂದು ನಿರ್ಧರಿಸುತ್ತಾರೆ.

‘ಹಗ್ಗ’ ಕಾದಂಬರಿಯ ಜೀತದಾಳು ಚೇನ್ನನ್‌ನ ಹೆಂಡತಿ ಕುಂಜಾಳಿ ತಾನು ಹೆರುವುದಿಲ್ಲ ಎಂಬ ನಂಬಿಕೆ ಬಲವಾದಾಗ ‘ಹೆರೋ ಒಬ್ಬನ್ ಹಿಡ್ಕೊಂಡ್ ಬಾ’ ಎಂದು ಗಂಡನನ್ನು ಒತ್ತಾಯಿಸುತ್ತಾಳೆ. ಅವನು ‘ನಂಗ್ ಬ್ಯಾಡ’ ಎಂದರೂ ಒಪ್ಪದೆ ‘ಅಂಗಾರೆ ನಾನೇ ಒಬ್ಬನ್ ಹಿಡ್ಕೊಂಡ್ ಬರ್ತೀನಿ’ ಎಂದು ಸಂಕಲ್ಪಿಸಿ ಉಲಕಿ ಎಂಬವಳನ್ನು ಕರೆತಂದು ಗಂಡನ ಕೈ ಹಿಡಿಸುತ್ತಾಳೆ. ಉಲಕಿ ಹೆತ್ತ ಮಗು ವಟ್ಟತ್ತಾನ್‌ನನ್ನು ಅಮಿತವಾಗಿ ಪ್ರೀತಿಸುತ್ತಾಳೆ. ಮುಂದೆ ಚೇನ್ನನ್ ಸ್ವತಃ ಇಷ್ಟಪಟ್ಟು ಕರೆತಂ ಕೊಚ್ಚೀರಿ ಎಂಬವಳೂ ಸೇರಿ

ಮೂವರು ಅಮ್ಮಂದಿರು ಸ್ಪರ್ಧಾತ್ಮಕ ಮಮತೆಯಲ್ಲಿ ಮಗುವನ್ನು ಬೆಳೆಸುತ್ತಾರೆ. ಬೆಳೆದ ಹುಡುಗ ವಟ್ಟತ್ತಾನ್ 'ಹೊಲೆಯರಿಗೆ ಹೇಳಿಸಿದ್ದಲ್ಲದ' ಮೀನಿನ ಕೆಲಸದಿಂದ ಆಕರ್ಷಿತನಾಗಿ ಊರುಬಿಟ್ಟು ಹೋದಾಗ ಮೂವರು ಅಮ್ಮಂದಿರೂ ಬದುಕುವ ಆಸಕ್ತಿಯನ್ನೆ ಕಳೆದುಕೊಳ್ಳುತ್ತಾರೆ. ಮಗ ಇನ್ನು ಮರಳುವುದಿಲ್ಲ ಎಂಬುದು ಖಾತರಿಯಾದಾಗ 'ಒಮ್ಮೆ ಹೆತ್ತು ಆಮೇಲೆ ಬಸಿರಾಗದ ಅರೆಬಂಜೆಯಾಗಿದ್ದ' ಉಲಕಿ ಹಾಗೂ 'ಒಮ್ಮೆಯೂ ಹೆರದೆ ಬಂಜೆ'ಯರೆನಿಸಿಕೊಂಡ ಕುಂಜಾಳಿ ಮತ್ತು ಕೊಚ್ಚೀರಿಯರು ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರ ಕೈಗೊಳ್ಳುತ್ತಾರೆ. ತಮ್ಮಂತೆಯೇ ಕೊರಗುತ್ತಿದ್ದ ಗಂಡನೊಡನೆ ಸಾಕಷ್ಟು ಚರ್ಚಿಸಿ ನಿರ್ಧರಿಸಿದಂತೆ ಎಲ್ಲರೂ ತಮ್ಮ ಕೈಕಾಲುಗಳನ್ನು ಕಟ್ಟಿಕೊಂಡು ಹೊಳೆಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾರೆ. ಮಗನ ಮೇಲಿನ ಅತಿಯಾದ ಪ್ರೀತಿ, ವ್ಯಾಮೋಹಗಳೆ ಈ ಮೂವರು ಹೆಂಗಸರ ಸಾವಿಗೆ ಕಾರಣವಾಗಿದೆ.

ಇದೇ ಕೃತಿಯ ಪಾಪಿಯಮ್ಮ ಬಡ್ಡಿವ್ಯಾಪಾರದಲ್ಲಿ ಸಾಕಷ್ಟು ಹಣ ಸಂಪಾದಿಸಿ ಊರವರ ದೃಷ್ಟಿಯಲ್ಲಿ 'ಸುಖವಾಗಿ' ಇರುವವಳು. ಆದರೆ ಪರದೇಶದಲ್ಲಿರುವ ಮಗನ ಬಗೆಗಿನ ಆತಂಕ ಅವಳನ್ನು ಅಸುಖಿಯಾಗಿಸಿದೆ. "ಇಲ್ಲಿ ದುಡ್ಡು ಬರುತ್ತೆ, ಚಿನ್ನ ಬರುತ್ತೆ. ಬಡ್ಡಿ, ಅಸಲು ಎಲ್ಲ ಬರುತ್ತೆ. ಅದೂ ಆಮೇಲೆ ಆಸ್ತಿಯಾಗುತ್ತೆ. ಹಲ ಕೊಂಡುಕೊಳ್ತೇವೆ. ಬತ್ತ ಬರುತ್ತೆ. ಆದರೂ ಸದಾ ಒಂದು ಕೊರಗು. ಮನಸ್ಸಿಗೆ ಸಮಾಧಾನವೆಂಬುದೆ ಇಲ್ಲ. ಒಮ್ಮೊಮ್ಮೆ ರಾತ್ರಿ ನಿದ್ರೆ ಬರೋದೆ ಇಲ್ಲ. ಏನೇನೊ ಅನಿಷ್ಟ ವಿಚಾರಗಳು ಮನಸ್ಸಿನಲ್ಲಿ ಏಳ್ತಾ ಇರುತ್ತವೆ." (ಪು. ೧೦೦೦, ಭಾಗ ೩) ಹೊತ್ತಿನ ಗಂಜಿಗೂ ಬಡತನವಿರುವ ಕುಂಜುನಾಯರ್‌ನ ಹೆಂಡತಿ ಕುಂಜುಮಾಳು, ತಮ್ಮ ಮಗ ಮಣಿಕಂಠನನ್ನು ಪಾಪಿಯಮ್ಮನ ಮಗನ ಜೊತೆ 'ಕೈತುಂಬ ಗಳಿಸಬಹುದಾದ' ಪರದೇಶದ ಉದ್ಯೋಗಕ್ಕೆ ಕಳಿಸಿಕೊಡುವ ಬಗ್ಗೆ ಗಂಡ ಪ್ರಸ್ತಾಪಿಸಿದಾಗ ಖಡಾಖಡಿಯಾಗಿ ನಿರಾಕರಿಸುತ್ತಾಳೆ. 'ಬಂಗಾರ ಸಿಗೋದಾದ್ರೂ ನನ್ನ ಮಗ ಅಲ್ಲಿಗೇನೂ ಹೋಗೋದು ಬೇಡ' ಎಂಬುದು ಅವಳ ಖಚಿತ ನಿಲುವು.

'ದುರ್ಬೀಜ' ಕೃತಿಯ ತಿತ್ತುಮ್ಮನ ಮಗ ಅಬ್ದು ಸೈನ್ಯದಲ್ಲಿ ಕೆಲಸ ಮಾಡಿಕೊಂಡಿದ್ದಾನೆ. ಮಗನ ಯೋಗಕ್ಷೇಮ ತಿಳಿಯುವುದಕ್ಕಾಗಿ ಪತ್ರ ಬರೆದು ಪ್ರತ್ಯುತ್ತರಕ್ಕಾಗಿ ದಿನಗಳ ಲೆಕ್ಕ ಮಾಡುತ್ತ ಕಾಯುತ್ತಾಳೆ. ಮಗ ಸೈನ್ಯಕ್ಕೆ ಸೇರಿ ತಿಂಗಳಿಗೆ ಇಪ್ಪತ್ತು ರೂಪಾಯಿ ಕಳಿಸುತ್ತಿದ್ದಾನೆ ಮತ್ತು ಅದು ಗಣನೀಯ ಮೊತ್ತವೆ ಆಗಿದೆ. ಆದರೂ 'ಸೈನ್ಯದಲ್ಲಿ ಸಿಗುವ ಅನ್ನ ಅಂದರೆ ಅದರಲ್ಲಿ ರಕ್ತ ಸೇರಿಕೊಂಡಿರುತ್ತೆ' ಎಂದು ತಿಳಿದುಕೊಂಡಿರುವ ತಿತ್ತುಮ್ಮಳಿಗೆ ಮಗ ಕಳಿಸುವ ಹಣಕ್ಕಿಂತ ಅವನ ಯೋಗಕ್ಷೇಮವೆ ಮುಖ್ಯವಾಗಿದೆ. "ಆ ಉಡುಗ ಒಮ್ಮೆ ಬಂದು ಬಿಟ್ಟಿದ್ರೆ ಸಾಕಿತ್ತು. ಗಂಜಿಯೋ ನೀರೋ ಏನಾದ್ರೂ ಒಟ್ಟಿಗೆ ಕುಡ್ದುಕೊಂಡು ನೆಮ್ಮದಿಯಿಂದ ಇರ್ಬೋದಿತ್ತು" (ಪು. ೮೧) ಎಂಬುದು ಅವಳ ಪ್ರಾಮಾಣಿಕ ಅಭಿಪ್ರಾಯವಾಗಿದೆ.

ಸ್ತ್ರೀಯನ್ನು ತಾಯಿಯೆಂದು ಗೌರವಿಸುವ, ನಿಸರ್ಗ ಸಹಜವಾದ ಗರ್ಭ ಧರಿಸುವಿಕೆಯನ್ನು ತಾಯ್ತನದ ಪವಿತ್ರ ಮೌಲ್ಯದೊಳಗೆ ವ್ಯಾಖ್ಯಾನಿಸಿ ಹೆಣ್ಣಿನ ಲೈಂಗಿಕ ಸ್ವಾತಂತ್ರ್ಯವನ್ನು ನಿರ್ಬಂಧಿಸಿರುವ ಸಮಾಜಕ್ಕೆ ಮದುವೆಯಾಗದ ಮತ್ತು ಪತಿಯಿಲ್ಲದ ಸ್ತ್ರೀಯರ ತಾಯ್ತನದ ಅಪೇಕ್ಷೆ ಸಮ್ಮತವಲ್ಲ. ಆದರೆ ನೈಸರ್ಗಿಕ ಬಯಕೆಗಳು ಯಾವ ಕಟ್ಟುಪಾಡಿಗೂ ಬಗ್ಗುವಂಥವಲ್ಲ. ಸದಾಚಾರದ ಭದ್ರವಾದ ಕೋಟೆಯೊಳಗೆ ರಕ್ಷಿಸಲಾಗಿರುವ ಹೆಣ್ಣಿನ ತಾಯ್ತನಕ್ಕೆ ಪುರುಷನ ಪ್ರಮಾಣ ಅಥವಾ ತಂದೆಯ ಹೆಸರು ಎಂಬ ಅಧಿಕೃತತೆಯ ಮೊಹರಿನ ಅಗತ್ಯವಿಲ್ಲ ಎಂಬ ವಿಶಿಷ್ಟ ಚಿಂತನೆಯನ್ನು ಕೆಲವು ಕತೆಗಳು ಪ್ರತಿಪಾದಿಸಿವೆ.

ಚೆಲುವೆಯಾದ ಯುವತಿಯೋರ್ವಳು ವಿಧವೆಯಾದ ಕೂಡಲೇ ತನ್ನನ್ನು ಕಾಡುವ 'ಯುವಕರು, ಕೂದಲು ನರೆತ ವೃದ್ಧರು ಮತ್ತು ಸೊಂಟದ ಕೆಳಗೆ ತ್ರಾಣವಿಲ್ಲದೆ ತೆವಳಿಕೊಂಡು ಹೋಗುವ ಗಂಡಸರ' ಕಣ್ಣುಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಹೋರಾಡಬೇಕಾಗುವುದನ್ನು ಬಹಳ ವಿಶಿಷ್ಟವಾಗಿ ನಿರೂಪಿಸುವ ಒಂದು ಫ್ಯಾಂಟಸಿ ಕತೆ ಅರ್ಷಾದ್ ಬತೇರಿ ಅವರ 'ವಿಧವೆಯ ಪ್ರಸವ'. ತುಂಬು ಯೌವನದಲ್ಲಿ ವಿಧವೆಯಾಗಿರುವ ಚೆಲುವೆ ಎಲಿಜಬೆತ್ ಹಾಗೂ ಪಕ್ಕದ ಮನೆಯ ಶಿವರಾಮನ ಹಸುವಿನ ಮಧ್ಯೆ ಸಮಾನವಾಗಿರುವ ಒಂದು ವಿಕ್ಷಿಪ್ತ ಏಕಾಂತ ಮತ್ತು ಪ್ರೀತಿಯಿಲ್ಲದೆ ವ್ಯರ್ಥವಾಗುತ್ತಿರುವ ಈ ಎರಡು ಹೆಣ್ಣುಜೀವ (ಎಲಿಜಬೆತ್ ಮತ್ತು ಹಸು)ಗಳ ನಿಟ್ಟುಸಿರುಗಳ ಒಂದು ವಿಶಿಷ್ಟ ಹೋಲಿಕೆಯಲ್ಲಿ ಕತೆ ಸಾಗುತ್ತದೆ. ಮೇಯಲು ಬಿಟ್ಟ ಹಸು ಗುಡ್ಡದಲ್ಲಿ ಬಿತ್ತಿನ ಹೋರಿಯ 'ಪ್ರೀತಿಯಿಲ್ಲದ ಆಕ್ರಮಣಕ್ಕೆ' ತುತ್ತಾಗಿದೆ. ತನ್ನ ಮುಖವನ್ನು ಸ್ವಲ್ಪವೂ ಮುದ್ದಿಸದೆ, ಕುದಿದು ಉಕ್ಕುವ ಉನ್ಮಾದದಿಂದ ಮಾತ್ರ ಕೂಡಿದ ಹೋರಿಯನ್ನು ಎಣಿಸಿ ದುಃಖದ ನಿಟ್ಟುಸಿರಿನೊಂದಿಗೆ ಹಟ್ಟಿಗೆ ಮರಳುವಾಗ ಹಸು ತನ್ನ ಆಯ್ಕೆಯಲ್ಲದೆ ಗರ್ಭಿಣಿಯಾಗಿದೆ. ಗರ್ಭಕ್ಕೆ ಕಾರಣವಾಗಿರುವ ಹೋರಿಗೆ ತನ್ನ ಮಗುವನ್ನು ಹೊತ್ತಿರುವ ಹಸುವನ್ನು ತಿರುಗಿ ನೋಡುವ ಆಸಕ್ತಿಯಿಲ್ಲ. ಗರ್ಭಕ್ಕೆ ಕಾರಣನಾದವನಿಂದ ತಿರಸ್ಕೃತಳಾದ ಹೆಣ್ಣು ಒಂಟಿಯಾಗಿ ಸಮಾಜದ ಅಪಹಾಸ್ಯಕ್ಕೆ ತುತ್ತಾಗಬೇಕಾಗುವುದನ್ನು ಕತೆ ಗುರುತಿಸಿದೆ.

ಪತಿಯನ್ನು ಕಳೆದುಕೊಂಡು ಒಂಟಿಯಾಗಿರುವ ಎಲಿಜಬೆತ್‌ಳಿಗೆ ಸಮಾಧಾನ ಹೇಳುವ, ನಾನಿದ್ದೇನೆಂದು ವಾಗ್ದಾನ ಮಾಡುವ ಹಲವು ಪತ್ರಗಳು ಸಿಗುತ್ತಿರುತ್ತವೆ. ಬಗ್ಗದ ಹೆಣ್ಣಿನ ಬಗ್ಗೆ ನೂರು ಕಥೆ ಕಟ್ಟುವ ಸಾಮಾಜಿಕ ಸಂಪ್ರದಾಯದಂತೆ ಅವಳ ಬಗ್ಗೆಯೂ ಕಥೆಗಳು ಹುಟ್ಟಿಕೊಂಡಿವೆ. ಅವಳ ಟೆಕ್ಸ್‌ಟೈಲ್ ಷಾಪಿನ ಪಕ್ಕದ ಬೂತ್‌ನಲ್ಲಿರುವ, ಅವಳ ಬಗ್ಗೆ ಅನುಕಂಪ ಮತ್ತು ಪ್ರೀತಿ ಹೊಂದಿರುವ ಶಿವರಾಮನನ್ನು ದಿನವೂ ನೋಡುತ್ತ, ಮಾತನಾಡಿಸುತ್ತ ಅವಳು 'ಸುರಕ್ಷತೆಯ ಭಾವವನ್ನು' ಪಡೆದಿದ್ದಾಳೆ. ಈ ಬದಲಾವಣೆಯಿಲ್ಲದ ದಿನಚರಿಯ ನಡುವೆ ಎಲಿಜಬೆತ್ ಗರ್ಭಿಣಿಯಾಗಿದ್ದಾಳೆ. ವಿಷಯ ತಿಳಿದಾಗ ಊರಿನ ಗಂಡಸರು–ಹೆಂಗಸರು ಎಲ್ಲರೂ ಅವಳನ್ನು ಆಡಿಕೊಳ್ಳುತ್ತಾರೆ. 'ಯಾರು ಜನ?' ಎಂಬಂಥಾ

ಪ್ರಶ್ನೆಗಳಿಂದ ಕುಕ್ಕಿ ಹಿಂಸಿಸುತ್ತಾರೆ. "ಎಲ್ಲ ಹಾಳಾಯ್ತಲ್ಲ ಕರ್ತನೇ... ಇಗರ್ಜಿ ತನಕ ಹೋಗಲಿಕ್ಕೆ ಆಗ್ತಾಯಿಲ್ಲ. ಆ ದರಿದ್ರ ಸಂತಾನವನ್ನು ನಾನು ನೋಡಬೇಕಲ್ಲ ಕರ್ತನೇ" (ಪು. ೬೭, ನನ್ನ ಚೀರಾಳಜ್ಜನ ಕಡುಗತ್ತಿ ಮತ್ತು ಇತರ ಮಲಯಾಳಿ ಕಥೆಗಳು) ಎಂದು ಅಳಲುವ ಸ್ವತಃ ಅವಳ ಅಮ್ಮನೂ ಸೇರಿದಂತೆ ಎಲ್ಲರೂ ಅವಳ ತಾಯ್ತನದ ಬಗ್ಗೆ ಅಸಹನೆ ಹೊಂದಿದ್ದಾರೆ. ಪತಿ ಇದ್ದಿದ್ದರೆ ಸಂಭ್ರಮಕ್ಕೆ ಕಾರಣವಾಗಬೇಕಿದ್ದ ತಾಯ್ತನವು ಪತಿಯಿಲ್ಲದ ಸ್ತ್ರೀಯ ಮಟ್ಟಿಗೆ ನೋವು ಮತ್ತು ಅವಮಾನಕ್ಕೆ ಕಾರಣವಾಗಿದೆ.

ಒಂದು ರಾತ್ರಿಯ ಕೊನೆಯ ಜಾವದಲ್ಲಿ ಹಸುವಿಗೂ ಎಲಿಜಬೆತ್‌ಗೂ ಒಟ್ಟಿಗೆ ಹೆರಿಗೆ ನೋವು ಕಾಣಿಸಿಕೊಂಡು ಇಬ್ಬರೂ ಹೆರುತ್ತಾರೆ. 'ಮಗು ಯಾರದು' ಎಂದು ತಿಳಿಯುವ ಕಾತರದಿಂದ 'ಕಲ್ಲು ಮಸೆದು ಹರಿತಗೊಳಿಸಿ' ನೆರೆದಿದ್ದ ಪುರುಷರು ಗಡಬಡಿಸುವಂತೆ ಹಸುವು ಒಂದು ಕೆಂಪು ಕೆಂಪಾದ ಮಗುವಿಗೂ ಎಲಿಜಬೆತ್ ಒಂದು ಕಾಫಿ ಬಣ್ಣದ ಕರುವಿಗೂ ಜನ್ಮ ನೀಡುತ್ತಾರೆ. ಜನ್ಮ ಕೊಟ್ಟ ಮಾತೃತ್ವದಿಂದಲ್ಲದೆ, ಹೊತ್ತ ರೂಪದಿಂದ ಮಗುವಿನ ಪಿತೃತ್ವವನ್ನು ನಿಶ್ಚಯಿಸುವ ಪುರುಷಪರ ಸಮಾಜದ ಪಾರಂಪರಿಕ ಅರಿವನ್ನೇ ಅಣಕಿಸುವಂತೆ ವಿಧವೆಯಾದ ಎಲಿಜಬೆತ್ ಒಂದು ಕರುವನ್ನು ಹೆತ್ತು ಎಲ್ಲರ ಲೆಕ್ಕಾಚಾರಗಳನ್ನೂ ತಲೆಕೆಳಗು ಮಾಡುವ ಈ ವಿದ್ಯಮಾನವು ಸ್ತ್ರೀಯ ಪ್ರೀತಿಸಲ್ಪಡುವ ಮತ್ತು ಹೆರುವ ಹಕ್ಕುಗಳನ್ನು ಎತ್ತಿ ಹಿಡಿಯುವ ಲೇಖಕರ ಉದ್ದೇಶಪೂರ್ವಕ ಸೃಷ್ಟಿಯಾಗಿದೆ.

ಮಾನಸಿ ಅವರ 'ಅಕ್ಷರ ತಪ್ಪುಗಳು' ಕತೆಯ ನಾಯಕಿಗೆ ಗೆರೆಗಳಲ್ಲಿ ಮತ್ತು ಲೇಬಲ್‌ಗಳಲ್ಲಿ ವ್ಯಾಖ್ಯಾನಿಸಲಾಗುವ ಸಂಬಂಧಗಳಲ್ಲಿ ನಂಬಿಕೆಯಿಲ್ಲ. ಅವಿವಾಹಿತ ತಾಯಿಯಾಗಿರುವ ಆಕೆ ಮದುವೆ ಎಂದರೆ 'ಸ್ವಾತಂತ್ರ್ಯವನ್ನು ನಿರ್ಬಂಧಿಸುವ ಗೆರೆಗಳು' ಎಂದು ಭಾವಿಸುವವಳು. ತನ್ನ ಗರ್ಭಕ್ಕೆ ಕಾರಣನಾದ ಪ್ರಿಯತಮನನ್ನು ಮದುವೆಯಾಗಲು ನಿರಾಕರಿಸುತ್ತಾಳೆ. ಮಗು ತನ್ನದು ಹೌದೇ ಅಲ್ಲವೆ ಎಂದು ತಿಳಿದುಕೊಳ್ಳುವ ಅವಕಾಶವನ್ನೇ ಅವನಿಗೆ ಕೊಡದೆ, 'ಅವನು ನನ್ನ ಮಗ, ಇನ್ಯಾರದ್ದೂ ಅಲ್ಲ' ಎಂಬ ದೃಢತೆಯಿಂದ ತಂದೆಯ ಲೇಬಲ್ ಹಚ್ಚದೆ ಅವಿವಾಹಿತ ತಾಯಿಯಾಗಿ ಮಗುವನ್ನು ಹೆತ್ತು ಬೆಳೆಸುತ್ತಾಳೆ. ಅವಳ ಪ್ರಕಾರ 'ತಂದೆಯ ಹೆಸರು ಎಂಬುದು ತೀರಾ ಅಪ್ರಸ್ತುತವಾದ ಮಾಹಿತಿಯ ತುಣುಕು.' ಸ್ತ್ರೀಯೊಬ್ಬಳು ತನ್ನ ಮಗುವಿನ ತಂದೆಯ ಹೆಸರನ್ನು ನಿರಾಕರಿಸುವುದು ಎಂದರೆ ಪುರುಷನ ಅಸ್ತಿತ್ವವನ್ನು, ಪಿತೃತ್ವದ ಹಕ್ಕುಸ್ವಾಮ್ಯವನ್ನು ನಿರಾಕರಿಸಿದಂತೆ. 'ಗರ್ಭಕ್ಕೆ ಕಾರಣನಾದವನು' ಎಂಬ ಒಂದೇ ಕಾರಣಕ್ಕೆ ಗರ್ಭದ ಮೇಲೂ ಗರ್ಭವನ್ನು ಧರಿಸಿದವಳ ಮೇಲೂ ಪುರುಷನಿಗೆ ಅಧಿಕಾರವಿರಬೇಕಾಗಿಲ್ಲ. 'ತಂದೆ' ಎಂಬುದು ತಾಯಿಯಾದವಳು ಒಪ್ಪಿಕೊಂಡರೆ ಮಾತ್ರ ಅಧಿಕೃತವಾಗುವ ಸತ್ಯ. ಇಲ್ಲವಾದರೆ ಅದೊಂದು ಕಾಲ್ಪನಿಕ ಸಂಗತಿ. ಮಗುವನ್ನು ಗರ್ಭದಲ್ಲಿ ಧರಿಸಿ, ಬೆಳೆಸಿ, ಭೂಮಿಗಿಳಿಸಿ ಪೋಷಿಸುವ ಅಮ್ಮ ಮಾತ್ರ ಎಲ್ಲಕಾಲಕ್ಕೂ ಸತ್ಯ ಎಂದು ಕತೆ ಪ್ರತಿಪಾದಿಸಿದೆ.

ಕಮಲಾದಾಸ್ ಅವರು ಬರೆದ 'ಅಮ್ಮಿಣಿಕುಟ್ಟಿಯ ಹೆರಿಗೆ' ಕತೆಯಲ್ಲಿ 'ಗಂಡಸರು ಗುರಾಯಿಸಿ ನೋಡಿದ್ರೆ ಗರ್ಭವತಿಯರಾಗ್ತೀವಾ?' ಎಂದು ಕೇಳುವಷ್ಟು ಮುಗ್ಧೆಯೂ ನಿಷ್ಕಲಂಕಳೂ ಆದ ಅಮ್ಮಿಣಿಕುಟ್ಟಿ ಎಂಬ ಹುಡುಗಿ ಯಾರಿಗೂ ಗೊತ್ತಿಲ್ಲದೆ ಗರ್ಭವತಿಯಾಗಿ ಒಂದು ಪಿಶಾಚಿಯಂಥ ಮಗುವನ್ನು ಹೆರುತ್ತಾಳೆ. ಊರ ಹೆಂಗಳೆಯರೆಲ್ಲ ನಂಬಿರುವಂತೆ 'ಪುರುಷಸಂಪರ್ಕವಿಲ್ಲದೆ ಹುಟ್ಟಿದ ವಿಚಿತ್ರ ಮಗು'ವನ್ನು ಸೂಲಗಿತ್ತಿಯು ನೀರಲ್ಲಿ ಮುಳುಗಿಸಿ ಕೊಂದು 'ಹುಡುಗಿಯ ಚಾರಿತ್ರ್ಯದ ಮೇಲೆ ಬರಬಹುದಾದ ಕಲಂಕ'ವನ್ನು ನಿವಾರಿಸುತ್ತಾಳೆ. ಹೆಣ್ಣು ಗರ್ಭಧರಿಸುವುದಕ್ಕೆ ಪುರುಷನ ಸಂಪರ್ಕವೇ ಆಗಬೇಕೆಂದೇನೂ ಇಲ್ಲ, ಸಮಾಜದ ಮತ್ತು ಸ್ವತಃ ಹೆಣ್ಣಿನ ಅನುಭವಕ್ಕೆ ಮೀರಿದ ಅಗೋಚರವಾದ ಕಾರಣಗಳಿಂದಲೂ ಅದು ಸಂಭವಿಸಬಹುದು ಎಂಬ ಪ್ರತಿಪಾದನೆ ಕತೆಯಲ್ಲಿದೆ.

ಶೀಬಾ ಇ.ಕೆ. ಅವರು ಬರೆದಿರುವ 'ಬ್ಲ್ಯಾಕ್ ಔಟ್' ಎಂಬ ಕತೆಯಲ್ಲಿ ಕುಡಿದ ಅಮಲಿನಲ್ಲಿದ್ದ ತಂದೆಯಿಂದಲೇ ಅತ್ಯಾಚಾರಕ್ಕೆ ಒಳಗಾಗಿ ಗರ್ಭಿಣಿಯಾದ ಸಣ್ಣ ವಯಸ್ಸಿನ ಬಾಲಕಿ ಗರ್ಭಪಾತಕ್ಕೆ ಒಪ್ಪದೆ, ಮಗುವನ್ನು 'ತನ್ನ ಮಗುವಾಗಿ' ಹೆತ್ತು ಬೆಳೆಸುವ ನಿರ್ಧಾರಕ್ಕೆ ಬರುತ್ತಾಳೆ. ಸಮಾಜದ ಸದಾಚಾರದ ಚಿಂತನೆಗಳಿಗಿಂತ ತನ್ನ ಹೊಟ್ಟೆಯಲ್ಲಿರುವ, ಯಾವ ತಪ್ಪನ್ನೂ ಮಾಡದ ಮಗುವಿನ ಬದುಕುವ ಹಕ್ಕನ್ನು ರಕ್ಷಿಸುವುದು ಹೆಚ್ಚು ಶ್ರೇಷ್ಠವಾದದ್ದು ಎಂದು ನಿರ್ಧರಿಸುತ್ತಾಳೆ. ತನ್ನ ಗರ್ಭವನ್ನು ನಾಶಮಾಡಬಹುದಾದ ಆಸ್ಪತ್ರೆಯಿಂದ ಓಡಿಹೋಗಿ ಕನ್ಯಾಸ್ತ್ರೀಯರ ಕಾನ್ವೆಂಟ್ ಅನ್ನು ಆಶ್ರಯಿಸಿ ಆತಂಕವಿಲ್ಲದೆ ಹೆರುವ ಮತ್ತು ಮಗುವಿನೊಂದಿಗೆ ಬದುಕುವ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾಳೆ.

ಹೋರಿಯ ಮಗುವನ್ನೋ, ಪಿಶಾಚಿಯ ಮಗುವನ್ನೋ, ಅತ್ಯಾಚಾರಿಯ ಮಗುವನ್ನೋ ಹೆರುವ ಮೂಲಕ, ಅಧಿಕೃತವಾದ ತಂದೆಯ ಹೆಸರು ಮತ್ತು ಅಸ್ತಿತ್ವಗಳಿಲ್ಲದೆಯೆ ಗರ್ಭ ಧರಿಸುವ ಮತ್ತು ಹೆರುವ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಎಲಿಜಬೆತ್, ಅಮ್ಮಿಣಿ ಮುಂತಾದ ಸ್ತ್ರೀಯರು ಮಗುವಿನ ಲಕ್ಷಣಗಳನ್ನು ನೋಡಿ ಅಪ್ಪ ಯಾರು ಎಂಬುದನ್ನು ನಿರ್ಧರಿಸುವ ಸಮಾಜದ ಬುದ್ಧಿವಂತಿಕೆಗೆ ಸವಾಲಾಗಿದ್ದಾರೆ. ಹೆಣ್ಣು ಯಾವಾಗ ಹೆರಬೇಕು, ಏನನ್ನು ಹೆರಬೇಕು ಎಂದು ನಿರ್ಣಯಿಸುವ ಪಿತೃತ್ವದ ಅಧಿಕಾರವನ್ನು ವಿರೋಧಿಸಿದ್ದಾರೆ. ತಾಯ್ತನವೆಂಬುದು ಹೆಣ್ಣಿನ ಜನ್ಮದತ್ತ ಹಕ್ಕು ಮತ್ತು ಆಯ್ಕೆಯಾಗಿದ್ದು, ಹೆಣ್ಣು ಗರ್ಭ ಧರಿಸುವುದಕ್ಕೆ ಮತ್ತು ಹೆರುವುದಕ್ಕೆ ಸಮಾಜದ ಅನುಮತಿ ಬೇಕಾಗಿಲ್ಲ ಎಂಬಂಥ ವಿಶಿಷ್ಟ ಚಿಂತನೆಯನ್ನು ಈ ಕತೆಗಳು ಹೊಂದಿವೆ.

ತಂದೆಯ ಅನುಪಸ್ಥಿತಿ – ಒಂಟಿ ತಾಯಂದಿರು

ದಾಂಪತ್ಯ ಸಂಬಂಧವೆಂಬುದು ಸ್ತ್ರೀಪುರುಷ ಇಬ್ಬರಿಂದಲೂ ಸಮಾನ ಬದ್ಧತೆ ಮತ್ತು ಹೊಣೆಗಾರಿಕೆಯನ್ನು ಅಪೇಕ್ಷಿಸುವಂಥದ್ದು. ಮಗುವಿನ ಹುಟ್ಟಿಗೆ ಕಾರಣನಾದ ತಂದೆಯ ಆಸರೆ

ಇಲ್ಲದಿದ್ದರೆ ಮಕ್ಕಳು ಅತಂತ್ರರಾಗುತ್ತಾರೆ. ಮಕ್ಕಳ ಪೋಷಣೆಯ ಹೊಣೆಯೆಂಬುದು ತಾಯಿಯ ಮೇಲೆ ಬಿದ್ದು ತನ್ನ ಮಕ್ಕಳ ಹೊಟ್ಟೆ ತುಂಬಿಸುವುದಕ್ಕಾಗಿ ಅವಳು ಶ್ರಮಪಡಬೇಕಾಗುತ್ತದೆ. ಶ್ರೀಮಂತ ಕುಟುಂಬಗಳಲ್ಲಿ ಆರ್ಥಿಕ ಸಮಸ್ಯೆ ಇಲ್ಲವೆಂದಾದರೂ ಮಗುವಿನ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ಸ್ತ್ರೀಯೊಬ್ಬಳೇ ಹೊರುವುದು ಸುಲಭವೇನಲ್ಲ. ತಂದೆಯನ್ನು ಕಾಣದೆ ಬೆಳೆದ ಮಕ್ಕಳ ಭಾವನಾತ್ಮಕ ಬೆಳವಣಿಗೆಯಲ್ಲಿ ಕುಂದುಂಟಾಗಲೂಬಹುದು. ಇಂಥ ಸಮಸ್ಯೆಗಳಿಂದ ಎದೆಗುಂದದೆ ತಂದೆ–ತಾಯಿ ಎರಡೂ ಆಗಿ ಮಕ್ಕಳನ್ನು ಬೆಳೆಸಲು ಹೆಣಗಾಡುವ ಒಂಟಿ ತಾಯಂದಿರನ್ನು ಮಲಯಾಳಂ ಕೃತಿಗಳಲ್ಲಿ ಕಾಣಬಹುದು.

'ಗುರುತುಗಳು' ಕಾದಂಬರಿಯು ಪತಿಯನ್ನು ಬುದ್ಧಿಪೂರ್ವಕ ತ್ಯಜಿಸಿ, ತಾಯಿ–ತಂದೆ ಎರಡೂ ಆಗಿ ಮಗಳನ್ನು ಬೆಳೆಸಿದ ಒಂಟಿ ತಾಯಿಯೊಬ್ಬಳ ಮಾನಸಿಕ ತಾಕಲಾಟಗಳನ್ನು ತೆರೆದಿಡುತ್ತದೆ. ಗಂಡನಿಂದ ಬೇರೆಯಾಗಿ ಮಗಳನ್ನು ಅಪ್ಪನ ಸಂಪರ್ಕವಿಲ್ಲದಂತೆ ತನ್ನೊಂದಿಗೆ ಉಳಿಸಿಕೊಂಡ ಪ್ರಿಯಾಳಿಗೆ ಮಗಳೆಂದರೆ ಪ್ರಾಣ. ಮಗಳ ಗೆಳತಿಯರಾದ ಆಲೀಸ್ ಮುಂತಾದವರಲ್ಲಿ, ತಾನೆ ಹುಡುಕಿ ಕೆಲಸ ಕೊಟ್ಟ ರೇವತಿಯಲ್ಲೂ ಮಾತೃವಾತ್ಸಲ್ಯ ಹೊಂದಿ ತನ್ನ ಒಂಟಿತನದ ನೋವನ್ನು ಮರೆಯಲು ಯತ್ನಿಸುತ್ತಾಳೆ. ಆದರೆ ಬೆಳೆಯುತ್ತ ಮಗಳು ರೂಪಿನಲ್ಲೂ ಎತ್ತರದಲ್ಲೂ ಅಪ್ಪನನ್ನು ಹೋಲುತ್ತ, ತಾನು ಮರೆಯಲೆತ್ನಿಸಿದ ರಂಜಿತ್‌ನನ್ನು ಮತ್ತೆ ಮತ್ತೆ ನೆನಪಿಸುವಾಗ ಮಾತ್ರ ಪ್ರಿಯಾ ಚಡಪಡಿಸುತ್ತಾಳೆ. 'ಧಿಡೀರನೆ ರಂಜಿತ್ ತನ್ನ ನೆನಪಿನಲ್ಲಿ ಮತ್ತು ಕನಸಿನಲ್ಲಿ ಅತಿಕ್ರಮ ಪ್ರವೇಶ ಮಾಡಿದಂತೆ' ಭಾವಿಸಿ ದಿಗಿಲುಗೊಳ್ಳುತ್ತಾಳೆ. ಸ್ವತಂತ್ರ ಮನೋಭಾವದ ಮಗಳು ಅಪ್ಪನ ಮೇಲಿನ ಆಕರ್ಷಣೆಯನ್ನು ಮರೆಯಲಾರದೆ, ಅಮ್ಮನ ನಿಲುವುಗಳನ್ನು ಪ್ರಶ್ನಿಸಿ, ಅಮ್ಮ ಹೇಳಿಕೊಟ್ಟ ಮೌಲ್ಯಗಳನ್ನು ಧಿಕ್ಕರಿಸಿ, ಪ್ರಿಯಾಳ ನೆಮ್ಮದಿಯನ್ನು ಕದಡುತ್ತಾಳೆ. ಯಾವುದೋ ಅನಾಮಧೇಯ ಪತ್ರದ ಕಾರಣವಾಗಿ ಅಮ್ಮನ ಚಾರಿತ್ರ್ಯವನ್ನು ಶಂಕಿಸುವ ಮಗಳು ವಿಚಾರಣೆಯ ಕಟಕಟೆಯಲ್ಲಿ ನಿಲ್ಲಿಸಿ 'ಗೋವಾದಲ್ಲಿ ನಡೆದದ್ದೇನು' ಎಂದು ಸವಾಲು ಹಾಕಿದಾಗ ದಿಗ್ಭ್ರಮೆಗೊಳ್ಳುತ್ತಾಳೆ. ಅಲ್ಲಿಂದಾಚೆಗೆ ನಿತ್ಯ ಅಮ್ಮನೊಂದಿಗೆ ಅನವಶ್ಯಕ ವಾಗ್ವಾದ ನಡೆಸುವ ಮಗಳು ತಂದೆಯೊಂದಿಗೆ ಸಂಪರ್ಕ ಹೊಂದಿರುವುದು ತಿಳಿದಾಗಂತೂ 'ಮಗಳು ತನ್ನವಳು' ಎಂದು ನಂಬಿದ್ದ ಪ್ರಿಯಾಳ ವಿಶ್ವಾಸದ ಕೋಟೆ ಕುಸಿಯುತ್ತದೆ.

ಅಪ್ಪನ ಆಸರೆಯಿಲ್ಲದೆ ಬೆಳೆದ ಮಕ್ಕಳ ಭಾವನಾತ್ಮಕ ಬೆಳವಣಿಗೆಯಲ್ಲಿ ಕೊರತೆಯಾಗಬಹುದು ಎಂಬ ಅಂಶವು ನೀತೂವಿನ ಪಾತ್ರದ ಮೂಲಕ ಚಿತ್ರಿತವಾಗಿದೆ. ಅಮ್ಮನಂತೆಯೆ ಸ್ವತಂತ್ರ ವಿಚಾರವುಳ್ಳ ನೀತೂ ನಿರ್ಭಿಡೆಯ ಸ್ವಭಾವದವಳು. ತನ್ನೊಂದಿಗಿಲ್ಲದ ಅಪ್ಪನ ಸಾಂಗತ್ಯವನ್ನು ಬಯಸುವವಳು. 'ಅಮ್ಮ ದುಡುಕಿ ವಿಚ್ಛೇದನ ಪಡೆದುದರಿಂದಾಗಿ ತನಗೆ ಅಪ್ಪನ ಪ್ರೀತಿ ದೊರೆಯದಂತಾಯಿತು' ಎಂದು ಭಾವಿಸಿ ಅಮ್ಮನಿಂದ ಮಾನಸಿಕ ಅಂತರವನ್ನು ಕಾಯ್ದುಕೊಳ್ಳುತ್ತಲೇ ಬೆಳೆದವಳು. ತನ್ನ ಬದುಕಿನಲ್ಲಿ

ಕೊರತೆಯಾಗಿರುವ 'ಒಂದಿಷ್ಟು ಅಪ್ಪ'ನನ್ನು ಪಡೆಯಬಯಸಿ ಅಮ್ಮನೊಂದಿಗೆ ನಿರಂತರ ಸಂಘರ್ಷಕ್ಕಿಳಿದು ತಾಯಿಯ ಸ್ನೇಹವನ್ನು ಕಳೆದುಕೊಳ್ಳುತ್ತಾಳೆ. 'ಒಂದು ಗಂಡಿನ ಆಸರೆ' ಹುಡುಕುತ್ತ ತಪ್ಪು ಆಯ್ಕೆ ಮಾಡಿ ಸಮಸ್ಯೆಯಲ್ಲಿ ಬೀಳುತ್ತಾಳೆ. ಅಮ್ಮನ ಮೇಲಿನ ಅಸಮಾಧಾನವೆ ಕಾರಣವಾಗಿ ಗೆಳೆಯನೊಂದಿಗೆ ಮನೆಬಿಟ್ಟು ಹೋಗುತ್ತಾಳೆ. ಸ್ವಲ್ಪವೇ ಸಮಯದಲ್ಲಿ ಗೆಳೆಯನ ಆದರ್ಶದ ಪೊಳ್ಳುತನ ಅರಿವಾಗಿ ಅಮ್ಮನ ಪ್ರೀತಿಯ ತೆಕ್ಕೆಗೆ ಮರಳಿದರೂ ಅಮ್ಮನೊಂದಿಗೆ ಹಿಂದಿನಂತೆ ಸಹಜವಾದ ಸಂಬಂಧವೊಂದನ್ನು ಸಾಧಿಸಿಕೊಳ್ಳುವುದು ಸಾಧ್ಯವಾಗದೆ ಅವಳ ಬದುಕು ಗೊಂದಲಮಯವಾಗುತ್ತದೆ. ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳಲಾಗದೆ ಅಮ್ಮನ ಸಾಂಗತ್ಯಕ್ಕೂ ಎರವಾಗಿ ನೀತೂ ಒಂಟಿಯಾಗುವುದಕ್ಕೆ ತಂದೆಯ ಅನುಪಸ್ಥಿತಿಯು ಕಾರಣವಾಗಿರುವುದನ್ನು ಈ ಕಾದಂಬರಿಯಲ್ಲಿ ಗುರುತಿಸಬಹುದು. ಗಂಡಸಿನ ಆಸರೆಯಿಲ್ಲದೆ ಒಬ್ಬಂಟಿಯಾಗಿ ಬದುಕುವ ಹೆಣ್ಣು ಮನೆಯಲ್ಲಿ ಮತ್ತು ಉದ್ಯೋಗದ ಸ್ಥಳದಲ್ಲಿ ಅನುಭವಿಸಬೇಕಾಗಿ ಬರುವ ಕಷ್ಟಗಳು ಹಾಗೂ ತಂದೆ–ತಾಯಿ ಇಬ್ಬರ ಸ್ಥಾನದಲ್ಲಿ ನಿಂತು ಮಕ್ಕಳನ್ನು ಬೆಳೆಸಬೇಕಾದಾಗ ಎದುರಿಸುವ ಭಾವನಾತ್ಮಕ ಸಮಸ್ಯೆಗಳ ಬಗೆಗೆ ಕೃತಿ ಗಮನ ಸೆಳೆಯುತ್ತದೆ.

ಕಮಲಾದಾಸ್ ಅವರು ಬರೆದ 'ಪ್ರೀತಿಸಲ್ಪಟ್ಟ ಹೆಣ್ಣು' ಕಥೆಯ ಅಮ್ಮಿಣಿಯ ಪತಿ ಅವಳನ್ನು ತುಂಬ ಪ್ರೀತಿಯಿಂದ ನಡೆಸಿಕೊಂಡವನಾಗಿದ್ದ. ಚೊಚ್ಚಲ ಹೆರಿಗೆಯ ನಿರೀಕ್ಷೆಯಲ್ಲಿದ್ದ ಮಡದಿಯನ್ನು ಅವಳ ತವರಿನಲ್ಲಿಯೆ ಬಿಟ್ಟು ಉದ್ಯೋಗದ ವರ್ಗಾವಣೆಯ ಕಾರಣ ಹೇಳಿ ಹೋದವ ಮರಳಿಲ್ಲ. ಅವನ ವಿಳಾಸ ಹುಡುಕುವ ಯತ್ನಗಳು ವಿಫಲವಾಗಿ ಕುಟುಂಬದವರು ಅವನನ್ನು ವಂಚಕನೆಂದು ದೂರಿದರೂ ಅಮ್ಮಿಣಿ ಅವನು ಎಂದಾದರೂ ಬರುವನೆಂದೇ ನಂಬಿದ್ದಾಳೆ. ಅವನ ಕಾವ್ಯಮಯ ಭಾಷೆ ಮತ್ತು ಅಸಾಧಾರಣ ಪ್ರೀತಿಯಲ್ಲಿರುವ ಕೊರತೆಗಳನ್ನು ಅರ್ಥಮಾಡಿಕೊಳ್ಳಲಾಗದ ಹಳ್ಳಿಯ ಮುಗ್ಧೆಯಾದ ಅಮ್ಮಿಣಿ, ಅವನಿಲ್ಲದ ಮುಂದಿನ ದಿನಗಳಲ್ಲಿ ಅವನು ಬಿಟ್ಟುಹೋದ ಕವಿತೆಯ ಪುಸ್ತಕಗಳನ್ನು ಪ್ರಯಾಸದಿಂದ ಓದುತ್ತ ನಗುವಿನ ನೆರಳೂ ಇಲ್ಲದವಳಂತೆ ಬದುಕಿದಳು. ಬೆಳೆಯುತ್ತಿರುವ ಮಗನ ಪೋಷಣೆಗಾಗಿ ತನ್ನ ಅಭಿಮಾನವನ್ನೆಲ್ಲ ಬದಿಗಿರಿಸಿ ಮನೆಗೆಲಸದವಳಾದಳು. ಮಗನನ್ನು ಉಪವಾಸದಿಂದ ರಕ್ಷಿಸಿದಳು. ಕ್ರಮೇಣ ಹೊಸಬದುಕಿಗೆ ಹೊಂದಿಕೊಂಡು ಅಳುವನ್ನು ನಿಲ್ಲಿಸಿದ ಅಮ್ಮಿಣಿ 'ಒಮ್ಮೆ ತನ್ನನ್ನು ಪ್ರೀತಿಸಿದ ಆ ಮನುಷ್ಯನನ್ನು ದೂರಲು ತಯಾರಾಗದೆ' ಅವನು ಕೊಟ್ಟುಹೋದ ಮಗುವಿನ ಪೋಷಣೆಯಲ್ಲಿ ಬದುಕು ಸವೆಸುತ್ತ ವಿರಾಗಿನಿಯಂತೆ ದಿನಗಳೆಯುತ್ತಾಳೆ.

'ಹಗ್ಗ' ಕಾದಂಬರಿಯ ಸುರೇಂದ್ರನ್ ತನ್ನ ಪತ್ನಿ ಪೊನ್ನಮ್ಮಳ ಹಟಕ್ಕೆ ಮಣಿದು, ವಿವಾಹವಿಲ್ಲದೆ ಗರ್ಭಿಣಿಯಾಗಿರುವ ಅವಳ ಗೆಳತಿಯ ಗರ್ಭದ ಹೊಣೆ ಹೊತ್ತುಕೊಳ್ಳುತ್ತಾನೆ. ಕನ್ಯಾಸ್ತ್ರೀಯರ ಮಠದ ಶಾಲೆಯಲ್ಲಿ ಅಧ್ಯಾಪಿಕೆಯಾಗಿರುವ ಆಕೆಯ ಕೆಲಸ ಉಳಿಯಬೇಕಾದರೆ ಗರ್ಭಕ್ಕೆ ಒಂದು ಅಧಿಕೃತತೆಯ

ಅಗತ್ಯವಿದೆ. 'ಮದುವೆಯಾಗುವ ಭರವಸೆ ಇತ್ತ ಒಬ್ಬನಿಂದ ಅವಳು ಗರ್ಭಿಣಿಯಾಗಿದ್ದಾಳೆಂದು ಕನ್ಯಾಸ್ತ್ರೀಯರನ್ನು ಸಮಾಧಾನಪಡಿಸಬೇಕಾಗಿದೆ'. ಭವಿಷ್ಯದಲ್ಲಿ ಯಾವುದೋ ಒಂದು ಮಗು ಸುರೇಂದ್ರನನ್ನು ಅಪ್ಪಾ ಎಂದು ಕರೆಯಬಹುದಾದ ಸಂಭವದ ಬಗ್ಗೆ ಪೊನ್ನಮ್ಮಳಿಗೆ ಆಕ್ಷೇಪವಿಲ್ಲ. 'ಪಾಪ ಒಂದು ಮಗು ಕರೆದರೇನಂತೆ' (ಪು. ೧೨೦೦, ಭಾಗ ೩) ಎಂಬ ಔದಾರ್ಯದಿಂದ ಪತಿಯನ್ನು ಕಾಡಿ ಒಪ್ಪಿಸಿ ಗೆಳತಿ ಬೀದಿಪಾಲಾಗುವುದನ್ನು ತಪ್ಪಿಸುತ್ತಾಳೆ. ಪ್ರೇಮವಂಚನೆಗೆ ಒಳಗಾಗಿರುವ ಗೆಳತಿ ಮುಂದಕ್ಕೆ ಸಮಾಜದಲ್ಲಿ ಒಂಟಿ ತಾಯಿಯಾಗಿ ತನ್ನ ಮಗುವನ್ನು ಬೆಳೆಸುವಲ್ಲಿ ಎದುರಿಸಬೇಕಾದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಅರಿವು ಪೊನ್ನಮ್ಮಳಿಗಿದೆ. ಗೆಳತಿಯ ಉದ್ಯೋಗವೊಂದು ಉಳಿದರೆ ಮಗುವನ್ನು ನಿರಾತಂಕವಾಗಿ ಬೆಳೆಸಬಹುದು ಎಂಬ ಮುಂದಾಲೋಚನೆಯಿಂದ ಹೀಗೆ ವರ್ತಿಸಿದ್ದಾಳೆ.

ಕಾಲ, ಬದುಕಲು ಮರೆತ ಸ್ತ್ರೀ, ಆಡುಜೀವನ, ದೇವರ ಕಣ್ಣು, ಮುಂತಾದ ಕೃತಿಗಳಲ್ಲಿಯೂ ಅಪ್ಪನೆಂಬವನು ಇಲ್ಲದೆ ಅಥವಾ ಹತ್ತಿರವಿಲ್ಲದೆ ಮಕ್ಕಳನ್ನು ಬೆಳೆಸುವ ಒಂಟಿ ತಾಯಂದಿರ ಚಿತ್ರಣವಿದೆ. ಸಂಬಂಧಂ ವ್ಯವಸ್ಥೆ, ಪುರುಷರು ಬಹುಸಂಖ್ಯೆಯಲ್ಲಿ ಪರದೇಶಗಳಲ್ಲಿ ಉದ್ಯೋಗ ಮಾಡುವುದು, ಸುಶಿಕ್ಷಿತ ಮತ್ತು ಉದ್ಯೋಗಸ್ಥ ಸ್ತ್ರೀಯರ ಸ್ವಾತಂತ್ರ್ಯಪ್ರಿಯತೆ... ಇತ್ಯಾದಿ ಕಾರಣಗಳಿಂದಾಗಿ ಮಕ್ಕಳು ತಂದೆಯಿಲ್ಲದೆ ಬೆಳೆಯುವುದು ಕೇರಳದಲ್ಲಿ ಸಾಮಾನ್ಯವಾದ ಸಂಗತಿಯಾಗಿದೆ ಎಂಬುದು ತಿಳಿದುಬರುತ್ತದೆ.

ತಾಯ್ತನವೆಂಬ ಸ್ಥಾಪಿತ ಮೌಲ್ಯವನ್ನು ನಿರಾಕರಿಸಿದವರು

ತಾಯ್ತನವನ್ನು ಅತಿ ವೈಭವೀಕರಿಸಿ ಹೆಣ್ಣಿನ ಮೇಲೆ ಹೊರಿಸುವ ಸಮಾಜದ ಇಬ್ಬಗೆಯ ನೀತಿಯು ಮಗುವಿನ ಪಾಲನೆಗೆ ತಾಯಿಯನ್ನೆ ಹೊಣೆಯಾಗಿಸಿದೆ. ಅನಧಿಕೃತ ತಾಯ್ತನವು ಅವಮಾನಕ್ಕೆ ಕಾರಣವಾಗುವುದರಿಂದಾಗಿ, ವಂಚಿಸಿದ ಪುರುಷನ ಹೆಸರನ್ನು ಬಹಿರಂಗಪಡಿಸಲಾಗದೆ ಸಮಾಜದ ಅವಹೇಳನವನ್ನು ಸುಮ್ಮನೆ ಸಹಿಸಿಕೊಳ್ಳಬೇಕಾದ ಅನಿವಾರ್ಯತೆ ಸ್ತ್ರೀಯರ ಪಾಲಿಗೆ ಬರುತ್ತದೆ. ಆಕೆಯನ್ನು ಬಸುರಾಗಿಸಿದ ಪುರುಷನಿಗೆ ಮಗುವನ್ನು ಪೋಷಿಸುವ ಹೊಣೆಗಾರಿಕೆಯಿಲ್ಲ. ಉಪವಾಸವಿದ್ದಾದರೂ ಮಗುವಿನ ಹೊಟ್ಟೆ ತುಂಬಿಸುವ ಅಮ್ಮಂದಿರು ಇರುವಂತೆಯೆ, ಕಾಡುವ ಬಡತನದಲ್ಲಿ ಮನೆ ನಡೆಸಲು ಒದ್ದಾಡುತ್ತ ಮಕ್ಕಳನ್ನು ಅರೆಹೊಟ್ಟೆ ಅಥವಾ ಖಾಲಿಹೊಟ್ಟೆಯಲ್ಲಿ ಮಲಗಿಸುವ ಅನಿವಾರ್ಯತೆಗೆ ಪಕ್ಕಾಗಿರುವ ಸ್ತ್ರೀಯರನ್ನೂ ಮಲಯಾಳಂ ಕೃತಿಗಳಲ್ಲಿ ಕಾಣಬಹುದು.

ಎಂ.ಟಿ. ವಾಸುದೇವನ್ ನಾಯರ್ ಅವರು ಬರೆದ 'ಕರ್ಕಟಕ' ಹಾಗೂ 'ಅಕ್ಕಯ್ಯ' ಎಂಬ ಕತೆಗಳು ಹೆಣ್ಣು ಮತ್ತು ತಾಯ್ತನದ ಬಗೆಗಿನ ಪಾರಂಪರಿಕ ತಿಳುವಳಿಕೆಗಳಿಗೆ ಸವಾಲಾಗುವಂಥವು. 'ಕರ್ಕಟಕ' ತರವಾಡಿನ ಪ್ರತಿಷ್ಠೆಯನ್ನು ಉಳಿಸುವುದಕ್ಕಾಗಿ ಸ್ವಂತಮಗನ ಹಸಿವನ್ನು ಕಡೆಗಣಿಸುವ ತಾಯಿಯ ಕತೆ.

ಪರವೂರಿನಲ್ಲಿ ಕೆಲಸ ಮಾಡುವ ಗಂಡ ಮತ್ತು ಮಗ ಕಳುಹಿಸುವ ಅಲ್ಪ ಮೊತ್ತದಲ್ಲಿ ಮನೆಯಲ್ಲಿರುವ 'ಶನಿಸಂತಾನಗಳನ್ನೆಲ್ಲ ಸಾಕಲು' ಒದ್ದಾಡುವವಳು ಉಣ್ಣಿಯ ಅಮ್ಮ. 'ಉಪವಾಸವಿದ್ದರೂ ನನ್ನ ಮಕ್ಕಳು ನಾಲ್ಕು ಜನರ ಮುಂದೆ ತಲೆಯೆತ್ತಿ ನಡೆಯಬೇಕು' ಎಂಬ ಸ್ವಾಭಿಮಾನದಿಂದ ಮನೆಯ ಬಡತನ ಇತರರಿಗೆ ತಿಳಿಯದಂತೆ ಕುಟುಂಬಿಕರ ಸಹಾಯಕ್ಕೆ ಕೈಯೊಡ್ಡದೆ ಮನೆಯ ಖರ್ಚು ನಿಭಾಯಿಸುವವಳು. ಕರ್ಕಟಕ ಮಾಸದ ಬಡತನದಲ್ಲಿ ಮನೆಯ ಮಕ್ಕಳ ಹೊಟ್ಟೆ ತುಂಬಿಸಲಾರದೆ ಒದ್ದಾಡುತ್ತಿದ್ದ ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಗಂಡನ ಕುಟುಂಬದ ನೆಂಟನೊಬ್ಬನ ಆಗಮನವಾಗುತ್ತದೆ. ಗಂಡನ ಮನೆಯಲ್ಲಿ ಮರ್ಯಾದೆ ಉಳಿಸಿಕೊಳ್ಳಬೇಕಿದ್ದರೆ ನೆಂಟನಿಗೆ ಸಮೃದ್ಧ ಉಣಬಡಿಸುವುದು ಅನಿವಾರ್ಯವಾಗಿದೆ. ಅದಕ್ಕಾಗಿ ನೆರೆಯವರಿಂದ ಅಕ್ಕಿಯನ್ನು ಕಡತಂದು ಹೊಂದಿಸಿ ನೆಂಟನನ್ನು ಉಪಚರಿಸುತ್ತಾಳೆ.

ತರವಾಡಿನ ಪ್ರತಿಷ್ಠೆಗಾಗಿ ನೆರೆಮನೆಯಲ್ಲಿ, ಅಂಗಡಿಯಲ್ಲಿ ಸಾಲ ಮಾಡಲು ಹಿಂಜರಿಯದ ಈ ತಾಯಿ ಒಂದು ಹೊತ್ತಿನ ಅನ್ನಕ್ಕಾಗಿ ಹಂಬಲಿಸುವ ಮಗನಿಗಾಗಿ ನೆರೆಯವರ ಮುಂದೆ ಕೈಯೊಡ್ಡಲಾರಳು. ಬದಲಿಗೆ ಮಗನಿಗೆ ಹಸಿವು ತಡೆದುಕೊಳ್ಳುವುದನ್ನು ಅಭ್ಯಾಸ ಮಾಡಿಸುತ್ತಾಳೆ. ಗಂಜಿ ಬೇಯಿಸಿದ ದಪ್ಪನೀರಿಗಾಗಿ ಆಸೆಪಡುವ ಮಗುವಿಗೆ ಅದನ್ನೂ ಹೊಟ್ಟೆತುಂಬ ಉಣಿಸಲಾಗದ ಅಮ್ಮನಿಗೆ ಮಗುವಿನ ಹಸಿವಿಗಿಂತ ತರವಾಡಿನ ಪ್ರತಿಷ್ಠೆಯೆ ಮುಖ್ಯವಾಗಿದೆ. ಕಿತ್ತು ತಿನ್ನುವ ಬಡತನ ಮತ್ತು ಹೆತ್ತ ಕರುಳಿನ ಹಸಿವಿನ ನಡುವೆಯೂ ಗಂಡನ ಕಡೆಯ ನೆಂಟನ ಮುಂದೆ ಮನೆತನದ ಗೌರವ ಕಾಪಾಡುವ ನಿರ್ಧಾರ ಮಾಡುತ್ತಾಳೆ. ಅದಕ್ಕಾಗಿ ಹಸಿದ ಮಗನನ್ನು ಉಪವಾಸ ಕೆಡವಿ ನೆಂಟನಿಗೆ ಹೊಟ್ಟೆತುಂಬ ಉಣಬಡಿಸುತ್ತಾಳೆ.

ತಪ್ಪು ಯಾರದೇ ಆಗಿದ್ದರೂ, ಎಡವಿದ ಘಟನೆಯ ಪರಿಣಾಮವನ್ನು ಹೆಣ್ಣು ಮಾತ್ರ ಎದುರಿಸಬೇಕಾಗುವ ಸಮಾಜದ ದ್ವಂದ್ವ ನೀತಿಯ ಕುರಿತು ಗಮನ ಸೆಳೆಯುವ ಕಥೆ 'ಅಕ್ಕಯ್ಯ'. ವಿವಾಹಪೂರ್ವ ಸಂಬಂಧದಲ್ಲಿ ಹುಟ್ಟಿದ ಮಗುವಿನಿಂದ ಅಕ್ಕನೆಂದು ಕರೆಸಿಕೊಳ್ಳುವ ಅಸಹಾಯಕ ಹೆಣ್ಣುಮಗಳಿಗೆ ಮಗ ತನ್ನನ್ನು ಒಮ್ಮೆ 'ಅಮ್ಮಾ' ಎಂದು ಕರೆಯಬೇಕೆಂಬ ಆಸೆ. ಅಪ್ಪುವನ್ನು ಮುದ್ದಾಡುತ್ತ, ಅವನ ಬೆಳವಣಿಗೆಯನ್ನು ನೋಡುತ್ತ ಅಮ್ಮನ ಮನೆಯಲ್ಲೇ ಇರುವ ಹಂಬಲ. ಮಗನನ್ನು ಮೀಯಿಸುವ, ತಲೆ ಬಾಚುವ, ತುತ್ತು ಬಾಯಿಗಿಡುವ, ಅಪ್ಪಿ ಹಿಡಿದು ಮಲಗುವ ಅಕ್ಕಯ್ಯನಿಗೆ ಎಲ್ಲ ತಾಯಂದಿರಂತೆ ತನ್ನ ಮಗ ಚೆನ್ನಾಗಿ ಬೆಳೆಯಬೇಕೆಂಬ ಬಯಕೆ.

ತಂದೆಯ ಸಾಂಗತ್ಯ, ರಕ್ಷೆ ಇಲ್ಲದೆ, ಮನೆಯವರ ಅಸಡ್ಡೆ, ಊರವರ ಗುಮಾನಿಗಳ ನಡುವೆಯೂ ಗರ್ಭದಲ್ಲಿರುವ ಮಗುವನ್ನು ಹೆತ್ತು ಬೆಳೆಸಲು ಒದ್ದಾಡುವ ತಾಯಿಯ ಮಾನಸಿಕ ಸ್ಥಿತಿಯನ್ನು ಕತೆ ವಿಶ್ಲೇಷಿಸುತ್ತದೆ. ಎಳೆಯ ವಯಸ್ಸಿನ ಅಕ್ಕಯ್ಯ, ತಿಳಿಯದೆ ಮಾಡಿದ ತಪ್ಪಿಗಾಗಿ ನಿರಂತರವಾಗಿ ಸ್ವಂತ

ತಾಯಿ ಹಾಗೂ ಸೋದರನ ಕಟುನುಡಿಗಳನ್ನು ಸಹಿಸಿಕೊಂಡಿದ್ದಾಳೆ. ಸಮಾಜದ ದೃಷ್ಟಿಯಲ್ಲಿ ಕನ್ಯೆಯಾಗಿರುವ ಅವಳು ಮನೆಯ ಗೌರವಕ್ಕಾಗಿ ಮದುವೆಯಾಗಬೇಕಾಗಿದೆ. ಅತಿಯಾಗಿ ಪ್ರೀತಿಸುವ ಮಗನಿಂದ ಶಾಶ್ವತವಾಗಿ ದೂರವಾಗಬೇಕಾಗಿದೆ. ಬೇರೊಬ್ಬನ ಮಡದಿಯಾಗಿ ದೂರದ ಊರಿಗೆ ಹೋಗಬೇಕಾದಾಗ ಸಂಕಟಪಟ್ಟರೂ ಮನೆಯ ಮತ್ತು ಮಗನ ಸುಖಕ್ಕಾಗಿ ಆಕೆ ಈ ಮದುವೆಗೆ ಒಪ್ಪಿಕೊಳ್ಳಬೇಕಾಗಿದೆ.

ಅಕ್ಕಯ್ಯ ಈಗಾಗಲೇ ಒಂದು ಹೆತ್ತಿರುವ 'ಮಹಾಪ್ರಮಾದವನ್ನು' ಮುಚ್ಚಿಟ್ಟು ಮಾಡುವ ಈ ವಿವಾಹ ಅವಳ ಆಯ್ಕೆಯಂತೆ ನಡೆಯುವಂಥದಲ್ಲ. ಮಗುವನ್ನು ಬಿಟ್ಟು ಹೋಗಲು ಮನಸ್ಸಿಲ್ಲದೆ ಮೌನವಾಗಿ ಕೊರಗುತ್ತ, ಕಣ್ಣೀರಿಡುತ್ತ 'ಚೆನ್ನಾಗಿ ಓದ್ಬೇಕು, ಒಳ್ಳೇ ಹುಡುಗನಾಗ್ಬೇಕು' ಎಂದು ಮತ್ತೆ ಮತ್ತೆ ಮಗುವನ್ನು ತಬ್ಬಿ ಬುದ್ಧಿ ಹೇಳುವ ಅಕ್ಕಯ್ಯ ಮಗನ ಗಮನಕ್ಕೆ ಬಾರದಂತೆ ತವರುಮನೆಯಿಂದ ಹೊರಡುತ್ತಾಳೆ. ಅಪ್ಪನ ಹೆಸರು ತಿಳಿಯದ ಮಗುವನ್ನು ತವರಿನಲ್ಲಿ ಬಿಟ್ಟು ಬೇರೊಬ್ಬನ ಮಡದಿಯಾಗಿ ಮಗನಿಂದ ಶಾಶ್ವತವಾಗಿ ದೂರವಾಗಬೇಕಾದ ಅಸಹಾಯ ಪರಿಸ್ಥಿತಿಯಲ್ಲಿ ಅಕ್ಕಯ್ಯನ ಮಾತೃವಾತ್ಸಲ್ಯವು ಸೊರಗುವುದನ್ನು ಕತೆಯು ಗುರುತಿಸಿದೆ.

ಮಗುವಿನಿಂದ ದೊಡ್ಡಮ್ಮನೆಂದು ಕರೆಸಿಕೊಳ್ಳುವ ಅಕ್ಕಯ್ಯಳ ಅಮ್ಮನಿಗೆ ತನ್ನ ಮಗಳ ಬಾಳು ಹಸನಾಗುವುದು ಮುಖ್ಯವಾಗಿದೆ. ಹಾಗಾಗಿ ಮಗಳ ವೈವಾಹಿಕ ಬದುಕಿಗೆ ಅಡ್ಡಿಯಾಗಿರುವ ಮೊಮ್ಮಗನ ಬಗ್ಗೆ ಅಸಮಾಧಾನ ಹೊಂದಿದ್ದಾಳೆ. ಮೊಮ್ಮಗನಿಗೆ ದಿನವೆಲ್ಲ ಬೈಯುವ ಮತ್ತು ಶಾಪ ಹಾಕುವ ಮೂಲಕ ಅದನ್ನು ವ್ಯಕ್ತಪಡಿಸುತ್ತಿರುತ್ತಾಳೆ. ನಾಲ್ಕು ಎಕರೆ ಜಮೀನಿರುವ ವರನಿಗೆ ಕೊಟ್ಟರೆ ಮಗಳು 'ದುಡಿದು ಸುಖವಾಗಿರಬಹುದು' ಎಂಬ ನಂಬಿಕೆ ಅವಳಿಗೆ. ಹಾಗಾಗಿ ಮಗಳ ಪೂರ್ವಕಥೆ ವರನ ಕಡೆಯವರ ಕಿವಿಗೆ ಬೀಳದಂತೆ ತನ್ನ ದೂರದ ಸಂಬಂಧಿಯ ಊರಲ್ಲಿ ಮಗಳ ಮದುವೆ ಏರ್ಪಾಡು ಮಾಡಿದ್ದಾಳೆ. ಆ ಮೂಲಕ ಮಗಳ ಬದುಕಿಗೆ ಒಂದು ನಿಶ್ಚಿಂತೆಯ ನೆಲೆಯನ್ನು ಕಲ್ಪಿಸಲು ಪ್ರಯತ್ನಿಸಿದ್ದಾಳೆ.

ಈ ಕತೆಯಲ್ಲಿ ತಾಯ್ತನದ ಎರಡು ಮಾದರಿಗಳು ಸಿಗುತ್ತವೆ. ತಪ್ಪು ಮಾಡಿದಳೆಂದು ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ತ್ಯಜಿಸಲಾರದ ತಾಯಿ ಮಗಳಿಗಾಗಿ ತನ್ನ ಸ್ವಂತ ಮಗನನ್ನು ದೂರ ಮಾಡಿಕೊಂಡಿದ್ದಾಳೆ. ತಂಗಿಯ ವಿಚಾರವಾಗಿ ಅಮ್ಮನೊಂದಿಗೆ ವಾದಿಸಿ ಸಿಟ್ಟಾದ ಮಗ ಮನೆ ಬಿಟ್ಟು ಹೋಗಿದ್ದಾನೆ. 'ಹೊಟ್ಟೆಯಲ್ಲಿ ಹೊತ್ತದ್ದಲ್ಲವೆ? ನನಗವಳನ್ನು ಕೊಲ್ಲುವುದು ಸಾಧ್ಯವೆ ಹೇಳು?' ಎಂಬ ಮಾತುಗಳು ತಾಯ್ತನದ ಅಸಹಾಯಕತೆಯನ್ನು ಧ್ವನಿಸುತ್ತವೆ. ಮಗನಾದರೆ ಗಂಡು. ಎಲ್ಲಾದರೂ ಬದುಕಿಕೊಂಡಾನು. ಆದರೆ ಮದುವೆಯಿಲ್ಲದೆ ಗರ್ಭಿಣಿಯಾಗಿರುವ ಮಗಳಿಗೆ ತವರಿನ ಹೊರತು ಬೇರೆ ಆಸರೆಯಿಲ್ಲ ಎಂಬುದು ತಾಯಿಗೆ ತಿಳಿದಿದೆ. ಮಗಳು ಊರವರ ದೃಷ್ಟಿಯಲ್ಲಿ ಕಲಂಕಿನಿ

ಎನಿಸಿಕೊಳ್ಳುವುದನ್ನು ತಡೆಯುವುದಕ್ಕಾಗಿ ಅವಳು ಹೆತ್ತ ಮಗುವಿಗೂ ತಾನೇ ಅಮ್ಮನಾಗಿದ್ದಾಳೆ. ಆ ಮೂಲಕ ಮಗಳು ಹೊಸ ಬದುಕು ಆರಂಭಿಸುವ ದಾರಿಯನ್ನು ತೆರೆದಿಟ್ಟಿದ್ದಾಳೆ. ಮಗಳಾದರೂ ಅಷ್ಟೇ. ತಾಯ್ತನದ ಅತೀವ ಮೋಹದಿಂದ ತನ್ನ ಹೊಟ್ಟೆಯಲ್ಲಿನ ಅನಧಿಕೃತ ಮಗುವನ್ನು ಉಳಿಸಿಕೊಂಡವಳು. ಮಗುವಿನ ತಂದೆಯ ಹೆಸರು ಬಹಿರಂಗಪಡಿಸಲಾರದ ಕಾರಣಕ್ಕೆ ಹೆತ್ತ ಮಗುವಿಗೆ ತಾಯಿಯಾಗಲಾರದೆ ಜೀವಮಾನವಿಡೀ ಕೊರಗುವವಳು. ಅಕ್ಕಯ್ಯ ಹಾಗೂ ದೊಡ್ಡಮ್ಮನೊಂದಿಗಿನ ತನ್ನ ಸಂಬಂಧದ ನೆಲೆಯಲ್ಲಿ ತಾಯ್ತನದ ಬಗ್ಗೆ ತಪ್ಪು ಕಲ್ಪನೆ ಹೊಂದಿರುವ ಮಗುವಿಗೆ ಅಮ್ಮನಿಗಿಂತ ಅಕ್ಕನೇ ಇಷ್ಟ. ಅಕ್ಕ ಎಂದೆಂದೂ ತನ್ನ ಜತೆಗಿರಲಿ, ಅಮ್ಮ ಬೇಡ ಎಂಬ ಅಭಿಪ್ರಾಯವಿದೆ.

ಮದುವೆಗೆ ಮೊದಲೇ ಪ್ರೇಮಕ್ಕೆ ಬಿದ್ದು ಮೋಸಕ್ಕೆ ಒಳಗಾದ ಪರಿಣಾಮವಾಗಿ ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗೆ ಅಕ್ಕನಾಗಬೇಕಾಗಿ ಬಂದ ಅನಿವಾರ್ಯತೆಯಲ್ಲಿ ಸಂಕಟಪಡುವ ಅಕ್ಕಯ್ಯ ತಾಯ್ತನವನ್ನು ವೈವಾಹಿಕ ಚೌಕಟ್ಟಿಗೆ ಸೀಮಿತಗೊಳಿಸಿರುವ ಸಮಾಜದ ಕ್ರೌರ್ಯಕ್ಕೆ ಬಲಿಯಾಗಿದ್ದಾಳೆ. ಕಣ್ಣಮುಂದೆಯೆ ಇರುವ ಸ್ವಂತ ಮಗುವನ್ನು ತಮ್ಮನಂತೆ ನಡೆಸಿಕೊಳ್ಳಬೇಕಾದ ಹೆಣ್ಣಿನ ಇಂಥ ಅಸಹಾಯಕತೆಗಳು ಗಂಡಿಗಿಲ್ಲ. ಮಗುವಿನ ಹುಟ್ಟಿಗೆ ಕಾರಣವಾದ ಗಂಡಿಗೆ ಯಾವುದೇ ಶಿಕ್ಷೆ, ಸಂದಿಗ್ಧಗಳಿಲ್ಲ.

ಹೊಟ್ಟೆಯ ಮಗುವಿಗಾಗಿ ಜೀವ ಕೊಡುವುದಕ್ಕೂ ಸಿದ್ಧವಾಗುವ ಮಾತೃತ್ವದ ವೈಭವೀಕೃತ ಕಲ್ಪನೆಗೆ ಹೊಂದದ 'ಕರ್ಕಟಕ' ಕತೆಯ ನಿರ್ಭಾವುಕಳೆನಿಸುವ ತಾಯಿ ಹಾಗೂ ಹೆತ್ತ ಮಗುವಿಗೆ 'ನಾನೇ ನಿನ್ನ ಅಮ್ಮ' ಎಂದು ಹೇಳಲಾಗದೆ ಸ್ವಂತ ಮಗನಿಂದಲೆ ಅಕ್ಕನೆಂದು ಕರೆಸಿಕೊಳ್ಳುವ 'ಅಕ್ಕಯ್ಯ' ಕತೆಯ ತಾಯಿ... ಹೀಗೆ ತಾಯ್ತನದ ಸಿದ್ಧ ಮಾದರಿಗಳಿಗಿಂತ ತೀರಾ ಭಿನ್ನವಾದ ಎರಡು ಮಾದರಿಗಳನ್ನು, ಸ್ತ್ರೀಯ ಹೊಸ ರೀತಿಯ ನಿರ್ವಚನಗಳನ್ನು ವಾಸುದೇವನ್ ನಾಯರ್ ಕಾಣಿಸಿದ್ದಾರೆ.

ಹೆಣ್ಣಾಗಿ ಜನಿಸಿದ ಒಂದೇ ಕಾರಣಕ್ಕೆ ಸಮಾಜವು ಹೇರುವ ತಾಯ್ತನದ ಅತಿರಂಜಿತ ಮೌಲ್ಯವನ್ನು 'ಚಂದನದ ಮರಗಳು' ಕತೆಯ ಕಲ್ಯಾಣಿ ಮತ್ತು ಶೀಲಾ ಇಬ್ಬರೂ ವಿರೋಧಿಸಿದ್ದಾರೆ. ಕಲ್ಯಾಣಿ ತನಗೆ ಇಷ್ಟವಿಲ್ಲದ ಪತಿಯ ಮಗುವನ್ನು ತನ್ನ ಗರ್ಭದಲ್ಲಿ ಧರಿಸಲು ಅಸಹ್ಯಿಸಿಕೊಳ್ಳುತ್ತಾಳೆ. "ನನ್ನ ಗರ್ಭಪಾತ್ರೆ ಅಶುದ್ಧವಾಯಿತೆಂಬ ಭಾವನೆ ನನ್ನನ್ನು ಚಡಪಡಿಸುವಂತೆ ಮಾಡಿದೆ. ಆತನ ಮಗುವನ್ನು ನಾನೆಂದೂ ಹೆರಲಾರೆ" (ಪು. ೭೧, ಕಮಲದಾಸ್‌ರವರ ನೀಳ್ಗಥೆಗಳು) ಎಂದು ನಿರಾಕರಿಸುತ್ತಾಳೆ. ಸ್ವತಹ ಡಾಕ್ಟರ್ ಆಗಿದ್ದು, ಅಪಾಯಕಾರಿ ವಿಧಾನ ಎಂದು ಗೊತ್ತಿದ್ದೂ ಹಳ್ಳಿಮದ್ದು ಬಳಸಿ 'ಬಯಸದೇ ನಿಂತ ಗರ್ಭ'ವನ್ನು ನಿವಾರಿಸಿಕೊಳ್ಳುತ್ತಾಳೆ. ಒಬ್ಬ ಹಳ್ಳಿಯ ಹೆಂಗಸಿನ ಕೈಯಿಂದ, ಪ್ರಾಣಕ್ಕೆ ಅಪಾಯವಾಗುವ ಪರಿಸ್ಥಿತಿಯಲ್ಲಿ ಗರ್ಭಪಾತ ಮಾಡಿಸಿಕೊಳ್ಳುವ ಮೂಲಕ ತಾಯ್ತನವು ಹೆಣ್ಣಿನ ಆಯ್ಕೆಯ ಪ್ರಶ್ನೆಯಾಗಿರಬೇಕು ಎಂಬ ಅಂಶವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತಾಳೆ.

ಶೀಲಾ ಕೂಡ ಪತಿಯನ್ನು ಪ್ರೀತಿಸುತ್ತಿಲ್ಲ. ಇಷ್ಟವಿಲ್ಲದವನ ಗರ್ಭವನ್ನು ಹೊತ್ತು ಬೆಳೆಸಲು ಆಕೆ ಸಿದ್ಧಳಿಲ್ಲ. ಹಾಗಾಗಿ 'ತಾಯಿಯಾಗದ ಬಗ್ಗೆ' ಸಂತೋಷಪಡುತ್ತಾಳೆ. ಪುಟ್ಟ ಮಕ್ಕಳನ್ನು ಇಷ್ಟಪಡುವ ಸಾಮಾನ್ಯ ಸ್ತ್ರೀಗುಣಕ್ಕೆ ಭಿನ್ನವಾಗಿ ಮಕ್ಕಳನ್ನು ದ್ವೇಷಿಸುತ್ತಾಳೆ. ಬೆಳೆದ ಮಕ್ಕಳು ಸೃಷ್ಟಿಸುವ ಸಮಸ್ಯೆಗಳ ಬಗ್ಗೆ ತಾಯಂದಿರು ಕ್ಲಬ್ಬಿನಲ್ಲಿ ಆತಂಕದಿಂದ ಚರ್ಚಿಸುತ್ತಿದ್ದರೆ ಅವಳ ಮನಸ್ಸು "ಶೀಲಾ, ನೀನು ಲಕ್ಕಿ, ಇಳಿವಯಸ್ಸಿನಲ್ಲಿ ನಿನ್ನ ಬದುಕು ಶಾಂತಪೂರ್ಣವಾಗಿರುತ್ತದೆ" (ಪು. ೭೫, ಅದೇ) ಎಂದು ಗಹಗಹಿಸಿ ನಗುತ್ತಾ ನುಡಿಯುತ್ತದೆ. ಪತಿಯ ಮೇಲೆ ಪ್ರೀತಿಯಿಲ್ಲದ ಕಾರಣದಿಂದಾಗಿ ಈ ಇಬ್ಬರು ಗೆಳತಿಯರೂ ಪತಿಯ ಗರ್ಭವನ್ನು ಧರಿಸಲು ಇಷ್ಟಪಡುತ್ತಿಲ್ಲ. ಪತಿಯ ಕುರಿತಾದ ಅನಾಸಕ್ತಿಗೆ ಅವರ ನಡುವಿನ ಪರಸ್ಪರ ಲೈಂಗಿಕ ಆಕರ್ಷಣೆಯೆ ಕಾರಣವಾಗಿದೆ. ಸಲಿಂಗ ಮೈತ್ರಿಯಲ್ಲಿ ತೃಪ್ತರಾಗಿರುವ ಸ್ತ್ರೀಯರು ಸಮಾಜವು ವಿಧಿಸಿರುವ ಮದುವೆ, ತಾಯ್ತನ ಮುಂತಾದ ವ್ಯವಸ್ಥೆಯ ಮೇಲೆ ನಂಬಿಕೆ, ಗೌರವಗಳನ್ನು ಹೊಂದಿಲ್ಲ.

ಕೆ. ಸರಸ್ವತಿಯಮ್ಮ ಅವರು ಬರೆದಿರುವ 'ಕ್ಲಾಸ್ ಫೋರ್ ಮಂದಿ' ಎಂಬ ಕತೆಯ ಪಾರುವಮ್ಮ ಹದಿನೆಂಟು ವರ್ಷಗಳ ಹಿಂದೆ ಪಕ್ಕದ ಮನೆಯ ಮುನ್ಸಿಫರ ತಮ್ಮ ಗೋಪಾಲನ್ ನಾಯರ್‌ನ ಸೇವೆಯಲ್ಲಿ ಗರ್ಭಿಣಿಯಾದವಳು. ಇಷ್ಟಪಟ್ಟೇ ಕೂಡಿದ ಕಾರಣ ಅವನ ಮೇಲೆ ಅವಳಿಗೆ ಸಿಟ್ಟೇನಿಲ್ಲ. 'ಪ್ರೇಮಿಗಳೆಲ್ಲ ಮದುವೆಯಾಗಲೇಬೇಕೆಂಬ ನಿರ್ಬಂಧವಿಲ್ಲ' ಎಂಬ ತಿಳುವಳಿಕೆಯೊಂದಿಗೆ ಅವನ ಮನೆತನಕ್ಕೆ ಕೆಟ್ಟ ಹೆಸರು ಬಾರದಂತೆ ಬೀಳ್ಕೊಟ್ಟಿದ್ದಾಳೆ. 'ಬೆಲೆವೆಣ್ಣಾಗಿ ಬದುಕೋದು ನಮ್ ಪದ್ಧತಿಯಲ್ಲ' ಎಂಬ ಸಂಕಲ್ಪದೊಂದಿಗೆ ಅವನ ನೆನಪಲ್ಲೆ ಬದುಕಿದ್ದಾಳೆ. ಅವನಾದರೂ ಊರು ಬಿಟ್ಟಮೇಲೂ ಮರೆಯದೆ ಖರ್ಚಿಗೆ ಹಣ ಕಳಿಸಿದ್ದಾನೆ. ತನ್ನ ಅಧಿಕಾರದ ಪ್ರಭಾವ ಬಳಸಿ ಊರಿನ ದೇವಸ್ಥಾನದಲ್ಲಿ ಚಾಕರಿಯ ಕೆಲಸವನ್ನೂ ಕೊಡಿಸಿದ್ದಾನೆ. ಗೋಪಾಲನ್ ನಾಯರೊಂದಿಗಿನ ಅವಳ ರಹಸ್ಯಪ್ರಣಯವನ್ನು ವ್ಯಭಿಚಾರವೆಂದು ಊರು ಆಡಿಕೊಂಡರೂ ಅವಳು ಹಾಗೆಂದುಕೊಂಡಿಲ್ಲ. ಅವನ ಆಯುಷ್ಯಕ್ಕಾಗಿ ದಿನವೂ ದೇವರಲ್ಲಿ ಪ್ರಾರ್ಥಿಸುತ್ತಾಳೆ. ತಂದೆಯ ಹೆಸರು ಹೇಳಲಾಗದ ಮಗಳನ್ನು ಹಡೆದು ಮಲತಾಯಿಯ ಮತ್ತು ಊರವರ ಕೆಟ್ಟಮಾತುಗಳನ್ನು ನಿರಂತರ ಕೇಳಿ ನೊಂದಿರುವ ಪಾರುವಮ್ಮ ಮಗಳ ಬದುಕು ತನ್ನಂತಾಗಬಾರದು ಎಂಬ ಎಚ್ಚರದೊಂದಿಗೆ ಮಗಳನ್ನು ಬೆಳೆಸಿದ್ದಾಳೆ.

ಪ್ರಸ್ತುತ ಉತ್ಸವದ ನಿಮಿತ್ತ ಅದೇ ಮನೆಗೆ ವಾಸಕ್ಕೆ ಬಂದಿರುವ ಕಮಿಷನರ್‌ರಿಗೆ ಒಂದು ದಿನದ ಮಟ್ಟಿಗೆ ಮಗಳನ್ನು ಒಪ್ಪಿಸುವಂತೆ ಶ್ರೀಕಾರ್ಯಕಾರನಿಂದ ಸಂದೇಶ ತಲುಪಿದಾಗ ಪಾರುವಮ್ಮ ಕಂಗೆಡುತ್ತಾಳೆ. ತನ್ನಂತೆ ಪ್ರೇಮಸಂಬಂಧವಿಲ್ಲದೆ ಕೇವಲ ಒಂದು ದಿನಕ್ಕಾಗಿ ಮಗಳು ಕಮಿಷನರರ ಜೊತೆಗೆ ಮಲಗುವುದರ ನಂತರದ ಪರಿಣಾಮಗಳನ್ನು ಊಹಿಸಿ ಕಂಗೆಡುತ್ತಾಳೆ. 'ಒಂದು ದಿನವಾದರೂ, ಚಕ್ರವರ್ತಿಯ ಸಂಗವೇ ಆದರೂ ಅವಳ ಕನ್ಯತ್ವ ನಶಿಸುತ್ತಲ್ಲವೆ?' ಎಂಬುದು ಅವಳ ಕಳವಳ. ತಾನು

ಅನುಭವಿಸಿದ ನೋವು ಅವಮಾನ ಮಗಳ ಬದುಕಲ್ಲಿ ಮರುಕಳಿಸುವುದು ಬೇಡವೆಂದು ಗಟ್ಟಿನಿರ್ಧಾರ ಮಾಡುತ್ತಾಳೆ. 'ಮಗಳನ್ನು ಕೊಂದುಬಿಟ್ಟರೆ ಹೇಗೆ' ಎಂಬ ಉಪಾಯವೊಂದು ಮನಸ್ಸಿಗೆ ಹೊಳೆಯುತ್ತದೆ. ತುಂಬಾ ಯೋಚಿಸಿದ ನಂತರ 'ದಾರಿ ತಪ್ಪಿ ಇರೋದಕ್ಕಿಂತ ಜೈಲೇ ಮೇಲು. ಸಾವಿನ ವೇದನೆ ಕ್ಷಣಿಕವಷ್ಟೆ. ಜೀವನವಿಡೀ ಉರಿಸುವುದಿಲ್ಲವಲ್ಲ' (ಪು. ೩೩, ಕೇರಳ ಕಾಂತಾಸಮ್ಮಿತ) ಎಂದು ನಿರ್ಧರಿಸಿ ತನ್ನ ಉಪಾಯವನ್ನು ಕಾರ್ಯರೂಪಕ್ಕೆ ತರುತ್ತಾಳೆ. ಮಗಳು ಶೀಲ ಕಳೆದುಕೊಂಡು ತನ್ನಂತಾಗುವ ಸಂಭವವನ್ನು ತಡೆಯುವುದಕ್ಕಾಗಿ ಸ್ವಂತ ಮಗಳನ್ನೇ ಕೊಂದುಬಿಟ್ಟ ಪಾರುವಮ್ಮ ಕರುಳಕುಡಿಯನ್ನು ಬದುಕಿಸುವುದಕ್ಕಾಗಿ ಹೋರಾಡುವ ಸಾಮಾನ್ಯ ತಾಯಂದಿರ ಚಿತ್ರಕ್ಕಿಂತ ಭಿನ್ನವಾಗಿರುವ ವಾಸ್ತವದ ಉದಾಹರಣೆಯಾಗಿ ಕಾಣುತ್ತಾಳೆ.

ಹೆರದೆ ಅಮ್ಮನಾದವರು

ಹೆರದ ಹೆಣ್ಣನ್ನು ಬಂಜೆಯೆಂದು ಅವಮಾನಿಸುವ, ಗರ್ಭವೇ ಹೆಣ್ಣಿನ 'ಚಹರೆ' ಎಂದು ಗುರುತಿಸುವ ಸಮಾಜದ ಮುಂದೆ 'ಇಷ್ಟವಿಲ್ಲದ ಗರ್ಭವನ್ನು ಹೊರುವುದಿಲ್ಲ' ಎನ್ನುವ ಸ್ತ್ರೀಮಾದರಿ ಒಂದೆಡೆಯಾದರೆ, ಮಾತೆಯ ಮಮತೆಯನ್ನು ತೋರುವುದಕ್ಕೆ ಮಗುವನ್ನು ಸ್ವಂತ ಗರ್ಭದಲ್ಲಿ ಧರಿಸುವ, ಹೆತ್ತು ಹಾಲೂಡಿಸುವ ಅಗತ್ಯವಿಲ್ಲ ಎಂಬ ಇನ್ನೊಂದು ಸ್ತ್ರೀಮಾದರಿ ಮಲಯಾಳಂ ಸಾಹಿತ್ಯದಲ್ಲಿ ಸಿಗುತ್ತದೆ.

ಕೆ.ಪಿ. ಸುಧೀರಾ ಅವರು ಬರೆದ ಹಲವು ಸಣ್ಣಕತೆಗಳಲ್ಲಿ ಹೆರದೆ ಅಮ್ಮನಾಗುವ ವಾತ್ಸಲ್ಯಮಯಿ ಸ್ತ್ರೀಯರಿದ್ದಾರೆ. 'ಉಮಾಳ ಮಗ' ಕತೆಯ ನಾಯಕಿ ಆಸ್ಪತ್ರೆಯಲ್ಲಿ ಭೇಟಿಯಾದ ಅಸಹಾಯಕ ಹೆಣ್ಣುಮಗಳು ಉಮಾಳ ದುಃಖಕ್ಕೆ ಮಿಡಿದು ಅವಳ ಅನಾಥ ಮಗುವಿಗೆ ತಾಯಿಯಾಗುತ್ತಾಳೆ. ಅನಾರೋಗ್ಯದಲ್ಲಿದ್ದ ಮಗ ಕಣ್ಣು ತೆರೆಯುವುದನ್ನೇ ಕಾಯುತ್ತ ಆರ್ತಳಾಗಿದ್ದ ತಾಯಿಯೊಬ್ಬಳು ಮಗ ತೀರಿಹೋಗಿರಬೇಕೆಂದು ಭಾವಿಸಿ ಪ್ರಾಣವನ್ನೇ ಕಳೆದುಕೊಳ್ಳುತ್ತಾಳೆ. ತನ್ನೆಲ್ಲ ಆಭರಣಗಳನ್ನೂ ಮಾರಿ ಊಟ ನಿದ್ರೆ ಮರೆತು ಹಗಲಿರುಳು ಮಗನ ಆರೈಕೆ ಮಾಡಿದ ಉಮಾ ಆತ್ಮಹತ್ಯೆ ಮಾಡಿಕೊಂಡಾಗ, ಅವಳ ನೋವಿಗೆ ಕರಗಿದ ಕಥಾನಾಯಕಿ, ತನಗೆ ಯಾವ ವಿಧದಲ್ಲೂ ಸಂಬಂಧವಿಲ್ಲದ ಆ ಮಗುವಿಗೆ ಅಮ್ಮನಾಗುವ ನಿರ್ಧಾರ ಮಾಡುತ್ತಾಳೆ. ಆ ನಿರ್ಧಾರಕ್ಕಾಗಿ ತನ್ನ ಪತಿಯನ್ನು ತೊರೆಯಬೇಕಾಗಿ ಬಂದರೂ ಹಿಂಜರಿಯುವುದಿಲ್ಲ. ಎದೆಹಾಲು ಕುಡಿಸದಿದ್ದರೇನು, ತನ್ನ ಬದುಕನ್ನೇ ಆ ಮಗುವಿಗಾಗಿ ಮೀಸಲಿಟ್ಟು ವಾತ್ಸಲ್ಯ ಸ್ತನ್ಯವನ್ನು ಹರಿಸುತ್ತಾಳೆ. ತಾನು ಹೆರದ ಮಗುವಿಗೆ ಪೂರ್ಣ ಪ್ರಮಾಣದ ಅಮ್ಮನಾಗುತ್ತಾಳೆ.

'ನನ್ನ ಬದುಕು ಮತ್ತು ಕೆಲವು ಹುಸಿ ಕತೆಗಳು' ಎಂಬ ಕತೆಯಲ್ಲಿ ಬರುವ ಜಾನೂ ಅಕ್ಕ ಸ್ವಾರ್ಥದ ಹಂಗಿಲ್ಲದೆ ಕೇವಲ ಪ್ರೀತಿಸಲ್ಪಡುವುದಕ್ಕಾಗಿಯೇ ಪ್ರೀತಿಸುವವಳು. ಸ್ವಂತ ಮಗನ ನಿರ್ಲಕ್ಷ್ಯ-

ಅನಾದರಗಳಿಂದ ಹಾಗೂ ಸೊಸೆಯ ಸ್ವಾರ್ಥದಿಂದ ಬದುಕು ಅಸಹನೀಯವಾದಾಗ, ನೆರೆಯ ಮನೆಗಳಲ್ಲಿರುವ ಮಕ್ಕಳಿಗೆ ಅಮ್ಮನಾಗಿ, ಅಮ್ಮಮ್ಮನಾಗಿ ನಿರ್ವಂಚನೆಯಿಂದ ಪ್ರೀತಿಸುವ ಮೂಲಕ ಬದುಕಿನಲ್ಲಿ ನೆಮ್ಮದಿ ಕಂಡುಕೊಳ್ಳುತ್ತಾಳೆ. ತನ್ನ ಫ್ಲಾಟಿನಲ್ಲಿದ್ದ ಉದ್ಯೋಗಸ್ಥ ಗೃಹಿಣಿ ಸಂಧ್ಯಾಳಿಗೆ ಅಮ್ಮನ ಪ್ರೀತಿಯ ಸ್ಪರ್ಶವನ್ನು ಒದಗಿಸುತ್ತಾಳೆ. ಸಂಧ್ಯಾಳ ಪುಟ್ಟ ಮಗಳಿಗೆ ಅಜ್ಜಿಯಾಗಿ ಕತೆ ಹೇಳುತ್ತಾಳೆ. ಅವಳಿಗಾಗಿ ತಿಂಡಿ ಮಾಡಿ ತಂದುಕೊಡುತ್ತಾಳೆ. ಸಂಧ್ಯಾ ಬರುವವರೆಗೂ ಪುಟ್ಟಿಯನ್ನು ತನ್ನ ಮನೆಯಲ್ಲೇ ಇರಿಸಿಕೊಂಡು ಜತನದಿಂದ ನೋಡಿಕೊಳ್ಳುತ್ತಾಳೆ. ಸೊಸೆಯ ಅಸಹನೆಯ ಕಾರಣದಿಂದಾಗಿ ತನ್ನ ಒಬ್ಬನೇ ಮಗ ಮತ್ತು ಮೊಮ್ಮಕ್ಕಳಿಂದ ದೂರವಿರಬೇಕಾದ ಏಕಾಂತದ ನೋವನ್ನು ಈ ರೀತಿಯಾಗಿ 'ತಾನು ಹೆರದ ಮಕ್ಕಳಿಗೆ' ತಾಯಿಯ ಮಮತೆ ಹರಿಸುವ ಮೂಲಕ ತುಂಬಿಕೊಳ್ಳುತ್ತಾಳೆ.

'ತಾಜಮಹಲ್' ಎಂಬ ಕೈಯಲ್ಲಿ ಪರ್ಸ್ ಕಳೆದುಕೊಂಡು, ಅಪರಿಚಿತ ಸ್ಥಳದಲ್ಲಿ ಅಸಹಾಯಕನಾಗಿ ಕುಸಿದ ಅನಾರೋಗ್ಯಪೀಡಿತ ವ್ಯಕ್ತಿಯನ್ನು ಚಹ ಮತ್ತು ಬನ್ನು ಕೊಟ್ಟು ಉಪಚರಿಸುವವಳು ರಸ್ತೆಯ ಬದಿಯಲ್ಲಿ ಮಲಗುವ ಓರ್ವ ಅನಾಥೆ. ಅವನಿಗೆ ಮರಳಿ ಹೋಗಲು ಬಸ್ಸಿಗೆ ಹಣ ಜೋಡಿಸುವುದಕ್ಕಾಗಿ ಆಕೆ ರಾತ್ರಿಯೆಲ್ಲ ಲೈಂಗಿಕ ದುಡಿಮೆಯಲ್ಲಿ ತೊಡಗಿಸಿಕೊಳ್ಳುತ್ತಾಳೆ. 'ನನಗೂ ಮಕ್ಕಳಿದ್ದರು' ಎಂಬ ಆರ್ದ್ರ ನೆನಪಿನೊಂದಿಗೆ ಯಾರೋ ಅಪರಿಚಿತನಿಗೆ ತಾಯಿಯಾಗುವ ಈ ಮಹಿಳೆಗೆ ಸ್ವಂತ ವಿಳಾಸವೂ ಇಲ್ಲ.

'ಹಗ್ಗ' ಕಾದಂಬರಿಯಲ್ಲಿ ಕೋಡಾಂತ್ರ ತರವಾಡಿನ ಕುಂಜಮ್ಮನನ್ನು ತಾಯಿಯಿಲ್ಲದ ಕೊರತೆಯಾಗದಂತೆ ಮಮತೆಯಿಂದ ಬೆಳೆಸಿದ, ಕುಂಜಮ್ಮನ ಪಾಲಿಗೆ ಅಮ್ಮನಂತಿರುವ ನಂಗ ಎಂಬ ಹಿರಿಯ ಮಹಿಳೆಗೆ ಮದುವೆಯಾಗಿಲ್ಲ. ಹೆತ್ತ ಅನುಭವವಿಲ್ಲ. ಕುಂಜಮ್ಮನ ಒಳಿತಿನ ಹೊರತು ಬೇರೆ ಯೋಚನೆಯಿಲ್ಲ. "ನಾನು ಬೆಳೆಸಿದ ಮಗು ಅವಳು. ನನಗೆಲ್ಲವೂ ಆಗಿ ಈ ಭೂಮಿಯಲ್ಲಿ ನನಗಿರುವುದು ನನ್ನ ಮಗು ಒಬ್ಬಳೇ" (ಪು. ೭೦, ಭಾಗ ೧)

ಹೆಣ್ಣಿನ ಜನ್ಮದತ್ತವಾಗಿ ಬರುವುದೆಂದು ನಂಬಲಾಗಿರುವ ತಾಯ್ತನದ ಗುಣವನ್ನು ವಾಸ್ತವದ ನೆಲೆಗಟ್ಟಿನಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮೇಲೆ ಉದಾಹರಿಸಿದ ಸ್ತ್ರೀಪಾತ್ರಗಳಲ್ಲಿ ಕಾಣಬಹುದಾಗಿದೆ. ಹೆತ್ತು ತಾಯಿಯಾಗುವುದನ್ನು ನಿರಾಕರಿಸುವ ಸ್ತ್ರೀಯರು ಮತ್ತು ಹೆರದೆಯೂ ತಾಯ್ತನದ ಅಪ್ಯಾಯತೆಯನ್ನು ತೋರುವ ಸ್ತ್ರೀಯರು– ಮೇಲ್ನೋಟಕ್ಕೆ ವೈರುಧ್ಯವೆಂಬಂತೆ ಕಾಣುವ ಇವೆರಡನ್ನೂ ಸಹಜವಾದ ಸ್ತ್ರೀಮಾದರಿಗಳಾಗಿ ಕಾಣಿಸುವ ಯತ್ನವನ್ನು ಮಲಯಾಳಂ ಲೇಖಕರು ಮಾಡಿದ್ದಾರೆ. ರೂಢಿಗತವಾದ ತಾಯಿ ಮಾದರಿಗಳು ಕೌಟುಂಬಿಕ ಒತ್ತಡದಲ್ಲಿ ಸಿಲುಕಿ ಭಿನ್ನವಾಗಿ ವರ್ತಿಸಬಹುದಾದ ಸಾಧ್ಯತೆಗಳನ್ನು ಕಾಣಿಸಿದ್ದಾರೆ.

೨.೨.೫. ಸನ್ಯಾಸ: ಕುಟುಂಬ ವ್ಯವಸ್ಥೆಯ ನಿರಾಕರಣೆ

ಪಾರಂಪರಿಕ ಸಮಾಜದಲ್ಲಿ ಮದುವೆಯನ್ನೇ ನಿರಾಕರಿಸಿ ಅಥವಾ ಮದುವೆ ಆದ ಬಳಿಕ ಸಂಸಾರವನ್ನು ತ್ಯಜಿಸಿ ಸನ್ಯಾಸ ಸ್ವೀಕರಿಸುವ ಅವಕಾಶ ಪುರುಷರಿಗೆ ಮಾತ್ರ ಇದೆ. ಬದುಕು ಬೇಸರವಾದಾಗ ಸನ್ಯಾಸ ಸ್ವೀಕರಿಸುವುದು, ಬದುಕಿನ ಪ್ರಶ್ನೆಗಳಿಗೆ ಅಧ್ಯಾತ್ಮದಲ್ಲಿ ಉತ್ತರ ಹುಡುಕುವುದು... ಇವು ಪಾರಂಪರಿಕವಾಗಿ ಪುರುಷರಿಗೆ ಸಹಜ ವರ್ತನೆಗಳಾಗಿದ್ದವು. ಹೆಣ್ಣಿಗೆ ಅಧ್ಯಾತ್ಮದ, ಸನ್ಯಾಸದ ದಾರಿ ಯಾವತ್ತೂ ಮುಕ್ತವಾಗಿರಲಿಲ್ಲ. ಇದಕ್ಕೆ ಭಿನ್ನವಾಗಿ, ಅಂದುಕೊಂಡಂತೆ ಬದುಕುವುದು ಸಾಧ್ಯವಾಗದೆ ಹೋದಾಗ, ತನ್ನವರೇ ವಂಚಿಸಿದಾಗ, ಸ್ತ್ರೀ ತನ್ನ ಸಂಪತ್ತು, ಅಧಿಕಾರ, ವೈಭೋಗಗಳನ್ನು ತ್ಯಜಿಸಿ ಆಧ್ಯಾತ್ಮಕ್ಕೆ ಹೊರಳಿಕೊಳ್ಳುವ ಒಂದು ಉದಾತ್ತೀಕರಣದ ಪ್ರಕ್ರಿಯೆ ಮಲಯಾಳಂ ಕಥನಸಾಹಿತ್ಯದಲ್ಲಿ ಕಾಣಿಸಿಕೊಂಡಿರುವುದು ವಿಶಿಷ್ಟವಾಗಿದೆ. ಸನ್ಯಾಸದ ಅವಕಾಶವನ್ನು ಹೆಣ್ಣಿಗೂ ವಿಸ್ತರಿಸುವ ಕಾಳಜಿಯನ್ನು ಮಲಯಾಳಂ ಲೇಖಕರು ಹೊಂದಿದ್ದಾರೆ.

ಕಮಲಾದಾಸ್ ಅವರು ಬರೆದಿರುವ 'ಮನೋಮಿ' ಕಾದಂಬರಿ ಅಖಂಡ ಜೀವಪ್ರೀತಿಯ ಹೆಣ್ಣೊಬ್ಬಳು ಎಲ್ಲ ಸಂಬಂಧಗಳನ್ನು ನಿರಾಕರಿಸಿ ಸನ್ಯಾಸದೆಡೆಗೆ ತುಡಿಯುವಂತಾದ ಸಂದರ್ಭವನ್ನು ವಿಶ್ಲೇಷಿಸುತ್ತದೆ. ಬಾಲ್ಯದ ಗೆಳೆಯನ ವಿಚಾರಗಳು ತನ್ನದರೊಂದಿಗೆ ತಾಳೆಯಾಗುತ್ತಿಲ್ಲ ಎಂದು ಸ್ಪಷ್ಟವಾದಾಗ, ಮನೋಮಿ ಅವನಿಂದ ದೂರಾಗುವ ನಿರ್ಣಯ ಮಾಡಿ ಸಿಂಹಳ ದೇಶವನ್ನು ಬಿಟ್ಟು ಭಾರತಕ್ಕೆ ಬರುತ್ತಾಳೆ. ಮದುವೆ ಎಂಬ ಸಾಂಗತ್ಯದ ಬದುಕಿಗೆ ಗಂಡು ಹೆಣ್ಣಿನ ದೈಹಿಕ ಸಾಹಚರ್ಯ ಮಾತ್ರವಲ್ಲದೆ, ವೈಚಾರಿಕ ಹೊಂದಾಣಿಕೆಯಿರುವುದು ಬಹಳ ಅಗತ್ಯ ಎಂಬೊಂದು ಪ್ರಜ್ಞಾಪೂರ್ವಕ ನಿಲುವು ಮನೋಮಿಯ ನಿರ್ಧಾರದ ಹಿಂದಿದೆ. ಸ್ವತಂತ್ರವಾಗಿ ಯೋಚಿಸಬಲ್ಲ ಹೆಣ್ಣು ಮಾತ್ರ ಇಂಥದೊಂದು ನಿರ್ಧಾರವನ್ನು ತೆಗೆದುಕೊಳ್ಳುವ ಗಟ್ಟಿತನವನ್ನು ಹೊಂದಿರಲು ಸಾಧ್ಯ. ತಾನು ಯಾರನ್ನು ಮದುವೆಯಾಗಬೇಕು ಎಂಬುದಕ್ಕಿಂತಲೂ, ಮದುವೆ ಆಗಬೇಕೆ? ಬೇಡವೆ? ಎಂಬ ಆಯ್ಕೆಯ ಸ್ವಾತಂತ್ರ್ಯ ಹೆಣ್ಣಿನ ವ್ಯಕ್ತಿತ್ವದ ಬೆಳವಣಿಗೆಗೆ ಅಗತ್ಯವಾಗಿದೆ.

ಮನೋಮಿಯ ತಾಯಿ ಪುಣ್ಯಕಾಂತಿ ಕೂಡಾ ಭಿಕ್ಷುಣಿಯಾಗಬಯಸಿದ್ದಳು ಎಂಬ ಅಂಶವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪ್ರೇಮದಿಂದ ಉದ್ಭವಿಸಿದ ಕಾಮವನ್ನು ತಾನು ಸಹಿಸುವೆ ಎನ್ನುವ ಮನೋಮಿ ದ್ವೇಷದಿಂದ ಉದ್ಭವಿಸುವ ಕಾಮವನ್ನು ಮನದಾಳದಿಂದ ತಿರಸ್ಕರಿಸುತ್ತಾಳೆ. ತಿರುಚೆಲ್ವಂನ ಸೌಂದರ್ಯ ತನ್ನ ಬೋಧಿಯಾತ್ರೆಯ ನಿಷ್ಠೆಗೆ ಅಡ್ಡಿಯಾದೀತು ಎಂಬ ಎಚ್ಚರದೊಂದಿಗೆ ಅವನಿಂದ ದೂರ ಕಾಪಾಡಿಕೊಳ್ಳುವ ಮನೋಮಿಗೆ ತನ್ನ 'ದೇಹದ ನಿಷ್ಕಳಂಕತೆ' ನಾಶವಾಗಬಾರದೆಂಬ ಎಚ್ಚರವಿದೆ. ತನ್ನ ಮನಸ್ಸು-ದೇಹ ಎರಡೂ ಪರಿಶುದ್ಧವಾಗಿರಬೇಕೆಂಬ ನಿಶ್ಚಯವಿದೆ. 'ಪರಿಶುದ್ಧತೆ'ಯನ್ನು 'ದೇಹ'ದೊಂದಿಗೆ ಸಮೀಕರಿಸುವ ಈ ಕಲ್ಪನೆ ಆಕೆ ಬದುಕುವ ಸಮಾಜದಿಂದ ಪಡಕೊಂಡದ್ದಾಗಿದೆ.

ಮನೋಮಿ ಸಿಂಹಳೀಯಳು ಎಂದರಿಯದೆ ಅವಳ ಸೇವೆ, ಉಪಚಾರಗಳನ್ನು ಪಡೆದು ಗುಣಮುಖನಾಗುವ, ಅವಳನ್ನು ಇಷ್ಟಪಡುವ ತಿರುಚೆಲ್ವಂ ಅವಳ ಜನಾಂಗೀಯ ಹಿನ್ನೆಲೆಯನ್ನು ತಿಳಿದು ಬಿಕ್ಕಿ ಬಿಕ್ಕಿ ಅಳುವುದು, ಹೆಣ್ಣಿನ ಸಾತ್ವಿಕಶಕ್ತಿಯ ಮುಂದೆ ಗಂಡಿನ ಮೃಗೀಯ ಶಕ್ತಿ ಸೋಲುವುದರ ಸಂಕೇತವಾಗಿದೆ. ತನ್ಮೂಲಕ ಮನೋಮಿಯ ವಿರಕ್ತಿಯ ಹಾದಿ ಸುಗಮವಾಗುತ್ತದೆ.

ಮನೋಮಿಯ ಕಷ್ಟಗಳಿಗೆ ಅವಳು ಹೆಣ್ಣಾಗಿರುವುದೆ ಕಾರಣವಾಗಿದೆ. ಅಣ್ಣಾದೊರೈಯ ಮಕ್ಕಳಿಗೆ ಅವಳೊಂದು ಹೊರೆಯಾಗಿ ಭಾಸವಾಗುತ್ತಾಳೆ. ಮಾವನ ಮಕ್ಕಳ ಕಿರುಕುಳ, ಸ್ವಾರ್ಥಗಳಿಗೆ ಒಳಗಾದ ಮನೋಮಿ, ನೆಮ್ಮದಿ ಶಾಂತಿಗಳನ್ನು ಹೊರಪ್ರಪಂಚದಲ್ಲಿ ಹುಡುಕದೆ, ತನ್ನೊಳಗೇ ಕಂಡುಕೊಳ್ಳಬೇಕು ಎಂಬ ಅರಿವಿನೊಂದಿಗೆ ಬೌದ್ಧ ಭಿಕ್ಷುಣಿಯಾಗುವ ನಿರ್ಣಯದೊಂದಿಗೆ ತನ್ನ ದೇಶಕ್ಕೆ ಮರಳುತ್ತಾಳೆ. ಗಾಂಧಿಯ ನಾಡಾಗಿರುವ ಶಾಂತಿಯ ಭಾರತದಲ್ಲಿ ನೆಮ್ಮದಿಯ ಹೊಸಬದುಕನ್ನು ಅರಸಿ ಬಂದಿದ್ದ ಮನೋಮಿ ಸನ್ಯಾಸದತ್ತ ಮುಖ ಮಾಡುವುದಕ್ಕೆ ಬದುಕಿನ ಕಹಿ ಅನುಭವಗಳೇ ಕಾರಣವಾಗಿವೆ.

ಸುಬೈರ್ ಅವರು ಬರೆದಿರುವ 'ಮಿಸ್ ವರ್ಲ್ಡ್' ಕೃತಿಯ ಮಾಗಿ ಬದುಕಿನ ಎಲ್ಲ ಪರೀಕ್ಷೆಗಳಲ್ಲಿ ಗೆದ್ದು, ಕಳೆದುಕೊಂಡಿದ್ದ ಬೃಹತ್ ಮೊತ್ತದ ಹಣವನ್ನು ಮರಳಿ ಪಡೆದರೂ ವೈಯಕ್ತಿಕ ಜೀವನದಲ್ಲಿ ವಿರಕ್ತಿ ತಾಳುತ್ತಾಳೆ. ಸಂಪತ್ತನ್ನೆಲ್ಲ ದಾನವಾಗಿ ಬರೆದು, ದೈವಭಕ್ತಿಯಲ್ಲಿ ದೊರಕುವ ನಿಜವಾದ ಶಾಂತಿಯನ್ನರಸಿ ಕನ್ಯಾಸ್ತ್ರೀಯಾಗುತ್ತಾಳೆ. ಈ ಹಿಂದೆ ಲೋಕಸುಂದರಿ ಸ್ಪರ್ಧೆಗಾಗಿ ಉರು ಹೊಡೆದಿದ್ದ ಸ್ತ್ರೀಜನ್ಮದ ಮಹತ್ವವನ್ನು ಮನಗಂಡು, ಕನ್ಯಾಸ್ತ್ರೀಯಾಗಿ ಶಿಕ್ಷಕ ವೃತ್ತಿಯನ್ನು ಆಯ್ದುಕೊಂಡು ಅನಾಥ ಮಕ್ಕಳ ತಾಯಾಗುವಲ್ಲಿ ಸಾರ್ಥಕ್ಯ ಕಂಡುಕೊಳ್ಳುತ್ತಾಳೆ. ಅವಿವಾಹಿತೆಯಾಗಿ ಉಳಿಯಬಯಸುವ ಹೆಣ್ಣು ಗಂಡಸರ ಕಾಮದೃಷ್ಟಿಯಿಂದ ತಪ್ಪಿಸಿಕೊಳ್ಳಬೇಕಾದರೆ ಕನ್ಯಾಸ್ತ್ರೀಯಾಗುವ ಹೊರತು ಅನ್ಯ ಮಾರ್ಗವಿಲ್ಲ. ಪಾರ್ಟಿಗಳಲ್ಲಿ ಬಾಲ್‌ಡ್ಯಾನ್ಸ್ ಮಾಡದ, ಡ್ರಿಂಕ್ಸ್ ರುಚಿ ನೋಡದ ಮಾಗಿಯ ಬಗ್ಗೆ 'ಹೋಗಿ ಮಠಕ್ಕೆ ಸೇರಬಾರದೆ?' ಎಂದು ಹುಡುಗರು ಅಸಮಾಧಾನ ತೋರುವುದನ್ನು ಗಮನಿಸಬಹುದು.

ಕಟ್ಟುನಿಟ್ಟಾದ ಧಾರ್ಮಿಕ ವಿಧಿನಿಷೇಧಗಳಿಗೆ ತಳುಕು ಹಾಕಿಕೊಂಡ ನಂಬೂದಿರಿ ಮನೆಯ ಹಿರಿಯ ಮಗನ ಮಡದಿಯಾಗಿ ವಂಶವನ್ನು ಬೆಳೆಸಬೇಕಾದ ಜವಾಬ್ದಾರಿ ಉಳ್ಳವಳಾಗಿದ್ದ ಮಹಿಳೆಯೊಬ್ಬಳು ಕುಟುಂಬ ಮತ್ತು ಸಂಪ್ರದಾಯದ ನಿರ್ಬಂಧಗಳಿಂದ ಬೇಸತ್ತು ವಿರಾಗಿನಿಯಾಗುವುದನ್ನು 'ಅಗ್ನಿಸಾಕ್ಷಿ' ಕೃತಿ ನಿರೂಪಿಸಿದೆ. ಹೆಣ್ಣೊಬ್ಬಳು ಸಂಸಾರದಿಂದ ವಿಮುಖಳಾಗಿ, ದೇಶಸೇವೆಗೆ, ಅಲ್ಲಿಂದ ಪ್ರಾಯಶ್ಚಿತ್ತ ರೂಪವಾಗಿ ಸನ್ಯಾಸಕ್ಕೆ ಹೊರಳುವುದು ಕೃತಿ ರಚನೆಯಾದ ಕಾಲಘಟ್ಟದ ಮಟ್ಟಿಗೆ ಸ್ವಲ್ಪ ವಿಶಿಷ್ಟವಾದ ಸಂಗತಿಯಾಗಿದೆ.

ತಕಳಿ ಶಿವಶಂಕರ ಪಿಳ್ಳೆಯವರು ಬರೆದ 'ಏಣಿಯ ಮೆಟ್ಟಿಲುಗಳು' ಕಾದಂಬರಿಯಲ್ಲಿ ಸ್ಥಿತಿವಂತರಾದ ನಾಲ್ವರು ಆಧುನಿಕ ಸ್ತ್ರೀಯರು ಸಾಂಸಾರಿಕ ಬದುಕಿನ ಅರ್ಥಹೀನತೆಯನ್ನು ಮನಗಂಡು ಸಂಸಾರವನ್ನು ತ್ಯಜಿಸಿ ಸನ್ಯಾಸಿನಿಯರಾಗುವ ಚಿತ್ರಣವಿದೆ. 'ಗುರುತುಗಳು' ಕೃತಿಯ ಪ್ರಿಯಂವದಾ ಸಾಂಸಾರಿಕ ಬದುಕು ಕೊಟ್ಟ ನೋವು, ಆಘಾತಗಳನ್ನು ಅರಗಿಸಿಕೊಳ್ಳಲಾಗದೆ ಶಾಂತಿ, ನೆಮ್ಮದಿಗಳನ್ನು ಅರಸುತ್ತ ಅಧ್ಯಾತ್ಮದೆಡೆಗೆ ತುಡಿಯುವುದನ್ನು ಕೂಡ ಇಲ್ಲಿ ನೆನಪಿಸಿಕೊಳ್ಳಬಹುದು.

ಕಮಲಾದಾಸ್ ಅವರು ಬರೆದ 'ದುಃಖದ ಕಣಿವೆಗಳು' ಕತೆಯ ಗ್ಲೋರಿಯಾ ತನ್ನ ಮದುವೆಯ ಕನಸು ನನಸಾಗುವುದಿಲ್ಲ ಎಂಬುದು ಸ್ಪಷ್ಟವಾದಾಗ ಸಂಸಾರದಿಂದ ವಿಮುಖಳಾಗಿ ನನ್ ಆಗುತ್ತಾಳೆ. ಮಾಡಾಂಬ್ ಕುಂಜುಕುಟ್ಟನ್ ಅವರು ಬರೆದಿರುವ 'ಅಶ್ವತ್ಥಾಮ' ಕೃತಿಯಲ್ಲಿ ಕುಂಜುಣ್ಣಿ ಮೇಷ್ಟ್ರ ಪ್ರೇಮಕ್ಕಾಗಿ ಹಂಬಲಿಸಿ ನಿರಾಶಳಾದ ಸಿಸಿಲಿ ಬದುಕಿನಲ್ಲಿ ವಿರಕ್ತಿ ಹೊಂದಿ ಕನ್ಯಾಸ್ತ್ರೀಯಾಗುತ್ತಾಳೆ. ಕೆ. ಸರಸ್ವತಿಯಮ್ಮ ಅವರು ಬರೆದ 'ನೆರಳು ನೀಡುವ ಮರಗಳು' ಕತೆಯ ಚೆಲುವೆ ಲಿಲ್ಲಿಕುಟ್ಟಿ ಅನ್ಯಧರ್ಮದ ಯುವಕನನ್ನು ಪ್ರೇಮಿಸಿ ಹೊಂದಲಾಗದ ನಿರಾಸೆಗೆ ಕನ್ಯಾಮಠವನ್ನು ಸೇರಿ ದೇವರ ಮತ್ತು ಸಮಾಜದ ಸೇವೆಗೆ ತನ್ನ ಬದುಕನ್ನು ಅರ್ಪಿಸಿಕೊಳ್ಳುತ್ತಾಳೆ. ಹೀಗೆ ಸ್ತ್ರೀಯರು ಕುಟುಂಬಜೀವನದ ನೋವು ಮತ್ತು ನಿರಾಸೆಗಳಿಗೆ ಪರ್ಯಾಯ ಆಯ್ಕೆಯಾಗಿ ಸನ್ಯಾಸವನ್ನು ಸ್ವೀಕರಿಸುವುದನ್ನು ಮಲಯಾಳಂ ಕೃತಿಗಳು ಚಿತ್ರಿಸಿವೆ. ಹೆಣ್ಣಿಗೆ ವೈವಾಹಿಕ ಜೀವನವೆ ಅಂತಿಮವಲ್ಲ ಎಂಬ ವಿಚಾರವನ್ನು ಪ್ರತಿಪಾದಿಸಿವೆ.

೨.೩. ಶಿಕ್ಷಣದಿಂದ ಸ್ವಪ್ರಜ್ಞೆ

ಮಹಿಳೆ ತನ್ನನ್ನು ತಾನು ಹೊಸ ರೀತಿಯಲ್ಲಿ ನಿರ್ವಚಿಸಿಕೊಳ್ಳಲು ಕೇರಳದಲ್ಲಿ ವಿಶೇಷ ಅವಕಾಶಗಳು ಲಭಿಸಿವೆ. ನೂರಕ್ಕೆ ನೂರು ಮಂದಿ ಸಾಕ್ಷರರಾಗಿ, ಆಧುನಿಕ ಉದ್ಯೋಗಗಳನ್ನು ಪಡೆಯುವುದು ಕೇರಳದ ಮಹಿಳೆಯರಿಗೆ ಸಾಧ್ಯವಾಗಿದೆ. ಆಧುನಿಕ ಶಿಕ್ಷಣವು ಸ್ತ್ರೀಯರಿಗೆ ಸ್ವತಂತ್ರ ಚಿಂತನೆ ಮತ್ತು ಆತ್ಮವಿಶ್ವಾಸಗಳನ್ನು ನೀಡಿದೆ. ತಮ್ಮ ಸುತ್ತಲಿನ ಜಗತ್ತಿನಲ್ಲಿ ಏನು ನಡೆಯುತ್ತಿದೆ ಮತ್ತು ಅದು ತಮ್ಮ ಬದುಕಿನ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಅರಿತುಕೊಳ್ಳುವಲ್ಲಿ ಸಹಕಾರಿಯಾಗಿದೆ. ಆಧುನಿಕ ಮಾದರಿಯ ಶಾಲೆ ಕಾಲೇಜುಗಳ ಮೂಲಕ ಹೊರಜಗತ್ತಿಗೆ ತೆರೆದುಕೊಂಡ ಪರಿಣಾಮವಾಗಿ ಸ್ತ್ರೀಯರು ಕುಟುಂಬದಲ್ಲಿ, ಸಮಾಜದಲ್ಲಿ, ಬದುಕಿನ ವಿವಿಧ ಮಜಲುಗಳಲ್ಲಿ ತಮ್ಮನ್ನು ಕೆಳಸ್ತರದಲ್ಲಿ ಇರಿಸಿ ಅವಗಣಿಸಿರುವುದನ್ನು, ತಮ್ಮ ಅಭಿಪ್ರಾಯಗಳ ಪ್ರಕಟನೆಗೆ ಅವಕಾಶವನ್ನು ನಿರಾಕರಿಸಿರುವುದನ್ನು ಗಮನಿಸುವುದು ಮತ್ತು ಪ್ರತಿಕ್ರಿಯಿಸುವುದು ಸಾಧ್ಯವಾಗಿದೆ. ಸುಶಿಕ್ಷಿತ ಸ್ತ್ರೀಯರು ತಮ್ಮ ಸ್ವಂತ ವ್ಯಕ್ತಿತ್ವದ ಬಗ್ಗೆ ಯೋಚಿಸಲು, ಸೂಕ್ತ ಸಮಯದಲ್ಲಿ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ಮನಸ್ಸು ಒಪ್ಪದ ವಿಚಾರಗಳನ್ನು ಸ್ಪಷ್ಟವಾಗಿ ನಿರಾಕರಿಸಲು ಶಕ್ತರಾಗಿದ್ದಾರೆ.

ಮಲಯಾಳಂನ ಮೊದಲ ಸಾಮಾಜಿಕ ಕಾದಂಬರಿ ಎನಿಸಿಕೊಂಡ 'ಇಂದುಲೇಖಾ' ಮಾತೃಮೂಲೀಯ ವ್ಯವಸ್ಥೆಯುಳ್ಳ ಕೇರಳದ ನಾಯರ್ ತರವಾಡಿನ ಕಥೆ. ಕಥೆಯ ಶೀರ್ಷಕ ಪಾತ್ರವಾಗಿರುವ ಇಂದುಲೇಖಾ ವಿದ್ಯಾವಂತೆ. ಓದಿನ ಮೂಲಕ ಗಳಿಸಿಕೊಂಡಿರುವ ಅರಿವಿನ ಗಟ್ಟಿ ನೆಲೆಯಿಂದಾಗಿ ಸ್ಥಿರಮನಸ್ಕಳಾಗಿರುವ ಅವಳ ಪ್ರಣಯದ ಶಕ್ತಿ ಮತ್ತು ಯಶಸ್ಸುಗಳನ್ನು ಕೃತಿ ನಿರೂಪಿಸುತ್ತದೆ. ದೊಡ್ಡ ತರವಾಡಿನ ಮುದ್ದು ಮಗಳಾಗಿ ಆರ್ಥಿಕ ಅಡಚಣೆಗಳಿಲ್ಲದೆ ಬೆಳೆದ ಇಂದುಲೇಖಾ ತನ್ನ ಸೋದರಮಾವನ ಇಚ್ಛೆಯಂತೆ 'ಆಧುನಿಕ ಇಂಗ್ಲೀಷ್ ವನಿತೆಯರಿಗೆ ನೀಡುವಂಥ ಎಲ್ಲ ಶಿಕ್ಷಣ ಆಚಾರವಿಚಾರಗಳನ್ನು ಕಲಿತು' ಬದುಕಿನ ಬಗ್ಗೆ ಸ್ಪಷ್ಟ ಧೋರಣೆಗಳನ್ನು ಹೊಂದಿ 'ಯೋಗ್ಯ' ಹೆಣ್ಣುಮಗಳಾಗಿ ರೂಪುಗೊಂಡಿರುವವಳು. ಇಂಗ್ಲೀಷ್, ಸಂಗೀತ, ಕಸೂತಿ, ಚಿತ್ರಕಲೆಗಳನ್ನು ಬಲ್ಲವಳು. ಸಂಸ್ಕೃತ ಕಾವ್ಯಗಳನ್ನು, ಸೂಕ್ತಿಗಳನ್ನು ಓದಿ ಅರಗಿಸಿಕೊಂಡವಳು. ಸೌಮ್ಯವಾದಿನಿಯಾಗಿದ್ದರೂ ತನ್ನ ಅಭಿಪ್ರಾಯಗಳನ್ನು ಗಟ್ಟಿ ಧ್ವನಿಯಲ್ಲಿ ಹೇಳಬಲ್ಲ ದಿಟ್ಟೆ. ಪ್ರೌಢಿಮೆ, ಕೆಚ್ಚು, ಮಾತು-ನೋಟಗಳಲ್ಲಿ ಎದ್ದು ಕಾಣುವ ದೃಢತೆ, ಕಾರ್ಯದಕ್ಷತೆಗಳನ್ನು ಹೊಂದಿರುವ, ಸುಶಿಕ್ಷಿತ ನಾಯರ್ ಸ್ತ್ರೀಯರ ಬಗೆಗಿನ ಆದರ್ಶ ಕಲ್ಪನೆಯೆ ಸಾಕಾರವಾಗಿ ಮೂಡಿದಂತಿರುವ ರೂಪಕಲ್ಪನೆ ಅವಳದು. ಸಮಯಸ್ಫೂರ್ತಿ, ಹೃದಯವಂತಿಕೆ, ಸ್ವಾಭಿಮಾನ, ಸಾಹಿತ್ಯಜ್ಞಾನ, ಹಾಸ್ಯಪ್ರಜ್ಞೆ, ವಾಕ್ ಸಾಮರ್ಥ್ಯ... ಇವೆಲ್ಲವೂ ಏಕತ್ರ ಮೇಳೈಸಿದ, ಲೇಖಕರು ಉದ್ದೇಶಪೂರ್ವಕ ಸೃಷ್ಟಿಸಿದ ಪಾತ್ರವಾಗಿ ಇಂದುಲೇಖಾಳನ್ನು ಗುರುತಿಸಬಹುದು.

ಇಂದುಲೇಖಾಳ ಮೂಲ ಹೆಸರು ಮಾಧವಿ. ಅವಳ ಮೇಲಿನ ಅತಿಶಯ ಪ್ರೀತಿ ಮತ್ತು ನಿರೀಕ್ಷೆಗಳಿಂದ ಸೋದರಮಾವ ಕೊಟ್ಟ ಹೆಸರು ಇಂದುಲೇಖಾ. ಮಾವನ ನಿರೀಕ್ಷೆಯಂತೆ ಆ ಆಧುನಿಕ ಕಲ್ಪನೆಯ ಹೆಸರಿಗೆ ಹೊಂದುವಂತೆ ರೂಪುಗೊಳ್ಳುತ್ತಾಳೆ. ಲಕ್ಷ್ಮೀಕುಟ್ಟಿಯ ಮೊದಲ ಸಂಬಂಧಕಾರ ರಾಮವರ್ಮ ರಾಜರಿಗೆ ಹುಟ್ಟಿದ ಮಗಳು ಅವಳು. ರಾಜರು ಕಾಲವಾದ ಮೇಲೆ ಲಕ್ಷ್ಮೀಕುಟ್ಟಿಗೆ ಕೇಶವನ್ ನಂಬೂದಿರಿಯೊಂದಿಗೆ ಎರಡನೆಯ ಸಂಬಂಧವಾಗಿ ಇಂದುಲೇಖೆಗೆ 'ಹೊಸ ಅಪ್ಪ' ದೊರಕಿದ ಬಳಿಕವೂ ರಾಮವರ್ಮರ ಮಗಳು ಎಂದೇ ಗುರುತಿಸಿಕೊಳ್ಳುವವಳು.

ನಾಯರ್ ಕುಟುಂಬಗಳ ಕ್ರಮದಂತೆ ಮಾಧವನ ಹಕ್ಕಿನ ವಧುವಾಗಿದ್ದ ಇಂದುಲೇಖಾಳಿಗೆ ಮಾಧವನ ಮೇಲೆ ಅತಿಶಯ ಪ್ರೇಮವಿದ್ದರೂ ಅಂಕೆಮೀರಿ ವರ್ತಿಸುವುದಿಲ್ಲ. ತನ್ನ ಹೆಣ್ತನದ ಅಭಿಮಾನವನ್ನು ಮೀರಿ ಪ್ರೇಮವನ್ನು ವ್ಯಕ್ತಪಡಿಸುವುದಿಲ್ಲ. ಅವನಿಗೆ ಖುಶಿಯಾಗಲೆಂದು ತನ್ನ ಮಾತುಗಳನ್ನು 'ಸವಿಯಾಗಿಸುವುದು' ಅವಳಿಗೆ ಒಪ್ಪಿಗೆಯಿಲ್ಲ. ಮಾಧವನೊಂದಿಗೆ ನಡೆಸುವ ಚರ್ಚೆಯಲ್ಲಿ ಅಭಿಪ್ರಾಯಗಳನ್ನು ನೇರ ಮಾತುಗಳಲ್ಲಿ ಹೇಳುತ್ತಾಳೆ. ಮನೆತನದ ಯಜಮಾನರೂ ತನ್ನ ಅಜ್ಜನೂ ಆಗಿರುವ 'ಕಾರಣವರ್' ಮನೆಯ ಪ್ರತಿಯೊಂದು ವಿಷಯದಲ್ಲೂ ಕೈಹಾಕುವುದನ್ನು ಪ್ರತಿಭಟಿಸುತ್ತಾಳೆ. ಎಲ್ಲರನ್ನೂ ಹೆದರಿಸುವ ಕಾರಣವರ್ ಕೂಡ ಅವಳ ಸಾತ್ವಿಕತೆಯ ಮುಂದೆ ಮಾತನಾಡಲು

ಹಿಂಜರಿಯುವುದು ಇಂದುಲೇಖೆಯ ಜ್ಞಾನಕ್ಕೆ ದೊರಕಿದ ಗೌರವವಾಗಿದೆ. 'ಇಂದುಲೇಖಾ ಇಂಗ್ಲೀಷ್ ಕಲಿಯದೆ ಇರುತ್ತಿದ್ದರೆ ಈಗಿನದ್ದಕ್ಕಿಂತಲೂ ಒಳ್ಳೇ ಹುಡುಗಿ ಆಗ್ತಿದ್ದಳು' ಎಂಬುದು ಅಜ್ಜನ ಅಭಿಪ್ರಾಯ. ಆಧುನಿಕ ಶಿಕ್ಷಣ ಪಡೆದ ಸ್ತ್ರೀ ಕುಟುಂಬವನ್ನು ಚೆನ್ನಾಗಿ ನಡೆಸುತ್ತಾಳೆ ಎಂಬ ನಿರೀಕ್ಷೆಯೊಂದಿಗೆ, ಈ ಶಿಕ್ಷಣದಿಂದ ದೊರಕಿದ ಜ್ಞಾನದ ಬಲದಿಂದ ಆಕೆ ತಮ್ಮನ್ನು, ತಾವು ರೂಪಿಸಿದ ವ್ಯವಸ್ಥೆಯನ್ನು ಅತಿಕ್ರಮಿಸುವಳೇನೊ ಎಂಬ ಭಯ ಪುರುಷರನ್ನು ಕಾಡಿದೆ. ಇಂದುಲೇಖಾಳ ಪಾತ್ರನಿರೂಪಣೆ ಈ ದ್ವಂದ್ವವನ್ನು ಧ್ವನಿಸುತ್ತದೆ.

'ಗಂಡನನ್ನು ಮನಬಂದಂತೆ ಸ್ವೀಕರಿಸುವವರು ಮತ್ತು ಬಿಡುವವರು' ಎಂಬ ಕೇರಳ ಸ್ತ್ರೀಯರ ಕುರಿತಾದ ದೋಷಾರೋಪಣೆಯ ಬಗೆಗೆ ಇಂದುಲೇಖಾಳ ನಿರಾತಂಕ ವ್ಯಾಖ್ಯಾನ ಹೀಗಿದೆ: "ಹೀಗೆ ಮಾಡಲು ನಮಗಿರುವ ಸ್ವಾತಂತ್ರ್ಯವು ಎಷ್ಟೋ ಶ್ಲಾಘನೀಯವಾದೊಂದು ವಿಷಯವಾಗಿದೆ." (ಪು. ೨೬) ಹೆಣ್ಣಿಗೆ ಪತಿಯನ್ನು ಆಯ್ದುಕೊಳ್ಳುವ ಯಾ ನಿರಾಕರಿಸುವ ಅವಕಾಶವಿರಬೇಕೆಂಬುದು ಅವಳ ಇಂಗಿತ. 'ಸುಂದರಿಯಾದೊಬ್ಬಳು ಹೆಣ್ಣುಮಗಳಿಗೆ ಸ್ವಲ್ಪ ವಿದ್ಯಾಭ್ಯಾಸವಿದ್ದರೆ ಅವಳಲ್ಲಿ ಮಾತನಾಡುತ್ತಾ ಸಂತೋಷದಲ್ಲಿರುವ ಗಂಡಸರನ್ನು ಅವಳ ಮಿಂಡರೆಂದು ಭಾವಿಸುವ, ಸಂಗೀತ ಕಲಿತ ಹೆಣ್ಣು ಮಗಳೊಬ್ಬಳ ಹಾಡನ್ನು ಹತ್ತು ಹನ್ನೆರಡು ಗಂಡಸ್ರು ಒಟ್ಟಿಗೆ ಕೂತು ಕೇಳಿದರೆ ಅವರು ಅವಳ ರಹಸ್ಯ ಕಾಮುಕರು ಎನ್ನುವ' (ಪು. ೨೫) ಮೂರ್ಖ ಗಂಡಸರ ಬಗ್ಗೆ ಅವಳಿಗೆ ಕೋಪವಿದೆ. "ಒಬ್ಬಳಿಗೆ ಪತಿವ್ರತಾ ಧರ್ಮವನ್ನು ಒಂದಿಷ್ಟೂ ಕಳಕೊಳ್ಳದೆ ಇತರ ಗಂಡಸರೊಂದಿಗೆ ಹಲವು ವಿಧವಾಗಿ ಮನರಂಜನೆ ಮಾಡೋದಕ್ಕೂ ಅವಕಾಶ, ಸ್ವಾತಂತ್ರ್ಯ ಇರಬಹುದು" (ಪು. ೨೬) ಎಂದು ವಾದಿಸುತ್ತಾಳೆ.

ನಾಯರ್ ಸ್ತ್ರೀಯರು ಹಣ ಮತ್ತು ಅಂತಸ್ತಿಗಾಗಿ ಮಾಡಿಕೊಳ್ಳಬೇಕಾಗಿ ಬರುವ 'ನಂಬೂದಿರಿ ಬಾಂಧವ' ಸಂಬಂಧ ಇಂದುಲೇಖಾಳಿಗೆ ಒಪ್ಪಿಗೆಯಿಲ್ಲ. ಅವಳ ಪ್ರಕಾರ 'ಸಂಬಂಧಂ' ಎಂಬುದು ಕೇರಳದ ಸ್ತ್ರೀಯರನ್ನು ಅವಹೇಳನಕ್ಕೆ ಗುರಿಯಾಗಿಸುವ ಒಂದು ವಿದ್ಯಮಾನವಾಗಿದೆ. ಸೂರಿ ನಂಬೂದಿರಿಪ್ಪಾಡರಿಗೆ ತನ್ನನ್ನು ನೋಡಿದಾಕ್ಷಣವೆ ಊರಿನ ಎಲ್ಲ ಹೆಣ್ಣುಮಕ್ಕಳೂ ಮರುಳಾಗುತ್ತಾರೆಂಬ ನಂಬಿಕೆಯಿತ್ತು. ತನ್ನಲ್ಲಿರುವ ಹಣ, ಚಿನ್ನ ಮತ್ತು ಸಂಪತ್ತಿನ ಆಮಿಷಕ್ಕೆ ಎಂಥ ಹೆಣ್ಣಾದರೂ ಮಣಿಯುತ್ತಾಳೆಂಬ ಭಾವನೆಯಿತ್ತು. ಇಂದುಲೇಖೆ ಅವರನ್ನು ಕಾಣುವುದಕ್ಕೆ ನಿರಾಸಕ್ತಿ ತೋರಿ ಅವರ ಭ್ರಮೆಯನ್ನು ಮುರಿಯುತ್ತಾಳೆ. ಸೂರಿ ನಂಬೂದಿರಿಯ ಸಂಬಂಧದ ಪ್ರಸ್ತಾಪವನ್ನು ನೇರನುಡಿಗಳಲ್ಲಿ ನಿರಾಕರಿಸಿ 'ಹೆಣ್ಣನ್ನು ಆಮಿಷವೊಡ್ಡಿ ವಶಮಾಡಿಕೊಳ್ಳುವ' ಪುರುಷಪಾರಮ್ಯಕ್ಕೆ ಸವಾಲಾಗುತ್ತಾಳೆ. ತಂದೆ ಮತ್ತು ಸೋದರಮಾವ ತೀರಿಕೊಂಡ ಬಳಿಕವೂ ಬದುಕನ್ನು ಧೈರ್ಯದಿಂದ ಎದುರಿಸುವ ದಿಟ್ಟತನ ಮತ್ತು ಸ್ವತಂತ್ರ ಚಿಂತನೆಗಳು ಅವಳಿಗೆ ಒದಗಿದ್ದು ಶಿಕ್ಷಣದಿಂದ ಮತ್ತು ಓದಿಕೊಂಡ ಪುಸ್ತಕಗಳಿಂದ ಎಂಬುದನ್ನು ಗಮನಿಸಬಹುದು.

ಮಾಧವನನ್ನು ದೂರವಿಡುವುದಕ್ಕಾಗಿ ಅಜ್ಜ ಮಾಡಿದ ಶಪಥಕ್ಕೆ ಪ್ರಾಯಶ್ಚಿತ್ತದ ಸಂಕಲ್ಪ ಮಾಡಿಕೊಂಡದ್ದಕ್ಕೂ ಅದೇ ಹೊತ್ತಿನಲ್ಲಿ ಬಂದ ಶುಭಸುದ್ದಿಯ ತಂತಿಗೂ ಸಂಬಂಧವಿದೆಯೆಂದು ಇಂದುಲೇಖೆ ನಂಬುವುದಿಲ್ಲ. ಅವಳಿಗೆ ದೇವರು ಧರ್ಮಗಳಲ್ಲಿ ನಂಬಿಕೆಯಿದೆ, ಮೂಢನಂಬಿಕೆಗಳಿಲ್ಲ. ಮಾಧವನ ಸುದ್ದಿಯಿಲ್ಲದೆ ಎಲ್ಲರೂ ಕಂಗೆಟ್ಟಿರುವ ಹೊತ್ತಿನಲ್ಲೂ ಅವಳ ಆತ್ಮಸ್ಥೈರ್ಯದಲ್ಲಿ ವ್ಯತ್ಯಾಸವಾಗಿಲ್ಲ. ಆದರೆ ಮಾಧವ 'ಇಂದುಲೇಖೆಗೆ ಸಂಬಂಧವಾಗಿದೆ ಎಂಬ ಸುಳ್ಳುಕಂತೆಯನ್ನು ನಂಬಿದುದು' ಅವಳ ಸ್ವಾಭಿಮಾನವನ್ನು ನೋಯಿಸುವ ವಿಷಯವಾಗಿದೆ. 'ಈ ಜನ್ಮದಲ್ಲಿ ಅವರನ್ನಲ್ಲದೆ ಇನ್ನೊಬ್ಬನನ್ನು ತಾನು ಪತಿಯನ್ನಾಗಿ ಸ್ವೀಕರಿಸಲಾರೆ' ಎಂಬುದು ಮಾಧವನಿಗೆ ಅರ್ಥವಾಗಿದೆ ಎಂದು ಇಂದುಲೇಖೆ ದೃಢವಾಗಿ ನಂಬಿದ್ದಳು. ತಾನು ಮಾಧವನ ಮೇಲೆ ವಿಶ್ವಾಸವಿಟ್ಟಂತೆ ಅವನೂ ತನ್ನ ಕುರಿತಾಗಿ ವಿಶ್ವಾಸ ಹೊಂದಿರಬೇಕೆಂದು ನಿರೀಕ್ಷಿಸುತ್ತಾಳೆ. ಸಂಬಂಧದ ಬದ್ಧತೆ ಎಂಬುದು ಒಂದು ದ್ವಿಮುಖ ಪ್ರಕ್ರಿಯೆ. ಸಂಬಂಧವನ್ನು ಉಳಿಸಿಕೊಳ್ಳುವ ಹೊಣೆ ಗಂಡು ಹೆಣ್ಣು ಇಬ್ಬರದೂ ಆಗಿದೆ ಎಂಬುದು ಅವಳ ಅಭಿಪ್ರಾಯ.

ಮಾಧವ-ಇಂದುಲೇಖಾರ ಪ್ರೇಮವಿವಾಹ ನಡೆಯುವಂತಾದುದು ಕೂಡ ಅವಳ ಬಲವಾದ ಇಚ್ಛಾಶಕ್ತಿಯಿಂದ. ಶಿಕ್ಷಣವು ಹೆಣ್ಣಿಗೆ ಒದಗಿಸುವ ಆತ್ಮವಿಶ್ವಾಸ, ಸ್ವಾಭಿಮಾನ ಮತ್ತು ಧೈರ್ಯಗಳ ಪ್ರತೀಕವಾಗಿರುವ ಇಂದುಲೇಖೆ ಹೆಣ್ಣಿನ ಆಯ್ಕೆಯ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಾಳೆ. ಒಪ್ಪಿಗೆಯಿಲ್ಲದ ಸಂಬಂಧವನ್ನು ಖಡಾಖಂಡಿತ ನಿರಾಕರಿಸಿ ತನ್ನ ನಿರ್ಧಾರವನ್ನು ಪ್ರಕಟಿಸುತ್ತಾಳೆ. 'ಶಾರದ' ಕೃತಿಯ ಕಲ್ಯಾಣಿಯಂತೆ ಪಲಾಯನ ಮಾಡದೆ ಮನೆಯಲ್ಲೇ ಉಳಿದು ತನ್ನ ಸಂಕಲ್ಪವನ್ನು ನೆರವೇರಿಸಿಕೊಳ್ಳುತ್ತಾಳೆ. ಪುರುಷ ಸ್ವಾರ್ಥದ ವಿರುದ್ಧ ಸಾತ್ವಿಕ ವಿಜಯವನ್ನು ಸಾಧಿಸುತ್ತಾಳೆ.

ಅಕ್ಷರ ಕಲಿತ ಹೆಣ್ಣಿನ ದ್ವಂದ್ವಗಳು ಹಾಗೂ ಆಕೆಯ ಸ್ವತಂತ್ರ ಆಲೋಚನಾ ಕ್ರಮದ ಒಂದು ಮಾದರಿಯಾಗಿ 'ಬಲೆ' ಕಾದಂಬರಿಯ ಫಾತಿಮ್ಮ ಕಾಣಿಸಿಕೊಳ್ಳುತ್ತಾಳೆ. ಷರಫ್‌ನ ಒಡನಾಟದ ಕಾರಣಕ್ಕಾಗಿ ತನ್ನ ಮತ್ತು ಪತಿಯ ನಡುವೆ ಉಂಟಾದ ವೈಮನಸ್ಸಿನಲ್ಲಿ ತನ್ನದೂ ತಪ್ಪಿದೆ ಎಂದು ಅವಳಿಗೆ ಅನಂತರದಲ್ಲಿ ಅನ್ನಿಸಿದೆ. 'ಗಂಡ ಮತ್ತು ಮಗನೊಡನೆ ತಾನು ತೋರಿದ್ದು ಸರಿಪಡಿಸಲಾಗದ ಅಪರಾಧವನ್ನೇ. ತನಗೆ ತನ್ನನ್ನೇ ನಿಯಂತ್ರಿಸಲಾಗಲಿಲ್ಲ ಎಂಬುದು ನಿಜವೇ' ಎಂಬ ವಿಚಾರವೂ ಅರ್ಥವಾಗಿದೆ. ಆದರೆ ಪತಿಯ ಕಾಲ ಮೇಲೆ ಬಿದ್ದು ತನ್ನನ್ನು ಸ್ವೀಕರಿಸುವಂತೆ ಬೇಡುವುದು ಆಕೆಯ ಸ್ವಾಭಿಮಾನಕ್ಕೆ ಒಪ್ಪಿಗೆಯಾಗುವುದಿಲ್ಲ. ಪತಿಯನ್ನು ತ್ಯಜಿಸುವ ನಿರ್ಧಾರದಿಂದ ತವರು ತವರುಮನೆಯ ಮಾನ ಹೋದೀತು ಎಂದೂ ಆಕೆ ಬಲ್ಲಳು. ಆದರೂ ಸೋತು ಹಿಂದಿರುಗಿ ಪತಿಯಿಂದ ಹಳಿಸಿಕೊಳ್ಳಲು, ಮಗನ ಮುಂದೆ ಅವಮಾನಕ್ಕೆ ಈಡಾಗಲು ಫಾತಿಮ್ಮ ಸಿದ್ಧಳಿಲ್ಲ. ಅವಳಿಗೆ ತನ್ನನ್ನು ಹೃದಯದಲ್ಲಿಟ್ಟುಕೊಳ್ಳುವ ಪತಿಯ ನಿರೀಕ್ಷೆಯಿದೆ.

ಫಾತಿಮ್ಮ ಪತಿಯೊಂದಿಗೆ ಇರುವಾಗಲೆ ಷರಫ್‌ನ ರೂಪ ಮತ್ತು ಸರಸ ನಡವಳಿಕೆಗಳಿಂದ ಆಕರ್ಷಿತಳಾಗಿರುವುದು ಕಂಡುಬರುತ್ತದೆ. ಪತಿಯ ಗೆಳೆಯನಿಗೆ ತನ್ನ ಮೇಲೆ ಮನಸ್ಸಿದೆ ಎಂದು ತಿಳಿದ ನಂತರವೂ ಮುಕ್ತವಾಗಿದ್ದು ಅವನ ನಡವಳಿಕೆಯನ್ನು ಪ್ರೋತ್ಸಾಹಿಸುತ್ತಾಳೆ. ತನ್ನ ಮತ್ತು ಷರಫ್‌ನ ಸಂಬಂಧದ ಬಗ್ಗೆ ಗಂಡನಿಗೆ ದೂರು ಹೇಳುತ್ತಾನೆಂದು ಸ್ವಂತ ಮಗನ ಮೇಲೆಯೆ ಸಿಟ್ಟಾಗುತ್ತಾಳೆ. ಗಂಡನ ಮೇಲಿನ ಸಿಟ್ಟಿಗೆ ಪ್ರತೀಕಾರವೆಂಬಂತೆ ಬ್ಯೂಟಿಪಾರ್ಲರಿಗೆ ಹೋಗಿ ಸಿಂಗರಿಸಿಕೊಂಡು, ಪರಪುರುಷನಾದ ಷರಫ್‌ನ ಮನೆಗೆ ಒಂಟಿಯಾಗಿ ಹೋಗುತ್ತಾಳೆ. 'ವಿದ್ಯೆ ಮತ್ತು ವೈಚಾರಿಕತೆ ಅಧಿಕವಾದಂತೆ ಇಂದಿನ ಹೆಣ್ಣುಮಕ್ಕಳಿಗೆ ಸ್ವೇಚ್ಛೆಯೂ ಅಧಿಕವಾಗುತ್ತಿರುವುದನ್ನು' ಗಮನಿಸಿ ಮಗಳನ್ನು ಯಾವಾಗಲೂ ಎಚ್ಚರಿಸುತ್ತಿದ್ದ ಆಯಿಶುಮ್ಮನ ವಿಚಾರಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು: "ಹೆಣ್ಣಿನ ಮನಸ್ಸು ತಳವಿಲ್ಲದ ಕಡಲು. ಕಡಲಿನ ಅಲೆಗಳನ್ನು ತಡೆದು ನಿಲ್ಲಿಸಲು ದೇವರಿಂದ ಮಾತ್ರ ಸಾಧ್ಯ. ಹೆಣ್ಣಿನ ಮನಸ್ಸು ಕೂಡಾ ಹಾಗೆಯೇ. ಅದು ಯಾವ ಕಡೆಗೆ ಹೊರಳುತ್ತದೆಂದು ಹೇಳಲು ಯಾರಿಂದಲೂ ಸಾಧ್ಯವಿಲ್ಲ." (ಪು. ೮೨)

ಮುಕ್ತತೆಯನ್ನು ಬಯಸುವ ಹೆಣ್ಣಿನ ಮನಸ್ಸನ್ನು ಅಂಕೆಯಲ್ಲಿರಿಸಲು ಸಮಾಜವು ವಿಧಿಸಿರುವ ಸದಾಚಾರದ ಕಟ್ಟುಪಾಡುಗಳ ಬಗ್ಗೆಯೂ ಆಯಿಶುಮ್ಮ ಮಗಳಿಗೆ ಸಾಕಷ್ಟು ಬಾರಿ ತಿಳಿಸಿಕೊಟ್ಟಿದ್ದಾರೆ: 'ಹೆಣ್ಣಾದರೆ ಎಲ್ಲವನ್ನೂ ಸಹಿಸಬೇಕು. ಮನಸ್ಸನ್ನು ನಿಯಂತ್ರಿಸಲು ಕಲಿಯಬೇಕು. ಅಲ್ಲೇ ಇರುವುದು ಹೆಣ್ಣಿನ ಯಶಸ್ಸು. ಒಬ್ಬನನ್ನು ಕಟ್ಟಿಕೊಂಡರೆ ಅವನ ಗುಣದೋಷಗಳೆಲ್ಲವನ್ನೂ ಸಹಿಸಿಕೊಂಡು ಅವನೊಡನೆಯೇ ಬದುಕಬೇಕು. ಅದು ಲೋಕನಿಯಮ.' (ಪು. ೮೩) ವಿದ್ಯಾವಂತೆಯಾದ ಫಾತಿಮ್ಮ ಅಮ್ಮನ ಸಾಂಪ್ರದಾಯಿಕ ವಿಚಾರಗಳನ್ನು ಒಪ್ಪುವವಳಲ್ಲ. ಪತಿಯ ಅಸಡ್ಡೆ, ಸಂಶಯಗಳನ್ನು ಸಹಿಸಿಕೊಂಡು ಸಂಸಾರವನ್ನು ಉಳಿಸಿಕೊಳ್ಳುವುದು ಅವಳ ಆದ್ಯತೆಯಾಗಿಲ್ಲ.

'ಬಲೆ' ಕೃತಿಯಲ್ಲಿ ಹಲವೆಡೆ ಸ್ತ್ರೀ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಿಚಾರಗಳಿವೆ. 'ಓರ್ವ ಸ್ತ್ರೀಯ ಸ್ವಾತಂತ್ರ್ಯಕ್ಕೆ ಪರಿಮಿತಿಗಳಿರುವುದು' ಫಾತಿಮ್ಮಳ ಗಮನಕ್ಕೆ ಬಂದಿದೆ ಮತ್ತು ಅದೇ ಅವಳ ಅಸಹನೆಗೆ ಕಾರಣವಾಗಿದೆ. ಕೂದಲು ಕತ್ತರಿಸಿಕೊಳ್ಳುವುದು, ಫೇಷಿಯಲ್, ಹುಬ್ಬುಗಳನ್ನು ಟ್ರಿಮ್ ಮಾಡಿಕೊಳ್ಳುವುದು, ತುಟಿಗೆ ರಂಗು ಬಳಿಯುವುದು, ಹೀಲ್ಸ್ ಮೆಟ್ಟುವುದು... ಹೀಗೆ ಕೃತಕ ಚೆಲುವನ್ನು ಧರಿಸಿಕೊಂಡು ಏಕಾಂಗಿನಿಯಾಗಿ ಪರಪುರುಷನ ಮನೆಗೆ ಹೋಗಿ 'ನಾನು ಸ್ವೇಚ್ಛಾಚಾರಿಯಾಗಿದ್ದೇನೆ' ಎಂದಾಕೆ ಹೇಳುವುದು ಸ್ತ್ರೀವಾದ ಮತ್ತು ಆಧುನಿಕತೆಗಳನ್ನು ಪ್ರತಿಪಾದಿಸುವ ಮಹಿಳೆಯರ ಕುರಿತಾದ ಸಮಾಜದ ಗ್ರಹಿಕೆಗೆ ಅನುಗುಣವಾಗಿಯೆ ಇದೆ.

'ಕೊಚ್ಚರೇತ್ತಿ'ಯ ಕುಞಿಪೆಣ್ಣ್ ಹಾಗೂ ಕೊಚ್ಚುರಾಮನ ಮಗಳು ಪಾರ್ವತಿ ಮಲೆಯಿಂದ ಹೊರಗೆ ಬಂದು ಶಾಲೆಗೆ ಹೋಗಿ ಆರನೆಯ ಫಾರಂ ಪಾಸಾದ ಮೊದಲನೆಯ ಹೆಣ್ಣುಮಗಳಾಗಿ ಆಧುನಿಕ

ವಿಚಾರಗಳನ್ನು ಮೈಗೂಡಿಸಿಕೊಂಡವಳು. ಮೈನೆರೆದಾಗ ಮಾಡುವ ವಿಧಿಗಳನ್ನು ಅಸಹನೆಯಿಂದ ತಾಳಿಕೊಂಡರೂ ತಾನು ಮೈನೆರೆದ ಹೆಣ್ಣು ಎಂಬುದನ್ನು ನೋಡುಗರಿಗೆ ಸಾರಿ ಹೇಳುವ ತಾಲಿಯನ್ನು ಕುತ್ತಿಗೆಯಿಂದ ಕಿತ್ತೆಸೆಯುತ್ತಾಳೆ. ಮೈನೆರೆದ ಕಾರಣಕ್ಕಾಗಿ ತನ್ನ ಓದು ನಿಲ್ಲಿಸುವುದನ್ನು ಪ್ರತಿಭಟಿಸಿ ಮಾಸ್ತರರ ಬೆಂಬಲದಿಂದ ಶಿಕ್ಷಣವನ್ನು ಮುಂದುವರಿಸುತ್ತಾಳೆ. ಮಲೆಯ ಸಂಪ್ರದಾಯದಂತೆ ತನ್ನ ಹಕ್ಕಿನ ಹುಡುಗನಾದ ರಾಘವನನ್ನು ಮದುವೆಯಾಗಲು ನಿರಾಕರಿಸುತ್ತಾಳೆ. ಆರ್ಥಿಕ ಸ್ವಾವಲಂಬನೆ ಪಡೆದ ಬಳಿಕ 'ತನಗೆ ಇಷ್ಟವಾದ ಗಂಡಿನೊಂದಿಗೆ ಪೇಟೆಯಲ್ಲಿ ಸಂಸಾರ ಹೂಡುವ' ಯೋಚನೆಯನ್ನು ಕಲಿಯುವಾಗಲೆ ಹೊಂದಿದ್ದವಳು ಪಾರ್ವತಿ. ಸರಕಾರಿ ಉದ್ಯೋಗ ಸಿಕ್ಕಿ ಆಕೆಯ ಕನಸುಗಳಿಗೆ ಬಲ ಬರುತ್ತದೆ. ಅಪ್ಪನ ಇಚ್ಛೆಗೆ ವಿರುದ್ಧವಾಗಿ, ತನ್ನಂತೆಯೇ ಶಿಕ್ಷಣ ಪಡೆದು ಉತ್ತಮ ಉದ್ಯೋಗದಲ್ಲಿರುವ ಪದ್ಮನಾಭನನ್ನು ಮದುವೆಯಾಗುವುದಾಗಿ ನಿರ್ಧರಿಸುತ್ತಾಳೆ. ಮನೆಯಲ್ಲಿ ಹೇಳದೆ ರಿಜಿಸ್ಟ್ರಾರ್ ಕಛೇರಿಯಲ್ಲಿ ಪದ್ಮನಾಭನನ್ನು ಮದುವೆಯಾಗಿ ಸಂಸಾರ ಹೂಡುತ್ತಾಳೆ. ಪಾರ್ವತಿ ಮನೆಬಿಟ್ಟು ಹೋಗುವುದಕ್ಕೆ ಮುನ್ನ ಅಪ್ಪ ಮಾಡಿಸಿದ್ದ ಎಲ್ಲ ಆಭರಣಗಳನ್ನು ಅಮ್ಮನಿಗೆ ಒಪ್ಪಿಸಿ ಹೊರಟುಹೋಗುವುದು ಶಿಕ್ಷಣದ ಮುಖಾಂತರ ಆರ್ಥಿಕ ಚೈತನ್ಯ ಪಡೆದಿರುವ ಹೆಣ್ಣಿನ ಆತ್ಮವಿಶ್ವಾಸದ ಪ್ರತೀಕವಾಗಿದೆ. ಓದಿದ, ಚೆಲುವೆಯಾದ ಮಗಳ ಬಗ್ಗೆ ವಿಶೇಷ ಅಭಿಮಾನ ಹೊಂದಿದ್ದ ಕೊಚ್ಚುರಾಮ, ಬುದ್ಧಿವಂತನಲ್ಲದ ಮಗ ಶೇಖರನ್‌ನನ್ನು ಕಡೆಗಣಿಸುತ್ತಾನೆ. ಶಾಲೆ ಕಲಿಯದೆ, ಕೆಲಸವಿಲ್ಲದೆ ಮರಹತ್ತಿ ಕಾಲಕಳೆವವನು ಎಂಬ ಕಾರಣಕ್ಕೆ ಹಕ್ಕಿನ ಹುಡುಗ ರಾಘವನಿಗೆ ಮಗಳನ್ನು ಕೊಡಲು ನಿರಾಕರಿಸುತ್ತಾನೆ. ಮಗಳಿಗೆ ಉದ್ಯೋಗ ಸಿಕ್ಕಿದ ಬಳಿಕ ಆಕೆಯ ಸಂಬಳಕ್ಕೆ ಆಸೆಪಟ್ಟು ಅವಳ ಮದುವೆಯನ್ನು ಮುಂದೂಡುತ್ತಾನೆ. ಶಿಕ್ಷಣ ಮತ್ತು ಉದ್ಯೋಗಗಳು ಹೆಣ್ಣಿನ ಬದುಕಿನ ಸಾಂಪ್ರದಾಯಿಕ ಮಾದರಿಗಳನ್ನು ಬದಲಾಯಿಸುತ್ತವೆ ಮಾತ್ರವಲ್ಲ, ಹಿರಿಯರ ನಿರೀಕ್ಷೆಗಳ ಪರಿವರ್ತನೆಗೆ ಕಾರಣವಾಗುತ್ತವೆ ಎಂಬುದಕ್ಕೆ ಈ ಸಂಗತಿಗಳು ಪೂರಕವಾಗಿವೆ.

'ಅಗ್ನಿಸಾಕ್ಷಿ' ಕೃತಿಯ ದೇವಕಿಯ ನಿರ್ಧಾರಗಳ ಹಿಂದೆ ಆಕೆಯ ತವರಿನಲ್ಲಿ ಲಭ್ಯವಿದ್ದ ಮುಕ್ತ ವಾತಾವರಣ, ಅವಳು ಪಡೆದುಕೊಂಡಿದ್ದ ಆಧುನಿಕ ಶಿಕ್ಷಣ ಮತ್ತು ಓದಿನ ಮೂಲಕ ಗಳಿಸಿದ ಸುಧಾರಣಾವಾದದ ಅರಿವು ಪ್ರಭಾವ ಬೀರಿವೆ. ತಂಗಂ ಶಾಲೆಗೆ ಹೋಗುವಂತಾದದ್ದೇ 'ಮುಂದೆ ಮದುವೆ ಸುಲಭವಾಗಲಿ' ಎಂಬ ಕಾರಣಕ್ಕಾಗಿ. ಯಾಕೆಂದರೆ 'ಈಗೀಗ ಗಂಡುಗಳು ಓದಿದ ಹೆಣ್ಣನ್ನೇ ಬಯಸತೊಡಗಿದ್ದಾರೆ.' ಮದುವೆಯಿಂದ ತಪ್ಪಿಸಿಕೊಂಡು ಕಾಲೇಜು ಕಲಿಯುವುದಕ್ಕಾಗಿ ತಂಗಂ ಉಪವಾಸ, ಪ್ರತಿಭಟನೆಗಳನ್ನು ಮಾಡಬೇಕಾಗುತ್ತದೆ. ಕೊನೆಗೂ ಮನೆಯ ಕಿರಿಯ ಮಗನಾಗಿರುವ ಅನಿಯನ್ ಜೊತೆ ತಂಗಂ ಓದು ಮುಂದುವರೆಸುವ ವ್ಯವಸ್ಥೆಯಾಗುತ್ತದೆ. ಈ ಬೆಳವಣಿಗೆಯಿಂದ ಬಹಳ ಸಂತೋಷಪಡುವವಳು ದೇವಕಿ. ವಿದ್ಯಾವಂತೆಯಾದ ದೇವಕಿಯ ಬುದ್ಧಿ-ಭಾವಗಳ

ಸಂಘರ್ಷವನ್ನು ಸಹಾನುಭೂತಿಯಿಂದ ಅರಿತು ಸ್ಪಂದಿಸುವ ವೈಚಾರಿಕತೆ ತಂಗಂಳಿಗೆ ಶಿಕ್ಷಣದಿಂದ ಪ್ರಾಪ್ತವಾಗಿದೆ.

ಕೃಷ್ಣನ್ ಕುಟ್ಟಿಯವರು ಬರೆದ 'ವಯನಾಡು: ಕನಸುಗಳ ಬೀಡು' ಕತೆಯಲ್ಲಿ ಕ್ರೈಸ್ತ ಹುಡುಗಿ ರೀಮಾ ತನ್ನ ಕಾಲೇಜಿನಲ್ಲಿ ಓದುವ ಹಿಂದೂ ಹುಡುಗನನ್ನು ಪ್ರೀತಿಸುತ್ತಾಳೆ. ತನ್ನ ಮೇಲಿನ ಪ್ರೀತಿ, ಗೌರವಗಳು ಅವನನ್ನು ಮದ್ಯ, ಸಿಗರೇಟಿನಂಥಾ ದುಶ್ಚಟಗಳಿಂದ ತಡೆಯುವಂತೆ, ಅವನ ಕೈಬರೆಹ ಸುಂದರವಾಗುವಂತೆ ಪ್ರೇರಣೆ ನೀಡುತ್ತಾಳೆ. ಕಟ್ಟಾ ಧಾರ್ಮಿಕಳಾದ ಅಮ್ಮನಿಗೆ ತಿಳಿಯದಂತೆ ಕತ್ತಿನ ಶಿಲುಬೆ ಸರವನ್ನು ಕಳಚಿ ಬ್ಯಾಗಿನಲ್ಲಿರಿಸಿ ಗೆಳೆಯನೊಂದಿಗೆ ಸುತ್ತಾಡುತ್ತಾಳೆ. ಮಗಳ ಅನ್ಯಮತೀಯ ಪ್ರೇಮದ ಬಗ್ಗೆ ತಿಳಿದು ಈದ ಹುಲಿಯಂತಾಗಿದ್ದ ಅಪ್ಪ, ಊರಿನವರು, ಹೆಚ್ಚೇಕೆ 'ಲೋಕದ ಎಲ್ಲ ದೇವರುಗಳು ಎದುರು ನಿಂತರೂ' ಎದುರಿಸುವ ಧೈರ್ಯವುಳ್ಳವಳಾಗಿದ್ದ ರೀಮಾ ತನಗೆ ಇಷ್ಟವಾದವನ ಜೊತೆಗೆ ಊರು ಬಿಡುವ ಧೈರ್ಯ ಮಾಡುತ್ತಾಳೆ. ಮುಂದೆಂದೂ ತವರಿಗೆ ಮರಳದೆ ದೂರದ ಊರಿನಲ್ಲಿ ಬದುಕು ಕಟ್ಟಿಕೊಂಡು ಅಲ್ಲೇ ಪ್ರಾಣಬಿಡುತ್ತಾಳೆ. ಸಂಪ್ರದಾಯ, ಧರ್ಮ ಎರಡನ್ನೂ ನಿರಾಕರಿಸಿ ಸ್ವತಂತ್ರ ನಿರ್ಣಯ ತೆಗೆದುಕೊಂಡು ಜೀವನದಲ್ಲಿ ಗೆಲ್ಲುವ ರೀಮಾ ಶಿಕ್ಷಣದ ಮೂಲಕ ಸ್ವತಂತ್ರ ಚಿಂತನೆಯನ್ನು ಮೈಗೂಡಿಸಿಕೊಂಡ ಆಧುನಿಕ ಸ್ತ್ರೀಯರ ಪ್ರತಿನಿಧಿಯಾಗಿದ್ದಾಳೆ.

ಕೆ.ಪಿ. ಸುಧೀರಾ ಅವರ 'ನೆರಳು ಮರಗಳಿಲ್ಲದ ದಾರಿ' ಎಂಬ ಕತೆಯ ಮಾಯಾ ಕವಯಿತ್ರಿ. ಸ್ವಾತಂತ್ರ್ಯಪ್ರಿಯಳು. ಮನೆಯವರು ಹುಡುಕಿದ್ದ 'ಯೋಗ್ಯ ಹುಡುಗ'ನೊಂದಿಗೆ ಅವಳ ಮದುವೆ ನಿಶ್ಚಯವಾಗಿತ್ತು. ಮಾಯಾಳಿಗೂ ಒಪ್ಪಿಗೆಯಾಗಿದ್ದ ಹುಡುಗನ 'ನೀಚವೂ, ಕ್ಷುದ್ರವೂ ಆದ ಸ್ವಾರ್ಥ ಗುಣಗಳು' ದಿಗಿಲುಗೊಳಿಸಿದಾಗ 'ಈ ಮದುವೆ ನನಗೆ ಸುಖ ನೀಡಲಾರದು. ಇದಕ್ಕಿಂತ ಒಂಟಿಯಾಗಿ ಉಳಿಯುವುದೇ ಉತ್ತಮ' ಎಂದು ಅಪ್ಪನಿಗೆ ದೃಢವಾಗಿ ಹೇಳಿ ಮದುವೆಯನ್ನು ತಿರಸ್ಕರಿಸುತ್ತಾಳೆ. 'ನಿತ್ಯನರಕದಲ್ಲಿ ಬೆಂಕಿಯನ್ನು ನುಂಗಿಕೊಂಡು ಬಾಳುವುದಕ್ಕಲ್ಲ ನನ್ನ ಈ ಜನ್ಮ' ಎಂಬುದು ಮಾಯಾಳ ಸ್ಪಷ್ಟ ನಿಲುವು. ಇದೇ ಕತೆಯಲ್ಲಿ ಮಾಯಾಳ ಗೆಳತಿ ಮೋಹಿನಿ ಎತ್ತುವ ಪ್ರಶ್ನೆಯೊಂದು ಹೀಗಿದೆ "ಒಂದು ಹೆಣ್ಣಿನ ನಿಜವಾದ ಜೋಡಿ ಎಲ್ಲಿದೆ ಎನ್ನುವುದನ್ನು ತಿಳಿಯುವುದು ಹೇಗೆ? ಇದೋ ಇದೋ ಸಿಕ್ಕಿತು ಎಂದು ಅಹಂಕಾರ ಪಡುತ್ತಿರುವಾಗಲೇ ಗೊತ್ತಾಗುತ್ತದೆ ಇದಲ್ಲ ಇದಲ್ಲ ಎಂದು. ಆಮೇಲೆ ಈ ಬಿರುಕನ್ನು ಸರಿಪಡಿಸುವುದಾದರೂ ಹೇಗೆ?" (ಪು. ೧೧೧, ನೆರಳು ಮರಗಳಿಲ್ಲದ ದಾರಿ) ಮದುವೆ ಎಂಬ ಹೆಣ್ಣಿಗೆ ಕಡ್ಡಾಯವಾಗಿರುವ ಸಂಬಂಧವು ನಿಜದಲ್ಲಿ ಅವಳಿಗೆ ಬಂಧನವಾಗುವ ಅಪಾಯವನ್ನು ಕತೆ ಧ್ವನಿಸುತ್ತದೆ. ಸಂಬಂಧಗಳು ತರಬಹುದಾದ ಅಪಾಯವನ್ನು ಕಂಡುಕೊಳ್ಳುವ ಪ್ರಜ್ಞೆ, ಇಷ್ಟವಿಲ್ಲದ ಸಂಗತಿಯನ್ನು ಸ್ಪಷ್ಟವಾಗಿ ನಿರಾಕರಿಸುವ ಧೈರ್ಯ ಮತ್ತು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವ ಗಟ್ಟಿತನವನ್ನು ಆಧುನಿಕ ಶಿಕ್ಷಣ ಮತ್ತು ಓದಿನಿಂದಾಗಿ ಸ್ತ್ರೀಯರು ಪಡೆದುಕೊಂಡಿದ್ದಾರೆ.

ಸಂಸ್ಕೃತಿಯನ್ನು ಪ್ರತಿನಿಧಿಸುವ ಸಾಹಿತ್ಯಕೃತಿಯಲ್ಲಿ ಅಧೀನ ಸ್ತ್ರೀಪಾತ್ರಗಳ ಚಿತ್ರಣಕ್ಕೆ ಪಿತೃಪ್ರಧಾನ ವ್ಯವಸ್ಥೆಯು ರೂಪಿಸುವ ಪ್ರಜ್ಞೆಯು ಕಾರಣವಾಗಿದೆ. ಈ ತೆರನಾದ ಚಿತ್ರಣದ ಅಂತಿಮ ಉದ್ದೇಶ ಹೆಣ್ಣಿನ ಮೇಲೆ ಅಧಿಕಾರ ಚಲಾಯಿಸುವುದು ಮತ್ತು ಹತೋಟಿಯಲ್ಲಿಡುವುದು. ಸ್ತ್ರೀಸಂವೇದನೆಯುಳ್ಳ ಅಭಿವ್ಯಕ್ತಿ ಮಾಧ್ಯಮವಾಗಿರುವ ಸಾಹಿತ್ಯವು ಸಂಸ್ಕೃತಿಯ ಪುರುಷಪರ ದೃಷ್ಟಿಯನ್ನು ಮರುಸೃಷ್ಟಿಸುತ್ತದೆ. ಪರಂಪರೆಯನ್ನು ವಿಶ್ಲೇಷಿಸುವ, ಪ್ರಶ್ನಿಸುವ ಮತ್ತು ಸಮಾಜದ ಕೊರತೆಗಳನ್ನು ಎತ್ತಿ ತೋರಿಸುವ ಸಾಮಾಜಿಕ ಕಾಳಜಿಯೊಂದಿಗೆ ಹಲವು ಕೃತಿಗಳ ರಚನೆಯಾಗಿದೆ. 'ಇಂದುಲೇಖಾ', 'ಅಗ್ನಿಸಾಕ್ಷಿ', 'ಶಾರದ' ಮತ್ತು 'ಕಾಲ' ಕೇರಳದ ಸಂಬಂಧಂ ವ್ಯವಸ್ಥೆಯನ್ನು, ನಾಯರ್ ತರವಾಡು ಮನೆತನಗಳ ಮರುಮಕ್ಕತ್ತಾಯ ಕಟ್ಟನ್ನು ಸ್ತ್ರೀ ಸಂವೇದನೆಯೊಂದಿಗೆ ಒರೆಗೆ ಹಚ್ಚುವ ಕಾದಂಬರಿಗಳು. ಸ್ತ್ರೀ ಮತ್ತು ಪುರುಷ ಇಬ್ಬರೂ ಪಿತೃಸಂಸ್ಕೃತಿಯಿಂದ ಮೇಲೆದ್ದು ಬರುವ ಸಾಹಸದೆಡೆಗೆ ಒಲವನ್ನು ಹೊಂದಿರುವ ಕೃತಿಗಳು. 'ಇಂದುಲೇಖಾ' ಮತ್ತು 'ಶಾರದ' ಕೃತಿಗಳು ಸಂಬಂಧಂ ಎಂಬ ವಿಷಮ ದಾಂಪತ್ಯ ವ್ಯವಸ್ಥೆಯ ದುಷ್ಪರಿಣಾಮಗಳನ್ನು ನಿರೂಪಿಸುತ್ತವೆ.

ಮಲಯಾಳಂ ಲೇಖಕರು ಸ್ತ್ರೀಯ ಜಗತ್ತು ಬಹಳ ವಿಶಿಷ್ಟವಾದುದು ಎಂಬ ಅರಿವಿನೊಂದಿಗೆ ಬರೆದಿದ್ದಾರೆ. ಹೆಣ್ಣಿನ ಮೇಲೆ ವಿಧಿಸಲಾಗಿರುವ ಕಟ್ಟುಪಾಡುಗಳ ಹಿನ್ನೆಲೆಯಲ್ಲಿ ಅವಳ ವರ್ತನೆಗಳನ್ನು ವಿಶ್ಲೇಷಿಸಲು ಯತ್ನಿಸಿದ್ದಾರೆ. ವ್ಯವಸ್ಥೆಯನ್ನು ಇದ್ದಂತೆಯೇ ಒಪ್ಪಿ ಬದುಕುವ ಸ್ತ್ರೀಯರು, ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ಅದನ್ನು ಸಹ್ಯವಾಗಿಸಿಕೊಂಡು ನೆಮ್ಮದಿಯಲ್ಲಿ ಇರುವ ಸ್ತ್ರೀಯರು, ಇರುವುದೋ ಬಿಡುವುದೋ ಎಂಬ ತೊಳಲಾಟದಲ್ಲಿರುವವರು, ಸ್ತ್ರೀವಿರೋಧಿಯಾದ ಮೌಲ್ಯ ನಂಬಿಕೆಗಳ ವಿರುದ್ಧ ಸಿಡಿದೇಳುವವರು... ಹೀಗೆ ಭಿನ್ನ ಸ್ತ್ರೀ ಭೂಮಿಕೆಗಳು ಸಾಹಿತ್ಯದಲ್ಲಿ ಕಂಡುಬರುತ್ತವೆ. ಹೆಣ್ಣಿನ ನೋವಿಗೆ ಯಾವುದೇ ಪರಿಹಾರವನ್ನು ಸೂಚಿಸದೆ ಮುಗಿದುಹೋಗಿವೆ ಎನಿಸುವ ದುರಂತಕಥನಗಳು ಕೂಡ ಸಮಸ್ಯೆಯೆಡೆಗೆ ಗಮನ ಸೆಳೆದು ಸಾಮಾಜಿಕ ಬದಲಾವಣೆಗೆ ಪ್ರೇರಣೆಯಾಗುವಂತಿವೆ.

ಬಹುಪಾಲು ಪ್ರಕಟವಾಗದೆಯೆ ಮರೆಯಾಗುವ ಸ್ತ್ರೀಯರ ಬದುಕಿನ ನೋವು, ಅಸಹನೆ, ದುರಂತಗಳನ್ನು ಕಾಣಿಸುವ ಮತ್ತು ಈ ಪಾಡಿಗೆ ಕಾರಣಗಳನ್ನು ಶೋಧಿಸುವ ಯತ್ನವನ್ನು ಹೆಚ್ಚಿನ ಕಥನಗಳಲ್ಲಿ, ವಿಶೇಷವಾಗಿ ಲೇಖಕಿಯರ ಕೃತಿಗಳಲ್ಲಿ ಗುರುತಿಸಬಹುದು. ಆದರೆ ಕುಟುಂಬ ಎಂಬ ದೊಡ್ಡ ತಡೆಗೋಡೆಯಂತಿರುವ ವ್ಯವಸ್ಥೆಗೆ ಗಟ್ಟಿಯಾದ ಒಂದು ಬದಲಿ ವ್ಯವಸ್ಥೆಯ ಪ್ರತಿಪಾದನೆ ಈ ರಚನೆಗಳಲ್ಲಿ ಕಾಣುವುದಿಲ್ಲ. ದೇವಕಿ, ಫಾತಿಮ್ಮ, ಪ್ರಿಯಂವದಾ, ಚುಮ್ಮುಕುಟ್ಟಿಯಮ್ಮ, ಕಲ್ಯಾಣಿ, ಕನಕ, ಮನೋಮಿ.. ಮುಂತಾದ ಪಾತ್ರಗಳ ಮೂಲಕ ಹೆಣ್ಣಿನ ಕೌಟುಂಬಿಕ ಅಗತ್ಯಗಳು, ಹೆಣ್ಣಿಗೆ ಮಾತ್ರ

ಅನ್ವಯವಾಗುವ 'ಶೀಲ'ದ ವ್ಯಾಖ್ಯಾನದ ಬಗೆಗೆ ಮಲಯಾಳಂ ಲೇಖಕರು ಎತ್ತಿರುವ ಪ್ರಶ್ನೆಗಳು ಸ್ತ್ರೀ ನಿರೂಪಣೆಯ ನೆಲೆಯಿಂದ ಬಹಳ ಮುಖ್ಯವಾದದ್ದಾಗಿವೆ.

ಮಲಯಾಳಂ ಕಥನಸಾಹಿತ್ಯವು ಪ್ರತಿಬಿಂಬಿಸುವ ಸ್ತ್ರೀಲೋಕದ ಸಾಮಾಜಿಕ ನೆಲೆಯು ತುಂಬ ವಿಸ್ತಾರವಾಗಿದ್ದು ಹೀಗೆ ಸಂಗ್ರಹಿಸಿ ಗುರುತಿಸಬಹುದಾಗಿದೆ:

- ಪಿತೃಪ್ರಧಾನವಾದ ಸಾಮಾಜಿಕ ವ್ಯವಸ್ಥೆಯು ಸ್ತ್ರೀಯರ ಶೋಷಣೆಗೆ ಕಾರಣವಾಗಿದೆ. ಮದುವೆಯ ಕೇಂದ್ರ ಕಾಳಜಿಯು ಹೆಣ್ಣಿಗೆ ಸ್ವಂತ ಬದುಕನ್ನು ನಿಷೇಧಿಸಿದೆ.
- ತಮಗೂ ತಿಳಿಯದಂತೆ ಸಂಪ್ರದಾಯ, ಸಂಸ್ಕೃತಿಗಳ ಅಭಿರಕ್ಷಣೆ ಮಾಡುವ ಮನೆಯ ಹಿರಿಯ ಮಹಿಳೆಯರು ಕುಟುಂಬದಲ್ಲಿ ಸ್ತ್ರೀವಿರೋಧಿಯಾದ ಎಲ್ಲ ಆಚರಣೆ ನಿಷೇಧಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತ, ಇತರರೂ ಪಾಲಿಸುವಂತೆ ನೋಡಿಕೊಳ್ಳುತ್ತಾರೆ.
- ಪತಿಯೊಂದಿಗೆ ಬದುಕುವುದು ಸಾಧ್ಯವಾಗದಿದ್ದರೆ ಸಂಬಂಧವನ್ನು ಕಡಿದುಕೊಂಡು ತವರಿಗೆ ಮರಳುವುದಕ್ಕೆ ಕೇರಳದ ನಾಯರ್ ಹೆಣ್ಣುಮಕ್ಕಳಿಗೆ ವಿಶೇಷವಾದ ಸ್ವಾತಂತ್ರ್ಯವಿದೆ.
- ದಾಂಪತ್ಯದ ಸಂಶಯ, ಹಿಂಸೆ, ಅವಮಾನಗಳಿಂದ ರೋಸಿಹೋದ ಸ್ತ್ರೀಯರು ಬಿಡುಗಡೆಯ ದಾರಿಗಳನ್ನು ಶೋಧಿಸುತ್ತಾರೆ.
- ಜೀವವಿರೋಧಿಯಾದ ಧರ್ಮ ಮತ್ತು ಸಂಪ್ರದಾಯಗಳಲ್ಲಿ ಸ್ತ್ರೀಯರಿಗೆ ನಂಬಿಕೆಯಿಲ್ಲ. ಧರ್ಮದ ವ್ಯಾಖ್ಯಾನ ಮತ್ತು ಅನುಸರಣೆಗಳು ಜೀವಪರವಾಗಿರಬೇಕು ಎಂದು ಅಪೇಕ್ಷಿಸುತ್ತಾರೆ. ಎರಡು ಧರ್ಮಗಳಲ್ಲಿ ಏಕರೀತಿಯ ಶ್ರದ್ಧೆಯಿರುವ ಜಾತ್ಯತೀತ ಸ್ತ್ರೀಯರನ್ನೂ ಕಾಣಬಹುದು.
- ಆಧುನಿಕ ಶಿಕ್ಷಣವು ಸ್ತ್ರೀಯರ ವೈಚಾರಿಕತೆ ಮತ್ತು ವರ್ತನೆಗಳಲ್ಲಿ ಪರಿವರ್ತನೆಯನ್ನು ತಂದಿದೆ.
- ಹೆಣ್ಣಿಗೆ ಕಡ್ಡಾಯವಾಗಿ ವಿಧಿಸಲಾಗಿರುವ ವಿವಾಹ ಮತ್ತು ತಾಯ್ತನದ ಮೌಲ್ಯಗಳು ಶೋಷಣೆಗೆ ಕಾರಣವಾಗಿರುವುದನ್ನು ಸ್ತ್ರೀಯರು ಗುರುತಿಸಿದ್ದಾರೆ. ಹೆಣ್ಣಿಗೆ ಗರ್ಭಧರಿಸುವ ಮತ್ತು ಹೆರುವ ಆಯ್ಕೆಗಳು ಇರಬೇಕೆಂದು ಬಯಸಿದ್ದಾರೆ.
- ಗಾಂಧಿಯುಗದ ವಿಚಾರಧಾರೆ ಹೆಣ್ಣಿಗೆ ಸಮಾಜಸೇವೆ ಮತ್ತು ಸನ್ಯಾಸಗಳ ಅವಕಾಶವನ್ನು ಕಲ್ಪಿಸಿದೆ. ಸಂಬಂಧಗಳಲ್ಲಿ ನಿರಾಶರಾದ ಸ್ತ್ರೀಯರು ಕೌಟುಂಬಿಕ ಬದುಕಿಗೆ ಬೆನ್ನು ತಿರುಗಿಸಿ ಸನ್ಯಾಸದಲ್ಲಿ ನೆಮ್ಮದಿಯನ್ನು ಅರಸುತ್ತಾರೆ.

ಅಧ್ಯಾಯ ೩

ಲೈಂಗಿಕ ನೆಲೆ

೩.೧. ಸ್ತ್ರೀ: ಲಿಂಗಸಂಬಂಧೀ ಗ್ರಹಿಕೆಗಳು

೩.೧.೧. ಸಾಧ್ವಿಯರು

೩.೧.೨. ಸ್ವೇಚ್ಛಾಚಾರಿಣಿಯರು

೩.೧.೩. ವಿನಾಶಿನಿಯರು

೩.೧.೪. ಚೈತನ್ಯಶಾಲಿ ಸ್ತ್ರೀಯರು

೩.೧.೫. ಸ್ತ್ರೀ ಸಖ್ಯ: ಸಾಮುದಾಯಿಕ ಸ್ತ್ರೀಪ್ರಜ್ಞೆ

೩.೧.೬. ಕಾಲ್ಪನಿಕ ಸ್ತ್ರೀಯರು

೩.೧.೭. ಅನುಭೋಗ – ವಿಕ್ರಯದ ಸೊತ್ತು

೩.೧.೮. ಭಾಷೆಯಲ್ಲಿ ಹೆಣ್ತನದ ವಿನ್ಯಾಸಗಳು

೩.೧.೯. ಪ್ರಕೃತಿ – ಸ್ತ್ರೀ ಸಂಬಂಧ

೩.೨. ಸ್ತ್ರೀಲೈಂಗಿಕತೆ

೩.೨.೧. ಲೈಂಗಿಕ ಸದಾಚಾರ: ಸ್ತ್ರೀಯರಿಗೆ ಮಾತ್ರ

೩.೨.೨. ಲೈಂಗಿಕ ಬಯಕೆ ಮತ್ತು ನಿರಾಸೆ: ತಪ್ತೆಯರು

೩.೨.೩. ಕುಟುಂಬದ ಹೊರಗಿನ ಲೈಂಗಿಕತೆ: ಪ್ರಣಯಿನಿಯರು

೩.೨.೪. ಲೈಂಗಿಕ ಹಿಂಸೆ: ಸಂತ್ರಸ್ತೆಯರು

೩.೨.೫. ಸ್ತ್ರೀಯರ ನಡುವಿನ ಆಕರ್ಷಣೆ

೩.೨.೬. ಪ್ರತಿರೋಧ ಮತ್ತು ಪ್ರತೀಕಾರ: ಸ್ತ್ರೀ ದೃಷ್ಟಿಕೋನ

೩.೨.೭. ಹೆಣ್ಣಿನ ತೃಪ್ತಿಯ ನೆಲೆಗಳು

ಅಧ್ಯಾಯ ೩: ಲೈಂಗಿಕ ನೆಲೆ

ಸಮಾಜವು ಹೆಣ್ಣನ್ನು ಜೀವಶಾಸ್ತ್ರೀಯ ಲಿಂಗ ಮತ್ತು ಸಾಮಾಜಿಕ ಲಿಂಗ... ಹೀಗೆ ಎರಡು ನೆಲೆಗಳಲ್ಲಿ ಗುರುತಿಸಿದೆ. ಜೈವಿಕ ಲಿಂಗವು ಗಂಡಿಗಿಂತ ಭಿನ್ನವಾದ ಹೆಣ್ಣಿನ ದೈಹಿಕ ಲಕ್ಷಣಗಳನ್ನು ಹೇಳಿದರೆ, ಸಾಮಾಜಿಕ ಲಿಂಗವು ಗಂಡು ಮತ್ತು ಹೆಣ್ಣು ಈ ಎರಡು ಲಿಂಗಗಳಲ್ಲಿನ ಅಸಮಾನತೆಗಳನ್ನು ಹೇಳುತ್ತದೆ. ಸಮಾಜದಲ್ಲಿ ಲಿಂಗ ಪಕ್ಷಪಾತದ ಧೋರಣೆಯು ಬಲವಾಗುವುದಕ್ಕೆ ಇದು ಕಾರಣವಾಗುತ್ತದೆ. ಪಿತೃವ್ಯವಸ್ಥೆಯು ಸ್ತ್ರೀ-ಪುರುಷರ ನಡುವಿನ ಲಿಂಗ ವ್ಯತ್ಯಾಸಗಳನ್ನು ತನಗೆ ಅನುಕೂಲಕರವಾಗಿ ಬಳಸಿಕೊಂಡಿದೆ. ಹೆಣ್ಣನ್ನು ಹುಟ್ಟಿನಿಂದಲೇ ನಿರ್ದಿಷ್ಟವಾದ ಮೌಲ್ಯ, ರೂಪ, ಗುಣ, ಸ್ವಭಾವಗಳನ್ನು ಹೊಂದಿರುವ ಅಥವಾ ಹೊಂದಿರಲೇಬೇಕಾದ ಒಂದು ವಿಶಿಷ್ಟ ವ್ಯಕ್ತಿಯಾಗಿ ನೋಡುವ ಈ ರೀತಿಯ ಪೂರ್ವಾಗ್ರಹಪೀಡಿತ ಗ್ರಹಿಕೆಗಳನ್ನು ಲಿಂಗತ್ವ ಎಂದು ಕರೆಯುತ್ತೇವೆ. ಹೆಣ್ಣು ಅಥವಾ ಗಂಡು ಎಂಬುದು ಲಿಂಗವನ್ನು ಮಾತ್ರ ಸೂಚಿಸಿದರೆ, ಹೆಣ್ಣಾಗಿರುವವಳು ಅಬಲೆ, ಪತಿವ್ರತೆ, ವಿಧೇಯೆ, ಸಹನಶೀಲೆ, ಮಮತಾಮಯಿ, ಕ್ಷಮಾಶೀಲೆ, ರೂಪವತಿ, ವಂಚಕಿ, ಚಂಚಲೆ, ಜಗಳಗಂಟಿ... ಮುಂತಾದ ಲಕ್ಷಣಗಳನ್ನು ಹೊಂದಿರುತ್ತಾಳೆಂದು ನಿರೀಕ್ಷಿಸುವುದು ಲಿಂಗತ್ವವಾಗುತ್ತದೆ.

ಲಿಂಗಗಳ ಅಸಮಾನತೆಯೆಂಬುದು ಸಂಸ್ಕೃತಿಯು ನಿರ್ಮಿಸಿದ ಗ್ರಹಿಕೆಯಾಗಿದೆ. ನಮ್ಮ ಯೋಚನೆ, ಮಾತು ಮತ್ತು ಬರಹಗಳಲ್ಲಿ ಅದು ಮರುಹುಟ್ಟು ಪಡೆದು ಸಾರ್ವತ್ರಿಕ ಪ್ರಜ್ಞೆಯಲ್ಲಿ ಗಟ್ಟಿಯಾಗುತ್ತ ಹೋಗುತ್ತದೆ. ಪ್ರಧಾನವಾಹಿನಿಯ ಸಾಹಿತ್ಯಕೃತಿಗಳಲ್ಲಿ 'ಸಾರ್ವತ್ರಿಕ ಪ್ರತಿನಿಧೀಕರಣ' ಎಂಬಂತೆ ಭಾಸವಾಗುವ ಒಂದು 'ಪುರುಷನೋಟ'ವಿರುತ್ತದೆ. "ಸಾಹಿತ್ಯಕೃತಿಗಳಲ್ಲಿ ಸ್ತ್ರೀಪಾತ್ರಗಳ ಅಧೀನತೆಯ ಸಿದ್ಧಮಾದರಿಯೊಂದು ಪ್ರಚಲಿತವಾಗಿದೆ. ಗಂಡು, ಹೆಣ್ಣಿನ ಸಂಬಂಧಗಳಲ್ಲಿ ಗಂಡನ್ನು ಅಧಿಕಾರಯುತ ಸ್ಥಾನದಲ್ಲಿ, ಹೆಣ್ಣನ್ನು ಅಧೀನ ಸ್ಥಾನದಲ್ಲಿ ತೋರಿಸುವುದು, ಹೆಣ್ಣಿನ ಗೃಹಿಣಿಜೀವನದ ವೈಭವೀಕರಣ, ಹೆಣ್ಣನ್ನು ಸುಕೋಮಲೆ, ಚಂಚಲೆ, ಮುಗ್ಧೆ, ಅಂಜುವವಳು... (ಗಂಡು ಅಹಂ ಅನ್ನು ಹೆಚ್ಚು ಮಾಡುವ ಹೆಣ್ಣಿನ ಗುಣಗಳಿವು) ಎಂದು ಚಿತ್ರಿಸುವುದು, ಈ ಗುಣಗಳನ್ನೇ ಆದರ್ಶ ಸ್ತ್ರೀಯ ಗುಣಗಳು ಎಂದು ಮುಂಚೂಣಿಗೆ ತರುವುದು, ಈ ರೀತಿಯ ಸಿದ್ಧಮಾದರಿಗಳ ಚಿತ್ರಣ ಸಿಗುತ್ತದೆ." (ಎಲ್.ಜಿ. ಮೀರಾ, ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ, ಪುಟ ೧೬) ಮಲಯಾಳಂ ಕಥನಗಳಲ್ಲಿ ಕಂಡುಬರುವ ಇಂಥ ಸ್ತ್ರೀಲಿಂಗತ್ವದ ಮಾದರಿಗಳನ್ನು ಈ ಅಧ್ಯಾಯದಲ್ಲಿ ಪರಿಶೀಲಿಸಿದೆ.

೩.೧. ಸ್ತ್ರೀ: ಲಿಂಗಸಂಬಂಧೀ ಗ್ರಹಿಕೆಗಳು

ಸಮಾಜವು ವ್ಯಾಖ್ಯಾನಿಸಿರುವ ಸ್ತ್ರೀಗುಣಗಳನ್ನು ಹೊಂದಿರದ ಅಥವಾ ಅದಕ್ಕಿಂತ ಭಿನ್ನವಾಗಿರುವ ಸ್ತ್ರೀಯರನ್ನು ಗಂಡುಬೀರಿ, ಸ್ವೇಚ್ಛಾಚಾರಿಣಿ, ಗಯ್ಯಾಳಿ ಮುಂತಾಗಿ ಸಮಾಜವು ಗುರುತಿಸಿದೆ. ಇಂಥ ಸಿದ್ಧ ಮಾದರಿಗಳಲ್ಲಿ ಎರಕ ಹೊಯ್ಯಲಾದ ವ್ಯಕ್ತಿತ್ವಗಳನ್ನು ಸ್ವಯಂ ಆರೋಪಿಸಿಕೊಂಡು ಬದುಕುವ ಸ್ತ್ರೀಯರು ಒಂದೆಡೆಯಾದರೆ, ಇನ್ನೊಂದೆಡೆ ಸಮಾಜ ಮತ್ತು ಪರಂಪರೆಗಳು ವಿಧಿಸಿದ ಕಟ್ಟುಕಟ್ಟಳೆಗಳನ್ನು ಮೀರಿ ಜನರ ದೃಷ್ಟಿಯಲ್ಲಿ 'ಸದಾಚಾರಿಗಳಲ್ಲದೆ' ಬದುಕುತ್ತಿರುವ ಸ್ತ್ರೀಯರಿದ್ದಾರೆ. ಕೆಲವೊಮ್ಮೆ ಈ 'ಒಳ್ಳೆಯವರಲ್ಲದ ಹೆಂಗಸರು' ಕೂಡಾ ಕೋಮಲ ಭಾವಗಳ ಹೃದಯಗಳನ್ನು ಹೊಂದಿ, ತಮ್ಮ ಅತಿಕಷ್ಟದ ದಿನಗಳಲ್ಲಿಯೂ ಇನ್ನೊಬ್ಬರಿಗೆ ತಮ್ಮಿಂದಾದ ಸಹಾಯವನ್ನು ಮಾಡುತ್ತಾರೆ. ಹೀಗೆ 'ಸ್ತ್ರೀ' ಎಂಬ ಲಿಂಗತ್ವದ ನೆಲೆಯಲ್ಲಿ ಗ್ರಹಿಸಬಹುದಾದ ಹಲವು ಪಾತ್ರಗಳನ್ನು ಈ ಅಧ್ಯಾಯದಲ್ಲಿ ಕೆಲವು ಕಾದಂಬರಿಗಳು ಹಾಗೂ ಸಣ್ಣಕಥೆಗಳನ್ನು ಆಧಾರವಾಗಿಟ್ಟುಕೊಂಡು ಲಿಂಗಸಂಬಂಧಿಯಾದ ದೃಷ್ಟಿಕೋನದಲ್ಲಿ ವಿಶ್ಲೇಷಿಸಲಾಗಿದೆ.

೩.೧.೧. ಸಾಧ್ವಿಯರು

ಅನಾದಿ ಕಾಲದಿಂದಲೂ ಸ್ತ್ರೀಯರು ದೇಹಸೌಂದರ್ಯ, ಮಮತೆ, ಲಜ್ಜೆ, ಸಹನೆ, ಕ್ಷಮೆ, ತ್ಯಾಗ, ಅನುಕಂಪ, ಪತಿನಿಷ್ಠೆ... ಮುಂತಾಗಿ ರೂಪದಿಂದಲೂ ಹೃದಯದಿಂದಲೂ ಸುಂದರಿಯರು ಎನ್ನಬಹುದಾದ ಸ್ತ್ರೀಗುಣಗಳು ಮೈವೆತ್ತ ಕುಟುಂಬಿನಿಯರಾಗಿ, ಆದರ್ಶ ನಾರಿಯರಾಗಿ ಇರಬೇಕೆಂದು ಅಪೇಕ್ಷಿಸಲಾಗಿದೆ. ಸಾಧ್ವಿಯಾದ ಪತ್ನಿ ಮತ್ತು ವಾತ್ಸಲ್ಯಮಯಿ ತಾಯಿ ಎನಿಸಿಕೊಳ್ಳಲು ಅಗತ್ಯವಿರುವ ರೂಪ-ಗುಣ-ಶೀಲಗಳನ್ನು ಸ್ತ್ರೀಗುಣಗಳು, ನಾರೀಲಕ್ಷಣ ಎಂದೇ ಭಾವಿಸಲಾಗಿದೆ. ಅನುಪಮ ಸೌಂದರ್ಯವನ್ನು ಹೊಂದಿದ್ದರೂ ಪರಪುರುಷರಿಂದ ವಿಚಲಿತಳಾಗದೆ ಒಬ್ಬನೇ ಪುರುಷನಿಗೆ ದೇಹ ಮನಸ್ಸುಗಳನ್ನು ಮೀಸಲಿಡುವ ಪತಿವ್ರತೆಯಾಗಿ, ಪತಿಯ ಯಾವತ್ತೂ ವರ್ತನೆಗಳನ್ನು ಪ್ರಶ್ನಿಸದೆ, ವಿರೋಧಿಸದೆ ಅವನಿಗೆ ಅನುಕೂಲೆಯಾಗಿ ನಡೆದುಕೊಳ್ಳುವ ಅನುರೂಪ ಸತಿಯಾಗಿ, ಇರುವುದೇ ನಿಜವಾದ ಸ್ತ್ರೀತ್ವ, ಅದುವೆ ಸ್ತ್ರೀಜನ್ಮದ ಸಾರ್ಥಕ್ಯ ಎಂಬಂತೆ ನಂಬಿಸಲಾಗಿದೆ. ಗೃಹಕೃತ್ಯಗಳಲ್ಲಿ ಪ್ರವೀಣೆಯಾಗಿರಬೇಕು, ಮದುವೆಯಾಗುವ ವಯಸ್ಸಿಗೆ ಬಂದಾಗ ವರನ ಕಡೆಯವರ ಕಣ್ಣಿಗೆ ಚೆಲುವೆಯಾಗಿ ಕಾಣಬೇಕು ಎಂಬ ಆಶಯಕ್ಕೆ ಪೂರಕವಾಗಿಯೆ ಹೆಣ್ಣುಮಕ್ಕಳನ್ನು ಬೆಳೆಸಲಾಗುತ್ತದೆ. ಸಾಹಿತಿ, ಕವಿಗಳಂತೂ ಸ್ತ್ರೀಯರನ್ನು ಸೌಂದರ್ಯದ ರೂಪಕವಾಗಿಯೆ ಗ್ರಹಿಸುತ್ತಾರೆ. ಅವಳ ಅಂಗಾಂಗಗಳನ್ನು ಹಲವು ತೆರನಾಗಿ ಬಣ್ಣಿಸುವ ಪ್ರಯತ್ನವನ್ನು ಶತಮಾನಗಳಿಂದಲೂ ಲೇಖಕರು ಮಾಡುತ್ತಲೆ ಬಂದಿದ್ದಾರೆ. ಕನ್ನಡಕ್ಕೆ ಅನುವಾದವಾಗಿರುವ ಮಲಯಾಳಂ ಕೃತಿಗಳೂ ಈ ಸಾಂಪ್ರದಾಯಿಕ ಗ್ರಹಿಕೆಗೆ ಹೊರತಾಗಿಲ್ಲ.

‘ಇಂದುಲೇಖಾ’ ಕಾದಂಬರಿಯಲ್ಲಿ ಸ್ತ್ರೀಯೊಬ್ಬಳು ಸೌಂದರ್ಯವತಿ ಎನಿಸಿಕೊಳ್ಳಬೇಕಾದರೆ ಹೊಂದಿರಬೇಕಾದ ಶಾರೀರಿಕ ಲಕ್ಷಣಗಳನ್ನು ಕುರಿತು ವಿವರವಾದ ವರ್ಣನೆ ಇರುವುದನ್ನು ಈ ಅಧ್ಯಯನದ ಸಂದರ್ಭದಲ್ಲಿ ಗಮನಿಸಿದೆ. ಎಸ್.ಕೆ. ಪೊಟ್ಟೆಕ್ಕಾಟ್ ಅವರು ಬರೆದಿರುವ ‘ವಧು’ ಎಂಬ ಕತೆಯಲ್ಲಿ ನೋಡಲು ಸುಮಾರಾಗಿರುವ, ತಲೆಯಲ್ಲಿ ಕೆಲವು ಕೂದಲು ಬಿಳಿಯಾಗಿರುವ ಗೋಪಿ ‘ಸರ್ವಲಕ್ಷಣ ಸಂಪನ್ನೆಯೂ, ಸೌಂದರ್ಯದೇವತೆಯೂ ಆಗಿರುವ ವಧುವಿನ ಕೈ ಹಿಡಿಯಬಯಸಿದ್ದಾನೆ. ಅವನಿಗಾಗಿ ‘ಚಿನ್ನದ ಮೈಬಣ್ಣ, ನೀಳ ಗುಂಗುರು ಕೂದಲು, ಸುಂದರ ಮುಖ, ಹದಿನೇಳರಿಂದ ಇಪ್ಪತ್ತಮೂರರ ಒಳಗಿನ ವಯಸ್ಸಿನ’ ಚೆಲುವೆಯ ಅನ್ವೇಷಣೆಯಲ್ಲಿರುವ ಗೆಳೆಯರಿಗೆ ಅಂಥ ಚೆಲುವೆಯಾದ ಹೆಣ್ಣು ಅವನನ್ನು ಒಪ್ಪುವ ಬಗ್ಗೆ ಯಾವುದೇ ಸಂಶಯವಿಲ್ಲ. ಅವರ ಪ್ರಕಾರ ಗೋಪಿಗೆ ‘ಒಳ್ಳೆಯ ಉದ್ಯೋಗ ಮತ್ತು ವಾಸಕ್ಕೆ ಮನೆಯಿದೆ. ಇನ್ನೇನು ಬೇಕು?’ ಮದುವೆಯ ಅರ್ಹತೆಯಲ್ಲಿ ಹೆಣ್ಣಿಗೂ ಗಂಡಿಗೂ ಮೂಲಭೂತವಾದ ವ್ಯತ್ಯಾಸವಿದೆ. ಚೆಲುವು ಎಂಬುದು ಹೆಣ್ಣಿನ ಮಟ್ಟಿಗೆ ಪ್ರಧಾನ ಅರ್ಹತೆಯಾಗಿದೆ.

ಎಂ.ಟಿ. ವಾಸುದೇವನ್ ನಾಯರ್ ಅವರು ಬರೆದ ‘ದುಃಖದ ಕಣಿವೆಗಳು’ ಕತೆಯ ಗ್ಲೋರಿಯಾ ವರದಕ್ಷಿಣೆ ಕೊಡುವ ಶಕ್ತಿಯಿಲ್ಲದೆ ಅವಿವಾಹಿತೆಯಾಗಿ ಉಳಿದವಳು. ಏಳು ಸಾವಿರ ರೂಪಾಯಿ ಹೊಂದಿಸಲು ಸಾಧ್ಯವಾಗದ್ದಕ್ಕೆ ಏಳು ಬಾರಿ ವಧುಪರೀಕ್ಷೆಯಲ್ಲಿ ತಿರಸ್ಕೃತಳಾಗಿದ್ದಾಳೆ. ಇನ್ನು ತನ್ನ ಮದುವೆ ನಡೆಯುವುದು ಕನಸು ಎಂಬುದು ಸ್ಪಷ್ಟವಾದಾಗ ತಾನು ಇಷ್ಟಪಟ್ಟ ವ್ಯಕ್ತಿಯ ಮಗುವನ್ನು ಹಡೆದು ಅವನಿಗೆ ನಿಷ್ಠಳಾಗಿ ಉಳಿಯುವ ಇಚ್ಛೆ ವ್ಯಕ್ತಪಡಿಸುತ್ತಾಳೆ. ‘ನನ್ನನ್ನು ಮದುವೆ ಆಗಿ. ಒಂದು ಮಗುವಾದ ನಂತರ ಬಿಟ್ಟುಬಿಡಿ. ಅವನನ್ನು ಸಾಕಿ ಬೆಳೆಸಿ ಮುಖ ನೋಡುತ್ತ ಕುಳಿತುಕೊಳ್ಳುತ್ತೇನೆ’ ಎಂದು ಬೇಡಿಕೊಳ್ಳುತ್ತಾಳೆ. ಸ್ವತಃ ಲೇಖಕನಾದ ಅವಳ ಪ್ರಿಯಕರನಿಗೆ ಗ್ಲೋರಿಯಾಳ ಕುರಿತು ಅನುಕಂಪವಿದೆ, ಪ್ರೀತಿಯಲ್ಲ. ಅವನ ಭವಿಷ್ಯದ ಕನಸಿನಲ್ಲಿ ಸುಂದರವಾದ ಸ್ವಂತಮನೆಯೂ, ‘ತೆಳ್ಳಗೆ ಬೆಳ್ಳಗೆ ಚೆಲುವೆಯಾದ’ ಹೆಂಡತಿಯೂ ಇದ್ದಾಳೆ. ಆ ಕನಸಿನಲ್ಲಿ ಗ್ಲೋರಿಯಾಳಿಗೆ ಪ್ರವೇಶವಿಲ್ಲ. ಗ್ಲೋರಿಯಾಳಿಗೆ ಆತ ತನ್ನನ್ನು ವರಿಸುವುದಿಲ್ಲವೆಂದು ಗೊತ್ತಿದ್ದೂ ‘ರಾತ್ರಿ ಬಸ್‌ನಲ್ಲಿ ಚಳಿಯಾಗಬಹುದೆಂಬ’ ಕಾಳಜಿಯಿಂದ ಮಫ್ಲರ್ ತಂದುಕೊಟ್ಟು ನಗುತ್ತ ಬೀಳ್ಕೊಡುತ್ತಾಳೆ. ತನ್ನ ಪೆನ್ನು ಕೊಟ್ಟು ‘ನೀವು ಕಾದಂಬರಿ ಬರೆದದ್ದು ನನ್ನ ಪೆನ್ನಿನಿಂದ ಎಂಬ ಹೆಮ್ಮೆ ನನಗಿರಲಿ’ ಎಂದು ಅಭಿಮಾನ ತೋರುತ್ತಾಳೆ. ಗಂಡಿನ ಸ್ವಾರ್ಥವನ್ನು ಸಹಿಸುವ ಮತ್ತು ಕ್ಷಮಿಸುವ ಔದಾರ್ಯವು ಆದರ್ಶ ಸ್ತ್ರೀಯರಿಗೆ ಸಹಜಗುಣವೆಂದು ತಿಳಿಯಲಾಗಿದೆ.

ಗಂಡಸರ ಉಪಸಂಬಂಧಗಳ ಬಗ್ಗೆ ತಿಳಿದೂ ತಿಳಿಯದಂತೆ ಇರುವ, ಅನ್ಯ ಆಯ್ಕೆಯ ಬಗ್ಗೆ ಯೋಚಿಸದೆ ಸಹಿಸಿಕೊಳ್ಳುವ ಅಥವಾ ಒಳಗೊಳಗೇ ಕೊರಗುವ ಸ್ತ್ರೀ ಪಾತ್ರಗಳು ಹಲವು ಕೃತಿಗಳಲ್ಲಿ ಕಾಣುತ್ತವೆ.

ಎಂ.ಟಿ. ವಾಸುದೇವನ್ ನಾಯರ್ ಅವರು ಬರೆದ 'ಸಣ್ಣ ಪುಟ್ಟ ಭೂಕಂಪಗಳು' ಕತೆಯಲ್ಲಿನ ಗೃಹಿಣಿಗೆ ದೂರದ ತೋಟದಲ್ಲಿ ಕೆಲಸ ಮಾಡುವ ಪತಿಯು ಹೊಸ ಕೆಲಸದಾಳಿನೊಂದಿಗೆ ಹೊಂದಿರುವ ಸಂಬಂಧದ ಬಗ್ಗೆ ದುಃಖವಿದೆ. ಅದರಿಂದಾಗಿಯೆ ಪತಿ ಮನೆಗೆ ಬರುವುದು ಹೆಚ್ಚು ಅಪರೂಪವಾಗಿದೆ ಎಂಬ ಗುಮಾನಿಯೂ ಇದೆ. ಆದರೆ ಈ ವಿಷಯವಾಗಿ ಗಂಡನೊಂದಿಗೆ ಜಗಳವಾಡದೆ ಹೊಂದಿಕೊಂಡು ಬಾಳುತ್ತಿದ್ದಾಳೆ.

ಎಂ.ಟಿ. ವಾಸುದೇವನ್ ನಾಯರ್ ಅವರ 'ಜಡಿಮಳೆಯ ಮರುದಿವಸ' ಕತೆಯ ಗೃಹಿಣಿಗೆ ತನ್ನ ಗಂಡನಿಗೆ ಮದುವೆಗೆ ಮೊದಲೇ ಇದ್ದ ಸಂಬಂಧದಲ್ಲಿ ಹುಟ್ಟಿದ ಗಂಡುಮಗನಿರುವುದು ತಿಳಿದಿದೆ. ಅದನ್ನು ವಿರೋಧವೇನಿಲ್ಲದೆ ಒಪ್ಪಿಕೊಂಡಿದ್ದಾಳೆ. ದೂರದ ಕೆನಡಾ ದೇಶದಲ್ಲಿರುವ 'ಆ ಒಬ್ಬ ಅಣ್ಣನ' ಬಗ್ಗೆ ತನ್ನ ಮಕ್ಕಳಿಗೆ 'ಎಷ್ಟು ಬೇಕೋ ಅಷ್ಟೇ ಹೇಳಿ' ಅಣ್ಣನ ಆಗಮನಕ್ಕೆ ಅವರನ್ನು ಮಾನಸಿಕವಾಗಿ ತಯಾರು ಮಾಡಿದ್ದಾಳೆ. ಗಂಡನ ಗತಬದುಕಿನ ವಾಸ್ತವವಾಗಿರುವ ಮಲಮಗನನ್ನು ಒಪ್ಪಿಕೊಳ್ಳದೆ ಬೇರೆ ಆಯ್ಕೆಯೇನೂ ಅವಳಿಗೆ ಉಳಿದಿಲ್ಲ ಎಂಬ ಅಂಶವನ್ನು ಇಲ್ಲಿ ಗಮನಿಸಬೇಕು.

ಕಮಲಾದಾಸ್ ಅವರು ಬರೆದಿರುವ 'ಅಮ್ಮು' ಎಂಬ ಕತೆಯಲ್ಲಿ ವ್ಯಭಿಚಾರಿಯಾದ ಗಂಡಸನ್ನು ಮದುವೆಯಾದ ಅಮ್ಮು ಅದಕ್ಕಾಗಿ ಅತ್ತು ರಂಪಾಟ ಮಾಡುವುದಿಲ್ಲ. ತನ್ನ ಬಾಹ್ಯ ಸ್ತ್ರೀಸಂಬಂಧಗಳನ್ನೆಲ್ಲ ಹೇಳಿಕೊಂಡು 'ಎಲ್ಲ ಅಪರಾಧಗಳನ್ನೂ ಮನ್ನಿಸು' ಎಂದು ಕೇಳಿಕೊಂಡ ಗಂಡನನ್ನು ಕ್ಷಮಿಸಿಬಿಡುತ್ತಾಳೆ. 'ಗಂಡಸಾದರೆ ಮದುವೆಗೆ ಮೊದಲು ಹೀಗೆಲ್ಲ ಸ್ವಲ್ಪ ನಡೆಯದಿರುತ್ತದೆಯೆ?' ಎಂಬ ತಿಳುವಳಿಕೆಯೊಂದಿಗೆ ಗಂಡನನ್ನು ಮೊದಲಿನಂತೆಯೆ ಪ್ರೀತಿಸುತ್ತಾಳೆ. 'ಮುಖವು ಅವಳ ಹೃದಯದ ಕನ್ನಡಿಯಲ್ಲ' ಎಂಬಂತೆ ಮುಖದ ಮೇಲಿನ ಆತ್ಮವಿಶ್ವಾಸದ ನಗುವನ್ನು ಕಳೆದುಕೊಳ್ಳದೆ ಸಮಾಧಾನವಾಗಿ ಬದುಕುತ್ತಾಳೆ.

ಇನ್ನೊಬ್ಬರ ಕಷ್ಟಕ್ಕೆ ಸ್ಪಂದಿಸುವ ಸ್ತ್ರೀಯರ ಆರ್ದ್ರ ಗುಣವನ್ನು ಶೀಬಾ ಇ.ಕೆ. ಅವರು ಬರೆದ 'ಪ್ರಳಯ' ಎಂಬ ಸಣ್ಣಕಥೆ ನಿರೂಪಿಸುತ್ತದೆ. ಈ ಕಥೆಯ ಮರೀನಾ ಸಮಾಜದ ಸೇವೆಯಲ್ಲಿ ಆಸಕ್ತಿ ಹೊಂದಿರುವವಳು. ಸೋಶಲ್ ವರ್ಕಿನಲ್ಲಿ ಪದವಿ ಗಳಿಸುವುದಕ್ಕಾಗಿ ಮನೆಯವರನ್ನು ಒಪ್ಪಿಸಿ ಪರ ಊರಿಗೆ ಓದಲು ಹೋಗುತ್ತಾಳೆ. ಅಲ್ಲಿನ ಕನ್ಯಾಸ್ತ್ರೀಯರೊಂದಿಗೆ ನೆರೆಸಂತ್ರಸ್ತರ ರಕ್ಷಣೆಯ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡು ಪರರ ನೋವಿಗೆ ಮಿಡಿಯುತ್ತಾಳೆ. ಕೇವಲ ಯಾಂತ್ರಿಕವಾಗಿ ಆ ಕೆಲಸಗಳನ್ನು ಮಾಡದೆ, ಹೃದಯಾಂತರಾಳದ ಕಾಳಜಿಯಿಂದ ನೊಂದವರ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾಳೆ.

ಎಂ.ಟಿ. ವಾಸುದೇವನ್ ನಾಯರ್ ಬರೆದಿರುವ 'ಇರುಳಿನ ಆತ್ಮ' ಎಂಬ ಕತೆಯಲ್ಲಿ ಸ್ವಬುದ್ಧಿ ಇಲ್ಲದೆ ವಿಚಿತ್ರವಾಗಿ ವರ್ತಿಸುವ ವೇಲಾಯುಧನ್ ಬಗ್ಗೆ ಅನುಕಂಪ ತೋರುವವರು ಅವನ ಅಜ್ಜಿ ಮತ್ತು ಪಕ್ಕದ ಮನೆಯ ಅಮ್ಮುಕುಟ್ಟಿ. ಮನೆಯ ಹಿರಿಯರೆನಿಸಿಕೊಂಡ ಪುರುಷರ ಪ್ರೇಮರಾಹಿತ್ಯ ಮತ್ತು ಕ್ರೌರ್ಯಕ್ಕೆ ವೇಲಾಯುಧನ್‌ನ ಬದುಕು ಬಲಿಯಾಗಿದೆ. ಬುದ್ಧಿಯ ಸ್ಥಿಮಿತ ಕಳೆದುಕೊಂಡು ಮುಚ್ಚಿದ ಕೋಣೆಯೊಳಗೆ ಕೈಕಾಲುಗಳನ್ನು ಕಟ್ಟಿಹಾಕಿದ ಸ್ಥಿತಿಯಲ್ಲಿ ಬದುಕುತ್ತಿರುವ ವೇಲಾಯುಧನ್‌ನ ನೆನಪಿನಲ್ಲಿ ಮಧುರವಾಗಿ ಉಳಿದಿರುವುದು ಅಮ್ಮುಕುಟ್ಟಿ. ಅವನ ಮಾತುಗಳನ್ನು ಕೇಳುವ, ಅವನಿಗೆ ಗುಣವಾಗುತ್ತದೆ ಎಂದು ನಂಬುವ ಅಮ್ಮುಕುಟ್ಟಿ ಅವನ ಅಸಹನೀಯ ಬದುಕಿನಲ್ಲಿ ಹೊಳೆಯುವ ಕಿರಣವಾಗಿದ್ದಾಳೆ.

ಸ್ತ್ರೀಯ ಬುದ್ಧಿಯು ಮೊಣಕಾಲ ಕೆಳಗೆ ಎಂದು ಸಮಾಜವು ಭಾವಿಸಿದೆ. ಹೆಣ್ಣು ದೈಹಿಕವಾಗಿಯೂ ಮಾನಸಿಕವಾಗಿಯೂ ದುರ್ಬಲೆ, ಅಂಜುಗುಳಿ, ಕಡಿಮೆ ಬುದ್ಧಿಯುಳ್ಳವಳು ಮತ್ತು ಸುಲಭವಾಗಿ ವಂಚನೆಯ ಜಾಲಕ್ಕೆ ಸಿಕ್ಕಿಬೀಳುವವಳು ಎಂಬುದು ಸಾಮಾನ್ಯ ಗ್ರಹಿಕೆಯಾಗಿದೆ. ಸಮಾಜ ಮತ್ತು ಕುಟುಂಬಗಳು ಸ್ತ್ರೀಯರಿಗೆ ಸ್ವಂತ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು, ಮುಕ್ತವಾಗಿ ಸಂಚರಿಸುವ ಅವಕಾಶವನ್ನು, ಒಟ್ಟಾರೆಯಾಗಿ ಸ್ವಾತಂತ್ರ್ಯವನ್ನು ನಿರಾಕರಿಸಲು ಈ ಗ್ರಹಿಕೆಯೆ ಕಾರಣವಾಗಿದೆ.

ಹೆಣ್ಣು ಬುದ್ಧಿವಂತೆಯಲ್ಲ ಎಂಬ ನಂಬಿಕೆಯನ್ನು ಬಲಪಡಿಸುವ, ಹೆಣ್ಣಿನ ಅಜ್ಞತೆ ಮತ್ತು ಅರ್ಥಹೀನ ಪ್ರತಿಷ್ಠೆಗಳನ್ನು ವಿಡಂಬಿಸುವ ವಿಶಿಷ್ಟ ಶೈಲಿಯ ಕಥೆ 'ಐಷುಕುಟ್ಟಿ'. ವೈಕ್ಕಂ ಮುಹಮ್ಮದ್ ಬಶೀರ್ ಅವರು ಬರೆದ ಈ ಕಥೆಯಲ್ಲಿ 'ವೈದ್ಯರು ಬರದೆ ಹೆರುವುದಿಲ್ಲ, ಬೇಕಾದರೆ ಪ್ರಾಣ ಬಿಟ್ಟೇನು' ಎಂದು ಹಟ ಹಿಡಿಯುವ ಐಷುಕುಟ್ಟಿ ಕೇವಲ ಓರಗಿತ್ತಿ ಆಸ್ಯಮ್ಮನ ಜತೆಗಿನ ಸಮತೆ ಮತ್ತು ಪ್ರತಿಷ್ಠೆಗಳಿಗಾಗಿ, ತನ್ನ ಗರ್ಭದಲ್ಲಿ ಆರಂಭವಾಗಿರುವ ಹೆರಿಗೆ ನೋವನ್ನೇ ತುಟಿಕಚ್ಚಿ ಮುಂದೂಡಿದವಳು. ಕೊನೆಗೂ ವೈದ್ಯರು ಮೋಟಾರು ಗಾಡಿಯಲ್ಲಿ ಬಂದು ಮನೆಯ ಮುಂದೆ ಇಳಿದ ವರ್ತಮಾನ ಖಚಿತವಾದ ನಂತರವೆ ಅವಳು ಅದುವರೆಗೂ ತನ್ನ ಸಂಕಲ್ಪಶಕ್ತಿಯಿಂದ ಗರ್ಭದೊಳಗೆ ಬಿಗಿಹಿಡಿದಿದ್ದ ಮಗುವಿನ ತಲೆ ಹೊರಗೆ ಬರುತ್ತದೆ. 'ಡಾಕ್ಟರ ಸಮ್ಮುಖದಲ್ಲಿ ಹೆತ್ತುದು' ಎಂಬ ಗೌರವ ಮತ್ತು ಸಮಾಧಾನಗಳಿಂದ ಅವಳ ಹೆರಿಗೆ ಸಂಪೂರ್ಣವಾಗುತ್ತದೆ. ಹೆರಿಗೆ ನೋವು ಆರಂಭವಾದಲ್ಲಿಂದ ಹೆರಿಗೆ ಆಗುವಲ್ಲಿಯವರೆಗಿನ ನಿರೂಪಣೆಯಲ್ಲಿ ಲೇಖಕರು ಕಾಣಿಸುವ ಐಷುಕುಟ್ಟಿ, ಅವಳ ಅಮ್ಮ, ಅವಳ ಓರಗಿತ್ತಿ, ಸೂಲಗಿತ್ತಿ ಮುದುಕಿ, ವಯಸ್ಸಾದ ಅತ್ತೆಮ್ಮ... ಮುಂತಾದ ಸ್ತ್ರೀಯರೆಲ್ಲರೂ ಹೆಚ್ಚಿನ ತಿಳುವಳಿಕೆಯನ್ನು ನಿರಾಕರಿಸಲಾಗಿರುವ ಮುಗ್ಧೆಯರು. ಗಂಡನ ಆರ್ಥಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ ಮನೆ ಹಿತ್ತಿಲು ಅಡವಿಡಬೇಕಾಗಿ ಬಂದರೂ ಹಿಂಜರಿಯದೆ ಕೇವಲ ಪ್ರತಿಷ್ಠೆಗಾಗಿ ಹಟ ಹಿಡಿಯುವ ಐಷುಕುಟ್ಟಿಯ ಪಾತ್ರವು ಲೋಕಜ್ಞಾನವಿಲ್ಲದ ಹೆಣ್ಣಿನ ಮುಗ್ಧತೆ ಮತ್ತು ತನ್ನ ಪ್ರಜನನ ಶಕ್ತಿಯನ್ನು ಸರಿಯಾದ ಸಮಯದಲ್ಲಿ ಬಳಸಿಕೊಳ್ಳುವ ಸಮಯಸ್ಫೂರ್ತಿಗಳ ಪ್ರತೀಕವಾಗಿದೆ.

ವೈಕ್ಕಂ ಮುಹಮ್ಮದ್ ಬಶೀರ್ ಅವರು ಬರೆದ 'ಹೂಬಾಳೆ' ಕತೆಯ ಜಮೀಲಬೀಬಿ ಪುರುಷನ ದಬ್ಬಾಳಿಕೆಯನ್ನು ಒಪ್ಪಿ ನಡೆಯುವ ಸ್ತ್ರೀಯ ಪಾತ್ರ. ಆ ಕಾಲಕ್ಕೆ ಬಿ.ಎ. ಪಾಸಾಗಿ ದೊಡ್ಡ ಲೇಡಿಯ ಗತ್ತಿನಿಂದ ನಡೆಯುತ್ತಿದ್ದ ಚೆಲುವೆ ಜಮೀಲಾಳನ್ನು ವರಿಸಲು ಊರಿನ ಯುವಕರೆಲ್ಲ ಉತ್ಸುಕರಾಗಿದ್ದರು. ಆದರೆ ನಗರದ ರೌಡಿಯೂ, ಒಳ್ಳೆಯ ಫುಟ್‌ಬಾಲ್ ಆಟಗಾರನೂ, ಸ್ಕೂಲ್ ಫೈನಲ್ ಮಾತ್ರ ಓದಿದವನೂ ಆದ ಅಬ್ದುಲ್ ಖಾದರ್ ಅವಳನ್ನು ಒಲಿಸಿ 'ಬುಟ್ಟಿಗೆ ಹಾಕಿಕೊಂಡು' ಮದುವೆಯಾದ. ಮದುವೆಯ ಬಳಿಕ ಒಮ್ಮೆ ಜಮೀಲಬೀಬಿ ಎರಡು ಹೂಬಾಳೆ ಹಣ್ಣುಗಳನ್ನು ಬಯಸಿದಳು. ಎರಡು ಹಣ್ಣೇನು ಒಂದು ಗೊನೆ ಬಾಳೆಹಣ್ಣನ್ನೆ ತರುತ್ತೇನೆಂದು ಹೋದ ಖಾದರನಿಗೆ ಹೂಬಾಳೆ ಹಣ್ಣು ಸಿಕ್ಕದೆ ಕಿತ್ತಳೆ ಹಣ್ಣು ಸಿಕ್ಕಿದವು. ಧಾರಾಕಾರ ಮಳೆಯಿಂದ ದೋಣಿ ದಾಟಲಾಗದೆ ಹೊಳೆಯನ್ನು ಈಜಿ ದಾಟಿ ಬಲುಕಷ್ಟದಿಂದ ಕಿತ್ತಲೆ ಹಣ್ಣುಗಳನ್ನು ರಕ್ಷಿಸಿಕೊಂಡು ಬಂದ ಖಾದರ್ ಹೆಂಡತಿಯನ್ನು ದಂಡಿಸಿ ಕಿತ್ತಳೆಯನ್ನೇ ಹೂಬಾಳೆಯೆಂದು ಒಪ್ಪಿಕೊಳ್ಳುವಂತೆ ಮಾಡಿ ತಿನ್ನಿಸುತ್ತಾನೆ. ಆಯ್ಕೆಯಿಲ್ಲದೆ ಗಂಡನ ಆಣತಿಯನ್ನು ಅನುಸರಿಸಬೇಕಾದ ಹೆಣ್ಣಿನ ಪ್ರತೀಕವಾಗಿರುವ ಜಮೀಲಬೀಬಿ ಮುಂದೆ ಇಳಿವಯಸ್ಸಿನಲ್ಲಿ ಪತಿಯೊಂದಿಗೆ ಸರಸ ಸಂಭಾಷಣೆಯಲ್ಲಿರುತ್ತ ಆ ಹಳೆಯ ಪ್ರಕರಣವನ್ನು ನೆನಪಿಸಿಕೊಳ್ಳುತ್ತಾಳೆ. 'ನೀವು ಆ ದಿನ ತಂದ ಹೂಬಾಳೆ ಹಣ್ಣು ಓರೆಂಜ್‌ನಂತೆ ಉರುಟಾಗಿತ್ತು' ಎಂದು ಜಮೀಲಬೀಬಿ ನಗುವುದು ಗಂಡಿನ ದಬ್ಬಾಳಿಕೆಯನ್ನೂ, ಹೆಣ್ಣಿನ ಅಸಹಾಯಕತೆ ಮತ್ತು ತಾಳ್ಮೆಗಳನ್ನೂ ಏಕಕಾಲದಲ್ಲಿ ಪ್ರತಿಪಾದಿಸುತ್ತದೆ.

ಶಾಹೀನಾ ಇ.ಕೆ. ಅವರು ಬರೆದ 'ಒಂದು ಆತ್ಮಹತ್ಯೆಯ ವೃತ್ತಾಂತ' ಕತೆಯಲ್ಲಿ ವಿದ್ಯಾರ್ಥಿನಿ ಪೂರ್ಣಿಮಾ ಆತ್ಮಹತ್ಯೆ ಮಾಡಿಕೊಂಡಾಗ ಅವಳ ಸಾವಿಗಾಗಿ ಮರುಗದೆ ಅದರ ಕಾರಣದ ಬಗ್ಗೆ ಜನ ಹೆಚ್ಚು ಕುತೂಹಲ ತೋರುತ್ತಾರೆ. ಅವಳು ಹೊಂದಿರಬಹುದಾದ ಪ್ರೇಮಸಂಬಂಧಗಳು, ಕೋಣೆಯಲ್ಲಿ ಸಿಕ್ಕಿರಬಹುದಾದ ಪ್ರೇಮಪತ್ರಗಳ ಕುರಿತು ಚರ್ಚಿಸುತ್ತಾರೆ. 'ಅವಳಿಗೇನಾದರೂ ಪ್ರೇಮನಿರಾಶೆ.. ಮೌನವಾಗಿ ಮಿಣ್ಣಗಿರುವವರಲ್ವ ಸಾಮಾನ್ಯವಾಗಿ...' ಎಂದೆಲ್ಲ ಮಾತನಾಡಿಕೊಳ್ಳುತ್ತಾರೆ. ಮಾಧ್ಯಮಗಳು ಈ ಸಾವನ್ನು ತಮ್ಮ ಪ್ರಸಾರದ ಪ್ರೇಕ್ಷಕರ ಸಂಖ್ಯೆ ಹೆಚ್ಚಿಸುವುದಕ್ಕೆ ಬಳಸಿಕೊಳ್ಳುತ್ತವೆ. 'ನಡೆದ ಕಥೆಗಳ ಸರಣಿ'ಯಲ್ಲಿ ವಿದ್ಯಾರ್ಥಿನಿಯ ಬದುಕನ್ನು ಕಥೆಯಾಗಿ ಹೆಣೆದು ತೋರಿಸಲು ಸಿದ್ಧತೆ ನಡೆಸುತ್ತವೆ. ಅವಳ ಗೆಳತಿಯರು ಕಳೆದ ವಾರ ಒಟ್ಟಿಗೆ ಖರೀದಿಸಿದ ಹೊಸ ಉಡುಪು ಧರಿಸಿ ಈ ಚಿತ್ರೀಕರಣದಲ್ಲಿ ಭಾಗವಹಿಸುವುದಕ್ಕೆ ಆಸ್ಥೆಯಿಂದ ಸಿದ್ಧತೆ ನಡೆಸುತ್ತಾರೆ. ಒಬ್ಬಾಕೆ ಹೆಣ್ಣುಮಗಳ ಸಾವು ಒಂದು ರೋಚಕ ಸುದ್ದಿಯಾಗಿ, ವಾಣಿಜ್ಯ ಉದ್ದೇಶಗಳಿಗಾಗಿ ಚಲಾವಣೆ ಪಡೆದುಕೊಳ್ಳುತ್ತದೆ. ಈ ಹುಡುಗಿಯನ್ನು 'ಹೆಣ್ಣುಮಕ್ಕಳು ಮಾತ್ರ ಓದುವ' ಕಾಲೇಜು ಮತ್ತು ಹಾಸ್ಟೆಲಿಗೆ ಸೇರಿಸುವಾಗಲೂ ಮಗಳಿಗೆ ಸರಿಯಾಗಿ ಪರಿಚಯವಿಲ್ಲದ ಹೊಸ ಜಾಗವಾಗಿರುವುದರಿಂದ ಅವಳ ರಕ್ಷಣೆಯ ಬಗ್ಗೆ ತಂದೆಗೆ ಚಿಂತೆಯಾಗಿತ್ತು. ಮಗಳು ರಜೆಯಲ್ಲಿ ಊರಿಗೆ ಬರುವಾಗ ಜತೆಗಿರಲು 'ವಯನಾಡಿನವರು ಯಾರಾದರೂ ಇದ್ದಾರಾ'

ಎಂದು ವಿಚಾರಿಸಿದ್ದರು. ಇಷ್ಟೆಲ್ಲ ಕಾಳಜಿ ವಹಿಸಿದರೂ ಮಗಳು ಮೋಸದ ಬಲೆಯಲ್ಲಿ ಸಿಕ್ಕಿಬಿದ್ದು ಕೇವಲ ಒಂದು ಸರಕಾಗಿ ವಿಕ್ರಯವಾಗುತ್ತಾಳೆ. ಹೆಣ್ಣು ಅಬಲೆ ಮತ್ತು ಅವಳಿಗೆ ರಕ್ಷಣೆ ಅನಿವಾರ್ಯವಾಗಿರುವ ಸ್ಥಿತಿ ಸಮಾಜದಲ್ಲಿದೆ ಎಂದು ಕತೆ ಪ್ರತಿಪಾದಿಸುತ್ತದೆ.

ಶಾಹೀನಾ ಇ.ಕೆ. ಅವರು ಬರೆದ 'ಮಿಸ್ಡ್‌ಕಾಲ್' ಎಂಬ ಕತೆಯಲ್ಲೂ ಹೆಣ್ಣುಮಕ್ಕಳು ಚಂಚಲ ಸ್ವಭಾವದವರಾಗಿದ್ದು ಬಲುಬೇಗ ಆಮಿಷಕ್ಕೆ ಒಳಗಾಗುವ ಅಂಶವನ್ನು ಚರ್ಚಿಸಲಾಗಿದೆ. ಒಂದು ಒಳ್ಳೆಯ ಮೊಬೈಲ್‌ಗಾಗಿ ಆಸೆಪಡುವ ಬಡ ಹೆಣ್ಣುಮಗಳು ಮಿಸ್‌ಕಾಲ್‌ನಿಂದ ಪರಿಚಯವಾದವನ ನಯವಾದ ಮಾತುಗಳನ್ನು ನಂಬಿ ಹೆಣ್ಣುಮಕ್ಕಳನ್ನು ಮಾರಾಟ ಮಾಡುವ ಜಾಲಕ್ಕೆ ಸಿಕ್ಕಿಹಾಕಿಕೊಂಡು ತೊಂದರೆ ಅನುಭವಿಸುತ್ತಾಳೆ. ಪ್ರಶ್ನೆ ಕೇಳಿ ಹಿಂಸಿಸುವ ಮಾಧ್ಯಮದ ಮಂದಿಗೂ ಹೆಣ್ಣೆಂದರೆ ಪ್ರಶಂಸೆ ಮತ್ತು ಉಡುಗೊರೆಗಳ ಆಮಿಷ ತೋರಿ ವಶಪಡಿಸಿಕೊಳ್ಳಬಹುದಾದ ದುರ್ಬಲ ಮನಸ್ಸಿನವಳು, ಆಕೆ ಸದಾ ಇನ್ನೊಬ್ಬರ ರಕ್ಷಣೆಯಲ್ಲಿ ಇರುವುದೆ ಸೂಕ್ತವೆಂಬ ಗ್ರಹಿಕೆಯಿರುವುದನ್ನು ಕತೆ ಗುರುತಿಸಿದೆ.

ಪಿ.ವತ್ಸಲಾ ಅವರು ಬರೆದಿರುವ 'ಸೂರ್ಯನೊಟ್ಟಿಗೆ ನಡೆದ ಹುಡುಗಿ' ಎಂಬ ಕತೆಯು ಹೆಣ್ಣಿನ ಲಜ್ಜೆಯ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ. ಅಜ್ಜಿಯ ಕೈ ಹಿಡಿದು ಸ್ನಾನಕ್ಕೆಂದು ಹೊಳೆಯ ಬದಿಗೆ ಹೋಗುವ ಎಂಟು ವರ್ಷದ ಹುಡುಗಿಯೊಬ್ಬಳು ಆಕಾಶದಲ್ಲಿರುವ ಸೂರ್ಯನನ್ನು ನೋಡಿ ನಾಚಿಕೊಳ್ಳುತ್ತಾಳೆ. ಗಂಡಸಾಗಿರುವ ಸೂರ್ಯನು ಕಣ್ಣುಬಿಟ್ಟು ನೋಡುತ್ತಿರುವಾಗ ತಾನು ಮೀಯುವುದೆಂತು ಎಂದು ಯೋಚಿಸಿ ಸ್ನಾನ ಮಾಡದೆ ಮನೆಗೆ ಮರಳುತ್ತಾಳೆ. ಅಲ್ಲಿಂದ ನಂತರ ಅವಳೆಂದೂ ಬಚ್ಚಲುಮನೆ ಬಿಟ್ಟು ಹೊರಗೆ ಸ್ನಾನ ಮಾಡುವುದಿಲ್ಲ. ಹೆಣ್ಣಾಗಿ ಹುಟ್ಟಿರುವ ತನ್ನ ಶರೀರದ ಭಾಗಗಳನ್ನು ಗಂಡಸರ ದೃಷ್ಟಿಯಿಂದ ಸದಾ ಮರೆಮಾಡಬೇಕೆಂಬುದು ಅವಳಿಗೆ ಹಿರಿಯರಿಂದ ಬಂದಿರುವ ತಿಳುವಳಿಕೆ. ಹೆಂಗಸರ ಸ್ನಾನಘಟ್ಟದ ಇನ್ನೊಂದು ಬದಿಯಲ್ಲಿ ಸದಾ ಹೊಂಚುಹಾಕುವ ದುಷ್ಟಪುರುಷರ ಬಗ್ಗೆ ಜಾಗ್ರತೆ ವಹಿಸುವಂತೆಯೂ ಅಜ್ಜಿ ಹೇಳಿಕೊಟ್ಟಿದ್ದಾಳೆ. ಹೆಣ್ಣನ್ನು ರಕ್ಷಿಸಿಡುವ ವ್ಯವಸ್ಥೆಯು ಆರೋಪಿಸಿರುವ ಲಜ್ಜೆಯ ಕಾರಣದಿಂದ ಹೆಣ್ಣುಮಕ್ಕಳು ಮನೆಯಂಗಳದಿಂದ ಹೊರಬರುವುದನ್ನೇ ನಿಲ್ಲಿಸಿಬಿಡುವುದನ್ನು ಕತೆ ಗುರುತಿಸುತ್ತದೆ. ಇಂಥ ಸಂಕೋಚಗಳು ಹೆಣ್ಣಿನ ಮನಸ್ಸಿನ ಒಳಪದರದಲ್ಲಿ ದೃಢವಾಗಿ ನಿಂತು ಅವಳ ವ್ಯಕ್ತಿತ್ವ ಮತ್ತು ಬದುಕನ್ನು ಪ್ರಭಾವಿಸುತ್ತವೆ.

೩.೧.೨. ಸ್ವೇಚ್ಛಾಚಾರಿಣಿಯರು

'ಸ್ತ್ರೀ ಬುದ್ಧಿ ಪ್ರಳಯಾಂತಕಾ' ಎಂಬೊಂದು ಸಾರ್ವತ್ರಿಕ ಗ್ರಹಿಕೆಯನ್ನು ಪಿತೃಪ್ರಧಾನ ಸಮಾಜವು ಹೊಂದಿದೆ. ಇದೇ ಕಾರಣಕ್ಕಾಗಿ ಸ್ವಚ್ಛಂದವಾಗಿರಲು ಬಿಡದೆ ನೂರಾರು ನಿಷೇಧಗಳ ಮೂಲಕ ಸ್ತ್ರೀಯರ ನಡೆನುಡಿಗಳನ್ನು ನಿಯಂತ್ರಿಸಲಾಗುತ್ತದೆ. ಸ್ವಭಾವತಃ ಜಾಣೆಯೂ, ವಂಚಕಿಯೂ, ಚಂಚಲೆಯೂ,

ಸ್ವೇಚ್ಛಾಚಾರಿಣಿಯೂ, ವಿಲಾಸಿನಿಯೂ ಆಗಿರುವ ಹೆಣ್ಣನ್ನು ನಿರ್ಬಂಧಿಸದೆ ಬಿಟ್ಟರೆ ಕೆಟ್ಟುಹೋಗುತ್ತಾಳೆ ಎಂಬ ಅಭಿಪ್ರಾಯವು ಕೆಲವು ಕೃತಿಗಳಲ್ಲಿ ವ್ಯಕ್ತವಾಗಿದೆ.

ವೈಕ್ಯಂ ಮಹಮ್ಮದ್ ಬಶೀರ್ ಅವರು ಬರೆದಿರುವ 'ಮೂರೆಲೆ ಆಟಗಾರನ ಮಗಳು' ಕತೆಯ ಸೈನಬಾ ತಂದೆಯ ಹೋಟೆಲ್ ವ್ಯವಹಾರವನ್ನು ಸಮರ್ಥವಾಗಿ ನಿರ್ವಹಿಸುವ ಸಮರ್ಥೆ. ನದಿಯ ಇನ್ನೊಂದು ದಡದಲ್ಲಿದ್ದ ಬಾಳೆಗೊನೆಯನ್ನು ಯಾರಿಗೂ ತಿಳಿಯದಂತೆ ನೀರಿನ ಒಳಗಿಂದಲೇ ಹಗ್ಗದ ಮುಖೇನ ಸೆಳೆದುಕೊಂಡು ತನ್ನ ಹೋಟೆಲಿನಲ್ಲಿ ಮಾರಾಟಕ್ಕಿಡುತ್ತಿದ್ದ ಜಾಣೆ. ಈ ರಹಸ್ಯವನ್ನು ಮಾಲುಸಮೇತ ಕಂಡುಹಿಡಿದು ತನ್ನ ಜಾಣ್ಮೆಯನ್ನು ಮೆಚ್ಚಿಕೊಂಡ ಕಿಸೆಗಳ್ಳನಾದ ಬೋಳೆ ಮುತ್ತಪಾನಿಗೆ ಮನಸ್ಸು ಕೊಡುತ್ತಾಳೆ. ಅಪ್ಪನಿಗೆ ಗೊತ್ತಾಗದಂತೆ ಹೋಟೆಲಿನ ತಿನಿಸುಗಳನ್ನು ಉಚಿತವಾಗಿ ಒದಗಿಸುತ್ತಾಳೆ. ಮುತ್ತಪಾನನ್ನೆ ಗಂಡನನ್ನಾಗಿ ಪಡೆಯುವುದಕ್ಕಾಗಿ ತನ್ನ ಸ್ವಂತ ತಂದೆಯ ಇಸ್ಪೀಟಾಟದ ಗುಟ್ಟನ್ನು ಪ್ರಿಯಕರನಿಗೆ ಹೇಳಿಕೊಟ್ಟು ಗೆಲ್ಲಿಸುತ್ತಾಳೆ.

ಒಬ್ಬಳೇ ಮಗಳನ್ನು ಯೋಗ್ಯನೂ ಅನುಕೂಲವಂತನೂ ಆದ ವರನಿಗೆ ಕೊಡಬಯಸಿದ್ದ ಒಕ್ಕಣ್ಣ ಪೋಕರ ಪ್ರತಿಬಾರಿಯೂ ಮೋಸದಿಂದಲೆ ಇಸ್ಪೀಟಾಟದಲ್ಲಿ ಗೆಲ್ಲುತ್ತಿದ್ದವ. ಅದೇ ವಂಚನೆಯನ್ನು ಮಗಳು ಎಸಗಿದಾಗ ಮಾತ್ರ 'ಹೆಣ್ಣುಮಕ್ಕಳನ್ನು ಒಬ್ರನ್ನಾದ್ರೂ ಜೀವಸಹಿತ ಬಿಡಬಹುದೇ' ಎಂಬಷ್ಟು ಸಿಟ್ಟಾಗುತ್ತಾನೆ. ಪೋಕರನ ಪಾಲಿಗೆ ನಷ್ಟವಾದುದರಿಂದ ಮಗಳು ಮಾಡಿದ್ದು ವಂಚನೆ ಎನಿಸಿದರೂ ಪ್ರಿಯಕರನಿಗೆ ನಿಷ್ಠಳಾಗಿರುವ ಸೈನಬಾಳ ದೃಷ್ಟಿಯಿಂದ ನೋಡಿದರೆ ಅದು ಕೆಲಸವನ್ನು ಸಿದ್ಧಿಸಿಕೊಳ್ಳುವ ಜಾಣ್ಮೆ. ಮುತ್ತಪಾನನ್ನು ಮದುವೆಯಾದ ನಂತರವೂ ಬುದ್ಧಿವಂತಿಕೆ ಮತ್ತು ದೂರದೃಷ್ಟಿಗಳಿಂದ ಸೈನಬಾ ಹೋಟೆಲ್ ವ್ಯವಹಾರದಲ್ಲಿ ಲಾಭ ಗಳಿಸುತ್ತಾಳೆ. ಸ್ತ್ರೀ ಎಂದರೆ ಸುಲಭದಲ್ಲಿ ಹಿಡಿಯಲಾಗದ ಜಾಣವಂಚಕಿ ಎಂಬ ಸಾಂಪ್ರದಾಯಿಕ ಗ್ರಹಿಕೆಯನ್ನು ಕತೆ ಸಮರ್ಥಿಸುತ್ತದೆ. 'ಮೀನಿನ ಹೆಜ್ಜೆಯನ್ನಾದರೂ ಹಿಡಿಯಬಹುದು, ಹೆಣ್ಣಿನ ಹೆಜ್ಜೆಯನ್ನು ಗುರುತಿಸಲಾಗದು' ಎಂಬ ಸಾಮಾನ್ಯ ಗ್ರಹಿಕೆಯನ್ನು ನೆನಪಿಸುತ್ತದೆ.

ಉರೂಬ್ ಅವರು ಬರೆದಿರುವ 'ಸುಂದರಿಯರು ಸುಂದರರು' ಕೃತಿಯಲ್ಲಿ ವಿಧವೆಯಾಗಿ 'ಬೇಕಾದಷ್ಟು ಆಸ್ತಿ ಮಾಡಿಕೊಂಡು' ತವರೂರಿಗೆ ಮರಳಿದ ಲಕ್ಷ್ಮೀಕುಟ್ಟಿಯಮ್ಮ ಈ ಹಿಂದೆ ಪ್ರೇಮಿಸಿದ್ದ ಗೋಪಿಯನ್ನು ಮತ್ತೊಮ್ಮೆ ಸಂಧಿಸಿದ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳುತ್ತಾಳೆ. ಮಗಳಿಗೆ ನೃತ್ಯಗುರುವಾಗಿ ಅವನನ್ನು ತನ್ನ ಮನೆಯಲ್ಲಿಯೆ ಉಳಿಸಿಕೊಂಡು ಪ್ರಿಯಕರನ ಸಾಂಗತ್ಯವನ್ನು ಪಡೆಯುತ್ತಾಳೆ. ಮನೆಯ ಎಲ್ಲ ಆಗುಹೋಗುಗಳಿಗೂ 'ಅವರಲ್ಲಿ ಒಂದು ಮಾತು ಕೇಳುವ' ಸಂಪ್ರದಾಯವನ್ನು ಪಾಲಿಸುತ್ತಾಳೆ. ಮಗಳು ಮದುವೆಯಾಗಿ ಗಂಡನ ಮನೆಗೆ ಹೋದ ಬಳಿಕವೂ ಗೋಪಿಯನ್ನು ತನ್ನ ಮನೆಯಲ್ಲೇ ಇರಿಸಿಕೊಳ್ಳುತ್ತಾಳೆ. ತನ್ನ ಆರೈಕೆಯಲ್ಲಿ ಬೆಳೆದ, ಗೋಪಿಯಿಂದ ನೃತ್ಯ ಕಲಿತು ಉತ್ತಮ ನೃತ್ಯಗಾರನಾಗಿ

ರೂಪುಗೊಂಡ ತನ್ನ ಮಗನ ವಯಸ್ಸಿನ ವಿಶ್ವನಲ್ಲಿ 'ಹಳೆಯ ನಳನನ್ನು ಮತ್ತೊಮ್ಮೆ ಕಂಡು' ಮೋಹಿಸುತ್ತಾಳೆ. ಆ ಮೋಹವನ್ನು ವಿಶ್ವನಿಗೆ ಅರ್ಥವಾಗುವಂತೆ ಸಂವಹಿಸುವಲ್ಲಿ ಅವಳಿಗೆ ಯಾವುದೇ ಹಿಂಜರಿಕೆಯಿಲ್ಲ.

ಇದೇ ಕೃತಿಯಲ್ಲಿ ಬರುವ ಅಮ್ಮಾಳುಕುಟ್ಟಿ ಎಂಬ ಚೆಲುವೆ ಕುಞ್ಞಿತಾಯಮ್ಮ ಎಂಬ ದಾಸಿಯೊಬ್ಬಳಲ್ಲಿ ನಂಬೂದಿರಿ ಬ್ರಾಹ್ಮಣನಿಗೆ ಹುಟ್ಟಿದ ಮಗಳು. ಮಗಳು ಸುಂದರಿಯಾಗಿ ಬೆಳೆದಾಗ ತಾಯಿಯೇ 'ದೊಡ್ಡವರ ಆಗಮನಕ್ಕಾಗಿ' ಮನೆಯ ಬಾಗಿಲು ತೆರೆದಿರಿಸಿದ್ದಾಳೆ. ತನ್ನ ಮಗಳು ಇಬ್ಬರು ಶ್ರೀಮಂತರನ್ನು ತನ್ನ ಚೆಲುವಿಕೆಯಿಂದ ವಶಮಾಡಿಕೊಂಡು ಬೇಕಾದಷ್ಟು ಹಣ, ಸೊತ್ತು, ಶ್ರೀಮಂತಿಕೆಗಳನ್ನು ಗಳಿಸಿದ್ದನ್ನು ನೋಡಿದ ಬಳಿಕವೆ ತಾಯಿ 'ತೃಪ್ತಿಯಿಂದ' ಕಣ್ಣು ಮುಚ್ಚಿದ್ದಾಳೆ.

ಒಂದು ಹೆಣ್ಣಿಗೆ ಒಬ್ಬನೇ ಗಂಡು ಎಂಬ ಪಿತೃಪ್ರಧಾನ ಮೌಲ್ಯದ ಚೌಕಟ್ಟಿನೊಳಗೆ ಬದುಕಲು ನಿರಾಕರಿಸಿದ ವಿಶಿಷ್ಟ ಪಾತ್ರವಾಗಿರುವ ಅಮ್ಮಾಳುಕುಟ್ಟಿ ತನ್ನ ಚೆಲುವನ್ನು ಬಳಸಿ ವೇಲುಮ್ಮಾನ್ ನಾಯರ್ ಮತ್ತು ಕೃಷ್ಣನ್ ನಂಬಿಡಿ ಎಂಬ ಇಬ್ಬರು ಶ್ರೀಮಂತರನ್ನು ಏಕಕಾಲದಲ್ಲಿ ತನ್ನವರಾಗಿಸಿಕೊಂಡಿದ್ದಾಳೆ. ತನ್ನ ದ್ವಂದ್ವಸಂಬಂಧವನ್ನು ಆ ಶ್ರೀಮಂತರು ಪರಸ್ಪರ ತಿಳಿದು ಸಂಘರ್ಷಕ್ಕೆ ಕಾರಣವಾಗದಂತೆ ಜಾಗರೂಕತೆ ವಹಿಸಿ ಯಶಸ್ವಿಯಾಗಿದ್ದಾಳೆ. ತಾರುಣ್ಯದಲ್ಲಿ ವಯ್ಯಾರವಾಗಿ ವರ್ತಿಸಿ 'ಜನರನ್ನು ತನ್ನ ಮೋಹದ ಬಲೆಗೆ ಬೀಳಿಸುವಲ್ಲಿ' ಸಂತೋಷಪಡುತ್ತಿದ್ದ ಅಮ್ಮಾಳುಕುಟ್ಟಿ ತನ್ನ ಹಿಂದೆ ಯಾವಾಗಲೂ ಯುವಜನರ ತಂಡವೊಂದು ಬರುತ್ತಿರುವ ಬಗ್ಗೆ ಅಹಂಭಾವ ಉಳ್ಳವಳಾಗಿದ್ದಳು. ಅದು ತನ್ನ ಮೋಹಕ ಸೌಂದರ್ಯಕ್ಕೆ ಸಿಕ್ಕಿದ ಪಾರಿತೋಷಕವೆಂದೇ ಭಾವಿಸಿ ಬೀಗುತ್ತಿದ್ದಳು. ಮಧ್ಯವಯಸ್ಸು ದಾಟಿದ ಬಳಿಕವೂ ತನ್ನ ಚೆಲುವಿನ ಬಗ್ಗೆ ಅಭಿಮಾನ ಉಳ್ಳವಳಾಗಿರುವ ಅಮ್ಮಾಳುಕುಟ್ಟಿ 'ಇಳಿಯುತ್ತಿರುವ ವಯಸ್ಸನ್ನು ಕಟ್ಟಿ ನಿಲ್ಲಿಸಲು' ಬಯಸುತ್ತಾಳೆ. ಆ ಭ್ರಮೆಯೆ ಊರಿಗೆ ಹೊಸದಾಗಿ ಬಂದ ಸನ್ಯಾಸಿಯೆಡೆಗೆ ಅವಳು ಆಕರ್ಷಿತಳಾಗುವಂತೆ ಮಾಡಿದೆ. ವೃದ್ಧಾಪ್ಯದಿಂದ ಹಾಸಿಗೆಯಲ್ಲಿರುವ ಗಂಡನ ವಿರೋಧವನ್ನು ಲೆಕ್ಕಿಸದೆ ಗಂಡನಿಗೆ ಔಷಧ ಕೊಡಿಸುವ ನೆವಹೂಡಿ ಸನ್ಯಾಸಿಯನ್ನು ಮನೆಗೆ ಕರೆಸುತ್ತಾಳೆ. ತನ್ನ ಸೌಂದರ್ಯದ ಕುರಿತಾದ ಅತಿಯಾದ ಅಭಿಮಾನ ಮತ್ತು ಎಂಥ ಗಂಡಸನ್ನೂ ಮಣಿಸಬಲ್ಲೆ ಎಂಬ ಆತ್ಮವಿಶ್ವಾಸಗಳೆ ಅಮ್ಮಾಳುಕುಟ್ಟಿಯ ಅಹಂಕಾರ ಮತ್ತು ಸ್ವೇಚ್ಛೆಯ ವರ್ತನೆಗೆ ಕಾರಣವಾಗಿವೆ.

ಸುಶಿಕ್ಷಿತೆಯರಾಗಿರುವ ಸ್ತ್ರೀಯರು ಸ್ವೇಚ್ಛೆಯಾಗಿರಲು ಬಯಸುವುದನ್ನು ಎಂ.ಟಿ. ವಾಸುದೇವನ್ ನಾಯರ್ ಅವರು ಬರೆದಿರುವ 'ಕಾಲ' ಕಾದಂಬರಿಯ ಲಲಿತೆ ಮತ್ತು ನಳಿನಿಯರ ಪಾತ್ರಗಳು ಪ್ರತಿಪಾದಿಸುತ್ತವೆ. ಸೇತುವಿನೊಂದಿಗೆ ಅಕ್ರಮಸಂಬಂಧ ಬೆಳೆಸುವ ಸಾಹುಕಾರರ ಯುವಪತ್ನಿ ಲಲಿತಳಿಗೆ ಅಪರಾಧಿಪ್ರಜ್ಞೆಯಿಲ್ಲ. ಪತಿ ತನ್ನ ಅವ್ಯವಹಾರಗಳಿಗಾಗಿ ಬಳಸಿಕೊಳ್ಳುವ ಸೇತುವಿನ ಕೊಠಡಿಯಲ್ಲಿ, ಅವನೊಂದಿಗೇ ಅವಳು ಪ್ರಣಯಸಂಬಂಧ ಬೆಳೆಸುತ್ತಾಳೆ. ಪತಿಗೆ ತಿಳಿಯದಂತೆ ಬಹುಕಾಲ ಈ

ಸಂಬಂಧವನ್ನು ಮುನ್ನಡೆಸುತ್ತಾಳೆ. ಸಮಾಜಸೇವೆಯಲ್ಲಿ ಆಸಕ್ತಿ ಹೊಂದಿರುವ, ಇಂಗ್ಲೀಷ್ ಶಿಕ್ಷಣ ಪಡೆದಿರುವ, ಓದುವ ಹವ್ಯಾಸವುಳ್ಳವಳಾಗಿದ್ದ ಲಲಿತೆ ಸುಲಲಿತವಾಗಿ ಕಾರು ಚಲಾಯಿಸುತ್ತಾಳೆ. ಯಾರೂ ಗಮನಿಸುವ ಭಯವಿಲ್ಲದೆ ಧೂಮಪಾನ, ಮದ್ಯಪಾನ ಮಾಡುವುದಕ್ಕೆ, ಗಂಡು ಹೆಣ್ಣು ಮುಕ್ತವಾಗಿ ಬೆರೆಯುವುದಕ್ಕೆ, ಸ್ಥಳ ಬದಲಾಯಿಸಿ ಕುಳಿತುಕೊಂಡು ಹೊಸ ಜೊತೆಗಾರರನ್ನು ಪಡೆಯುವುದಕ್ಕೆ ಅವಕಾಶವಿರುವ ಉಲ್ಲಾಸಮಯ ಪಾರ್ಟಿಗಳಲ್ಲಿ ಭಾಗವಹಿಸಲು ಇಷ್ಟಪಡುತ್ತಾಳೆ. ಈ ಪಾರ್ಟಿಗಳಲ್ಲಿ ಅವಳಂತೆಯೆ ಗಂಡಸರೊಡನೆ ಸ್ವಚ್ಛಂದವಾಗಿ ಕಲೆತು ಮದ್ಯಪಾನ, ಧೂಮಪಾನ ಮಾಡುವ ಇತರ ಆಧುನಿಕ ಸ್ತ್ರೀಯರೂ ಇದ್ದಾರೆ.

ಕೈತುಂಬ ಬಳೆ, ಹಣೆಗೆ ದೊಡ್ಡ ಸಿಂಧೂರ ಇಟ್ಟು, 'ಹುಡುಗರಂತೆ ಸಿಳ್ಳೆ ಹಾಕುವ' ನಳಿನಿ ಅಕ್ಕ ತನಗೆ ಸರಿಕಂಡಂತೆ ಬದುಕುವ ಧೈರ್ಯವಂತೆ. ಹತ್ತನೇ ತರಗತಿ ಮುಗಿಸಿ ತರಬೇತಿಗೆಂದು ಹೋದವಳು ಯಾರೋ ಕ್ರಿಶ್ಚಿಯನ್ ಹುಡುಗನನ್ನು ಪ್ರೀತಿಸಿ ಮದುವೆಯಿಲ್ಲದೆಯೆ ಅವನೊಂದಿಗೆ ಇರತೊಡಗುತ್ತಾಳೆ. ವರ್ತಮಾನ ಕಾಲದ 'ಲಿವ್ ಇನ್' ಸಂಬಂಧದಂತೆ. ಈ ಸುದ್ದಿ ತಿಳಿದು ಸೇತುವಿನ ತಂದೆ ಮತ್ತು ಅಣ್ಣ ಹೋಗಿ ಅವಳನ್ನು ಕರೆತಂದು ಕೋಣೆಯಲ್ಲಿ ಕೂಡಿಹಾಕುತ್ತಾರೆ. ಅವಿವಾಹಿತೆಯಾಗಿ ಉಳಿದ ನಳಿನಿ 'ದೊಡ್ಡ ಮನುಷ್ಯನಾದ ಮೇಲೆ ನನ್ನ ಕರಕೊಂಡು ಹೋಗು' ಎಂದು ಸೇತುವನ್ನು ಕೇಳಿಕೊಳ್ಳುತ್ತಾಳೆ. ತಾನು ಇಷ್ಟಪಟ್ಟಂತೆ, ಸಹಜವಾಗಿ ಬದುಕಲಾಗದ ಈ ವ್ಯವಸ್ಥೆಯಿಂದ ಅವಳು ಬಿಡುಗಡೆ ಬಯಸುತ್ತಿದ್ದಾಳೆ.

ಇದೇ ಕೃತಿಯ ಚಕ್ಕಮ್ಮ ಎಂಬ ಮಹಿಳೆ ಒಂದು ಕಾಲಕ್ಕೆ ತನ್ನ ಸೌಂದರ್ಯದಿಂದ ಊರನ್ನೇ ಆಳಿದಂಥವಳು. ದೊಡ್ಡ ಹೆಗ್ಗಡಿತಿಯಂತೆ ಮೈತುಂಬ ಆಭರಣ ತೊಟ್ಟು ಊರ ಯಜಮಾನಿಯಂತೆ ಮೆರೆದವಳು. ವಿಲಾಸಿಗಳಾದ ಅಧಿಕಾರಿಗಳಿಗೆ, ಶ್ರೀಮಂತರಿಗೆ ಕಳ್ಳು ಮತ್ತು ಮೀನು ಕೋಳಿಗಳನ್ನು ಅಟ್ಟು ಒದಗಿಸಿದವಳು. ಅಗತ್ಯವಿದ್ದಾಗ ದೇಹವನ್ನೂ ಬಳಸಿಕೊಂಡವಳು. ಚೆಲುವೆಯಾದ ಮಗಳು ಸುಂದರಿಯನ್ನೂ ಇದೇ ಕೆಲಸಕ್ಕೆ ಪೂರಕವಾಗಿ ಬಳಸಿಕೊಂಡಿದ್ದಾಳೆ. ಚಕ್ಕಮ್ಮನ ಮನೆ ಯಾವಾಗಲೂ ಗಂಡಸರಿಂದ ತುಂಬಿ ತುಳುಕುತ್ತಿರುತ್ತದೆ.

ಟೀ ಹೋಟೆಲಿನ ನಾಯರನ ಪತ್ನಿ, ತನ್ನ ಗಂಡ ತೀರಿಕೊಂಡ ಬಳಿಕ ಬದುಕುವ ದಾರಿಯನ್ನು ಸುಗಮಗೊಳಿಸಿಕೊಳ್ಳುವುದಕ್ಕಾಗಿ ತನ್ನ ಸಹಾಯಕ್ಕೆಂದು ಬಂದ ಮೈದುನನೊಂದಿಗೆ ದೈಹಿಕ ಸಂಬಂಧ ಬೆಳೆಸಿದ ಚತುರೆ. ಈಗಾಗಲೆ ಇರುವ ಮೂರು ಮಕ್ಕಳೊಂದಿಗೆ ನಾಲ್ಕನೆಯ ಮಗುವನ್ನು ಹೆತ್ತು ಬಹಿರಂಗವಾಗಿ ಮೈದುನನ ಹೆಂಡತಿಯೆಂಬ ಸ್ಥಾನವನ್ನೂ ಪಡೆಯುತ್ತಾಳೆ. ಅವನ ಸಹಾಯದೊಂದಿಗೆ ಟೀ ಹೋಟೆಲನ್ನು ಯಶಸ್ವಿಯಾಗಿ ಮುನ್ನಡೆಸಿ ಬದುಕು ಕಟ್ಟಿಕೊಳ್ಳುತ್ತಾಳೆ.

ಸುಧಾಕರನ್ ರಾಮಂತಳಿ ಅವರು ಬರೆದಿರುವ 'ನಿರ್ಗಮನ' ಕಾದಂಬರಿಯ ವಳ್ಳಿಗೆ ಸಮಾಜದ ಅಪವಾದಗಳಿಗೆ ಹೆದರಿ ತನ್ನ ಸುಖಗಳನ್ನು ಕಡೆಗಣಿಸುವುದು ಒಪ್ಪಿಗೆಯಿಲ್ಲ. ಹೈಸ್ಕೂಲು ದಿನಗಳಲ್ಲಿಯೇ ತಾನು ಇಷ್ಟಪಟ್ಟಿದ್ದ ಸುನೀಲನನ್ನು 'ನನ್ನನ್ನು ಸಿನಿಮಾಕ್ಕೆ ಕರಕೊಂಡು ಹೋಗ್ತೀಯಾ' ಎಂದು ಕೇಳಿ ಯಾವುದೇ ಗಾಬರಿ, ಭಯ ಇಲ್ಲದೆ ಸಿನೆಮಾಕ್ಕೆ ಹೋದವಳು. ಅವನಿಗೆ ಪ್ರೀತಿಯ ಸ್ಪರ್ಶದ ಅನುಭವವನ್ನು ಕೊಟ್ಟವಳು. ಮತ್ತೊಮ್ಮೆ 'ನನ್ನನ್ನು ಎಲ್ಲಿಗಾದರೂ ದೂರ ಕರ್ಕೊಂಡು ಹೋಗಬಾರದಾ? ತಿಂಗಳಿಗೊಮ್ಮೆಯಾದರೂ ನಾವು ಇನ್ನೆಲ್ಲಾದರೂ ಸ್ವತಂತ್ರವಾಗಿ ಹೋಗಬೇಕು. ನಾವಿಬ್ಬರು ಮಾತ್ರ' ಎಂದು ಕೇಳಿ ಅವನೊಂದಿಗೆ ಏಕಾಂತವಾಗಿ ಪಾರ್ಕ್ ಸುತ್ತಿದ್ದಾಳೆ. ಅಪ್ಪಿ ಚುಂಬಿಸಿ ಪ್ರೀತಿಯನ್ನು ನಿವೇದಿಸಿಕೊಂಡಿದ್ದಾಳೆ. ಬೆಳೆದಂತೆ ಅವಳ ಆದ್ಯತೆಗಳು ವ್ಯಾವಹಾರಿಕವಾಗಿ ಬದಲಾಗುತ್ತವೆ. ಹೆಣ್ಣು ಎಂಬ ಸಂಕೋಚದ ಕೋಟೆಯೊಳಗೆ ಉಳಿದರೆ ಜೀವಮಾನವಿಡೀ ಕಷ್ಟಪಡಬೇಕಾಗುತ್ತದೆ ಎಂಬ ಅರಿವಿನೊಂದಿಗೆ ವಳ್ಳಿ ಬದಲಾಗುತ್ತಾಳೆ. 'ಒಂದಿಷ್ಟು' ಹೊಂದಾಣಿಕೆಯಿಂದ ಮನೆಯ ಸಮಸ್ಯೆಗಳು ಪರಿಹಾರವಾಗುವುದಾದರೆ ಆ ದಾರಿಯಲ್ಲಿ ಹೋಗುವುದೇನೂ ಅಪರಾಧವಲ್ಲ ಎಂಬ ನಿಲುವನ್ನು ತಾಳುತ್ತಾಳೆ.

ನೆರೆಹೊರೆಯವರ ಅಸೂಯೆಯ ನುಡಿಗಳು, ಅಮ್ಮನ ಗುಮಾನಿ, ಬೈಗುಳಗಳ ನಡುವೆಯೂ ತನಗೆ ಸರಿಕಂಡಂತೆ ಬದುಕುವವಳು ವಳ್ಳಿ. 'ಅವಳಿಗೆ ಯಾವಾಗ ಅನ್ನಿಸ್ತದೋ ಆಗ ಬರ್ತಾಳೆ. ಅವಳ ಸಂಪಾದನೆಯಲ್ಲಿ ಮನೆ ನಡೀತಿರಬೇಕಾದ್ರೆ ಏನಾದರೂ ಹೇಳ್ಲಿಕ್ಕಾಗುತ್ತಾ?' (ಪುಟ ೧೧೭) ಎಂದು ಗೊಣಗಾಡುವ ಅಮ್ಮನೆಡೆಗೆ ಅವಳು ವಿಶೇಷ ಗಮನ ಕೊಟ್ಟಿಲ್ಲ. ಆರ್ಥಿಕತೆಯು ಸಂಬಂಧಗಳನ್ನು ನಿರ್ಣಯಿಸುತ್ತದೆ ಎಂಬ ಸತ್ಯವನ್ನು ಮನಗಂಡಿದ್ದಾಳೆ. ಅವಳೀಗ ದುಡಿಯುತ್ತಿರುವುದರಿಂದ ಈ ಹಿಂದಿನಂತೆ ಅಪ್ಪ ಅಮ್ಮನಿಗೆ ಹೆದರಬೇಕಾಗಿಲ್ಲ. ಕುತ್ತಿಗೆಯಲ್ಲಿರುವ ಹೊಸ ಚೈನು ರೋಲ್ಡ್‌ಗೋಲ್ಡೆಂದು ಹೇಳಿದರೂ ಅಮ್ಮನಿಗೆ ತನ್ನ ಮಾತಲ್ಲಿ ನಂಬಿಕೆಯಿಲ್ಲದಿರುವುದು ಅವಳಿಗೆ ಗೊತ್ತಿದೆ. 'ಈ ಮಾತಾಡುವ ಜನ ನಮ್ಮ ಖರ್ಚಿಗೇನೂ ಕೊಡ್ತಾ ಇಲ್ವಲ್ಲ' ಎಂಬಂಥ ತರ್ಕಗಳು ಸಂಜೆ ತಡವಾಗಿ ಬಂದಾಗ ವಳ್ಳಿಯ ಸಮರ್ಥನೆಗೆ ಒದಗಿ ಬರುತ್ತವೆ. ಗಂಡ ಕುಡಿದು ಹಾಳಾದರೂ ಅಡ್ಡದಾರಿ ಹಿಡಿಯದೆ ಕೂಲಿ ಕೆಲಸ ಮಾಡಿದ್ದ ಅಮ್ಮನಂತೆ ಆಕೆ ಬದುಕಲಾರಳು. 'ನನಗೆ ಹೀಗೆ ಕೂಲಿ ಕೆಲಸದವರ ಹಾಗೆ ಬದುಕಲು ಮನಸ್ಸಿಲ್ಲ. ಸ್ವಲ್ಪವಾದರೂ ಚೆನ್ನಾಗಿ ಬದುಕಬೇಕು. ನನಗೆ ಈ ನರಕದಲ್ಲಿರಲು ಸಾಧ್ಯವಿಲ್ಲ' (ಪು. ೧೧೯) ಎಂದು ಸ್ಪಷ್ಟವಾಗಿಯೆ ನಿರಾಕರಿಸುತ್ತಾಳೆ.

ಪ್ರಾಮಾಣಿಕತೆಯ ಹಾದಿಯಲ್ಲಿ ಬದುಕು ದುಸ್ತರವಾದಾಗ, ಚಾರಿತ್ರ್ಯದ ಚೌಕಟ್ಟುಗಳನ್ನು ಮೀರುವ ಎದೆಗಾರಿಕೆಯನ್ನು ವಳ್ಳಿ ತೋರುತ್ತಾಳೆ. ಹಾಗೆ ಬದುಕನ್ನು ಸಹನೀಯವಾಗಿ ರೂಪಿಸಿಕೊಂಡು ಬಣ್ಣಬಣ್ಣದ ಹೊಸ ಉಡುಪುಗಳು, ವಾಚು, ಕೊರಳಿಗೆ ಚೈನು... ಮುಂತಾದ ಬಯಕೆಗಳನ್ನು

ಈಡೇರಿಸಿಕೊಂಡಿದ್ದಾಳೆ. ಹಿಂದೆಲ್ಲ ಯಜಮಾನ ಕೋಪಿಸಿಕೊಳ್ಳುತ್ತಾನೆಂದು ಬೆಳಗ್ಗೆ ಎಂಟು ಗಂಟೆಗೇ ಬಂದು ಟೆಲಿಫೋನ್ ಬೂತ್ ತೆರೆದು ಕೂರುತ್ತಿದ್ದಳು. ಈಗವಳಿಗೆ ಯಜಮಾನನ ಭಯವಿಲ್ಲ. 'ಒಂಬತ್ತು ಗಂಟೆಯಾದರೂ ಬಾಗಿಲು ತೆರೆಯದೆ ಇರಬಹುದಾದ' ಸ್ವಾತಂತ್ರ್ಯವಿದೆ. ಸಂಜೆ ಹೊತ್ತುಮೀರಿ ಬೂತ್‌ನಲ್ಲಿ ಕುಳಿತುಕೊಳ್ಳುವ ಮೂಲಕ ಯಜಮಾನನಿಗೆ ಅನುಕೂಲೆಯಾಗಿದ್ದಾಳೆ.

ಪ್ರೀತಿಸಿದ್ದ ಸುನಿಲ್ ದಾರಿಯಲ್ಲಿ ಮುಖಾಮುಖಿಯಾಗಿ 'ನನ್ನ ಮುಂದಿರುವುದು ಖಂಡಿತಾ ಹಳೆಯ ವಳ್ಳಿಯಲ್ಲ' ಎಂದು ಆಕ್ಷೇಪಿಸಿದಾಗಲೂ ವಳ್ಳಿಯಲ್ಲಿ ಕೀಳರಿಮೆಯಾಗಲೀ, ಅಪರಾಧಿ ಪ್ರಜ್ಞೆಯಾಗಲೀ ಇಲ್ಲ. ಬದಲಾವಣೆ ಅನಿವಾರ್ಯ ಎಂದು ನಂಬಿರುವ ಅವಳಿಗೆ 'ಕೇಳಿ ಹಳಸಲಾದ ಡಯಲಾಗ್'ಗಳಲ್ಲಿ ನಂಬಿಕೆಯಿಲ್ಲ. "ನನಗೆ ಬದುಕಬೇಕು. ಬದುಕನ್ನು ಸುಖವಾಗಿ ಕಳೆಯಬೇಕು. ಅದೂ ಇದೂಂತ ಕನಸು ಕಾಣುತ್ತ ಸುಮ್ಮನೆ ನರಕ ಅನುಭವಿಸುವುದರಲ್ಲಿ ಅರ್ಥವಿಲ್ಲ" (ಪು. ೧೩೯) ಎಂಬ ಮಾತುಗಳಲ್ಲಿ ವಳ್ಳಿಯ ಜೀವನತತ್ವ ವ್ಯಕ್ತವಾಗಿದೆ. ಸುನಿಲ್ ತನ್ನನ್ನು ಬೇರೆಬೇರೆ ಯುವಕರೊಂದಿಗೆ ನೋಡಿರಬಹುದಾದ ಬಗ್ಗೆ ಅವಳಿಗೇನೂ ಭಯವಿಲ್ಲ. ಈಗಲೂ ಸುನಿಲ್‌ಗೆ ತನ್ನ ಮೇಲೆ ಪ್ರೀತಿಯಿದ್ದರೆ ಅವನೊಂದಿಗೆ ತೆರಳಲು ಸಿದ್ಧವಾಗಿದ್ದಾಳೆ. ಆದರೆ ಮುಂದೆಯೂ 'ನನ್ನ ಸ್ವಾತಂತ್ರ್ಯವನ್ನು ನಾನು ಯಾರಿಗೂ ಬಲಿಕೊಡುವುದಿಲ್ಲ' ಎಂಬುದು ಅವಳ ಸ್ಪಷ್ಟ ನಿಲುವು.

೩.೧.೩. ವಿನಾಶಿನಿಯರು

ಸ್ತ್ರೀಯರು ಅಪಾಯಕಾರಿಗಳೆಂದು ಪಿತೃಪ್ರಧಾನ ಸಮಾಜವು ವ್ಯಾಖ್ಯಾನಿಸಿದೆ. ಈ ವ್ಯಾಖ್ಯಾನವನ್ನು ಹೆಣ್ಣಿಗೂ ಭೂಮಿಗೂ ಸಮಾನವಾಗಿ ಅನ್ವಯಿಸಲಾಗಿದೆ. ಹೆಣ್ಣಿನಂತೆಯೆ ಭೂಮಿ ಅಥವಾ ಪ್ರಕೃತಿ ಕೂಡಾ ಕೆಲವರಿಗೆ ಒಲಿದು ಅಭಿವೃದ್ಧಿಪಡಿಸುತ್ತದೆ. ಮತ್ತೆ ಕೆಲವರ ಬದುಕನ್ನೇ ಬಲಿ ತೆಗೆದುಕೊಳ್ಳುತ್ತದೆ. ಕೃಷಿಭೂಮಿಯನ್ನು ನಂಬಿ ಉದ್ಧಾರವಾದವರು ಇರುವಂತೆಯೇ ನಾಶವಾದವರೂ ಇದ್ದಾರೆ. ಹೆಣ್ಣು, ಹೊನ್ನು, ಮಣ್ಣು.. ಈ ಮೂರರ ಆಕರ್ಷಣೆಯಿಂದ ದೂರವಿದ್ದರೆ ಅಥವಾ ಅವನ್ನು ಅಂಕೆಯಲ್ಲಿರಿಸಿಕೊಂಡರೆ ಪುರುಷನಿಗೆ ಅಪಾಯವಿಲ್ಲ ಎಂದು ತಿಳಿಯಲಾಗಿದೆ. ಈ ಮೂರರಿಂದಲೂ ವಿಮುಖರಾದವರನ್ನು ವಿರಕ್ತ ಎನ್ನಲಾಗುತ್ತದೆ. ಸಮಾಜದ ಈ ಅನಿಸಿಕೆಯನ್ನು ದೃಢಪಡಿಸುವ ಪ್ರಯತ್ನವನ್ನು ಎಸ್.ಕೆ. ಪೊಟ್ಟೆಕ್ಕಾಟ್ ಅವರು ಬರೆದಿರುವ 'ವಿಷಕನ್ನಿಕೆ' ಎಂಬ ಕಾದಂಬರಿಯಲ್ಲಿ ಗಮನಿಸಬಹುದು.

ಶೀರ್ಷಿಕೆಯೆ ಸೂಚಿಸುವಂತೆ 'ವಿಷಕನ್ನಿಕೆ' ಕೃತಿಯು ಸ್ತ್ರೀಯನ್ನೂ ಭೂಮಿಯನ್ನೂ ಪುರುಷರ ಬದುಕನ್ನು ವಿನಾಶ ಮಾಡುವ ವಿಪತ್ಕಾರಿಗಳಾಗಿ ಪ್ರತಿಪಾದಿಸುತ್ತದೆ. ಈ ಕೃತಿಯಲ್ಲಿ ಮಾಧವಿ ಎಂಬ ಪ್ರಣಯಿನಿಯಾದ ಸ್ತ್ರೀಯೊಬ್ಬಳ ಸ್ವಭಾವವನ್ನು ಪ್ರಕೃತಿಯೊಂದಿಗೆ ಸಮೀಕರಿಸಲಾಗಿದೆ. ಕೃತಿಯ

ಮುನ್ನುಡಿಯಲ್ಲಿ ಓ.ಎನ್.ವಿ. ಕುರುಪ್ಪ್ ಅವರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಗಮನಿಸಬಹುದು: "ಮಾದಕ ಸೌಂದರ್ಯವನ್ನು ಪ್ರದರ್ಶಿಸಿ, ಕೈನೀಡಿ ಕರೆದು, ಮಾರಕ ಚುಂಬನವನ್ನು ನೀಡುವ ಒಬ್ಬಳು ವಿಷಕನ್ನಿಕೆಯಾಗಿದ್ದಾಳೆ ಆ ವನಪ್ರಕೃತಿ, ಆ ಹೊಸಮಣ್ಣು! ಆ ಹೊಸಮಣ್ಣಿನೊಂದಿಗೆ ಸ್ಪರ್ಧಿಸಲು ಶಕ್ತವಾದ, ಮಣ್ಣಿನಲ್ಲಿ ಲಯವಾದ ಒಂದು ಸ್ವಭಾವವಿಶೇಷವನ್ನು ಕಾದಂಬರಿಕಾರ ಮಾಧವಿಯ ಪಾತ್ರದ ಮೂಲಕ ಮೂರ್ತೀಭವಿಸಿದ್ದಾನೆ."

ವಯೋಸಹಜವಾದ ಲೈಂಗಿಕ ಬಯಕೆಯುಳ್ಳ ತುಂಬು ಯೌವನದ ಅವಿವಾಹಿತೆಯಾಗಿರುವ, ಮನೆಯಲ್ಲಿ ಯಾವ ನಿರ್ಬಂಧಗಳೂ ಇಲ್ಲದ ಮಾಧವಿ ಎಂಬ ಪ್ರಣಯಿನಿಗೆ ಗುಡ್ಡದ ಮೇಲೆ ಮನೆ ಮಾಡಿಕೊಂಡು ಒಬ್ಬನೇ ವಾಸಿಸುತ್ತಿರುವ ಅಧ್ಯಾತ್ಮಿಕ ಒಲವಿನ ಆಂತೊನಿಯಲ್ಲಿ ಸೆಳೆತ. ಅವನನ್ನು ಆಕರ್ಷಿಸುವುದಕ್ಕಾಗಿ ಹಲವು ಬಗೆಯಲ್ಲಿ ಪ್ರಯತ್ನ ಮಾಡುತ್ತಾಳೆ. ಕೊನೆಗೊಂದು ಜಡಿಮಳೆಯ ರಾತ್ರಿಯಲ್ಲಿ ಮೈಯೆಲ್ಲ ಒದ್ದೆಯಾಗಿಸಿಕೊಂಡು ಅವನೆದುರೇ ತನ್ನ ರವಿಕೆಯನ್ನು ಬಿಚ್ಚಿ ಪ್ರಚೋದಿಸಿ ಅವನನ್ನು ಕೂಡುತ್ತಾಳೆ. ಈ ಘಟನೆಯ ಬಳಿಕ ಆಂತೊನಿ ಅವಳಿಂದ ಸಂಪೂರ್ಣವಾಗಿ ವಿಮುಖನಾಗಿ ಮತ್ತೊಮ್ಮೆ ಅಂಥ ಮಿಲನಕ್ಕೆ ಅವಕಾಶವೆ ಸಿಗದೆ ಹೋದಾಗ, ಅಂತಿಮ ಉಪಾಯವಾಗಿ ಮಾಟಗಾತಿಯೂ ಮಂತ್ರವಾದಿನಿಯೂ ಆಗಿರುವ ಕುಂಬೆ ಎಂಬ ವೃದ್ಧೆಯನ್ನು ಕರೆಸಿ ಆಂತೊನಿಯನ್ನು ವಶೀಕರಿಸಿಕೊಳ್ಳಲು ಅವಳ ಸಹಾಯ ಪಡೆಯುತ್ತಾಳೆ. 'ವೀಳ್ಯ ಹಾಕಿ ಉಗಿದಷ್ಟೇ ಸುಲಭವಾಗಿ ಬೇಡದ ಗರ್ಭಗಳನ್ನು ಜಾರಿಸಬಲ್ಲವಳಾದ' ಕುಂಬೆಯಲ್ಲಿ ಪುರುಷರನ್ನು ವಶೀಕರಿಸುವ ಮೂಲಿಕೆಗಳಿವೆ. ಹಾವು ಕಚ್ಚಿದವರ ವಿಷ ಇಳಿಸುವ ಔಷಧಿ ಇರುವಂತೆ ಪ್ರಾಣ ತೆಗೆಯುವ ವಿಷಮೂಲಿಕೆಯೂ ಇದೆ.

ಕ್ರೈಸ್ತರ ನಂಬಿಕೆಯ ಪ್ರಕಾರ ಸೃಷ್ಟಿಯ ಮೊದಲ ಪುರುಷನಾಗಿರುವ ಆದಂನನ್ನು ವಿಷದ ಹಣ್ಣು ತಿನ್ನಲು ಪ್ರಚೋದಿಸಿದ ಈವಳಂತೆ ಸೃಷ್ಟಿಯ ಎಲ್ಲ ಸ್ತ್ರೀಯರೂ ವಿಷವುಣಿಸುವ ಮತ್ತು ನಾಶಕ್ಕೆ ಕಾರಣರಾಗುವ ಕನ್ನಿಕೆಯರೆಂದು ಆಂತೊನಿ ನಂಬಿದ್ದಾನೆ. ಹಾಗಾಗಿಯೆ ಒಂಟಿಯಾಗಿ ವಾಸಿಸುತ್ತ ಸದಾಕಾಲ ಧರ್ಮಗ್ರಂಥಗಳನ್ನು ಓದುತ್ತಾ ಸ್ತ್ರೀಯರಿಂದ ದೂರವಾಗಿರಲು ಪ್ರಯತ್ನಿಸುತ್ತಾನೆ. ಒಂಟಿಯಾಗಿರುವ ತನ್ನಲ್ಲಿಗೆ ಏನೇನೋ ನೆವದಿಂದ ಬಂದು ಮಾತನಾಡಿಸುವ ಮಾಧವಿಯ 'ಸೂಳೆಯ ನಗುವಿನಂಥ' ನಗು ಅವನಿಗೆ ಸಿಟ್ಟು ಬರಿಸುತ್ತದೆ. ಮಾಧವಿಯ ಕಣ್ಣುಗಳಲ್ಲಿ ಅವನನ್ನು 'ದಾರಿತಪ್ಪಿಸುವ ವಿಷವಿದೆ' ಯಾದ್ದರಿಂದ ಆಕೆಯ ಮುಖವನ್ನು ನೋಡಲು ಅವನು ಇಷ್ಟಪಡುವುದಿಲ್ಲ. ಹೀಗೆ ಅವನು ಬಹಳ 'ಜತನದಿಂದ ರಕ್ಷಿಸಿಕೊಂಡಿದ್ದ ಬ್ರಹ್ಮಚರ್ಯವು' ಮಾಧವಿಯಿಂದಾಗಿ ನಷ್ಟವಾಗಿದೆ. ಸಂಯಮಿಯಾದ ಪುರುಷನೊಬ್ಬನನ್ನು ಪ್ರಚೋದಿಸಿ ಅವನ ಬ್ರಹ್ಮಚರ್ಯವನ್ನು ಕೆಡಿಸಿದ ಪುರಾಣದ ಮೇನಕೆ, ಮೋಹಿನಿಯರ ಮಾದರಿಯಲ್ಲಿ ಮಾಧವಿಯ ಪಾತ್ರವನ್ನು ಚಿತ್ರಿಸಲಾಗಿದೆ. ಸ್ತ್ರೀಯರಿಂದ ದೂರವಿರುವುದೆ ಚಾರಿತ್ರ್ಯವಂತರಾದ ಪುರುಷರಿಗೆ ಕ್ಷೇಮ ಎಂಬ ಎಚ್ಚರಿಕೆಯೂ ಕೃತಿಯಲ್ಲಿದೆ.

ಆಂತೋನಿಯ 'ಪುರುಷತ್ವವು ನಾಶವಾದ' ಬಳಿಕ ತನ್ನಲ್ಲಿ 'ವಿಷಪ್ರವಾಹವನ್ನುಂಟು ಮಾಡಿ ಮಲಗಿ ನಿದ್ರಿಸುವ ಆ ರಕ್ತಪಿಪಾಸಿಯನ್ನು ನೋಡುವುದಕ್ಕೆ ಕೂಡಾ ಹೆದರಿಕೆಯಾಗಿ' ತಾನು ನಿಶ್ಶೇಷವಾಗಿ ನಾಶವಾದೆನೆಂಬ ಅತೀವ ದುಃಖದಿಂದ ನಿಸ್ಸಹಾಯಕನಾಗಿ ಗೋಳೋ ಎಂದು ಅಳುವುದು, ಮುಂದಕ್ಕೆ ಮಾಧವಿಯೊಂದಿಗೆ ಸಂಪರ್ಕವನ್ನೇ ಕಡಿದುಕೊಳ್ಳುವುದು, ಅವಳ ವಿಷಪ್ರಯೋಗದಿಂದ ವರ್ಕಿ ಸತ್ತಾಗ 'ಕರ್ತಾನೇ ನೀನು ಹೆಣ್ಣುವರ್ಗವನ್ನು ಯಾಕಾಗಿ ಸೃಷ್ಟಿಸಿದೆ?' ಎಂದು ನೋವಿನಿಂದ ಉದ್ಗರಿಸುವುದು... ಇವೆಲ್ಲ ಮಾಧವಿಯನ್ನು ವಿನಾಶಿನಿಯಾಗಿ ಕಾಣಿಸುವ ಅಂಶಗಳು.

ಇದೇ ಕೃತಿಯಲ್ಲಿ ಬರುವ ಸಾರಮ್ಮ ಎಂಬ ಮಹಿಳೆ ಬಡಕೃಷಿಕ ಕುರಿಯನ್‌ನ ಮಡದಿ. ಸ್ವಂತ ಕೃಷಿಭೂಮಿಯನ್ನು ಹೊಂದುವ ಇಚ್ಛೆಯಿಂದ ಗಂಡನೊಟ್ಟಿಗೆ ದೂರದೂರಿಗೆ ಬಂದಿದ್ದಾಳೆ. ಬಡವನೂ, ಕುಡುಕನೂ ಆದ ಗಂಡನಿಂದ ಬಯಕೆಗಳು ಈಡೇರುವುದಿಲ್ಲ ಎಂದು ಅರ್ಥಮಾಡಿಕೊಂಡು ಚಾದಂಗಡಿಯ ಚಾಕೋಚ್ಚನ್‌ನೊಂದಿಗೆ ಸಂಬಂಧ ಬೆಳೆಸುತ್ತಾಳೆ. ಪ್ರತಿದಿನವೂ ಗಂಡ ಕೆಲಸಕ್ಕೆ ಹೋಗಿದ್ದ ಹೊತ್ತಿನಲ್ಲಿ ಸಣ್ಣ ಮಗುವನ್ನು ಹೊರಜಗಲಿಯಲ್ಲಿ ಮಲಗಿಸಿ ಮನೆಯೊಳಗೆ ಪ್ರಿಯಕರನೊಂದಿಗೆ ಪ್ರಣಯಕೇಳಿಯಲ್ಲಿರುತ್ತಾಳೆ. ಒಂದು ದಿನ ಅವರು ಒಟ್ಟಿಗೆ ಮಲಗಿರುವುದನ್ನು ಕಣ್ಣಾರೆ ಕಂಡ ಕುರಿಯನ್ 'ಕಳ್ಳುಕುಡಿದು ಧೈರ್ಯ ತುಂಬಿಕೊಂಡು' ಬಂದು, ಹೆಂಡತಿಯ ತಲೆಗೂದಲನ್ನು ಹಿಡಿದು ಸುರುಟಿ ಮನಬಂದಷ್ಟು ಹೊಡೆಯುತ್ತಾನೆ.

ಯಾವುದೇ ಪ್ರತಿಕ್ರಿಯೆಯಿಲ್ಲದೆ ಸಾರಮ್ಮ ಗಂಡ ನೀಡುವ ಶಿಕ್ಷೆಯನ್ನು ಸ್ವೀಕರಿಸುವುದು ವಿಶೇಷವಾಗಿದೆ. 'ಸಣ್ಣದೊಂದು ನಿಟ್ಟುಸಿರನ್ನು ಕೂಡಾ ಹೊರಡಿಸದೆ, ಯಾವುದೇ ರೀತಿಯ ವಿಷಾದವನ್ನೂ ವಿರೋಧವನ್ನೂ ತೋರಿಸದೆ, ಕಂಬದ ಹಾಗೆ ನಿಂತು' ಗಂಡ ನೀಡುವ ಏಟುಗಳನ್ನು ತಿನ್ನುತ್ತಾಳೆ. ಸಮಾಜದ ದೃಷ್ಟಿಯಲ್ಲಿ ತಾನು ಮಾಡಿರುವುದು ತಪ್ಪೆಂದೂ, ಹಾಗಾಗಿ ಶಿಕ್ಷೆಯನ್ನು ಅನುಭವಿಸುವುದು ಅನಿವಾರ್ಯವೆಂದೂ ಅವಳಿಗೆ ಗೊತ್ತಿದೆ. ಹಾಗೆಂದು ತನ್ನ ಹೊರಸಂಬಂಧದ ಬಗ್ಗೆ ಅವಳಿಗೆ ಖೇದವಿಲ್ಲ. ಇಷ್ಟೆಲ್ಲ ಗಲಾಟೆ ಮಾಡಿದ ಕುರಿಯನ್ ಮರುದಿನ ಹೆಂಡತಿಯೊಡನೆ ರಾಜಿಯಾಗುತ್ತಾನೆ. ಅವನ ಪ್ರಕಾರ ಮೈ ಪುಡಿಯಾಗುವಂತೆ ಹೊಡೆಯುವ ಮೂಲಕ ಅವಳ ತಪ್ಪಿಗೆ ಶಿಕ್ಷೆ ನೀಡಿದ್ದಾಗಿದೆ. ಸ್ವಂತ ಊರು ಬಿಟ್ಟು ಪರವೂರಿಗೆ ದುಡಿಯಲು ಬಂದಿರುವ ಈ ಸಂದರ್ಭದಲ್ಲಿ 'ಹೆಂಡತಿಯನ್ನು ಮನೆಯಿಂದ ಹೊರದೂಡಿದರೆ ಮನೆ ನಿಭಾಯಿಸುವುದು ಕಷ್ಟ'ವಾದ್ದರಿಂದ ಅವಳನ್ನು ತ್ಯಜಿಸುವ ಯೋಚನೆ ಅವನಿಗಿಲ್ಲ.

ಹೆಂಡತಿಯ ವ್ಯಭಿಚಾರವನ್ನು ಪತ್ತೆಹಚ್ಚಿದ ಹುರುಪಿನಲ್ಲಿರುವ ಕುರಿಯನ್ ಆ ಒಟ್ಟು ಸನ್ನಿವೇಶವನ್ನು ಸ್ವಲ್ಪವೂ ನಾಚಿಕೆಯಿಲ್ಲದೆ ಕಳ್ಳಂಗಡಿಯ ಕುತೂಹಲಿಗಳಿಗೆ ವಿವರಿಸುವ ದೃಶ್ಯವೊಂದನ್ನು ಗಮನಿಸಬಹುದು. ಅಂಗಡಿಯ ಮಾಲಿಕ 'ಸಾರಮ್ಮನ ಮೊದಲ ವ್ಯವಹಾರವೋ ಅದು?' ಎಂಬ ಪ್ರಶ್ನೆ

ಕೇಳಿದರೆ "ಮನುಷ್ಯನ ರಕ್ತದ ರುಚಿಯನ್ನು ಒಮ್ಮೆ ಅನುಭವಿಸಿದರೆ ಬಳಿಕ ಸಂದರ್ಭ ಸಿಗುವಾಗಲೆಲ್ಲಾ ಜನರನ್ನು ಹಿಡಿಯಲು ನೋಡುವ ಹುಲಿಯಂತಿರುವವಳೇ ಊರಿನ ನಾರಿ. ಬೇಕಾಗಿ ಬಂದರೆ ಹೇಗಾದರೂ ಕಾರ್ಯವನ್ನು ಸಾಧಿಸುವಳು, ಗೊತ್ತಾಯಿತೋ ಅಣ್ಣಾ" (ಪು. ೧೧೩) ಎಂದು ಮಲಯ ಕುಂಞಿರಾಮ ಜ್ಞಾನಬೋಧನೆ ಮಾಡುತ್ತಾನೆ. 'ಹೆಣ್ಣನ್ನು ನಂಬುವವನು ತಿಳಿಗೇಡಿ' ಎಂಬ ಕುಂಞಂಬು ಮಣಿಯಾಣಿಯ ಅಭಿಪ್ರಾಯವನ್ನು ಕುಡಿದು ಮೈಮರೆತಿರುವ ಎಲ್ಲ ಗಂಡಸರೂ ಅನುಮೋದಿಸುತ್ತಾರೆ. ಕುರಿಯನ್ ಈಗಾಗಲೇ ಹೆಂಡತಿಗೆ ನೀಡಿದ ಮತ್ತು ಮುಂದಕ್ಕೆ ಅವಳ ಪ್ರಿಯಕರನಿಗೆ ನೀಡಲಿರುವ ಶಿಕ್ಷೆಗಳಿಗೂ ಅವರ ಸಮ್ಮತಿಯಿದೆ. 'ಹುಲಿಯಂತೆ ಕ್ರೂರಿಗಳಾದ ಸ್ತ್ರೀಯರು ಶುದ್ಧ ಸ್ನೇಹಕ್ಕೆ ಮತ್ತು ನಂಬಿಕೆಗೆ ಅರ್ಹರಲ್ಲ; ಅವಕಾಶವನ್ನು ಬಳಸಿಕೊಂಡು ಪುರುಷರ ನಾಶಕ್ಕೆ ಕಾರಣರಾಗುವವರು, ಆದ್ದರಿಂದ ಅವರನ್ನು ಯಾವ ಕಾರಣಕ್ಕೂ ನಂಬದೆ, ಸದಾ ಹದ್ದುಬಸ್ತಿನಲ್ಲಿ ಇಡತಕ್ಕದ್ದು; ದಾರಿ ತಪ್ಪುವ ಸುಳಿವು ಕಂಡರೆ ಹೊಡೆದು ಬಡಿದು ಸರಿದಾರಿಗೆ ತರತಕ್ಕದ್ದು' ಎಂಬುದು ಬಹುತೇಕ ಪುರುಷರ ಗ್ರಹಿಕೆಯಾಗಿದೆ.

ಕೃಷಿ ಮಾಡಿ ನೆಮ್ಮದಿಯಿಂದ ಬದುಕಬೇಕೆಂಬ ಮಹದಾಸೆಯಿಂದ ತಿರುವನಂತಪುರದಿಂದ ಮಲಬಾರಿನ ವಯನಾಡ್ ಮಲೆಪ್ರದೇಶಕ್ಕೆ ವಲಸೆ ಬಂದು ಜೀವಿತದ ಗಳಿಕೆಯನ್ನೆಲ್ಲ ತೊಡಗಿಸಿ ನಾಶವಾದ ಕುಟುಂಬಗಳ ಬಗ್ಗೆ ಆಂತೋನಿಯ ಮನಸ್ಸಿನಲ್ಲಿ ಹುಟ್ಟಿದ ವಿಷಾದವು 'ಆಲಿಂಗನ ಮಾಡುವವರನ್ನೇ ವಿಷಕೊಟ್ಟು ಕೊಲ್ಲುವ ಪ್ರಕೃತಿಯೂ, ಪ್ರಕೃತಿಯ ಸೋದರಿಯಾದ ಹೆಣ್ಣು ಕೂಡ ವಿಷಕನ್ನಿಕೆಯೇ ಸರಿ' ಎಂಬ ಅಭಿಪ್ರಾಯವನ್ನು ಮೂಡಿಸುತ್ತದೆ. ಒಟ್ಟು ಕಾದಂಬರಿಯ ಆಶಯವೂ ಅದೇ. ಕೃತಿಯ ಕೊನೆಯಲ್ಲಿ ಭೂಮಿ ಮತ್ತು ಹೆಣ್ಣು ಈ ಎರಡು ವಿಷಕನ್ನಿಕೆಯರಿಂದಲೂ ಬಿಡಿಸಿಕೊಂಡು, ಭೂಮಿಯ ಆಸೆಯಿಂದ ಬಂದು ಹೆಂಡತಿ ಮತ್ತು ಮಗಳನ್ನು ಕಳೆದುಕೊಂಡು ದಿಕ್ಕೆಟ್ಟಿರುವ ಮಾತ್ತನೊಂದಿಗೆ ಆಂತೋನಿ ಊರಿಗೆ ಮರಳುತ್ತಾನೆ. ಸ್ತ್ರೀಯರು ಮತ್ತು ಸ್ತ್ರೀರೂಪವಾಗಿ ಪರಿಗಣಿತವಾಗಿರುವ ಪ್ರಕೃತಿ ಇವೆರಡರ ಸಹವಾಸವೂ ಮೃತ್ಯುವಿನಂತೆ ಅಪಾಯಕಾರಿ, ಅದರಿಂದ ದೂರವಿರುವುದೆ ಕ್ಷೇಮ ಎಂದು 'ವಿಷಕನ್ನಿಕೆ' ಪ್ರತಿಪಾದಿಸುತ್ತದೆ.

೩.೧.೪. ಚೈತನ್ಯಶಾಲಿ ಸ್ತ್ರೀಯರು

ಸಾಮಾನ್ಯವಾಗಿ ಸ್ತ್ರೀಯರನ್ನು ಅಳುಬುರುಕರಾಗಿ, ಅಂಜುಗುಳಿಗಳಾಗಿ ಭಾವಿಸಲಾಗುತ್ತದೆ ಮತ್ತು ಸಾಹಿತ್ಯದಲ್ಲೂ ಹಾಗೇ ಚಿತ್ರಿಸಲಾಗುತ್ತದೆ. ಇದಕ್ಕೆ ಭಿನ್ನವಾಗಿ, ಚುರುಕು, ಲವಲವಿಕೆ, ಸಾಹಸ, ಧೈರ್ಯ, ಹಿಡಿದ ಕೆಲಸವನ್ನು ಸಾಧಿಸುವ ಛಲಗಾರಿಕೆ ಮತ್ತು ಅಡ್ಡಿ ಆತಂಕಗಳಿಗೆ ಅಂಜದ ದೃಢತೆಯ ಗುಣಗಳಿಂದ ಗಮನ ಸೆಳೆಯುವ ದಿಟ್ಟೆಯರೂ, ಗಟ್ಟಿಗಿತ್ತಿಯರೂ, ಸಾಹಸಿಗಳೂ ಆದ ಸ್ತ್ರೀಯರು

ಮಲಯಾಳಂ ಕೃತಿಗಳಲ್ಲಿ ಕಾಣಸಿಗುತ್ತಾರೆ. ಅಸದೃಶವಾದ ಜೀವಶಕ್ತಿ ಮತ್ತು ಚೈತನ್ಯಗಳು ಈ ಸ್ತ್ರೀಯರನ್ನು ಮುನ್ನಡೆಸಿವೆ.

'ವಿಷಕನ್ನಿಕೆ' ಕಾದಂಬರಿಯಲ್ಲಿ ಮರಿಯಾ ಎಂಬ ಸಾಹಸಿ ಮಹಿಳೆಯೊಬ್ಬಳ ಚಿತ್ರಣವಿದೆ. ಇಂದಲ್ಲ ನಾಳೆ ತಮ್ಮದೇ ಆದ ಸ್ವಂತ ಎಸ್ಟೇಟ್ ಹೊಂದುವ ಕನಸುಳ್ಳ ಸಾಹಸಿ ಮರಿಯಾ, ಮಾತ್ತ ಎಂಬ ಸೋಮಾರಿಯಾದ ಗಂಡನೂ ಎರಡು ಮಕ್ಕಳೂ 'ಇರುವ ಪುಟ್ಟ ಕುಟುಂಬದ ನೆಮ್ಮದಿಯ ಬದುಕಿಗಾಗಿ ಹೆಣಗಾಡುವ ಶ್ರಮಜೀವಿ. ಸುಲಭದಲ್ಲಿ ಊರು ಬಿಡಲೊಪ್ಪದ ಪತಿಯನ್ನು ಹೇಗೋ ಒಪ್ಪಿಸಿ ಸ್ವಂತ ಊರಾದ ತಿರುವಾಂಕೂರು ಬಿಟ್ಟು ವಯನಾಡಿಗೆ ವಲಸೆ ಹೊರಟ ಗುಂಪಿನೊಂದಿಗೆ ಸೇರಿಕೊಂಡ ಆಶಾವಾದಿ. ಮರಗೆಣಸು, ಕೆಸು, ಬಾಳೆ, ಪರಂಗಿ ಮೆಣಸು... ಹೀಗೆ ಏನೇನೋ ಬೆಳೆದು ಸ್ವಾವಲಂಬಿಯಾಗುವ ಅದಮ್ಯ ಬಯಕೆ ಅವಳಿಗೆ. ಮೈಗಳ್ಳನಾದ ಗಂಡನನ್ನು ಉಪಾಯವಾಗಿ ದುಡಿಮೆಯಲ್ಲಿ ತೊಡಗಿಸಿಕೊಳ್ಳುತ್ತ ತಾವು ಖರೀದಿಸಿದ ಕಾಡನ್ನು ಕಡಿದು ಕೃಷಿಯೋಗ್ಯವಾಗಿಸುವುದಕ್ಕಾಗಿ ಊಟ ನಿದ್ದೆ ಮರೆತು ಹೊತ್ತಿನ ಪರಿವೆಯಿಲ್ಲದೆ ದುಡಿಯುತ್ತಾಳೆ. ನಾಚಿಕೆಮುಳ್ಳು, ಕಾಡುಹಂದಿ ಮುಂತಾದ ರೂಪದಲ್ಲಿ ಕಾಡುವ ಸೈತಾನನನ್ನು ಓಡಿಸುವಂತೆ ಕರ್ತಾನನ್ನು ಪ್ರಾರ್ಥಿಸುತ್ತ ದೃಢವಿಶ್ವಾಸದಲ್ಲಿ ದುಡಿಯುತ್ತಾಳೆ. ಆದರೆ ಕೊನೆಗೊಮ್ಮೆ ಜ್ವರದ ರೂಪದಲ್ಲಿ ಬಂದ ಸೈತಾನನನ್ನು ಓಡಿಸುವುದು ಸಾಧ್ಯವಾಗದೆ ಪ್ರಾಣಬಿಡುತ್ತಾಳೆ.

ಅಗತ್ಯಬಿದ್ದರೆ ಗಂಡನ ತಲೆಯನ್ನು ಹೆಟ್ಟಿ ಎಬ್ಬಿಸುವ, ಗಂಡನ ಸೋಮಾರಿತನವನ್ನು ಕಟುಮಾತುಗಳಿಂದ ನಿಂದಿಸುವ ಮರಿಯಾ ಸಂಸಾರದ ಪೂರ್ಣ ಹೊಣೆಯನ್ನು ಒಬ್ಬಳೇ ನಿಭಾಯಿಸುವ ಗಟ್ಟಿ ಮಹಿಳೆ. ದೂರದ ಊರಲ್ಲಿರುವ ಅತ್ತೆಗೆ ಅಸೂಯೆ ಹುಟ್ಟಿಸುವಂತೆ 'ತಮ್ಮ ಭವ್ಯವಾದ ಮತ್ತು ವಿಶಾಲವಾದ ಕೃಷಿಭೂಮಿಯ ಕಾಲ್ಪನಿಕ ಸಮೃದ್ಧಿಯ ಕುರಿತು' ಮಗಳಿಂದ ಪತ್ರ ಬರೆಸಿ ಹಾಕುತ್ತಾಳೆ. ಇಲ್ಲದ ಸಿರಿವಂತಿಕೆಯನ್ನು ಇದೆಯೆಂದು ತೋರಿಸಿ ಅತ್ತೆಯನ್ನು ವಂಚಿಸುವುದು ಮಾತ್ರ ಈ ಪತ್ರದ ಉದ್ದೇಶವಲ್ಲ. ತನ್ನ ಸುಪ್ತದ ಕನಸುಗಳನ್ನೆ ಮರಿಯಾ ಮಗಳ ಮೂಲಕ ಅಕ್ಷರರೂಪದಲ್ಲಿ ಮೂರ್ತವಾಗಿಸಿದ್ದಾಳೆ. ಇಂದಲ್ಲ ನಾಳೆ ತನ್ನ ತೋಟವು ಹಸಿರಿನಿಂದ ನಳನಳಿಸುವುದು, ಬಂಗಾರದ ಬೆಳೆಯನ್ನು ಪಡೆಯುವುದು ಎಂಬುದು ಅವಳ ಗಟ್ಟಿ ವಿಶ್ವಾಸವಾಗಿದೆ. ಮಲೇರಿಯಾ ಜ್ವರ ಪ್ರಾಣಾಂತಿಕವಾಗಿ ಬಾಧಿಸಿದಾಗಲೂ ಧೃತಿಗೆಡದೆ ತನ್ನನ್ನು ತಾನೇ ಶೀಘ್ರ ಗುಣಪಡಿಸಿಕೊಂಡು ಮತ್ತೆ ದುಡಿಯಲು ಹೊರಡುತ್ತಾಳೆ.

ಅಗತ್ಯ ಬಿದ್ದಾಗ ಹೊರಗಿನ ಕೆಲಸಗಾರರ ನೆರವು ಪಡೆಯುವ ಮರಿಯಾಗೆ ಸೋಮಾರಿತನವೆಂದರೆ ಆಗದು. ಹಾಗಾಗಿ ತಾನು ಸತ್ತ ಬಳಿಕವೂ ಪ್ರೇತವಾಗಿ ಬಂದು ಮಲಗಿದ್ದ ಗಂಡನನ್ನು ಹಿಡಿದು ಅಮರಿಸಿ ಉಪದ್ರವ ಕೊಟ್ಟು ಎಬ್ಬಿಸುತ್ತಾಳೆ. ಅವಳು ಬದುಕಿದ್ದಾಗ ಎಲ್ಲ ಹೊಣೆಗಾರಿಕೆಯನ್ನೂ ಅವಳಿಗೊಪ್ಪಿಸಿ

ಆರಾಮವಾಗಿದ್ದ ಮಾತ್ತ ಹೆಂಡತಿ ಸತ್ತ ಬಳಿಕ ಅಕ್ಷರಶಃ ಅನಾಥನಾಗಿದ್ದಾನೆ. ತನ್ನ ಒಡೆತನದಲ್ಲಿ ಮಾರಲು ಸಾಧ್ಯವಿರುವ ಕೃಷಿಭೂಮಿಯಿದೆಯೆಂದೂ ಅವನಿಗೆ ತಿಳಿಯದು. ಮರಿಯಾ ಸತ್ತ ಬಳಿಕವೂ 'ಅದೆಲ್ಲವೂ ಅವಳದೇ ಆಗಿದೆ' ಎಂಬುದೇ ಮಾತ್ತನ ಭಾವನೆಯಾಗಿದೆ. ಯಾಕೆಂದರೆ ಆ ಮಟ್ಟಕ್ಕೆ ತನ್ನ ಹೆಂಡತಿ ಭೂಮಿಗಾಗಿ ದುಡಿದಿರುವುದು ಅವನಿಗೆ ತಿಳಿದಿದೆ. ಪರಿಶ್ರಮದ ದುಡಿಮೆಯಿಂದ ಸ್ವಾವಲಂಬೀ ಬದುಕು ಕಟ್ಟಿಕೊಳ್ಳಬಹುದು ಎಂಬ ಆತ್ಮವಿಶ್ವಾಸವೆ ಮರಿಯಾಳ 'ಗುಡ್ಡದಲ್ಲಿ ಕೃಷಿಮಾಡುವ' ಸಾಹಸಕ್ಕೆ ಪ್ರೇರಣೆಯಾಗಿದೆ. ದುಡಿದು ಶ್ರೀಮಂತರಾಗುವ ಕನಸನ್ನು ನಿಜವಾಗಿಸುವುದಕ್ಕಾಗಿ ಕೊನೆಯ ಉಸಿರಿನವರೆಗೂ ಮರಿಯಾ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾಳೆ.

ಗ್ರೇಸಿ ಅವರು ಬರೆದ 'ಒರೋತ ಮತ್ತು ದೆವ್ವಗಳು' ಸಣ್ಣಕತೆಯು ಸ್ತ್ರೀಯರು ಪುಕ್ಕಲು ಸ್ವಭಾವದವರು, ಪುರುಷರಾದರೆ ಸ್ವಭಾವತಃ ಧೈರ್ಯಸ್ಥರು ಎಂಬ ಸಾಮಾನ್ಯ ನಂಬಿಕೆಯನ್ನು ಬುಡಮೇಲು ಮಾಡುವಂಥ ವಿಶಿಷ್ಟವಾದ ವಸ್ತುವನ್ನು ಹೊಂದಿದೆ. ಸತ್ತು ದೆವ್ವವಾಗಿರುವವರನ್ನೂ ವಿಶ್ವಾಸದಿಂದ ಮಾತನಾಡಿಸಬಲ್ಲ ಹೆಣ್ಣಿನ ಸ್ನೇಹಶೀಲತೆ ಮತ್ತು ಸಂವಹನದ ಚಾತುರ್ಯಗಳನ್ನು ಪ್ರತಿಪಾದಿಸುವ ಈ ಕತೆಯ ಒರೋತಳಿಗೆ ಮಕ್ಕಳಿಲ್ಲ. ಆ ಬಗ್ಗೆ ಬೇಸರವೂ ಇಲ್ಲ. ಯಾಕೆಂದರೆ 'ಮಕ್ಕಳಿದ್ದು ಏನು ಪ್ರಯೋಜನ? ಆಯುಸ್ಸುಪೂರ್ತಿ ಅವುಗಳಿಗಾಗಿ ನರಕ ಬರಬೇಕು. ರೆಕ್ಕೆ ಬಲಿಯುತ್ತಲೇ ಹಾರಿ ಹೋಗ್ತಾವೆ. ಈಗ ನಮ್ಗೆ ಏನು ಕಮ್ಮಿಯಾಗಿದೆ? ನಾವು ಕಷ್ಟಪಡ್ತೀವಿ. ಸುಖವಾಗಿ ಜೀವಿಸ್ತಿದ್ದೀವಿ. ತೀರಾ ಕೂಡೂದಿಲ್ಲ ಅಂತ ಆದಾಗ ನಾವಿಬ್ಬರೂ ಜತೆಗೇನೇ ಹೋಗಿಬಿಟ್ಟರಾಯ್ತು' (ಪು. ೧೦೫, ಮಲಯಾಳದ ೧೦ ಕಥೆಗಾರ್ತಿಯರು) ಎಂದು ಧೈರ್ಯ ಕೊಡುವ ಮತ್ತು ಬಹುವಾಗಿ ಪ್ರೀತಿಸುವ ಪತಿ ಅವಳಿಗಿದ್ದಾನೆ. ಹೀಗೆ 'ಒಟ್ಟಿಗೆ ಹೋಗಿಬಿಡುವ' ಯೋಚನೆಯನ್ನು ಅವನು ಮಾಡಿರುವುದರ ಹಿಂದಿನ ಕಾರಣವೂ ಸ್ವಾರಸ್ಯಕರವಾಗಿದೆ: 'ನೀನು ಜತೆಗಿಲ್ಲ ಅಂದ್ರೆ ಮಣ್ಣಿನಡಿಯಲ್ಲಿ ನಾನು ಮಲಗಲ್ಲಪ್ಪ, ನಂಗೆ ಭಯವಾಗುತ್ತೆ.'

ಬೇರೆಯವರ ಮನೆಯಲ್ಲಿ ದುಡಿಯುವ ಒರೋತ ಕೆಲಸ ಮುಗಿಸಲು ತಡವಾದ ದಿನಗಳಲ್ಲಿ 'ಇಲ್ಲೇ ಬಿದ್ಕೊಂಡರಾಗುವುದಿಲ್ಲವೆ?' ಎಂದು ಮನೆಯೊಡತಿ ಸಲಹೆ ಕೊಡುತ್ತಾಳೆ. ಆದರೆ ಒರೋತ ಹಾಗೆ ರಾತ್ರಿ ಧಣಿಗಳ ಮನೆಯಲ್ಲಿ ಉಳಿದುಕೊಳ್ಳುವುದು ಶಕ್ಯವಿಲ್ಲ. ಯಾಕೆಂದರೆ ರಾತ್ರಿ ಹೊತ್ತು ಮನೆಯಲ್ಲಿ 'ಒಂಟಿಯಾಗಿ ಇರುವುದೆಂದರೆ ಆಯಪ್ಪನಿಗೆ ಭಯ.' ಹೀಗಾಗಿ ತಡರಾತ್ರಿಯಾದರೂ ತೆಂಗಿನ ಸೋಗೆಯ ಸೂಡಿಯನ್ನು ಉರಿಸಿ ಹಿಡಿದುಕೊಂಡು ಮನೆಯತ್ತ ನಡೆಯುವ ಒರೋತಳ ಕೈಯಲ್ಲಿ ಅವನಿಗಿಷ್ಟವೆಂದು ಮನೆಯೊಡತಿ ಕೊಟ್ಟ ಕೋಳಿಸಾರಿನ ಎರಡು ಹೋಳು ಕೂಡ ಇವೆ. ಹಲವು ಜನ ನೇಣು ಹಾಕಿಕೊಂಡು ಸತ್ತಿರುವ ಕಸಿಮಾವಿನ ತೋಪು ದಾಟುವಾಗ ದೆವ್ವಗಳು ಅವಳನ್ನು ಹೆದರಿಸಲು ಯತ್ನಿಸುತ್ತವೆ. 'ಮಾಂಸದ ಒಂದು ಹೋಳಾದರೂ ಇಟ್ಟು ಹೋಗಮ್ಮಾ' ಎಂದು ಬೇಡುತ್ತವೆ.

ಎಲ್ಲರನ್ನೂ ಗುರುತು ಹಿಡಿದು ಅವರ ದೌರ್ಬಲ್ಯಗಳನ್ನು, ಮಾಡಿದ ತಪ್ಪುಗಳನ್ನು ಎತ್ತಿ ವಿಮರ್ಶಿಸುತ್ತ ತೆಪ್ಪಗಾಗಿಸುವ ಒರೋತ ಮನೆ ಮುಟ್ಟಿದಾಗ ಹೆಜ್ಜೆ ಸಪ್ಪಳಕ್ಕೆ ಹೆದರಿ ನಡುಗುವ ಗಂಡ ಕಂಪಿಸುತ್ತ 'ಯಾ... ಯಾರದು?' ಎಂದು ಕೇಳುತ್ತಾನೆ. ಈ ಪ್ರಶ್ನೆಗೆ ಒರೋತ ನೀಡುವ ಉತ್ತರ ತುಂಬ ಅರ್ಥಪೂರ್ಣವಾಗಿದೆ ಮತ್ತು ಒಟ್ಟು ಕತೆಯ ಆಶಯವನ್ನು ಧ್ವನಿಸುವಂತಿದೆ: 'ನಾನಲ್ಲವೇನೋ ಗಂಡಸೇ! ಬಾಗಿಲು ತೆಗೆ!' ಕೇವಲ ಪುರುಷನಾಗಿ ಹುಟ್ಟಿದ ಮಾತಕ್ಕೆ ಒಬ್ಬಾತ ಧೈರ್ಯಸ್ಥನಾಗಿರುವುದು ಮತ್ತು ಹೆಣ್ಣೆಂಬವಳು ಕೇವಲ ತನ್ನ ಹುಟ್ಟಿನ ಕಾರಣವಾಗಿ ಅಂಜುಗುಳಿಯಾಗಿರುವುದು ಶಕ್ಯವಿಲ್ಲ ಎಂಬ ಪ್ರತಿಪಾದನೆ ಕತೆಯಲ್ಲಿದೆ.

ಅಬಲೆಯೆಂಬ ಕಾರಣಕ್ಕೆ ವಿಧಿಸಲಾಗುವ ನಿರ್ಬಂಧಗಳು ಹೆಣ್ಣಿನ ದಾರಿಯನ್ನು ಮೊಟಕುಗೊಳಿಸಿವೆ. ಅವಳ ಬದುಕನ್ನು ಅಶಾಂತವಾಗಿಸಿವೆ. ನಿರ್ಬಂಧಗಳನ್ನು ಮೀರಿ ತಮ್ಮ ಸಾಮರ್ಥ್ಯವನ್ನು ಅನಾವರಣಗೊಳಿಸಲು ಸ್ತ್ರೀಯರು ಬಯಸುತ್ತಾರೆ. 'ಅವನು' ಎಂಬ ಸಣ್ಣಕತೆಯಲ್ಲಿ ಸಾರಾ ಜೋಸೆಫ್ ಅವರು ಈ ವಿಚಾರದೆಡೆಗೆ ಗಮನಸೆಳೆಯುತ್ತಾರೆ. ಊರವರ ದೃಷ್ಟಿಯಲ್ಲಿ 'ಗಂಡಸಿನಂಥಾ ಹೆಣ್ಣುಮಗಳು' ಎನಿಸಿಕೊಂಡಿರುವ ಸೌದಾಮಿನಿ ಹೆಣ್ಣಾಗಿ ಹುಟ್ಟಿಯೂ ಗಂಡಿನಂತೆ ಬೆಳೆದವಳು. ಗಂಡಿಗೆ ಯಾವ ದೃಷ್ಟಿಯಲ್ಲಿಯೂ ಕಮ್ಮಿಯೆನಿಸದಂತೆ ಹೊಲದಲ್ಲಿ, ಹಿತ್ತಿಲಲ್ಲಿ, ಕಂಪೆನಿಯಲ್ಲಿ, ಇಟ್ಟಿಗೆಚೌಕದಲ್ಲಿ ದುಡಿದು ಸಿಕ್ಕಿದ್ದನ್ನು ತಂದೆ, ತಾಯಿ, ಅಕ್ಕಂದಿರಿಗೆ, ಇಷ್ಟಮಿತ್ರರಿಗೆ ಕೊಟ್ಟವಳು. ಮಧ್ಯರಾತ್ರಿಯಲ್ಲಿ ಅಕ್ಕನಿಗೆ ಹೆರಿಗೆಬೇನೆ ಬಂದಾಗ ಎಡೆಬಿಡದೆ ಸುರಿಯುತ್ತಿದ್ದ ಮಳೆಯಲ್ಲಿ ಉಕ್ಕಿಹರಿಯುತ್ತಿದ್ದ ಹೊಳೆಯನ್ನು ದಾಟಿ, ಸೂಲಗಿತ್ತಿಯನ್ನು ಕರೆತಂದ ಸಾಹಸಿ. ಆದರೆ ಗಂಡಿನಂತೆ ದುಡಿದು ಸಂಪಾದಿಸಿದರೂ ಗಂಡಿಗೆ ಸಿಗುವ ಸ್ವಾತಂತ್ರ್ಯ ಗೌರವಗಳು 'ಹೆಣ್ಣಾಗಿ ಹುಟ್ಟಿದ ಕಾರಣಕ್ಕೆ' ಅವಳಿಗೆ ಸಿಗುವುದಿಲ್ಲ. 'ಐದು ಹೆತ್ತರೂ ಒಂದು ಗಂಡುದಿಕ್ಕಿಲ್ಲದೆ ಹೋದ ನೋವು ಊಟದಲ್ಲೂ ನಿದ್ರೆಯಲ್ಲೂ ಕಾಡುವ' ಕಾರಣಕ್ಕೆ ಅಸಂತುಷ್ಟರಾಗಿರುವ ಅವಳ ತಾಯಿ 'ಎಷ್ಟಾದರೂ ಒಬ್ಬ ಹೆಣ್ಣಿಗೆ ಇಷ್ಟೇ ತಾನೆ ಸಾಧ್ಯ?' ಎಂದು ನಿಡುಸುಯ್ಯುತ್ತಿರುತ್ತಾರೆ. ಮಗಳು ಗಂಡಿಗೆ ಸಮಸಮವಾದ ಶಕ್ತಿಯಿಂದ ದುಡಿದರೂ ರೂಪದಲ್ಲಿ ಹೆಣ್ಣಾಗಿರುವ ಕಾರಣ ಅಬಲೆಯೆಂದೇ ತಾಯಿ ಭಾವಿಸಿದ್ದಾರೆ. ಇದು ಸೌದಾಮಿನಿಗೆ ಕಿರಿಕಿರಿಯನ್ನು ಉಂಟುಮಾಡುತ್ತದೆ. ಆತ್ಮವಿಶ್ಲೇಷಣೆಗೆ ಹಚ್ಚುತ್ತದೆ.

'ದುಡಿದು ಗಟ್ಟಿಯಾಗಿ ಕಪ್ಪುಶಿಲೆಯಾದ' ಸೌದಾಮಿನಿಗೆ ಕೊನೆಗೂ ತಾನು ಸ್ವಭಾವದಲ್ಲಿ ಹೆಣ್ಣಲ್ಲ, ಹೆಣ್ಣಿನಂತೆ ನಿರ್ಬಂಧದ ಕೋಟೆಯೊಳಗೆ ಬದುಕುವುದು ತನ್ನಿಂದ ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿ, ಲಿಂಗ ಬದಲಾವಣೆ ಮಾಡಿಕೊಳ್ಳಲು ನಿಶ್ಚಯಿಸುತ್ತಾಳೆ. ಹಾಗೆ 'ಅವನು' ಆಗಿ ಮನೆಗೆ ಮರಳಿದ ಸೌದಾಮಿನಿಯನ್ನು ತಂದೆ, ತಾಯಿ, ಅಕ್ಕಂದಿರು ಗೌರವಿಸುತ್ತಾರೆ. "ಮಗನೇ ಮುದ್ದಾ, ಇನ್ನು ನೀನೇ ನೋಡಿಕೋ. ನಾನೀ ಚಿಟ್ಟೆ ಮೇಲೆ ಹಾಯಾಗಿ ಮಲಗ್ತೀನಿ" (ಪು. ೩೧, ಮಲಯಾಳದ ಪ್ರಸಿದ್ಧ ಪೆಣ್

ಕಥೆಗಳು) ಎಂದು ತಂದೆಯೂ, 'ಮನೆಗೀಗ ಒಂದು ಗಂಡು ದಿಕ್ಕಾಯ್ತು. ಇನ್ನು ಮುಂದೆ ಎಲ್ಲರೂ ನಿನ್ನ ನೆರಳಲ್ಲಿ' ಎಂದು ಅಮ್ಮನೂ ನಿರಾಳವಾಗುತ್ತಾರೆ. 'ಕೇಳೋರು ಒಬ್ಬರಿದ್ದಾರೆ ಅಂತ ಆಯ್ತಲ್ಲ? ಇನ್ನು ನಿನ್ನ ಭಾವ ನನ್ನನ್ನು ಹೊಡೆಯಲು ಸ್ವಲ್ಪ ಹಿಂದೆಮುಂದೆ ನೋಡಿಯಾರು' ಎಂದು ಅಕ್ಕ ಸಮಾಧಾನಪಡುತ್ತಾಳೆ. ಗಂಡಾಗಿ ಮಾರ್ಪಟ್ಟ ಸೌದಾಮಿನಿಗೆ ಬಹುಕಾಲದಿಂದ ಬಯಸಿದ್ದಂತೆ 'ಗಾಳಿಯಂತೆ ಯಥೇಚ್ಛವಾಗಿ ಹೀರಿ ಕುಡಿಯುವಷ್ಟು' ಸ್ವಾತಂತ್ರ್ಯವೂ ಕುಟುಂಬದಲ್ಲಿ ಗೌರವವೂ ಸಿಕ್ಕಿವೆ. ಗಂಡಾಗಿರುವ ಸೌದಾಮಿನಿಯೀಗ 'ತಂದೆಯ ಜೊತೆ ಕುಳಿತುಕೊಳ್ಳಬಹುದು, ಮನೆಯ ಚಿಟ್ಟೆಯಲ್ಲಿ ಕುಳಿತು ಕಾಲಾಡಿಸಬಹುದು.' ಆದರೆ ಹೆಣ್ಣಾಗಿದ್ದಾಗಿನ ಅನುಭವಗಳು ಅವಳು ಗಂಡಾದ ನಂತರವೂ ಮಾಯದೆ ನೋವುಂಟುಮಾಡುವಂಥವು. ಹಾಗಾಗಿ 'ಅವಳ ಬದುಕು ಒಂದು ದುಸ್ವಪ್ನದಂತೆ ಒಳಗೆ ಸದಾ ಕುದಿಯುತ್ತಿರಬಹುದು. ಆದ್ದರಿಂದ ಅವನ ಬದುಕು ಅಶಾಂತವಾಗಿರಬಹುದು' ಎಂದು ಕಥೆಗಾರ್ತಿ ಅಭಿಪ್ರಾಯಪಡುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಸಮಾಜವು ದೊರಕಿಸಿಕೊಡುವ ಅನುಭವಗಳು ಹೆಣ್ಣಿನ ಬದುಕನ್ನು ಒಂದು ಕುದಿಬಿಂದುವಿನಲ್ಲಿಟ್ಟಿವೆ; ಅವಳ ಬದುಕನ್ನು ಅಭದ್ರವಾಗಿಸಿ ನೆಮ್ಮದಿಯನ್ನು ಕಸಿದಿವೆ.

ಉರೂಬ್ ಅವರು ಬರೆದಿರುವ 'ಸುಂದರಿಯರು ಸುಂದರರು' ಕಾದಂಬರಿಯ ರಾಧೆ ದಿನದಲ್ಲಿ ಒಂದು ಹೊತ್ತಿನ ಊಟಕ್ಕೂ ಕಷ್ಟಪಡಬೇಕಾದ ಬಡ ಮಾಸ್ತರರೊಬ್ಬರ ಕುಟುಂಬದಲ್ಲಿ ಹುಟ್ಟಿ ಮನೆಯ ಕಷ್ಟಪರಂಪರೆಯಿಂದಲೇ ಗಟ್ಟಿಯಾದವಳು. ದಂಗೆಯಲ್ಲಿ ಹುಟ್ಟಿದ ಮಗುವಾಗಿದ್ದ ವಿಶ್ವನನ್ನು 'ದೇವರು ಕೊಟ್ಟ ಮಗು'ವಾಗಿ ಅಪ್ಪ ಅಮ್ಮ ಸ್ವೀಕರಿಸಿದಾಗ ಕಿರಿಯ ತಮ್ಮನೆಂದು ಭಾವಿಸಿ ಪ್ರೀತಿಯಿಂದ ಸಲಹಿದ್ದಾಳೆ. ಮನೆಯ ಹಿರಿಯ ಮಗಳಾಗಿ ತನ್ನ ಬೆನ್ನು ಬಿದ್ದವರನ್ನೂ, ವೃದ್ಧಾಪ್ಯದ ಅಪ್ಪನನ್ನೂ, ಅಸೌಖ್ಯದ ಅಮ್ಮನನ್ನೂ ನೋಡಿಕೊಳ್ಳುವ ಹೊಣೆ ತನ್ನ ಮೇಲೆ ಬಿದ್ದಾಗ ಅಳುಕದೆ ಶಕ್ತಿಮೀರಿ ನಿಭಾಯಿಸಿದವಳು. ಕುಟುಂಬದ ನಿರ್ವಹಣೆಗೆ ಅನಿವಾರ್ಯವಾದಾಗ ಇನ್ನೊಬ್ಬರ ಮನೆಯಲ್ಲಿ ಕೆಲಸ ಮಾಡಲೂ ಹಿಂಜರಿದವಳಲ್ಲ. ಇಂದಲ್ಲ ನಾಳೆ ಸಮಸ್ಯೆಗಳ ಪರಿಹಾರವಾದೀತು ಎಂಬ ನಂಬಿಕೆಯೊಂದಿಗೆ ದುಃಖವನ್ನು ನುಂಗಿ ಮುಂದುವರಿಯುವುದನ್ನು ಅಭ್ಯಾಸ ಮಾಡಿಕೊಂಡಿರುವ ಛಲಗಾತಿ. ತಂದೆಯ ಶಿಷ್ಯ ಕುಂಞಿರಾಮನ್‌ನನ್ನು ಪ್ರೇಮಿಸಿದ್ದ ರಾಧೆ ಕೆಲಸ ಹುಡುಕುತ್ತಾ ಊರು ಬಿಟ್ಟ ಅವನನ್ನು ಸೇರಿಕೊಳ್ಳುವುದಕ್ಕಾಗಿ ಸಾವಿರಾರು ಮೈಲಿ ಪ್ರಯಾಣ ಮಾಡಿದ ದಿಟ್ಟೆ. ಆದರೆ ಕಾರ್ಮಿಕರ ಸಮಸ್ಯೆಗಳ ನಿವಾರಣೆಗಾಗಿ ಹೋರಾಡುತ್ತ ಕುಂಞಿರಾಮನ್ ಜೀವತೆತ್ತಾಗ ಬದುಕುವ ಆಸಕ್ತಿಯನ್ನು ಕಳೆದುಕೊಳ್ಳುತ್ತಾಳೆ.

ಕುಂಞಿರಾಮನ್ ಉಪದೇಶಿಸಿದಂತೆ ಸ್ವಾರ್ಥವಿಲ್ಲದೆ 'ಚೆನ್ನಾಗಿ ಪ್ರೀತಿಸುವುದನ್ನು' ಕಲಿತಿದ್ದ ರಾಧೆ ಅವನ ಸಾವಿನೊಂದಿಗೆ ಮುಗಿದೇಹೋಯಿತು ಎಂಬಂತಾಗಿದ್ದ ಬದುಕಿನ ಉತ್ಸಾಹವನ್ನು ಮತ್ತೆ

ತಂದುಕೊಳ್ಳುವುದು ಪ್ರಕೃತಿಯ ಸಾನ್ನಿಧ್ಯದಲ್ಲಿ. ಪ್ರಕೃತಿಯ ಅಸದೃಶವಾದ ಜೀವಶಕ್ತಿಯು ಅಡೆತಡೆಗಳನ್ನು ಲೆಕ್ಕಿಸದೆ ಮುಂದಕ್ಕೆ ಸಾಗುತ್ತಲೇ ಇರುತ್ತದೆ. ಕಡಿದಷ್ಟೂ ಚಿಗುರುವ, ಕಿತ್ತು ತೆಗೆದು ಇನ್ನೊಂದೆಡೆ ನೆಟ್ಟರೆ ಅಲ್ಲಿ ಮೊಳಕೆಯೊಡೆದು ನಳನಳಿಸುವ 'ನಂದಿಬಟ್ಟಲಿನ ಗಿಡ'ವು ರಾಧೆಯ ಬದುಕಿಗೆ ರೂಪಕವಾಗಿದೆ. ಬದುಕಿರುವಷ್ಟು ಕಾಲ ತಮ್ಮ ಕರ್ತವ್ಯಗಳನ್ನು ಮಾಡುತ್ತಿರಬೇಕು ಎಂದು ಬಯಸುವ ಸಾಮಾನ್ಯ ಸ್ತ್ರೀಯಾಗಿರುವ ರಾಧೆ ಕೃತಿಯ ಆರಂಭದಲ್ಲಿ ಪ್ರಕಟವಾಗಿರುವ ಕಾದಂಬರಿಕಾರರ ಲೋಕದೃಷ್ಟಿಯಂತೆ 'ಸದಾಚಾರಗಳು ಯುಗಧರ್ಮಗಳಾಗಿ ಬದಲಾಗುತ್ತಿರುತ್ತವೆ' ಎಂಬ ಆಶಯವನ್ನು ಪ್ರತಿಪಾದಿಸುತ್ತಾಳೆ. ತಾನು ಎತ್ತಿ ಆಡಿಸಿದ 'ತಮ್ಮನಂತಿದ್ದ' ವಿಶ್ವನನ್ನು ಮದುವೆಯಾಗಿ ಹೊಸ ಜೀವನವನ್ನು ಆರಂಭಿಸುವ ಸಂಕಲ್ಪ ಮಾಡುತ್ತಾಳೆ. ಎಲ್ಲ ನಿರ್ಬಂಧಗಳನ್ನು ಮೀರಿದ ಒಂದು ಜೀವನ್ಮುಖೀ ಸಂಬಂಧದ ಸಾಧ್ಯತೆಯನ್ನು ಆಗುಮಾಡುತ್ತಾಳೆ.

ಬೆನ್ಯಾಮಿನ್ ಅವರು ಬರೆದ 'ಆಡುಜೀವನ' ಕಾದಂಬರಿಯ ಸೈನು ಹೆಣ್ಣಿನ ಸಂಕಲ್ಪಶಕ್ತಿಯ ಪ್ರತೀಕವಾಗಿರುವವಳು. ತಾವೂ ಇತರರಂತೆ ಚೆನ್ನಾಗಿ ಬದುಕಬೇಕೆಂದು ಆಸೆಪಡುವವಳು. ಸಂಸಾರದ ಕಷ್ಟ ತೀರಬೇಕೆಂದರೆ ಪತಿ ನಜೀಬ್ ಗಲ್ಫ್ ರಾಷ್ಟ್ರದಲ್ಲಿ ದುಡಿಯಬೇಕು ಎಂಬ ವಾಸ್ತವವನ್ನು ಅರಿತವಳು. ಅದಕ್ಕಾಗಿ ಬಹಳವಾಗಿ ಪ್ರೀತಿಸುವ ಪತಿಯನ್ನು ಗಲ್ಫ್‌ಗೆ ಹೋಗಲು ಪ್ರೋತ್ಸಾಹಿಸುತ್ತಾಳೆ. ಗಲ್ಫ್‌ನಲ್ಲಿರುತ್ತ ಒಳ್ಳೆಯ ಆದಾಯ ಹೊಂದಿರುವ ತನ್ನ ಇಕ್ಕಾಕ್ಕಂದಿರು ಗಂಡನಿಗೆ ಒಂದು ವೀಸಾ ಕಳಿಸಲಿ ಎಂದು ಬಯಸುತ್ತಾಳೆ. ಆದರೆ ಅವರು ಮನಸು ಮಾಡದೆ ಹೋದಾಗ ಸುಮ್ಮನೆ ಕೂರದೆ ಅನ್ಯ ಮಾರ್ಗಗಳನ್ನು ಶೋಧಿಸುವಂತೆ ಪತಿಯನ್ನು ಪ್ರೇರೇಪಿಸುತ್ತಾಳೆ.

ಕೊನೆಗೊಮ್ಮೆ ಯಾರದೋ ಸಹಾಯದಿಂದ ವೀಸಾ ಸಿಕ್ಕಿದಾಗ ತೆರಬೇಕಾದ ಮೊತ್ತಕ್ಕಾಗಿ ತನ್ನ ಅಣ್ಣಂದಿರಲ್ಲಿ ಕೇಳುವುದು ಅವಳಿಗೆ ಇಷ್ಟವಿಲ್ಲ. ಹುಟ್ಟೂರಿನ ಗೆಳೆಯರಲ್ಲಿ ಸಾಲ ಪಡಕೊಳ್ಳುವಂತೆ ಸೂಚಿಸುತ್ತಾಳೆ. ತನ್ನ ಮೈ ಮೇಲಿದ್ದ ಚೂರುಪಾರು ಚಿನ್ನವನ್ನೂ ಅಡವಿಡಲು ಕೊಟ್ಟು ಸಹಕರಿಸುತ್ತಾಳೆ. ಗಲ್ಫ್‌ನಲ್ಲಿ ದುಡಿದು ಗಳಿಸಿದ ಬಳಿಕ ಅವರ ಸಾಲ ಮರಳಿಸಬಹುದೆಂಬ ಧೈರ್ಯ ಅವಳಿಗೆ. ತುಂಬು ಗರ್ಭಿಣಿಯಾಗಿದ್ದರೂ ತಾನು ಅತ್ತೆಯೊಂದಿಗೆ ಊರಲ್ಲಿದ್ದು ಮಗುವಿನ ಹೆರಿಗೆ, ಪಾಲನೆಗಳನ್ನು ನಿಭಾಯಿಸುತ್ತೇನೆ ಎಂಬ ಆತ್ಮವಿಶ್ವಾಸದಿಂದ ಗಂಡನಿಗೆ ಧೈರ್ಯ ಕೊಡುತ್ತಾಳೆ. 'ನಮ್ಮ ಬದುಕಿಗಾಗುವಷ್ಟು ಅಲ್ಪಸ್ವಲ್ಪ ಸಂಪಾದಿಸಿಕೊಂಡು ವಾಪಾಸು ಬಂದುಬಿಡಿ. ನಮ್ಮ ಸೋದರರಂತೆ ಸಂಪತ್ತು ರಾಶಿ ಹಾಕಿಕೊಳ್ಳುವುದು ಬೇಡ. ಭವ್ಯ ಮಹಲುಗಳು ಬೇಡ. ನಾವು ಸೇರಿ ಬಾಳುವಂಥ ಒಂದು ಜೀವನ. ಅದಷ್ಟೇ ನಮಗೆ ಸಾಕು' ಪತಿಯನ್ನು ಬೀಳ್ಕೊಡುವಾಗ ಅವಳಾಡುವ ಈ ಮಾತುಗಳಲ್ಲಿ ವಾಸ್ತವಪ್ರಜ್ಞೆಯಿದೆ. ಲೇಖಕರ ಅಭಿಪ್ರಾಯದಂತೆ 'ಪ್ರಾಯಶಃ ಎಲ್ಲ ಹೆಂಡಂದಿರೂ ತಮ್ಮ ಗಂಡಂದಿರಲ್ಲಿ ಹೇಳಿರಬಹುದಾದ ಮಾತುಗಳು. ಆದರೆ ನಿಜಬದುಕಿನಲ್ಲಿ ಹಾಗಾಗದೆ ಗಲ್ಫ್‌ಗೆ ಹೋದ ಪುರುಷರು

ಇಪ್ಪತ್ತೋ ಮೂವತ್ತೋ ವರ್ಷ ಕಾಲ ಅಲ್ಲೇ ಉದ್ಯೋಗ ಮಾಡುತ್ತಾರೆ. ಹೆಂಗಸರು ಊರಲ್ಲಿ ಮನೆ ಮಕ್ಕಳನ್ನು ನಿಭಾಯಿಸುತ್ತಾರೆ.'

ವಿದೇಶಕ್ಕೆ ಹೋದ ಪತಿಯ ಸುದ್ದಿಯಿಲ್ಲದೆ ಮೂರು ವರ್ಷ ಕಳೆದಾಗಲೂ ಸೈನು ಧೃತಿಗೆಡದೆ ತನ್ನ ನಜೀಬ್ ಮರಳಿ ಬಂದೇ ಬರುತ್ತಾನೆಂದು ತಾಳ್ಮೆಯಿಂದ ಕಾದಿದ್ದಾಳೆ. ಅತ್ತೆಯನ್ನು ಚೆನ್ನಾಗಿ ನೋಡಿಕೊಂಡಿದ್ದಾಳೆ. ಮಗು ನೆಬೀಲ್‌ನನ್ನು ಕಷ್ಟಪಟ್ಟು ಬೆಳೆಸಿದ್ದಾಳೆ. ಮಡದಿಯ ಸದ್ಗುಣ ಮತ್ತು ಬುದ್ಧಿವಂತಿಕೆಯ ಬಗ್ಗೆ ನಜೀಬ್‌ಗೂ ವಿಶ್ವಾಸವಿದೆ. 'ಅವಳು ಯಾವಾಗಲೂ ಹಾಗೆಯೇ. ನಿರಾಸೆಯ ನುಡಿಯೇ ಆ ನಾಲಿಗೆಯಿಂದ ಬರುವುದಿಲ್ಲ. ಎಂಥ ಇಲ್ಲಮೆಯಲ್ಲೂ ಇದೆ ಎಂಬಂತೆ ಸಾಧನೆ ಮಾಡಬಲ್ಲಳು' ಎಂಬಂಥ ಮೆಚ್ಚುಗೆಯಿದೆ. ಪತ್ನಿಯ ಕುರಿತಾದ ವಿಶ್ವಾಸವು ಗಲ್ಫ್ ರಾಷ್ಟ್ರದ ಎಲ್ಲ ಸಂಕಷ್ಟಗಳಿಂದ ಪಾರಾಗಿ ಸುರಕ್ಷಿತವಾಗಿ ಸ್ವದೇಶಕ್ಕೆ ಮರಳುವಲ್ಲಿ ಅವನಿಗೆ ಧೈರ್ಯ ತುಂಬಿದೆ.

೩.೧.೫. ಸ್ತ್ರೀಸಖ್ಯ: ಸಾಮುದಾಯಿಕ ಸ್ತ್ರೀಪ್ರಜ್ಞೆ

'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬ ಸಾಮಾಜಿಕ ಗ್ರಹಿಕೆಯನ್ನು ಸ್ತ್ರೀವಾದವು ಬಲವಾಗಿ ವಿರೋಧಿಸುತ್ತದೆ. ಅತ್ತೆ–ಸೊಸೆ, ಅತ್ತಿಗೆ–ನಾದಿನಿ, ವಾರಗಿತ್ತಿಯರು... ಮುಂತಾಗಿ ಸಾಂಪ್ರದಾಯಿಕ ವೈರಿಗಳಾಗಿ ಪ್ರತಿಪಾದಿಸಲ್ಪಟ್ಟ ಸ್ತ್ರೀಯರು ಪುರುಷನ ಮೇಲಿನ ಸ್ವಾಮ್ಯಕ್ಕಾಗಿ, ಅಥವಾ ಪರಿಸ್ಥಿತಿಯ ಕೈಗೊಂಬೆಗಳಾಗಿ ಪರಸ್ಪರ ಶತ್ರುಗಳಾಗುವುದನ್ನು ಗುರುತಿಸುತ್ತದೆ. ಈ ಆಶಯವನ್ನು ಮಲಯಾಳಂ ಕಥನಗಳಲ್ಲಿ ಕಾಣಬಹುದು. ಸ್ತ್ರೀಯರ ನಡುವಿನ ಪ್ರಾಂಜಲ ಮೈತ್ರಿಯನ್ನು, ಪರಸ್ಪರರ ಬದುಕಿಗೆ ಧೈರ್ಯ ತುಂಬುವ, ನೋವಿಗೆ ಆಸರೆಯಾಗುವ ಬಂಧುತ್ವವಿರುವುದನ್ನು ಕೃತಿಗಳು ಗುರುತಿಸಿವೆ. ಒಟ್ಟು ಜೀವನವ್ಯವಸ್ಥೆಯೆ ಸ್ತ್ರೀವಿರೋಧಿಯಾಗಿರುವಾಗ ತಮ್ಮೊಳಗಿನ ಮೈತ್ರಿ ಸಹಕಾರಗಳ ಮೂಲಕವಷ್ಟೆ ಸ್ತ್ರೀಯರು ನಿರಾತಂಕವಾಗಿ ಬೆಳೆಯಲು ಮತ್ತು ಬದುಕಲು ಸಾಧ್ಯವಿದೆ ಎಂದು ಪ್ರತಿಪಾದಿಸಿವೆ.

ಸಿ.ಹೆಚ್. ಮಾರಿಯತ್ತ್ ಅವರ ಅನುಭವಕಥನವಾಗಿರುವ ಕೃತಿ 'ಕಾಲವು ಅಳಿಸಿದ ಕಾಲ ಗುರುತುಗಳು'. ಅಕಸ್ಮಾತ್ತಾಗಿ ಕಾಲುಗಳ ಚಲನೆಯ ಶಕ್ತಿ ಕಳೆದುಕೊಂಡು ಎರಡನೇ ಕ್ಲಾಸಿಗೆ ಓದು ನಿಲ್ಲಿಸಿ ಬಗೆಬಗೆ ಚಿಕಿತ್ಸೆಗೆ ಒಳಗಾಗಿ ಮನೆಯ ಮೂಲೆ ಸೇರಿದ್ದ ಮಾರಿಯತ್ತ್ ತನ್ನ ಪಾಲಿಗೆ ಮುಗಿದೇಹೋಯಿತು ಎಂದುಕೊಂಡಿದ್ದ ಬದುಕನ್ನು ಪುನರ್‌ಜೀವಿಸಲು ಕಾರಣವಾಗುವವರು ಹಲವು ಮಹಿಳೆಯರು. ಅವಳ ಪ್ರೈಮರಿ ಸ್ಕೂಲಿನ ಕುಞ್ಞಮ್ಮ ಟೀಚರ್ ಹಾಗೂ ಟೀಚರ ಮಗಳು ಲೈಲಕ್ಕ ಒತ್ತಾಸೆಯಾಗಿ ನಿಂತು, ನೇರವಾಗಿ ಹತ್ತನೇ ತರಗತಿ ಪರೀಕ್ಷೆಗೆ ಕುಳಿತು ಪಾಸಾಗಿ, ಕಾಲೇಜಿಗೆ ಸೇರುವಂತೆ ಪ್ರೇರಿಪಿಸುತ್ತಾರೆ. ಸರಿಯಾದ ಅಧ್ಯಾಪಕರನ್ನು ಹುಡುಕಿ ಮನೆಪಾಠದ ವ್ಯವಸ್ಥೆ ಮಾಡಿ ಹುರಿದುಂಬಿಸಿ ಕಾಲೇಜು ದಾಖಲಾತಿ ಅರ್ಜಿ ತುಂಬುವವರು ಉಪನ್ಯಾಸಕಿ ಮಿನಿಟೀಚರ್. ಒಮ್ಮೆ ಕಾಲೇಜಿನ ತರಗತಿಯಲ್ಲಿ

ಕುಳಿತಲ್ಲೇ ಮೂತ್ರವಿಸರ್ಜನೆಯಾಗಿ ಅವಳು ಅಸಹಾಯಕ ಸ್ಥಿತಿಯಲ್ಲಿ ಕುಗ್ಗಿ ಹೋದಾಗ ನೆರವಿಗೆ ಧಾವಿಸುವವರು ಸಹಪಾಠಿ ಸಿಸ್ಟರ್ ಧನ್ಯ. ಕಾಲೇಜು ವ್ಯಾಸಂಗದ ಅವಧಿಯುದ್ದಕ್ಕೂ ಅವಳಲ್ಲಿ ಆತ್ಮವಿಶ್ವಾಸ ತುಂಬುವ, ಸ್ನೇಹಹಸ್ತ ಚಾಚುವ ಸಿಸ್ಟರ್ ಕಾಲೇಜು ಮುಗಿಸಿ ಹೊರಡುವ ಸಂದರ್ಭದಲ್ಲೂ ಮುಂದಿನ ದಿನಗಳಲ್ಲಿ ಅವಳೊಂದಿಗೆ ಮಾನಸಿಕ ಸಾಹಚರ್ಯ ಉಳಿಸಿಕೊಳ್ಳುವ ಭರವಸೆ ನೀಡುತ್ತಾರೆ 'ನಾನು ಪತ್ರ ಬರೆಯದಿದ್ದರೂ ನೆನಪಾದಾಗಲೆಲ್ಲ ನಿನಗಾಗಿ ಪ್ರಾರ್ಥಿಸುತ್ತೇನೆ. ಮುಂದೆಯೂ ನಮ್ಮ ಪ್ರಾರ್ಥನೆಗಳಲ್ಲಿ ನೀನಿರುತ್ತೀ.' (ಪು. ೭೦)

ಅಂಗವೈಕಲ್ಯದ ಎಲ್ಲ ಯಾತನೆ, ಮಾನಸಿಕ ಹಿಂಸೆಗಳನ್ನು ಸಹಿಸಿಕೊಂಡು, ಕೀಳರಿಮೆಯನ್ನು ಮೆಟ್ಟಿನಿಂತು ಛಲ, ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಇಚ್ಛೆಗೆ ರೂಪಕವಾಗುವಂತೆ ಮಾರಿಯತ್ತ್‌ರನ್ನು ನಡೆಸಿದ್ದು ಸ್ತ್ರೀಸಖ್ಯದ ಸಾಮುದಾಯಿಕ ಪ್ರಜ್ಞೆ. ಗೆಲುವಿಗೆ 'ಬದುಕಿನ ಅನೇಕ ಕೊಡುಗೆಗಳಲ್ಲಿ ಅನೇಕ ಸಂತೋಷಗಳ ಜತೆಗೆ ನನ್ನ ಚಿಕ್ಕ ಕೊರತೆಗಳನ್ನು ಮರೆಯುತ್ತೇನೆ. ಬದುಕಲು ಮಾತ್ರವಲ್ಲ, ಬದುಕಿ ತೋರಿಸಿ ಕೊಡಲಿಕ್ಕೂ ಸಹ' ಎಂಬ ಮಾರಿಯತ್ತ್‌ರ ನಿಲುವು ಸಂತೋಷವನ್ನು ತಾನು ಉಂಡು, ಇತರರಿಗೂ ನೀಡುವ ಸಮಾಜಮುಖಿಯಾದ, ಜೀವಪರವಾದ ಹೆಣ್ಣಿನ ನಿರ್ವಚನ. 'ಎಲ್ಲರ ಪ್ರೀತಿ ನನಗಿದೆ. ಹಾಗೆ ನಂಬಿಕೊಳ್ಳುವುದೇ ನನಗಿಷ್ಟ' ಎನ್ನುವ ಮಾರಿಯತ್ತ್ ಕೊರತೆಯಿದೆಯೆಂದು ಕೊರಗದೆ ಅರಳುವ ಹೆಣ್ಣಿನ ಸೃಜನಶೀಲತೆ ಮತ್ತು ಚೈತನ್ಯದ ಸಂಕೇತವಾಗಿದ್ದಾರೆ. ತನ್ನಂತಿರುವ ಇತರರ ಜತೆಗೆ ಅನುಸಂಧಾನ ಸಾಧಿಸಿ ಬದುಕಿನ ಮಹತ್ವವನ್ನು ಅರ್ಥಮಾಡಿಕೊಂಡಿದ್ದಾರೆ.

ಮಧ್ಯವಯಸ್ಸಿನ ಮಹಿಳೆಯೊಬ್ಬಳು ತನ್ನ ಮಗ ಒಂದು ಮಗುವಿನ ತಾಯಿಯಾಗಿರುವ ಹೆಣ್ಣೊಬ್ಬಳನ್ನು ಪ್ರೇಮಿಸಿ ಮದುವೆಯಾಗಲು ನಿರ್ಧರಿಸಿರುವುದನ್ನು ತಿಳಿದು ತೀವ್ರ ತುಮುಲಕ್ಕೆ ಒಳಗಾಗುವುದನ್ನು ನಿರೂಪಿಸುವ ಕತೆ 'ಪ್ರಾಯಶ್ಚಿತ್ತ'. ಕೆ.ಪಿ.ಸುಧೀರಾ ಅವರು ಈ ಕತೆಯನ್ನು ಬರೆದಿದ್ದಾರೆ. ಆ ಹೆಣ್ಣು ಈಗಾಗಲೆ ವಿವಾಹಿತೆ ಎಂಬುದು ಮಹಿಳೆಯ ವಿರೋಧಕ್ಕೆ ಕಾರಣವಲ್ಲ. ಈ ಮದುವೆಯ ಸಾಫಲ್ಯದ ಬಗೆಗಿನ ಅಪನಂಬಿಕೆ ಅವಳ ಅಸಮ್ಮತಿಗೆ ಕಾರಣ. ಯಾಕೆಂದರೆ ಅವಳ ಸ್ವಂತ ಬದುಕಿನಲ್ಲಿ ಅಂಥದೊಂದು ಅನುಭವವಾಗಿದೆ. ಎರಡನೆಯ ಮದುವೆಯಲ್ಲಿ ತಾನು ಅನುಭವಿಸಿದ ಅವಮಾನ, ಚುಚ್ಚುಮಾತು, ಬಿಕ್ಕಳಿಕೆಗಳು ಇನ್ನೊಬ್ಬಾಕೆ ಹೆಣ್ಣಿನ ಬದುಕಲ್ಲಿ ಮರುಕಳಿಸದಿರಲಿ ಎಂಬ ಕಾಳಜಿ ಅಮ್ಮನದು. ಆದರೆ ಮಗ ತನ್ನ ನಿಲುವಿಗೆ ಬದ್ಧನಾಗಿದ್ದಾನೆ, ಆ ಹೆಣ್ಣುಮಗಳನ್ನು ನಿಜವಾಗಿಯೂ ಪ್ರೀತಿಸುತ್ತಾನೆ, ಇದೀಗ ಇಳಿವಯಸ್ಸಿನಲ್ಲಿರುವ ಪತಿಗೂ ಮಾಡಿದ ತಪ್ಪಿನ ಅರಿವಾಗಿ ಖೇದವಾಗಿದೆ ಎಂಬುದು ಖಚಿತವಾದಾಗ ತಾಯಿ ಮದುವೆಗೆ ಸಮ್ಮತಿ ಕೊಡುತ್ತಾಳೆ. ದಶಕಗಳ ಹಿಂದೆ ತಾನು

ಇದ್ದಂಥಾ ಪರಿಸ್ಥಿತಿಯಿಂದ ಒಂದು ಅಸಹಾಯಕ ಹೆಣ್ಣನ್ನು ಪಾರು ಮಾಡಿ ಗೌರವ, ಭದ್ರತೆಗಳಿಂದ ಬದುಕುವ ಅವಕಾಶ ಮಾಡಿಕೊಡುತ್ತಾಳೆ.

ಕೆ.ಪಿ. ಸುಧೀರಾ ಅವರು ಬರೆದಿರುವ ಇನ್ನೊಂದು ಕತೆ 'ಮರಳಿನ ಅರಮನೆಯ ರಾಣಿ' ಯಲ್ಲಿ 'ಬದುಕಿನ ದುರಂತಗಳ, ದುಃಖಗಳ ತೀವ್ರತೆಗಳನ್ನು ತಿಳಿದವರಾದ' ಮೂವರು ಮಹಿಳೆಯರ ನಡುವೆ ಇರುವ ಸ್ನೇಹ, ಸಹಕಾರಗಳನ್ನು ಪ್ರತಿಪಾದಿಸುತ್ತದೆ. ನಿರೂಪಕಿಯ ಮನೆಕೆಲಸದಾಕೆ ನಾರಾಯಣಿಯ ಪತಿ ಬೇಜವಾಬ್ದಾರಿಯ ಕುಡುಕ. ಹಸಿದ ಮಕ್ಕಳ ಬಗ್ಗೆ ಯೊಚಿಸದೆ ಹೆಂಡತಿಯ ಕೈಯಿಂದಲೂ ಹಣವನ್ನು ಕಿತ್ತುಕೊಳ್ಳುವ ಸ್ವಾರ್ಥಿ. ಮೂರು ಮಕ್ಕಳನ್ನು ಒಬ್ಬಳೇ ದುಡಿದು ಸಾಕಬೇಕಾದ ಕಷ್ಟವನ್ನು ಯಾರಿಗೂ ಹೇಳಿಕೊಳ್ಳದ ಸ್ವಾಭಿಮಾನಿಯಾಗಿರುವ ನಾರಾಯಣಿಯನ್ನು ಮನೆಯೊಡತಿ ಮತ್ತು ನಿಯಮಿತವಾಗಿ ಭೇಟಿ ಕೊಡುವ ಆಕೆಯ ಗೆಳತಿ ಶೀಬಾ ಸಹಾನುಭೂತಿಯಿಂದ ನಡೆಸಿಕೊಳ್ಳುತ್ತಾರೆ. ನಾರಾಯಣಿಯ ಪತಿ ಬೇರೆ ಹೆಣ್ಣಿನೊಂದಿಗೆ ಓಡಿಹೋದಾಗ ಧೈರ್ಯ ತುಂಬುತ್ತಾರೆ. ಗಂಡನಿಲ್ಲದ ಕೆಲಸದಾಕೆ ಮತ್ತು ವಿಚ್ಛೇದಿತೆಯಾದ ಒಡತಿಯ ನಡುವೆ ಉತ್ತಮ ಸಾಹಚರ್ಯವಿದೆ. ನೋಯುವ ರಾತ್ರಿಗಳಲ್ಲಿ ಒಡತಿಗೆ ಸಾಥ್ ನೀಡಲು ಬರುತ್ತಿದ್ದ ನಾರಾಯಣಿ ಏನೇನೋ ಕಥೆಗಳನ್ನು ಹೇಳುತ್ತಾಳೆ. ಒಡತಿಯ ಹಾಡುಗಳಿಗೆ ತಾಳ ಹಾಕುತ್ತಾಳೆ. ಹೆಂಗಸರ ನಡುವೆ ಅರಳುವ ಸಂಬಂಧವು ಪರಸ್ಪರರ ಬದುಕನ್ನು ಸಹನೀಯವಾಗಿಸುವುದನ್ನು ಕತೆ ಗುರುತಿಸುತ್ತದೆ.

'ಸುಂದರಿಯರು ಸುಂದರರು' ಕೃತಿಯಲ್ಲಿ ಬಡ ರಾಮನ್ ಮಾಸ್ತರರ ಮಡದಿ ಮಾಧವಿಯಮ್ಮ ತನ್ನ ಮೂರು ಮಕ್ಕಳ ಹೊಟ್ಟೆ ತುಂಬಿಸುವುದೇ ಕಷ್ಟವಾಗಿರುವ ಬಡತನದ ಪರಿಸ್ಥಿತಿಯಲ್ಲಿ ಅನಾಥೆಯಾದ ಗರ್ಭಿಣಿಯೋರ್ವಳನ್ನು ಮನೆಗೆ ಕರೆತಂದು 'ದಾರಿಯಲ್ಲಿ ಹೋಗುತ್ತಿದ್ದ ಪೀಡೆಯನ್ನು ಕುಟುಂಬಕ್ಕೆ ಎಳೆದು ತಂದ' ಗಂಡನ ಬಗ್ಗೆ ಆಕ್ಷೇಪವೆತ್ತಿದರೂ ತುಂಬುಗರ್ಭಿಣಿ ಕುಂಜುಕುಟ್ಟಿಗೆ ಆಶ್ರಯ ಕೊಡುತ್ತಾಳೆ. ಹೆರಿಗೆ ಮಾಡಿಸುತ್ತಾಳೆ. ತೀವ್ರ ಅನಾರೋಗ್ಯಕ್ಕೆ ಒಳಗಾದ ಬಾಣಂತಿಗೆ ಔಷಧವನ್ನೂ ಒದಗಿಸುತ್ತಾಳೆ. ಆಕೆ ಚೇತರಿಸಿಕೊಳ್ಳದೆ ಸತ್ತುಹೋದ ಬಳಿಕ ಅನಾಥನಾದ ಗಂಡುಮಗುವನ್ನು ವಿಶ್ವನಾಥನ್ ಎಂದು ಹೆಸರಿಟ್ಟು ತನ್ನ ಸ್ವಂತ ಮಕ್ಕಳಷ್ಟೇ ಅಕ್ಕರೆಯಿಂದ ಬೆಳೆಸುತಾಳೆ. 'ಆ ಮಗುವನ್ನು ತಾನು ಹೆತ್ತುದಲ್ಲ' ಎಂಬ ಕತೆಯನ್ನೂ ಬಹುತೇಕ ಮರೆಯುತ್ತಾಳೆ. ಕೈಯಲ್ಲಿ ನಿತ್ಯದ ಗಂಜಿ ಬೇಯಿಸಲು ಹಣವಿಲ್ಲದ ಬಡತನದಲ್ಲೂ ಆಕೆ ಇಷ್ಟೆಲ್ಲ ಮಾಡುವುದು 'ಮೇಲೊಬ್ಬನಿದ್ದಾನಲ್ಲ' ಎಂಬ ನಂಬಿಕೆಯಿಂದ. 'ಮಾಧವಿಯಮ್ಮನ ಪ್ರಾರಬ್ಧ! ಹೆತ್ತೂ ಹೆರದಿದ್ದೂ ಬೆಳೆಸ್ಬೇಕು' ಎಂದು ನೆರೆಯವರು ನೆನಪಿಸುವಾಗ 'ದೇವರು ಈ ಬಾರಿ ಹೀಗೆ ಕೊಟ್ಟ. ಅದನ್ನು ಕೈ ನೀಡಿ ಸ್ವೀಕರಿಸಬೇಡವೊ?' ಎಂಬುದು ಮಾಧವಿಯಮ್ಮನ ನಿಲುವು.

ಇ.ಕೆ. ಷೀಬಾ ಅವರು ಬರೆದಿರುವ 'ಲಿಂಗ ಸಮಾನತೆ ಮತ್ತು ಸಾರ್ವತ್ರಿಕತೆ' ಎಂಬ ಕತೆಯಲ್ಲಿ ಬೇರೆ ಬೇರೆ ಹಿನ್ನೆಲೆಯಿಂದ ಬಂದಿರುವ ನೀಲಾಂಜನ, ಅಪೂರ್ಣ ಮತ್ತು ರಸಿಯಾ ಎಂಬ ಮೂವರು ಅವಿವಾಹಿತೆಯರು ಮನೆ ಬಾಡಿಗೆ ಮತ್ತು ಇತರ ಖರ್ಚುಗಳನ್ನು ಹಂಚಿಕೊಂಡು ಒಂದೇ ಮನೆಯಲ್ಲಿ ವಾಸಿಸುತ್ತಿದ್ದಾರೆ. ಮದುವೆಯ ಬಂಧನದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಊರಿನಿಂದ ದೂರದ ನಗರದಲ್ಲಿ ಬೇರೆ ಬೇರೆ ಉದ್ಯೋಗ ಮಾಡುತ್ತಿರುವ ಈ ಗೆಳತಿಯರಿಗೆ ಜಾತಿ ಧರ್ಮಗಳಲ್ಲಿ ನಂಬಿಕೆಯಿಲ್ಲ. ಇತ್ತೀಚೆಗೆ ಅವರ ಆಪ್ತಕೂಟಕ್ಕೆ ರಂಸಾನ್ ಎಂಬ ಒಬ್ಬ ತಮ್ಮನನ್ನೂ ಸೇರಿಸಿಕೊಂಡಿದ್ದಾರೆ. ನಗರದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹಾಜರಾಗುವುದು, ಇಷ್ಟವಾದಾಗ ಸಿನೆಮಾ ನೋಡುವುದು, ವಾರದ ರಜೆಯಲ್ಲಿ ತಮ್ಮ ಆಯ್ಕೆಯ ಅಡುಗೆ ತಯಾರಿಸುವುದು... ಹೀಗೆ ಉತ್ಸಾಹದಿಂದ ಬದುಕುತ್ತಿದ್ದಾರೆ. ನಿರ್ಬಂಧಿಸುವ ಹಿರಿಯರ ಅಂಕೆಯಾಗಲೀ 'ಇನ್ನೂ ಮದುವೆಯಾಗಿಲ್ಲವೆ?' ಎಂದು ಚುಚ್ಚುವ ಊರವರ ಕಿರಿಕಿರಿಯಾಗಲೀ ಇಲ್ಲದೆ, ರಂಸಾನ್ ಕೀಟಲೆ ಮಾಡುವಂತೆ 'ಸೂತ್ರವಿಲ್ಲದೆ ಹಾರುವ ಗಾಳಿಪಟ'ಗಳಂತೆ ನಿರಾಳವಾಗಿದ್ದಾರೆ. ಮೂವತ್ತೊಂದು ದಾಟಿರುವ ನೀಲಾಂಜನ ಸ್ವಂತ ಆಯ್ಕೆಯಿಂದ ಮದುವೆಯಾಗದೆ ಉಳಿದಿರುವವಳು. ಜಾತಿಧರ್ಮಗಳ ಹಂಗಿಲ್ಲದ ವಿಶಾಲ ಮನೋಭಾವದ ಓರ್ವನನ್ನು ಮದುವೆಯಾಗಲು ಬಯಸಿ ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟು ಒಮ್ಮೆ ಪ್ರಯತ್ನಿಸಿ ನಿರಾಶಳಾದ ಬಳಿಕ ಹೀಗೆ ಒಂಟಿಯಾಗಿರುವುದೆ ಹೆಣ್ಣಿಗೆ ಸುಖವೆಂದು ಅರ್ಥಮಾಡಿಕೊಂಡಿದ್ದಾಳೆ. ಹೆತ್ತವರ ಒತ್ತಾಯದ ಮೇರೆಗೆ ವಧುಪರೀಕ್ಷೆಗಾಗಿ ಊರಿಗೆ ಹೋಗಿದ್ದ ರಸಿಯಾಳನ್ನು ನೋಡಲು ಬಂದ ಹುಡುಗ 'ಹುಡುಗಿಗೆ ದಪ್ಪ ಸಾಲದು' ಎಂಬ ಕಾರಣಕ್ಕೆ ಒಪ್ಪಲಿಲ್ಲ ಎಂಬ ಮೆಸೇಜು ಬಂದಾಗ ಸಮಾಧಾನಪಟ್ಟುಕೊಳ್ಳುತ್ತಾಳೆ.

ನಗರದ ಪುರಭವನದಲ್ಲಿ ನಡೆಯುತ್ತಿದ್ದ 'ಲಿಂಗ ಸಮಾನತೆ ಬಗ್ಗೆ ತೆರೆದ ಚರ್ಚೆ' ಎಂಬ ಕಾರ್ಯಕ್ರಮಕ್ಕೆ ಅನಿರೀಕ್ಷಿತವಾಗಿ ಪ್ರವೇಶಿಸಿದ ನೀಲಾಂಜನ ಅಲ್ಲಿ ಪುರುಷರಿಗೂ ಮಹಿಳೆಯರಿಗೂ ಬೇರೆ ಬೇರೆ ಆಸನಗಳನ್ನು ಕಾದಿರಿಸಿರುವ ವಿಪರ್ಯಾಸವನ್ನು ಗಮನಿಸುತ್ತಾಳೆ. ಪ್ರವೇಶದ್ವಾರದಲ್ಲಿ 'ಸಾರ್ವಜನಿಕರಿಗೆ ಮುಕ್ತ ಪ್ರವೇಶ' ಎಂದು ಬರೆದಿದ್ದ ಕಾರ್ಯಕ್ರಮದಲ್ಲಿ ಮುಸ್ಲಿಂ ಪುರುಷರು ಮತ್ತು ಸ್ತ್ರೀಯರು ಮಾತ್ರ ಭಾಗವಹಿಸುತ್ತಿದ್ದು ನೀಲಾಂಜನಳಂಥ ಆಧುನಿಕ ಉಡುಗೆಯ, ಪುರುಷರ ಸಾಲಿನಲ್ಲಿ ಕೂರುವ ಸ್ತ್ರೀಯನ್ನು ಸಹಿಸಿಕೊಳ್ಳಲು ಅಲ್ಲಿರುವ ಯಾರೂ ಸಿದ್ಧರಿಲ್ಲ. ಊರು, ಹೆಸರು, ಜಾತಿ, ಧರ್ಮ, ಉದ್ದೇಶಗಳನ್ನು ಹೇಳಿಕೊಳ್ಳದವರಿಗೆ ಅಲ್ಲಿ ಅವಕಾಶವಿಲ್ಲ. ಈ ಅಸಮಾನತೆಯನ್ನು ಪ್ರಶ್ನಿಸುವ, ಅಥವಾ ಕನಿಷ್ಠ ಪ್ರಶ್ನಿಸುತ್ತಿರುವ ಅವಳನ್ನು ಬೆಂಬಲಿಸುವ ಧೈರ್ಯವನ್ನು ಯಾರೂ ಮಾಡುತ್ತಿಲ್ಲ ಎಂಬುದನ್ನು ಗಮನಿಸಿ ಬೇಸರಗೊಂಡು ಅಲ್ಲಿಂದ ಎದ್ದು ಬರುತ್ತಾಳೆ. ವಿವಾಹ ಮತ್ತು ಧರ್ಮ ಇವು ಎರಡೂ ಸ್ತ್ರೀಯರ ಬದುಕಿಗೆ ಅನಿವಾರ್ಯವಲ್ಲ; ಪರಸ್ಪರ ಸ್ನೇಹ, ವಿಶ್ವಾಸಗಳಿರುವ ಸ್ತ್ರೀಸಖ್ಯವು ವಿವಾಹ

ಮುಂತಾದ ಸಾಂಪ್ರದಾಯಿಕ ಸಂಬಂಧಗಳಿಗಿಂತಲೂ ಬಲವಾಗಿದ್ದು ನೆಮ್ಮದಿ ಕೊಡಬಲ್ಲದು ಎಂಬ ಪ್ರತಿಪಾದನೆ ಕತೆಯಲ್ಲಿದೆ.

'ಪಾತಾಳಪಕ್ಷಿ' ಎಂಬ ಕತೆಯಲ್ಲಿ ಇ.ಕೆ. ಷೀಬಾರವರು ದಿನನಿತ್ಯವೂ ಕಣ್ಣಮುಂದೆ ನಡೆಯುವ ರಸ್ತೆ ಅಪಘಾತದಂಥ ಘಟನೆಗಳನ್ನು ನೋಡಿ ಮರೆತುಬಿಡುವವರ ನಡುವೆ ಅದೇ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬಳು ಆ ಅಪಘಾತವನ್ನು ತಾನು ಬಯಸಿದ್ದರೆ ತಡೆಯಬಹುದಿತ್ತೇನೊ ಎಂಬ ಪಾಪಪ್ರಜ್ಞೆಯಿಂದ ಸಂಕಟಪಡುವ ಅಪರೂಪದ ಘಟನೆಯೊಂದನ್ನು ನಿರೂಪಿಸಿದ್ದಾರೆ. ಬಸ್ಸಿನ ಚಾಲಕನ ಅಸಹನೆ, ಅವಸರ ಮತ್ತು ಬೇಜವಾಬ್ದಾರಿಯ ಚಾಲನೆಯನ್ನು ಆಕೆ ಆರಂಭದಿಂದಲೂ ಗಮನಿಸಿದ್ದಾಳೆ. ಆದರೆ ಬಸ್ಸಿನಲ್ಲಿದ್ದ ಇತರರಂತೆ ಆಕ್ಷೇಪಿಸದೆ ಸುಮ್ಮನಿದ್ದು ಸಹಿಸಿಕೊಂಡಿದ್ದಾಳೆ. ಹಾಗಲ್ಲದೆ ಒಂದುವೇಳೆ ಗಟ್ಟಿಯಾಗಿ ಅಸಮಾಧಾನ ವ್ಯಕ್ತಪಡಿಸಿದ್ದರೆ ಚಾಲಕ ಕೊಂಚ ಎಚ್ಚರಿಕೆಯಿಂದ ಇರುತ್ತಿದ್ದ; ಆಗ ಸ್ಕೂಟರ್‌ನ ಸವಾರ ಬಸ್ಸಿನ ಚಕ್ರದ ಅಡಿಯಲ್ಲಿ ಬಿದ್ದು ಸಾಯುತ್ತಿರಲಿಲ್ಲ ಎಂಬ ಯೋಚನೆ ಅವಳ ನೆಮ್ಮದಿಗೆಡಿಸಿದೆ. ಹಾಗಾಗಿ ಆ ಅಪಘಾತಕ್ಕೆ ತಾನೂ ಹೊಣೆಗಾರಳೇ ಎಂಬ ಅಪರಾಧಿಪ್ರಜ್ಞೆ ಕಾಡಿದೆ. ಕೇವಲ ಯೋಚನೆಯ ಮಟ್ಟಕ್ಕೆ ನಿಂತುಬಿಡದೆ ಅಪಘಾತದಲ್ಲಿ ಜೀವ ಕಳೆದುಕೊಂಡವನ ಮನೆಯ ವಿಳಾಸವನ್ನು ಪತ್ರಿಕೆಯವರಿಂದ ಪಡೆದು ಹುಡುಕಿಕೊಂಡು ಹೋಗಿ ದಿಕ್ಕುತೋಚದೆ ಕುಳಿತಿದ್ದ ಅವನ ವಿಧವೆ ಮತ್ತು ಮೂರು ಹೆಣ್ಣುಮಕ್ಕಳ ಪಾಲಿಗೆ ಬಹಳ ಅಗತ್ಯವಾಗಿದ್ದ ಆರ್ಥಿಕ ನೆರವನ್ನು ನೀಡುತ್ತಾಳೆ. ದುಡಿಯುವ ಗಂಡಸನ್ನು ಕಳೆದುಕೊಂಡು ನಿಟ್ಟುಸಿರಿಡುವ ಹೆಣ್ಣೊಬ್ಬಳ ನೋವು ಸಂಕಟಗಳನ್ನು ಇನ್ನೊಬ್ಬಳು ಹೆಣ್ಣು ಮಾತ್ರವೆ ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲಳು. ಗುರುತು ಪರಿಚಯವಿಲ್ಲದ ಯಾವುದೋ ಹೆಣ್ಣಿನ ನೋವಿನಲ್ಲಿ ಭಾಗಿಯಾಗುವ ಈ ಸ್ತ್ರೀಮೈತ್ರಿಯ ಆಶಯವು ಮಹಿಳೆಯರ ನಡುವಿನ ಸಂಬಂಧಗಳು ಸೌಹಾರ್ದಯುತವೂ ಅಪ್ಯಾಯವೂ ಆಗಿರುವುದು ಸಾಧ್ಯವಿದೆ ಮತ್ತು ಅದು ವರ್ತಮಾನದ ಸಂದರ್ಭದ ಅಗತ್ಯವಾಗಿದೆ ಎಂದು ಪ್ರತಿಪಾದಿಸುತ್ತದೆ.

ತಾನು ಮತ್ತು ತನ್ನದು ಎಂಬ ಸಂಕುಚಿತ ಪ್ರಪಂಚದಲ್ಲಿ ಬದುಕುವ ಸ್ವಾರ್ಥಿಗಳು ಎಂಬ ಸಮಾಜದ ಸಿದ್ಧಗ್ರಹಿಕೆಗೆ ಭಿನ್ನವಾಗಿ, ಪರಸ್ಪರ ಸಹಕಾರ ಮತ್ತು ಹಂಚಿಕೊಳ್ಳುವ ಗುಣಗಳಿಂದ ನೆಮ್ಮದಿ ಕಂಡುಕೊಳ್ಳುವ ಮಹಿಳೆಯರ ಸಾಮುದಾಯಿಕ ಸ್ತ್ರೀಪ್ರಜ್ಞೆಯನ್ನು ಮಲಯಾಳಂ ಕೃತಿಗಳು ಚಿತ್ರಿಸಿವೆ. ಹೀಗೆ ಹೆಂಗಸರು ಪರಸ್ಪರರ ಅಗತ್ಯಕ್ಕೆ ಒದಗಿಬರುವ ಮೂಲಕ ಒಟ್ಟು ಸ್ತ್ರೀಬದುಕು ಹಸನಾಗಬಲ್ಲುದು ಎಂಬ ಆಶಯವನ್ನು ವ್ಯಕ್ತಪಡಿಸಿವೆ. ಸ್ತ್ರೀಯರ ನಡುವಿನ 'ಸಹೋದರಿ ಪ್ರಜ್ಞೆ'ಯು ಮಹಿಳಾ ಸಶಕ್ತೀಕರಣವನ್ನು ಸಾಧಿಸುವಲ್ಲಿ ಒಂದು ಬಲವಾದ ಅಂಶವಾಗಿದೆ.

೩.೧.೬. ಕಾಲ್ಪನಿಕ ಸ್ತ್ರೀಯರು

ಮಲಯಾಳಂ ಕಥೆಗಳಲ್ಲಿ ತರವಾಡು ಕುಟುಂಬಗಳೊಂದಿಗೆ ತಳುಕು ಹಾಕಿಕೊಂಡಿರುವ ಯಕ್ಷಿಯರ ಪ್ರಸ್ತಾಪ ಮತ್ತೆ ಮತ್ತೆ ಬರುತ್ತದೆ. ಸಾಂಪ್ರದಾಯಿಕ ಕಲ್ಪನೆಯಂತೆ ಈ ಯಕ್ಷಿಯರು ತಾವು ನೆಲೆಸಿರುವ ಪರಿಸರದೊಂದಿಗೆ, ಅಲ್ಲಿ ಈಗಾಗಲೇ ಸತ್ತು ಹೋಗಿರುವ ಅತೃಪ್ತ ಆತ್ಮಗಳೊಂದಿಗೆ ಸಂಬಂಧ ಹೊಂದಿದ್ದಾರೆ. ತಾವು ಸೇರಿರುವ ಕುಟುಂಬದ ಆಗುಹೋಗುಗಳನ್ನು ಗಮನಿಸುತ್ತಾರೆ. ಅಲ್ಲಿನ ಸೊತ್ತುಗಳನ್ನು ರಕ್ಷಿಸುತ್ತಾರೆ. ಲೌಕಿಕದ ಸ್ತ್ರೀಯರೊಂದಿಗೆ ಸಂಪರ್ಕ, ಸಂವಹನ ಸಾಧಿಸುವ ಈ ಯಕ್ಷಿಯರು ಮತ್ತು ದೆವ್ವಗಳನ್ನು ಸ್ತ್ರೀವಾದಿ ಸಂಕೇತ ವಿವರಣೆಯ ಚಿಂತನಾ ಕ್ರಮದಲ್ಲಿ 'ಸ್ತ್ರೀಪ್ರತಿಮೆ'ಗಳನ್ನಾಗಿ ಗುರುತಿಸಬಹುದಾಗಿದೆ.

ಎಂ.ಟಿ. ವಾಸುದೇವನ್ ನಾಯರ್ ಬರೆದ 'ಸಣ್ಣ ಪುಟ್ಟ ಭೂಕಂಪಗಳು' ಎಂಬ ಕತೆಯ ಪುಟ್ಟಿಗೆ ನಿಸರ್ಗದೊಂದಿಗೆ ಸೇರಿಕೊಂಡಿರುವ ಇಂದ್ರಿಯಾತೀತ ಆತ್ಮಗಳೊಂದಿಗೆ ನಿತ್ಯ ಸಂಬಂಧವಿದೆ. ಅವಳು ಯಕ್ಷಿ, ಕುಞ್ಞತ್ತೋಲು ಮುಂತಾದವರನ್ನು ಕಾಣುತ್ತಾಳೆ. ಅವರೊಂದಿಗೆ ಆಟವಾಡುತ್ತಾಳೆ. ಮನೆಗೂ ಕರೆದುಕೊಂಡು ಬರುತ್ತಾಳೆ. ಜೊತೆಗೆ ಮನೆಯ ಗಂಡಸರಿಗೆ ತಿಳಿಯದಂತೆ ಈ ಸ್ನೇಹವನ್ನು ನಿಭಾಯಿಸುತ್ತಾಳೆ. ಬ್ರಹ್ಮರಾಕ್ಷಸನ ಕಣ್ಣಿಗೇ ಬೀಳದಂತೆ ಓಡಾಡುವ ವಿಧಾನವನ್ನೂ ಕಲಿತಿದ್ದಾಳೆ. ಅವಳ ಅಜ್ಜಿಗೂ ಮೊಮ್ಮಗಳ ಈ 'ಅದೃಶ್ಯ ಸ್ನೇಹಿತೆ'ಯರ ಬಗ್ಗೆ ಗೊತ್ತಿದೆ. ತನ್ನ ಪ್ರೀತಿಯ ಮೊಮ್ಮಗಳು ಅಲೌಕಿಕ ಶಕ್ತಿಗಳೊಂದಿಗೆ ಒಡನಾಡುವ ಕುರಿತಾಗಿ ಅಜ್ಜಿಗೆ ಆಕ್ಷೇಪವಿಲ್ಲ.

ಈ ಯಕ್ಷಿಯರು ಕೋರೆದಾಡೆ, ಬಿಚ್ಚಿದ ತಲೆಗೂದಲು ಹೊಂದಿದ್ದಾರೆ. ನಡುಮನೆಯಲ್ಲಿ ಕುಳಿತು ತಲೆಬಾಚುತ್ತಾರೆ. ಥೇಟು ಹೆಂಗಸರಂತೆ ಅವರೂ ಜಗಳವಾಡುತ್ತಾರೆ. ಇಷ್ಟವಿಲ್ಲದ ಮನುಷ್ಯರನ್ನು ಕಂಡಾಗ ಕೋರೆದಾಡೆ ಚಾಚುತ್ತಾರೆ. ಪುಟ್ಟಿ ಬೇಡವೆಂದಾಗ ಸಿಟ್ಟು ನಿಯಂತ್ರಿಸಿಕೊಂಡು ಸುಮ್ಮನಾಗುತ್ತಾರೆ. ಸತ್ತ ಅಜ್ಜಿಯನ್ನು ಎಬ್ಬಿಸಿ ಅವಳ ಬಹುಕಾಲದ ಆಸೆಯಾಗಿದ್ದ ಮೊಮ್ಮಗಳ ಮದುವೆಯ ಸಮಾರಂಭವನ್ನು ತೋರಿಸುತ್ತಾರೆ. ಒಂದು ಹೆಣ್ಣು ಜೀವವು ಮತ್ತೊಂದು ಹೆಣ್ಣು ಜೀವದೊಂದಿಗೆ ನಿರಾಯಾಸ ಬೆರೆಯುವ ಈ ಪರಿಕಲ್ಪನೆ ನಿಸರ್ಗದಲ್ಲಿರುವ ಗಿಡ, ಮರ, ನದಿ, ಪ್ರಾಣಿ, ಪಕ್ಷಿಗಳಂತೆಯೇ, ಲೌಕಿಕವಾದ ಜೀವದಾಚೆಗೂ ವಿಸ್ತರಿಸಿ, ಕಣ್ಣಿಗೆ ಕಾಣದ ಅವ್ಯಕ್ತ ಚೇತನಗಳೊಂದಿಗೆ ಸಂವಾದ ಬೆಳೆಸುವುದು ವಿಶೇಷವಾಗಿದೆ.

ಯು.ಎ. ಖಾದರ್ ಬರೆದ 'ಭಗವತಿ ಸೂಟೆ' ಕತೆಯಲ್ಲಿ ಭಗವತೀದೇವಿಯ ಆರಾಧನೆಗೆ ಬಳಸುವ ಕದಿನೆ ಮತ್ತು ಹೂಚಟ್ಟಿಗಳಿಗೆ ಸೂಟೆಯ ಮೂಲಕ ಬೆಂಕಿ ಕೊಡುವ ನೈಪುಣ್ಯವುಳ್ಳ ರಾಮರ್ ಚೆಟ್ಟಿಯಾರನ ಸಾಂಗತ್ಯವನ್ನು ಬಯಸುವ ಕುಂಞಿಚೀರು ಎಂಬ ದೇವತೆಯಿದ್ದಾಳೆ. ಅವನು ಪ್ರತಿದಿನ

ಕದಿನೆಗೆ ಬೆಂಕಿ ಕೊಡುವಾಗ ಅವನಿಗೆ ಸಹಾಯ ಮಾಡುವ ಈ ದೇವತೆ ಅವನ ಮಗಳಿಗೆ ಚೊಚ್ಚಲ ಹೆರಿಗೆಬೇನೆ ಬಂದು ಅಪ್ಪನನ್ನು ನೆನಪಿಸಿಕೊಳ್ಳುತ್ತಿದ್ದ ಸರಿರಾತ್ರಿಯ ಹೊತ್ತಿನಲ್ಲಿ ಚೆಟ್ಟಿಯಾರನ್ನು ಮಗಳ ಮನೆಗೆ ತಲುಪಿಸುತ್ತಾಳೆ. ಮುಂದೆಂದಾದರೂ ಅವನು ವಾಸಿಸುವ ರಾಮಚ್ಚಂಕಂಡಿಯ ಮನೆಯ ಪಡಸಾಲೆಯಲ್ಲಿ ನೆಲೆಯಾಗುವ ಆಸೆಯನ್ನೂ ಅವಳು ಹೊಂದಿದ್ದಾಳೆ. ಅವಳ ಸಾಂಗತ್ಯವೆ ಅವನಿಗೆ ಇಳಿವಯಸ್ಸಿನಲ್ಲೂ ಭಗವತಿಯ ಸೂಟೆ ಉರಿಸುವಂಥ ಸಾಹಸೀ ಕೆಲಸಕ್ಕೆ ಬೇಕಾದ ಶಕ್ತಿ ಮತ್ತು ಧೈರ್ಯವನ್ನು ಕೊಟ್ಟಿವೆ.

'ಒರೋತ ಮತ್ತು ದೆವ್ವಗಳು' ಕತೆಯಲ್ಲಿ ಮಾವಿನತೋಪಿನಲ್ಲಿ ನೇತಾಡುತ್ತಲೇ ಹೊರಪ್ರಪಂಚದೊಂದಿಗೆ ಸಂವಹನಕ್ಕಾಗಿ ಹಾತೊರೆಯುವ ಹೆಣ್ಣುದೆವ್ವಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಗದರಿದರೆ ಹೆದರುವ, ಬದುಕಿದ್ದಾಗ ಮಾಡಿದ್ದ ತಪ್ಪನ್ನು ನೆನಪಿಸಿದರೆ ಒಪ್ಪಿಕೊಂಡು ತೆಪ್ಪಗಾಗುವ, ಯಾರಿಗೂ ಹಾನಿ ಮಾಡದ ಸ್ವಭಾವದಿಂದಾಗಿ ಈ ದೆವ್ವಗಳು ಲೌಕಿಕದ ಸ್ತ್ರೀಯರಂತೆಯೆ ಭಾಸವಾಗುತ್ತವೆ.

'ಹಗ್ಗ' ಕಾದಂಬರಿಯಲ್ಲಿ 'ಹೊಲೆಯರ ಕುಲದೇವತೆ ಉಗ್ರಕಾಳಿಯ ಕೋಪಕ್ಕೆ ಗುರಿಯಾಗಿ ರಕ್ತಕಾರಿ ಸಾಯಬೇಕಾದೀತು; ಕುಟುಂಬವು ನಾಶವಾದೀತು' (ಪುಟ ೪೪, ಭಾಗ ೧) ಎಂಬ ಭಯಕ್ಕೆ ಊರಿನ ರೈತರು ಯಾರೂ ಹೊಲೆಯರ ಸೊತ್ತು ತೆಗೆದುಕೊಳ್ಳುವುದಿಲ್ಲ. ಹಾಗಾಗಿ ಹೊಲೆಯರು ಹಟ್ಟಿ ಕಟ್ಟಿಕೊಂಡಿದ್ದ ಜಾಗವನ್ನೂ, ಹೊರಲಾಗದಷ್ಟು ಗೊನೆಗಳನ್ನುಳ್ಳ ತೆಂಗಿನಮರಗಳನ್ನೂ ದೇವಳದ ಅನುಭೋಗದ್ದೆಂದು ದಾಖಲಿಸಲಾಗುತ್ತದೆ. 'ಹೊಲೆಯನ ಹಾಗೂ ಪರೆಯನ ಸ್ವತ್ತುಗಳನ್ನು ಕಾಪಾಡುವವಳಾದ ಉಗ್ರಕಾಳಿಯು' ಧರ್ಮಶಾಸ್ತಾರನನ್ನು ಮುಟ್ಟಲಾರಳು ಎಂಬ ಧೈರ್ಯ ಹಾಗೂ ಉಗ್ರಕಾಳಿಯ ಆಸ್ತಿಗಳನ್ನು ಧರ್ಮಶಾಸ್ತಾರ ದಕ್ಕಿಸಬಲ್ಲ ಎಂಬ ನಂಬಿಕೆ ಊರವರದು.

ಎಂ.ಟಿ.ವಾಸುದೇವನ್ ನಾಯರ್ ಅವರು ಬರೆದಿರುವ 'ಪಟಾಕಿ' ಎಂಬ ಕತೆಯಲ್ಲಿ ತನ್ನ ಹುಂಡಿಯ ದುಡ್ಡು ಕದ್ದವರನ್ನು ರಕ್ತ ಕಾರಿ ಸಾಯುವಂತೆ ಅಥವಾ ಹುಚ್ಚು ಹಿಡಿದು ನಾಶವಾಗುವಂತೆ ಮಾಡುವ ಮಹಿಮೆ ಉಳ್ಳವಳಾದ ಭಗವತಿ ಎಂಬ ದೇವಿಯ ಪ್ರಸ್ತಾಪವಿದೆ.

ಕೆಳವರ್ಗದ ಸ್ತ್ರೀಯರನ್ನು ಕಾಯುವುದೆ ಕಾಯಕವಾಗಿರುವ ಸ್ತ್ರೀಪಕ್ಷಪಾತಿಯಾದ ಆಲಾಹ ಎಂಬ ಸ್ತ್ರೀದೈವವು ಸಾರಾ ಜೋಸೆಫ್ ಅವರು ಬರೆದಿರುವ 'ಆಲಾಹಳ ಹೆಣ್ಣುಮಕ್ಕಳು' ಕೃತಿಯ ಉದ್ದಕ್ಕೂ ಒಂದು ಅಗೋಚರ ಪಾತ್ರವಾಗಿ ಓದುಗರ ಅನುಭವಕ್ಕೆ ಬರುವುದನ್ನು ಇಲ್ಲಿ ಉದಾಹರಿಸಬಹುದು. ಹಾಗೆಯೇ 'ದೇವರ ಕಣ್ಣು' ಕೃತಿಯಲ್ಲೂ ಹುಣ್ಣಿಮೆ ಕಳೆದು ಹದಿನಾಲ್ಕನೇ ದಿನದ ರಾತ್ರಿ ಕಹಿಬೇವಿನ ಮರದಲ್ಲಿ ಕೂದಲು ಬಿಚ್ಚಿ ಕುಳಿತು ನಗುತ್ತ ಗಂಡಸರ ರಕ್ತ ಹೀರುವುದಕ್ಕಾಗಿ ಕಾಯುವ 'ಒಟ್ಟಮುಲಚ್ಚಿ' (ಒಂದು ಮೊಲೆಯ ಹೆಂಗಸು) ಭೂತದ ಪ್ರಸ್ತಾಪವಿದೆ. ಹೀಗೆ ಸಾಮಾನ್ಯವಾಗಿ 'ಗಂಡಸರನ್ನು ಮಾತ್ರ'

ಕಾಡುವ ದೆವ್ವಗಳು ಜನರ ನಂಬಿಕೆಯ ಪ್ರಕಾರ 'ಹೆಣ್ಣುದೆವ್ವ'ಗಳಾಗಿರುವುದನ್ನು ಗಮನಿಸಬಹುದು. ಈ ರೀತಿಯಾಗಿ ಕಾಪಾಡುವ, ನಾಶ ಮಾಡುವ ಅಥವಾ ಶಿಕ್ಷೆ ಕೊಡುವ ಮೂಲಕ ಜನರನ್ನು ಹೆದರಿಸಿ ನೈತಿಕತೆಯ ಚೌಕಟ್ಟಿನಲ್ಲಿ ಇರುವಂತೆ ಮಾಡುವ ಇಂಥ ಅಲೌಕಿಕ ಶಕ್ತಿಗಳು ಸಾಮಾನ್ಯವಾಗಿ ಸ್ತ್ರೀರೂಪದವು, ದೇವಿ ಅಥವಾ ಮಾರಿ ಎಂದು ಗ್ರಹಿಸಲಾಗಿರುವಂಥವು ಎಂಬುದನ್ನು ಗಮನಿಸಬಹುದು.

೩.೧.೭. ಅನುಭೋಗ – ವಿಕ್ರಯದ ಸೊತ್ತು

ಹೆಣ್ಣಿನ ಬದುಕಿನ ದಾರಿಗಳನ್ನು ತೆರೆಯುವ ಮತ್ತು ಮುಚ್ಚುವ ಶಕ್ತಿ ಆಕೆಯ ದೇಹವ್ಯಾಪಾರಗಳೊಂದಿಗೆ ಸಂಬಂಧ ಹೊಂದಿದೆ. ಶತಮಾನಗಳ ಕಾಲದಿಂದಲೂ ಹೆಣ್ಣನ್ನು ಸ್ವಂತ ಭಾವನೆಗಳಿಲ್ಲದ ಕೇವಲ ದೇಹ ಮಾತ್ರವಾಗಿ, ಪುರುಷನ ಅನುಭೋಗಕ್ಕೆಂದೇ ಇರುವ ಸೊತ್ತು ಮಾತ್ರವಾಗಿ ಗ್ರಹಿಸಲಾಗಿದೆ ಎಂಬ ಅಂಶವನ್ನು ಮಲಯಾಳಂ ಕಥನಸಾಹಿತ್ಯವೂ ಪುಷ್ಟೀಕರಿಸುತ್ತದೆ. ಪುರುಷರ ದೃಷ್ಟಿಯಲ್ಲಿ ಹೆಣ್ಣು ಅಂದರೆ ಭೋಗದ ವಸ್ತು. ಭೋಗಿಸಿ ಮಣಿಸಬೇಕಾದ, ಪಳಗಿಸಬೇಕಾದ ಸೊತ್ತು. ಒಬ್ಬಳು ಸ್ತ್ರೀಯನ್ನು ಹೊಂದುವುದೆಂದರೆ ಪ್ರತಿಷ್ಠೆಯ ಸಂಗತಿ. ಹಾಗಾಗಿಯೆ ಅವರಿಗೆ ಒಂಟಿ ಹೆಣ್ಣು ಕಂಡಾಗ ಕೀಟಲೆ ಮಾಡುವ, ಅನುಭವಿಸುವ ಪ್ರಚೋದನೆಯಾಗುತ್ತದೆ. ತಮ್ಮ ಹೆಂಡತಿಯಲ್ಲದ ಯಾರೋ ಪರಸ್ತ್ರೀಯೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದೇನೆ ಅನ್ನುವಂಥ ಸಂಗತಿಗಳು ಪುರುಷರ ಮಟ್ಟಿಗೆ ಅಪರಾಧವೆನಿಸದೆ, ಗೆಳೆಯರ ನಡುವೆ ಪ್ರತಿಷ್ಠೆಯ ವಿಷಯವಾಗಿಯೂ ಪ್ರಚಾರ ಪಡೆದುಕೊಳ್ಳುತ್ತವೆ. ಸುಳ್ಳು ಹೇಳಿ, ಪ್ರಲೋಭನೆಗಳನ್ನು ತೋರಿಸಿ, ಸಮುದಾಯದ ಅಜ್ಞಾನವನ್ನು ಬಳಸಿ, ಅಗತ್ಯಬಿದ್ದರೆ ಬಲವನ್ನು ಪ್ರಯೋಗಿಸಿ... ಹೀಗೆ ಹೆಣ್ಣನ್ನು ಪಡೆಯುವ ಹಲವು ದಾರಿಗಳನ್ನು ಗಂಡಸರು ಬಳಸುತ್ತಾರೆ.

ವೈಕ್ಕಂ ಮುಹಮ್ಮದ್ ಬಶೀರ್ ಅವರು ಬರೆದಿರುವ 'ಅಟ್ಟೆಕಾಲ ಮಮ್ಮುಞ್ಞಿ' ಕತೆಯಲ್ಲಿನ ಉಂಡೆಕಣ್ಣ ಅಂದ್ರು, ತನ್ನ ತಾಯಿ ತೀರಿಕೊಂಡ ಬಳಿಕ ಮನೆಕೆಲಸಕ್ಕೆಂದು ಕರೆದುಕೊಂಡು ಬಂದವಳ ಸಂಬಳವನ್ನು ಲೆಕ್ಕಹಾಕಿ, ಅದನ್ನು ಉಳಿಸಲಿಕ್ಕಾಗಿಯೂ, 'ಅಗತ್ಯಬಿದ್ರೆ ಕೂದಲು ಜಗ್ಗಿ ಹೊಡೆಯಲೂಬಹುದು' ಎಂಬ ಪೌರುಷದ ಕಾರಣಕ್ಕಾಗಿಯೂ ಅವಳನ್ನೇ ಮದುವೆಯಾಗುತ್ತಾನೆ. ಪತ್ನಿ ಗರ್ಭಿಣಿಯಾಗಿ ಕೆಲಸ ಮಾಡಲು ಸಾಧ್ಯವಾಗದೆ ಇದ್ದಾಗ ಸಹಾಯಕ್ಕೆಂದು ತಾಚ್ಚಿ ಎಂಬ ಹೆಣ್ಣುಮಗಳನ್ನು ಕರೆದುಕೊಂಡು ಬಂದು ನಂತರದಲ್ಲಿ ಅವಳನ್ನೂ ಕಟ್ಟಿಕೊಳ್ಳುತ್ತಾನೆ. ಮದುವೆಗೆ ಮೊದಲೊಮ್ಮೆ ತಾಚ್ಚಿಯ ಹೊಟ್ಟೆ ದೊಡ್ಡದಾಗಿ ಸಂಶಯ ಬಂದಾಗ ಸತ್ಯ ಹೇಳಿಸುವುದಕ್ಕಾಗಿ ಅಂಗೈಯಲ್ಲಿ ಕೆಂಡ ಇರಿಸಿ ಪ್ರಮಾಣ ಮಾಡಿಸುತ್ತಾನೆ. ಮುಂದೆ ವೈದ್ಯರು ಅದು ಬಸುರಲ್ಲವೆಂದು ತಿಳಿಸಿ ಮದ್ದುಕೊಟ್ಟು ವಾಸಿಮಾಡಿದ ಬಳಿಕ ಅವಳನ್ನು ಮದುವೆಯಾಗುತ್ತಾನೆ. ತಾಚ್ಚಿಯ ಗರ್ಭಕ್ಕೆ ಕಾರಣ ತಾನು ಎಂದು ಸುಳ್ಳು ಹೇಳುತ್ತ ತಿರುಗುತ್ತಿದ್ದ ಅಟ್ಟೆಕಾಲ ಮಮ್ಮುಞ್ಞಿಗೆ ಅವಳನ್ನು ಗರ್ಭಿಣಿಯಾಗಿಸಿದ್ದು ಸಾಹಸದ ಕೆಲಸ ಎಂಬ

ಭಾವನೆಯಿದೆ ಮತ್ತು ಅದಕ್ಕೆ ಗೆಳೆಯರ ಒಪ್ಪಿಗೆಯಿದೆ. ಅವನ ಸಾಹಸಕ್ಕಾಗಿ ಗೆಳೆಯರಿಂದ ಉಚಿತ ಚಾ, ಪುಟ್ಟು, ಬಾಳೆಹಣ್ಣು, ಬೇಯಿಸಿದ ಕಡಲೆ, ಬೋಂಡಗಳ ಉಡುಗೊರೆಯೂ ಸಿಗುತ್ತದೆ. ಈ ಹಿಂದೆ ಅವನನ್ನು 'ಹೆಣ್ಣೂ ಅಲ್ಲದ, ಗಂಡೂ ಅಲ್ಲದ ನಪುಂಸಕ' ಎಂದು ತಿಳಿದಿದ್ದ ಊರ ಹೆಂಗಸರಿಗೆ ಗೌರವ ಹುಟ್ಟುತ್ತದೆ. 'ಏನೇ ಆದರೂ ಅಟ್ಟೆಕಾಲ ಮಮ್ಮುಞ್ಞಿ ಸಮರ್ಥ' ಎಂಬ ಪೀಠಿಕೆಯೊಂದಿಗೆ ಅವರೀಗ ಮಾತಿಗೆ ತೊಡಗುತ್ತಾರೆ. ಹೆಣ್ಣನ್ನು ಲೈಂಗಿಕವಾಗಿ ಮಣಿಸುವುದು ಗಂಡಿಗೆ ಪ್ರತಿಷ್ಠೆಯ, ಪೌರುಷದ ವಿಷಯವಾಗಿದೆ ಎಂಬುದನ್ನು ಸ್ತ್ರೀಯರು ಸೇರಿದಂತೆ ಒಟ್ಟು ಸಮಾಜವು ಒಪ್ಪಿಕೊಂಡಿದೆ.

ಹೆಚ್ಚಿನ ಸಂದರ್ಭಗಳಲ್ಲಿ ಹೆಣ್ಣಿನ ಬಡತನ ಮತ್ತು ಅಧೀನತೆಗಳೆ ಅವಳು ಪುರುಷರ ದಬ್ಬಾಳಿಕೆಯನ್ನು ಸಹಿಸಿಕೊಳ್ಳುವಂತೆ, ಆಮಿಷಗಳಿಗೆ ಬಲಿಯಾಗುವಂತೆ ಮಾಡುವುದನ್ನು ಕೆಲವು ಕೃತಿಗಳಲ್ಲಿ ಕಾಣಬಹುದು. 'ಸುಂದರಿಯರು ಸುಂದರರು' ಕೃತಿಯಲ್ಲಿ ಮನೆಯ ಕೆಲಸಕ್ಕೆ ಬರುವ ರಾಧೆಯನ್ನು ಕಾಡುವ ಕಿರಿಯ ಯಜಮಾನ ಕಾರ್ತಿಕೇಯನ್ 'ನನ್ನ ಕೈಯಲ್ಲಿ ಹಣವಿದೆ. ನಿನಗೆ ಅದರ ಅಗತ್ಯವಿದೆ. ನೀನು ಬಯಸೋವಷ್ಟು ಕೊಡೋದಕ್ಕೆ ನಾನು ಸಿದ್ಧನಾಗಿದ್ದೇನೆ' ಎನ್ನುತ್ತಾನೆ. ಒಂದು ಹರಾಜುಪಟ್ಟಿಯನ್ನು ಓದುವಂತೆ 'ಒಂದು ನೆಕ್ಲೇಸ್ ಅಥವಾ ನೂರು ರೂಪಾಯಿ ನೋಟು ಅಥವಾ ಅದಕ್ಕಿಂತ ಹೆಚ್ಚು ನಿನ್ನ ಮಡಿಲಲ್ಲಿದೆ ಎಂದು ಭಾವಿಸಿಕೋ' (ಪು. ೧೮೦) ಎಂದು ಅವಳ ಕನ್ಯತ್ವಕ್ಕೆ ಬೆಲೆ ಕಟ್ಟುತ್ತಾನೆ. 'ಇಲ್ಲಿ ನಿಂತ್ರೆ ನಾನು ನಿನ್ಗೊಂದು ಭವಿಷ್ಯವನ್ನು ಕಲ್ಪಿಸ್ತೇನೆ. ಅಲ್ಲದಿದ್ರೆ ಇದೋ ದಾರಿ; ನೀನು ನಿನ್ನ ಕಷ್ಟದ ಬದುಕಿಗೆ ಹೋಗು' ಎಂಬ ಆಮಿಷದ ಆಯ್ಕೆಯನ್ನೂ ನೀಡುತ್ತಾನೆ. ಹೆಣ್ಣಿಗೆ ಪ್ರಾಣಕ್ಕಿಂತ ಅಮೂಲ್ಯವೆಂದು ನಂಬಿಸಲಾಗಿರುವ ಶೀಲವೆಂಬುದು ಹಣಕ್ಕೆ ವಿಕ್ರಯಿಸಬಹುದಾದ ಸೊತ್ತು ಎಂದೂ ಸಮಾಜ ಭಾವಿಸಿದೆ.

ತನ್ನ ಮಗ ಕೆಲಸದ ಹೆಣ್ಣನ್ನು ಕಾಡುತ್ತಿರುವುದು ಮನೆಯ ಯಜಮಾನಿಯಾದ ಕಾರ್ತಿಕೇಯನ್‌ನ ತಾಯಿಯ ಗಮನಕ್ಕೆ ಬಂದಾಗ ಆ ಗೃಹಿಣಿ ರಾಧೆಯನ್ನು ಕರೆದು ರಹಸ್ಯವಾಗಿ ಹೇಳುವ ಮಾತುಗಳು ಹೀಗಿವೆ: "ಬುದ್ಧಿ ಇಲ್ಲದ ಹುಡುಗ. ನೀನು ಇಷ್ಟು ಘನತೆ ಇರುವ ಹೆಣ್ಣೆಂದು ತಿಳಿದು ನನ್ಗೆ ತುಂಬ ಸಂತೋಷವಾಯ್ತು. ಗಂಡು ಹುಡುಗರು ತಪ್ತಾರೆ. ಶಿಸ್ತು ಬೇಕಾಗಿರೋದು ಹೆಣ್ಣಿಗೆ. ಏನಾದ್ರೂ ಹೊರಗಡೆ ತಿಳಿದರೆ ಕೆಟ್ಟ ಹೆಸ್ರೂ ನಿನ್ಗೆ ತಿಳೀತೇ?" (ಪು. ೧೮೧) ಅವಳಿಗಾದ ಮಾನಸಿಕ ಹಿಂಸೆಗೆ ಪರಿಹಾರವಾಗಿ ಹತ್ತು ರೂಪಾಯಿಯ ನೋಟೊಂದನ್ನು ಇತ್ತು ಅವರು ಕೈತೊಳೆದುಕೊಳ್ಳುತ್ತಾರೆ. ಆ ನೋಟನ್ನು ಹರಿದು ಅವರ ಮುಖಕ್ಕೆ ಎಸೆಯಬೇಕೆಂಬಷ್ಟು ಸಿಟ್ಟು ಬಂದರೂ ರಾಧೆಯ ಬಡತನ ಅವಳ ಕೈಗಳನ್ನು ತಡೆದಿದೆ. ಕಾರ್ತಿಕೇಯನ್ ನುಡಿದಂತೆ 'ಹಣವಿಲ್ಲದೆ ಈ ಕಾಲದಲ್ಲಿ ಯಾರಿಗೂ ಬದುಕುವುದಕ್ಕೆ ಸಾಧ್ಯವಿಲ್ಲ' ಎಂಬ ಅರಿವು ಅವಳಿಗೂ ಇದೆ. ಹಾಗಾಗಿ ಕೆಲಸದ ಮನೆಯಲ್ಲಿನ ಕಿರುಕುಳವನ್ನು ಮನೆಯಲ್ಲಿ ಹೇಳದೆ ಮುಚ್ಚಿಡುತ್ತಾಳೆ.

ಗಂಡಿನ ಪಾಶವೀ ಶಕ್ತಿಗೆ ಹೆಣ್ಣು ಹೆದರುತ್ತಿರುವಷ್ಟು ಕಾಲವೂ ಲೈಂಗಿಕ ಕಿರುಕುಳವೆಂಬುದು ನಡೆಯುತ್ತಲೇ ಇರುತ್ತದೆ. ಕಮಲಾದಾಸ್ ಅವರು ಬರೆದಿರುವ 'ಭಯ' ಕಥೆಯಲ್ಲಿ ತನಗೆ ಪಾಠ ಹೇಳಿದ ಸೌದಾಮಿನಿ ಟೀಚರರ ಸೌಂದರ್ಯವನ್ನು ಇಷ್ಟಪಡುವ ವೇಣು ವಿದ್ಯಾರ್ಥಿಯಾಗಿದ್ದಾಗಲೇ 'ಟೀಚರ್ ನಿಮ್ಮ ರೂಪ ಕಂಡರೆ ಏನೋ ಒಂದು ರೀತಿಯ ಆನಂದ' ಎಂಬಂಥ ಹಾಡನ್ನು ಕಟ್ಟಿ ಹಾಡಿ ಟೀಚರಿಂದ ಬೆತ್ತದ ಏಟು ತಿಂದವನು. ಈಗ ಅವನು ಬೆಳೆದು ಯುವಕನಾಗಿದ್ದಾನೆ ಮತ್ತು ಅವಿವಾಹಿತೆಯಾದ ಸೌದಾಮಿನಿ ಇನ್ನೂ ಅವನಿಗೆ ಆಕರ್ಷಣೆ ಉಂಟುಮಾಡುವವಳಾಗಿದ್ದಾಳೆ. ಲಯಬದ್ಧವಾಗಿ ಚಲಿಸುವ ದಪ್ಪನೆಯ ನಿತಂಬಗಳು 'ಟೀಚರ್ ದೇಹದ ಸೆಕ್ಸಿ ಭಾಗಗಳು' ಎಂಬ ನಿರ್ಧಾರ ಅವನದು. ಹೆಚ್ಚುವರಿ ಹಣಕ್ಕಾಗಿ ಡಾಕ್ಟರರ ಮಗಳಿಗೆ ಮನೆಪಾಠ ಹೇಳಿಕೊಟ್ಟು ಸೌದಾಮಿನಿ ಮನೆಗೆ ಮರಳುತ್ತಿರುವಾಗ ಸಂಜೆ ಕತ್ತಲಾಗಿದೆ. ಕೊನೆಯ ಬಸ್ಸು ಕೂಡ ಇಲ್ಲದೆ ಆಕೆ ಅಲವತ್ತುಗೊಂಡಿರುವ ಹೊತ್ತಿನಲ್ಲಿ ಅವಳು ಬೇಡಬೇಡವೆಂದರೂ ಕೇಳದೆ ಅವಳನ್ನು 'ಮನೆತನಕ ಮುಟ್ಟಿಸಲು' ವೇಣು ಮುಂದಾಗುತ್ತಾನೆ.

'ಕತ್ತಲಲ್ಲಿ ಒಂಟಿಯಾಗಿರುವ ಹೆಣ್ಣಿನ ರಕ್ಷಣೆಗೆ' ಎಂದು ಜತೆಯಾಗಿ, ಸೌದಾಮಿನಿಯ ದಪ್ಪನೆಯ ನಿತಂಬಗಳ ಚಲನೆಯನ್ನು ನೋಡುತ್ತ ನಡೆಯುವ ವೇಣು ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಿರುವ ಬಲಾತ್ಕಾರಗಳ ಬಗ್ಗೆ ಪ್ರಸ್ತಾಪಿಸಿ ಇನ್ನಷ್ಟು ಭಯಪಡಿಸುತ್ತಾನೆ. 'ಸೌದಾಮಿನಿ ಟೀಚರ್ ಒಮ್ಮೆ ನನ್ನ ಕೈಗೆ ಸಿಕ್ಕಿಹಾಕಿಕೊಳ್ಳಲಿ' ಎಂದು ಕಾಯುವ ಬಹಳಷ್ಟು ಮಂದಿ ಊರಲ್ಲಿ ಇರುವುದನ್ನು ತಿಳಿಸಿ ಅವಳ ಆತಂಕವನ್ನು ಹೆಚ್ಚಿಸುತ್ತಾನೆ. 'ಒಂದು ವಯಸ್ಸಿನಲ್ಲಿ ಗಂಡಿಗೆ ಹೆಣ್ಣಿನ ಮೇಲೆ ಆಶೆ ಉಂಟಾಗುತ್ತದಂತೆ. ಅದರಲ್ಲೇನು ಆಶ್ಚರ್ಯ?' ಎನ್ನುವ ವೇಣುವಿಗೆ ತನ್ನ ಟೀಚರಲ್ಲಿ ಇಂಥ ವಿಷಯಗಳನ್ನು ಮಾತಾಡಲು ಯಾವುದೇ ಮುಜುಗರವಿಲ್ಲ. 'ಸೆಕ್ಸ್ ಎಂಬುದು ದೇಹದ ಅಗತ್ಯಗಳಲ್ಲೊಂದು' ಎಂದು ನಂಬಿರುವ ಆತ ಅವಕಾಶ ಸಿಕ್ಕಿದರೆ ತನ್ನ ಟೀಚರೆಂದು ನೋಡದೆ ಅವಳನ್ನು ಅನುಭವಿಸುವ ಇಚ್ಛೆಯುಳ್ಳವನೇ ಆಗಿದ್ದಾನೆ. 'ಇಷ್ಟಪಡುವವರ ಮನಸ್ಸನ್ನು ತಿಳಿದುಕೊಂಡು ಸಹಕರಿಸದಿದ್ದರೆ ಬಲಾತ್ಕಾರ ನಡೆಯುವುದಂತೂ ಗ್ಯಾರಂಟಿ' ಎಂಬ ಮಾತು ಅವನ ಮನಸ್ಥಿತಿಯನ್ನು ಸೂಚಿಸುತ್ತದೆ. ಅಂಜುತ್ತ ಅಳುಕುತ್ತ ಕೊನೆಗೂ ಸೌದಾಮಿನಿ ಮನೆ ತಲುಪಿದಾಗ "ಈ ಕತ್ತಲಲ್ಲಿ ಏಕಮ್ಮಾ ಒಬ್ಬಳೇ ನಡೆದು ಬಂದೆ? ಯಾವುದಾದರೂ ಹುಡುಗರನ್ನು ಕರ್ಕೊಬಾರದಿತ್ತೆ? ಕಾಲ ಮುಂಚಿನಂತೆ ಇಲ್ಲ. ಪೇಪರಿನಲ್ಲಿ ನೀನು ಓದುತ್ತಾ ಇಲ್ವೆ?" (ಪು. ೫೯, ಕಮಲಾದಾಸ್ ಕತೆಗಳು) ಎಂದು ವಯಸ್ಸಾದ ತಾಯಿ ಕೇಳುವುದು ತನ್ನ ಶಿಷ್ಯನಾಗಿದ್ದ ಹುಡುಗನೊಂದಿಗೆ ನಡೆದುಬರುತ್ತ ಸೌದಾಮಿನಿ ಎದುರಿಸಿದ ಆತಂಕದ ವಿಡಂಬನೆಯಾಗಿದೆ.

ಏಟುಮಾನೂರ್ ಶಿವಕುಮಾರ್ ಅವರು ಬರೆದಿರುವ 'ಮರಣತೋರಣ' ಕಾದಂಬರಿಯ ಭಾಸ್ಕರವರ್ಮ ತೋಟದಲ್ಲಿ ಕೆಲಸ ಮಾಡುವ ಹೊಲತಿಯರನ್ನು ಒಲಿಸಿಕೊಂಡು ಕಣಜದ ಮನೆಯಲ್ಲಿ

ಕೂಡುವ ಹವ್ಯಾಸವನ್ನಿರಿಸಿಕೊಂಡಿದ್ದಾನೆ. 'ಕಪ್ಪು ಬೀಟೆಯಲ್ಲಿ ಕಡೆದು ರೂಪಿಸಿದ ಭಗವತಿಯಂಥ ರೂಪದ' ನೀಲಿಯನ್ನು ಆತ ಬಯಸಿದಾಗ 'ಹೆಣ್ಣಾಳುಗಳು ಬಹಳಷ್ಟಿದ್ದರೂ ಒಡೆಯರು ಬಯಸಿದ್ದು ತನ್ನನ್ನೇ ತಾನೆ?' ಎಂಬ ವಿಧೇಯತೆಯಿಂದ ನೀಲಿ ಆದ್ಯತೆ ಕೊಡುತ್ತಾಳೆ. ತಾನು ಮಾಡುತ್ತಿರುವುದು ವ್ಯಭಿಚಾರವೆಂದು ಗೊತ್ತಿದ್ದರೂ ಒಡೆಯರನ್ನು ಬೇಸರಪಡಿಸಿದರೆ ತೊಂದರೆ ತಪ್ಪಿದ್ದಲ್ಲ ಎಂಬ ಪಾರಂಪರಿಕ ತಿಳುವಳಿಕೆ ಅವಳದು. ಜೊತೆಗಾತಿಯರಿಗೆ ಸುಳಿವು ಹತ್ತದಂತೆ ಅವರಿಂದ ತಪ್ಪಿಸಿಕೊಂಡು, ಹೊಳೆಯಲ್ಲಿ ಮಿಂದು, ಅಗ್ಗದ ಪೌಡರ್ ಪೂಸಿ, ಲಾಲ್‌ಗಂಧದ ಬೊಟ್ಟು ಹಾಕಿ ತನ್ನನ್ನು ಸಾಧ್ಯವಾದಷ್ಟು 'ಚೆಲುವೆಯಾಗಿಸಿಕೊಂಡು' ಕಣಜದ ಮನೆಗೆ ಹೋಗುತ್ತಾಳೆ.

ಮೇಲ್ನೋಟಕ್ಕೆ ಈ ಸಂಬಂಧದಲ್ಲಿ ಬಲವಂತವಿಲ್ಲದಂತೆ ಕಂಡುಬಂದರೂ ಇಲ್ಲಿರುವ 'ಆಳು ಮತ್ತು ಒಡೆಯ' ಸಂಬಂಧವನ್ನು ನೆಲೆಯಿಂದ ಗ್ರಹಿಸಬೇಕಾಗುತ್ತದೆ. ವಿರೋಧವಿಲ್ಲದೆ ಒಡೆಯರ ತೋಳ್ತೆಕ್ಕೆಯಲ್ಲಿ ಸುಖಿಸುವ ನೀಲಿಯ ಪ್ರಕಾರ ಕೆಲಸದ ಸ್ಥಳದಲ್ಲಿ ಇಂಥ ನಿರಪಾಯಕಾರಿಯಾದ ಹೊಂದಾಣಿಕೆಗಳು ಅನಿವಾರ್ಯವಾಗಿವೆ. 'ಇವತ್ತು ಕಳಕ್ಕೆ ಹೋಗದಿದ್ದರೂ ಹೋದಂತೆ ಲೆಕ್ಕ ಬರೆಯುವೆ'ನೆಂದು ಒಡೆಯರು ಹೇಳಿದ್ದರಿಂದ ಒಡೆಯರ ಕೋರಿಕೆಗೆ ಒಪ್ಪಿದ್ದಾಳೆ. ಹೆಚ್ಚಿನ ಸಂದರ್ಭಗಳಲ್ಲಿ ಇಂಥ ಉಡುಗೊರೆಯ ಆಮಿಷಗಳಿಂದಾಗಿಯೆ ಸ್ತ್ರೀಯರು ಸಮಾಜದ ದೃಷ್ಟಿಯಲ್ಲಿ 'ಅನೈತಿಕ' ವೆನಿಸುವ ಸಂಬಂಧಗಳನ್ನು ಒಪ್ಪಿಕೊಳ್ಳುತ್ತಾರೆ. ಹೆಣ್ಣೆಂಬುದು ಕೊಳ್ಳಬಹುದಾದ ಸೊತ್ತು ಎಂಬ ಪುರುಷರ ಗ್ರಹಿಕೆಯನ್ನು ತಮಗರಿವಿಲ್ಲದಂತೆಯೆ ಬಲಪಡಿಸುತ್ತಾರೆ.

ಇದೇ ಕೃತಿಯ ಗಂಗೆಗೆ ಸಂಗೀತಗಾತಿಯಾಗುವ ಆಸೆ ಮತ್ತು ಅರ್ಹತೆಗಳಿದ್ದವು. ಮಗಳ ಕಲಾಭಿರುಚಿಗೆ ತಂದೆಯ ಪ್ರೋತ್ಸಾಹವೂ ಇತ್ತು. ಆದರೆ ಸಿರಿಮಂಗಲಂ ಅರಮನೆ ನಿಸ್ಸಂತಾನವಾಗುವುದನ್ನು ತಪ್ಪಿಸಲು ಗೋದವರ್ಮ ಅರಸರು ಆಕೆಯನ್ನು ದತ್ತು ಪಡೆಯಲು ಬಯಸಿದಾಗ ಗಂಗೆಯ ಸಂಗೀತೋಪಾಸನೆ ನಿಂತುಹೋಗುತ್ತದೆ. ಖಿಲವಾಗುತ್ತಿರುವ ಹಳೆಯ ಅರಮನೆಯಲ್ಲಿ ನಿತ್ಯದ ಖರ್ಚಿಗೂ ಪರದಾಡುತ್ತ ಜೀವನ ಸಾಗಿಸುತ್ತಿರುವ ಗಂಗೆಯ ತಂದೆ, ಸಂಪದ್ಭರಿತ ಅರಮನೆಯ ವಾರಸುದಾರಳಾಗುವ ಅವಕಾಶಕ್ಕಾಗಿ ಯಾವುದೇ ಅಭ್ಯಂತರವಿಲ್ಲದೆ ಗಂಗೆಯನ್ನು ಗೋದವರ್ಮರಿಗೆ ಹಸ್ತಾಂತರಿಸುತ್ತಾರೆ. ಅರಮನೆಯ ಬದುಕು ನಿನಗೆ ಇಷ್ಟವೆ ಎಂದು ಯಾರೂ ಅವಳನ್ನು ಕೇಳಿಯೆ ಇಲ್ಲ.

ಜಿ.ಬಾಲಚಂದ್ರನ್ ಅವರು ಬರೆದ 'ಬಿಡುಗಡೆ' ಕಾದಂಬರಿಯಲ್ಲಿ ಕುಮಾರ್‌ನ ಹಿತೈಷಿಯಾದ ಸ್ನೇಹಿತ ಅವನನ್ನು ಕಾಡುವ ಸುಮಿತ್ರಾಳ ಬಗ್ಗೆ 'ಒಂದು ದಿನ ಸುಮಿತ್ರಾಳನ್ನು ನನ್ನ ಹತ್ತಿರ ಕಳಿಸಿಕೊಡಿ. ಅವಳನ್ನು ನಮ್ಮ ಮೊದಲ ಸಾಕ್ಷೀದಾರಳನ್ನಾಗಿ ಮಾಡುತ್ತೇನೆ. ಬೀಜವಿರುವ ಗಂಡನೊಬ್ಬನ ಕೊರತೆ ಅವಳಿಗಿದೆಯೆಂದು ನನಗೆ ಅನೇಕ ಬಾರಿ ಅನ್ನಿಸಿದೆ' ಅನ್ನುತ್ತಾನೆ. 'ಫಕ್ ಎ ಗರ್ಲ್ ಔಟ್ ಆಫ್ ಹರ್ ಲೈಫ್, ಅಂಡ್ ಶಿ ವಿಲ್ ಆಲ್ವೇಸ್ ಬಿ ಯುವರ್ ಸ್ಲೇವ್' ಎಂದು ಕುಮಾರ್‌ಗೆ 'ಮುಂದೆಯಾದರೂ

ಪ್ರಯೋಜನಕ್ಕೆ ಬರಬಹುದಾದ' ಸಲಹೆಯೊಂದನ್ನು ಕೊಡುತ್ತಾನೆ. ಹೆಣ್ಣನ್ನು ದೇಹಮಾತ್ರವಾಗಿ ಕಾಣುವ ಗಂಡಸರ ಸಂಕುಚಿತ ಅಭಿಪ್ರಾಯಗಳನ್ನು, ಕೇವಲ ಲೈಂಗಿಕವಾದ ಚಪಲವನ್ನು ಇಲ್ಲಿ ಕಾಣಬಹುದು.

'ಆಡುಜೀವನ' ಕಾದಂಬರಿಯಲ್ಲಿ ನಜೀಬ್‌ನ ಬಾಲ್ಯದ ಮಧುರಸ್ಮೃತಿಯಾಗಿ ಉಳಿದಿರುವ 'ಹುಲ್ಲುಗಾತಿ ರಮಣಿ' ಎಂಬ ಹಳ್ಳಿಯ ವೇಶ್ಯೆಯೊಬ್ಬಳ ಚಿತ್ರಣವಿದೆ. 'ಇಪ್ಪತ್ತೈದು ಪೈಸೆ ಕೊಟ್ಟವರಿಗೆ ತನ್ನ ದೊಡ್ಡ ಮೊಲೆಗಳನ್ನು ಹಿಡಿಯಲು ಬಿಡುವ' ರಮಣಿಯ ಬಗ್ಗೆ ಪೋಕರ್ ಮಾವನಿಂದ ತಿಳಿದುಕೊಂಡ ನಜೀಬ್ ಬಾಲ್ಯದಲ್ಲೊಮ್ಮೆ ಇಪ್ಪತ್ತೈದು ಪೈಸೆ ತೆತ್ತು ಅವಳ ಮೊಲೆ ಹಿಡಿದ ಮಧುರ ನೆನಪನ್ನು ಮರೆತಿಲ್ಲ. ಮರುಭೂಮಿಯಲ್ಲಿ ತಾನು ಮೊದಲು ಮೊಲೆಹಿಂಡಿ ಹಾಲು ಕರೆದ ಆಡಿಗೆ ಅವಳ ಹೆಸರನ್ನೆ ಇಟ್ಟು ಮರುಭೂಮಿಯ ಅಸಹನೀಯ ಸಂಕಟದಲ್ಲಿ ಒಂದಿಷ್ಟು ನೆಮ್ಮದಿ ಪಡೆಯಲು ಯತ್ನಿಸುತ್ತಾನೆ. ಹೆಣ್ಣಿನ ದೇಹಕ್ಕೆ ಬೆಲೆ ಕಟ್ಟುವ ಗಂಡಿಗೆ ತಾನು ತೆರುವ ಮೊತ್ತಕ್ಕೆ ಲಭಿಸುವ ಸುಖದ ಅನುಭವವು ಮುಖ್ಯವಾಗಿದೆ. ಗಂಡಿನ ಕಾಮುಕತೆಯನ್ನು, ಹೆಣ್ಣಿನ ಕುರಿತಾದ ಸೆಳೆತವನ್ನು, ಸಂಪಾದನೆಯ ಮಾರ್ಗವಾಗಿಸಿಕೊಂಡಿರುವ ಹುಲ್ಲುಗಾತಿ ರಮಣಿಗೆ ತನ್ನನ್ನು ಮುಟ್ಟುವವರ ವಯಸ್ಸು, ಜಾತಿ ಯಾವುದೂ ಮುಖ್ಯವಲ್ಲ. ತನ್ನ ದೇಹದ ವಿಕ್ರಯದ ಮುಖೇನವಾಗಿ ಆ ಹೊತ್ತಿಗೆ ಲಭಿಸುವ ಸಂಪಾದನೆ ಮತ್ತು ಅದರಿಂದ ಹಿಂಗಬಹುದಾದ ತನ್ನವರ ಹಸಿವು ತರುವ ನೆಮ್ಮದಿ ಮಾತ್ರ ಮುಖ್ಯವಾಗಿದೆ.

೩.೧.೮. ಭಾಷೆಯಲ್ಲಿ ಹೆಣ್ತನದ ವಿನ್ಯಾಸಗಳು

ಲಿಂಗಗಳ ಅಸಮಾನತೆಯೆಂಬುದು ಒಂದು ಸಾಂಸ್ಕೃತಿಕ ನಿರ್ಮಾಣ. ಜೈವಿಕವಾಗಿ ದತ್ತವಾದುದಲ್ಲ. ದೈವಿಕ ನಿಯಮವೂ ಅಲ್ಲ. ಪುರುಷಪ್ರಧಾನ ಸಮಾಜಗಳಲ್ಲಿ ಭಾಷೆಯು ಪುರುಷಾಧಿಕಾರವನ್ನು ಬಲಪಡಿಸುವಂತಿರುತ್ತದೆ. ಪಿತೃವ್ಯವಸ್ಥೆಯ ಲೈಂಗಿಕ ರಾಜಕಾರಣವು ಸಂಸ್ಕೃತಿಯಲ್ಲಿ ಅಂತರ್ಗತವಾಗಿದ್ದು ಸಾಹಿತ್ಯಕೃತಿಗಳಲ್ಲಿ ಭಾಷಿಕ ರಾಜಕಾರಣದ ರೂಪ ಪಡೆಯುತ್ತದೆ. ಸೌಂದರ್ಯವತಿ, ಆದರ್ಶ ತಾಯಿ, ವಿಧೇಯ ಪತ್ನಿ, ಕಾಮಾತುರ ವೇಶ್ಯೆ ಮುಂತಾದ ಪುರುಷಾನುಕೂಲಿಯಾದ ಸ್ತ್ರೀಯ ಚಿತ್ರಗಳನ್ನು ಮುನ್ನೆಲೆಗೆ ತಂದು ಸ್ತ್ರೀಯರನ್ನು ಸೃಷ್ಟಿಸಿ ಅದೇ ನಿಜವಾದ ಸ್ತ್ರೀಯ ಚಿತ್ರವೆಂದು ನಂಬಿಸುತ್ತದೆ. ಅಂತಿಮವಾಗಿ ಇದು ಅಧಿಕಾರದ ಪ್ರಶ್ನೆಯಾಗಿದೆ. ಈ ಸಾರ್ವತ್ರಿಕ ಸ್ತ್ರೀಚಿತ್ರವನ್ನು ಬದಲಾಯಿಸಿ ಸಾಂದರ್ಭಿಕವಾಗಿ ವರ್ತಿಸುವ ಸ್ತ್ರೀಯರ ಸಹಜ ಚಿತ್ರಗಳನ್ನು ಮಲಯಾಳಂ ಕಥನಗಳು ನೀಡಿವೆ.

ಭಾಷೆಯ ರಚನೆ ಮತ್ತು ಬಳಕೆಯಲ್ಲಿಯೆ ಸ್ತ್ರೀವಿರೋಧಿ ಆಶಯವಿರುತ್ತದೆ ಮತ್ತು ಇದು ಜಗತ್ತಿನ ಬಹುತೇಕ ಎಲ್ಲ ಭಾಷೆಗಳಲ್ಲೂ ಸಾಮಾನ್ಯವಾಗಿದೆ. ಸಮಾಜವು ಹೆಣ್ಣಿನ ಅಭಿವ್ಯಕ್ತಿಯ ಮೇಲೆ ನಿಯಂತ್ರಣವನ್ನು ವಿಧಿಸಿದೆ. 'ಮಾತು ಬೆಳ್ಳಿ ಮೌನ ಬಂಗಾರ' ಎಂಬೊಂದು ನಾಣ್ಣುಡಿಯ ಮೂಲಕ ಹೆಂಗಸರು ಹೆಚ್ಚು ಮಾತನಾಡದಂತೆ ನಿರ್ಬಂಧಿಸಿದೆ. ಮೆತ್ತಗೆ ಮತ್ತು ಕಡಿಮೆ ಮಾತಾಡುವುದೇ ಹೆಣ್ಣಿಗೆ

ಭೂಷಣವೆಂದು ಸ್ತ್ರೀಯರನ್ನು ನಂಬಿಸಲಾಗಿದೆ. ಹಾಗಾಗಿ ಅನಿಸಿದ್ದನ್ನೆಲ್ಲ ಮುಕ್ತವಾಗಿ ಹೇಳಲಾರದ ಸ್ತ್ರೀಯರು ತಮ್ಮ ಅಂತರಂಗದ ಭಾವಗಳನ್ನು ಪ್ರಕಟಪಡಿಸುವುದಕ್ಕೆ ಪರ್ಯಾಯ ದಾರಿಗಳನ್ನು ಕಂಡುಕೊಳ್ಳುತ್ತಾರೆ. ಮೃದುವಾಗಿ ಮತ್ತು ಸಭ್ಯವಾಗಿಯೆ ಮಾತಾಡಬೇಕಾದ ಸ್ತ್ರೀಯರು ಜಗಳವಾಡುವ ಅವಕಾಶ ದೊರೆತಾಗ ಅಥವಾ ಕೆಲವೊಮ್ಮೆ ತಾವೇ ಅವಕಾಶವನ್ನು ದೊರಕಿಸಿಕೊಂಡು ಜಗಳವಾಡುವುದು, ಆ ಸಂದರ್ಭದಲ್ಲಿ ದೊಡ್ಡ ದನಿಯಲ್ಲಿ ಕಿರುಚಾಡುತ್ತ ಅಶ್ಲೀಲ ಪದಗಳನ್ನು ಧಾರಾಳವಾಗಿ ಬಳಸುವುದು, ಬಾಯಿಬಿಟ್ಟು ಜಗಳಾಡಲಾರದ ಸಂದರ್ಭಗಳಲ್ಲಿ ಮನೆಯ ಪಾತ್ರೆಗಳನ್ನು ಸಶಬ್ದವಾಗಿ ಎತ್ತಿಡುವುದು, ಗಂಡ, ಅತ್ತೆ ಮುಂತಾದವರ ಮೇಲಿನ ಸಿಟ್ಟಿಗೆ ಮಕ್ಕಳಿಗೆ ಹೊಡೆಯುವುದು, ದೀರ್ಘಕಾಲ ಮಾತು ಬಿಟ್ಟು ಮೌನದ ಮೊರೆ ಹೋಗುವುದು, ಮನುಷ್ಯರಿಗೆ ಹೇಳಬೇಕಾದ್ದನ್ನು ಗಿಡಮರಗಳು, ಪಾತ್ರೆಪಡಗಗಳೊಂದಿಗೆ ಹೇಳಿಕೊಂಡು ಅಭಿವ್ಯಕ್ತಿಯ ನಿರಾಳತೆಯನ್ನು ಪಡೆಯುವುದು, ನಿಜದಲ್ಲಿ ಹೇಳಲಾಗದ್ದನ್ನು ಕನಸಲ್ಲಿ ಹೇಳುವುದು, ಗಟ್ಟಿಯಾಗಿ ಮಾತನಾಡಲಾಗದ ನಿರ್ಬಂಧ ಸನ್ನಿವೇಶದಲ್ಲಿ ತನ್ನೊಳಗೆ ಮಾತನಾಡಿಕೊಳ್ಳುವುದು, ಸ್ವಯಂಕಲ್ಪಿತ ವ್ಯಕ್ತಿಗಳೊಂದಿಗೆ ಸಂವಹನ ನಡೆಸುವುದು.. ಮುಂತಾಗಿ ವರ್ತಿಸುತ್ತಾರೆ. ಇಂಥ ವರ್ತನೆಗಳು ಸ್ತ್ರೀ ಸಂವಹನದ ವಿಶಿಷ್ಟ ವಿನ್ಯಾಸಗಳಾಗಿರುವುದನ್ನು ಕೃತಿಗಳಲ್ಲಿ ಕಾಣಬಹುದು.

ಸ್ವಗತ ಮತ್ತು ಗೊಣಗಾಟಗಳು ಸ್ತ್ರೀ ಅಭಿವ್ಯಕ್ತಿಯ ವಿಶಿಷ್ಟ ದಾರಿಗಳಾಗಿವೆ. ಸ್ತ್ರೀಯರು ನೇರವಾಗಿ ಹೇಳಲಾಗದ್ದನ್ನು ಗೊಣಗಾಟದ ಮೂಲಕ ಹೇಳಿಬಿಟ್ಟು ಹಗುರಾಗುವ ಸರಳ ವಿಧಾನವನ್ನು ಸಾಹಿತ್ಯಕೃತಿಗಳಲ್ಲಿ ಕಾಣಬಹುದು. ಹಾಗೆಯೇ ಹೊಸ ಚಮತ್ಕಾರಿಕ ವಿಧಾನಗಳ ಮೂಲಕ ಭಾಷೆಯನ್ನು ನಿತ್ಯವೂ ಹೊಸತಾಗಿ ಮತ್ತು ಶಕ್ತಿಯುತವಾಗಿ ಬಳಸುವ ಹೆಂಗಸರ ಜಗಳ ಮತ್ತು ಬೈಗುಳಗಳು ಸಾಮಾಜಿಕ ಕತೆ, ಕಾದಂಬರಿಗಳಲ್ಲಿ ಸಹಜವೆಂಬಂತೆ ಚಿತ್ರಿತವಾಗಿವೆ. ಮಲಯಾಳಂ ಕೃತಿಗಳೂ ಅದಕ್ಕೆ ಹೊರತಾಗಿಲ್ಲ.

ವಾಸ್ತವ ಜೀವನದ ವ್ಯಕ್ತಿಗಳೊಂದಿಗೆ ಸಹಜವಾಗಿ ಬೆರೆತು ಮಾತನಾಡುವ ಅವಕಾಶವಿಲ್ಲದ ಸ್ತ್ರೀಯರು ಕೆಲವೊಮ್ಮೆ ತಮ್ಮ ಸುಪ್ತಕಲ್ಪನೆಯಲ್ಲಿ ಕೆಲವು ವ್ಯಕ್ತಿಗಳನ್ನು ಸೃಷ್ಟಿಸಿಕೊಳ್ಳಬಹುದು. ಆ ವ್ಯಕ್ತಿಗಳು ತಮ್ಮ ಕಣ್ಣೆದುರು ಇರುವುದು ನಿಜವೆಂಬಂತೆ ಮಾತನಾಡಬಹುದು. 'ಗುರುತುಗಳು' ಕಾದಂಬರಿಯ ಪ್ರಿಯಾ ತಾನು ಕಲ್ಪಿಸಿಕೊಂಡ ಪಾತ್ರವಾಗಿರುವ ನೀಲಿಮಾ ಎಂಬ ಟಿ.ವಿ. ನಿರೂಪಕಿಯೊಂದಿಗೆ ಹಾಗೂ ತಾನೇ ಜೀವ ಕೊಟ್ಟ ಕಥಾಪಾತ್ರವಾಗಿರುವ ಕಾವೇರಿಯೊಂದಿಗೆ ಸಂವಹನವನ್ನು ಸಾಧಿಸುವುದನ್ನು, ವಯಸ್ಸಾದ ತಮ್ಮ ಮಾತುಗಳನ್ನು ಯಾರೂ ಕೇಳುವುದಿಲ್ಲವೆಂಬ ಕಾರಣಕ್ಕೆ ಸದಾ ಗೊಣಗುತ್ತಲೇ ಇರುವ 'ದುರ್ಬೀಜ' ಕಾದಂಬರಿಯ ಕುಞ್ಞಿಕಾಳಿಯಮ್ಮ ಮತ್ತು ಪಾರುಮುದುಕಿಯರನ್ನು, ಬಹಿರಂಗದಲ್ಲಿ

ವಿರೋಧಿಸಲಾಗದ ಧರ್ಮಜನ ಮೇಲಿನ ಅಸಮಾಧಾನವನ್ನು ಗೊಣಗಾಟದ ಮೂಲಕ ಅಭಿವ್ಯಕ್ತಿಸುವ 'ನಾನಿನ್ನು ನಿದ್ರಿಸುವೆ' ಕಾದಂಬರಿಯ ದ್ರೌಪದಿಯ ಪಾತ್ರಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

'ಕಾಲ' ಕೃತಿಯಲ್ಲಿನ ಅಮ್ಮನಿಗೂ ಚಿಕ್ಕಮ್ಮನಿಗೂ ಜಗಳ ಶುರು ಮಾಡಲು ಗಂಭೀರ ಕಾರಣಗಳೇ ಬೇಕಾಗಿಲ್ಲ. ಸದಾ ಯುದ್ಧಕ್ಕೆ ಸಿದ್ಧರಾಗಿಯೆ ಇರುವ, ಪರಸ್ಪರ ದೋಷಾರೋಪಣೆಯಲ್ಲಿ ಸಮಾಧಾನಪಡುವ ಈ ವಾರಗಿತ್ತಿಯರಲ್ಲಿ ಮನೆಯ ವಹಿವಾಟು ನಡೆಸುವುದು ಸೇತುವಿನ ಅಮ್ಮನಾದ ಕಾರಣ ಯಾವಾಗಲೂ ಕೊನೆಯ ಗೆಲುವು ಅವಳದಾಗುತ್ತದೆ. ಚಿಕ್ಕಮ್ಮ ತನ್ನ ಪತಿ ಬದುಕಿದ್ದಾಗ 'ಸಂಪಾದಿಸಿದ್ದನ್ನು ರಹಸ್ಯವಾಗಿ ತರವಾಡು ಮನೆಗೆ, ತನ್ನ ಅಳಿಯಂದಿರಿಗೆ ಸಾಗಿಸುತ್ತಾರೆ' ಎಂಬ ಕಾರಣಕ್ಕೆ ಪತಿಯೊಂದಿಗೂ ನಿತ್ಯ ಜಗಳಾಡುತ್ತಿದ್ದಳು. ಚಿಕ್ಕಮ್ಮನಿಗೆ ನಶ್ಯ ಇಷ್ಟ. ಹೆಂಗಸರು ನಶ್ಯ ಹಾಕುವುದು ಹೀನಾಯವೆಂದು ಅಮ್ಮನ ಭಾವನೆ. ಚಿಕ್ಕಮ್ಮ ನಶ್ಯದ ಸುದ್ದಿ ಎತ್ತಿದರೆ ಅಥವಾ ನಶ್ಯ ಹಾಕುವುದು ಕಂಡರೆ ಸಾಕು ಅಮ್ಮ ಎಗರಾಡುತ್ತಾಳೆ. ಚಿಕ್ಕಮ್ಮನಿಗೆ ಹೆರಿಗೆ ನೋವು ಬಂದಾಗಲೂ ಅಮ್ಮ ಬೈದು ಹಂಗಿಸಿ ಕಿರುಚದಂತೆ ಸುಮ್ಮನಿರಿಸುವುದನ್ನು ವಾಸು ಗಮನಿಸಿದ್ದಾನೆ. ಇಂಥ ಜಗಳಗಳು ಚಿಕ್ಕಮ್ಮನ ಕಣ್ಣೀರಿನಲ್ಲಿ ಮುಕ್ತಾಯವಾಗುತ್ತವೆ. ಚಿಕ್ಕಮ್ಮ ತನ್ನ ಎಳೆಯ ಪ್ರಾಯದ ಮಗಳಿಗೆ ದಬದಬ ಗುದ್ದುವ ಮೂಲಕ ಅಕ್ಕನ ಮೇಲಿನ ಸಿಟ್ಟಿಗೆ ಪ್ರತಿಕ್ರಿಯಿಸುವುದೂ ಗಮನಿಸಬೇಕಾದ ಅಂಶ. ಎರಡು ಬಾರಿ ಮದುವೆಯಾದರೂ ಜೊತೆಗೊಬ್ಬ ಗಂಡನಿಲ್ಲದ ಚಿಕ್ಕಮ್ಮನಿಗೆ ತಾರುಣ್ಯದಲ್ಲಿ ಒಂಟಿಯಾಗಿರಬೇಕಾದ ಸ್ಥಿತಿ ಒದಗಿದ ಬಗ್ಗೆ ಅಸಹನೆಯಿದೆ. ಅಳು, ಗೊಣಗಾಟ, ಎದೆಗೆ ಬರೇ ಒಂದು ತುಂಡು ಬಟ್ಟೆ ಹೊದ್ದುಕೊಂಡು ಮನೆಯ ಅಂಗಳದಲ್ಲಿ ಎಗ್ಗಿಲ್ಲದೆ ಓಡಾಡುವುದು, ಎಲ್ಲರಿಗೂ ಕಾಣುವಂತೆ ಜಗಲಿಯಲ್ಲಿ ಮಲಗುವುದು... ಇಂಥ ಕ್ರಿಯೆಗಳ ಮೂಲಕ ಅಸಹನೆಯ ಭಾರವನ್ನು ಹೊರಹಾಕಲು ಪ್ರಯತ್ನಿಸುತ್ತಾಳೆ.

'ಸುಂದರಿಯರು ಸುಂದರರು' ಕೃತಿಯಲ್ಲಿ ಆರ್ಥಿಕ ಅನುಕೂಲವಿದ್ದ ತರವಾಡು ಮನೆಯಿಂದ ಬಂದು ಗಂಡನ ಮನೆಯ ಬಡತನದಲ್ಲಿ ಕಷ್ಟಪಡುತ್ತಿರುವ ಮಾಧವಿಯಮ್ಮ ಭಾರತೀಯ ಪುರಾಣಗಳಲ್ಲಿ ಬರುವ ಚಂಡಿಯಂಥವಳು. ಮಾತು ಮಾತಿಗೂ ಗಂಡನೊಡನೆ ಜಗಳವಾಡುತ್ತಾಳೆ. ಪ್ರತಿಬಾರಿಯೂ ಜಗಳದ ಕೊನೆಯಲ್ಲಿ ಅಪಸ್ಮಾರ ಬಂದು ಬೀಳುತ್ತಾಳೆ. ಪತಿಯಿಂದ ಆರೈಕೆ ಮಾಡಿಸಿಕೊಂಡು ಸಮಾಧಾನ ಹೊಂದಿ ಮತ್ತೆ ಮಾಮೂಲಿ ಸ್ಥಿತಿಗೆ ಬರುತ್ತಾಳೆ. ಬೇರೆಬೇರೆ ಕಾರಣ ಹುಡುಕಿ ಜಗಳಾಡುವ ಮಾಧವಿಯಮ್ಮ ಪತಿ ಹೇಳಿದ್ದನ್ನು ಕೇಳುವವಳಲ್ಲ. ಪತಿಯ ಮಾತಿಗೆ ವಿರುದ್ಧವಾದುದನ್ನಷ್ಟೆ ಮಾಡುವವಳು. 'ಎಡ ಭಾಗಕ್ಕೆ ಹೋಗಬೇಕಾದಾಗೆಲ್ಲ ಹೆಂಡತಿಯನ್ನು ಬಲಭಾಗಕ್ಕೆ ಸೆಳೆಯಬೇಕೆಂಬುದನ್ನು' ರಾಮನ್ ಮಾಸ್ತರರು ಅನುಭವದಿಂದ ಅರಿತುಕೊಂಡಿದ್ದಾರೆ. ಆ

ಉಪಾಯವನ್ನು ಬಳಸಿಯೆ ತನ್ನ ಸಿಡುಕಿಯಾದ ಹೆಂಡತಿಯು ಗರ್ಭಿಣಿ ಕುಂಜುಕುಟ್ಟಿ ಮತ್ತು ಅವಳು ಹೆತ್ತ ಮಗು ವಿಶ್ವನಾಥನನ್ನು ಮನೆಯಲ್ಲಿರಿಸಿಕೊಂಡು ಆರೈಕೆ ಮಾಡುವಂತೆ ನೋಡಿಕೊಂಡಿದ್ದಾರೆ.

ಮಾಧವಿಯಮ್ಮ ಮತ್ತು ನೆರೆಮನೆಯ ಭಾರ್ಗವಿಯಮ್ಮ ಕ್ಷುಲ್ಲಕ ಕಾರಣಗಳಿಗಾಗಿ ಜಗಳ ಆರಂಭಿಸುತ್ತಾರೆ. ಆ ಸಂದರ್ಭದಲ್ಲಿ ಪರಸ್ಪರರ ಚಾರಿತ್ರ್ಯದ ಬಗ್ಗೆ ಆಡಬಾರದ ಮಾತುಗಳನ್ನು ಎಲ್ಲರಿಗೂ ಕೇಳುವಂತೆ ಆಡುತ್ತಾರೆ. ಇಬ್ಬರೂ ಬಾಯಿಮುಚ್ಚದ ಹಾಗೆ ನಿರಂತರ ಬೈದಾಡಿಕೊಳ್ಳುತ್ತಲೇ ಇರುವ ಅವರ ಜಗಳದ ವರ್ಣನೆ ಕಾದಂಬರಿಯಲ್ಲಿ ಹೀಗಿದೆ: “ಭಾರ್ಗವಿಯಮ್ಮನ ಬಾಲ್ಯದ ಮೂರು ಪ್ರಣಯಕಥೆಗಳನ್ನು ಮಾಧವಿಯಮ್ಮ ಬಹಿರಂಗಪಡಿಸಿದರು. ಮಾಧವಿಯಮ್ಮನ ಮೊದಲ ಮದುವೆಯ ಮಾತುಕತೆ ತಪ್ಪಿಹೋದ ಕಾರಣವನ್ನು ಭಾರ್ಗವಿಯಮ್ಮನೂ ಹೊರಹಾಕಿದರು. ಮತ್ತೆ ಇಬ್ಬರ ಕುಟುಂಬಗಳ ಮುತ್ತಜ್ಜಿಯರಿಂದ ಆರಂಭಿಸಿ ಇಲ್ಲಿಯವರೆಗೆ ಎಲ್ಲರೂ ಮಾಡಿದ ತಪ್ಪುಗಳನ್ನು ಕೂಗಿ ಹೇಳಿದರು. ಯುದ್ಧ ಈ ಸ್ಥಿತಿಗೆ ತಲುಪಿದಾಗ ನೆರೆಕರೆಯವರೆಲ್ಲ ಬೇಲಿಯ ಸಮೀಪ ಬಂದು ನಿಂತರು. ಅವರ ಸೆರಗು ಹಿಡಿದುಕೊಂಡು ಅವರ ಮಕ್ಕಳೂ. ಪ್ರೇಕ್ಷಕರು ಹೆಚ್ಚಾದಾಗ ಯುದ್ಧದ ಉತ್ಸಾಹ ಹೆಚ್ಚಿತು. ಭಾರ್ಗವಿಯಮ್ಮನಿಗೆ ಜಯಿಸದೆ ಸಾಧ್ಯವಿಲ್ಲವೆಂದಾಯಿತು. ಅವರು ಕೊನೆಯ ಅಸ್ತ್ರವನ್ನೇ ಪ್ರಯೋಗಿಸಿದರು.” (ಪು. ೭೭)

ಪರಸ್ಪರರ ಹುಳುಕುಗಳನ್ನು ಎತ್ತಿ ಆಡುವ ಈ ಹೆಂಗಸರ ಜಗಳದಲ್ಲಿ ಭರ್ತ್ಸನೆಗೆ ಆಯ್ಕೆಯಾಗುವುದು ಪರಸ್ಪರರ ತಾಯಿ, ಅಜ್ಜಿ, ಮುತ್ತಜ್ಜಿ ಮುಂತಾದ ಸ್ತ್ರೀಮೂಲದ ಚಾರಿತ್ರ್ಯಕ್ಕೆ ಸಂಬಂಧಿಸಿದ ಸಂಗತಿಗಳು ಎಂಬುದು ಇಲ್ಲಿ ಗಮನಿಸತಕ್ಕ ಅಂಶವಾಗಿದೆ. ಶುದ್ಧಚಾರಿತ್ರ್ಯವೆ ಹೆಣ್ಣಿಗೆ ಆತ್ಯಂತಿಕ ಮೌಲ್ಯ ಎಂಬ ಸಾಮಾಜಿಕ ಗ್ರಹಿಕೆಗೆ ಈ ಸ್ತ್ರೀಯರೂ ಹೊರತಾಗಿಲ್ಲ. ಆದ್ದರಿಂದಲೆ ಜಗಳದಲ್ಲಿ ಗೆಲ್ಲಬೇಕೆಂಬ ಉತ್ಸಾಹದಲ್ಲಿ ಎದುರಾಳಿಯ ಚಾರಿತ್ರ್ಯಕ್ಕೆ ಕಲಂಕ ತರುವ ಸಂಗತಿಗಳನ್ನು ನೆನಪಿಸಿ, ಶೋಧಿಸಿ ಆಡಿಕೊಳ್ಳುತ್ತಾರೆ. 'ನೀನು ಮಾಪ್ಪಿಳ್ಳೆಯನ್ನು ಮನೆಯೊಳಗೆ ಬಚ್ಚಿಟ್ಟುಕೊಂಡವಳಲ್ಲವೇ?' ಎಂಬ ಮಾಧವಿಯಮ್ಮನ ಆಪಾದನೆಯೊಂದಿಗೆ ಜಗಳಕ್ಕೆ ಒಂದು ಅನಿರೀಕ್ಷಿತ ತಿರುವು ಮತ್ತು ಅಂತ್ಯ ಲಭಿಸುತ್ತದೆ. ಹಿಂದೊಮ್ಮೆ ಮಲಬಾರು ದಂಗೆಯ ಬಳಿಕ ಪೋಲೀಸರು ಹುಡುಕುತ್ತಿದ್ದ ಒಬ್ಬ ಮಾಪ್ಳೆ ಯುವಕನನ್ನು ಅವನ ತಾಯಿಯ ಕೋರಿಕೆಯ ಮೇರೆಗೆ ಭಾರ್ಗವಿಯಮ್ಮನ ಮನೆಯಲ್ಲಿ ಅಡಗಿಸಿಟ್ಟಿದ್ದರು. ಆ ಕಾನೂನುವಿರೋಧಿ ಕೃತ್ಯವನ್ನು ಮಾಧವಿಯಮ್ಮ ಮತ್ತು ಭಾರ್ಗವಿಯಮ್ಮ ಇಬ್ಬರೂ ಸೇರಿ ಆಲೋಚಿಸಿಯೆ ನಡೆಸಿದ್ದರು. ಆದರೆ ಪರಸ್ಪರ ಜಗಳದ ಸಂದರ್ಭದಲ್ಲಿ ಮಾಧವಿಯಮ್ಮ ಆ ಘಟನೆಯನ್ನು ಒಂದು ಹರಿತವಾದ ಆಯುಧವಾಗಿ ಬಳಸಿಕೊಂಡು ಎದುರಾಳಿಯ ಬಾಯಿ ಮುಚ್ಚಿಸುವಲ್ಲಿ ಯಶಸ್ವಿಯಾಗುತ್ತಾಳೆ.

ಸಾಮಾನ್ಯವಾಗಿ ಅಶ್ಲೀಲವಾದ ಮಾತು ಮತ್ತು ವರ್ತನೆಗಳಿಂದ ದೂರವಿರಬೇಕಾದವರು ಎಂದು ಸಮಾಜವು ನಿರೀಕ್ಷಿಸುವ ಸ್ತ್ರೀಯರು ಜಗಳಕ್ಕೆ ಇಳಿದಾಗ ಅಶ್ಲೀಲತೆಯಲ್ಲಿ ಪುರುಷರಿಗಿಂತಲೂ ಒಂದು ಹೆಜ್ಜೆ ಮುಂದೆ ಎಂಬಂತೆ ಎಗ್ಗಿಲ್ಲದೆ ವರ್ತಿಸುತ್ತಾರೆ ಮತ್ತು ಇಂಥ ಕದನಗಳಲ್ಲಿ ಯಾವಾಗಲೂ ಚಾರಿತ್ರ್ಯದ ಪ್ರಸ್ತಾಪ ಇದ್ದೇ ಇರುತ್ತದೆ. ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಕೆಳಸ್ತರಗಳಲ್ಲಿರುವ ಮಹಿಳೆಯರಲ್ಲಿ ಇಂಥ ಬಹಿರಂಗ ಜಗಳಗಳು ಹೆಚ್ಚಾಗಿ ನಡೆಯುತ್ತವೆ. ಸಮಾಜವು ವಿಧಿಸಿರುವ ನಿರ್ಬಂಧ ಮತ್ತು ಶಿಷ್ಟಾಚಾರಗಳಿಗೆ ಒಂದು ರೀತಿಯ ಪ್ರತಿರೋಧವಾಗಿಯೂ ಸ್ತ್ರೀಯರ ಈ ರೀತಿಯ ಅತಿರೇಕದ ವರ್ತನೆಯನ್ನು ಗಮನಿಸಬಹುದು.

ಎಸ್.ಕೆ. ಪೊಟ್ಟೆಕ್ಕಾಟ್ಟ್ ಅವರು ಬರೆದಿರುವ 'ಒಂದು ಊರಿನ ಕಥೆ' ಎಂಬ ಕಾದಂಬರಿಯಲ್ಲಿ ನೆರೆಹೊರೆಯವರಾದ ಅಮ್ಮಿಣಿಯಮ್ಮ ಮತ್ತು ಉಣ್ಣೂಲಿಯಮ್ಮ ಎಂಬ ಇಬ್ಬರು ಹೆಂಗಸರ ಮಧ್ಯೆ ಆಗಾಗ ನಡೆಯುವ ಜಗಳದ ವರ್ಣನೆಯಿದೆ. ಪರಸ್ಪರರ ಮೇಲೆ ಸಾಕ್ಷ್ಯಸಮೇತವಾದ 'ಹಾದರಗಿತ್ತಿ' ಎಂಬ ದೋಷಾರೋಪಣೆ, ಉಗುಳುವಿಕೆ, ಅಶ್ಲೀಲ ಶಬ್ದಗಳು, ಕೈಸನ್ನೆಗಳು, ಹಾವಭಾವಗಳೊಂದಿಗೆ ಕದನಾಹ್ವಾನವನ್ನು ನೀಡುತ್ತಾರೆ. ಇಬ್ಬರಿಗೂ ದಣಿವಾಗುವವರೆಗೂ ಏರುಧ್ವನಿಯಲ್ಲಿ ನಡೆಯುವ ಈ ಜಗಳದ ಸಂದರ್ಭದಲ್ಲಿ ಒಬ್ಬಾಕೆ 'ಸೊಂಟವನ್ನು ರುಬ್ಬುಕಲ್ಲಿನ ಹಾಗೆ ತಿರುಗಿಸಿ' ತೋರಿಸಿದರೆ ಇನ್ನೊಬ್ಬಾಕೆ 'ಮುಂಗೈಯನ್ನೆತ್ತಿ ಕೆಳಗಡೆಗೆ ನೀವಿ' ತೋರಿಸುತ್ತಾಳೆ. ನಡುನಡುವೆ ಇಬ್ಬರೂ ಆಡು ಕಿರುಚುವಂಥ, ಕುದುರೆ ಕೆನೆಯುವಂಥ ವಿಕೃತ ಶಬ್ದಗಳನ್ನು ಹೊರಡಿಸುತ್ತ ಜಗಳಕ್ಕೆ ರಂಗೇರಿಸಿಕೊಳ್ಳುತ್ತಾರೆ. ಜಗಳದ ತೀವ್ರತೆಯ ಹಂತದಲ್ಲಿ ಇಬ್ಬರಿಗೂ ಹೊರಜಗತ್ತಿನ ಪರಿವೆಯೆ ಇರುವುದಿಲ್ಲ. "ಅಮ್ಮಿಣಿಯಮ್ಮ ಕ್ಷೌರಿಕನಿಗೆ ಸಂಬಂಧಿಸಿದ ಒಂದು ಶಬ್ದವನ್ನು ಹೇಳಿ ಉಟ್ಟಬಟ್ಟೆಯನ್ನು ಎತ್ತಿ ತೋರಿಸುತ್ತಾಳೆ. ಆಗ ಇನ್ನಷ್ಟು ರೊಚ್ಚಿಗೇಳುವ ಉಣ್ಣೂಲಿಯಮ್ಮ ಪ್ರತಿಯಾಗಿ ಎರಡು ಕೈಗಳಿಂದಲೂ ಉಟ್ಟಬಟ್ಟೆಯನ್ನು ಬಿಚ್ಚಿ ಹಿಡಿದು ಹಾಗೆಯೇ ಅಮ್ಮಿಣಿಯಮ್ಮಳಿಗೆ ಎದುರಾಗಿ ನಿಂತುಕೊಳ್ಳುತ್ತಾಳೆ." (ಪು. ೭೪) ಸಾಮಾನ್ಯವಾಗಿ ಅಶ್ಲೀಲ ಮಾತು, ಸನ್ನೆ, ಚೇಷ್ಟೆಗಳಿಂದ ದೂರವಿರಬೇಕಾದ ಸ್ತ್ರೀಯರು ಸಂದರ್ಭ ಬಂದರೆ ಗಂಡಸರಷ್ಟೇ ಅಥವಾ ಅವರಿಗಿಂತಲೂ ಹೆಚ್ಚೇ ಎಂಬಂತೆ ಅಶ್ಲೀಲವಾಗಿ ವರ್ತಿಸುತ್ತಾರೆ. ಇಂಥ ಸ್ವಚ್ಛಂದ ವರ್ತನೆಗಳು ಕೆಳಮಧ್ಯಮ ಮತ್ತು ಕೆಳವರ್ಗದ ಸ್ತ್ರೀಯರಲ್ಲಿ ಕಂಡುಬರುತ್ತವೆ.

ಹೆಣ್ಣುಮಕ್ಕಳನ್ನು ಬಯ್ಯಬೇಕಾದಾಗ 'ಹಾದರಗಿತ್ತಿ' 'ಸೂಳೆ' ಮುಂತಾದ ಸ್ತ್ರೀವಿರೋಧಿಯಾದ ಪದಗಳನ್ನು ಬಳಸುವುದನ್ನು 'ಆಮೆನ್' ಕೃತಿಯಲ್ಲಿ ಗುರುತಿಸಲಾಗಿದೆ.

ಸ್ತ್ರೀವಿಶಿಷ್ಟವಾದ ರೂಪಕ ಮತ್ತು ಉಪಮೆಗಳು

ಲೇಖಕ/ಲೇಖಕಿಯರು ತಾವು ಬದುಕುತ್ತಿರುವ ಸಂಸ್ಕೃತಿಯಿಂದ ಭಾಷೆ, ಉಪಮೆ, ರೂಪಕ, ಪ್ರತಿಮೆ, ಪ್ರತೀಕಗಳನ್ನು ಸ್ವೀಕರಿಸಿ, ಅವನ್ನು ತಮ್ಮ ಅನುಭವ ಮತ್ತು ಲೋಕದೃಷ್ಟಿಯ ನೆಲೆಯಲ್ಲಿ ಮರುಸೃಷ್ಟಿಸುತ್ತಾರೆ. ಬರಹದ ಭಾಷೆ ಮತ್ತು ನಿರೂಪಣೆಯ ಕ್ರಮಗಳು ಲೇಖಕರ ಅನುಭವ ಮತ್ತು ನಿಲುವುಗಳಿಂದ ಪ್ರಭಾವಿತವಾಗಿರುತ್ತವೆ. ಹೆಣ್ಣಿನ ರೂಪಕಲೋಕವು ಅವಳ ಅನುಭವದ ಪ್ರಪಂಚದಿಂದ ಬಂದುದಾಗಿದೆ ಮತ್ತು ಸಹಜವಾಗಿದೆ. ಮಲಯಾಳಂ ಲೇಖಕಿಯರ ಕೃತಿಗಳು ಕನ್ನಡದ ಓದುಗರಿಗೆ ಹೊಸತು ಎನಿಸಬಹುದಾದ ಸ್ತ್ರೀ ವಿಶಿಷ್ಟವಾದ ಉಪಮೆ, ರೂಪಕಗಳ ಲೋಕವೊಂದನ್ನು ಕಾಣಿಸುತ್ತವೆ.

ಮಾನಸಿ ಅವರು ಬರೆದ 'ಅಕ್ಷರತಪ್ಪುಗಳು' ಹಾಗೂ 'ಶೀಲಾವತಿ' ಎಂಬ ಕಥೆಗಳನ್ನು ಈ ನೆಲೆಯಲ್ಲಿ ವಿಶೇಷವಾಗಿ ಗಮನಿಸಬಹುದು. ಈ ಕಥೆಗಳಲ್ಲಿ ಹಲವು ವಿಶಿಷ್ಟವಾದ ಉಪಮೆ, ರೂಪಕಗಳಿದ್ದು ಹೆಣ್ಣುಮಕ್ಕಳು ಆಡುವ ಚೌಕಾಭಾರ, ಗುಲಗಂಜಿ, ಕವಡೆಯಂಥ ಆಟಗಳು, ಗಂಡ ಹಾಗೂ ಮಕ್ಕಳು ತಟ್ಟೆಯಲ್ಲಿ ಉಳಿಸಿದ ಎಂಜಲು ಉಣ್ಣಬೇಕಾಗುವುದು, ಅಡುಗೆ ತಯಾರಿಸುವುದು, ಮನೆ ಸ್ವಚ್ಛವಾಗಿಟ್ಟುಕೊಳ್ಳುವುದು.. ಮುಂತಾಗಿ ಸ್ತ್ರೀಯರು ಮಾಡುವ ಗೃಹವಾರ್ತೆಯ ಕೆಲಸಗಳು ಹಾಗೂ ಅವರ ನಿತ್ಯಬದುಕಿನ ಸ್ವಂತ ಅನುಭವಗಳನ್ನು ನಿರ್ವಚಿಸುತ್ತವೆ.

ಅವಿವಾಹಿತ ತಾಯಿಯಾಗಿರುವ 'ಅಕ್ಷರತಪ್ಪುಗಳು' ಕಥೆಯ ನಾಯಕಿ ತನ್ನನ್ನು ಪ್ರೀತಿಸಿದ ಮತ್ತು ಮದುವೆಯಾಗಬಯಸಿದ ದಿನೇಶನಲ್ಲಿ ತನ್ನ ಮಗುವಿನ ತಂದೆ ಯಾರೆಂದು ಹೇಳಲು ನಿರಾಕರಿಸುತ್ತಾಳೆ. ಯಾಕೆಂದರೆ 'ಗೆರೆಗಳನ್ನು ಬರೆದು ಚೌಕಗಳನ್ನು ಸೃಷ್ಟಿಸುವುದು' ಅವಳಿಗೆ ಇಷ್ಟವಿಲ್ಲ. ಇದರಿಂದ ದಿನೇಶ ಸಿಟ್ಟಾಗಿ ಗರ್ಜಿಸಿದಾಗಲೂ ಅವಳು 'ಹೂಂಗುಟ್ಟುವಿಕೆಯಿಂದ ಮನಸ್ಸನ್ನು ಮುಚ್ಚು'ತ್ತಾಳೆ. ಹೀಗೆ ಮನಸ್ಸಿನಲ್ಲಿರುವುದನ್ನು ಪ್ರಕಟವಾಗಿ ಹೇಳದೆ ಭಾವನೆಗಳನ್ನು ಮುಚ್ಚಿಡುವ ಗುಣವನ್ನು ಸಮಾಜವು ಹೆಣ್ಣಿನಿಂದ ಅಪೇಕ್ಷಿಸುತ್ತದೆ. 'ಸದಾ ಗೆರೆಗಳನ್ನು ಹಾಕುವ ಸೀಮೆಸುಣ್ಣದ ತುಂಡನ್ನು ಹಿಡಿದುಕೊಂಡೇ ಓಡಾಡುವ' ಗಂಡಂದಿರ ಕಟ್ಟುಪಾಡಿನ ಒಳಗೆ ಬದುಕುವುದರಲ್ಲಿ ಅವಳಿಗೆ ಮನಸ್ಸಿಲ್ಲ. ಹಾಗಾಗಿ ಅವಳು ಪ್ರೇಮಿಸಿದವನು ಬೇರೆ ಮದುವೆಯಾಗಲು ನಿರಾತಂಕವಾಗಿ ಒಪ್ಪಿದ್ದಾಳೆ. ಗಂಡಸರು ವಿಧಿಸುವ ನಿರ್ಬಂಧಗಳು ಹೆಣ್ಣಿನ ಪಾಲಿಗೆ ಲಕ್ಷ್ಮಣರೇಖೆಯಾಗಿವೆ.

ಬೇರೆ ಹೆಣ್ಣನ್ನು ಮದುವೆಯಾದರೂ ಹಳೆಯ ಗೆಳತಿಯನ್ನು ಮರೆಯಲಾಗದೆ ಪ್ರತಿದಿನವೆಂಬಂತೆ ಭೇಟಿಯಾಗುತ್ತಿದ್ದ ದಿನೇಶ ತಮ್ಮ ನಡುವಿನ ಮಾತುಕತೆಯಲ್ಲಿ ಅವನ ಸಂಸಾರದ ಬಗ್ಗೆ ಯಾವುದೇ ಪ್ರಸ್ತಾಪ ಬಾರದಂತೆ ಜಾಗ್ರತೆ ವಹಿಸುವುದು ಅವಳ ಗಮನಕ್ಕೆ ಬರುತ್ತದೆ. ಇಂಥ ಪ್ರಹಸನಗಳು ಇನ್ನು ಬೇಡವೆಂದು ಅವನಿಗೆ ಹೇಳಬಯಸುತ್ತಾಳೆ. ಆದರೆ ಬಾಯಿಬಿಟ್ಟು ಹೇಳದೆ 'ಉಮ್ಮಳಿಸಿ ಬಂದ

ವಾಕರಿಕೆಯಂತೆ' ಆ ಮಾತುಗಳನ್ನು ಬಾಯೊಳಗೇ ಇಟ್ಟುಕೊಳ್ಳುತ್ತಾಳೆ. ಹೆಣ್ಣಿನ ಸಾಮಾನ್ಯ ಅನುಭವವಾಗಿರುವ ವಾಂತಿಯನ್ನು ಇಲ್ಲಿ ಉಪಮಿಸಲಾಗಿದೆ.

ಇಂಥದೇ ಒಂದು ಭೇಟಿಯಲ್ಲಿ ಅವಳೊಮ್ಮೆ ಸಾರ್ವಜನಿಕರು ನಡೆದಾಡುವ ದಾರಿಯಲ್ಲಿ ದಿನೇಶನ ಕೈಗಳನ್ನು ಹಿಡಿಯುತ್ತಾಳೆ. ಆಗವನು ಹೌಹಾರಿ ತೋರಿದ ಗಾಬರಿಯ ನೋಟ, ವರ್ತನೆಗಳು ಹುಟ್ಟಿಸಿದ ಜಿಗುಪ್ಸೆಯ ರುಚಿಯು 'ಕೆಟ್ಟುಹೋದ ಹಾಲಿನಂತೆ' ಬಾಯೊಳಗೆ ನಿಲ್ಲುತ್ತದೆ. ಕೆಟ್ಟ ಹಾಲಿನ ರುಚಿಯ ಅನುಭವವು ಹೆಣ್ಣಿನ ಮುಖ್ಯ ಕಾರ್ಯಕ್ಷೇತ್ರವಾಗಿರುವ ಅಡುಗೆಮನೆಗೆ ಸಂಬಂಧಿಸಿದ್ದಾಗಿದೆ. ಹೆಂಡತಿಯಿಂದ ವಿಚ್ಛೇದನ ಪಡೆಯಲು ಸಾಧ್ಯವೆ ಎಂದವಳು ಕೇಳಿದಾಗ 'ಪಡೆಯಬಹುದು, ಆದರೆ ಏನಾದರೂ ಕಾರಣ ಬೇಡವೆ' ಎಂದು ದಿನೇಶ ಪ್ರಶ್ನಿಸುವುದು 'ಹಾಕಿಕೊಂಡ ಬಟ್ಟೆಗೆ ಕೆಸರೆರಚಿಸಿಕೊಂಡಂತೆ' ಅವಳಲ್ಲಿ ರೇಜಿಗೆ ಉಂಟುಮಾಡುತ್ತದೆ. ಆ ಪ್ರಶ್ನೆಯು 'ಒಂದು ಕವಡೆಯಂತೆ' ಮನಸ್ಸಿನಲ್ಲಿ ಉರುಳುತ್ತದೆ.

ತನ್ನನ್ನು ಇಷ್ಟಪಡುವ ಇನ್ನೋರ್ವ ಗೆಳೆಯ ಗೋವಿಂದನ ವರ್ತನೆಯ ಬಗ್ಗೆ ಅವಳು ಬಳಸುವ ಉಪಮೆಯೊಂದು ಹೆಣ್ಣುಮಕ್ಕಳ ಬಾಲ್ಯದ ಆಟವನ್ನು ನೆನಪಿಸುತ್ತದೆ : 'ಚದುರಿಹೋದ ಗುಲಗಂಜಿ ಬೀಜಗಳನ್ನು ಹೆಕ್ಕಿ ಒಟ್ಟು ಮಾಡುವಂತೆ ಗೋವಿಂದ ನನ್ನನ್ನು ಬಳಿಗೆಳೆದು ಎದೆಗೊತ್ತಿಕೊಂಡ' ಒಂದು ಚೌಕಟ್ಟಿನ ಒಳಗೆ ಬಂಧಿಸುವ ಆ ಸಂಬಂಧದಲ್ಲಿ ಉಳಿಯಲು ಅವಳಿಗೆ ಇಷ್ಟವಿಲ್ಲ. ಯಾಕೆಂದರೆ 'ತುಂಬಾ ಕಾಲದ ನಂತರವೂ ಹಾಗೇ ಉಳಿಯುವ ಸಂದೇಹಗಳು ಇಳಿಬಿಟ್ಟ ಮುಂಡಿನ ಅಂಚಿಗೆ ಮೆತ್ತಿಕೊಳ್ಳುವ ಕೊಳೆಯಂತೆ ಒಂದು ಬಂಧದ ಅಂಚುಗಳನ್ನು ಕಪ್ಪಾಗಿಸುತ್ತವೆ.' ಕೇರಳದ ಸ್ತ್ರೀಯರು ಉಡುವ ಮುಂಡು ಮತ್ತು ಅದರ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವಲ್ಲಿನ ಕಷ್ಟ ಇಲ್ಲಿ ವಿಶೇಷಾರ್ಥದಲ್ಲಿ ರೂಪಕವಾಗಿ ಬಳಕೆಯಾಗಿವೆ.

ಮಾನಸಿ ಅವರು ಬರೆದ 'ಶೀಲಾವತಿ' ಕಥೆಯ ಶೀಲಾವತಿಗೆ ಬೇರೆ ಆಯ್ಕೆಯೆ ಇಲ್ಲದೆ ತಾನು ಪತಿಯೆಂದು ಒಪ್ಪಿಕೊಂಡಿರುವ ವ್ಯಕ್ತಿಯಲ್ಲಿ ಪ್ರೀತಿಯಿಲ್ಲ. ಬದಲಿಗೆ ಅಸಹ್ಯವಿದೆ. 'ಕುಷ್ಠರೋಗಿಯಾದ ಪತಿಯನ್ನು ಮುಟ್ಟಿದ ಕೂದಲು, ದೇಹ, ಮನಸ್ಸುಗಳನ್ನೆಲ್ಲ ಡೆಟ್ಟಾಲ್ ಹಾಕಿದ ನೀರಿನಲ್ಲಿ ತೊಳೆಯಬೇಕೆಂದು' ಅವಳು ತೀರ್ಮಾನಿಸುತ್ತಾಳೆ. ಪಾತ್ರೆ ತೊಳೆಯುವ, ಬಟ್ಟೆ ಒಗೆಯುವ, ನೆಲ ಒರೆಸುವ, ಮಿಂದು ಮುಟ್ಟಿನ ಅಶುದ್ಧಿ ಕಳೆದುಕೊಂಡು ಮಡಿಯಾಗುವ... ಹೀಗೆ ಸದಾ ಸ್ವಚ್ಛತೆಯ ಕೆಲಸಗಳಲ್ಲಿ ತೊಡಗಿರುವ ಸ್ತ್ರೀಯರ ಅನುಭವಲೋಕದಲ್ಲಿ 'ತೊಳೆಯುವಿಕೆ'ಗೆ ಒಂದು ವಿಶೇಷವಾದ ಅರ್ಥವಿದೆ.

ಕಮಲಾದಾಸ್ ಅವರು ಬರೆದಿರುವ 'ಚಂದನದ ಮರಗಳು' ಎಂಬ ನೀಳ್ಗತೆಯಲ್ಲಿ ಒಲ್ಲದ ದಾಂಪತ್ಯದಲ್ಲಿ ರೋಸಿಹೋಗಿರುವ ಪತ್ನಿ, ಮನವೊಪ್ಪದ ಪತಿಯೊಂದಿಗೆ ಹೊಂದಿಕೊಂಡು ಸಂಸಾರ ನಡೆಸುವ ಹೊರತು ಬೇರೆ ಆಯ್ಕೆಯಿಲ್ಲದ ಗರತಿಯ ಬದುಕಿನ ಬಗೆಗಿನ ಅಸಹನೆಯನ್ನು ಹೀಗೆ ಪ್ರಕಟಿಸುತ್ತಾಳೆ: "ಎಂಜಲನ್ನು ಮತ್ತೆ ಮತ್ತೆ ಉಣ್ಣುವಂತೆ ನಾನು ಗರತಿಯ ಬಾಳನ್ನು, ಗೃಹಿಣಿಯ ಧರ್ಮವನ್ನು ಅನುಸರಿಸತೊಡಗಿದೆ." (ಪು. ೮೫, ಕಮಲದಾಸ್‌ರವರ ನೀಳ್ಗಥೆಗಳು) ವ್ಯರ್ಥವಾಗಬಾರದು ಎಂಬ ಕಾರಣಕ್ಕೆ ಮಕ್ಕಳ ಮತ್ತು ಪತಿಯ ಎಂಜಲು ತಿನಿಸುಗಳನ್ನು ತಿನ್ನುವ ಗೃಹಿಣಿಯರ ಬದುಕಿನ ಸಾಮಾನ್ಯ ಅನುಭವ ಇಲ್ಲಿದೆ.

'ಮನೋಮಿ' ಕೃತಿಯಲ್ಲಿನ ತಮಿಳು ಹೋರಾಟಗಾರ ತಿರುಚೆಲ್ವಂ ತನ್ನ ದೇಹದ ಮೇಲಾದ ಗಾಯಗಳಿಂದಾದ ನೋವನ್ನು ಹಲ್ಲುಕಚ್ಚಿ ಒತ್ತಿ ಹಿಡಿವ ಯತ್ನದಲ್ಲಿ ಮೆಲ್ಲಗೆ ನರಳುವುದು ಮನೋಮಿಗೆ 'ಹೆರಿಗೆ ಬೇನೆ ತಿನ್ನುತ್ತಿರುವ ಕುಲೀನ ಮಹಿಳೆಯರು ಸಾಮಾನ್ಯವಾಗಿ ಹೊರಡಿಸುವ ಸಣ್ಣ ಸ್ವರ'ದಂತೆ ಕೇಳುತ್ತದೆ. ಕೆಳವರ್ಗದ ಹೆಣ್ಣುಮಕ್ಕಳಂತಲ್ಲದೆ ಕುಲೀನ ವರ್ಗದ ಮಹಿಳೆಯರು ಹೆರಿಗೆಬೇನೆಯಂಥಾ ಮಾರಣಾಂತಿಕ ನೋವಿನ ಸಂದರ್ಭದಲ್ಲೂ ಕಿರುಚಿ ರಂಪ ಮಾಡದೆ ಹಲ್ಲುಕಚ್ಚಿ ನೋವನ್ನು ಸಹಿಸಬೇಕೆಂದು ಸಮಾಜವು ನಿರೀಕ್ಷಿಸುತ್ತದೆ. ಕಷ್ಟವಾದರೂ ಸ್ತ್ರೀಯರು ಅಂತೆಯೆ ವರ್ತಿಸುತ್ತಾರೆ.

೩.೧೯. ಪ್ರಕೃತಿ – ಸ್ತ್ರೀ ಸಂಬಂಧ

ಪುರುಷಪ್ರಧಾನ ಸಮಾಜವು ತನ್ನ ಲಾಭಕ್ಕಾಗಿ ಸ್ತ್ರೀಯನ್ನೂ, ಪ್ರಕೃತಿಯನ್ನೂ ನಿರಂತರ ಶೋಷಣೆಗೆ ಒಳಪಡಿಸಿದೆ. ಈ ನಿಷ್ಕರುಣ ಶೋಷಣೆಯ ವಿರುದ್ಧದ ಚಳವಳಿಯಾಗಿ ಗುರುತಿಸಲಾಗಿರುವ ಪರಿಸರ ಸ್ತ್ರೀವಾದಕ್ಕೆ ಪೂರಕವಾದ ಆಶಯಗಳು ಮಲಯಾಳಂ ಸಾಹಿತ್ಯದಲ್ಲಿ ವ್ಯಕ್ತವಾಗಿವೆ. ಗದ್ದೆ, ತೋಟವೆಂದರೆ ಆದಾಯದ ಒಂದು ಮೂಲವೆಂದಷ್ಟೆ ಭಾವಿಸುವ, ಮರ ಕಡಿಯುವ, ಭೂಮಿ ಮಾರುವ ಮೂಲಕ ಶ್ರೀಮಂತನಾಗಲು, ಹಣ ಗಳಿಸಲು ಹವಣಿಸುವ ಪುರುಷರ ಲಾಭಕೋರತನಕ್ಕೆ ಸಂವಾದಿಯಾಗಿ ಸ್ತ್ರೀಯರು ಪ್ರಕೃತಿಯೊಂದಿಗೆ ಆಪ್ತಸಂವಾದದ ಸಂಬಂಧಗಳನ್ನು ಸ್ಥಾಪಿಸಿಕೊಳ್ಳುತ್ತಾರೆ. ಮನೆಯಲ್ಲಿ ಮುಕ್ತವಾಗಿ ಮಾತನಾಡುವ ಅವಕಾಶವನ್ನು ಹೊಂದಿಲ್ಲದ ಸ್ತ್ರೀಯರು ಮನೆಯ ಸುತ್ತಮುತ್ತಲಿನ ಗಿಡಮರಗಳೊಂದಿಗೆ, ತಮ್ಮ ಪರಿಸರದಲ್ಲಿ ಬದುಕುತ್ತಿರುವ ಪ್ರಾಣಿಪಕ್ಷಿಗಳೊಂದಿಗೆ ಆತ್ಮೀಯವಾಗಿ ಮಾತನಾಡುತ್ತ ಬದುಕನ್ನು ಸಹನೀಯವಾಗಿಸಿಕೊಳ್ಳುತ್ತಾರೆ. ಪುರುಷರ ದುರಾಸೆಯಿಂದ ಅವುಗಳನ್ನು ರಕ್ಷಿಸಲು ಪ್ರಯತ್ನಿಸುತ್ತಾರೆ. ಭೂಮಿಯ ಸುರಕ್ಷತೆ, ಗಿಡಮರಗಳ ಸಂರಕ್ಷಣೆಗಳ ಬಗ್ಗೆ ಪ್ರಾಮಾಣಿಕ ಕಾಳಜಿ ಹೊಂದಿರುವ ಈ ಸ್ತ್ರೀಯರು ನಿಸರ್ಗದೊಂದಿಗೆ ತಮ್ಮನ್ನು ಸಮೀಕರಿಸಿಕೊಳ್ಳುವ ಸಹಾನುಭೂತಿ ಮತ್ತು ಸಹಜೀವನವನ್ನು ಹೊಂದಿದ್ದಾರೆ. ಆ ಮೂಲಕ ಪರೋಕ್ಷವಾಗಿ ತಮ್ಮ ಬದುಕುವ ಸ್ವಾತಂತ್ರ್ಯವನ್ನು ವ್ಯಕ್ತಪಡಿಸುತ್ತಾರೆ.

ಬೇಲಿಗಳಿಲ್ಲದೆ ಪ್ರಕೃತಿಸಹಜವಾಗಿ ಬದುಕಲು ಇಷ್ಟಪಡುವ ಅವಿವಾಹಿತ ಹೆಣ್ಣುಮಗಳೊಬ್ಬಳು ಅಮ್ಮ, ಅಜ್ಜಿ ಮತ್ತು ಅಪ್ಪನ ಸರ್ಪಗಾವಲಿನ ನಡುವೆಯೂ ಗರ್ಭಿಣಿಯಾಗಿ ನಿರಾಳವಾಗಿರುವುದನ್ನು 'ಪ್ರಕಾಶಿನಿಯ ಮಕ್ಕಳು' ಎಂಬ ಕಥೆಯಲ್ಲಿ ಸಾರಾ ಜೋಸೆಫ್ ಅವರು ನಿರೂಪಿಸಿದ್ದಾರೆ. ಪ್ರಕಾಶಿನಿ ಎಂಬ ಈ ಹೆಣ್ಣುಮಗಳು ತಾನು ಪ್ರೀತಿಸಿದವನೊಂದಿಗೆ ನೆಮ್ಮದಿಯಿಂದ ಮಲಗಲು ಮತ್ತು ತನ್ನ ಮಕ್ಕಳನ್ನು ಹೆರಲು ಹಸುರು ಹುಲ್ಲಿನ ಜಾಗ ಹಾಗೂ ಉತ್ತು ಹದಮಾಡಿದ ಭೂಮಿಗಾಗಿ ಹುಡುಕಾಡುತ್ತಾಳೆ. 'ಕುಡಿಯಲು ನೀರಿಲ್ಲದ, ಹುಲ್ಲು ಹುಟ್ಟದ, ಹೆತ್ತ ಬಾಣಂತಿಗೆ ಕಷಾಯ ಮಾಡಿ ಕೊಡಲು ವಸ್ತುಗಳಿಲ್ಲದ, ಅಳುವ ಮಕ್ಕಳಿಗೆ ಹಾಲಿಲ್ಲದ, ಅವನ್ನು ಮಲಗಿಸಲು ಜಾಗವೂ ಸಾಲದ' ಊರಿನಲ್ಲಿ, ಕನ್ಯೆಯರು ಹೆರುವುದು ನಿಷಿದ್ಧವಾಗಿರುವ ಸಮಾಜದಲ್ಲಿ ಆಕೆ ಸಹಜವಾಗಿ ಬದುಕಲು ಪ್ರಯತ್ನಿಸುತ್ತಿದ್ದಾಳೆ. ಪ್ರಕಾಶಿನಿಗೆ ತನಗಿಷ್ಟವಾದವನನ್ನು ತಾನು ಬಯಸಿದ ಪ್ರದೇಶದಲ್ಲಿ ಸ್ವಚ್ಛಂದವಾಗಿ ಪ್ರೇಮಿಸುವ ಮತ್ತು ಕೇವಲ 'ತನ್ನದು' ಮಾತ್ರ ಆಗಿರುವ ಮಕ್ಕಳನ್ನು ನೈಸರ್ಗಿಕವಾದ ಪರಿಸರದಲ್ಲಿ ಹೆತ್ತು ಬೆಳೆಸುವ ಅದಮ್ಯ ಬಯಕೆಯಿದೆ. ಅದಕ್ಕಾಗಿ ತನ್ನ ಗರ್ಭವನ್ನು ನಾಶ ಮಾಡಲು ಯತ್ನಿಸಿದ ಅಪ್ಪನನ್ನು ಪರಚಿ, ಮಂತ್ರವಾದಿಯನ್ನು ಒದ್ದು ಓಡಿಸಿ ತನ್ನ ಕನಸುಗಳನ್ನು ಉಳಿಸಿಕೊಳ್ಳುತ್ತಾಳೆ.

ನೀರಿನ ಕೊಳದಲ್ಲಿರುವ ನೊಣಗಳು, ಮಿಡತೆಗಳು, ಗಿಳಿಗಳು, ಹಾವಸೆ ಮತ್ತು ದಡದಲ್ಲಿರುವ ಗಿಡಗಳೊಂದಿಗೆ ಒಂದು ಮಧುರ ಸಂಬಂಧವನ್ನು ಹೊಂದಿ, ಸರ್ವಾಂಗಗಳಿಗೂ ಪಂಚಭೂತಗಳ ದರ್ಶನ ಮಾಡಿಸುತ್ತ ಎಗ್ಗಿಲ್ಲದೆ ನಗ್ನಳಾಗಿ ಸ್ನಾನ ಮಾಡುವ ಪ್ರಕಾಶಿನಿಗೆ ಅಧಿಕೃತತೆಯಿಲ್ಲದ ತನ್ನ ಗರ್ಭದ ಬಗ್ಗೆ ನಾಚಿಕೆ, ಅಂಜಿಕೆಗಳಿಲ್ಲ. ಗರ್ಭಕ್ಕೆ ಕಾರಣರಾದವರನ್ನು ತನ್ನ ಮಗುವಿನ ತಂದೆಯಾಗಿ ಸ್ಥಾಪಿಸುವ ಇರಾದೆಯಿಲ್ಲ. 'ನನ್ನ ಮಕ್ಕಳ ಬಗ್ಗೆ ಮಾತನಾಡು' ಎಂದು ಆರ್ತನಾಗಿ ಬೇಡಿಕೊಳ್ಳುವ ಪ್ರಿಯಕರನಿಗೆ ಅವಳ ಉತ್ತರ ಹೀಗಿದೆ: "ಅವರು ಸೂರ್ಯನ ಮಕ್ಕಳು. ಈ ಪರ್ವತದ ಮಕ್ಕಳು. ಮಾಮರಗಳ ಮಕ್ಕಳು. ಆಕಾಶದ ಮಕ್ಕಳು. ಹೊಳೆಯ, ಕಡಲಿನ, ತಾರೆಗಳ..." (ಪು. ೧೬೪, ಮಲಯಾಳದ ೧೦ ಕಥೆಗಾರ್ತಿಯರು) ಪುರುಷ ಬಯಸುವಂತೆ ಅವನ ಹೆಸರಿಗೆ, ವಂಶಕ್ಕೆ, ಆಸ್ತಿಗೆ ಉತ್ತರಾಧಿಕಾರಿಯಾಗುವ ಮಕ್ಕಳನ್ನು ತಾನು ಹೆರಲಾರೆ ಎಂದು ಸ್ಪಷ್ಟವಾಗಿ ನಿರಾಕರಿಸುವ ಸ್ವತಂತ್ರ ಚಿಂತನೆಯ ಸ್ತ್ರೀಯ ಮಾದರಿಯಾಗಿ ಪ್ರಕಾಶಿನಿ ಕಾಣಿಸಿಕೊಂಡಿದ್ದಾಳೆ. ತನ್ನ ಮಕ್ಕಳ ಪಿತೃತ್ವವನ್ನು ಸಾಬೀತುಪಡಿಸುವುದು 'ನನ್ನಿಂದ ಮಾತ್ರವೆ ಸಾಧ್ಯ' ವೆನ್ನುವ ಆಕೆಯ ಮಾತಿನಲ್ಲಿ ಪಿತೃಪ್ರಧಾನವಾದ ಕುಟುಂಬ ಪದ್ಧತಿ ಹೆಣ್ಣಿನಿಂದ ಕಸಿದುಕೊಂಡಿರುವ ತಾಯ್ತನದ ಸ್ವಾಮ್ಯದ ಬಗ್ಗೆ ಅಸಮಾಧಾನವಿದೆ.

ಪ್ರಿಯಕರನೊಂದಿಗೆ ಪ್ರಣಯಕ್ಕೆ ಅವನೇ ವ್ಯವಸ್ಥೆ ಮಾಡಿರುವ ಹವಾನಿಯಂತ್ರಿತ ಕೋಣೆಗಿಂತ ಗುಡ್ಡದ ಇಳಿಜಾರು ಮತ್ತು ಹುಲ್ಲಹಾಸುಗಳೆ ಅವಳಿಗೆ ಹೆಚ್ಚು ಇಷ್ಟವಾಗಿವೆ. ನಡುನಡುವೆ ಮಾಮರಗಳಿರುವ ಗುಡ್ಡದ ಇಳಿಜಾರಿನಲ್ಲಿ ಭೂಮಿಯನ್ನು ಸ್ವತಃ ತಾನೆ ಉತ್ತು ಹದ ಮಾಡಿದ ಜಾಗದಲ್ಲಿ ಅವಳು

ಹೆರಬಯಸಿದ್ದಾಳೆ. ಹಾಗೆ ಹೆತ್ತ ಮಕ್ಕಳು ತಾಯಗರ್ಭದಿಂದ ಭೂಮಿಗೆ ಬೀಳುವಾಗ ಅವರನ್ನು ಸ್ನಾನ ಮಾಡಿಸಲು 'ಒಂದೇ ಸಮನೆ ಜಡಗುಟ್ಟಿ ಹೊಯ್ಯುವ ಆಷಾಢದ ಮಳೆ' ಸುರಿಯಬೇಕೆಂಬುದು ಅವಳ ಬಯಕೆ. ಅಷ್ಟೇ ಅಲ್ಲ, "ಒದ್ದೆಯಾದ ಮಣ್ಣಿನ ಮತ್ತು ಎಲೆಗಳ ವಾಸನೆಯನ್ನು ಅವರು ಮೊದಲು ಉಸಿರಾಡುವುದು. ಗುಡುಗು ಸಿಡಿಲುಗಳ ತಾಳವನ್ನು ಕೇಳಿ ಅವರ ಹೃದಯ ಸ್ಪಂದಿಸಬೇಕು. ಗಾಳಿ ಮತ್ತು ಮಳೆಗಳ ಸಂಗೀತವನ್ನು ಅವರು ಮೊದಲು ಕೇಳಬೇಕು. ಅವರು ಮೊದಲು ನೋಡಬೇಕಾದುದು ಆಕಾಶದ ಬಣ್ಣ. ಅವರು ಮೊದಲು ರುಚಿ ನೋಡಬೇಕಾದ್ದು ಕಡಲಿನ ಉಪ್ಪಿನದ್ದು... ಯಾಕೆಂದರೆ ಅವರು ಪ್ರಕಾಶಿನಿಯ ಮಕ್ಕಳು ತಾನೆ?" (ಪು. ೧೬೫, ಅದೇ) ಪ್ರಕಾಶಿನಿಯ ಪಾತ್ರದ ಮೂಲಕ ಲೇಖಕಿಯ ಪರಿಸರ ಸ್ತ್ರೀವಾದದ ಚಿಂತನೆ ವ್ಯಕ್ತವಾಗುತ್ತದೆ. ನಿಸರ್ಗದಂತೆ ಹೆಣ್ಣು ಕೂಡ ಯಾರ ಹಸ್ತಕ್ಷೇಪವೂ ಇಲ್ಲದೆ, ನಿರ್ಬಂಧಗಳಿಲ್ಲದೆ ಚಲಿಸಲು ಮತ್ತು ಅರಳಲು ಅವಕಾಶ ಬೇಕಾಗಿದೆ. ಪುರುಷನ ಹೆಸರಿನೊಂದಿಗೆ ತಳುಕು ಹಾಕಿಕೊಳ್ಳುವ ಅಗತ್ಯವಿಲ್ಲದೆ ತನ್ನದೇ ಚಹರೆಯನ್ನು ಕಂಡುಕೊಳ್ಳಲು ಮತ್ತು ಸ್ವತಂತ್ರವಾಗಿ ಗುರುತಿಸಿಕೊಳ್ಳಲು ಅವಕಾಶ ಬೇಕಾಗಿದೆ.

ಭೂಮಿ ಮತ್ತು ಪರಿಸರಗಳು ತಮ್ಮಂತೆಯೆ ಜೀವವಿರುವಂಥವು ಎಂದು ಸ್ತ್ರೀಯರು ಭಾವಿಸುತ್ತಾರೆ. ಈ ಮಾತನ್ನು ಲೇಖಕಿಯರಿಗೂ ಅವರು ಸೃಷ್ಟಿಸಿದ ಪಾತ್ರಗಳಿಗೂ ವಿಶೇಷವಾಗಿ ಅನ್ವಯಿಸಿ ಹೇಳಬಹುದಾಗಿದೆ. ಎ.ಎಸ್. ಪ್ರಿಯಾ ಅವರು ಬರೆದಿರುವ 'ನಾವು ಹೆಸರು ಬಳ್ಳಿಯಲಿ ತೂಗಾಡಿದೆವು' ಎಂಬ ಕತೆಯಲ್ಲಿನ ಪದ್ಮಿನಿ ಹೆರಲಿಲ್ಲವೆಂದು ಗಂಡ ಬೇರೆ ಮದುವೆಯಾಗಿದ್ದಾನೆ. ಅಕ್ಕನ ಮಗಳು ಗುರುತಿಸುವಂತೆ ಗಂಡನಿಂದ ದೂರವಾದ ನಂತರವೆ ಪದ್ಮಿನಿ 'ಹಾಡು ಗುನುಗೋದು, ಕಸೂತಿ ಹಾಕೋದು, ರುಚಿರುಚೀ ನೈಯಪ್ಪ ಮಾಡೋದು' ಹೀಗೆ ಖುಷಿಯಾಗಿರುತ್ತಾಳೆ. ಆರು ತಿಂಗಳ ಹಿಂದೆ ಗಂಡನಿದ್ದಾಗ ಅವಳ ಕಣ್ಣ ಕೆಳಗಿದ್ದ ಕಪ್ಪು ವರ್ತುಲವೀಗ ಮಾಯವಾಗಿದೆ. ಹಣೆಯಲ್ಲಿ ಚಿಂತೆಯ ಗೆರೆಗಳಿಲ್ಲ. ಚೆನ್ನಾಗಿ ನಿದ್ರೆಯನ್ನೂ ಮಾಡುತ್ತಾಳೆ. ಗಂಡನಿಂದ ಬೇರೆಯಾದ ಮೇಲೆ ಸಾಲಮಾಡಿ ತೆಗೆದುಕೊಂಡ ಮನೆಯನ್ನು ಮಗುವಿನಂತೆ ಲಾಲಿಸುತ್ತ ಖುಷಿಯಾಗಿರುವ ಪದ್ಮಿನಿಯ ವರ್ತನೆ ಅವಳ ತಂದೆಗೆ ಚಿಂತೆಯಾಗಿದೆ: "ಅವಳ ಮನೆ, ಜ್ವರದ ಹಾಗೆ ಕಾಡ್ತಿದೆ! ಅದೊಂದು ಕಟ್ಟಡ ಅಂತ ಮರೆತೇಬಿಡ್ತಾಳೆ! ಮನೆಯನ್ನು ಒಟ್ಟು ಮಗುವಿನ ತರಹ ನೋಡ್ತಾಳೆ. ಕಂಕುಳಲ್ಲಿ ಎತ್ಕೊಳ್ಳೋದೊಂದೇ ಬಾಕಿ!" (ಪು. ೧೫೩, ಕೇರಳ ಕಾಂತಾಸಮ್ಮಿತ) ಅವಳನ್ನು ಒಳ್ಳೇ ಡಾಕ್ಟರಿಗೆ ತೋರಿಸಬೇಕು ಎಂದೂ ಅವರಂದುಕೊಂಡಿದ್ದಾರೆ. ಆದರೆ ಸ್ವತಃ ವಿಧವೆಯಾಗಿದ್ದು, ಕಳೆದುಕೊಂಡ ಪತಿಯ ಸಾಂಗತ್ಯವನ್ನು ಮಗಳಲ್ಲಿ ಕಾಣುತ್ತ ಬದುಕಲ್ಲಿ ಪ್ರೀತಿ ಮೂಡಿಸಿಕೊಂಡ ನಿರೂಪಕಿ ಪದ್ಮಿನಿಯ ಪರಿಸ್ಥಿತಿಯನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಂಡು ವಿಶ್ಲೇಷಿಸುವುದನ್ನು ಕತೆಯಲ್ಲಿ ಕಾಣಬಹುದು.

ಅಕ್ಕನ ಮಗಳೊಂದಿಗೆ ಶಾಪಿಂಗ್‌ಗೆ ಹೋಗಿದ್ದ ಪದ್ಮಿನಿ 'ಮನೆಯ ತಿಂಡಿ ಚೆನ್ನಾಗಿರುತ್ತೆ' ಎಂದು ಹೊರಗಿನ ತಿಂಡಿ ತಿನ್ನಲೊಪ್ಪುವುದಿಲ್ಲ. ತನಗಾಗಿ ಏನನ್ನೂ ಕೊಳ್ಳದೆ, ಮನೆಯ ಅಂದಕ್ಕೆ ಬೇಕಾದ ವಸ್ತುಗಳನ್ನು ಉತ್ಸಾಹದಿಂದ ಆಯ್ದು ತರುತ್ತಾಳೆ. ಅವಳ ಪ್ರಕಾರ ತಾನು 'ಮಗುಥರ ಲಾಲಿಸಿ ಪಾಲಿಸಿರುವ' ಮನೆಗೆ ಭಾವನೆಗಳಿವೆ, ಸ್ವಂತ ಅಭಿರುಚಿಯಿದೆ. ಅವಳು ಆಫೀಸಿಂದ ಬರೋದು ತಡವಾದರೆ, ಮನೆ 'ಎವೆ ಪಿಳುಕಿಸದೇ ಕಾಯ್ತಿರುತ್ತದೆ.' ಈಗ ಕೆಲದಿನಗಳ ಮಟ್ಟಿಗೆ ನೆಂಟರ ಮನೆಗೆಂದು ಹೊರಟು ಬರುವಾಗಲೂ 'ಮನೇನ ನೋಡಿಕೊಳ್ಳಿ' ಎಂದು ಗಾಳಿಗೂ, ಪಕ್ಷಿಗಳಿಗೂ, ಹೂಗಳಿಗೂ ಹೇಳಿಯೆ ಬಂದಿದ್ದಾಳೆ. ಅವಳು ಬಂದು ಎರಡು ವಾರವಾಗಿರುವುದರಿಂದ 'ಈತನಕ ಅದು ಅತ್ತತ್ತು ಉಸಿರುಗಟ್ಟಿರಬೇಕು' ಎಂದು ಅಲವತ್ತುಗೊಳ್ಳುತ್ತಾಳೆ. 'ನಾನು ವಾಪಸ್ಸು ಬರಲ್ಲ ಅಂತ ಚಿಂತೆಯಾಗಿರಬಹುದು; ಕಣ್ಣೀರು ತುಂಬಿದ ಮನೆ ಕನಸಲ್ಲಿ ಕಂಡಿತು!' (ಪು. ೧೫೫, ಅದೇ) ಎಂದು ಹಠ ಮಾಡಿ ವಾಪಸು ಹೊರಟುಬಿಡುತ್ತಾಳೆ. ಇತರರಿಗೆ ವಿಚಿತ್ರವಾಗಿ ಕಾಣಬಹುದಾದ ಪದ್ಮಿನಿಯ ವರ್ತನೆ ಒಂಟಿಯಾಗಿ ಬದುಕಬೇಕಾದ ಹೆಣ್ಣು ಕಂಡುಕೊಳ್ಳುವ ಬದಲಿ ಆಸರೆಗಳ ಬಗ್ಗೆ ಗಮನ ಸೆಳೆಯುತ್ತದೆ. ಪರಿಸರದ ಜೊತೆಗೆ ಪರ್ಯಾಯ ಸಾಹಚರ್ಯ ಮತ್ತು ಸಂವಾದವನ್ನು ಸಾಧ್ಯವಾಗಿಸಿಕೊಳ್ಳುವ ಸ್ತ್ರೀಯರು ಪ್ರೀತಿ ಹಂಚುತ್ತ, ಪ್ರೀತಿ ಪಡೆಯುತ್ತ ಬದುಕಲು ಹಂಬಲಿಸುತ್ತಾರೆ.

ಮನೆಯ ಆಡಿನೊಂದಿಗೆ ಮನುಷ್ಯರಷ್ಟೇ ಸಹಜವಾಗಿ ಸಂಭಾಷಣೆ ನಡೆಸುವ 'ಕಾಲ' ಕಾದಂಬರಿಯ ಸುಮಿತ್ರೆ, ಅಂಗಳದಲ್ಲಿ ಒಣಗಿಸುತ್ತಿರುವ ಭತ್ತವನ್ನು ತಿನ್ನಲು ಹೊಂಚು ಹಾಕುತ್ತಿರುವ ಕಾಗೆಯನ್ನು ಬೈದು ಎಚ್ಚರಿಸುವ 'ದುರ್ಬೀಜ' ಕಾದಂಬರಿಯ ನೆಬೀಸಾ, ಹೂವು ಮತ್ತು ತರಕಾರಿ ಗಿಡಗಳನ್ನು ಸ್ವಂತ ಮಕ್ಕಳಂತೆ ನೆಟ್ಟು ಬೆಳೆಸಿ ರಕ್ಷಿಸುವ 'ದೇವರಕಣ್ಣು' ಕಾದಂಬರಿಯ ಉಮ್ಮ ಮತ್ತು ನಫೀಸಾ, ತನ್ನ ಜಾಣ್ಮೆಯನ್ನು ಆಡಿಗೂ ಕಲಿಸಿ ಮನೆಯ ಖರ್ಚು ನಿಭಾಯಿಸುವಲ್ಲಿ ನೆರವು ಪಡೆದುಕೊಳ್ಳುವ 'ಪಾತುಮ್ಮಳ ಆಡು' ಕತೆಯ ಪಾತುಮ್ಮ, ಗಿಡ-ಹೂ-ಬಳ್ಳಿ-ಚಿಗುರುಗಳನ್ನು ತಮ್ಮ ಮನೆಯಂಗಳದಲ್ಲಿ ಬದುಕಿರುವ ಕುಟುಂಬವೆಂಬಂತೆ ನಡೆಸಿಕೊಳ್ಳುವ 'ಸುಂದರಿಯರು ಸುಂದರರು' ಕೃತಿಯ ರಾಧೆ.. ಇವರೆಲ್ಲ ನಿಜ ಅರ್ಥದ ಪ್ರಕೃತಿ ಪ್ರೇಮಿಗಳಾಗಿ ಕಾಣುತ್ತಾರೆ. 'ದೇವರಕಣ್ಣು' ಕೃತಿಯಲ್ಲಿಯೂ ಪರಿಸರ ಸ್ತ್ರೀವಾದದ ಚಿಂತನೆಗಳಿವೆ. ಸಾರಾ ಜೋಸೆಫ್ ಅವರು ಬರೆದಿರುವ 'ಅಶೋಕ' ಎಂಬ ಕತೆಯಲ್ಲಿ ತನ್ನನ್ನು ಮಣ್ಣಿನ ಮಗಳಾಗಿ ಗುರುತಿಸಿಕೊಳ್ಳುವ ಸೀತೆ, ತನ್ನ ಅಸ್ಮಿತೆಯನ್ನು ಪ್ರಕೃತಿಯೊಂದಿಗೆ ಸಮೀಕರಿಸಿಕೊಳ್ಳುತ್ತಾಳೆ.

ತಂತ್ರಜ್ಞಾನ ಮತ್ತು ಲಾಭಬಡುಕತನಗಳು ಭೂಮಿಯನ್ನು ಇಡಿಯಾಗಿ ನುಂಗಿ ನೊಣೆಯುವ ಸನ್ನಾಹದಲ್ಲಿರುವಾಗ ಸ್ತ್ರೀಯರು ತಾವು ಮತ್ತು ತಮ್ಮ ಮಕ್ಕಳು ಸಹಜವಾಗಿ ಉಸಿರಾಡುವುದಕ್ಕೆ, ಅರಳುವುದಕ್ಕೆ, ನಿಡುಸುಯ್ಯುವುದಕ್ಕೆ, ಸಂವಹಿಸಿ ಹಗುರಾಗುವುದಕ್ಕೆ ಒಂದಿಷ್ಟು ಹಸಿರು ಪರಿಸರದ

ಅಗತ್ಯವನ್ನು ಮನಗಂಡಿದ್ದಾರೆ ಮತ್ತು ಅದನ್ನು ರಕ್ಷಿಸಲು ಕಟಿಬದ್ಧರಾಗಿದ್ದಾರೆ. ಈ ಭೂಮಿ ಒಂದು ಸಾವಯವ ವಸ್ತು, ಭೂಮಿಯನ್ನು ಪ್ರೀತಿ ಪರಿಶ್ರಮಗಳಿಂದ ಒಲಿಸಿಕೊಂಡು ದುಡಿಯಬೇಕು ಹೊರತು ಬಲಪ್ರಯೋಗ ಮಾಡುವುದು ಸರಿಯಲ್ಲ, ಅದರಿಂದ ವಿನಾಶ ಖಂಡಿತ ಎಂಬ ಅಭಿಪ್ರಾಯವನ್ನು ಮಲಯಾಳಂ ಲೇಖಕರು ಹೊಂದಿದ್ದಾರೆ. ತಮ್ಮ ಕಥನಗಳ ಸ್ತ್ರೀಪಾತ್ರಗಳ ಮೂಲಕ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೩.೨. ಸ್ತ್ರೀಲೈಂಗಿಕತೆ

ಸ್ತ್ರೀಯರ ಲೈಂಗಿಕ ಅಗತ್ಯತೆ ಮತ್ತು ಅಪೇಕ್ಷೆಗಳನ್ನು ಸಮಾಜವು ಕಡೆಗಣಿಸುತ್ತದೆ. ಸ್ತ್ರೀಯರ ಕೌಟುಂಬಿಕತೆಗೆ ನೀಡಲಾಗಿರುವ ಮಹತ್ವವನ್ನು ಲೈಂಗಿಕತೆಗೆ ನೀಡಲಾಗಿಲ್ಲ. ಗಂಡನ ಕುರಿತಾಗಿ ಎಷ್ಟೇ ಅತೃಪ್ತಿಯಿದ್ದರೂ, ಗಂಡನಲ್ಲಿ ಲೈಂಗಿಕ ಸಾಮರ್ಥ್ಯವಿಲ್ಲದೆ ಇದ್ದಾಗಲೂ ಸ್ತ್ರೀಯರು ದಾಂಪತ್ಯದ ಗೆರೆದಾಟದೆ ನಿಷ್ಠರಾಗಿರಬೇಕೆಂದು ಅಪೇಕ್ಷಿಸಲಾಗಿದೆ. ಹಲವು ಬಾರಿ ಇದು ವಿಷಮದಾಂಪತ್ಯಕ್ಕೆ ಕಾರಣವಾಗುತ್ತದೆ. ದಾಂಪತ್ಯದಲ್ಲಿ ನಿರಾಶರಾದ ಸ್ತ್ರೀಯರು ಯಾರಲ್ಲೂ ಬಾಯಿಬಿಟ್ಟು ಹೇಳಿಕೊಳ್ಳುವುದಾಗದೆ, ತಮ್ಮ ಬಯಕೆಗಳ ಪೂರೈಕೆಗಾಗಿ ರಹಸ್ಯ ಪ್ರೇಮಸಂಬಂಧಗಳನ್ನು ಬೆಳೆಸಿಕೊಳ್ಳುವುದನ್ನು ಮಲಯಾಳಂ ಕಥನಗಳಲ್ಲಿ ಕಾಣಬಹುದಾಗಿದೆ. ಇಂಥ ಸಂಬಂಧಗಳು ಕೆಲವೊಮ್ಮೆ ಯಶಸ್ವಿಯಾಗಬಹುದು. ಹಲವು ಬಾರಿ ಸಮಸ್ಯೆಗೂ ಕಾರಣವಾಗಬಹುದು. ಅಂಥ ಸಂದರ್ಭಗಳಲ್ಲಿ ಪುರುಷರಿಂದ ತೊಂದರೆಗೆ ಒಳಗಾದ ಸ್ತ್ರೀಯರು ತಮ್ಮದೇ ಆದ ಸ್ತ್ರೀವಿಶಿಷ್ಟ ರೀತಿಯಲ್ಲಿ ಪ್ರತೀಕಾರವನ್ನು ಕೈಗೊಳ್ಳಲೂಬಹುದು. ಪುರುಷನೊಂದಿಗಿನ ಸಂಬಂಧದ ಸ್ವಾರ್ಥ ಮತ್ತು ಅಹಂಗಳ ಗೊಡವೆಯೆ ಬೇಡವೆಂದು ಸ್ತ್ರೀಯರು ಸ್ತ್ರೀಯರನ್ನೆ ಪ್ರೇಮಿಸುವ ಮತ್ತು ಕಾಮಿಸುವ ಮುಖಾಂತರ ಪುರುಷತ್ವದ ಸ್ಥಾಪಿತ ಲೈಂಗಿಕ ಸಾಮರ್ಥ್ಯವನ್ನು ನಿರಾಕರಿಸಿದ ಉದಾಹರಣೆಗಳೂ ಇವೆ. ಇಂಥ ಸಲಿಂಗ ಆಕರ್ಷಣೆಯಿಂದಾಗಿ ವೈವಾಹಿಕ ಬದುಕಿನಲ್ಲಿ ಹೊಂದಿಕೊಳ್ಳಲಾಗದೆ ಅತೃಪ್ತರಾದವರು, ಪತಿಯ ಕುರಿತಾಗಿ ಪ್ರೀತಿ, ಸೆಳೆತವಿಲ್ಲದ ಕಾರಣ ತಾಯ್ತನವನ್ನು ನಿರಾಕರಿಸಿದವರೂ ಇದ್ದಾರೆ. ಹೀಗೆ ಸ್ತ್ರೀಯರ ಲೈಂಗಿಕ ಬದುಕಿಗೆ ಸಂಬಂಧಿಸಿದಂತೆ ಮುಖ್ಯವೆನಿಸುವ ಕೆಲವು ಕೃತಿಗಳು ನಿರೂಪಿಸುವ ಸ್ತ್ರೀಪಾತ್ರಗಳನ್ನು ಮತ್ತು ಅವುಗಳ ವರ್ತನೆಗಳನ್ನು ಇಲ್ಲಿ ಗಮನಿಸಲಾಗಿದೆ.

೩.೨.೧. ಲೈಂಗಿಕ ಸದಾಚಾರ : ಸ್ತ್ರೀಯರಿಗೆ ಮಾತ್ರ

ಭಾರತೀಯ ಸಮಾಜದಲ್ಲಿ ಲೈಂಗಿಕ ಸದಾಚಾರ ಅಥವಾ ಶುದ್ಧಚಾರಿತ್ರ್ಯವೆಂಬುದು ಹೆಣ್ಣಿಗೆ ಮಾತ್ರ ವಿಧಿಸಲ್ಪಟ್ಟಿರುವ ಮೌಲ್ಯವಾಗಿದೆ. ಲಿಂಗಸಂಬಂಧಿಯಾದ ಸಾಮಾಜಿಕ ನಿರ್ಬಂಧಗಳಿಂದಾಗಿ ಸ್ತ್ರೀಯರ ಬದುಕಿನ ಗತಿ ಬದಲಾಗುತ್ತದೆ. ಸ್ತ್ರೀಯರನ್ನು ಸದಾಚಾರವೆಂಬ ಲಕ್ಷ್ಮಣರೇಖೆಯೊಳಗೆ ಸದಾ ಬಂಧಿಸುವ

ಮತ್ತು ಕುಟುಂಬದ ಸ್ವಾಸ್ಥ್ಯಕ್ಕಾಗಿ ಆ ರೇಖೆಯನ್ನು ದಾಟದಂತೆ ನಿರ್ಬಂಧಿಸುವ ಮೂಲಕ ಅವರನ್ನು ಅನಿಶ್ಚಿತತೆ ಮತ್ತು ಅಸುರಕ್ಷಿತತೆಗಳ ನಡುವೆ ಬದುಕುವಂತೆ ಮಾಡಲಾಗಿದೆ. ಸದಾಚಾರದ ವಿಷಯವಾಗಿ ಸಮಾಜವು ಹೊಂದಿರುವ ಏಕಪಕ್ಷೀಯವಾದ ನಂಬಿಕೆಗಳು ಕೆಲವೊಮ್ಮೆ ಸ್ತ್ರೀಯ ಬದುಕನ್ನು ದುರಂತವಾಗಿಸುವುದನ್ನು ಮಲಯಾಳಂ ಲೇಖಕರು ತಮ್ಮ ಕೃತಿಗಳಲ್ಲಿ ಕಾಣಿಸಿದ್ದಾರೆ.

ಕಮಲಾದಾಸ್ ಅವರು ಬರೆದಿರುವ 'ತೂಗುಮಂಚ' ಕತೆಯು ಸದಾಚಾರ ಮತ್ತು ವ್ಯಾಖ್ಯೆಗಳು ಗಂಡಿಗೂ ಹೆಣ್ಣಿಗೂ ಬೇರೆಯಾಗಿರುವುದನ್ನು ಗುರುತಿಸುತ್ತದೆ. ರಾಜ್ಯಲಕ್ಷ್ಮಿ ಸ್ವತಂತ್ರ ಚಿಂತನೆ ಮತ್ತು ದೃಢ ನಿರ್ಧಾರವುಳ್ಳ ಹೆಣ್ಣುಮಗಳು. ಕಾಲೇಜು ದಿನಗಳಲ್ಲಿ ಇಷ್ಟಪಟ್ಟ ಹುಡುಗನಾಗಿದ್ದ ಉಣ್ಣಿತ್ತಾನ್‌ನನ್ನು ಮದುವೆಯಾಗಿ ಅಮೆರಿಕಾಕ್ಕೆ ಹೋಗುತ್ತಾಳೆ. ಆದರೆ ಅವಳ ದಾಂಪತ್ಯ ವಿಷಮವಾಗುತ್ತದೆ. ಪತಿಯ ಉದ್ಯಮದ ಬೆಳವಣಿಗೆಗೆ ಸಹಕರಿಸುವುದಕ್ಕಾಗಿ ಅವನೊಂದಿಗೆ 'ಔತಣಕೂಟಗಳಿಗೆ ಹೋಗುವುದಕ್ಕಾಗಲೀ, ಗಂಡಸರೊಂದಿಗೆ ಡ್ಯಾನ್ಸ್ ಮಾಡುವುದಕ್ಕಾಗಲೀ ಒಪ್ಪದ, ಮದ್ರಾಸಿನಲ್ಲಿ ಬೆಳೆದರೂ ನಡವಳಿಕೆಯಲ್ಲಿ ಓರ್ವ ಹಳ್ಳಿಯವರಂತೆಯೇ ಇದ್ದ' ಅವಳನ್ನು ತ್ಯಜಿಸಿ ಬೇರೆ ಮದುವೆ ಮಾಡಿಕೊಳ್ಳುತ್ತಾನೆ. ರಾಜ್ಯಲಕ್ಷ್ಮಿ ವಾದಕ್ಕಿಳಿಯದೆ, ಕೇಸ್ ಮಾಡದೆ, ಬೇರೊಂದು ನಗರಕ್ಕೆ ಹೋಗಿ ಕೆಲಸಕ್ಕೆ ಸೇರಿ ಸ್ವಸ್ಥವಾಗಿ ಬದುಕುತ್ತಾಳೆ.

ತಾನು ಏಕಮುಖವಾಗಿ ಪ್ರೀತಿಸಿದ ರಾಜ್ಯಲಕ್ಷ್ಮಿಯ ನೆನಪಲ್ಲಿ ಅವಿವಾಹಿತನಾಗಿ ಉಳಿದ ಶಿವನ್ ಆಕೆ ತನಗೆ ಸಿಗದಂತೆ ಮಾಡಿದ ಉಣ್ಣಿತ್ತಾನ್‌ನ ಮೇಲೆ 'ಸೇಡು ತೀರಿಸಿಕೊಳ್ಳುವುದಕ್ಕಾಗಿ' ಪಾರ್ಶ್ವವಾಯುವಿನಿಂದ ಹಾಸಿಗೆ ಹಿಡಿದಿರುವ ಅವನ ಕಣ್ಣ ಮುಂದೆಯೆ ಅವನ ಎರಡನೇ ಪತ್ನಿ ಪ್ರಿಯಾಳೊಂದಿಗೆ ಅನೈತಿಕ ಸಂಬಂಧ ಬೆಳೆಸುತ್ತಾನೆ. ಪ್ರಿಯಾಳ ಮೂಲಕ ಉಣ್ಣಿತ್ತಾನ್‌ನ ಧನಕನಕಗಳನ್ನು ವಶಮಾಡಿಕೊಂಡು ಪ್ರತೀಕಾರ ತೀರಿತೆಂದು ತೃಪ್ತಿಪಡುತ್ತಾನೆ. ಪ್ರೀತಿಸಿದ ಹೆಣ್ಣಿಗೆ ಅನ್ಯಾಯ ಮಾಡಿದವನ ಮೇಲಿನ ಸೇಡಿಗಾಗಿ ಇನ್ನೊಂದು ಹೆಣ್ಣಿನ ಬದುಕು ಕೆಡಿಸುವ ಈ ವಿಚಾರದ ಹಿಂದೆ ಸ್ತ್ರೀವಿರೋಧಿಯಾದ ಪುರುಷಪರ ಪೂರ್ವಾಗ್ರಹವಿದೆ.

ಈ ಕಾಮಸಂಬಂಧ ಸಮಾಜಕ್ಕೆ ಬಹಿರಂಗವಾದಾಗ ಪ್ರಿಯಾಳನ್ನು ಸಮಾಜ ಶಿಕ್ಷಿಸುತ್ತದೆ. ಗಂಡಸರ ಸೂಚನೆಯಂತೆ ಹೆಂಗಸರು ಕೂಡ ಶುಭಕಾರ್ಯಗಳಿಂದ ಅವಳನ್ನು ಬಹಿಷ್ಕರಿಸುತ್ತಾರೆ. ಆದರೆ ಇಂಥ ಶಿಕ್ಷೆ ಶಿವನ್‌ಗೆ ಇಲ್ಲ. ಪರಸ್ತ್ರೀ ಸಂಗ ಮಾಡಿದ್ದರಿಂದ ಅವನ ಚಾರಿತ್ರ್ಯಕ್ಕೆ ತೊಂದರೆಯಾಗುವುದಿಲ್ಲ. ಅವನು ಸದಾಚಾರವನ್ನು ಮೀರಿದ ಬಗ್ಗೆ ಯಾರಿಗೂ ಆಕ್ಷೇಪವಿಲ್ಲ. ಊರಿನಲ್ಲಿ ಅವನ ಗೌರವಕ್ಕೆ ಕುಂದೇನೂ ಉಂಟಾಗಿಲ್ಲ. ಬದಲಿಗೆ ಪ್ರಿಯಾಳಂಥ 'ಮಾಟಗಾತಿ ಹೆಂಗಸೊಬ್ಬಳು ಅಮಾಯಕನಾದ ಅವಿವಾಹಿತ ಯುವಕನ ಮನಸ್ಸು ಕೆಡಿಸಿದ' ಕುರಿತು ಅನುಕಂಪವಿದೆ. ಅವನ ಹಿತೈಷಿಗಳು ಅವನನ್ನು ಅಪವಾದದಿಂದ ರಕ್ಷಿಸುವುದಕ್ಕಾಗಿ 'ಅತ್ಯಂತ ಆರೋಗ್ಯವತಿಯಾದ ವೃದ್ಧಕನ್ನಿಕೆ'ಯ ಜಾತಕದೊಂದಿಗೆ ಬರುತ್ತಾರೆ. ಪ್ರಿಯಾ

ಹಾಕಿರಬಹುದಾದ 'ಕೈಮದ್ದನ್ನು' ದೇವಿಕ್ಷೇತ್ರದಲ್ಲಿ ವಾಂತಿಮಾಡಿಸಲು ಯತ್ನಿಸುತ್ತಾರೆ. ಶಿವನ್ ತನಗೆ ಮಂಡಿನೋವೆಂದು ಹೇಳಿದಾಗ ಇಡೀ ಊರು ಅದನ್ನು ನಂಬಿ ಮರುಕಪಟ್ಟು ಉಪಚರಿಸುತ್ತದೆ.

ತಂದೆಯ ಮನೆಯಲ್ಲಿ ಒಂಟಿಯಾಗಿ ಬದುಕುತ್ತಿರುವ ತನ್ನ ಪ್ರೀತಿಯ ರಾಜೂವನ್ನು ವಂಚಿಸಿದ ಉಣ್ಣಿತ್ತಾನ್‌ನ ಮೇಲೆ ಸೇಡು ತೀರಿಸಿಕೊಂಡ ಹೆಮ್ಮೆಯೊಂದಿಗೆ ರಾಜೂ ಇದ್ದಲ್ಲಿಗೆ ತೆರಳಿದ ಶಿವನ್ ಅವಳನ್ನು ಮದುವೆಯಾಗುವ ಇಂಗಿತ ವ್ಯಕ್ತಪಡಿಸುತ್ತಾನೆ. ಆದರೆ ಗಟ್ಟಿ ನಿಲುವಿನ ರಾಜೂ ಅವನ ನೈತಿಕ ಅಧಃಪತನವನ್ನು ನಿಚ್ಚಳವಾದ ಮಾತುಗಳಲ್ಲಿ ಕಾಣಿಸಿ ಮದುವೆಯಾಗಲು ನಿರಾಕರಿಸುತ್ತಾಳೆ. ಆ ಮೂಲಕ ಹೆಣ್ಣಿನ ಮೇಲಿನ ಪ್ರೀತಿಯನ್ನು ಸ್ಥಾಪಿಸುವುದಕ್ಕಾಗಿ ಸದಾಚಾರವನ್ನು ಮೀರಲು ಹೇಸದ ಪುರುಷತ್ವದ ಅಹಮಿಕೆಯನ್ನು ಖಂಡಿಸುತ್ತಾಳೆ. ಪುರುಷನಾಗಿರುವುದರಿಂದ ತಾನು ಮಾಡಿದ್ದು ಸರಿ ಎಂಬ ಆತ್ಮವಿಶ್ವಾಸವನ್ನು ಕೆಡವುತ್ತಾಳೆ. ದ್ವೇಷ, ಹಿಂಸೆ, ಜಿದ್ದಿನಿಂದ ಕೂಡಿದ ಈ ಪುರುಷರ ಮೇಲಾಟದಲ್ಲಿ ಅವಳಿಗೆ ಆಸಕ್ತಿಯಿಲ್ಲ. ಪ್ರತೀಕಾರಕ್ಕಾಗಿ ಶಿವನ್ ಮಾಡಿದ ವ್ಯಭಿಚಾರ, ಮೋಸ, ಪರೋಕ್ಷ ಕೊಲೆಗಳು ಲೋಕದ ಕಣ್ಣಿಗೆ ಮಣ್ಣೆರಚಿ ಅವನನ್ನು ಸಭ್ಯ ಸ್ಥಾನದಲ್ಲಿ ನಿಲ್ಲಿಸಬಹುದಾದರೂ ನೈತಿಕವಾಗಿ ಅಧಃಪತನಕ್ಕೆ ಗುರಿಮಾಡಿರುವುದನ್ನು ರಾಜೂ ಗುರುತಿಸಿದ್ದಾಳೆ. ಸಮಾಜದಲ್ಲಿ ಸಂಪತ್ತು, ಅಧಿಕಾರಗಳಿಂದಾಗಿ ಆದರ ಹೊಂದಿರುವ ಪುರುಷನನ್ನು ಸ್ತ್ರೀಯರು ಅಳೆಯುವ ಪ್ರಮಾಣಗಳು ಬೇರೆಯೆ ಆಗಿರುತ್ತವೆ.

ಕಥೆಯ ಕೇಂದ್ರ ಪಾತ್ರದ ಹೆಸರನ್ನೇ ಶೀರ್ಷಿಕೆಯಾಗಿ ಹೊಂದಿ, ಪುರುಷಪರ ಸಮಾಜದ ತಿಳುವಳಿಕೆ ಮತ್ತು ವರ್ತನೆಗಳನ್ನು ವ್ಯಂಗ್ಯವಿನೋದದ ಮೊನಚು ಧಾಟಿಯಿಂದ ವಿಡಂಬಿಸುವ ಬಹಳ ವಿಶಿಷ್ಟವಾದ ಕತೆ 'ಶೀಲಾವತಿ'. ಮಾನಸಿ ಅವರು ಬರೆದ ಈ ಕತೆಯಲ್ಲಿ ಶೀಲಾವತಿ ಎಂಬ ರಾಜನರ್ತಕಿಯ ಮಗಳಿಗೆ ರಾಜನ ಆಸ್ಥಾನದಲ್ಲಿರುವ ಕುಲೀನ ಬ್ರಾಹ್ಮಣನೊಂದಿಗೆ ಪ್ರೇಮಸಂಬಂಧ ಉಂಟಾಗಿ ಗರ್ಭಿಣಿಯಾಗುತ್ತಾಳೆ. ಗರ್ಭಕ್ಕೆ ಕಾರಣನಾದವನ ಹೆಸರನ್ನು ರಹಸ್ಯವಾಗಿಡಬೇಕೆಂದು ಕೋರಿ ಅವನು ರತ್ನಖಚಿತ ಖಡ್ಗವನ್ನು ಕಳುಹಿಸಿಕೊಡುತ್ತಾನೆ. ಅವಳ ತಾಯಿ ಅದಕ್ಕೆ ಒಪ್ಪಿ ಮಗಳನ್ನೂ ಒಪ್ಪಿಸುವ ಪ್ರಯತ್ನ ಮಾಡಿದಾಗ ಶೀಲಾವತಿ ಸಿಡಿದೆದ್ದು ತನ್ನ ತಾಯಿಯನ್ನೇ ಕೊಂದು ನೇರವಾಗಿ ಆಸ್ಥಾನಕ್ಕೆ ಬಂದು ನ್ಯಾಯ ಕೇಳುತ್ತಾಳೆ. ಮಗುವಿನ ತಂದೆ ಅವನೇ ಎಂಬುದಕ್ಕೆ ಸಾಕ್ಷಿಯೇನು ಎಂದ ಆಸ್ಥಾನದ ಪಂಡಿತರು ಕೇಳಿದಾಗ 'ಮಗು ಅವರದ್ದಲ್ಲದಿದ್ದರೆ ಅವರು ಸಾಕ್ಷಿ ತೋರಿಸಲಿ' ಎಂದು ನಿಸ್ಸಂಕೋಚವಾಗಿ ಸವಾಲೆಸೆಯುತ್ತಾಳೆ. ಅನ್ಯಾಯಕ್ಕೆ ಒಳಗಾದ ಹೆಣ್ಣು ಗೋಳಾಡುವ ಬದಲು ಹೀಗೆ ತಿರುಗಿಬೀಳುವುದು ಎಲ್ಲರನ್ನೂ ಆಘಾತಕ್ಕೆ ಒಳಪಡಿಸುತ್ತದೆ. ಹೆಣ್ಣಿಗೆ ವಿಧಿಸಲಾಗಿರುವ ಸದಾಚಾರದ ವ್ಯಾಖ್ಯೆಯಲ್ಲಿ ಅವಳು ತನ್ನ ಶೀಲದ ಪ್ರಶ್ನೆಯನ್ನು ಬಹಿರಂಗ ಪ್ರಶ್ನೆಯಾಗಿಸದೆ ಮೌನವಾಗಿ ಸಹಿಸಿಕೊಳ್ಳುವುದೂ ಸೇರಿದೆ.

ಆಸ್ಥಾನದಲ್ಲಿ ಉದ್ಧಟತನದಿಂದ ವರ್ತಿಸಿದ್ದಕ್ಕಾಗಿ ತುಂಬುಗರ್ಭದೊಂದಿಗೆ ಸಿಂಹಗಳಿಗೆ ಬಲಿಯಾಗುವ ಶಿಕ್ಷೆಯನ್ನು ರಾಜನು ವಿಧಿಸಿದಾಗ ಶೀಲಾವತಿಗೆ ಜ್ಞಾನೋದಯವಾಗುತ್ತದೆ. ತಾನು ಸ್ತ್ರೀಸಹಜವಾಗಿ ವರ್ತಿಸುತ್ತಿಲ್ಲವೆಂಬುದು ಮನವರಿಕೆಯಾಗುತ್ತದೆ. ಪುರುಷಪರವಾದ ಈ ವ್ಯವಸ್ಥೆಯಲ್ಲಿ ನ್ಯಾಯಕೇಳಲು ಹೋದರೆ ತನಗೇ ಶಿಕ್ಷೆಯಾಗುವುದೆಂದು ಅರ್ಥವಾದಾಗ ಅನ್ಯಾಯವನ್ನು ಪ್ರತಿಭಟಿಸುವ ತನ್ನ ಸಹಜ ದಿಟ್ಟತನವನ್ನು ಬದಲಾಯಿಸಿಕೊಂಡು ವಿನೀತಳಾಗುತ್ತಾಳೆ. 'ಹದಿನೆಂಟು ವರ್ಷ ವಯಸ್ಸಿನಲ್ಲಿ ಸಾಯುವುದು ಅನಗತ್ಯ'ವೆಂದು ಮನವರಿಕೆಯಾದದ್ದರಿಂದ ರಾಜನಲ್ಲಿ ಕ್ಷಮೆ ಕೇಳುತ್ತಾಳೆ. ಪ್ರಸನ್ನನಾದ ರಾಜನಿಂದ ಕ್ಷಮಾದಾನದೊಂದಿಗೆ 'ಶೀಲಾವತಿ' ಎಂಬ ಹೆಸರನ್ನೂ ಪಡೆದು ರಾಜನ ಆದೇಶದಂತೆ ರೋಗಗ್ರಸ್ತನಾದ ತನ್ನ ಪುರುಷನ ಸೇವೆ ಮಾಡಲು ಒಪ್ಪಿಕೊಳ್ಳುತ್ತಾಳೆ. ಕುಷ್ಠರೋಗದಿಂದಾಗಿ ನಡೆಯಲಾಗದ ಅವನನ್ನು ಬುಟ್ಟಿಯಲ್ಲಿ ಕೂರಿಸಿ ತಲೆಯಲ್ಲಿ ಹೊತ್ತು, ಅವನ ಪ್ರತಿಯೊಂದು ಸ್ಪರ್ಶವನ್ನೂ ಅಸಹ್ಯಿಸಿಕೊಳ್ಳುತ್ತ, ಆದರೂ ಅವನೇ ದೇವರೆಂದು ಆದರಿಸುತ್ತ ನಡೆಯುತ್ತಾಳೆ.

ಕುಲೀನನಾದ, ರೋಗಿಷ್ಠನಾದ ನಾಯಕ ನರ್ತಕಿಯ ಮಗಳಾದ ಶೀಲಾವತಿಯನ್ನು ಮದುವೆಯಾಗಿಲ್ಲ. ಕೇವಲ ಪ್ರೇಯಸಿಯಾಗಿ ಇಟ್ಟುಕೊಂಡಿದ್ದಾನೆ. ಹಾಗಿದ್ದರೂ ಅವಳು ಕುಲವಧುವಿನಂತೆ ಅವನನ್ನು ಸೇವಿಸಬೇಕು ಎಂಬುದು ಅವನ ಹಾಗೂ ಅವನ ಅಮ್ಮನ ಅಪೇಕ್ಷೆಯಾಗಿದೆ. ಪ್ರೀತಿಸುವ ಹೆಣ್ಣು ಪತಿಯ ಎಲ್ಲ ವರ್ತನೆಗಳನ್ನೂ ಸಹಿಸಿಕೊಂಡಿರುವುದೇ ಸಹಜವೆಂದು ಅವನ ಅಮ್ಮ ಮಗನಿಗೆ ತಿಳಿಸಿಕೊಡುತ್ತಾರೆ: "ನಿನ್ನ ಅಪ್ಪ ಎರಡನೇ ಹೆಂಡತಿಯನ್ನು ಕರೆದುಕೊಂಡು ನನ್ನ ಶಯ್ಯಾಗೃಹಕ್ಕೆ ಬಂದಾಗ ನಾನು ಓರ್ವ ಸಭ್ಯ ಕುಲವಧುವಿನಂತೆ ನನ್ನ ಹಾಸಿಗೆಯನ್ನು ಅವಳಿಗೆ ಬಿಟ್ಟುಕೊಟ್ಟೆ, ಆವತ್ತು ಆನಂದದಲ್ಲಿ ಮೈಮರೆತು ಎರಡನೇ ಹೆಂಡತಿಗಾಗಿ ಕೊಂಡುಕೊಂಡ ಚಿನ್ನದ ಸರವನ್ನು ನಿನ್ನ ಅಪ್ಪ ದಾಸಿಯರ ಕೈಯಲ್ಲಿ ನನಗೆ ಕೊಟ್ಟು ಕಳುಹಿಸಿದರು. ಇಗೋ ನೋಡು ಆ ಸರವನ್ನು ಇದುವರೆಗೆ ನಾನು ಕತ್ತಿನಿಂದ ಕಳಚಿಲ್ಲ." (ಪು. ೬೮, ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು)

ಪತಿಯ ಇಚ್ಛೆಯನ್ನು ಅರಿತು ನಡೆಯುವುದೇ ಸ್ತ್ರೀಗೆ ಕುಲಧರ್ಮ ಎಂಬ ಪಾಠವನ್ನು, ಆದರ್ಶನಾರಿಯ ಸದ್ಗುಣಗಳನ್ನು ಶೀಲಾವತಿಗೆ ಅವಳ ಅಮ್ಮನೂ ಸೇರಿದಂತೆ ಎಲ್ಲ ಮಹಿಳೆಯರೂ ಹೇಳಿಕೊಟ್ಟಿದ್ದಾರೆ. ಆ ಎಲ್ಲ ಬುದ್ಧಿಮಾತುಗಳನ್ನು ಅನುಸರಿಸಿ ಅವನನ್ನು ಪತ್ನಿಯೊಬ್ಬಳ ಬದ್ಧತೆಯಿಂದ ಸೇವಿಸುತ್ತಾಳೆ. ತನ್ನ ನೃತ್ಯ, ಗಾನ, ದೇಹ, ಪ್ರೇಮ ಎಲ್ಲವನ್ನೂ ಅವನಿಗಾಗಿ ವಿನಿಯೋಗಿಸುತ್ತಾಳೆ. ಅವನ ಮಗುವಿಗೆ ತಾಯಿಯೂ ಆಗಿದ್ದಾಳೆ. ಆದರೆ ಕುಲದ ಮತ್ತು ಸಮಾಜದ ಕಟ್ಟುಪಾಡುಗಳಿಂದಾಗಿ ಅವನು ಆಕೆಯನ್ನು ತನ್ನ ಅಧಿಕೃತ ವಧುವಾಗಿ ಒಪ್ಪಿಕೊಳ್ಳಲಾರ. ಅವಳ ಹೊಟ್ಟೆಯಲ್ಲಿ ಹುಟ್ಟಿದ 'ಧರ್ಮಸಮ್ಮತವಲ್ಲದ ಮಗು' ಅವನಿಗೆ ಸ್ವರ್ಗಪ್ರಾಪ್ತಿಯನ್ನು ನೀಡಲಾರದು. ಮಗ ಪುತ್ರಹೀನನಾಗಿ ನರಕಕ್ಕೆ ಹೋಗಬಾರದೆಂಬುದು ತಾಯಿಯ ಕಾಳಜಿಯಾಗಿದೆ. ಆದ್ದರಿಂದ ಪುತ್ರಪ್ರಾಪ್ತಿಗಾಗಿ ಅವನು ಅಮ್ಮನ ನಿರ್ದೇಶದಂತೆ ಹಲವು

ಸ್ತ್ರೀರತ್ನಗಳನ್ನು ಪರಿಶೀಲಿಸಿ, ಎಳೆಯವಯಸ್ಸಿನ ಸುಂದರಿಯೊಬ್ಬಳನ್ನು ಮದುವೆಯಾಗಿದ್ದಾನೆ. ವಿಶೇಷವೆಂದರೆ ಅವಳ ಹೆಸರೂ ಶೀಲಾವತಿ ಎಂದೇ ಆಗಿದೆ. ಆದರೆ ಅವನಿಗಿಷ್ಟವಾದ ಸಂಗೀತನೃತ್ಯಗಳು ಈ ಕುಲವಧುವಿಗೆ ತಿಳಿಯದ ಕಾರಣ ಅವನಿಗೆ ಒಂದೇ ರಾತ್ರಿಯಲ್ಲಿ ಹೊಸಪತ್ನಿಯ ಸಂಗವು ಬೇಸರವಾಗಿ ನಿದ್ರೆ ಬಾರದೆ ಸಂಕಟಪಡುತ್ತಾನೆ. ಕೊನೆಗೆ ಪತಿಯ ನೆಮ್ಮದಿಗಾಗಿ ಅವಳೇ ಆತನನ್ನು ಹೊತ್ತುಕೊಂಡು ನರ್ತಕಿಯಲ್ಲಿಗೆ ಕರೆತಂದು ಬಿಟ್ಟು ಪಕ್ಕದ ಕೋಣೆಯಲ್ಲಿ ಅವನಿಗಾಗಿ ಕಾಯುತ್ತಾಳೆ.

ನೂತನವಧುವಿನ ಸಾಕುತಂದೆಯಾದವನು ಮಗಳನ್ನು ಪತಿಗೃಹಕ್ಕೆ ಬೀಳ್ಕೊಡುವಾಗ ಗದ್ಗದಕಂಠದಿಂದ ಮಾಡುವ ಉಪದೇಶವು ಪತಿಯ ಇಚ್ಛೆಯನ್ನು ಅರಿತು ನಡೆದುಕೊಳ್ಳುವ ಆದರ್ಶ ಸತಿಯಾಗುವುದೊಂದೇ ಅವಳ ಬದುಕಿನ ಉದ್ದೇಶ ಎಂಬುದನ್ನು ಮನಗಾಣಿಸುವಂತಿದೆ: "ಗಂಡನ ಚಿತೆಯಲ್ಲಿ ನಿನ್ನ ದೇಹವನ್ನು ಹೋಮಮಾಡಿದರೆ ಆತನ ಆರೋಗ್ಯ ಮತ್ತು ಆಯುಸ್ಸು ನಿನಗೆ ಎಲ್ಲಕ್ಕಿಂತ ಹೆಚ್ಚು ಮುಖ್ಯವೆಂದು ನೆನಪಿಟ್ಟುಕೋ. ಆತನ ಬೀಜಗಳನ್ನು ನೀನು ಭೂಮಿಯಂತೆ ಸ್ವೀಕರಿಸು. ತನ್ನ ರೆಕ್ಕೆಗಳನ್ನು ಕತ್ತರಿಸಿಕೊಳ್ಳುವ ನೋವಿನೊಂದಿಗೆ ಆತನ ಮಕ್ಕಳನ್ನು ನೀನು ಪ್ರಸವಿಸು. ಗಂಡುಬೀರಿಯಾದ ಅಮೃತಾ ಪ್ರೀತಂನಂತೆ, ಚೆಮ್ಮೀನಿನಲ್ಲಿ ಕಡಲಮ್ಮನಿಗೆ ಪಳನಿಯನ್ನು ನುಂಗಲು ಕೊಟ್ಟ ಕರುತ್ತಮ್ಮನಂತೆ ನೀನು ಧರ್ಮಚ್ಯುತಿ ಮಾಡಬೇಡ. ನಿನ್ನ ಚಾರಿತ್ರ್ಯಶುದ್ಧಿಯ ಮೇಲೆ ಆತನ ಕುಟುಂಬ–ಹೆಸರುಗಳು ನಿಂತಿವೆ" (ಪು. ೭೩, ಅದೇ) ಮದುವೆಯಾಗುತ್ತಿರುವ ಹೆಣ್ಣಿಗೆ ಪತಿಯನ್ನು ಅನುಸರಿಸಿಕೊಂಡು ಹೋಗುವ ಬಗ್ಗೆ ಇಷ್ಟೆಲ್ಲಾ ಉಪದೇಶ ನೀಡುವ ಹಿರಿಯರು ಗಂಡಿಗೆ ಯಾವ ಉಪದೇಶವನ್ನೂ ನೀಡುವುದಿಲ್ಲ. ಈಗಾಗಲೇ ಓರ್ವ ಅಧಿಕೃತ ಪ್ರೇಯಸಿಯನ್ನು ಹೊಂದಿರುವ, ರೋಗಿಷ್ಠನೂ, ದುರ್ಬಲನೂ, ಆಗಿರುವ ಕುಲೀನ ವಂಶಸ್ಥನಾದ ಈ ಕತೆಯ ವರನಿಗೆ ಹೆಣ್ಣು ಕೊಡಲು ಚಿಕ್ಕವಯಸ್ಸಿನ, ಸುಂದರಿಯರೂ ಸದಾಚಾರಿಣಿಯರೂ ಆದ ಪುತ್ರಿಯರನ್ನು ಹೊಂದಿರುವ ಕನ್ಯಾಪಿತೃಗಳು ತುದಿಗಾಲಲ್ಲಿ ನಿಂತಿದ್ದರು ಎಂಬುದನ್ನು ಕೂಡ ಗಮನಿಸಬಹುದು.

ವೈಕ್ಕಂ ಮಹಮ್ಮದ್ ಬಶೀರ್ ಅವರು ಬರೆದಿರುವ 'ಸೆಕೆಂಡ್ ಹ್ಯಾಂಡ್' ಎಂಬ ಕತೆಯಲ್ಲಿ ಪ್ರೇಮಿಸಿ ಗರ್ಭಿಣಿಯಾಗಿ ಹೆರಿಗೆಯಲ್ಲಿ ಮಗುವನ್ನು ಕಳೆದುಕೊಂಡ ಶಾರದಾಳಿಗೆ ಗೋಪಿ ಎಂಬ ಆದರ್ಶವಾದಿ ಪುರುಷನ ಆಸರೆ ಸಿಕ್ಕಿ ಅವನೊಂದಿಗೆ ರಿಜಿಸ್ಟ್ರಿ ಮದುವೆ ನಡೆದ ಬಳಿಕವೂ ಕೀಳರಿಮೆಯಿಂದ ಮುಕ್ತಳಾಗುವುದು ಸಾಧ್ಯವಾಗಿಲ್ಲ. ತಾನು 'ಕೆಟ್ಟುಹೋದ ಸ್ತ್ರೀ' ಎಂಬ ಅಪರಾಧಿಪ್ರಜ್ಞೆಯಿಂದ ಚಡಪಡಿಸುತ್ತಾಳೆ. 'ನಾನೊಂದು ಅಶುದ್ಧ ವಸ್ತು. ನನ್ನನ್ನು ಮುಟ್ಟಬಾರದು' ಎಂಬಂಥಾ ಸ್ವಯಂ ನಿರ್ಬಂಧವನ್ನು ಹೇರಿಕೊಂಡು ದಾಂಪತ್ಯದ ಸುಖದಿಂದ ವಂಚಿತಳಾಗುತ್ತಾಳೆ. ಅವಳನ್ನು ವಂಚಿಸಿದ ವ್ಯಕ್ತಿಯಾದರೋ ಇಂಥ ಯಾವ ಮುಜುಗರಗಳೂ ಇಲ್ಲದೆ ಸಮಾಜದಲ್ಲಿ ಸಂಭಾವಿತನಾಗಿ

ಬದುಕಿದ್ದಾನೆ. ಕವಿಗೋಷ್ಠಿಯ ಅಧ್ಯಕ್ಷನಾಗುವ ಗೌರವ ಪಡೆದಿದ್ದಾನೆ. ಅವನೇ ಅನುಭವಿಸಿ ಕೈಬಿಟ್ಟ ಶಾರದಾ ಈಗ ಅವನ ದೃಷ್ಟಿಯಲ್ಲಿ 'ಸೆಕೆಂಡ್ ಹ್ಯಾಂಡ್' ಆಗಿದ್ದಾಳೆ.

ಸಂದರ್ಭದ ವಶಳಾಗಿ ಒಂದು ರಾತ್ರಿಯ ಮಟ್ಟಿಗೆ ದಾಂಪತ್ಯದ ಚೌಕಟ್ಟನ್ನು ದಾಟಿದ ಮಹಿಳೆಯೊಬ್ಬಳು ಗಂಡ–ಮಕ್ಕಳ ಪ್ರೀತಿಗೆ ಶಾಶ್ವತವಾಗಿ ಎರವಾಗುವುದನ್ನು ಎಂ.ಟಿ.ವಾಸುದೇವನ್ ನಾಯರ್ ಅವರು ಬರೆದಿರುವ 'ಗಲ್ಲಿಯ ಬೆಕ್ಕು ಮೂಕ ಬೆಕ್ಕು' ಎಂಬ ಕತೆಯಲ್ಲಿ ಚಿತ್ರಿಸಿದ್ದಾರೆ. ಪತಿಯ ಸ್ನೇಹಿತನಾದ ಆಕರ್ಷಕ ವ್ಯಕ್ತಿತ್ವದ ಯುವಕನೊಂದಿಗೆ ಅನಿರೀಕ್ಷಿತ ಪರಿಸ್ಥಿತಿಯಲ್ಲಿ ಪ್ರವಾಸಿಗೃಹದ ಕೋಣೆಯಲ್ಲಿ ಒಂದು ರಾತ್ರಿಯನ್ನು ಕಳೆದ ಸುಶಿಕ್ಷಿತೆಯೂ, ಉದ್ಯೋಗಸ್ಥೆಯೂ ಆಗಿರುವ ಮಹಿಳೆ ಸಮಾಜದ ದೃಷ್ಟಿಯಲ್ಲಿ 'ಪತಿತೆ'ಯಾಗಿ ಬಿಂಬಿತಳಾಗುತ್ತಾಳೆ. ಅಮ್ಮನ ರಹಸ್ಯ ಪ್ರೇಮದ ಕತೆಯಿಂದ ಅಸಹ್ಯಪಟ್ಟು ಮಕ್ಕಳು ದೂರವಾಗುತ್ತಾರೆ. ವೈದ್ಯವೃತ್ತಿಯ ಪತಿ, ಪತ್ನಿಯೊಂದಿಗಿನ ಸಾಂಸಾರಿಕ ಸಂಬಂಧವನ್ನು ಕಡಿದುಕೊಳ್ಳುತ್ತಾನೆ. ಒಡೆದ ದಾಂಪತ್ಯದಲ್ಲಿ ಅಪರಾಧಿಯ ಸ್ಥಾನದಲ್ಲಿ ನಿರಂತರ ನವೆಯುವ ಮಹಿಳೆಯ ಮನಸ್ಥಿತಿಯನ್ನು ಅರಿತುಕೊಳ್ಳುವ ಕಾಳಜಿ ಯಾರಿಗೂ ಇಲ್ಲ. 'ದೇವದೂತನಂತೆ ಪರಿಶುದ್ಧನಾದ' ಅವಳ ಪತಿಯ ಬಗೆಗಾದರೆ ಜನರಿಗೆ ಮೆಚ್ಚುಗೆ, ಸಹಾನುಭೂತಿಗಳಿವೆ. 'ಪೂವರ್ ಮ್ಯಾನ್. ಹಿ ಈಸ್ ಏನ್ ಏಂಜೆಲ್. ಬಟ್ ವೆರಿ ಅನ್‌ಫಾರ್ಚುನೇಟ್' ಎಂದು ಅನುಕಂಪ ತೋರುತ್ತಾರೆ.

ಹೆಣ್ಣಿಗೆ ವಿಧಿಸಲಾಗಿರುವ ಲೈಂಗಿಕ ಸದಾಚಾರದ ನಿರ್ಬಂಧಗಳು ಆಕೆಯ ಕೌಟುಂಬಿಕ ಸಂಬಂಧಗಳ ಸ್ವರೂಪವನ್ನು ನಿರ್ಧರಿಸುತ್ತವೆ. ಸಂದರ್ಭದ ಒತ್ತಡದಲ್ಲಿ ಅಕಸ್ಮಾತ್ತಾಗಿ ಒಮ್ಮೆ ನಡೆದುಹೋದ ನಿರುದ್ದಿಶ್ಯ ತಪ್ಪಾದರೂ ಅವಳಿಗೆ ಕ್ಷಮೆ ಸಿಗುವುದಿಲ್ಲ. ಪುರುಷಪ್ರಧಾನ ವ್ಯವಸ್ಥೆಯ ಚಾರಿತ್ರ್ಯದ ನಿರ್ವಚನವೆ ಸ್ತ್ರೀ ವಿರೋಧಿಯಾಗಿದೆ. ಈ ವ್ಯವಸ್ಥೆಯಲ್ಲಿ ಸ್ತ್ರೀಯರ ಭಾವನೆಗಳು ಶುಷ್ಕವಾಗಿವೆ. ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಿರುವ ಸ್ತ್ರೀ ಹೃದಯಗಳು ಪ್ರೀತಿ ಇಲ್ಲದೆ ಅಥವಾ ಪ್ರೀತಿ ಕಳೆದುಕೊಂಡು ಯಾಂತ್ರಿಕವಾಗಿ ಬದುಕಬೇಕಾಗಿದೆ.

೩.೨.೨. ಲೈಂಗಿಕ ಬಯಕೆ ಮತ್ತು ನಿರಾಸೆ: ತಪ್ತೆಯರು

ತಾರುಣ್ಯಕ್ಕೆ ಬಂದ ಗಂಡಿಗೆ ಕಾಮಪೂರಣದ ಅವಶ್ಯಕತೆಯಿದೆ ಎಂಬ ವಿಚಾರವನ್ನು ಸಹಜವಾಗಿ ಒಪ್ಪಿಕೊಳ್ಳುವ ನಮ್ಮ ಸಮಾಜವು ಪ್ರಾಯಪ್ರಬುದ್ಧಳಾದ ಹೆಣ್ಣಿಗೂ ಅಂಥ ಬಯಕೆಯಿರಬಹುದು ಎಂಬ ವಿಚಾರವನ್ನು ನಿರ್ಲಕ್ಷಿಸುತ್ತದೆ. ಸ್ತ್ರೀಯರು ತಮ್ಮ ಕಾಮಾಪೇಕ್ಷೆಯನ್ನು ಮುಕ್ತವಾಗಿ ವ್ಯಕ್ತಪಡಿಸುವ ಅವಕಾಶವೇ ಇಲ್ಲ. ಗಂಡಿನ ಲೈಂಗಿಕ ಬಯಕೆಯನ್ನು ತೃಪ್ತಿಗೊಳಿಸುವುದಕ್ಕಾಗಿಯೆ ವೇಶ್ಯಾಟನೆಯೆಂಬ ಅಧಿಕೃತವಾದ ವ್ಯವಸ್ಥೆಯಿದೆ. ಹೆಣ್ಣಿಗೆ ಅದಿಲ್ಲವಾಗಿ ಸಹಜ ಶಾರೀರಿಕ ಅಗತ್ಯವಾಗಿರುವ ಲೈಂಗಿಕ

ಬಯಕೆಯನ್ನು ಹತ್ತಿಕ್ಕಿಕೊಂಡು ಬದುಕಬೇಕಾಗುತ್ತದೆ. ಹೀಗೆ ಅಡಗಿಸಿಟ್ಟ ಕಾಮವಾಂಛೆಯು ಕೆಲವೊಮ್ಮೆ ಹೆಣ್ಣಿನ ಮನೋವಿಕಾರಕ್ಕೆ, ಗುಪ್ತ ಪ್ರಣಯಸಂಬಂಧಗಳಿಗೆ ಕಾರಣವಾಗಲೂಬಹುದು.

'ದೇವರ ವಿಕರಾಳಗಳು' ಕೃತಿಯ ಫಲ್ಗುಣನ್ ಮಾಸ್ತರ ಹೆಂಡತಿ ವನಜಳಿಗೆ ಪತಿ ವಿದೇಶಕ್ಕೆ ಹೋದ ಬಳಿಕ ನೆಮ್ಮದಿಯ ನಿದ್ರೆ ಹತ್ತುವುದಿಲ್ಲ. 'ಗಂಡನ ಎದೆಯ ಬಿಸಿಯೂ, ಗಟ್ಟಿಯಾದ ಹೆಗಲಿನ ಬೆವರಿನ ಮಧುರ ಪರಿಮಳವೂ, ಗಡಸು ಮುಖದ ಕುರುಚಲು ಗಡ್ಡದ ಮೊನಚೂ' ನೆನಪಾಗಿ ನಿದ್ದೆಯಿಲ್ಲದ ರಾತ್ರಿಗಳ ಸಂಕಟವನ್ನು ತೋಡಿಕೊಳ್ಳುವುದಕ್ಕೆಂದು ಪ್ರತಿನಿತ್ಯ ಪುಟ್ಟ ಮಗನನ್ನು ಕರೆದುಕೊಂಡು ಸಮುದ್ರದ ಬದಿಗೆ ಬರುತ್ತಾಳೆ.

ಇದೇ ಕೃತಿಯ ಕಡುಞನ್‌ರ ಮೊದಲ ಪತ್ನಿ ಚೀರುತೆ ಸ್ವಲ್ಪ ಬೆಳ್ಳಗಿದ್ದು ಪತಿಯ ಹೆಚ್ಚಿನ ಪ್ರೀತಿಗೆ ಕಾರಣವಾಗಿದ್ದಳು. ಆದರೆ ಮಳೆ ಬಂದು ತಂಪಾದ ರಾತ್ರಿಯಲ್ಲಿ ಕಡುಞನ್ ಪ್ರೇಮಪರವಶನಾಗಿ ಹತ್ತಿರ ಬಂದು ಕುಳಿತಾಕ್ಷಣ ಬಾಲಪ್ರೇತವೊ, ಬ್ರಹ್ಮರಾಕ್ಷಸವೊ ಆವಾಹಿಸಿ ಬಂದು ಅವಳನ್ನು ಕಾಡುವುದು. ಅವಳ ಎದೆಯನ್ನೂ ನಾಭಿಯನ್ನೂ ನೋಡಿ ನಿಟ್ಟುಸಿರಿಟ್ಟು ಕಡುಞನ್ ಹೊರಟುಹೋಗುವನು. ಮಂತ್ರವಾದದ ಮೂಲಕ ಪ್ರೇತವನ್ನು ಉಚ್ಚಾಟಿಸಲೆತ್ನಿಸಿದರೆ ಒಂದು ಬಿಟ್ಟಾಕ್ಷಣ ಇನ್ನೊಂದು ಪ್ರೇತ ಬಂದು ಅಡರಿಕೊಳ್ಳುವ ಈ ಚಮತ್ಕಾರದ ಹಿಂದೆಯೂ ಲೈಂಗಿಕ ಕಾರಣಗಳಿರುವುದು ಸ್ಪಷ್ಟವಾಗಿದೆ. 'ಏಣಿಯ ಮೆಟ್ಟಲು' ಕಾದಂಬರಿಯ ತಂಗಮ್ಮ, 'ಹಗ್ಗ' ಕಾದಂಬರಿಯ ಕೋಡಾಂತ್ರ ಕುಂಜಮ್ಮ ಮತ್ತು ಚಕ್ಕಿ, 'ಸುಂದರಿಯರು ಸುಂದರರು' ಕಾದಂಬರಿಯ ಲಕ್ಷ್ಮೀಕುಟ್ಟಿ, 'ಹೇಂಟೆ ಕೂಗುವಲ್ಲಿ' ಕತೆಯ ಲಕ್ಷ್ಮೀಕುಟ್ಟಿಯಮ್ಮ... ಮುಂತಾದ ಸ್ತ್ರೀಯರನ್ನೂ ಲೈಂಗಿಕ ಬಯಕೆ–ನಿರಾಸೆಗಳ ದೃಷ್ಟಿಯಿಂದ ಗಮನಿಸಬಹುದು. ಅಶ್ವತ್ಥಾಮ, ದೇವರ ಕಣ್ಣು, ಕಾಲ, ಎರಡು ಬಳ್ಳ ಮುಂತಾದ ಕೃತಿಗಳಲ್ಲೂ ಸ್ತ್ರೀಯರ ಲೈಂಗಿಕ ಬಯಕೆಯ ನಿರೂಪಣೆಯಿದೆ.

೩.೨.೩. ಕುಟುಂಬದ ಹೊರಗಿನ ಲೈಂಗಿಕತೆ: ಪ್ರಣಯಿನಿಯರು

ವಿವಾಹಪೂರ್ವ ಸಂಬಂಧಗಳೂ ಸೇರಿದಂತೆ ವೈವಾಹಿಕ ಚೌಕಟ್ಟಿನ ಒಳಗೆ ಮತ್ತು ಹೊರಗೆ ಹೆಣ್ಣು ಗಂಡಿನೊಂದಿಗೆ ಹೊಂದಿರುವ ಪ್ರೇಮ ಮತ್ತು ಕಾಮಸಂಬಂಧಗಳನ್ನು ಮಲಯಾಳಂ ಕಥನಸಾಹಿತ್ಯವು ಮಾನವೀಯ ನೆಲೆಯಲ್ಲಿ ವಿಶ್ಲೇಷಿಸಿದೆ. ಬಡತನ, ಕುತೂಹಲ, ಮುಗ್ಧತೆ, ಹೊಂದಾಣಿಕೆಯ ಕೊರತೆ, ತೀರದ ಕಾಮಾಪೇಕ್ಷೆ.. ಮುಂತಾದ ಅಂಶಗಳು ಹೆಣ್ಣಿನ ವಿವಾಹಪೂರ್ವ ಮತ್ತು ವಿವಾಹೇತರ ಲೈಂಗಿಕ ಸಂಬಂಧಗಳಿಗೆ ಕಾರಣವಾಗುವುದನ್ನು ಕೃತಿಗಳು ಗುರುತಿಸಿವೆ. ವೈವಾಹಿಕ ಸಂಬಂಧಗಳ ವಿಘಟನೆಗೆ ಕಾರಣವಾಗುವ 'ಮಲಗುವ ಕೋಣೆಯೊಳಗಿನ ಲೈಂಗಿಕ ಸಂದರ್ಭಗಳನ್ನು' ವಿಶ್ಲೇಷಿಸಲು ಪ್ರಯತ್ನಿಸಿವೆ.

ಸ್ತ್ರೀಯರ ದೃಷ್ಟಿಯಲ್ಲಿ ಪ್ರೀತಿ – ಪ್ರಣಯವೆಂದರೆ ಕೇವಲ ದೇಹಕ್ಕೆ ಮಾತ್ರ ಸಂಬಂಧಪಟ್ಟ ವಿದ್ಯಮಾನವಲ್ಲ. ಕೊನೆಯವರೆಗೂ ಅಭಿವ್ಯಕ್ತಿಸಲಾಗದ ಪ್ರೇಮವನ್ನು ಹೃದಯದಲ್ಲಿ ಬಚ್ಚಿಟ್ಟು ಇನ್ನಾರನ್ನೋ ಮದುವೆಯಾಗುವ ಸ್ತ್ರೀಯರಿರುವಂತೆ, ಪ್ರೀತಿಯಿಲ್ಲದ ದಾಂಪತ್ಯಕ್ಕೆ ನಿಷ್ಠಳಾಗಿ ಉಳಿಯುವುದು ಸಾಧ್ಯವಾಗದೆ ಹೊಸ ಸಂಬಂಧಗಳನ್ನು ಸ್ಥಾಪಿಸಿಕೊಂಡ ಪ್ರಣಯಿನಿಯರೂ ಬಹುಸಂಖ್ಯೆಯಲ್ಲಿದ್ದಾರೆ. ವಿವಾಹಪೂರ್ವದಲ್ಲಿ ಮತ್ತು ನಂತರದಲ್ಲಿ ವಿವಾಹದ ಚೌಕಟ್ಟಿನಿಂದಾಚೆಗಿನ ಪ್ರೇಮಸಂಬಂಧಗಳನ್ನು ಸ್ತ್ರೀಯರು ಸ್ಥಾಪಿಸಿಕೊಂಡಿದ್ದಾರೆ ಮತ್ತು ಅಗತ್ಯವೆನಿಸಿದರೆ ಮುಂದುವರೆಸುತ್ತಾರೆ. ಕುಟುಂಬದ ಹೊರಗಿನ ಲೈಂಗಿಕತೆಯ ವಿದ್ಯಮಾನಗಳನ್ನು ಸಹಜವೆಂಬಂತೆ ಚಿತ್ರಿಸುವ ಮೂಲಕ ಮಲಯಾಳಂ ಲೇಖಕರು ಸ್ತ್ರೀಯರ ಲೈಂಗಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿದಿದ್ದಾರೆ. ಮುಖ್ಯವಾಗಿ ಎಂ.ಟಿ. ವಾಸುದೇವನ್ ನಾಯರ್ ಅವರು ಬರೆದ 'ಮಂಜು' ಎಂಬ ನೀಳ್ಗತೆ ಹಾಗೂ ಕಮಲಾದಾಸ್ ಅವರು ಬರೆದ ನೀರುಕೋಳಿಗಳು, ರಾತ್ರಿಯಲ್ಲಿ, ಮಾಹಿಮ್‌ನ ಮನೆ, ರಾಧೆಯ ಪತ್ರ... ಎಂಬ ಕತೆಗಳಲ್ಲಿ ಚಿತ್ರಿಸಲಾಗಿರುವ ಪ್ರಣಯಿನಿಯರನ್ನು ಇಲ್ಲಿ ಗಮನಿಸಲಾಗಿದೆ.

'ಮಂಜು' ಕತೆಯಲ್ಲಿ ಬರುವ ವಿಮಲಾಗೆ ಮದುವೆಯಾಗಿಲ್ಲ. ನೈನಿತಾಲ್‌ನ ಹೆಣ್ಣುಮಕ್ಕಳ ಶಾಲೆಯ ಹಾಸ್ಟೆಲ್‌ನಲ್ಲಿ ವಾರ್ಡನ್ ಆಗಿದ್ದುಕೊಂಡು ಗಿರಿ, ಬೆಟ್ಟ, ಕಾಡು, ಕಣಿವೆಗಳ ನಡುವೆ ತನ್ನ ಪಾಡಿಗೆ ಬದುಕುವವಳು. ರಜದಲ್ಲೂ ಊರಿಗೆ ಹೋಗದೆ, ತನ್ನ ಕೋಣೆಯ ಕಿಟಕಿಯಿಂದ ಪ್ರವಾಸೀಧಾಮದಲ್ಲಿ ಬಂದಿಳಿಯುವ ವ್ಯಕ್ತಿಗಳನ್ನು ವೀಕ್ಷಿಸುತ್ತ, ಮನಸ್ಸಾದಾಗ ನದೀವಿಹಾರ ಮಾಡುತ್ತ ಸಮಯಕಳೆಯುವವಳು. ಕರ್ತವ್ಯ, ಶಿಸ್ತುಗಳಿಗೆ ಪ್ರಾಮುಖ್ಯತೆ ಕೊಡುವ, ಕಡಿಮೆಮಾತಿನ, ಗಂಭೀರ ಸ್ವಭಾವದ ವಾರ್ಡನ್ ಎನಿಸಿಕೊಂಡಿರುವವಳು. ಅನಿವಾರ್ಯ ಒಂಟಿತನದೊಂದಿಗೆ ಬದುಕುವ ವಿಮಲಾ ಹಿಂದೊಮ್ಮೆ ಪ್ರವಾಸಿಯಾಗಿ ಬಂದಾತನೊಂದಿಗೆ ಪ್ರೇಮ ಸಂಬಂಧವನ್ನು ಹೊಂದಿ ಒಂಬತ್ತು ವರ್ಷಗಳಿಂದಲೂ ಅವನ ಪತ್ರಕ್ಕಾಗಿ ಕಾಯುತ್ತಿದ್ದಾಳೆ. ಅವನು ಎಂದಾದರೂ ಬಂದಾನೆಂಬ ನಿರೀಕ್ಷೆಯನ್ನು ಹೊತ್ತು, ಕಳೆದ ಕಾಲದ ಮಧುರ ನೆನಪಲ್ಲಿ ಒಂಟಿಯಾಗಿ ಉಳಿದಿದ್ದಾಳೆ. ಒಬ್ಬ ಪ್ರವಾಸಿಯನ್ನು ಪ್ರೀತಿಸಿ ತನ್ನ ಕನ್ಯತ್ವವನ್ನು ಕಳೆದುಕೊಂಡ ಬಗ್ಗೆಯಾಗಲೀ, ಕೆಲವೇ ದಿನಗಳಲ್ಲಿ ಮುಗಿದುಹೋದ ಆ ಪ್ರೇಮದ ಪ್ರಕ್ರಿಯೆಯ ಬಗ್ಗೆಯಾಗಲೀ ಅವಳಿಗೆ ಕಿಂಚಿತ್ತಾದರೂ ವಿಷಾದವಿಲ್ಲ. ಮತ್ತೆಂದೂ ತನ್ನನ್ನು ಸಂಪರ್ಕಿಸದ ಅವನು ಮೋಸಗಾರನೆಂದೂ ಅವಳು ಭಾವಿಸಿಲ್ಲ. ಇನ್ನೊಂದು ಹೊಸ ಪ್ರೇಮಸಂಬಂಧದಲ್ಲಿ ಆಸಕ್ತಿ ಹೊಂದಿಲ್ಲ.

ಶಾಲೆಗೆ ರಜೆ ಸಿಕ್ಕಿ ಹಾಸ್ಟೆಲಿನ ಹುಡುಗಿ ರಶ್ಮಿ ವಾಜಪೇಯಿ ಪ್ರಿಯಕರನೊಂದಿಗೆ ತೆರಳುತ್ತಿರುವುದು ತಿಳಿದಾಗ ವಿಮಲಾ ಆಕ್ಷೇಪಿಸದೆ ಸುಮ್ಮನಿರುತ್ತಾಳೆ. ಕನ್ಯತ್ವದ ಪೊರೆಯನ್ನು ಹರಿಯುವ ಮೊದಲ ಪಾಪವನ್ನು, ಆ ಮೊದಲ ವೇದನೆಯನ್ನು, 'ಮೊದಲ ಆನಂದ, ಮೊದಲ ಅನುಭೂತಿ' ಎಂದಾಕೆ

ಭಾವಿಸುತ್ತಾಳೆ. ಅಷ್ಟೇ ಅಲ್ಲ, ತನ್ನ ಪ್ರಿಯಕರನೊಂದಿಗೆ ಕಳೆಯುವ ಮಧುರ ರಾತ್ರಿ ಆ ಹುಡುಗಿಯ ಪಾಲಿಗೆ 'ಒಂದು ಶಾಶ್ವತವಾದ ನೆನಪಾಗಿ, ಅಮೂಲ್ಯ ಆಸ್ತಿಯಾಗಿ ಉಳಿಯಲಿ' ಎಂದು ಹಾರೈಸುತ್ತಾಳೆ.

ವಿಮಲಾ ಪ್ರೇಮವೆಂದು ನಂಬಿ ಸರ್ವಸ್ವವನ್ನೂ ಅರ್ಪಿಸಿರುವ ಆ ಯುವಕ ತಮ್ಮ ಪ್ರೇಮಸಂಬಂಧವನ್ನು ಖಾತರಿಪಡಿಸಲು ಇದುವರೆಗೆ ಒಂದು ತುಂಡು ಕಾಗದವನ್ನೂ ಕಳಿಸಿಲ್ಲ. ಒಂದೊಂದು ಪತ್ರ ಬರುವಾಗಲೂ ಆತುರ, ಆಸೆ, ಆತಂಕಗಳಿಂದ ಆ ಪತ್ರವನ್ನು ಒಡೆಯುತ್ತ ಇಂದಲ್ಲ ನಾಳೆ ಪ್ರಿಯಕರನ ಪತ್ರ ಬಂದೀತೆಂದು ಕಾಯುವ ಕೊನೆಯಿಲ್ಲದ ನಿರೀಕ್ಷೆಯಲ್ಲಿ ನೈನಿತಾಲ್‌ನ ಕಾಡು ಕಣಿವೆಗಳಲ್ಲಿ ಕಳೆದುಹೋಗುವ ಯೌವನದ ಕನಸುಗಳ ಸ್ತ್ರೀಬಿಂಬವಾಗಿದ್ದಾಳೆ.

ಹದಿನೈದು ವರ್ಷದ ಹೆಣ್ಣುಮಗಳು ಅಮ್ಮಿಣಿ ಮತ್ತು ಹದಿನಾರರ ವಿಜಯ್ ಎಂಬ ಹುಡುಗನ ನಡುವಿನ ಪ್ರೇಮದ ಆಧಿಕ್ಯವನ್ನು ನಿರೂಪಿಸುವ ಕತೆ 'ನೀರುಕೋಳಿಗಳು'. ಕಮಲಾದಾಸ್ ಅವರು ಬರೆದಿರುವ ಈ ಕತೆಯಲ್ಲಿ ಬಾಲ್ಯದ ಒಡನಾಡಿಯಾಗಿರುವ ಅಮ್ಮಿಣಿಗೆ ಬೇರೆ ಮದುವೆ ನಿಶ್ಚಯವಾಗಿ, ಮದುವೆಗೆ ಇನ್ನೊಂದೇ ದಿನ ಉಳಿದಿರುವಾಗ 'ನಾಳೆ ಕೆರೆಯಲ್ಲಿ ಹೆಣವಾಗ್ತೀನಿ' ಎಂದು ವಿಜಯ್ ದುಃಖಿಸುತ್ತಾನೆ. ಪ್ರಿಯನಾದ ಬಾಲ್ಯಸಖನ ಅಪೇಕ್ಷೆಯಂತೆ, ಮದುವೆಯ ಹಿಂದಿನ ದಿನ ಅವನೆಡೆಗಿನ ತನ್ನ ಪ್ರೇಮವನ್ನು 'ಸಾಬೀತುಪಡಿಸುವುದಕ್ಕಾಗಿ' ಕೆರೆಯ ಬದಿಯಲ್ಲಿ ಸ್ನಾನಕ್ಕಾಗಿ ಕಟ್ಟಿಸಿರುವ ಅರೆಗೋಡೆಯ ಕೆರೆಮನೆಯಲ್ಲಿ ಅಮ್ಮಿಣಿ ಅವನೊಂದಿಗೆ ಮಲಗುತ್ತಾಳೆ. ಅವನೇ ಹೇಳಿದಂತೆ 'ಈಗ ತಾನು ವಿಜಯನ ಹೆಂಡತಿಯಾದೆ. ಇನ್ನು ಯಾರನ್ನು ಮದುವೆಯಾದ್ರೂ ಪರವಾಗಿಲ್ಲ' ಎಂದು ಗಟ್ಟಿಯಾಗಿ ನಂಬಿ ನಿರಾಳವಾಗಿ ಎದ್ದುನಿಂತು ಲಂಗದ ಧೂಳು ಕೊಡವಿ ಅವನ ಅನುಮತಿ ಪಡೆದು ಬೀಳ್ಕೊಂಡು ಅಲ್ಲಿಂದ ಹೊರಡುತ್ತಾಳೆ. ಮತ್ತು ಮರುದಿನ ನಿಶ್ಚಿಂತೆಯಿಂದ ಬೇರೆಯವನನ್ನು ಮದುವೆಯಾಗುತ್ತಾಳೆ. ಪ್ರೀತಿಸುವ ಗಂಡಿನೊಂದಿಗೆ ಲೈಂಗಿಕ ಸಂಬಂಧ ಹೊಂದುವ ಬಗ್ಗೆ ಯಾವುದೇ ಮುಜುಗರವಿಲ್ಲದ, ದೇಹಕ್ಕಿಂತ ಮನಸ್ಸಿನ ನಿಷ್ಠೆಯೆ ಮುಖ್ಯವೆಂದು ಪ್ರತಿಪಾದಿಸುವ ಪಾತ್ರ ಅಮ್ಮಿಣಿಯದು.

'ರಾಧೆಯ ಪತ್ರ' ಎಂಬ ಕತೆಯಲ್ಲಿ ಗಂಡನ ಅಪ್ಪುಗೆಯಲ್ಲಿ ತಾನು ಹಾದರಗಿತ್ತಿಯಾದೆನೆಂದು ಭಾವಿಸುವ ರಾಧೆ ಎಂಬ ಪ್ರಣಯಿನಿಯ ಮನಸ್ಸಿನ ಬೇಗುದಿಯನ್ನು ಕಮಲಾದಾಸ್ ಅವರು ಚಿತ್ರಿಸಿದ್ದಾರೆ. ಪ್ರೇಮಿಸಿದ ಕೃಷ್ಣನ ಅಪ್ಪುಗೆಯಲ್ಲಿ ತಾನು ಪರಿಶುದ್ಧೆ ಎಂದು ನಂಬಿರುವ ರಾಧೆ ಕೃಷ್ಣನನ್ನು ಕೂಡುವುದಕ್ಕಾಗಿ ಶರೀರಕ್ಕೆ ಗಂಧ ಲೇಪಿಸಿಕೊಂಡು ಯಮುನೆಯ ತೀರದಲ್ಲಿ ದಿನವೂ ಕಾಯುತ್ತಾಳೆ. ಅವನು ಬಾರದೆ ಹೋದಾಗ ಪೂಸಿದ ಗಂಧಲೇಪವೂ, ತನ್ನ ಸ್ತ್ರೀಸತ್ವವೂ ನಷ್ಟವಾಯಿತು ಎಂದು ಭಾವಿಸುತ್ತಾಳೆ. ಸಮಾಜವು ಒಪ್ಪುವ ಸಂಬಂಧಕ್ಕಿಂತಲೂ ಮನಸ್ಸು ಒಪ್ಪುವ ಸಂಬಂಧವೇ ಮುಖ್ಯವೆಂದು ರಾಧೆ ಭಾವಿಸಿದ್ದಾಳೆ.

ಕುಟುಂಬದ ಚೌಕಟ್ಟಿನಿಂದ ಹೊರಗಿರುವ ಲೈಂಗಿಕ ಸಂಬಂಧವನ್ನು ಸಮಾಜ ಒಪ್ಪಿಕೊಳ್ಳುವುದಿಲ್ಲ ಎಂಬ ವಿಚಾರವು ಈ ಮೇಲಿನ ಕತೆಗಳಲ್ಲಿ ಉದಾಹರಿಸಲಾಗಿರುವ ಎಲ್ಲ ಹೆಣ್ಣುಮಕ್ಕಳಿಗೂ ತಿಳಿದಿದೆ. ಆದರೆ ಸದಾ ಪ್ರೀತಿಸಲ್ಪಡಬೇಕೆಂಬ ತಹತಹವನ್ನು ಹೊಂದಿರುವ ಸ್ತ್ರೀಯರು ತಮ್ಮ ಬಾಹ್ಯ ಪ್ರಣಯವು ನಡೆಯದಂತೆ ತಡೆಯಲು ಅಸಹಾಯಕರಾಗಿದ್ದಾರೆ ಮತ್ತು ನಡೆದ ಬಳಿಕ ಆ ಬಗ್ಗೆ ಯಾವುದೇ ವಿಷಾದವನ್ನು ಉಳಿಸಿಕೊಂಡಿಲ್ಲ. ಗಾಢವಾದ ಪ್ರೀತಿಯ ಹಂಬಲದಿಂದ ಸ್ತ್ರೀಯರು ಸ್ಥಾಪಿಸಿಕೊಳ್ಳುವ ಬಾಹ್ಯ ಸಂಬಂಧಗಳು ಪಾವಿತ್ರ್ಯದ ಮಿಥ್ಯೆಯನ್ನು ನಿರಾಕರಿಸುತ್ತವೆ.

೩.೨.೪. ಲೈಂಗಿಕ ಹಿಂಸೆ: ಸಂತ್ರಸ್ತೆಯರು

ಪರಿಸರವನ್ನಾಗಲೀ ಹೆಣ್ಣನ್ನಾಗಲೀ ಕಡಿದುರುಳಿಸಿ ಆಧಿಪತ್ಯ ಸ್ಥಾಪಿಸುವ, ತನ್ನ ಗೆಲುವನ್ನು ಸಾರುವ ಅಹಂಕಾರ ಗಂಡಿಗೆ ನಮ್ಮ ಸಾಮಾಜಿಕ ವ್ಯವಸ್ಥೆಯಿಂದ ದತ್ತವಾಗಿದೆ. ಹೆಣ್ಣಿನ ದೇಹ ಮತ್ತು ಮನಸ್ಸುಗಳ ಮೇಲೆ ನಡೆಸಲಾಗುವ ಹಿಂಸೆ ಕೆಲವೊಮ್ಮೆ ಪೂರ್ವದ್ವೇಷ, ಅಸಹನೆಗಳ ಹಿನ್ನೆಲೆ ಹೊಂದಿದ್ದರೆ ಹೆಚ್ಚಿನ ಸಂದರ್ಭಗಳಲ್ಲಿ ಅವಳು ಹೆಣ್ಣು ಎಂಬ ಒಂದೇ ಕಾರಣಕ್ಕೆ ಇಂಥ ಆಕ್ರಮಣಗಳು ನಡೆಯುತ್ತವೆ. ಕೆಲವೊಮ್ಮೆ ಅವಳ ಕೊಲೆಗೂ ಕಾರಣವಾಗುತ್ತವೆ. ಪುರುಷನ ಮೇಲ್ಮೆಯನ್ನು ಮೆರೆಸುವ ಒಂದು ವಿಕ್ಷಿಪ್ತ ಪ್ರಕ್ರಿಯೆಯಾಗಿರುವ ಲೈಂಗಿಕ ಕಿರುಕುಳ ಮತ್ತು ಆಕ್ರಮಣಗಳ ಕುರಿತು ಹಲವು ಕೃತಿಗಳು ಚರ್ಚಿಸಿವೆ. ನಿರ್ಭಯವಾಗಿ ಬದುಕುವ ಒಂದು ಹಕ್ಕನ್ನು ಹೊಂದಿಲ್ಲದೆ ಇರುವುದು ಸ್ತ್ರೀಯರ ಮುಕ್ತ ಬೆಳವಣಿಗೆಗೆ ಅಡ್ಡಿಯಾಗಿರುವುದನ್ನು ಗುರುತಿಸಿವೆ.

'ಬಿಡುಗಡೆ' ಕೃತಿಯಲ್ಲಿ ಹತ್ತನೇ ತರಗತಿಯ ಹುಡುಗಿ ಮಮತಳನ್ನು ಸಾಮೂಹಿಕವಾಗಿ ಅತ್ಯಾಚಾರ ಮಾಡುವ ಮೂಲಕ ವಿದ್ಯಾರ್ಥಿಗಳು ಆಟದಲ್ಲಿ ಗೆದ್ದ ಸಂತೋಷವನ್ನು ಆಚರಿಸಿಕೊಳ್ಳುವುದು ಸಮಾಜದ ಪುರುಷಪರ ಮನೋಭಾವದ ವಿಕೃತಿಗೆ ರೂಪಕವಾಗಿದೆ. ಹಾಸ್ಟೆಲ್‌ನ ಕ್ವಾರ್ಟರ್ಸ್‌ನಲ್ಲಿ ಒಂಟಿಯಾಗಿ ಓದಿಕೊಳ್ಳುತ್ತಿದ್ದ ಮಮತಳನ್ನು ಅವಳ ಸಹಪಾಠಿಗಳಾದ ಹತ್ತು ವಿದ್ಯಾರ್ಥಿಗಳ ತಂಡ ಹೊತ್ತೊಯ್ದು ಸಾಮೂಹಿಕ ಅತ್ಯಾಚಾರ ನಡೆಸಿ ಬಿಸುಟಿ ಹೋಗುತ್ತದೆ. ಈ ಅತ್ಯಾಚಾರಕ್ಕೆ ವೈಯಕ್ತಿಕ ದ್ವೇಷವಾಗಲೀ, ಪ್ರೇಮಭಗ್ನತೆಯಾಗಲೀ ಕಾರಣವಲ್ಲ. ಫುಟ್‌ಬಾಲ್ ಆಟದಲ್ಲಿ ಗೆದ್ದ ಸಂತೋಷವನ್ನು ವಿದ್ಯಾರ್ಥಿಗಳು ಈ ಅತ್ಯಾಚಾರದ ಮೂಲಕ ಸಾಮೂಹಿಕವಾಗಿ ಆಚರಿಸಿಕೊಳ್ಳುತ್ತಾರೆ. ಒತ್ತಡದಿಂದ ಬಿಡುಗಡೆಗಾಗಿ, ಕೇವಲ ಥ್ರಿಲ್‌ಗಾಗಿ ಒಂದು ಹೆಣ್ಣಿನ ಬದುಕನ್ನೇ ನಾಶ ಮಾಡುವ ಈ ಅನ್ಯಾಯ ನಡೆಯುತ್ತದೆ.

ಈ ಘಟನೆಯಿಂದಾಗಿ ಹತ್ತನೇ ತರಗತಿಗೆ ಫಸ್ಟ್ ರ್‍ಯಾಂಕ್ ಪಡೆವ ನಿರೀಕ್ಷೆಯಿದ್ದ ಮಮತಳ ವಿದ್ಯಾಭ್ಯಾಸ ಮೊಟಕಾಗುತ್ತದೆ. ಅಲ್ಲೇ ಇದ್ದು ಕಲಿಕೆ ಮುಂದುವರಿಸುವ ಇಚ್ಛಾಶಕ್ತಿಯನ್ನು ಮಮತ ಕಳೆದುಕೊಳ್ಳುತ್ತಾಳೆ. ಅಮ್ಮನೊಂದಿಗೆ ಮನೆಗೆ ಮರಳುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾಳೆ.

ಅತ್ಯಾಚಾರದಿಂದ ನಲುಗಿಹೋದ ಮಗಳ ಶರೀರದ ಗಾಯಗಳನ್ನು ಕಂಡು 'ಇದು ನಮ್ಮ ವಿಧಿ' ಎಂದು ದುಃಖಿಸುವ ಮಮತಳ ಅಮ್ಮ ಹೆಣ್ಣಿನ ಅಸಹಾಯಕತೆಗೆ ಪ್ರತೀಕವಾಗಿದ್ದಾಳೆ. 'ಸೀಸಾಂಗ್‌ನ ಶಾಪವಾಗಿದ್ದೆ ನಾನು. ನಾನು ಹೋದ ಬಳಿಕ ಸ್ಕೂಲ್ ಅದರ ಸತ್ಕೀರ್ತಿಯನ್ನು ಮರಳಿ ಪಡೆಯುತ್ತದೆ. ನಿಮಗೆ ಮುಖ ತೋರಿಸುವ ಧೈರ್ಯ ನನಗಿಲ್ಲ' (ಪು. ೫೭೨) ಎಂಬ ಸಾಲುಗಳಿರುವ ಪತ್ರವನ್ನು ಕುಮಾರ್‌ಗೆ ಕಳುಹಿಸುವ ಮಮತ 'ಹೆಣ್ತನವೇ ಒಂದು ಶಾಪ' ಎಂದು ಭಾವಿಸುವ ಸಮಾಜದ ಬಹುಪಾಲು ಸ್ತ್ರೀಯರ ಪ್ರತೀಕವಾಗಿದ್ದಾಳೆ. ಹೆಣ್ಣಿನ ಚಾರಿತ್ರ್ಯದ ಶುದ್ಧತೆಯನ್ನು ಅವಳ ದೇಹಕ್ಕೆ ಅಂಟಿಸಿ ನಿಯಂತ್ರಿಸುವ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಅತ್ಯಾಚಾರಗೈದವರು ಲಜ್ಜೆಯಿಲ್ಲದೆ ತಲೆಯೆತ್ತಿ ನಡೆದಾಡುವಾಗ, ಸಂತ್ರಸ್ತೆಯಾದ ಹೆಣ್ಣು ಮಾತ್ರ ತನ್ನ ಅಪರಾಧವೇ ಇಲ್ಲದೆಯೂ ಕಳಂಕಿನಿಯಾಗಿ ಅವಮಾನದಿಂದ ಬದುಕಬೇಕಾಗಿದೆ.

ಅತ್ಯಾಚಾರ ಆರೋಪಿಯಾಗಿದ್ದ ರಬೀಂದ್ರನಾಥನ ತಂದೆ, ಅವಳಿಗೆ 'ನ್ಯಾಯವಾದ ಪರಿಹಾರವಾಗಿ' ಹತ್ತು ಸಾವಿರ ರೂಪಾಯಿ ಕೊಟ್ಟು ದಾವೆ ಹಾಕದಂತೆ ಮನವೊಲಿಸುವ ಪ್ರಸ್ತಾಪ ಕಳಿಸುತ್ತಾನೆ. ಅತ್ಯಾಚಾರಿಗಳ ಕಲಿಕೆಗಾಗಲೀ ಬದುಕಿಗಾಗಲೀ ಯಾವುದೇ ತೊಂದರೆಯಾಗದೆ ಸಹಜವಾಗಿರುವುದು ಸಾಧ್ಯವಾಗುವ ನಮ್ಮ ಸಾಮಾಜಿಕ ಸಂದರ್ಭದಲ್ಲಿ ತನ್ನದಲ್ಲದ ತಪ್ಪಿಗೆ ಹೆಣ್ಣಿನ ಬದುಕು ಮತ್ತು ಕನಸುಗಳು ನಾಶವಾಗುತ್ತವೆ. ಅತ್ಯಾಚಾರ ಸಂತ್ರಸ್ತೆಗೆ ದೊರಕುವ ನ್ಯಾಯವೆಂದರೆ ಯಾವುದು? ಪರಿಹಾರದ ಮೊತ್ತವೆಂಬ ಹಣದ ಮೂಲಕ ಅವಳಿಗಾದ ನಷ್ಟವನ್ನು ತುಂಬಿಕೊಡುವುದು ಸಾಧ್ಯವೇ? ಮುಂತಾದ ಗಂಭೀರ ಪ್ರಶ್ನೆಗಳನ್ನು ಕೃತಿ ಮೂಡಿಸುತ್ತದೆ.

ಶೀಬಾ ಇ.ಕೆ. ಅವರು ಬರೆದಿರುವ 'ಡ್ಯಾಂ' ಕಥೆಯ ನಾಯಕಿ ಬಾಲ್ಯದ ಗೆಳೆಯನನ್ನು ಸದ್ಯದಲ್ಲಿಯೇ ಮದುವೆಯಾಗಲಿರುವ ಮಧುರಕಲ್ಪನೆಯಲ್ಲಿ ಸಂತೋಷವಾಗಿರುವ ಮುಗ್ಧೆ. ಅವಳ ಭಾವೀ ಪತಿ ಬಿಲಾಲ ತಮ್ಮ ಸುಂದರ ನಾಳೆಗಳಿಗಾಗಿ ಹಣವನ್ನು ಕೂಡಿಡುವುದಕ್ಕಾಗಿ ಪಕ್ಕದ ಊರಿನಲ್ಲಿ ನಡೆಯುತ್ತಿರುವ ಹೊಸ ಆಣೆಕಟ್ಟಿನ ಕೆಲಸದಲ್ಲಿ ದುಡಿಯುತ್ತಿದ್ದಾನೆ. ಮದುವೆಯ ತಯಾರಿ ಬಗ್ಗೆ ಚರ್ಚಿಸುವುದಕ್ಕಾಗಿ ಅವನ ಭೇಟಿಗೆಂದು ಹೊರಟ ಅಣ್ಣಂದಿರೊಂದಿಗೆ ಈ ಹೆಣ್ಣುಮಗಳೂ ಹೊರಟುಬಂದಿದ್ದಾಳೆ. ಬರಗಾಲದ ಊರಿನ ಬವಣೆಗಳ ನಡುವೆ ಬದುಕುತ್ತಿರುವ ಅವಳಿಗೆ ಬಿಲಾಲ ವರ್ಣಿಸಿದಂತೆ 'ಒಳ್ಳೆ ಹಸಿರಿದೆ. ಹೊಳೆಗಳಿವೆ. ಸುಶಿಕ್ಷಿತ, ಸಭ್ಯ ಜನರಿದ್ದಾರೆ. ಮರ್ಯಾದಸ್ಥ ಮಂದಿ' ಎಂಬಂಥಾ ಹೊಸ ಊರಿನಲ್ಲಿ ಪತಿಯೊಂದಿಗೆ ಸುಖವಾಗಿ ಬದುಕುವ ಕನಸಿದೆ.

ಸವಿನೆನಪುಗಳೊಂದಿಗೆ ಪ್ರಿಯನಿಂದ ಬೀಳ್ಕೊಂಡು ಊರಿಗೆ ಮರಳುವ ದಾರಿಯಲ್ಲಿ ಅಣ್ಣಂದಿರ ಕಣ್ಣಮುಂದೆಯೇ ನಾಲ್ವರು ದುರುಳರಿಂದ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ರಸ್ತೆಯಲ್ಲಿ ವಾಹನಕ್ಕಾಗಿ ನಿಂತಿದ್ದವರನ್ನು ಹತ್ತಿಸಿಕೊಂಡ ಅಪರಿಚಿತರು ಈ ಹೆಣ್ಣುಮಗಳು ತಮ್ಮ ಊರಿಗೆ ಬಂದ ಕಾರಣವನ್ನು

ತಿಳಿದುಕೊಂಡ ಬಳಿಕವೇ 'ಅವಳ ರಕ್ಷಕರಾಗಿ' ಜೊತೆಗಿದ್ದ ಗಂಡಸರನ್ನು ಹೊಡೆದು ಕಟ್ಟಿ, ಅವಳನ್ನು ಹಿಡಿದೆಳೆದು ಆಕ್ರಮಣ ಮಾಡಿದ್ದಾರೆ. ಅತ್ಯಾಚಾರಿಗಳ ಪ್ರಕಾರ ಅವಳು 'ಊರು ಬಿಟ್ಟು ಇಷ್ಟು ದೂರ ಪ್ರಿಯತಮನನ್ನು ಹುಡುಕುತ್ತ ಬಂದುದು' ಸಭ್ಯ ಸ್ತ್ರೀಯೊಬ್ಬಳು ಮಾಡಬಾರದ ಅಪರಾಧವಾಗಿದೆ ಮತ್ತು ಅದೇ ಅವರ ದುಷ್ಕೃತ್ಯಕ್ಕೆ ಪ್ರೇರಣೆ ನೀಡಿದೆ.

ಆಸ್ಪತ್ರೆಯಲ್ಲಿ ನರಳುತ್ತ 'ತನ್ನ ದೇಹ, ಮನಸ್ಸು, ಆತ್ಮ... ಯಾವುದೂ ಬಾಕಿಯಾಗದಂತೆ ಗಾಯ ಮಾಡಿರುವ ಅವರು ಸುಖಪಟ್ಟಿರಬಹುದೆ? ಅವರಿಗೆ ಅನುಭೂತಿಯುಂಟಾಗಿರಬಹುದೆ?' (ಪು. ೧೧೧, ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು) ಎಂಬಂಥ ಮಹತ್ವದ ಪ್ರಶ್ನೆಯೊಂದನ್ನು ಆಕೆ ಸ್ವಗತದಲ್ಲಿ ಕೇಳಿಕೊಳ್ಳುತ್ತಾಳೆ. ಆ ನಾಲ್ವರು ದುರುಳರ ಶರೀರದ ವಾಸನೆಗಳು ಬೇರೆ ಬೇರೆಯಾಗಿದ್ದರೂ ಹೆಣ್ಣಿನ ದೇಹವನ್ನು ಕಚ್ಚಿ ಘಾಸಿಗೊಳಿಸುವ ಅವರ 'ಹಲ್ಲುಗಳು, ಉಗುರುಗಳು ಮತ್ತು ಕ್ರೌರ್ಯಗಳು' ಒಂದೇ ರೀತಿಯಾಗಿದ್ದುದನ್ನು ನೆನಪಿಸಿಕೊಳ್ಳುತ್ತ ಎಲ್ಲ ಪುರುಷರ ಬಗೆಗೂ ಭಯಪಟ್ಟುಕೊಳ್ಳುತ್ತಾಳೆ. 'ಎಲ್ಲ ಪುರುಷರಿಗೂ ಕರಾಳ ರಾತ್ರಿಯ ಮುಖ. ವಾಸನೆಗಳೂ ಮತ್ತು ಹರಿತವಾದ ಹಲ್ಲುಗಳ ನಡುವೆ ಸಣ್ಣಪುಟ್ಟ ವ್ಯತ್ಯಾಸಗಳು ಮಾತ್ರ ಇರಬಹುದು. ಆಸುರೀ ರೀತಿಯ ತಾಳವೇ ಎಲ್ಲೆಡೆಯೂ ತುಂಬಿಕೊಂಡಿದೆ.' (ಪು. ೧೧೨, ಅದೇ) ತಾನು ಮದುವೆಯಾಗಬಯಸಿದ ಬಿಲಾಲನನ್ನು ಕೂಡ ಇನ್ನು ನೋಡುವ ಅಗತ್ಯವಿಲ್ಲ ಎಂದು ನಿರ್ಧರಿಸುತ್ತಾಳೆ.

'ಒಂದು ಶಾಪ ಕೊಡಲು ಬೇಕಾದಷ್ಟು ಪ್ರಾಣವನ್ನು' ಉಳಿಸಿಕೊಂಡಿರುವ ಆಕೆ, ದೇವರ ಸ್ವಂತ ನಾಡು, ಸಾಂಸ್ಕೃತಿಕ ಸಂಪನ್ನವಾದ ನಾಡು ಎಂದೆಲ್ಲ ಅನಿಸಿಕೊಂಡ 'ಕೇರಳದ ಎಲ್ಲ ಆಣೆಕಟ್ಟುಗಳೂ ತನ್ನ ಬದುಕಿನಂತೆ ಪುಡಿಯಾಗಲಿ' ಎಂದು ಬಯಸುತ್ತಾಳೆ. 'ಆಣೆಕಟ್ಟು ಕಟ್ಟಿ ನಿಲ್ಲಿಸಿದ ಎಲ್ಲ ಅಭಿಲಾಷೆ–ಅಹಂಕಾರಗಳು ಚೂರುಚೂರಾಗಿ ಹರಿದು ಚಿಂದಿಯಾಗಬೇಕು' (ಪು. ೧೧೭, ಅದೇ) ಎಂದಾಕೆ ಶಪಿಸುವುದು ಅರ್ಥಪೂರ್ಣವಾಗಿದೆ. ಕಲ್ಲು, ಕಬ್ಬಿಣ, ಸಿಮೆಂಟುಗಳನ್ನು ಬಳಸಿ ಕಟ್ಟಿದ ಆಣೆಕಟ್ಟುಗಳಿಂದ ಊರಿನ ಸಮೃದ್ಧಿಯನ್ನು ಅಳೆಯಲಾಗದು, ಸ್ತ್ರೀಯರಿಗೆ ನಿರಾತಂಕವಾಗಿ ಬದುಕುವ ಅವಕಾಶವಿಲ್ಲದ ಆಧುನಿಕತೆಯನ್ನು ಪ್ರಗತಿ ಎನ್ನಲಾಗದು ಎಂಬ ಆಶಯ ಕತೆಯಲ್ಲಿದೆ. ರಕ್ಷಣೆ ನೀಡುವರೆಂದು ಭಾವಿಸಲಾಗಿರುವ ಪುರುಷರು ಜೊತೆಯಲ್ಲಿದ್ದಾಗಲೇ ಹೆಣ್ಣಿನ ಮೇಲೆ ಆಕ್ರಮಣ ನಡೆದಿದೆ. ಹೆಣ್ಣನ್ನು ಭೋಗದ ವಸ್ತು ಎಂದು ಪರಿಭಾವಿಸುವ ಮನಸ್ಥಿತಿ ಬದಲಾಗದ ಹೊರತು ಸ್ತ್ರೀಯರಿಗೆ ರಕ್ಷಣೆಯಿಲ್ಲ.

ಸಾರಾ ಜೋಸೆಫ್ ಅವರು ಬರೆದಿರುವ 'ಮುರಿದ ಸೇತುವೆ' ಕಥೆಯ ನಾಯಕಿ ಕಳೆದುಕೊಂಡ ಮಕ್ಕಳನ್ನು ಹುಡುಕುತ್ತಿದ್ದಾಳೆ. ಅವಳು ಕಳೆದುಕೊಂಡಿರುವ ಮಕ್ಕಳ ಬಗ್ಗೆ ಯಾರಿಗೂ ಕಾಳಜಿಯಿಲ್ಲ. ಯಾರೂ ಅವಳನ್ನು ನಂಬುತ್ತಿಲ್ಲ. ದಾರಿಯಲ್ಲಿ ಎದುರಾದ ಮಳೆಗೆ ಒದ್ದೆಯಾದ ಪುಟ್ಟ ಹುಡುಗಿಯೊಬ್ಬಳು ಮಳೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಕಂಪೆನಿಯ ಗೇಟನ್ನು ಹೊಕ್ಕಾಗ ಅಲ್ಲಿನ

ವಾಚ್‌ಮ್ಯಾನ್ ಅವಳ ತಲೆಯನ್ನು ಟವೆಲ್‌ನಿಂದ ಒರೆಸುವ ದೃಶ್ಯವನ್ನು ನೋಡುತ್ತ ಅಲ್ಲಿರುವುದು ಪ್ರೀತಿಯೋ ಕಾಮವೋ ಎಂದು ತಿಳಿಯಲಾಗದೆ ಚಡಪಡಿಸುತ್ತಾಳೆ. 'ಈಗೀಗ ಒಂದು ಮಗುವಿನ ಮೃದುವಾದ ತುಟಿಗಳನ್ನೂ ಕಾಮದ ದೃಷ್ಟಿಯಿಂದ ನೋಡಲಾಗುತ್ತಿದೆಯಂತೆ' ಎಂಬ ಸುದ್ದಿ ಅವಳನ್ನು ಹೆದರಿಸಿದೆ. ಊರೆಲ್ಲ ಸ್ವಾತಂತ್ರ್ಯವನ್ನು ಆಚರಿಸುತ್ತಿರುವಾಗ ಆ ಸಂತೋಷಾಚರಣೆಯಲ್ಲಿ ಪಾಲ್ಗೊಳ್ಳದೆ ಅಳುತ್ತಿರುವ ಬಾಲಕನ ಪುಟ್ಟ ತಂಗಿ ಕಾಮುಕರ ಕೈಗೆ ಸಿಕ್ಕಿ ಸತ್ತು ಹೋಗಿದ್ದಾಳೆ. ನಮ್ಮ ದೇಶಕ್ಕೆ ಸಿಕ್ಕಿದ ಸ್ವಾತಂತ್ರ್ಯ ಹೆಣ್ಣುಮಕ್ಕಳಿಗಿನ್ನೂ ಸಿಕ್ಕಿಲ್ಲ. ಅವರು ನಿರಾತಂಕವಾಗಿ ಸಂಚರಿಸುವ ಸನ್ನಿವೇಶ ನಿರ್ಮಾಣವಾಗಿಲ್ಲ.

ಸ್ತ್ರೀಹಿಂಸೆಯ ವಿಷಯದಲ್ಲಿ 'ಸಭ್ಯ ನಾಗರಿಕರು ವಾಸಿಸುವ' ಆಧುನಿಕ ನಗರಗಳು ಹಳ್ಳಿಗಳಿಗಿಂತಲೂ ಹೆಚ್ಚು ಕ್ರೌರ್ಯಯುತವಾಗಿವೆ. ನಗರದ ಬದುಕಿನ ಅಪರಿಚಿತತೆಯು ಅತ್ಯಾಚಾರಗಳಿಗೆ ಪ್ರೇರಣೆಯಾಗಿದೆ. ಕಮಲಾದಾಸ್ ಅವರು ಬರೆದ 'ಸ್ವಯಂವರ' ಎಂಬ ಕತೆಯಲ್ಲಿ ಮೂವರು ಯುವಕರು ತಾನು ಆವಂತೀ ದೇಶದ ರಾಜಕುಮಾರಿ ಎಂದು ಭಾವಿಸುವ ಮತಿಭ್ರಮಿತ ಮುದುಕಿಯೊಬ್ಬಳ ಮಾನಸಿಕ ಸ್ಥಿತಿಯನ್ನು ಉಪಾಯವಾಗಿ ಬಳಸಿಕೊಂಡು ಅವಳನ್ನು ಸಂಜೆಗತ್ತಲಲ್ಲಿ ಉದ್ಯಾನಕ್ಕೆ ಬರಿಸಿ ಬಲಾತ್ಕರಿಸಿ ಅವಳ ಸಾವಿಗೆ ಕಾರಣರಾಗುತ್ತಾರೆ.

ಇಂದು ಮೇನೋನ್ ಅವರು ಬರೆದಿರುವ 'ಟೈಗರ್ ಬಾಮ್' ಕತೆಯು ಫಿಟ್ಸ್ ಕಾಯಿಲೆಯಿಂದ ನಿರ್ಜನ ರಸ್ತೆಯಲ್ಲಿ ಬಿದ್ದು ಒದ್ದಾಡುವ ಅಸಹಾಯಕ ಹುಡುಗಿಯೊಬ್ಬಳು ಪುರುಷನ ದೈಹಿಕ ಕಾಮನೆಗೆ ಬಲಿಯಾಗುವುದನ್ನು ಬಹಳ ವಿಷಾದದಿಂದ ಚಿತ್ರಿಸುತ್ತದೆ. 'ಸುಂದರಿಯರು ಸುಂದರರು' ಕೃತಿಯಲ್ಲಿ ಧರ್ಮದ ಹೆಸರಿನಲ್ಲಿ ನಡೆದ 'ಮಾಪ್ಳೆದಂಗೆ'ಯಲ್ಲಿ ಅನ್ಯಮತದ ಸ್ತ್ರೀಯರ ಮೇಲೆ ಸಾಮೂಹಿಕ ಅತ್ಯಾಚಾರ, ಹಿಂಸೆಯ ಭೀಕರತೆಯ ಚಿತ್ರಣವಿದೆ. 'ಹಗ್ಗ' ಕಾದಂಬರಿಯಲ್ಲೂ ಮಾಪ್ಳೆದಂಗೆಯನ್ನು ನೆಪವಾಗಿಟ್ಟುಕೊಂಡು ಯಾವ ತಪ್ಪೂ ಮಾಡದ ಸ್ತ್ರೀಯರ ಮೇಲೆ, ವಿಶೇಷವಾಗಿ ಚೆಲುವೆಯರೆನಿಸಿಕೊಂಡ ಅಂತರ್ಜನ ಸ್ತ್ರೀಯರ ಮೇಲೆ ಮತೀಯ ಕಾರಣಗಳಿಗಾಗಿ ಸಾಮೂಹಿಕ ಆಕ್ರಮಣ, ಮತಾಂತರ ನಡೆಯುವ ಚಿತ್ರಣಗಳಿವೆ. ಆಕ್ರಮಣಕ್ಕೆ ಒಳಗಾಗಿ ಬದುಕುಳಿದ ತೋತ್ರಕುಟ್ಟಿ ಅಂತರ್ಜನಂಳಿಗೆ ಅಂಥ ಹಲವು ಕತೆಗಳು ಗೊತ್ತಿವೆ. ಶಾಮು ಮೇನೋನರ ಮಗಳಾದ ಚಿನ್ನಮ್ಮ ಎಂಬ ಮುಗ್ಧೆಯ ಕತೆಯನ್ನು ಆಕೆ ನೆನಪಿಸಿಕೊಳ್ಳುತ್ತಾಳೆ. 'ಬಂಗಾರದ ಬಣ್ಣದವಳಾಗಿದ್ದ' ಚಿನ್ನಮ್ಮುವಿನ ಮೇಲೆ ಕಣ್ಣಿಟ್ಟಿದ್ದ ಮೊಯ್ದು ಎಂಬಾತ ಅವಳನ್ನು ಅಪಹರಿಸುವುದಕ್ಕಾಗಿಯೆ ದಂಗೆಕೋರರೊಂದಿಗೆ ಸೇರಿಕೊಂಡ. 'ತನಗೆ ಮಾತ್ರ' ಎಂದು ಹುಡುಗಿಯನ್ನು ಅಡಗಿಸಿಟ್ಟ. ಅವಳಿಗಾಗಿ "ಕತ್ತಿ ಹಿಡಿದು ಕಾದಾಡಿದ ಮೊಯ್ದುವನ್ನು ಅವರು ಹಿಡಿದು ಕಟ್ಟಿಹಾಕಿದರು. ಒಬ್ಬೊಬ್ಬರಾಗಿ ಮಾಪ್ಪಿಳೆಗಳು ಚಿನ್ನಮ್ಮು

ಇದ್ದ ಕೋಣೆಯನ್ನು ಹೊಕ್ಕು ಹೊರಬಂದರು. ಕಟ್ಟಿಹಾಕಲ್ಪಟ್ಟ ಮೊಯ್ದು ಎಲ್ಲವನ್ನೂ ಅಸಹಾಯಕನಾಗಿ ನೋಡುತ್ತ ಬಿದ್ದಿದ್ದ. ಚಿನ್ನಮ್ಮ ಸತ್ತಳು" (ಪು. ೬೧೩)

ಹೆಚ್ಚಿನ ಬಾರಿ ಇಂಥ ಅತ್ಯಾಚಾರಿಗಳು ಅನಾಮಧೇಯರಾಗಿರುತ್ತಾರೆ. ಹಾಗಾಗಿ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಪುರುಷನ ವಿಕೃತ ಕಾಮವಾಂಛೆಗೆ ಬಲಿಯಾಗುವ ಭಯದಿಂದಾಗಿ ಹೆಣ್ಣು ಸದಾಕಾಲವೂ ರಕ್ಷೆಯಲ್ಲಿಯೆ ಬದುಕಬೇಕಾದ ಸಾಮಾಜಿಕ ಪರಿಸ್ಥಿತಿಯು ಹೆಚ್ಚಿನ ಸಂಖ್ಯೆಯ ವಿದ್ಯಾವಂತೆಯರೂ, ಉದ್ಯೋಗಸ್ಥೆಯರೂ ಇರುವ ಕೇರಳದಲ್ಲೂ ಇದೆ. ಮೇಲ್ನೋಟಕ್ಕೆ ನಾಗರಿಕರೂ, ಸುಶಿಕ್ಷಿತರೂ ತುಂಬಿರುವಂತೆ ಕಾಣುವ ನಗರಬದುಕಿನ ಆಧುನಿಕತೆ ಸ್ತ್ರೀಯರಿಗೆ ನಿರ್ಭಯರಾಗಿ ಓಡಾಡುವ ಅವಕಾಶ ನೀಡಿಲ್ಲ. ಸ್ತ್ರೀಯರು ಪರಿಚಿತರಿರಲಿ, ಅಪರಿಚಿತರಿರಲಿ ಅವರಿಗೆ ಕಿರುಕುಳ ನೀಡುವುದು ಪುರುಷರ ಜನ್ಮಸಿದ್ಧ ಹಕ್ಕಾಗಿದೆ. ಅಂಥ ಉಪದ್ರವಗಳನ್ನು ವಿರೋಧಿಸುವ ಗೋಜಿಗೆ ಹೋಗದೆ, ರಂಪ ಮಾಡದೆ ಸುಮ್ಮನೆ ಸಹಿಸಿಕೊಂಡಿರುವುದೆ ಆರೋಗ್ಯಕ್ಕೆ ಹಿತಕರ ಎಂಬ ನೀತಿಯನ್ನು ಸ್ತ್ರೀಯರಿಗೆ ಬೋಧಿಸಲಾಗಿದೆ. ಪುರುಷನ ವರ್ತನೆಯನ್ನು ಆಕ್ಷೇಪಿಸುವ ಅಥವಾ ಪ್ರತಿಭಟಿಸುವ ಹೆಣ್ಣಿನ ಬದುಕು ದುರಂತವಾಗಬಹುದು; ಆಕೆ ಕುಟುಂಬದಿಂದ ತಿರಸ್ಕೃತೆಯಾಗಿ, ಸಮಾಜದ ದೃಷ್ಟಿಯಲ್ಲಿ ಕಲಂಕಿನಿಯಾಗಿ ಅಜ್ಞಾತವಾಸದಲ್ಲಿ ಬದುಕಬೇಕಾಗಬಹುದು ಎಂಬ ಅಂಶವನ್ನು ಕೃತಿಗಳು ನೆನಪಿಸುತ್ತವೆ.

೩.೨.೫. ಸ್ತ್ರೀಯರ ನಡುವಿನ ಆಕರ್ಷಣೆ

ಪುರುಷರೊಂದಿಗಿನ ಲೈಂಗಿಕ ಸಂಬಂಧವು ಸ್ತ್ರೀಗೆ ಅನಿವಾರ್ಯವಲ್ಲ ಎಂಬುದು ಲೆಸ್ಬಿಯನ್ ಸ್ತ್ರೀವಾದೀ ಚಿಂತನೆಯ ಮುಖ್ಯ ಪ್ರತಿಪಾದನೆ. ಗಂಡನ್ನೂ ಹೆಣ್ಣನ್ನೂ ಜೊತೆಯಾಗಿಸಿ, ಪ್ರಜನನ ಪ್ರಕ್ರಿಯೆಯನ್ನು ಮುಂದುವರಿಸಿ, ಕುಟುಂಬವನ್ನು ರೂಪಿಸಿಕೊಳ್ಳುವ ಕಲ್ಪನೆ ಪ್ರಾಕೃತಿಕವಾದುದಲ್ಲ. ಅದು ಸಂಸ್ಕೃತಿ ನಿರ್ಮಿತ. ದಾಂಪತ್ಯದ ಸಂಬಂಧವನ್ನು ನಿರ್ಧರಿಸಿದ್ದು ಸಮಾಜ. ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳ ಸ್ವರೂಪ ಮತ್ತು ಸಾಧ್ಯತೆಗಳನ್ನು ನಿರ್ವಚಿಸಿದವರು ಪುರುಷರು. ಸಲಿಂಗ ಸಂಬಂಧಗಳಿಂದ ಅನೂಚಾನವಾದ ಪಿತೃಪ್ರಧಾನ ಪರಂಪರೆಗೆ ಧಕ್ಕೆಯಾಗುವ ಭಯವಿರುವುದರಿಂದ ಸ್ತ್ರೀಯರ ನಡುವಿನ ಲೈಂಗಿಕ ಸಂಬಂಧವನ್ನು ಸಮಾಜವು ಅಸಹಜವೆಂಬಂತೆ ಗ್ರಹಿಸುತ್ತದೆ. ಗುಮಾನಿಯಿಂದ ನೋಡುತ್ತದೆ ಮತ್ತು ತಡೆಯಲು ಪ್ರಯತ್ನಿಸುತ್ತದೆ. ಆದರೆ ಸ್ತ್ರೀಯರು ಈ ಸಂಬಂಧದಲ್ಲಿ ಹೆಚ್ಚು ಭರವಸೆ ಹೊಂದಿದ್ದಾರೆ ಮತ್ತು ತೃಪ್ತರಾಗಿದ್ದಾರೆ. ಸಾಂಪ್ರದಾಯಿಕವಾದ ನಿಯತಿಯನ್ನು ಮೀರಿ, ಹೆಣ್ಣು ಹೆಣ್ಣುಗಳ ನಡುವೆ ಇರಬಹುದಾದ ಆಕರ್ಷಣೆ, ಸಾಂಗತ್ಯ ಮತ್ತು ಸಹಬಾಳ್ವೆಯ ಸಾಧ್ಯತೆಗಳನ್ನು ಕೆಲವು ಕತೆಗಳು ಹೊಳೆಯಿಸುತ್ತವೆ.

ಸಲಿಂಗ ಸಂಬಂಧವು ಹೆಣ್ಣಿನ ನೆಮ್ಮದಿಗೆ, ಸಹಜವಾದ ಅಸ್ಮಿತೆಗೆ ಅವಕಾಶ ಒದಗಿಸುವುದನ್ನು ಕಮಲಾದಾಸ್ ಅವರು ವಿಶೇಷವಾಗಿ ಪ್ರತಿಪಾದಿಸಿದ್ದಾರೆ. ಕೆ.ಪಿ. ಸುಧೀರಾ, ಸಾರಾ ಜೋಸೆಫ್, ಇ.ಕೆ. ಷೀಬಾ.. ಮುಂತಾದ ಲೇಖಕಿಯರು ಕೂಡ ತಮ್ಮ ಕತೆಗಳಲ್ಲಿ ಸ್ತ್ರೀಯರ ನಡುವಿನ ಸಲಿಂಗಮೈತ್ರಿಯನ್ನು ಪ್ರಜ್ಞಾಪೂರ್ವಕವಾಗಿ ದಾಖಲಿಸಿದ್ದಾರೆ. ಸ್ತ್ರೀಯರ ನಡುವೆ ಪರಸ್ಪರ ಆಕರ್ಷಣೆಯಿಂದ ಸ್ಥಾಪಿತವಾಗುವ ಸಂಬಂಧವು ಸ್ತ್ರೀ–ಪುರುಷರ ನಡುವಿನ ಸಂಬಂಧಕ್ಕಿಂತ ಹೆಚ್ಚು ಗಾಢವಾದುದು ಮತ್ತು ದಬ್ಬಾಳಿಕೆ, ಶೋಷಣೆಗಳಿಂದ ಮುಕ್ತವಾಗಿದ್ದು ಸುರಕ್ಷಿತವಾದುದು ಎಂದು ಈ ಲೇಖಕಿಯರು ಬರೆದಿರುವ ಕತೆಗಳು ಪ್ರತಿಪಾದಿಸುತ್ತವೆ.

ಕಮಲಾದಾಸ್ ಅವರ 'ನನ್ನ ಗೆಳತಿ ಅರುಣ' ಕತೆಯಲ್ಲಿ ಹೆಣ್ಣಾಗಿಯೂ ಗಂಡಿನಂತೆ ಬಟ್ಟೆ ಧರಿಸುವ ವಿಮಲ್ ಮತ್ತು ಅವಳನ್ನು ಅಪ್ಪಿಹಿಡಿದು 'ಇವತ್ತು ಮನೆಗೆ ಬರಲೆ' ಎಂದು ಕೇಳುವ ಶೀಲಾಳ ನಡುವೆ ಲೈಂಗಿಕ ಆಕರ್ಷಣೆಯಿರುವುದನ್ನು ಗಮನಿಸಬಹುದು. ಅವರದೇ ಇನ್ನೊಂದು ಕತೆ 'ಲೇಡಿ ಡಾಕ್ಟರ್' ನಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ ಯುವತಿಯಾದ ನರ್ಸ್‌ಗೆ ತನ್ನ ಮೇಲಧಿಕಾರಿಯಾಗಿರುವ ಐವತ್ತು ವರ್ಷದ ಲೇಡಿ ಡಾಕ್ಟರರ ಮೇಲೆ ಮೋಹವಿದೆ. 'ಅವರನ್ನು ದಿನಾ ನೋಡ್ತಾ ಕೂರಬೇಕೆಂಬ ವ್ಯಾಮೋಹ. ನನಗೆ ಅವರನ್ನು ಮುಟ್ಟಬೇಕು, ಮುತ್ತಿಡಬೇಕು' ಎಂದಾಕೆ ತನ್ನ ಸಹೋದ್ಯೋಗಿ ಗೆಳತಿಯಲ್ಲಿ ತನ್ನಾಸೆಯನ್ನು ವ್ಯಕ್ತಪಡಿಸುತ್ತಾಳೆ. 'ಚಂದನದ ಮರಗಳು' ಎಂಬ ಕತೆಯಲ್ಲಿ ಶೀಲಾ ಮತ್ತು ಕಲ್ಯಾಣಿ ಎಂಬ ಬಾಲ್ಯಸ್ನೇಹಿತೆಯರ ಪರಸ್ಪರ ಆಕರ್ಷಣೆಯ ಗಾಢತೆಯೆ ಅವರ ವೈವಾಹಿಕ ಜೀವನದ ವಿಘಟನೆಗೆ ಕಾರಣವಾಗಿದೆ.

'ಸ್ಪರ್ಶ' ಎಂಬ ಕತೆಯಲ್ಲಿ ಲೇಖಕಿ ಸಿತಾರಾ ಎಸ್. ಅವರು ಸ್ತ್ರೀಯರ ಸಲಿಂಗ ಸಂಬಂಧದಲ್ಲಿ ಇರುವ ಆಪ್ತತೆ ಮತ್ತು ನೆಮ್ಮದಿಗಳನ್ನು ಪ್ರತಿಪಾದಿಸಿದ್ದಾರೆ. ಈ ಕತೆಯಲ್ಲಿ ಬರುವ ಮಾದ್ರಿ ಕವಯಿತ್ರಿ. ಅವಳ ಬರೆಹದ ಬಗ್ಗೆ ಪತಿಗೆ ಉದಾಸೀನವಿದೆ. ತನ್ನನ್ನು ಆದರಿಸದ ಪತಿಯಲ್ಲಿ ಆಸಕ್ತಿ ಕಳೆದುಕೊಂಡ ಮಾದ್ರಿ ತನ್ನ ಬರೆಹಗಳನ್ನು ಮೆಚ್ಚುವ ಗೆಳತಿ, ವಿಚ್ಛೇದಿತೆ ಮರಿಯಾಳೆಡೆಗೆ ಲೈಂಗಿಕವಾಗಿ ಆಕರ್ಷಿತಳಾಗುತ್ತಾಳೆ. ಅವಳ ಬೆವರು, ಹರಡಿದ ಕುಂಕುಮ, ಅವಳು ಬ್ಯಾಗ್ ತೆಗೆದುಕೊಂಡು ಹೋಗುವುದು, ತಡರಾತ್ರಿಯಲ್ಲಿ ಮರಿಯಾಳ ಫೋನ್‌ಕರೆಗಳು... ಇತ್ಯಾದಿಗಳು ಗಂಡನಲ್ಲಿ ಸಂಶಯ ಉಂಟುಮಾಡುತ್ತವೆ. ಮಾದ್ರಿಯನ್ನು ಹುಡುಕಿಕೊಂಡು ಮರಿಯಾಳ ಮನೆಗೆ ಹೋಗುವ ನಂದನ್, ಹೆಂಡತಿಯ ವರ್ತನೆಯನ್ನು ದೂರುತ್ತ ಮರಿಯಾಳ ಅನುಕಂಪವನ್ನು ಗಳಿಸಲು ಯತ್ನಿಸುತ್ತಾನೆ. ಮರಿಯಾಳಿಗೆ ಗಂಡಸರಲ್ಲಿ ಆಸಕ್ತಿಯಿಲ್ಲ. 'ಛಿ! ಕೊಳಕು ಪ್ರಾಣಿ! ನಿನಗೆ ಹೊಟ್ಟೆಕಿಚ್ಚು' ಎಂದು ಹಂಗಿಸಿ ಅವನನ್ನು ನಿರಾಕರಿಸುತ್ತಾಳೆ. ಅವನು ತೆರಳಿದ ಬಳಿಕ ಕೋಣೆಯಲ್ಲಿ ಮಲಗಿರುವ ಮಾದ್ರಿಯ ಬಳಿಸಾರಿ, 'ಅರ್ಧಕ್ಕೆ ನಿಲ್ಲಿಸಿದ ಪ್ರೇಮದಾಟವನ್ನು ಪೂರ್ತಿಗೊಳಿಸುವುದಕ್ಕೆ' ಉದ್ಯುಕ್ತಳಾಗುತ್ತಾಳೆ. ಮಾದ್ರಿ ಒಳಕೋಣೆಯಲ್ಲಿ

ಮಲಗಿದ್ದಾಳೆಂದು ನಂದನ್‌ಗೆ ತಿಳಿದಿದೆ. ಆದರೆ ಒಳಗೆ ಪ್ರವೇಶಿಸಿ 'ಕನಸಿನಲ್ಲಿ ಮುಗುಳುನಗುತ್ತ ಮಲಗಿರಬಹುದಾದ' ಹೆಂಡತಿಯನ್ನು ಮನೆಗೆ ಕರೆದೊಯ್ಯುವ ನೈತಿಕ ಧೈರ್ಯ ನಂದನ್‌ಗೆ ಇಲ್ಲದೆ ಅಸಹಾಯಕನಾಗಿ ಹಿಂತಿರುಗುವುದು ಅರ್ಥಪೂರ್ಣವಾಗಿದೆ.

'ಹದಿನಾರರ ವಯಸು' ಎಂಬ ಕತೆಯಲ್ಲಿ ಇ.ಕೆ. ಷೀಬಾ ಅವರು ಅಣಿಮ ಮತ್ತು ಅನಿತಾ ಎಂಬ ಇಬ್ಬರು ಬಾಲ್ಯದ ಗೆಳತಿಯರಲ್ಲಿ ಮೂಡಿದ್ದ ಸಲಿಂಗ ಆಕರ್ಷಣೆಯು ಅವರ ಮದುವೆಯ ಬಳಿಕವೂ ಮರೆಯಾಗದೆ ದಾಂಪತ್ಯದಲ್ಲಿ ಕೊರತೆಯ ಭಾವವನ್ನು ಗಾಢವಾಗಿಸಿದ್ದನ್ನು ಚಿತ್ರಿಸಿದ್ದಾರೆ. ನಲ್ವತ್ತೊಂದು ವರ್ಷಗಳ ಬಳಿಕದ ಭೇಟಿ ಪರಸ್ಪರರಲ್ಲಿ ಮತ್ತೆ ಹಳೆಯ ಅನುರಾಗವನ್ನು ನೆನಪಿಸುತ್ತದೆ. ಕಾಲೇಜು ಓದುತ್ತಿದ್ದಾಗ ಅನಿರೀಕ್ಷಿತವಾಗಿ ನಡೆದ ಅಣಿಮಳ ಮದುವೆಗೆ ಹೋಗದೆ ಇಡೀ ದಿನ ಕೋಣೆಯಲ್ಲಿ ಕುಳಿತು ಅತ್ತಿದ್ದ ಅನಿತಾ ಅನಂತರವೂ ಗೆಳತಿಯ ಭೇಟಿಯನ್ನು ತಪ್ಪಿಸಿಕೊಂಡಿದ್ದಳು. ಗೆಳತಿಯನ್ನು ಅತಿಯಾಗಿ ಪ್ರೇಮಿಸುತ್ತಿದ್ದುದೆ ತನ್ನ ಅಂದಿನ ವರ್ತನೆಗೆ ಕಾರಣವಾಗಿತ್ತು ಎಂಬ ವಿಷಯ ಅನಿತಾಳಿಗೆ ದಶಕಗಳ ನಂತರ ಗೆಳತಿಯನ್ನು ಕಂಡಾಗ ಹೊಳೆಯುತ್ತದೆ. ಅಪಾರ ಜೀವನೋತ್ಸಾಹದ, ಚುರುಕು ಮಾತಿನ ತುಂಟ ಹುಡುಗಿಯಾಗಿದ್ದ ಅಣಿಮ ಈಗ ಸಾವಿನ ಅಂಚಿನಲ್ಲಿದ್ದಾಳೆ. ಪತಿ, ಮಕ್ಕಳನ್ನು ಅಪಘಾತದಲ್ಲಿ ಕಳೆದುಕೊಂಡು ಒಂಟಿಯಾಗಿದ್ದಾಳೆ. ಆದರೆ ಬದುಕನ್ನು ಪೂರ್ಣವಾಗಿ ಅನುಭವಿಸಬೇಕು ಎಂಬ ತನ್ನ ಧೋರಣೆಯನ್ನು ಕಳೆದುಕೊಂಡಿಲ್ಲ. ಗೆಳತಿಯೊಂದಿಗೆ ಮುಕ್ತವಾಗಿ ಸುತ್ತಾಡುವ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಹರೆಯದಲ್ಲಿ ಅಪಾರವಾಗಿ ಪ್ರೇಮಿಸುತ್ತಿದ್ದ ಇಬ್ಬರು ಗೆಳತಿಯರು ಬದುಕನ್ನು ಬೀಳ್ಕೊಡುವ ಇಳಿವಯಸ್ಸಿನಲ್ಲಿ ಮತ್ತೊಮ್ಮೆ ಪರಸ್ಪರರ ಸಾಂಗತ್ಯದ ಅವಕಾಶದಲ್ಲಿ ತಮ್ಮ ಪ್ರೇಮವನ್ನು ಗಟ್ಟಿಗೊಳಿಸಲು ಪ್ರಯತ್ನಿಸುತ್ತಾರೆ.

ನಿಜವಾದ ಪ್ರೀತಿಯ ಹುಡುಕಾಟದಲ್ಲಿರುವ ಸ್ತ್ರೀಯರು ಪುರುಷರೊಂದಿಗಿನ ಲೈಂಗಿಕ ಸಂಬಂಧಗಳನ್ನು ನಿರಾಕರಿಸಿ, ತನಗೆ ಒಪ್ಪಿಗೆಯಾಗುವ ಸ್ತ್ರೀಯರ ಸಾಂಗತ್ಯದಲ್ಲಿ ನೆಮ್ಮದಿಯನ್ನು ಕಂಡುಕೊಳ್ಳಲು ಯತ್ನಿಸುತ್ತಾರೆ. ಹೆಣ್ಣು-ಹೆಣ್ಣುಗಳ ನಡುವಿನ ಈ ಸಂಬಂಧ ಕೆಲವೊಮ್ಮೆ ಪರಸ್ಪರ ಕಾಮತೃಪ್ತಿಯನ್ನು ಹೊಂದುವ ಲೈಂಗಿಕ ಆಯಾಮವನ್ನೂ ಹೊಂದಿರುತ್ತದೆ. ಅದಿಲ್ಲದೆ ಕೇವಲ ಮಾನಸಿಕ ಮತ್ತು ಬೌದ್ಧಿಕ ಅಭಿರುಚಿಗಳಿಂದಾಗಿ ಗಾಢ ಸ್ನೇಹವನ್ನು ಹೊಂದಿರಲೂಬಹುದು. ಹೆಣ್ಣೊಬ್ಬಳು ಇನ್ನೊಂದು ಹೆಣ್ಣಿನಲ್ಲಿ ಆತ್ಮಸಂಗಾತಿಯನ್ನು ಕಂಡುಕೊಳ್ಳುವ, ಆ ಮೂಲಕ ಪುರುಷನ ಅಗತ್ಯವನ್ನು, ಪರೋಕ್ಷವಾಗಿ ತನ್ನ ಮನಸ್ಸು-ದೇಹಗಳ ಮೇಲೆ ಪುರುಷನ ಅಧಿಕಾರವನ್ನು ನಿರಾಕರಿಸುವ ಆಶಯ ಈ ಕತೆಗಳಲ್ಲಿ ವ್ಯಕ್ತವಾಗಿದೆ. ಇಬ್ಬರು ಸ್ತ್ರೀಯರ ನಡುವಿನ ಆಪ್ತ ಸಂಬಂಧದಲ್ಲಿ ಪತಿಯ ಅಂಕೆಯಾಗಲೀ ಶಂಕೆಯಾಗಲೀ ಇರುವುದಿಲ್ಲ. ದಾಂಪತ್ಯ ನಿಷ್ಠೆಯನ್ನು ಪದೇಪದೇ ಸಾಬೀತುಪಡಿಸಬೇಕಾದ ಅಗತ್ಯವಿಲ್ಲ.

ಕುಟುಂಬ ನಿರ್ವಹಣೆ, ತಾಯ್ತನ... ಮುಂತಾಗಿ ಕಟ್ಟಿಹಾಕುವ ಕರ್ತವ್ಯಗಳಿಲ್ಲ. ಹಾಗಾಗಿ ಸ್ತ್ರೀಯರು ಸಲಿಂಗ ಸಂಬಂಧಗಳೆಡೆಗೆ ಆಕರ್ಷಿತರಾಗುವುದನ್ನು ಕತೆಗಳು ಗುರುತಿಸಿವೆ.

೩.೨.೬. ಪ್ರತಿರೋಧ ಮತ್ತು ಪ್ರತೀಕಾರ: ಸ್ತ್ರೀ ದೃಷ್ಟಿಕೋನ

ಸಮಾಜವು ಹೆಣ್ಣಿನ ಸ್ವಭಾವ, ವರ್ತನೆಗಳನ್ನು ನಿರ್ದಿಷ್ಟ ವ್ಯಾಖ್ಯಾನಗಳಲ್ಲಿ ಸ್ಥಾಪಿಸಿದೆ. ಅದಕ್ಕಿಂತ ಬೇರೆಯಾಗಿ ಹೆಣ್ಣು ವರ್ತಿಸಿದಾಗ ಸಮಾಜ ಬೆಚ್ಚಿಬೀಳುತ್ತದೆ. ಪುರುಷಪರ ವ್ಯವಸ್ಥೆಯು ಬರೆದಿಟ್ಟ ಗೆರೆಗಳ ಒಳಗೆ ತಮ್ಮ ಸೃಜನತೆ ಮತ್ತು ಅಸ್ಮಿತೆಗಳು ನಾಶವಾಗುವುದು ಅರಿವಾದಾಗ ಸ್ತ್ರೀಯರು ಅಳು, ಜಗಳಗಳಂಥಾ ಸಾಮಾನ್ಯ ರೀತಿಗಿಂತ ಭಿನ್ನವಾದ ರೀತಿಯಲ್ಲಿ ತಿರುಗಿ ಬೀಳುತ್ತಾರೆ. ತನ್ಮೂಲಕ ಸ್ತ್ರೀಯರಿಂದ ಇಂಥ ವರ್ತನೆಯನ್ನು ನಿರೀಕ್ಷಿಸದ ಪುರುಷರನ್ನು ಅಸಹಾಯಕರನ್ನಾಗಿಸುತ್ತಾರೆ. ತಮ್ಮನ್ನು ಕೇವಲ ಸೊತ್ತಾಗಿ ನಡೆಸಿಕೊಳ್ಳುವ ವ್ಯವಸ್ಥೆಯೆಡೆಗಿನ ಸ್ತ್ರೀಪ್ರತಿರೋಧವು ನಿರ್ದಿಷ್ಟ ವ್ಯಕ್ತಿಗಳ ವಿರುದ್ಧವಾಗಿ ಯೋಜಿತ ಪ್ರತಿಕ್ರಿಯೆಯನ್ನು ತೋರುವ ಪ್ರತೀಕಾರದ ರೂಪವನ್ನು ತಾಳಬಹುದು. ಪುರುಷರ ದಬ್ಬಾಳಿಕೆ, ಹಿಂಸೆಗಳಿಂದ ರೋಸಿಹೋದ ಸರಿಯಾದ ರೀತಿಯಲ್ಲಿ ಪ್ರತ್ಯುತ್ತರವನ್ನು ನೀಡಿ ತನ್ನ ಮೇಲಾದ ಅನ್ಯಾಯಕ್ಕೆ ಸೇಡು ತೀರಿಸಿಕೊಳ್ಳಬಹುದು. ಕೆಲವೊಮ್ಮೆ ಅದು ಯಶಸ್ವಿಯಾಗಬಹುದು. ಅಥವಾ ಹೆಣ್ಣಿಗೆ ಅದರಿಂದ ತೊಂದರೆಯೂ ಉಂಟಾಗಬಹುದು. ಪುರುಷರ ದ್ವೇಷದ ಹಾದಿಗಿಂತ ಭಿನ್ನವಾದ, ಸ್ತ್ರೀಯರು ಮಾತ್ರ ಅನುಸರಿಸಬಹುದಾದ ಈ ವಿಶಿಷ್ಟವಾದ ಪ್ರತಿರೋಧದ ಕ್ರಮವು ಮಲಯಾಳಂ ಕಥನಸಾಹಿತ್ಯದ ಒಂದು ಅನನ್ಯ ಸ್ತ್ರೀ ನಿರ್ವಚನವಾಗಿದೆ. ಮಹಿಳಾ ಕತೆಗಾರ್ತಿಯರು ಪ್ರತಿಪಾದಿಸುವ ಸ್ತ್ರೀ ಸಬಲೀಕರಣದ ಒಂದು ವಿನೂತನ ಮಾದರಿಯಾಗಿದೆ.

ಮನೆಯಲ್ಲಿ ದಾಸಿಯಂತೆ ದುಡಿಯುವ ಹೆಣ್ಣು ಕೇವಲ ಒಂದು ದಿನದ ಮಟ್ಟಿಗೆ ಮನೆಯ ಕೆಲಸ ಮಾಡಲು ನಿರಾಕರಿಸಿ ಗಂಡಿನಂತೆ ಬದುಕಲು ಬಯಸಿದಾಗ ಸಮಾಜ ದಿಗ್ಭ್ರಮೆಯಾಗುವ ಪರಿಯನ್ನು ವಿಶ್ಲೇಷಿಸುವ ವಿಶಿಷ್ಟ ಕತೆ 'ಹುಚ್ಚು'. ಬಿ.ಎಂ. ಸುಹರಾ ಅವರು ಬರೆದ ಈ ಕತೆಯನ್ನು ಓದುವಾಗ ತಮ್ಮ ನೋವು, ದುಃಖಗಳನ್ನು ಪ್ರಕಟಿಸಲಾಗದೆ ನಮ್ಮ ನಡುವೆ ಬದುಕುತ್ತಿರುವ ಅಸಂಖ್ಯ ಸ್ತ್ರೀಯರು ನೆನಪಾಗುತ್ತಾರೆ. ಸ್ತ್ರೀಗೆ ಅವಳಿಚ್ಛೆಯಂತೆ ಬದುಕುವ ಸ್ವಾತಂತ್ರ್ಯವನ್ನು ಸಮಾಜ ಕೊಟ್ಟಿಲ್ಲ. ಹಾಗೇನಾದರೂ ಅವಳು ಸ್ವಾತಂತ್ರ್ಯ ಬಯಸಿದರೆ ಆಗುವ ವ್ಯತಿರಿಕ್ತ ಪರಿಣಾಮವನ್ನು ಕತೆ ನಿರೂಪಿಸುತ್ತದೆ.

'ಹುಚ್ಚು' ಕತೆಯಲ್ಲಿ ಬರುವ ಸಾಮಾನ್ಯ ಗೃಹಿಣಿ ಒಂದು ಬೆಳಗ್ಗೆ ಯಾವುದೊ ಲಹರಿಯಲ್ಲಿ ಇಂದು ತಾನು ಎಂದಿನಂತಲ್ಲದೆ ಭಿನ್ನವಾಗಿ ಇರಬೇಕೆಂದು ಆಸೆಪಡುತ್ತಾಳೆ. ಹಾಗಿರುವುದೆಂದು ಏಕಮುಖವಾಗಿ ನಿರ್ಧರಿಸುತ್ತಾಳೆ. ಯಾವಾಗಲೂ ಮಾಡುವ ಕೆಲಸಗಳನ್ನು ಮಾಡದೆ ಬೆಳಗ್ಗಿನ ಚಳಿಗೆ ಹಿತವಾಗಿ ಹೊದ್ದು

ಮಲಗಿ, ಚಹಾ ಮಾಡಿ ತರುವಂತೆ ಗಂಡನಿಗೆ ಆಜ್ಞಾಪಿಸುತ್ತಾಳೆ. ತವರುಮನೆಯಲ್ಲಿ ಕಾಲೇಜು ಓದುತ್ತಿದ್ದಾಗ ಅಮ್ಮ 'ಮುಂಜಾನೆ ಹಬೆಯಾಡುವ ಚಹ ಕಪ್ಪಿನೊಂದಿಗೆ ಕರೆದು ಎಬ್ಬಿಸುತ್ತಿದ್ದ' ದಿನಗಳನ್ನು ನೆನಪಿಸಿಕೊಳ್ಳುತ್ತ, ಇಂದು ಬಹುಕಾಲದ ಬಳಿಕ ಗಂಡ ಮಾಡಿಕೊಟ್ಟ ಚಹಾವನ್ನು ಹಾಸಿಗೆಯಲ್ಲಿ ಕುಳಿತು ಕುಡಿದು ಬೆತ್ತದ ಕುರ್ಚಿಯಲ್ಲಿ ಕುಳಿತು ಪೇಪರ್ ಓದುತ್ತಾಳೆ, ಥೇಟ್ ಅವನಂತೆ. ಮದುವೆಯಾದಾಗಿನಿಂದ ಅವಳು ಮನೆಯ ಕೆಲಸವನ್ನೆಲ್ಲ ಮುಗಿಸಿ ಸ್ನಾನಕ್ಕೆ ಹೋಗುವಾಗ ಮಧ್ಯಾಹ್ನವಾಗುತ್ತಿದೆ. ಇಂದು 'ಬೆಳಿಗ್ಗೆ ಒಂದು ಸ್ನಾನವಾಗಬೇಕಿತ್ತು' ಎಂದಾಕೆ ಬಯಸುತ್ತಾಳೆ. ಉಲ್ಲಾಸದಿಂದ ಮೈಕೈಗಳಿಗೂ ತಲೆಗೂ ಧಾರಾಳವಾಗಿ ಎಣ್ಣೆ ಹಚ್ಚಿ ಬಿಸಿನೀರು ಕಾಯಿಸಿ ನೀರು ಕಾಯುವವರೆಗೂ ವ್ಯಾಯಾಮ ಮಾಡಿ ಬೆಳಗ್ಗಿನ ಸ್ನಾನವನ್ನು ಮುಗಿಸಿ ಮೈಕೈಗೆಲ್ಲ ಪೌಡರ್ ಹಚ್ಚಿಕೊಂಡು ಕಣ್ಣಿಗೆ ಕಾಡಿಗೆ, ಹಣೆಗೆ ತಿಲಕವಿಟ್ಟು, ಒಗೆದು ಮಡಚಿಟ್ಟ ಸೀರೆಯುಟ್ಟು ಕನ್ನಡಿ ನೋಡಿಕೊಳ್ಳುತ್ತ ಹೊಸ ಮನುಷ್ಯಳಾದ ತನ್ನ ಚೆಲುವನ್ನು ತಾನೆ ಮೆಚ್ಚಿಕೊಳ್ಳುತ್ತ ಪ್ರೇಮಗೀತೆಯೊಂದನ್ನು ಗುನುಗುತ್ತ ಸಂತೋಷಪಡುತ್ತಾಳೆ.

ಆದರೆ ಹೀಗೆ ಕೇವಲ ಒಂದು ದಿನದ ಮಟ್ಟಿಗೆ ತನ್ನ ಗಂಡ ಯಾವತ್ತೂ ಇರುವಂತೆ ಆರಾಮವಾಗಿ, ಸ್ವತಂತ್ರವಾಗಿ ಇರಬಯಸಿದ ತಪ್ಪಿಗೆ ಅವಳು ದೊಡ್ಡ ಶಿಕ್ಷೆಯನ್ನೇ ಅನುಭವಿಸಬೇಕಾಗುತ್ತದೆ. ಇದುವರೆಗೆ ತನಗೆ ಎದುರಾಗಿ ತುಟಿಪಿಟಕ್ಕೆನ್ನದ ತನ್ನ ಹೆಂಡತಿ ಬೆಳಗಿನಿಂದ ಒಂದು ಥರ ವಿಚಿತ್ರವಾಗಿ ವರ್ತಿಸುತ್ತಿರುವುದನ್ನು ಕಂಡು 'ಅವಳಿಗೆ ಹುಚ್ಚು' ಎಂದೇ ಅವಳ ಗಂಡ ನಿರ್ಧರಿಸಿಬಿಡುತ್ತಾನೆ. ಹಿಂದೆಮುಂದೆ ನೋಡದೆ ಹೆಂಡತಿಯನ್ನು ಹುಚ್ಚಾಸ್ಪತ್ರೆಗೆ ಸೇರಿಸುವ ನಿರ್ಧಾರ ಮಾಡುತ್ತಾನೆ. ಅವಳ ಕೋಣೆಯ ಚಿಲಕವನ್ನು ಹೊರಗಿನಿಂದ ಹಾಕಿ ಒಳಗೇ ಬಂಧಿಸಿದ ಗಂಡ ಗೆಳೆಯನಿಗೆ ಫೋನಿಸಿ "ಇವತ್ತು ಬೆಳಗಾಗುವದೇ ತಡ, ಪೂರ್ತಿ ಬದಲಾಗಿದ್ದಾಳೆ. ಸ್ವಲ್ಪ ವಯಲೆಂಟ್ ಕೂಡಾ ಆಗಿದ್ದಳು. ನನಗೆ ಭಯವಾಗುತ್ತಿದೆ. ಬಲಪ್ರಯೋಗಿಸಬೇಕಾಗಬಹುದೇನೋ. ಆಂಬುಲೆನ್ಸ್ ಕಳುಹಿಸು. ಸಹಾಯಕ್ಕೆ ಯಾರಾದರೂ ಇರಲಿ" (ಪು. ೧೯೨, ಅದೇ) ಎನ್ನುವಲ್ಲಿ ಒಟ್ಟು ಪುರುಷ ವ್ಯವಸ್ಥೆಯ ದಿಗಿಲು ವ್ಯಕ್ತವಾಗಿದೆ. ಸ್ತ್ರೀಯರು ಸಮಾಜದ ಕಟ್ಟುಪಾಡುಗಳನ್ನು ಎದುರಾಡದೆ ಅನುಸರಿಸುವವರೆಗೂ ಪುರುಷರು ಬಲಿಷ್ಠರು. ಆದರೆ ವಿಧೇಯಳಾಗಲು ನಿರಾಕರಿಸುವ ಸ್ತ್ರೀಯನ್ನು ಎದುರಿಸುವ ನೈತಿಕ ಸ್ಥೈರ್ಯ ಪುರುಷನಿಗಿಲ್ಲ. ಅದಕ್ಕೆ ಬಾಹ್ಯಬಲದ ಸಹಾಯ ಬೇಕಾಗುತ್ತದೆ. ಮತ್ತು ಅದಂತೂ ಸದಾ ಸಿದ್ಧವಾಗಿದೆ. ಪುರುಷರು ಮೃಗೀಯ ಬಲ ಮತ್ತು ಸಾಂಘಿಕ ಪ್ರಯತ್ನಗಳಿಂದ ಸ್ತ್ರೀಯರನ್ನು ಮಣಿಸುತ್ತಾರೆ.

ಶೀಬಾ ಇ.ಕೆ. ಅವರು ಬರೆದ 'ಪ್ಲೇ ಸ್ಟೇಶನ್' ಎಂಬ ಕತೆಯು ಕೇವಲ ಆಟಿಕೆಯೊಂದರಿಂದ ತಣಿಯಬಹುದಾದ ಕಾಮಕ್ಕಾಗಿ ಒಬ್ಬಾಕೆ ಸ್ತ್ರೀಯ ಬದುಕನ್ನೇ ಬಲಿ ತೆಗೆದುಕೊಳ್ಳುವ ಪುರುಷಪ್ರಜ್ಞೆಯ

ಹೀನಕ್ರೌರ್ಯವನ್ನು ಬಯಲಿಗೆಳೆಯುತ್ತದೆ. ವಿಕೃತ ಮನಸ್ಸಿನ ಪುರುಷರ ಮುಗಿಯದ ಕಾಮದಾಹವನ್ನು ಪರಿಹರಿಸುವುದಕ್ಕಾಗಿ ಒಂದು ವಿಶಿಷ್ಟ ದಾರಿಯನ್ನು ಹುಡುಕಿದ ಒಬ್ಬ ತಂದೆಯ ಕತೆ. ರೈಲ್ವೇ ಟ್ರ್ಯಾಕ್‌ನಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿ ಸತ್ತುಹೋದ ಮಗಳ ತಂದೆಯೋರ್ವ ಗಂಡಸರು 'ಎಷ್ಟು ಒರಟಾಗಿ ಬೇಕಾದರೂ ಉಪಯೋಗಿಸುವಂತೆ' ತಯಾರಿಸಲಾಗಿರುವ ದುಬಾರಿಯಾದ 'ಇಂಪೋರ್ಟೆಡ್' ಲೈಂಗಿಕ ಉಪಕರಣಗಳನ್ನು ಕಚೇರಿಗಳಲ್ಲಿ ಕೆಲಸ ಮಾಡುವ 'ಸಭ್ಯರಿಗೆ' ಕಡಿಮೆ ಬೆಲೆಗೆ ಮಾರುವುದರಲ್ಲಿ ತೊಡಗಿಸಿಕೊಂಡಿದ್ದಾನೆ... ಮನುಷ್ಯರಿಗಿಂತ ಹೆಚ್ಚು ಸುಖ ನೀಡುವ ಶಕ್ತಿಯುಳ್ಳ ಈ ಲೈಂಗಿಕ ಆಟಿಕೆಗಳನ್ನು ಪುರುಷರು ಕೊಂಡು ಬಳಸುವಂತೆ ಮಾಡುವ ಮೂಲಕ, ನೂರಾರು ಹೆಣ್ಣುಮಕ್ಕಳ ಮೇಲೆ ನಡೆಯಬಹುದಾದ ಆಕ್ರಮಣಗಳನ್ನು ತಡೆಯುವ, 'ಮತ್ತೆ ಮತ್ತೆ ಸಾಯುತ್ತಲೇ ಇರುವ ಹೆಣ್ಣುಮಕ್ಕಳನ್ನು ರಕ್ಷಿಸುವ' ಹಂಬಲ ಆ ತಂದೆಯದು. ಅದಕ್ಕಾಗಿ 'ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಎಲ್ಲಾ ಸ್ಥಳಗಳಿಗೆ ಹೋಗಿ' ತನ್ನ ಈ ವಿನೂತನ ಆಟಿಕೆಗಳ ಬಗ್ಗೆ ಪ್ರಚಾರ ಮಾಡುತ್ತಾನೆ. ಲೈಂಗಿಕ ಆಟಿಕೆಯಂಥಾ ಒಂದು ಜೀವವಿಲ್ಲದ ವಸ್ತು ಹೆಣ್ಣಿನ ದೇಹಕ್ಕೆ ಪರ್ಯಾಯವಾಗಿ ಪುರುಷನಿಂದ ಬಳಕೆಯಾಗುವ ವಾಸ್ತವದ ಸಾಧ್ಯತೆ ಹೆಣ್ಣನ್ನು ಕೇವಲ ದೇಹ ಮಾತ್ರವಾಗಿ ಗ್ರಹಿಸುವ ಸಮಾಜದ ದೃಷ್ಟಿಕೋನವನ್ನು ಬಯಲು ಮಾಡುತ್ತದೆ. ಪುರುಷನ ಪಾಶವೀ ಶಕ್ತಿ ಮತ್ತು ಮೃಗೀಯ ವರ್ತನೆಗೆ ಪ್ರತಿರೋಧವನ್ನು ತೋರುವ ಒಂದು ಸಂಕೇತವಾಗಿಯೂ ಈ ಕತೆಯನ್ನು ಗ್ರಹಿಸಬಹುದು. ಸಂತ್ರಸ್ತೆಯ ತಂದೆಯ ಮೂಲಕ ಪುರುಷನ ಮೃಗೀಯ ಕಾಮವಾಂಛೆಗೆ ಒಂದು ವಿಶಿಷ್ಟವಾದ ಪ್ರತಿರೋಧವನ್ನು ಲೇಖಕಿ ವ್ಯಕ್ತಪಡಿಸಿದ್ದಾರೆ.

ಕಮಲಾದಾಸ್ ಅವರು ಬರೆದಿರುವ 'ಕಲ್ಯಾಣಿ' ಎಂಬ ಸಣ್ಣಕತೆಯಲ್ಲಿ ಪತಿ ತನ್ನನ್ನು ತುಂಬ ಪ್ರೀತಿಸುತ್ತಾನೆಂಬ ವಿಶ್ವಾಸ ಹೊಂದಿ ಸುಖವಾಗಿದ್ದ ಕಲ್ಯಾಣಿ ಎಂಬ ಗೃಹಿಣಿಯನ್ನು ಯಾರೊ ಮೋಸದಿಂದ ಹೊತ್ತೊಯ್ದು ಲಾಡ್ಜ್‌ನ ಕೊಠಡಿಯೊಂದರಲ್ಲಿ ಬಂಧಿಸಿಡುತ್ತಾರೆ. ಅಪಹರಣಕಾರ ಯುವಕನು ಆಕೆಯನ್ನು 'ತನ್ನ ಪ್ರೀತಿಯ ಅಮ್ಮಿಣಿ' ಎಂದೇ ಭಾವಿಸಿದ್ದಾನೆ ಮತ್ತು ಅದನ್ನೊಪ್ಪಿ ತನ್ನ ಬದುಕಿಗೆ ಮರಳುವಂತೆ ಒತ್ತಾಯಿಸುತ್ತಾನೆ. ಅನೈತಿಕ ವ್ಯವಹಾರದ ಶಂಕೆಯಲ್ಲಿ ಪೋಲೀಸರು ನಡೆಸಿದ ಅನಿರೀಕ್ಷಿತ ರೈಡ್‌ನಲ್ಲಿ ಆಕೆ ಸಿಕ್ಕಿಬಿದ್ದು 'ಕಲಂಕಿನಿ' ಎಂದು ಬಿಂಬಿತವಾಗಿ ಲಾಕಪ್ ಸೇರುವಂತಾಗುತ್ತದೆ. ಇಷ್ಟಾದರೂ ಆಕೆ ಗಾಭರಿಯಾಗದೆ ನಿರಪರಾಧಿಯಾದ ತನ್ನನ್ನು ತನ್ನ ಪ್ರೀತಿಯ ಪತಿ ಬಂದು ಬಿಡಿಸಿಕೊಳ್ಳುತ್ತಾನೆ ಎಂಬ ನಿಶ್ಚಿಂತೆಯಿಂದ ನಿರಾಳವಾಗಿರುತ್ತಾಳೆ. ಆದರೆ ಲಾಕಪ್ಪಿಗೆ ಬಂದ ಪತಿಯು ಅವಳ ಪರಿಶುದ್ಧತೆಯನ್ನು ಸಂಶಯಿಸುತ್ತಾನೆ. ಇದರಿಂದ ಕಲ್ಯಾಣಿಯ ಭ್ರಮೆ ಕಳಚುತ್ತದೆ. ತನ್ನನ್ನು ಅಪಹರಿಸಿದರೂ ಸ್ನೇಹದಿಂದ ನಡೆಸಿಕೊಂಡ ಅಪರಿಚಿತನ ಹಳೆಯ ನೆನಪಿನೊಳಗೆ ಅವನ 'ಅಮ್ಮಿಣಿ'ಯಾಗಿಯೆ ಬದುಕಲು ನಿರ್ಧರಿಸುತ್ತಾಳೆ. ಹೀಗೆ ಕಲ್ಯಾಣಿ ಎಂಬ 'ವಿಧೇಯ ಪತ್ನಿಯ' ಅಸ್ತಿತ್ವವನ್ನೆ ನಿರಾಕರಿಸಿ, ತನಗೆ ಪರಿಚಯವೆ ಇಲ್ಲದವನ 'ಅಮ್ಮಿಣಿ' ಎಂಬ ಪ್ರೇಯಸಿಯಾಗಿ

ಮಾರ್ಪಡುವ ಮೂಲಕ ಪತಿಯ ಅವಿಶ್ವಾಸಕ್ಕೆ ವಿಶಿಷ್ಟ ರೀತಿಯಲ್ಲಿ ಪ್ರತಿರೋಧವನ್ನು ಒಡ್ಡುತ್ತಾಳೆ. ಸಮಾಜ ಮತ್ತು ಕುಟುಂಬದ ವ್ಯವಸ್ಥೆಗಳು ಅವಳಿಗೆ ಬೇರೆ ಆಯ್ಕೆಗಳನ್ನು ಉಳಿಸಿಲ್ಲ ಎಂಬುದು ಕೂಡ ಇಲ್ಲಿ ಗಮನಾರ್ಹ.

'ಲೇಡಿ ಡಾಕ್ಟರ್' ಎಂಬ ಕತೆಯಲ್ಲಿ ಕಮಲಾದಾಸ್ ಅವರು ಪತಿಯ ದಾಂಪತ್ಯವಂಚನೆಯನ್ನು ಕಣ್ಣಾರೆ ಕಂಡ ಸಂದರ್ಭದಲ್ಲಿ ಪತ್ನಿಯೊಬ್ಬಳು ನಿರುಮ್ಮಳವಾಗಿ ಪ್ರತಿಕ್ರಿಯಿಸುವ ಬಗೆಯನ್ನು ನಿರೂಪಿಸಿದ್ದಾರೆ. ಐವತ್ತರ ವಯಸ್ಸಿನಲ್ಲೂ ಮೊದಲಿನಂತೆಯೆ ಪ್ರೀತಿಸುವ, ಮಕ್ಕಳಿಲ್ಲವೆಂದು ಒಮ್ಮೆಯೂ ಹಂಗಿಸದ ಪತಿಯ ಪ್ರೇಮದ ಬಗ್ಗೆ ಸಂತುಷ್ಟೆಯಾಗಿರುವ ವೈದ್ಯೆಯ ನಂಬಿಕೆ ಸುಳ್ಳಾದ ಕ್ಷಣದಲ್ಲಿ ಆಕೆ ಗಾಬರಿಯಾಗದೆ ಸುಖೀದಾಂಪತ್ಯದ ಕನಸಿನಿಂದ ಎಚ್ಚೆತ್ತು ಸುಮ್ಮನೆ ನಡೆದುಬಿಡುವ ವಿಶಿಷ್ಟ ವಿದ್ಯಮಾನವನ್ನು ಕಾಣಿಸಿದ್ದಾರೆ. 'ಜೀವನವೇ ಒಂದು ಮಧುಚಂದ್ರ... ಕೊನೆಯಾಗದ ಮಧುಚಂದ್ರ' ಎಂಬ ಭ್ರಮೆಯಲ್ಲಿ ತಾನು ಬಲು ಅದೃಷ್ಟವಂತೆ ಎಂದು ನಂಬಿದವಳು ಈ ವೈದ್ಯೆ. ಒಂದು ತಡರಾತ್ರಿಯಲ್ಲಿ ಶಸ್ತ್ರಚಿಕಿತ್ಸೆಯೊಂದನ್ನು ಪೂರೈಸಿ, 'ಕೋಗಿಲೆಯಂತೆ ಹಾಡುವ ಹೃದಯದಿಂದ' ತನ್ನ ಮನೆಯ ಮಲಗುವ ಕೋಣೆಯನ್ನು ಪ್ರವೇಶಿಸಿದಾಗ ಪತಿಯ ಮಂಚದಲ್ಲಿ ಬೇರೆ ಯುವತಿ ಮಲಗಿರುವುದನ್ನು ಕಣ್ಣಾರೆ ಕಂಡು ಒಂದು ಕ್ಷಣ ಚಡಪಡಿಸುತ್ತಾಳೆ. ಮರುಕ್ಷಣ ತನ್ನ ಪತಿ ಇಷ್ಟುಕಾಲ ತನ್ನನ್ನು ವಂಚಿಸಿರುವ ವಾಸ್ತವವನ್ನು ಅರಿತು ನಿರ್ಲಿಪ್ತೆಯಾಗುತ್ತಾಳೆ. ಕಿರುಚಾಡಿ ರಂಪ ಮಾಡುವ ಬದಲಿಗೆ ಸದ್ದಾಗದಂತೆ ಬಹಳ ಮೆದುವಾಗಿ ಕೋಣೆಯ ಬಾಗಿಲನ್ನು ಮುಚ್ಚಿ 'ಬಡಪಾಯಿ ತಾಳಿ, ನನ್ನ ಬಡಪಾಯಿ ತಾಳಿ' ಎಂದು ತನ್ನ ತಾಳಿಯನ್ನು ಮುಟ್ಟಿಕೊಳ್ಳುತ್ತ ಸದ್ದಿಲ್ಲದೆ ಅಲ್ಲಿಂದ ಹೊರನಡೆಯುತ್ತಾಳೆ.

ವೈದ್ಯೆಯ ಪ್ರಕಾರ ಪತಿ ಮೋಸ ಮಾಡಿರುವುದು ಆಕೆಯ ಪ್ರೇಮ, ನಂಬಿಕೆಗಳಿಗಲ್ಲ. ಇಷ್ಟವಿಲ್ಲದಿದ್ದರೂ ಪತಿ–ಪತ್ನಿಯರು ಪರಸ್ಪರ ಪ್ರಾಮಾಣಿಕವಾಗಿರಬೇಕಾದ ಅಥವಾ ಕನಿಷ್ಠಪಕ್ಷ ಹಾಗೆ ನಟಿಸಬೇಕಾದ ಮದುವೆ ಎಂಬ ಅರ್ಥಹೀನ ವ್ಯವಸ್ಥೆಗೆ. ಗಂಡು ಹೆಣ್ಣಿನ ನಡುವೆ ನಿಷ್ಠೆ ಸದಾಚಾರಗಳನ್ನು ವಿಧಿಸುವ ಮದುವೆಯೆಂಬ ವ್ಯವಸ್ಥೆಯ ಪಾವಿತ್ರ್ಯದ ಬಗೆಗಿನ ಅವಳ ಭ್ರಮೆ ಹರಿದು ಆಕೆಯೀಗ ಸ್ವತಂತ್ರಳಾಗಿದ್ದಾಳೆ. ಸುಶಿಕ್ಷಿತೆಯೂ ಸ್ವಾವಲಂಬಿಯೂ ಆದ ಮಹಿಳೆ ದಾಂಪತ್ಯವಂಚನೆಗೆ ಹೀಗೆ ನಿರುಮ್ಮಳವಾಗಿ ಪ್ರತಿಕ್ರಿಯಿಸುವುದು ಒಂದು ಭಿನ್ನವಾದ ಸ್ತ್ರೀಪ್ರತಿರೋಧದ ವಿನ್ಯಾಸವಾಗಿದೆ.

ಕಮಲಾದಾಸ್ ಅವರು ಬರೆದ 'ವಜ್ರದ ಓಲೆ' ಎಂಬ ಕತೆಯಲ್ಲಿ ಸಮಾಜದ ಪೂರ್ವಾಗ್ರಹದಂತೆ ಒಬ್ಬ ಗಂಡಸಿನ ಮೇಲೆ ಅಧಿಕಾರ ಸ್ಥಾಪಿಸುವುದಕ್ಕಾಗಿ ನಿತ್ಯವೂ ತಮ್ಮೊಳಗೆ ಜಗಳಾಡುವ ಅತ್ತೆ ಸೊಸೆಯರ ಚಿತ್ರಣವಿದೆ. ಮಗನನ್ನೂ ಮೊಮ್ಮಗನನ್ನೂ ಪ್ರೀತಿಸುವ, ಆದರೆ 'ಬಿಳಿಚರ್ಮದ ಸೊಸೆಯನ್ನು' ದ್ವೇಷಿಸುವ ಅತ್ತೆ ಹಾಗೂ ಬೆಳ್ಳಗಿನ ಬೊಂಬೆಯಂಥ ಮುದ್ದಾದ ಹೆಣ್ಣುಮಗುವನ್ನು ಬಯಸಿ 'ಗಂಡನಂತಿರುವ' ಗಂಡುಮಗುವನ್ನು ಹಡೆದು ನಿರಾಶಳಾಗಿರುವ ಸೊಸೆ... ಇವರಿಬ್ಬರೂ ವ್ಯವಸ್ಥೆಯ ಬಲಿಪಶುಗಳು.

ಅವರವರ ನಿಲುವಿನಲ್ಲಿ ಇಬ್ಬರೂ ಸರಿಯಾಗಿಯೆ ಕಾಣುತ್ತಾರೆ. ಆಯ್ಕೆಯ ಸ್ವಾತಂತ್ರ್ಯವೆ ಇಲ್ಲದೆ ನೋಡಿದ ಮೊತ್ತಮೊದಲ ವರನನ್ನೇ ಮದುವೆಯಾಗಬೇಕಾಗಿ ಬಂದುದಕ್ಕೆ ಸದಾ ಕೊರಗುತ್ತ, 'ಮದುವೆಯಾಗದೆ ಇದ್ದರೆ ಅಂಗನವಾಡಿ ಮಕ್ಕಳಿಗೆ ಹಾಡು ಕಲಿಸುತ್ತ ಸುಖವಾಗಿರಬಹುದಾಗಿತ್ತು' ಎಂದು ಹಲುಬುತ್ತಲಿದ್ದ ಸೊಸೆ ಈ ಮದುವೆಯಲ್ಲಿ ಸುಖಿಯಾಗಿಲ್ಲ. ನೋಡಲು ಥೇಟ್ ತನ್ನ ಗಂಡನಂತೆ ಕಪ್ಪಗಿರುವ, ಬೋಳುತಲೆಯ ಗಂಡುಮಗುವನ್ನು ಪ್ರೀತಿಸಲಾರದೆ ಕೇವಲ 'ಸಹಿಸಿಕೊಂಡಿದ್ದಾಳೆ.'

ಒಂದು ದಿನ ಸೊಸೆಯ ಸಹನೆಯ ಕಟ್ಟೆ ಒಡೆದು ಸದಾ ಕಟಕಿಯಾಡುವ ಅತ್ತೆಯನ್ನು ತುರಿಮಣೆಯಿಂದ ಹೊಡೆದು ಕೊಂದೇಬಿಡುತ್ತಾಳೆ. ನಿರುದ್ದಿಶ್ಯವಾಗಿ ಕೊಲೆಮಾಡಿ ಲಾಕಪ್ ಸೇರಿದ ಈ ಸಾದಾ ಗೃಹಿಣಿ ಅಪರಾಧಿ ಹಿನ್ನೆಲೆಯೇನೂ ಇಲ್ಲದೆ ಸಂದರ್ಭದ ಒತ್ತಡಕ್ಕೆ ಸಿಲುಕಿ ಕೊಲೆಗಾತಿಯಾದವಳು. ಅತ್ತೆಯನ್ನು ಯಾವಾಗ, ಹೇಗೆ ಮತ್ತು ಯಾಕೆ ಕೊಂದೆ ಎಂಬುದು ಬಗೆಹರಿಯದೆ ಸ್ವತಃ ಗೊಂದಲಗೊಳ್ಳುತ್ತಾಳೆ. ತನ್ನನ್ನು ಬಿಡಿಸಿ ಕರೆದುಕೊಂಡು ಹೋಗಲು ಬರಬಹುದಾದ ಗಂಡ-ಮಗುವಿನ ಆಗಮನಕ್ಕಾಗಿ ಕಾಯುತ್ತಾಳೆ. ಸ್ತ್ರೀವಿರೋಧಿಯಾದ ವ್ಯವಸ್ಥೆಯ ಕ್ರೌರ್ಯವೆ ಅವಳನ್ನು ಅಪರಾಧಿಯಾಗಿಸಿವೆ. ಕನಸುಗಳು ನಿಜವಾಗದ ಅಸಹನೆ ಮತ್ತು ತನಗಿಷ್ಟವಿಲ್ಲದ ಬದುಕನ್ನು ಜೀವಿಸಲೇಬೇಕಾದ ಅನಿವಾರ್ಯತೆಗಳು ಅವಳ ನೆಮ್ಮದಿಗೆಡಿಸಿವೆ. ಒತ್ತಾಯದ ಮದುವೆ, ಮನಸ್ಸಿಗೆ ಹಿಡಿಸದ ಗಂಡ, ಕುರೂಪಿಯಾದ ಮಗು, ಸಿಡುಕುವ ಅತ್ತೆ... ಹೀಗೆ ಬದುಕು ನಿತ್ಯಹಿಂಸೆ ಎನಿಸಿದಾಗ ತಾನೇನು ಮಾಡುತ್ತಿದ್ದೇನೆ ಎಂಬ ಪ್ರಜ್ಞೆಯೆ ಇಲ್ಲದೆ ಯಾವುದೊ ವಿಸ್ಮೃತಿಯ ಕ್ಷಣದಲ್ಲಿ ತನ್ನ ಕನಸುಗಳನ್ನು ಕಸಿದುಕೊಂಡ ವ್ಯವಸ್ಥೆಯ ಮೇಲಿನ ಸಿಟ್ಟನ್ನು ತುರಿಮಣೆಯ ಮೂಲಕ ಹೊರಗೆಡಹಿದ್ದಾಳೆ.

ಸ್ತ್ರೀನಿರ್ವಚನದ ದೃಷ್ಟಿಯಿಂದ ಬಹಳ ವಿಶಿಷ್ಟವೆನಿಸುವ ಕತೆ ಸಿತಾರಾ ಎಸ್ ಅವರು ಬರೆದಿರುವ 'ಅಗ್ನಿ'. ಅತ್ಯಾಚಾರಕ್ಕೊಳಗಾದ ಹೆಣ್ಣು ಅತ್ತು ರಂಪಾಟ ಮಾಡದೆ ಸುಮ್ಮಗೆ ಎದುರಿಸಿದಾಗ ಅಂಥದೊಂದು ಪ್ರತಿಕ್ರಿಯೆಯನ್ನು ನಿರೀಕ್ಷಿಸಿರದ ಪುರುಷರು ಹತಾಶರಾಗುವುದನ್ನು ಕಾಣಿಸುವ ಪ್ರಯತ್ನ ಈ ಕತೆಯಲ್ಲಿದೆ. ಆಫೀಸಿನಲ್ಲಿ ಟೈಪಿಸ್ಟ್ ಆಗಿರುವ ಪ್ರಿಯಾ ಕಾಗದಪತ್ರಗಳನ್ನು ಟೈಪ್ ಮಾಡಿ ಮುಗಿಸುವಾಗ ಕೆಲವೊಮ್ಮೆ ಮುಸ್ಸಂಜೆಯಾಗಿಬಿಡುತ್ತದೆ. ಅಂಥ ದಿನಗಳಲ್ಲಿ ಬೇಗನೆ ಮನೆ ಸೇರುವುದಕ್ಕಾಗಿ ಸೈಕಲ್ ಇದ್ದರೆ ಒಳ್ಳೆಯದೆಂದು ಸೈಕಲ್ ಕೊಂಡಿದ್ದಾಳೆ. ಮನೆಗೆ ಹೋಗುವ ದಾರಿಯಲ್ಲಿ ನಿರ್ಜನ ಪ್ರದೇಶವನ್ನು ದಾಟಬೇಕಾದರೆ ನಿತ್ಯವೂ ಕಾಮುಕರ ಭಯದಿಂದಲೆ ಸಾಗುತ್ತಾಳೆ. ಒಂದು ದಿನ ಅವಳ ಭಯ ನಿಜವಾಗುತ್ತದೆ. ಹಿಂದೆಂದೋ ಒಮ್ಮೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಕಿರುಕುಳ ಕೊಟ್ಟ ಯುವಕನ ಕೈಗಂಟಿಗೆ ಬಾರಿಸಿದ 'ಅಪರಾಧಕ್ಕಾಗಿ' ಅವಳ ದೇಹದ ಮೇಲೆ ಆಕ್ರಮಣ ನಡೆಯುತ್ತದೆ. ಪ್ರಿಯಾಳಿಂದ

ಪೆಟ್ಟು ತಿಂದ ಅವಮಾನಕ್ಕೆ ಪ್ರತಿಯಾಗಿ ರವಿ ಇನ್ನಿಬ್ಬರು ಸಂಗಡಿಗರೊಂದಿಗೆ ಸೇರಿ ಅತ್ಯಾಚಾರ ನಡೆಸಿ ಅವಳ ದುರಹಂಕಾರಕ್ಕೆ ತಕ್ಕ ಪಾಠ ಕಲಿಸಿದೆವೆಂದು ಭಾವಿಸುತ್ತಾನೆ.

ಹೆಣ್ಣಿನ ಆತ್ಮವಿಶ್ವಾಸವನ್ನು ಮಣಿಸಲಾಗದೆ ಹೋದಾಗ ಚಾರಿತ್ರ್ಯವನ್ನು ಕೆಡಿಸುವ ಮೂಲಕ ಅವಳನ್ನು ಸೋಲಿಸಿ ಮೂಲೆಗುಂಪಾಗಿಸುವ ಕ್ರೂರ ವಿಧಾನವು ಲಿಂಗಾಧರಿತವಾದ ಸಾಮಾಜಿಕ ವ್ಯವಸ್ಥೆಯಿಂದ ದತ್ತವಾದುದು. ಪ್ರಿಯಾಳ ಮೇಲೆರಗುತ್ತ ರವಿ ಆಡುವ ಮಾತುಗಳಲ್ಲಿ ಅದನ್ನು ಗಮನಿಸಬಹುದು: 'ಗಂಡಸರೊಂದಿಗೆ ಆಟವಾಡಿದರೆ ಏನಾಗತ್ತೆ ಅಂತ ನಿನಗಿನ್ನೂ ಗೊತ್ತಿಲ್ಲ.' (ಪು. ೧೭೩, ಮಲಯಾಳದ ೧೦ ಕಥೆಗಾರ್ತಿಯರು) ದುರುಳರ ಆಕ್ರಮಣದ ಬಳಿಕ ಅರೆಪ್ರಜ್ಞಾವಸ್ಥೆಯಲ್ಲಿದ್ದ ಪ್ರಿಯಾಳಿಗೆ ಬೆವರು, ಕಣ್ಣೀರು ಮತ್ತು ಇನ್ನೂ ಏನೇನೋ ಕೊಳಕುಗಳು ತುಂಬಿಕೊಂಡಿರುವ ಚಿಕ್ಕ ನಾಲೆಯಾಗಿಬಿಟ್ಟಿರುವ ತನ್ನ ದೇಹವನ್ನು ನೋಡಿದಾಗ, ದೂರದರ್ಶನದಲ್ಲಿ ಪ್ರಸಾರವಾಗುವ ಜಾಹೀರಾತಿನಲ್ಲಿ 'ಕೊಳೆ ಅಂಟಿಕೊಂಡಿದ್ದರೆ ಅದನ್ನು ತೆಗೆದು ಬಿಸಾಕಬಾರದು; ಕೊಳೆಯನ್ನು ತೆಗೆದೆಸೆದರೆ ನೀವು ಪುರಾವೆಗಳನ್ನು ನಾಶಮಾಡುತ್ತೀರಿ' (ಪು. ೧೭೩, ಅದೇ) ಎಂದು ಬಲಾತ್ಕಾರಕ್ಕೆ ಒಳಗಾಗುವ ಹೆಣ್ಣುಮಕ್ಕಳಿಗೆ ಕಿವಿಮಾತು ಹೇಳಿದ್ದು ನೆನಪಾಗುತ್ತದೆ. ಆದರೆ ಆ ಜಾಹೀರಾತು 'ಯಾವ ಕೊಳೆಯನ್ನು ತೊಳೆದು ಹಾಳು ಮಾಡಬಾರದು' ಎಂಬುದನ್ನು ಹೇಳುವುದಿಲ್ಲ. ಸ್ತ್ರೀಲೈಂಗಿಕತೆಗೆ ಸಂಬಂಧಿಸಿದ ಸಂಗತಿಗಳನ್ನು ವ್ಯವಸ್ಥಿತವಾಗಿ ಮುಚ್ಚಿಡುವ ಸಮಾಜದ ಮಡಿವಂತಿಕೆಯು ಹೆಣ್ಣಿಗೆ ಅರಿವಿನ ಕೊರತೆಯುಂಟುಮಾಡುವುದಲ್ಲದೆ ಅನ್ಯಾಯ ಮಾಡಿದ ಗಂಡು ತಪ್ಪಿಸಿಕೊಳ್ಳಲು ಕಾರಣವಾಗುವುದನ್ನು ಕತೆಯು ಗುರುತಿಸುತ್ತದೆ.

ದುರುಳರಿಂದ ಅತ್ಯಾಚಾರಕ್ಕೆ ಒಳಗಾಗಿ ಅಳುತ್ತಾ ಕೂರುವುದರಿಂದ ಅಥವಾ ದೂರು ಕೊಡುವುದರಿಂದ ಪ್ರಯೋಜನವಿಲ್ಲ ಎಂಬ ಸತ್ಯವನ್ನು ಪ್ರಿಯಾ ಮನಗಂಡಿದ್ದಾಳೆ. ದೌರ್ಜನ್ಯ ನಡೆಸಿದವರ ನೈತಿಕ ಬಲವನ್ನು ಕುಗ್ಗಿಸುವುದಕ್ಕಾಗಿ ಅವಳು ಅನುಸರಿಸುವ ದಾರಿ ಅನನ್ಯವಾಗಿದೆ. ಘಟನೆ ನಡೆದ ಮಾರನೇ ದಿನ ಅವಳು ಎಂದಿನಂತೆ ಆಫೀಸಿಗೆ ಹೋಗುತ್ತಾಳೆ. ಅವಳಿಗಾಗಿ ಕಾದು ನಿಂತು ಹೆದರಿಸಲೆತ್ನಿಸಿದ ಪುರುಷರನ್ನು ಮುಗುಳುನಗೆಯೊಂದಿಗೆ ಎದುರಿಸುತ್ತಾಳೆ. 'ನಿನ್ನೆ ಹೇಗಿತ್ತು?' ಎಂಬೊಂದು ಪ್ರಶ್ನೆಯನ್ನು ಹುಳಿನಗೆಯೊಂದಿಗೆ ಕೇಳಿದ ವಯಸ್ಕನಿಗೆ 'ನೀವು ಏನೇನೂ ಸಾಲದು. ಒಬ್ಬ ಹೆಣ್ಣನ್ನು ಪೂರ್ತಿಯಾಗಿ ತೃಪ್ತಿಪಡಿಸಲು ನಿಮ್ಮಿಂದ ಸಾಧ್ಯವಿಲ್ಲ ಅನಿಸುತ್ತದೆ' (ಪು. ೧೭೪, ಅದೇ) ಎಂಬಂಥಾ ಅನಿರೀಕ್ಷಿತ ಉತ್ತರ ಕೊಟ್ಟು ಅವನ ಮುಖವು ಕಪ್ಪಿಡುವುದನ್ನು ಸಂತೃಪ್ತಿಯಿಂದ ವೀಕ್ಷಿಸುತ್ತಾಳೆ. ಮೃಗೀಯವಾಗಿ ತನ್ನ ಮೇಲೆರಗಿದ್ದ ರವಿಯ ಕೆನ್ನೆತಟ್ಟಿ 'ನಿನ್ನನ್ನು ತುಂಬಾ ಇಷ್ಟಪಟ್ಟೆ. ನಿಜವಾದ ಗಂಡಸು ಅಂದರೆ ನೀನೇ' ಅನ್ನುತ್ತಾಳೆ. ತನ್ನ ತಪ್ಪು ತಿಳಿದುಕೊಂಡು ಕಣ್ಣೀರು ಹಾಕಿದ ಎಳೆಯನಾದ ಮೂರನೆಯವನ ಕೂದಲು ಸವರಿ ಕ್ಷಮಿಸಿಬಿಡುತ್ತಾಳೆ.

ಇಷ್ಟಕ್ಕೆ ನಿಲ್ಲಿಸದೆ ನಂತರದ ದಿನಗಳಲ್ಲಿ ಪ್ರಿಯಾ ಪ್ರತಿದಿನವೆಂಬಂತೆ ವಯಸ್ಕನ ಟೆಲಿಫೋನ್ ಬೂತ್‌ಗೆ ಹೋಗುತ್ತಾಳೆ. ತನ್ನನ್ನು ಕಂಡಾಗೆಲ್ಲ ಅವನ ಮುಖದಲ್ಲಿ ಮೂಡುವ ಗಲಿಬಿಲಿಯನ್ನು ಒಂದು ಪ್ರತೀಕಾರದ ಸುಖದೊಂದಿಗೆ ಗಮನಿಸುತ್ತ 'ಚಿಕ್ಕ ಚಿಕ್ಕ ಗೆಲುವುಗಳಷ್ಟು ಸಂತೃಪ್ತಿ ಕೊಡುವಂಥದ್ದು ಬೇರೊಂದಿಲ್ಲ' ಎಂಬ ವಿಚಾರವನ್ನು ನೆನಪಿಸಿಕೊಳ್ಳುತ್ತ ಹಳೆಯ ಸ್ನೇಹಿತರ ನಂಬರ್‌ಗಳನ್ನೆಲ್ಲ ಹುಡುಕಿ ಫೋನ್ ಮಾಡುತ್ತಾಳೆ. ಅತ್ಯಾಚಾರಿ ಯುವಕನನ್ನು ಕಂಡಾಗೆಲ್ಲ ಪ್ರಸನ್ನತೆಯಿಂದ ನಗುತ್ತ ಅವನು ತನ್ನನ್ನು ಗಾಢವಾಗಿ ಪ್ರೀತಿಸುವಂತೆ ಮಾಡುತ್ತಾಳೆ. ಕೊನೆಗೊಮ್ಮೆ ಅವನು ಪ್ರೀತಿಯನ್ನು ನಿವೇದಿಸಿಕೊಂಡ ದಿನ ಸ್ಪಷ್ಟವಾಗಿ ತಿರಸ್ಕರಿಸಿ ಯಾತನೆಪಡುವಂತೆ ಮಾಡುತ್ತಾಳೆ. 'ನಾನು ನಿನ್ನ ಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದೇನೆ. ನಿನ್ನ ಈ ಪ್ರೀತಿಯೇ ನನ್ನ ಪ್ರತೀಕಾರ' (ಪು. ೧೭೬, ಅದೇ) ಎನ್ನುತ್ತಾಳೆ. ಶೀಲಹರಣವಾದರೆ ಬದುಕು ಮುಗಿದೇಹೋಯಿತೆಂದು ಅಳುತ್ತ ಬದುಕಿಗೆ ಎರವಾಗದೆ, ಹಿಂಸೆಯನ್ನು ಅಹಿಂಸೆಯಿಂದ, ದ್ವೇಷವನ್ನು ಪ್ರೀತಿಯಿಂದ ಗೆಲ್ಲುವ, ಗಂಡಿನ ಪಾಶವೀಶಕ್ತಿಯಿಂದ ಉಂಟಾದ ಅವಮಾನದಿಂದ ಮುದುರಿಹೋಗದೆ ಸೆಟೆದುನಿಲ್ಲುವ ಒಂದು ಹೊಸ ಸ್ತ್ರೀಸಾಮರ್ಥ್ಯದ ಸಾಧ್ಯತೆ ಈ ಕತೆಯಲ್ಲಿ ವ್ಯಕ್ತವಾಗಿದೆ. ಅತ್ಯಾಚಾರದ ಬಳಿಕ ಯೋಜಿತ ಪ್ರತಿಕ್ರಿಯೆ ಮತ್ತು ನಿರುದ್ವಿಗ್ನ ವರ್ತನೆಗಳ ಮೂಲಕ ಅತ್ಯಾಚಾರಿಗಳ ನಿದ್ದೆಗೆಡಿಸುವುದು ಒಂದು ಅದ್ಭುತವಾದ ಪ್ರತೀಕಾರದ ಪರಿಕಲ್ಪನೆ.

'ನೀಲಲೋಹಿತ' ಕತೆಯನ್ನು ಶೀಬಾ ಇ.ಕೆ. ಅವರು ಬರೆದಿದ್ದು ಈ ಕತೆಯ ನಾಯಕಿ ತನ್ನನ್ನು ವಂಚಿಸಿದ ಪ್ರಿಯಕರನ ಮೇಲೆ ಬಹಳ ವಿಶಿಷ್ಟ ರೀತಿಯಿಂದ ಸೇಡು ತೀರಿಸಿಕೊಳ್ಳುತ್ತಾಳೆ. ವಿಧವೆಯಾಗಿರುವ ಅವಳನ್ನು ಪುಸಲಾಯಿಸಿ ಕಾಮಸಂಬಂಧ ಬೆಳೆಸಿ ತಮ್ಮ ರತಿಕೇಳಿಯನ್ನು ರಹಸ್ಯವಾಗಿ ಚಿತ್ರೀಕರಿಸಿಕೊಂಡು ಆ ನೀಲಿಚಿತ್ರವನ್ನು ಬೇರೆಯವರಿಗೆ ನೀಡಿರುವುದು ತಿಳಿದಾಗ ಬಹಳ ತಾಳ್ಮೆ ಮತ್ತು ಉಪಾಯಗಳಿಂದ ನಡೆದುಕೊಳ್ಳುತ್ತಾಳೆ. ಅವನನ್ನು ಏಕಾಂತದಲ್ಲಿ ಭೇಟಿಯಾಗಿ ಪ್ರಣಯಕ್ರಿಯೆಯಲ್ಲಿ ತೊಡಗಿಸಿ ಮೈಮರೆತ ಹೊತ್ತು ಸಾಧಿಸಿ ಅವನ ಗುಪ್ತಾಂಗವನ್ನೇ ಕತ್ತರಿಸಿ ಕೊಂಡೊಯ್ಯುತ್ತಾಳೆ. ಪತಿಯಿಲ್ಲದ ತನ್ನನ್ನು ಉಪಾಯದಿಂದ ಬಳಸಿಕೊಂಡಂತೆ ಮತ್ತೊಮ್ಮೆ ಯಾವ ಸ್ತ್ರೀಗೂ ಇಂಥ ಅನ್ಯಾಯವನ್ನು ಮಾಡಬಾರದು ಎಂಬುದು ಅವಳ ಕೃತ್ಯದ ಹಿಂದಿನ ಉದ್ದೇಶವಾಗಿದೆ. ವಿಲವಿಲನೆ ಒದ್ದಾಡುತ್ತಿದ್ದ ಆತ ರಕ್ತಸ್ರಾವದಿಂದ ಸಾಯಬಾರದೆಂದು ತಾನೇ ವೈದ್ಯರಿಗೆ ಕರೆ ಮಾಡುತ್ತಾಳೆ. ಅವನು ಪುರುಷತ್ವವಿಲ್ಲದ ಪುರುಷನಾಗಿ ಮುಂದಿನ ಆಯುಷ್ಯವನ್ನು ಕಳೆಯುವುದನ್ನು ಅವಳು ನೋಡಬಯಸಿದ್ದಾಳೆ.

ಹೆಣ್ಣಿಗೆ ವೈಯಕ್ತಿಕ ಆಸೆಗಳಿಲ್ಲ, ವೈಯಕ್ತಿಕ ಬದುಕೂ ಇಲ್ಲ ಎಂಬಂತೆ ಸಮಾಜ ಅವಳನ್ನು ಬೆಳೆಸಿದೆ. ಈ ಗ್ರಹಿಕೆಗಳನ್ನು ತಿದ್ದಲಾಗದ ಸ್ತ್ರೀಯರು ಪತಿಯ ಪಾಶವೀ ವರ್ತನೆಯನ್ನು ಪ್ರತಿನುಡಿಯದೆ ಸಹಿಸಿ 'ಈ ಬದುಕು ನನ್ನದಲ್ಲ' ಎಂಬಂತೆ ನಿರ್ಲಿಪ್ತಿಯಿಂದ ಇದ್ದುಬಿಡುತ್ತಾರೆ. ಸಹನೆಯ ಗರಿಷ್ಠಮಿತಿ ಎಂಬಂತೆ

ಕಾಣುವ ಅಜ್ಜಿಯ ಮೌನವೂ ಒಂದು ರೀತಿಯ ಪ್ರತಿಭಟನೆಯೆ ಎಂಬುದನ್ನು ಮಾನಸಿ ಅವರು ಬರೆದ 'ಬೇರು' ಕತೆ ಪ್ರತಿಪಾದಿಸುತ್ತದೆ. ಈ ಕತೆಯಲ್ಲಿ ಬರುವ ಅಜ್ಜಿ ಗಂಡನ ಎಲ್ಲ ಬೈಗುಳ, ಹೊಡೆತ, ಒದೆತಗಳನ್ನು ಅವನ ವಿರುದ್ಧವಾಗಿ ಒಂದು ಮಾತೂ ಆಡದೆ ಸಹಿಸಿಕೊಂಡು ಇದು ತನ್ನ ಧರ್ಮವೆಂಬಂತೆ ಬದುಕುವವಳು. ತನ್ನ ದಣಿಯುತ್ತಿರುವ ದೇಹ ಮತ್ತು ಅನಾರೋಗ್ಯವನ್ನು ವೈಯಕ್ತಿಕ ರಹಸ್ಯವಾಗಿ ಇರಿಸಿಕೊಂಡಿದ್ದಾಳೆ. ರಕ್ತ ವಾಂತಿ ಆದಾಗಲೂ ಪತಿಗೆ ಹೇಳದೆ ಎಂದಿನಂತೆಯೆ ಅವನ ಸೇವೆ ಮಾಡಿದ್ದಾಳೆ. ಒಮ್ಮೆ ಗಂಡನ ಕಾಲು ಒತ್ತುವಾಗ ತಾಗಿ ನೋವಾಯಿತೆಂದು ಸಿಟ್ಟಾದ ಗಂಡ, ಅವಳ ಅಮ್ಮ ಕೊಟ್ಟಿದ್ದ ಚಿನ್ನದ ಬಳೆಯನ್ನು ಆಕೆಯ ಕೈಯಿಂದ ಕಳಚಿ ಕಿಟಕಿಯಿಂದ ಹೊರಕ್ಕೆ ಎಸೆದಾಗಲೂ ಮರುಮಾತಾಡದೆ ಕಾಲು ತಿಕ್ಕುವುದನ್ನು ಮುಂದುವರಿಸುತ್ತಾಳೆ. ಆ ಘಟನೆಯ ಬಳಿಕ ತನ್ನ ಎಲ್ಲ ಬಳೆಗಳನ್ನೂ ಕಪಾಟಿನಲ್ಲಿಟ್ಟು ಬಳೆಯೇ ಹಾಕದೆ ಕೈ ಬೋಳಾಗಿರುತ್ತಾಳೆ. 'ಆಸೆಪಡುವ ಬುದ್ಧಿ ಬೆಳೆಸಿಕೊಳ್ಳದಿದ್ದರೆ ಅರ್ಧ ಗೆದ್ದ ಹಾಗೆ. ನಾವು ಹೆಣ್ಣುಮಕ್ಕಳು ಆಸೆ ಇಟ್ಟುಕೊಳ್ಳಬಹುದು ಅಂತ ಯಾರು ಹೇಳಿದ್ದು?' (ಪು. ೫೯, ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು) ಎಂಬ ಅಜ್ಜಿಯ ಮಾತುಗಳಲ್ಲಿ ಬದುಕಿನ ಬಗ್ಗೆ ಜಿಗುಪ್ಸೆಯಿದೆ. ಸಮಾಜವು ಹೆಣ್ಣನ್ನು ಜೀತದಾಳಿನಂತೆ ನಡೆಸಿಕೊಳ್ಳುವ ಕ್ರಮದ ಬಗ್ಗೆ ಪರೋಕ್ಷವಾದ ಆಕ್ರೋಶವೂ ಇದೆ. ಆದರೆ ತನ್ನೊಳಗಿನ ನಿರಾಸೆ, ಅಸಮಾಧಾನಗಳನ್ನು ವ್ಯಕ್ತಪಡಿಸದೆ, ಪತಿಯ ಸ್ನೇಹವನ್ನು ಜೀವಿತಕಾಲದಲ್ಲಿ ಎಂದೂ ಪಡೆಯದೆ ಅಜ್ಜಿ ಕಾಲವಾಗುತ್ತಾಳೆ.

ಪತ್ನಿ ಇರುವಾಗ ಪೌರುಷ ಮೆರೆದ ಅಜ್ಜ, ಆಕೆ ಸತ್ತ ನಂತರ ದುರ್ಬಲನಾಗಿ ಮಲಗಿದಲ್ಲಿಯೆ ಇರುವಂತಾದ ಪರಿಸ್ಥಿತಿಯಲ್ಲಿ 'ಅವಳು ಹೋದಳು, ಅವಳು ಹೋಗಿಬಿಟ್ಟಳಲ್ಲಾ ಮಗುವೇ' ಎಂದು ಅಳುವುದು ತುಂಬ ಶಕ್ತವಾದ ಒಂದು ಸನ್ನಿವೇಶವಾಗಿ ನಿರೂಪಿತವಾಗಿದೆ. 'ತುಂಬ ಕರೆದೆ... ಯಾರೂ ಬರಲಿಲ್ಲ' ಈ ಮಾತುಗಳು ಶೋಷಕನಾಗಿದ್ದ ಪುರುಷ, ತನ್ನ ಅಪ್ಪಣೆಗೆ ತಲೆಬಾಗುವವರು ಇನ್ನಿಲ್ಲ ಎಂದಾದಾಗ ಅಸಹಾಯಕನಾಗಿ ಕೊರಗುವುದನ್ನು ಧ್ವನಿಸುತ್ತವೆ. ವಿದ್ಯಾವಂತೆಯಾದ ಮೊಮ್ಮಗಳು ಅಜ್ಜಿಯ ಪರವಾಗಿದ್ದ ಸಹಾನುಭೂತಿಯನ್ನು ಅಜ್ಜನ ವಿರುದ್ಧದ ಸಿಟ್ಟಾಗಿ ಮಾರ್ಪಡಿಸಿಕೊಂಡು ಅಜ್ಜ ಸಹಾಯಕ್ಕಾಗಿ ಕರೆದಾಗ ಹೋಗದೆ ಬೇಕೆಂದೇ ತಡಮಾಡುತ್ತಾಳೆ. ಅಜ್ಜಿ ಬದುಕಿದ್ದಾಗ ತುಂಬ ಸತಾಯಿಸಿದ್ದ ಅಜ್ಜನ 'ಹಾಲು ಕುಡಿಯುವ ದಿನಚರಿ'ಯನ್ನು ಹಠದಿಂದ ತಪ್ಪಿಸಿ 'ಇದು ತನ್ನ ಇಡೀ ಬದುಕಿನ ಸಾರ್ಥಕತೆ' ಎಂದು ಸಂತೃಪ್ತಿಪಡುತ್ತಾಳೆ. ಪತ್ನಿಯ ಸಾವಿನ ನಂತರ ಅವಳ ಬೆಲೆಯನ್ನು ಅರ್ಥಮಾಡಿಕೊಂಡು ಆತ ಅಸಹಾಯಕನಾಗಿ ಕಣ್ಣೀರಿಡುವಂತೆ ಮಾಡಿ ಅಜ್ಜನ ದೌಷ್ಟ್ಯವನ್ನು ಅವನಿಗೆ ಕಾಣಿಸುತ್ತಾಳೆ.

ಪತಿಯಲ್ಲಿ ಲೈಂಗಿಕ ಸಾಮರ್ಥ್ಯವಿಲ್ಲದಿದ್ದರೂ ಪತ್ನಿಯ ಅನೈತಿಕ ಸಂಬಂಧವನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲದ ಸಮಾಜವು ಸ್ತ್ರೀಯರಿಂದ 'ಪತಿನಿಷ್ಠೆ'ಯನ್ನು ಅಪೇಕ್ಷಿಸುತ್ತದೆ. ನೈಸರ್ಗಿಕವಾದ

ಕಾಮವಾಂಛೆಯನ್ನು ನಿಯಂತ್ರಿಸಲಾಗದೆ ಪರಪುರುಷಗಮನ ಮಾಡಿದ ಸ್ತ್ರೀಯರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ ಅವರನ್ನು ಶಿಕ್ಷಿಸುತ್ತದೆ. ಸ್ವಾಭಿಮಾನಿಯಾದ ಸ್ತ್ರೀಯು ಇಂಥ ಅಸಮಾನ ಧೋರಣೆಯನ್ನು ಸಹಿಸದೆ ತನ್ನದೇ ಆದ ರೀತಿಯಲ್ಲಿ ಪ್ರತೀಕಾರವನ್ನು ಮಾಡಬಹುದು. 'ಮರಣತೋರಣ' ಕಾದಂಬರಿಯಲ್ಲಿ ನಡುವಯಸ್ಸಿನಲ್ಲಿ ಚಿಕ್ಕ ಪ್ರಾಯದ ಚೆಲುವೆ ಚಿತ್ತಿರರಾಣಿಯನ್ನು ವರಿಸುವ ರಾಮವರ್ಮ ಅರಸ ಅವಳನ್ನು ಲೈಂಗಿಕವಾಗಿ ತೃಪ್ತಿಪಡಿಸುವಲ್ಲಿ ಅಸಮರ್ಥರಾಗುತ್ತಾನೆ. ವಯಸ್ಸಾದ ಪತಿಯಿಂದ ತೃಪ್ತೆಯಲ್ಲದ ಚಿತ್ತಿರರಾಣಿ ಪತಿಯನ್ನು ವಂಚಿಸುತ್ತಿರುವೆನೆಂಬ ಯಾವುದೇ ಅಪರಾಧಿಪ್ರಜ್ಞೆಯಿಲ್ಲದೆ ಚೆನ್ನನ್ ಹೈದನನ್ನು ಮೋಹಿಸಿ ಒಲಿಸಿಕೊಂಡು ಕೂಡುತ್ತಾಳೆ. ರಾಣಿಯ ಗರ್ಭಕ್ಕೆ ಕಾರಣ ತಾನಲ್ಲವೆಂಬ ಸತ್ಯವನ್ನು ಹೇಳಲಾಗದೆ ಮೌನವಾಗಿ ಕೊರಗುವ ಅರಸ ಪತ್ನಿಗೆ ಪರಪುರುಷನ ಸಂಬಂಧವಿರುವುದನ್ನು ಪತ್ತೆಮಾಡಿ ಅವನನ್ನು ಅರ್ಧರಾತ್ರಿಯಲ್ಲಿ ವಿಷ ಸವರಿದ ಈಟಿಯಿಂದ ಇರಿದು ಕೊಂದು ಮದವೇರಿದ ಕುದುರೆಯಿಂದ ತುಳಿಸುತ್ತಾನೆ. 'ಕುದುರೆಯೆ ತುಳಿದು ಕೊಂದಿತು' ಎಂದು ಎಲ್ಲರನ್ನೂ ನಂಬಿಸುತ್ತಾನೆ.

ಪ್ರಿಯಕರನ ಸಾವಿನ ಹಿಂದಿನ ರಹಸ್ಯವನ್ನು ಅರ್ಥಮಾಡಿಕೊಂಡರೂ ಆ ಹೊತ್ತಿನಲ್ಲಿ ಪ್ರತಿಭಟಿಸಲಾಗದ ಅಸಹಾಯಕಿ ಚಿತ್ತಿರರಾಣಿ ಅವನ ಹೆಣವನ್ನು ಎಸೆದ ಊರ ಹೊರಗಿನ ಹೊಳೆಯ ದಡದಲ್ಲಿದ್ದ ಬಂಡೆಯ ಗುಹೆಯೊಳಗಿನ ಏಕಾಂತದಲ್ಲಿ ತಪಸ್ಸಿಗೆ ಕುಳಿತುಬಿಡುತ್ತಾಳೆ. ಅರಮನೆಗೆ ಮರಳಲು ನಿರಾಕರಿಸಿ ಗರ್ಭದಲ್ಲಿರುವ ಮಗುವಿನೊಂದಿಗೆ ಗುಹೆಯಲ್ಲೇ ಪ್ರಾಣ ಬಿಡುವ ಮೂಲಕ ಅರಸೊತ್ತಿಗೆಯ ದೌರ್ಜನ್ಯ ಮತ್ತು ಪತಿಯ ಅಧಿಕಾರದ ವಿರುದ್ಧ ಬಂಡಾಯವೇಳುತ್ತಾಳೆ. ಸಾವಿನ ನಂತರವೂ ಶಾಂತಳಾಗದೆ ಮಾಂತ್ರಿಕನ ಸಹಾಯ ಪಡೆದು ಕೊಬ್ಬಿದ ಕುದುರೆಯ ರೂಪದಲ್ಲಿ ಬಂದು ರಾಮವರ್ಮರ ಕುಟುಂಬದ ಸದಸ್ಯರನ್ನು ಒಬ್ಬೊಬ್ಬರನ್ನಾಗಿ ಕೊಂದು ಪತಿಯ ಮತ್ತು ಅರಮನೆಯ ಮೇಲೆ ಪ್ರತೀಕಾರ ಸಾಧಿಸುತ್ತಾಳೆ.

ಇ.ಕೆ. ಷೀಬಾ ಅವರು ಬರೆದಿರುವ 'ಜನನ' ಎಂಬ ಕತೆಯಲ್ಲಿ ಊರಿನಿಂದ ಹೊರಗಿರುವ ಹಾಡಿಗಳಲ್ಲಿ ಆಧುನಿಕತೆಯಿಂದ ದೂರವಾಗಿ ತಮ್ಮ ಪಾಡಿಗೆ ಬದುಕುತ್ತಿರುವ ಗಿರಿಜನರ ಸ್ತ್ರೀಯರ ಮೇಲೆ ನಗರವಾಸಿಗಳು ನಡೆಸುವ ದೌರ್ಜನ್ಯ, ವಂಚನೆಗಳ ಚಿತ್ರಣವಿದೆ. ಸಮುದಾಯದ ಹಬ್ಬದ ದಿನ ಎಲ್ಲರೂ ತಿಂದು ಕುಡಿದು ಮೈಮರೆತಿರುವ ಹೊತ್ತಿನಲ್ಲಿ ಮದುವೆಯ ಕನಸು ಕಾಣುತ್ತಿದ್ದ ಎಳೆಯ ಹುಡುಗಿ ಮಾರಾಳ ಮೇಲೆ ಅತ್ಯಾಚಾರ ನಡೆಯುತ್ತದೆ. ಆಗಾಗ್ಗೆ ಹಾಡಿಗೆ ಭೇಟಿಯಿತ್ತು ಸಮುದಾಯದ ಮಂದಿಗೆ ಪೇಟೆಯ ಬಗೆಬಗೆಯ ವಸ್ತುಗಳನ್ನು ತಂದುಕೊಟ್ಟು ಮರುಳು ಮಾಡುತ್ತಿದ್ದ ಪರಿಚಿತ ಯುವಕನೇ ಅತ್ಯಾಚಾರವನ್ನು ನಡೆಸಿದ್ದಾನೆ. ಗಿರಿಜನರಿಗೆ ಅಕ್ಷರ ಕಲಿಸುತ್ತಿದ್ದ ಶಿಕ್ಷಕಿಯ ಸಕಾಲಿಕ ನೆರವಿನಿಂದ ಮಾರಾಳಿಗೆ ವೈದ್ಯಕೀಯ ಉಪಚಾರ ದೊರೆಯುತ್ತದೆ. ಅತ್ಯಾಚಾರಿಯನ್ನು ಪೊಲೀಸರು ಬಂಧಿಸುತ್ತಾರೆ.

'ಅಪ್ರಾಪ್ತ ವಯಸ್ಸಿನ ಗಿರಿಜನ ಹುಡುಗಿಯನ್ನು ಕೆಡಿಸಿ ಗರ್ಭಿಣಿಯಾಗಿಸಿದ ಅಪರಾಧಕ್ಕೆ ಕಠಿಣ ಶಿಕ್ಷೆ ಖಚಿತವೆಂದಾದಾಗ ಅತ್ಯಾಚಾರಿ ಯುವಕ ಅವಳನ್ನು ಮದುವೆಯಾಗುವ ಪ್ರಲೋಭನೆ ಒಡ್ಡುತ್ತಾನೆ. ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಅವನು ಅನುಸರಿಸಿರುವ ಈ ಮಾರ್ಗವನ್ನು ಮಾರಾಳ ಹೆತ್ತವರು ಮತ್ತು ಸಮುದಾಯದ ಮಂದಿ ಸಂತಸದಿಂದ ಒಪ್ಪಿಕೊಳ್ಳುತ್ತಾರೆ. ಆದರೆ ಅವನ ಕ್ರೂರವಾದ ಲೈಂಗಿಕ ಆಕ್ರಮಣದ ಅನುಭವವನ್ನು ದಾಂಪತ್ಯದ ಪ್ರೇಮದ ಕೂಟಕ್ಕೆ ಪರಿವರ್ತಿಸಿಕೊಳ್ಳುವ ಕಲ್ಪನೆಯನ್ನು ಮಾರಾ ನಿರಾಕರಿಸುತ್ತಾಳೆ.

ಮದುವೆಗೆಂದು ಅವನು ತಂದಿರುವ ಉಡುಗೊರೆಗಳನ್ನು ಕತ್ತರಿಸಿ ಎಸೆಯುವ ಮಾರಾ ಆ ಮದುವೆಯಿಂದ ದೊರೆಯಬಹುದಾದ ಆರ್ಥಿಕ ಅನುಕೂಲಗಳು ಮತ್ತು ಪ್ರತಿಷ್ಠೆಯನ್ನು ಖಂಡಿತವಾಗಿ ತಿರಸ್ಕರಿಸುತ್ತಾಳೆ. ತನ್ನ ಮಧುರಭಾವನೆಗಳನ್ನು ಲೆಕ್ಕಿಸದೆ ಆಕ್ರಮಣ ಮಾಡಿ ನೋಯಿಸಿದವನ ಭಿಕ್ಷೆಗೆ ಕೈಯೊಡ್ಡದೆ 'ಅಮ್ಮನಿಗೆ ಮಾತ್ರ ಮಗ'ನಾಗಿ ಜನಿಸಬಹುದಾದ ತನ್ನ ಗರ್ಭದ ಕುಡಿಯೊಂದಿಗೆ ಸ್ವಾಭಿಮಾನದಿಂದ ಬದುಕುವ ನಿರ್ಧಾರ ಮಾಡುತ್ತಾಳೆ. ಯಾವ ತಪ್ಪನ್ನೂ ಮಾಡದ ಮುಗ್ಧ ಹೆಣ್ಣಿನ ಬದುಕನ್ನು ಒಂದು ಹೊತ್ತಿನ ತೃಪ್ತಿಗಾಗಿ ನಾಶಮಾಡುವ ಪುರುಷನಿಗೆ ತನ್ನ ಸಂಪತ್ತಿನ ಬಲದಿಂದ ಹೆಣ್ಣನ್ನು ಖರೀದಿಸಬಹುದು ಎಂಬ ವಿಶ್ವಾಸವಿದೆ. ಮೃಗದಂತೆ ಕೆಡವಿ ಕೆಡಿಸಿದವನ ಮದುವೆಯ ಪ್ರಸ್ತಾಪವನ್ನು ತಿರಸ್ಕರಿಸುವ ಮೂಲಕ ಮಾರಾ ಅವನಿಗೆ ಶಿಕ್ಷೆಯಾಗುವಂತೆ ಮಾಡಿದ್ದಾಳೆ. 'ತಾನು ವಿಕ್ರಯಕ್ಕೆ ಲಭ್ಯಳಿಲ್ಲ' ಎಂಬ ಸಂದೇಶವನ್ನೂ ನೀಡಿದ್ದಾಳೆ. ಹೆಣ್ಣನ್ನು ಅಬಲೆ ಎಂದು ತಿಳಿದು ಆಕ್ರಮಣ ಮಾಡುವ ಗಂಡಿನ ಅಹಂಕಾರದ ಮೇಲೆ ಮರು ಆಕ್ರಮಣ ನಡೆಸಿ, ತಾನು ಪುರುಷನ ಅವಲಂಬನೆಯಿಲ್ಲದೆ ಬದುಕಬಲ್ಲ ಸಬಲೆ ಹಾಗೂ ಸ್ವಾಭಿಮಾನಿ ಎಂದು ತೋರಿಸಿಕೊಟ್ಟಿದ್ದಾಳೆ.

ಕಮಲಾದಾಸ್ ಅವರು ಬರೆದಿರುವ ನದಿ ಮತ್ತೆ ಹರಿಯತೊಡಗಿತು, ಜಗತ್ತು ಒಂದು ಕವಯಿತ್ರಿಯನ್ನು ಸೃಷ್ಟಿಸುತ್ತಿದೆಯೆ, ಸೂರ್ಯ... ಮುಂತಾದ ಕತೆಗಳಲ್ಲಿಯೂ ಪತಿಯ ಪ್ರೀತಿ ಸಿಗದೆ ನಿರಾಶರಾಗುವ ಸ್ತ್ರೀಯರು ಬಾಹ್ಯಸಂಬಂಧಗಳನ್ನು ಬೆಳೆಸುತ್ತಾರೆ. ಈ ಸ್ತ್ರೀಯರು ತಮ್ಮ ವಿವಾಹೇತರ ಸಂಬಂಧಗಳನ್ನು ವ್ಯಭಿಚಾರವಾಗಿಯಲ್ಲದೆ, ಪತಿಯ ವಿರುದ್ಧ ಪ್ರತೀಕಾರವಾಗಿ ಗ್ರಹಿಸಿ ಅಪರಾಧಿಪ್ರಜ್ಞೆಯಿಂದ ಮುಕ್ತರಾಗಿರುವುದನ್ನು ಗುರುತಿಸಬಹುದು.

೩.೨.೭. ಹೆಣ್ಣಿನ ತೃಪ್ತಿಯ ನೆಲೆಗಳು

ಒಡವೆ, ಸೀರೆ ಮುಂತಾದ ಉಡುಗೊರೆಗಳಿಂದ, ಸಂಪತ್ತಿನಿಂದ ಹೆಂಗಸರು ಹೆಚ್ಚು ಆಕರ್ಷಿತರಾಗುತ್ತಾರೆ ಎಂದು ಸಾಮಾನ್ಯವಾಗಿ ತಿಳಿಯಲಾಗಿದೆ. ಕೆಲವೊಮ್ಮೆ ಸ್ತ್ರೀಯರು ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸುತ್ತಾರೆ. ಪ್ರೀತಿಸುವ ಪತಿ, ಮಕ್ಕಳು, ಆರ್ಥಿಕ ಸಮಸ್ಯೆಗಳಿಲ್ಲದ ಸಂಸಾರದ ಮೇರೆಗಳ ಒಳಗೆ ಬದುಕಲಾರದೆ

ಅದರಿಂದ ವಿಮುಕ್ತಿಗೆ ಹಾತೊರೆಯುತ್ತಾರೆ. ಹೆಣ್ಣಿನ ತೃಪ್ತಿಯ ನೆಲೆಗಳ ಸಂಕೀರ್ಣತೆಯನ್ನು ಹುಡುಕಲು ಮತ್ತು ವಿಶ್ಲೇಷಿಸಲು ಕೆಲವು ಕತೆಗಳು ಯತ್ನಿಸಿವೆ.

ಕಮಲಾದಾಸ್ ಅವರು ತನ್ನ ಕಥೆಗಳಲ್ಲಿ ಸೃಷ್ಟಿಸುವ ಸಮಾಜದಲ್ಲಿ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿ ಸಾಕಷ್ಟು ಹಣ ಸಂಪಾದಿಸುವ, ಆದರೆ ತೃಪ್ತರಲ್ಲದ, ಖಿನ್ನತೆಯಿಂದ ಬಳಲುವ ಹೆಂಗಸರು ಕಾಣಸಿಗುತ್ತಾರೆ. 'ಚಹವನ್ನು ಪ್ರೀತಿಸಿದಂತೆ' ಮಾತ್ರ ತನ್ನನ್ನು ಪ್ರೀತಿಸುವ ಗಂಡನಿಂದ ನಿರಾಶರಾಗಿ ದಾಂಪತ್ಯದ ಚೌಕಟ್ಟು ದಾಟಲೆಳಸುವ ಹಲವು ಬಗೆಯ ಅತೃಪ್ತೆಯರನ್ನು ಕಮಲಾದಾಸ್ ಅವರು ಓದುಗರಿಗೆ ಕಾಣಿಸಿದ್ದಾರೆ.

ಕಮಲಾದಾಸ್ ಅವರು ಬರೆದಿರುವ 'ಕುರುಚಲು ಕಾಡಿನ ಗುಳ್ಳೆನರಿ' ಪ್ರೀತಿಸಲ್ಪಡಲು ಬಯಸುವ ಹೆಣ್ಣೊಬ್ಬಳು ಒಂದು ಗುಳ್ಳೆನರಿಯೊಂದಿಗೆ ಓಡಿಹೋಗುವ, ಮೊದಲ ಓದಿಗೆ ಅಸಂಗತವೆನಿಸುವ ಕಥೆ. ಮಾರ್ಗರೆಟ್ ಕಡಲ ತಡಿಯ ಮಂಗಳೂರಿನಿಂದ ಮದುವೆ ಆಗಿ ಬಾಂದ್ರಾಕ್ಕೆ ಬಂದು ಐದು ವರ್ಷವಾಗಿವೆ. ಇದುವರೆಗೂ ಅವಳನ್ನೊಮ್ಮೆ ಕಡಲತಡಿಗೆ ಕರೆದುಕೊಂಡು ಹೋಗಲು ಅವಳ ಗಂಡನಿಗೆ ಬಿಡುವಾಗಿಲ್ಲ. ಒಬ್ಬಳೆ ತಿರುಗಾಡುವ ವಾತಾವರಣ ಬಾಂದ್ರಾದಲ್ಲಿ ಇಲ್ಲ, ಅದು ಅಪಾಯಕಾರಿ ಎಂದು ಅವಳ ಅಮ್ಮ ಹೆದರಿಸಿರುವುದರಿಂದ ತಾನೊಬ್ಬಳೆ ಮನೆಯಿಂದ ಹೊರಬೀಳಲಾರಳು. ತನ್ನ ಚೆಲುವು ನಶಿಸಿರುವ ಕಾರಣ ಪತಿ ತನ್ನನ್ನು ಹಿಂದಿನಂತೆ ಪ್ರೀತಿಸುತ್ತಿಲ್ಲ ಎಂದು ಭಾವಿಸಿ ಕೊರಗುವ ಮಾರ್ಗರೆಟ್‌ಗೆ ಬೇರೆ ಹವ್ಯಾಸಗಳಿಲ್ಲ. ಏಕತಾನತೆ ಕಳೆಯುವುದಕ್ಕಾಗಿ 'ಒಳ್ಳೆಯ ಸ್ನೇಹಿತೆ'ಯರೊಂದಿಗೆ ಸಿನಿಮಾಕ್ಕೋ ಮಾರ್ಕೆಟ್ಟಿಗೋ ಹೋಗುವಂತೆ ಪತಿ ಹೇಳಿದರೂ 'ಹಿಂದಿನ ಸೌಂದರ್ಯವನ್ನು ಕಳೆದುಕೊಂಡು ಸುಂದರವಾಗಿಲ್ಲದ ಕಾರಣ' ಅವಳು ಹೊರಗೆ ಹೋಗಲು ಇಷ್ಟಪಡುತ್ತಿಲ್ಲ.

ಮನೆಯ ಕೆಲಸಗಳನ್ನು ಮಾಡುತ್ತ ಉಸಿರುಕಟ್ಟಿದಂತೆ ಚಡಪಡಿಸುವ ಮಾರ್ಗರೆಟ್ ಕಳೆದ ಕೆಲದಿನಗಳಿಂದ ಮನೆಯ ಪಕ್ಕದ ಪೊದೆಗಳ ಹಿಂದೆ ಸದಾ ಹೊಂಚು ಹಾಕುತ್ತಿರುವ, ತನ್ನ ಕಣ್ಣಿಗೆ ಮಾತ್ರ ಕಾಣಿಸುವ ಗುಳ್ಳೆನರಿಯನ್ನು ಗಮನಿಸುತ್ತ ಅಸ್ವಸ್ಥಳಾಗುತ್ತಾಳೆ. ಕೊನೆಗೊಮ್ಮೆ ಅರ್ಧರಾತ್ರಿಯಲ್ಲಿ ಅದರ ಜೊತೆಯಲ್ಲಿ ಮನೆ ಬಿಟ್ಟು ಓಡಿ ಹೋಗುತ್ತಾಳೆ. ಹೂಕುಂಡದ ಹಿಂದೆ ನೃತ್ಯ ಮಾಡುವ ಈ ಗುಳ್ಳೆನರಿ ಅವಳ ಹಂಬಲವೂ ಆಗಿದೆ. ಪತ್ನಿಯೊಂದಿಗೆ ಪ್ರೀತಿಯ ಮಾತನಾಡಲು ಪುರುಸೊತ್ತಿಲ್ಲದ ಅಲೆಗ್ಸಾಂಡರ್‌ನನ್ನು ಮದುವೆಯಾದುದು ತಪ್ಪಾಗಿದೆ ಎಂದು ಯೋಚಿಸುತ್ತಾಳೆ. "ನೀನು ನಿನ್ನ ಗುಳಿಯನ್ನು ನೀನೇ ತೋಡಿಕೊಂಡೆ. ಇನ್ನು ಅದರಲ್ಲೇ ಇರೋದು ಬಿಟ್ಟು ಬೇರೆ ದಾರಿನೇ ಇಲ್ವಲ್ಲ" (ಪು. ೧೭೩, ಕಮಲಾದಾಸ್ ಅವರ ಬೇಸಿಗೆಯ ರಜೆ ಮತ್ತು ಇತರ ಕತೆಗಳು) ಎನ್ನುವ ಮಾವನ ಹಂಗಿಸುವಿಕೆ ಸತ್ಯವೇ ಎಂದು ಅವಳಿಗೂ ಅನಿಸಿದೆ. ಒಂಟಿತನವು ಅವಳ ಬಹುಮುಖ್ಯ

ಸಮಸ್ಯೆಯಾಗಿದೆ. "ನನಗೆ ಮನಸ್ಸು ಬಿಚ್ಚಿ ಮಾತನಾಡಬೇಕೆಂಬ ಆಸೆಯಿದೆ. ನನ್ನ ಗಂಡ ನಾನೇನು ಹೇಳಿದರೂ ಲಕ್ಷ್ಯ ಕೊಡೋದಿಲ್ಲ. ನನ್ನ ಧ್ವನಿ ಅವರಿಗೆ ನಿದ್ರೆ ಬರಿಸುತ್ತದೆ" (ಪು. ೧೭೩, ಅದೇ)

ಉಸಿರುಗಟ್ಟಿಸುವಂತಿದ್ದ ಪತಿಯ ಮನೆಯನ್ನು ತ್ಯಜಿಸಿ, 'ಈ ನಗರದಲ್ಲಿ ತನ್ನ ಮೇಲೆ ಪ್ರೀತಿ ಹೊಂದಿರುವ ಏಕೈಕ ಜೀವವಾಗಿರುವ' ಗುಳ್ಳೆನರಿಯೊಂದಿಗೆ ಹೊರಡುವ ನಿಶ್ಚಯ ಮಾಡುತ್ತಾಳೆ. ಸದಾ ಭ್ರಮಿತಳಂತೆ ಹಲುಬುತ್ತ ಅಸ್ವಸ್ಥಳಾಗುವ ಪತ್ನಿಯ ಮಾತುಗಳಲ್ಲಿ ನಂಬಿಕೆಯಿಲ್ಲದ ಪತಿಗೆ ಅವಳೇಕೆ ಹಾಗಿದ್ದಾಳೆಂದು ವಿಚಾರಿಸುವ ವ್ಯವಧಾನವಿಲ್ಲ. ಒಂದು ತಿಂಗಳ ಮಟ್ಟಿಗೆ ಅವಳನ್ನು ತವರಿಗೆ ಕಳಿಸಿಕೊಡುವ ವ್ಯವಸ್ಥೆಯನ್ನೂ ಪತಿ ಮಾಡಿದ್ದಾನೆ. ಆದರೆ ಅವಳಿಗೆ ತವರಿಗೆ ಹೋಗಲು ಇಷ್ಟವಿಲ್ಲ. ಇನ್ಯಾರ ಕಣ್ಣಿಗೂ ಕಾಣಿಸದ, ಸ್ವಯಂ ತನಗೂ ಅದರ ಅಸ್ತಿತ್ವದ ಬಗ್ಗೆ ಶಂಕೆಯಿರುವ, ಮಾವ ಹೇಳುತ್ತಿದ್ದಂತೆ ತನ್ನದೇ ಉನ್ಮಾದವೂ ಆಗಿರಬಹುದಾದ ಗುಳ್ಳೆನರಿಯ ಸಾಂಗತ್ಯದಲ್ಲಿ ಸ್ತ್ರೀಯೊಬ್ಬಳು ನೆಮ್ಮದಿಯನ್ನು ಅರಸುವ ಈ ಕತೆ ಪ್ರೀತಿ ಮತ್ತು ಸ್ವಾತಂತ್ರ್ಯಕ್ಕಾಗಿ ಹಾತೊರೆಯುವ ಹೆಣ್ಣಿನ ಮನಸ್ಸನ್ನು ತೆರೆದಿಡುವ ಒಂದು ಸಾಂಕೇತಿಕ ಕತೆ. ಗೂರಲು ಹಿಡಿದ ಮುದುಕನಾದ ಮಾವ ಮತ್ತು ತನ್ನ ಕೆಲಸದ ಒತ್ತಡಗಳಲ್ಲಿ ಕಳೆದುಹೋಗಿರುವ ಪತಿಯ ಅಗತ್ಯಗಳನ್ನು ಪೂರೈಸುವ ಕೇವಲ ಒಂದು ಯಂತ್ರವಾಗಿ ಬದುಕಲು ಅವಳಿಂದ ಸಾಧ್ಯವಾಗುತ್ತಿಲ್ಲ. ಅವಳಿಗೆ ಬಿಡುಗಡೆ ಬೇಕಾಗಿದೆ. ಹಾಗಾಗಿ ನಿಜವಾಗಿಯೂ ಇದೆಯೋ ಇಲ್ಲವೋ ಎಂಬುದು ಸ್ಪಷ್ಟವಿಲ್ಲದ, ಮುಂದಕ್ಕೆ ತನ್ನ ಜವಾಬ್ದಾರಿಯನ್ನು ಹೊರಲು ಸಮರ್ಥವಿದೆಯೋ ಎಂದು ತಿಳಿಯದ, ಆದರೆ ಸದ್ಯಕ್ಕೆ ಗಂಡನ ಮನೆಯಿಂದ ಹೊರಡಲು ತನಗೊಂದು ದಾರಿಯನ್ನು ಕಾಣಿಸಿರುವ ಗುಳ್ಳೆನರಿಯೊಂದಿಗೆ ಹೊರಟುಬಿಡುತ್ತಾಳೆ.

ಕಮಲಾದಾಸ್ ಅವರು ಬರೆದಿರುವ 'ಕಳೆದುಹೋದ ನೀಲಾಂಬರಿ' ಎಂಬ ಕತೆಯ ಸುಭದ್ರಾ ಬಹಳ ಪ್ರಸಿದ್ಧಳಾದ ವೈದ್ಯೆ. ತನ್ನ ಪತಿಗಿಂತಲೂ ಹೆಚ್ಚು ಸಂಪಾದಿಸುತ್ತಾಳೆ. ಆದರೆ ಪತಿ ಬಯಸುವಂತೆ ತನ್ನನ್ನು ಸಂಪೂರ್ಣವಾಗಿ ಪತಿಗೆ ಒಪ್ಪಿಸಿಕೊಳ್ಳುವುದು ಆಕೆಗೆ ಸಾಧ್ಯವಾಗಿಲ್ಲ. ಸಂಪತ್ತು, ಜನಪ್ರಿಯತೆ, ಸಮಾಜದಲ್ಲಿ ಗೌರವ ಎಲ್ಲ ಇದ್ದರೂ ಈ ಹಿಂದೆ ಮಧುರೆಯಲ್ಲಿ ತಂದೆಯ ಮನೆಯಲ್ಲಿದ್ದಾಗ ತಾನು ಇಷ್ಟಪಟ್ಟ ಸಂಗೀತ ಗುರುವಿನ ನೆನಪಿನಲ್ಲಿ ಕೊರಗುತ್ತ ಪತಿಯೊಂದಿಗೆ ಮಾನಸಿಕ ದೂರವನ್ನು ಕಾಯ್ದುಕೊಂಡು ಚಿರವಿರಹಿಣಿಯಾಗಿ ಬಾಳುತ್ತಾಳೆ. ಮುಗಿದುಹೋದ ಗುರು-ಶಿಷ್ಯೆಯರ ಸಂಬಂಧ ಗಂಡ-ಹೆಂಡಿರ ನಡುವೆ ಕರಿನೆರಳಾಗಿ ಕಾಡಿದೆ. ಸಂಶಯಕ್ಕೆ ಕಾರಣವಾಗಿದೆ. 'ನಾನು ಮದುವೆಯಾಗುವವರೆಗೂ ಕನ್ಯೆಯಾಗಿಯೆ ಇದ್ದೆ' ಎಂಬ ಮಾತನ್ನು ಹೇಳುವಾಗ ಸುಭದ್ರಾಳ ಧ್ವನಿಯಲ್ಲಿ ಅಭಿಮಾನವಿಲ್ಲ. ಬದಲಿಗೆ ಮದುವೆಗೆ ಮುಂಚೆ ಕನ್ಯತ್ವ ಕಳೆದುಕೊಳ್ಳದಿರುವುದು ದುರದೃಷ್ಟವೆಂಬ ಭಾವವಿದೆ. ಅದನ್ನು ಗುರುತಿಸಿ ಅವಳ ಪತಿ ಅಸ್ವಸ್ಥನಾಗಿದ್ದಾನೆ. ಪತಿಯ ಒಳಸಂಕಟಗಳನ್ನು ತಿಳಿದುಕೊಳ್ಳಲು ಅವಳು ಪ್ರಯತ್ನವನ್ನೇ ಮಾಡಿಲ್ಲ. ಅವನು ಪರವಶನಾಗುವ ರಾತ್ರಿಗಳಲ್ಲಿ ಅವನೊಂದಿಗೆ

ಚಕ್ಕಂದವಾಡುವುದಕ್ಕೆ ಸನ್ನದ್ಧಳಾಗಿರುವುದಿಲ್ಲ ಎಂಬೊಂದು ಅಂಶವನ್ನು ಬಿಟ್ಟರೆ ಅವಳು ಪತ್ನಿಯ ಕರ್ತವ್ಯದಲ್ಲಿ ವಂಚನೆ ಮಾಡಿಲ್ಲ. ತನ್ನ ದೇಹಕ್ಕೆ ಕಾವು ಏರಿಸಲು ಎಂದೂ ಸಾಧ್ಯವಾಗದ ಪತಿ ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಉಪೇಕ್ಷಿಸದೆ ಸೇವಾಭಾವದಿಂದ ಶುಶ್ರೂಷೆ ಮಾಡಿದ್ದಾಳೆ.

'ನಿನ್ನ ರೋಗಿಗಳನ್ನು ಕಂಡರೆ ನನಗೆ ಹೊಟ್ಟೆಕಿಚ್ಚಾಗುತ್ತೆ' ಎನ್ನುವ, ಎಂದೂ ನೋಯಿಸದ ಪತಿಯನ್ನು ಪೂರ್ತಿಯಾಗಿ ಪ್ರೀತಿಸುವುದು ಅವಳಿಂದ ಯಾವತ್ತೂ ಸಾಧ್ಯವಾಗಿಲ್ಲ. ಅವನಾದರೆ ಹೆಂಡತಿಯೊಂದಿಗೆ ಹೆಚ್ಚು ಹೊತ್ತು ಕಳೆಯಲು ಬಯಸಿ ಅವಳು ಮನೆಯಲ್ಲಿರುವಾಗ ಅವಳನ್ನು ವಿಚಾರಿಸಿ ಬರುವ ರೋಗಿಗಳನ್ನು ಅವಳಿಲ್ಲವೆಂದು ಮರಳಿ ಕಳಿಸಿದ್ದೂ ಇದೆ. ಅವನು ಬದುಕಿರುವಾಗಲೆ ತಾನು ಬಾಲ್ಯಕಳೆದ ಮಧುರೆ ಮೀನಾಕ್ಷಿ ದೇವಸ್ಥಾನಕ್ಕೆ ಒಮ್ಮೆ ಹೋಗಿ ಬರುವ ಆಸೆ ಅವಳಿಗಿತ್ತು. ಆದರೆ ಅವಳ ಪೂರ್ವ ಪ್ರೇಮದ ಸ್ಮರಣೆಗೆ ಅವಕಾಶ ಕೊಡಬಾರದೆಂದು ಪತಿ ಅದಕ್ಕೆ ಒಪ್ಪದ ಕಾರಣ ಅವಳು ಹೋಗಿಲ್ಲ. ಅಂದರೆ ಪತಿಯನ್ನು ನೋಯಿಸುವ, ವಂಚಿಸುವ ಯಾವ ಉದ್ದೇಶವೂ ಅವಳಿಗಿರಲಿಲ್ಲ. ಹೀಗೆ ಅವನ ಜೊತೆಗಿನ ಮೂವತ್ತು ವರುಷಗಳ ದಾಂಪತ್ಯದ ಕೋಟೆಯಲ್ಲಿ ಬಂಧಿತಳಾಗಿದ್ದ ಸುಭದ್ರೆ ಪತಿಯನ್ನು ಕಳೆದುಕೊಂಡು ವಿಧವೆಯಾದ ಬಳಿಕ ತನ್ನ ಸಂಗೀತಗುರುವನ್ನು ಹುಡುಕಿಕೊಂಡು 'ಮಧುಚಂದ್ರಕ್ಕೆ ಹೊರಡುವ ವಧುವಿನಂತೆ ಹೊಡೆದುಕೊಳ್ಳುವ ಎದೆಯೊಂದಿಗೆ' ಮಧುರೆಗೆ ಹೊರಡುತ್ತಾಳೆ. ಕಲ್ಲೀಕೋಟೆಯಿಂದ ಒಬ್ಬಳೇ ಅಷ್ಟು ದೂರ ಡ್ರೈವ್ ಮಾಡಿಕೊಂಡು ಹೋಗುವುದು ಸುರಕ್ಷಿತವಲ್ಲವಾದ್ದರಿಂದ ಜತೆಗೆ ಬರುತ್ತೇವೆಂದ ಬಂಧುಮಿತ್ರರನ್ನು 'ನನಗೆ ಏಕಾಂತ ಬೇಕು. ಒಂಟಿತನ ಮತ್ತು ಮೌನ ಇವೆರಡನ್ನು ನಾನು ಬಹಳ ಕಾಲದಿಂದ ಅಪೇಕ್ಷಿಸುತ್ತಿದ್ದೆ' ಎಂದು ಸಾರಾಸಗಟು ನಿರಾಕರಿಸಿ ಒಬ್ಬಳೇ ಹೊರಡುವ ಧೈರ್ಯ ತೋರುತ್ತಾಳೆ. ಹಾಗೆ ಹೊರಡುವಾಗ ಈ ನಡುವೆ ತಾನು ಧರಿಸುತ್ತಿದ್ದ ವಿಧವೆಗೆ ಒಪ್ಪುವ ವಸ್ತ್ರಾಭರಣಗಳ ಬದಲಿಗೆ ಗಾಢ ಬಣ್ಣದ ಸೀರೆಗಳನ್ನು, ಅದಕ್ಕೆ ಒಪ್ಪುವ ಸುಗಂಧ ದ್ರವ್ಯಗಳು, ಮುತ್ತಿನ ಸರಗಳು, ಕೆಂಪು ಹರಳಿನ ಒಡವೆಗಳನ್ನು ಪೆಟ್ಟಿಗೆಯಲ್ಲಿ ಇರಿಸಿಕೊಂಡಿದ್ದಾಳೆ. ಶಾಸ್ತ್ರಿಗಳ ಸಾಂಗತ್ಯದಲ್ಲಿ ತನ್ನ ವೈಧವ್ಯದ ಬದುಕಿಗೆ ಹೊಸ ಉತ್ಸಾಹ ತುಂಬಿಕೊಳ್ಳಲು ಅವಳು ಬಯಸಿರುವುದು ಸ್ಪಷ್ಟವಾಗಿದೆ.

ಶಾಸ್ತ್ರಿಗಳ ಮನೆಯನ್ನು ತಲುಪಿದಾಗ ಅವಳ ಬಾಲ್ಯದ ಸಹಪಾಠಿಯಾಗಿದ್ದು ಪ್ರಸ್ತುತ ಸಂಗೀತಗುರುವಿನ ಪತ್ನಿಯಾಗಿರುವ ಜ್ಞಾನಂಳ ಭೇಟಿಯಾಗುತ್ತದೆ. ಗಂಡ ತನ್ನನ್ನು ಪ್ರೀತಿಸುತ್ತಿಲ್ಲವೆಂಬ ಕೊರಗಿನಿಂದ ಬುದ್ಧಿಯ ಸ್ಥಿಮಿತ ಕಳೆದುಕೊಂಡಿರುವ ಜ್ಞಾನಂಳ ಬದುಕೂ ಬವಣೆಯಲ್ಲಿದೆ. ಆ ಹುಚ್ಚಿನಲ್ಲಿಯೂ 'ತನ್ನ ಗಂಡ ಸತ್ತು ಹೋದರು' ಎಂದು ಜ್ಞಾನಂ ಸುಳ್ಳು ಹೇಳುತ್ತಾಳೆ. ಕೊನೆಗೊಮ್ಮೆ ಸುಭದ್ರಾ ಕಾತರಿಸಿದ್ದ ಭೇಟಿ ಸಾಧ್ಯವಾಗುತ್ತದೆ. 'ಅವರೊಂದಿಗೆ ಕೊಂಚ ಹೊತ್ತು ಕಾಲ ಕಳೆಯಬೇಕು. ತಾನು ಇದುವರೆಗೂ ಗುಟ್ಟಾಗಿ ಇರಿಸಿದ್ದ ಪ್ರೀತಿಯನ್ನು ಅವರಲ್ಲಿ ತೊಡಿಕೊಳ್ಳಬೇಕು. ಒಮ್ಮೆಯಾದರೂ ನಿರ್ಭಯದಿಂದ ಅವರ

ವಿಶಾಲವಾದ ಎದೆಯಲ್ಲಿ ಮುಖವಿಟ್ಟು ಮಲಗಬೇಕು' ಎಂದು ಸುಭದ್ರೆ ಬಯಸಿದ್ದಾಳೆ. ಆದರೆ ಅವಳೊಂದಿಗೆ ಹೋಟೆಲಿಗೆ ಬರಲು ಗುರು ನಿರಾಕರಿಸುತ್ತಾನೆ. ಹುಚ್ಚಿಯಾಗಿರುವ ಹೆಂಡತಿಯನ್ನು ನೋಡಿಕೊಳ್ಳುವ ಹೊರತು ಇನ್ನಾವ ಹೊಸ ಸಂಬಂಧದ ಜವಾಬ್ದಾರಿಯನ್ನೂ ಒಪ್ಪದ ಶಾಸ್ತ್ರಿ 'ನೀನು ನಿನ್ನ ಗಂಡನ ಹೆಸರನ್ನು ಹಾಳು ಮಾಡಬಾರದು' ಎಂದು ಬುದ್ಧಿ ಹೇಳಿದಾಗ ಸುಭದ್ರೆಯ ಕನಸೊಡೆಯುತ್ತದೆ.

ಚೆನ್ನಾಗಿ ಹಾಡುತ್ತಿದ್ದ ಸುಭದ್ರೆ ಗುರುವನ್ನು ಪ್ರೇಮಿಸುತ್ತಿದ್ದಾಳೆ ಎಂಬ ಸಂದೇಹವೇ ಈ ಹಿಂದೆ ಅವಳ ಸಂಗೀತ ಪಾಠ ಬಿಡಿಸಲು ಮತ್ತು ಗುರುವಿನ ಸಂಪರ್ಕವಿಲ್ಲದಂತೆ ಅವಳನ್ನು ಓದುವುದಕ್ಕೆಂದು ಮದರಾಸಿಗೆ ಕಳಿಸಲೂ ಕಾರಣವಾಗಿತ್ತು. ಕುಟುಂಬದ ಪ್ರತಿಷ್ಠೆ ಮತ್ತು ಸಮಾಜದ ಕಟ್ಟುಪಾಡುಗಳು ಸ್ತ್ರೀಯರ ಸ್ವತಂತ್ರ ಅಭಿವ್ಯಕ್ತಿಯನ್ನು ತಡೆಯುತ್ತವೆ. ವಿವಾಹ ಎಂಬ ಚೌಕಟ್ಟು ಪತಿ ತೀರಿಕೊಂಡ ನಂತರವೂ ಸ್ತ್ರೀಯನ್ನು ಬಂಧಿಸಿಡುತ್ತದೆ. ಸ್ತ್ರೀಯ ಖಾಸಗಿ ಕ್ಷಣಗಳು ಮತ್ತು ವೈಯಕ್ತಿಕ ಆಸೆಗಳು ಅವಳ ಮದುವೆಯೊಂದಿಗೆ ಸತ್ತುಹೋಗುವುದೆ ಸಹಜ ಮತ್ತು ಅಪೇಕ್ಷಣೀಯವೆಂದು ಸಮಾಜವು ವಿಧಿಸಿದೆ.

ಕಮಲಾದಾಸ್ ಅವರು ಬರೆದ 'ಗಾಳಿಪಟಗಳು' ಎಂಬ ಕತೆಯಲ್ಲಿ ಶ್ರೀಮಂತ ಪತಿಯನ್ನು ಹೊಂದಿರುವ, ಕವಯಿತ್ರಿಯಾಗಿರುವ ನಾಯಕಿ ಪತಿಯೊಂದಿಗೆ ಮಲಗುವುದನ್ನು ವ್ಯಭಿಚಾರ ಎಂದುಕೊಂಡಿದ್ದಾಳೆ. ಹೃದಯರೋಗಿಯಾಗಿದ್ದು, ಸದಾ ಸಾವಿನ ನೆರಳಲ್ಲಿ ಬದುಕುತ್ತಿರುವ ಅವಳಿಗೆ ತನ್ನನ್ನು ಅತುಲವಾಗಿ ಪ್ರೇಮಿಸುವ ಸಂಗಾತಿಯೊಬ್ಬನ ಹಂಬಲ. 'ಗಾಢವಾಗಿ ಪ್ರೇಮಿಸಲ್ಪಡಬೇಕು' ಎಂಬ ಅತೀವ ತಹತಹದಲ್ಲಿ ತನ್ನ ಬಾಲ್ಯದ ಸಖ ವಾಸುವಿನ ಸಾಂಗತ್ಯದ ಸುಖವನ್ನು ಬಯಸುತ್ತಾಳೆ.

'ಜಳಿಬಾಬು' ಎಂಬ ಕತೆಯಲ್ಲಿನ ಪ್ರಸಿದ್ಧ ಲೇಖಕಿಯೂ, ಅನುಕೂಲಸ್ಥೆಯೂ ಆಗಿರುವ ಮಹಿಳೆಗೆ ಕೀರ್ತಿ, ಸಂಪತ್ತುಗಳಿಂದ ಬದುಕಿನಲ್ಲಿ ನೆಮ್ಮದಿ, ತೃಪ್ತಿ ದೊರೆತಿಲ್ಲ. ಸತ್ತುಹೋಗುವುದೊಂದೇ ಬಿಡುಗಡೆಯ ದಾರಿ ಎಂದು ನಿರ್ಧರಿಸಿ ತನ್ನನ್ನು ತಾನೇ ಕೊಲ್ಲಿಸುವುದಕ್ಕಾಗಿ ಬಾಡಿಗೆ ಕೊಲೆಗಾರನನ್ನು ಹುಡುಕುತ್ತಾಳೆ. ಕಮಲಾದಾಸ್ ಅವರ ಇನ್ನೊಂದು ಕತೆ 'ಕೊನೆಯ ಅತಿಥಿ' ಯ ಅನಸೂಯಾದೇವಿ ಕೂಡ ಸಾಕಷ್ಟು ಕೀರ್ತಿ, ಅಂತಸ್ತು, ಸಂಪತ್ತು ಹೊಂದಿರುವ ಶ್ರೀಮಂತೆ. ತನ್ನನ್ನು ತನಗಾಗಿಯೆ ಪ್ರೀತಿಸುವವರಿಲ್ಲದ ಖಿನ್ನತೆಯಿಂದಾಗಿ ತನ್ನ ಕೊಲೆಯ ಸುಪಾರಿಯನ್ನು ತಾನೇ ನೀಡಿ ತನ್ನಿಚ್ಛೆಯಿಂದ ಸಾವನ್ನು ಬರಮಾಡಿಕೊಳ್ಳುತ್ತಾಳೆ.

'ಹಕ್ಕಿಯ ವಾಸನೆ' ಎಂಬ ಕತೆಯಲ್ಲಿ ಸುಶಿಕ್ಷಿತಳೂ ರೂಪವತಿಯೂ ಆಗಿರುವ ಯುವತಿಯೊಬ್ಬಳು ಉದ್ಯೋಗ ಹುಡುಕುತ್ತ ಮರಣದ ಮನೆಯನ್ನು ಪ್ರವೇಶಿಸುವ ಒಂದು ಅಸಂಗತವೆನಿಸುವ ಚಿತ್ರಣವಿದೆ. ಪತಿ, ಮಕ್ಕಳನ್ನು ಹೊಂದಿ ಮೇಲ್ನೋಟಕ್ಕೆ ಸುಖವಾಗಿಯೆ ಇದ್ದ ಯುವತಿಯ ಸುಪ್ತಮನಸ್ಸಿನಲ್ಲಿ ಸಾವಿನ

ಕುರಿತಾಗಿ ಆಕರ್ಷಣೆಯಿತ್ತು. ಬದುಕನ್ನು ಸುಖವಾಗಿ ಅಂತ್ಯಗೊಳಿಸಿಕೊಳ್ಳಬೇಕೆಂಬ ಬಯಕೆಯಿತ್ತು. ಅಂದರೆ ಮೇಲ್ನೋಟಕ್ಕೆ ಎಲ್ಲವೂ ಸರಿಯಾಗಿರುವಂತೆ ಕಾಣುವ ಸಂಸಾರವು ಅವಳನ್ನು ಹಿಡಿದಿಟ್ಟುಕೊಳ್ಳುವಲ್ಲಿ ಸಫಲವಾಗಿರಲಿಲ್ಲ ಎಂಬಂತೆ ಲೇಖಕಿ ಕಾಣಿಸುತ್ತಾರೆ.

ಶೀಬಾ ಇ.ಕೆ. ಅವರು ಬರೆದ 'ಸೀತಾಯಣ' ಕತೆಯ ವೈದೇಹಿ ಮೂವತ್ತಾರನೆಯ ವಯಸ್ಸಿನಲ್ಲಿ ತನ್ನ ಅಭಿರುಚಿಗಳೊಂದಿಗೆ ತಾಳೆಯಾಗುವ ಪುರುಷನೆಡೆಗೆ ಆಕರ್ಷಿತಳಾಗುತ್ತಾಳೆ. ತನ್ನನ್ನು 'ತುಂಬಾ, ತುಂಬಾ ಪ್ರೀತಿಸುವ ಮತ್ತು ಅರ್ಥಮಾಡಿಕೊಳ್ಳುವ ಸದ್ಗುಣಿಯಾದ' ಪತಿ ಸೂರ್ಯನನ್ನೂ, ಹಾಸ್ಟೆಲಿನಲ್ಲಿದ್ದುಕೊಂಡು ಓದುತ್ತಿರುವ ಮಗಳನ್ನೂ ಏಕಾಏಕಿ ಮರೆತು ಮುಂದಿನ ಬದುಕನ್ನು ಪ್ರಿಯಕರನೊಂದಿಗೆ ಕಳೆಯುವುದೆಂದು ನಿಶ್ಚಯಿಸುತ್ತಾಳೆ. ಪತಿಗೆ ತನ್ನ ಪ್ರೇಮದ ವಿಷಯ ತಿಳಿಸಿಯೆ ಪ್ರಿಯಕರನೊಂದಿಗೆ ತೆರಳುವ ನಿರ್ಧಾರ ಮಾಡುತ್ತಾಳೆ. ಪತಿ ಹಲವು ಬಾರಿ ಸೂಚಿಸಿದರೂ, ಬೇಡವೆಂದು ವಿರೋಧಿಸಿದರೂ, ಬೇಡಿಕೊಂಡರೂ ಅವಳು ನಿಲ್ಲಲಾರಳು. ಕಂಪೆನಿ ಕೆಲಸದ ನಿಮಿತ್ತ ವಿದೇಶ ಪ್ರವಾಸದಲ್ಲಿರುವ ಪತಿಯ ಭೇಟಿಗಾಗಿ ಕಾಯುವ ತಾಳ್ಮೆಯೂ ಅವಳಿಗಿಲ್ಲ. ಇದುವರೆಗೂ ತನ್ನನ್ನು ಬಂಧಿಸಿಟ್ಟಿರುವ ಎಲ್ಲ ಸಂಬಂಧಗಳಿಂದಲೂ ಬಿಡುಗಡೆಯಾಗಿ ಹೊಸದೊಂದು ಆರಂಭವನ್ನು ಕಾಣಬಯಸುವ ವೈದೇಹಿ ದಾಂಪತ್ಯದ ಚೌಕಟ್ಟಿನಿಂದ ಹೊರಬಂದು ಗೆಳೆಯನನ್ನು ಸೇರುವ ದಿನವನ್ನು 'ತುಂಬಾ ಕಾಲದಿಂದ ಕತ್ತಲೆ ತುಂಬಿದ ಒಂದು ನೆಲಮಾಳಿಗೆಯಲ್ಲಿ ಸೆರೆಯಲ್ಲಿದ್ದ ಒಬ್ಬ ಖೈದಿ ಸೂರ್ಯನ ಬೆಳಕು ಕಂಡ ಹಾಗೆ' ಉನ್ಮೇಷದಿಂದ ಸಂಭ್ರಮಿಸುತ್ತ ಎದುರುಗೊಳ್ಳುತ್ತಾಳೆ. ಹೊಸಹರೆಯದ ಹೆಣ್ಣಿನಂತೆ ಪ್ರಿಯಕರನನ್ನು ಯಾವಾಗ ಸೇರುವೆನೊ ಎಂದು ತವಕಿಸುತ್ತಾಳೆ.

ಕೆ.ಪಿ. ಸುಧೀರಾ ಅವರು ಬರೆದ 'ಕಾವಲುಗಾರ' ಕತೆಯ ರಾಧಿಕಾ ಪ್ರೀತಿಸಿದವನನ್ನು ಬಿಟ್ಟು ಬೇರೆಯವನನ್ನು ಮದುವೆಯಾಗಬೇಕಾಗುತ್ತದೆ. ಆದರೆ ಎರಡು ಮಕ್ಕಳ ತಾಯಿಯಾದ ಬಳಿಕವೂ ಪತಿಯೊಂದಿಗೆ ಹೊಂದಿಕೊಳ್ಳಲಾಗದೆ ಹಳೆಯ ಪ್ರಿಯಕರನ ನೆನಪಲ್ಲೇ ಬದುಕುತ್ತಾಳೆ. ಗುಣಪಡಿಸಲಾಗದ ಕಾಯಿಲೆ ಬಂದು ಸಾವಿನ ಅಂಚಿನಲ್ಲಿ ಮಲಗಿದ್ದಾಗಲೂ ವನು ಬರೆಯುತ್ತಿದ್ದ ಸುಂದರವಾದ ಪತ್ರಗಳ ಆಹ್ಲಾದವನ್ನು ನೆನಪಿಸಿಕೊಳ್ಳುತ್ತಾಳೆ. 'ಆತ ಒಬ್ಬ ಬಡವನಾಗಿದ್ದ. ಆದರೆ ನನಗೆ ಆತ್ಮದ ಐಶ್ವರ್ಯವನ್ನು ಕೊಟ್ಟ. ನಾನು ಶ್ರೀಮಂತಳಾದೆ' ಮನದಲ್ಲಿ ಉಳಿಸಿಕೊಂಡ ಪ್ರೇಮದ ನೆನಪಿಗೆ ಅವಳ ಅಸೌಖ್ಯತೆಯನ್ನು ತಾತ್ಕಾಲಿಕವಾಗಿ ಮರೆಸುವ ಶಕ್ತಿಯಿದೆ. 'ನೀವು ನನ್ನನ್ನು ಸ್ವಲ್ಪವಾದರೂ ಪ್ರೀತಿಸಿದ್ದರೆ ನನಗೆ ಜೀವಿಸಬೇಕೆಂಬ ಆಸೆ ಇರುತ್ತಿತ್ತೇನೋ... ಒಂದು ಲೆಕ್ಕದಲ್ಲಿ ಆ ಪ್ರೀತಿರಾಹಿತ್ಯವು ಒಂದು ಅನುಗ್ರಹವಾಗಿ ಪರಿಣಮಿಸಿತೆಂದು ತೋರುತ್ತದೆ' (ಪು. ೭೩, ನೆರಳು ಮರಗಳಿಲ್ಲದ ದಾರಿ) ಬಲಾತ್ಕಾರವಾಗಿ ಪತಿಯೆಡೆಗೆ ಪ್ರೀತಿಯನ್ನು ಹುಟ್ಟಿಸಿಕೊಳ್ಳುವುದು ಅವಳಿಂದ ಸಾಧ್ಯವಾಗಿಲ್ಲ. 'ಭೂಮಿಯ ಮೇಲೆ ಯಾರೂ ಯಾರಿಗೂ ಆಧಾರವಾಗಲಾರರು. ಎಲ್ಲರೂ ಸ್ವಂತವಾಗಿ ನೆಲೆ ನಿಲ್ಲಲು

ಹೋರಾಡುತ್ತಾರೆ. ಪ್ರೀತಿಸುತ್ತೇವೆಂದು ನಂಬಿ ನಾವು ಒಂದು ಜೀವನವನ್ನು ಸುಳ್ಳಾಗಿಸುವುದು ಬೇಡ' (ಪು. ೭೭, ಅದೇ) ಎಂದು ಗಂಡನಿಗೆ ಸ್ಪಷ್ಟವಾಗಿ ಹೇಳುತ್ತಾಳೆ. ಅವಳ ಹಂಬಲಿಕೆಯ ತೀವ್ರತೆ ಮತ್ತು ಪ್ರಾಮಾಣಿಕತೆ ಎಷ್ಟಿದೆಯೆಂದರೆ, ಅವಳ ನೋವನ್ನು ಅರ್ಥಮಾಡಿಕೊಂಡು ಗಳಗಳನೆ ಅಳುವ ಪತಿಯೇ ಹೆಂಡತಿಯ ಕೊನೆಯಾಸೆಯನ್ನು ನೆರವೇರಿಸುವುದಕ್ಕಾಗಿ ಆ ಪ್ರೇಮಿಯನ್ನು ಹುಡುಕಲು ಹೊರಡುತ್ತಾನೆ. ಸಮಾಜವು ಸ್ತ್ರೀಯರಿಗೆ ವಿಧಿಸಿರುವ ಗರತಿತನದ ಮೌಲ್ಯವನ್ನು ರಾಧಿಕಾಳ ಪ್ರಜ್ಞೆ ನಿರಾಕರಿಸಿದೆ.

'ಒಂದು ಊರಿನ ಕಥೆ' ಕಾದಂಬರಿಯಲ್ಲಿ ಬರುವ ಗೌಳಿಗರ ಪೊನ್ನಮ್ಮ ಶೃಂಗಾರದ ಪುತ್ಥಳಿಯಂಥವಳು. ಎಮ್ಮೆ ಸಾಕುವ ಪೊನ್ನಮ್ಮ ಹಗಲಿನಲ್ಲಿ ಹಾಲು ಹೈನು ಮಾರುತ್ತಾಳೆ. ರಾತ್ರಿಗಳಲ್ಲಿ ತನ್ನ ಆಯ್ಕೆಯ ಪುರುಷರೊಂದಿಗೆ ಪ್ರಣಯದಾಟವಾಡುತ್ತಾಳೆ. ಕಾಮದ ಕಸುವಿನಲ್ಲಿ ಅಜೇಯಳೆನ್ನಿಸಿದ ಪೊನ್ನಮ್ಮ ವೇಶ್ಯೆಯಲ್ಲ. ಬಲಿಷ್ಠವಾದ ಗಂಡುಗಳನ್ನು ಮಾತ್ರ ಮೆಚ್ಚಿ ಕೂಡುವ ಪೊನ್ನಮ್ಮ 'ಹಣಕ್ಕಾಗಿ ಯಾರಿಗೇ ಆದರೂ ಸೆರಗು ಹಾಸಿದವಳಾಗಿರಲಿಲ್ಲ.' ಹಾಗಾಗಿ ಅವಳನ್ನು ಕೆಣಕುವ, ಚುಡಾಯಿಸುವ ಧೈರ್ಯ ಊರಿನ ಯಾವ ಗಂಡಸಿಗೂ ಇಲ್ಲ. ಒಂದು ರೀತಿಯಲ್ಲಿ ಅವಳ ಲೈಂಗಿಕ ಸಾಮರ್ಥ್ಯಕ್ಕೆ ಪುರುಷರೇ ಹೆದರಿಕೊಳ್ಳುತ್ತಿದ್ದರು. ಕೆಳವರ್ಗದ ಗಂಡಸರ ಕುರಿತಾಗಿ ವಿಶೇಷ ಆಸಕ್ತಿಯಿಲ್ಲದ, ಉನ್ನತ ಅಧಿಕಾರಿಗಳು, ಡಾಕ್ಟರುಗಳು ಮುಂತಾದ ಕುಲೀನ ಪುರುಷರ ಮುಂದೆ ತನ್ನ 'ಸಾಮರ್ಥ್ಯ ಪ್ರದರ್ಶನಕ್ಕೆ' ಸದಾ ಸಿದ್ಧಳಾಗಿರುತ್ತಿದ್ದ ಪೊನ್ನಮ್ಮನೆಂದರೆ 'ಹತ್ತು ಹೆಣ್ಣುಗಳ ಒಂದು ದಂಡು' ಎಂಬುದು ಕಿಟ್ಟನ್ ರೈಟರ್‌ನ ಅಭಿಪ್ರಾಯ. ಚಾತ್ತು ಕಂಪೌಂಡರ್‌ನ ಹುಟ್ಟುಹಬ್ಬದ ಔತಣದಲ್ಲಿ ಒಂದೇ ರಾತ್ರಿಯಲ್ಲಿ ಹದಿನಾಲ್ಕು ಅತಿಥಿಗಳನ್ನು 'ಸಂತುಷ್ಟಗೊಳಿಸಿದ' ಬಳಿಕವೂ ಸ್ವಲ್ಪವೂ ಆಯಾಸ ತೋರದೆ 'ಇನ್ನೂ ಜನಾ ಬರೋವ್ರು ಇದಾರಾ?' ಎಂದು ಬೀದಿಗೆ ಕೇಳಿಸುವಂತೆ ಕೂಗಿ ಕೇಳಿದ ಗಟ್ಟಿಗಿತ್ತಿ ಅವಳು. ಗಂಡಸರಿಗೆ ಮಾತ್ರ ಮೀಸಲು ಎಂಬಂತೆ ಗ್ರಹಿಸಲಾಗಿರುವ ಲೈಂಗಿಕ ಸಾಮರ್ಥ್ಯಕ್ಕೆ ಸವಾಲಾಗುವಂಥ ಒಂದು ಅಪರೂಪದ ಸ್ತ್ರೀಮಾದರಿಯಾಗಿರುವ ಪೊನ್ನಮ್ಮ ಸಂಪ್ರದಾಯವು ಸ್ತ್ರೀಯರಿಗೆ ಮಾತ್ರ ವಿಧಿಸಿದ ಲೈಂಗಿಕ ನೀತಿಯ ಗೆರೆಗಳನ್ನು ಮೀರಿ ಕಾಮದ ಸಮೃದ್ಧ ಸುಖದ ಅನುಭವ ಪಡೆದವಳು. ಸ್ತ್ರೀಯರ ಲೈಂಗಿಕ ಬಯಕೆ ಮತ್ತು ತೃಪ್ತಿಯ ನೆಲೆಗಳ ಬಗ್ಗೆ ಆಲೋಚನೆಗೆ ಹಚ್ಚುವ ಪಾತ್ರವಾಗಿ ಪೊನ್ನಮ್ಮಳನ್ನು ಗುರುತಿಸಬಹುದು.

ಗ್ರೇಸಿ ಅವರು ಬರೆದ 'ಪಾಂಚಾಲಿ' ಎಂಬ ಕತೆ ಹೆಣ್ಣಿನ ಲೈಂಗಿಕ ಶಕ್ತಿಯು ಗಂಡಿಗಿಂತಲೂ ಹೆಚ್ಚಾಗಿರುತ್ತದೆ ಎಂಬುದನ್ನು ಪ್ರತಿಪಾದಿಸುತ್ತದೆ. ಐವರು ಪತಿಯರೊಂದಿಗೆ ದಾಪತ್ಯ ನಡೆಸಬೇಕಾಗಿ ಬಂದ ಪುರಾಣದ ದ್ರೌಪದಿಯನ್ನು ಆಧುನಿಕ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ ಹೊಸ ದೃಷ್ಟಿಯನ್ನು ಒದಗಿಸುತ್ತದೆ. ಐವರು ಪತಿಯರಿದ್ದೂ ಅಸಹಾಯಕಿಯಾಗಿರುವ ಮಹಾಭಾರತದ ಪಾಂಚಾಲಿ ತನ್ನ ರಕ್ಷಣೆಗಾಗಿ ಆರನೆಯವನೊಬ್ಬನ ಕಡೆಗೆ ಕೈಚಾಚುವ ಪ್ರಕರಣದ ವ್ಯಂಗ್ಯವನ್ನು

ನೆನಪಿಸುತ್ತದೆ. ವಿಕ್ಷಿಪ್ತ ಮನಸ್ಸಿನ ಪತಿಯಾಗಿರುವ ಫಲ್ಗುಣ ತನ್ನ ಮದುವೆಯ ನಂತರದ ಐದು ರಾತ್ರಿಗಳಲ್ಲಿ, ಐವರು ಪಾಂಡವರ ಚೈತನ್ಯವನ್ನು ತನ್ನಲ್ಲಿ ಆವಾಹಿಸಿಕೊಂಡು ಪ್ರತಿರಾತ್ರಿಯೂ ಮೊದಲ ರಾತ್ರಿಯೆಂಬಂತೆ ತನ್ನ ನೂತನ ವಧು ಕೃಷ್ಣಾಳನ್ನು ಕೂಡುತ್ತಾನೆ. ಈ ಐವರ ಸಾಂಗತ್ಯದಲ್ಲೂ ತೃಪ್ತಳಾಗದ ಕೃಷ್ಣೆಯಾದರೋ ಆರನೆಯ ದಿನ ಪತಿ ಕೆಲಸಕ್ಕೆ ಹೋಗಿದ್ದ ಹೊತ್ತಿನಲ್ಲಿ ಅಜ್ಞಾತನಾದ ಆರನೆಯವನೊಬ್ಬನ ಕಲ್ಪನೆಯಲ್ಲಿ ಕರಗುತ್ತಾಳೆ. ಅವನು ಕಛೇರಿಯಿಂದ ಮರಳಿ ಬಂದು ಮಲಗುವ ಕೋಣೆಯ ಬಾಗಿಲು ಬಡಿದು ತೆರೆಯಿಸಿದಾಗ 'ಅವಳ ಕೆದರಿದ ಕೂದಲು, ಬೆವೆತ ಕೆನ್ನೆ' ಬೇರೇನನ್ನೋ ಸೂಚಿಸುತ್ತವೆ. 'ಒಳಗೆ ಯಾರಿದ್ದಾರೆ?' ಎಂಬ ಪತಿಯ ಆತಂಕದ ಪ್ರಶ್ನೆಗೆ 'ಪಾಂಚಾಲಿಗೆ ಐವರು ಗಂಡಂದಿರು ಸರಿ. ಆದರೆ ಆಪತ್ಕಾಲದಲ್ಲಿ ಅವರಾರೂ ಒದಗಲಿಲ್ಲ. ಆದ್ದರಿಂದ ಮತ್ತೊಬ್ಬ ಬೇಕಾದ!' ಎಂದವಳು ಉತ್ತರಿಸುತ್ತಾಳೆ. ಮದುವೆಗೆ ಮುನ್ನ ನೆರೆಮನೆಗೆ ಬಾಡಿಗೆಗೆ ಬಂದ ಐವರು ತರುಣರೊಂದಿಗಿನ ಪ್ರೇಮ ಪ್ರಕರಣಗಳನ್ನು ಏಕಕಾಲದಲ್ಲಿ ನಿಭಾಯಿಸಿದ್ದ ಈ ಹೆಣ್ಣುಮಗಳು ಅದೇ ಜಾಣ್ಮೆಯಿಂದ ಆರನೆಯ ಸಂಬಂಧವನ್ನೂ ನಿಭಾಯಿಸುತ್ತಾಳೆ. ಗಂಡು ಯಾವುದೇ ಅಪರಾಧೀ ಪ್ರಜ್ಞೆಯಿಲ್ಲದೆ ಅನೇಕ ಸ್ತ್ರೀಯರೊಂದಿಗೆ ಲೈಂಗಿಕ ಸಂಬಂಧವನ್ನು ಹೊಂದಿರಬಹುದಾದರೆ ಹೆಣ್ಣು ಯಾಕೆ ಅಂಥ ಸಂಬಂಧವನ್ನು ಹೊಂದಿರಬಾರದು ಎಂಬೊಂದು ಮೂಲಭೂತವಾದ ಪ್ರಶ್ನೆಯನ್ನು ಲೇಖಕಿ ಎತ್ತಿದ್ದಾರೆ.

ಕಮಲಾದಾಸ್ ಅವರು ಬರೆದಿರುವ 'ಹದ್ದುಗಳು' ಎಂಬ ಕತೆಯ ಮಧ್ಯವಯಸ್ಕೆ ಇಂದಿರಾ ಸುಂದರಿಯೂ, ಶ್ರೀಮಂತೆಯೂ ಆಗಿರುವ ಲೇಖಕಿ. ಸಮಾಜದಲ್ಲಿ ಒಳ್ಳೆಯ ಹೆಸರು, ಸ್ಥಾನಮಾನ ಹಾಗೂ ಬಹುಮಂದಿ ಅಭಿಮಾನಿಗಳನ್ನು ಹೊಂದಿರುವವಳು. ಆದರೆ ಅವಳು ಸದಾ ದುಃಖಿ. ಶುದ್ಧ ಪ್ರೀತಿಗಾಗಿ ಹಂಬಲಿಸುತ್ತಾಳೆ. ತಲೆದಿಂಬು, ಕನ್ನಡಿ, ಮಗಳು ಎಲ್ಲರಲ್ಲೂ ಪ್ರೀತಿಗಾಗಿ ಗೋಗರೆಯುತ್ತಾಳೆ. ಇಂಥವಳಿಗೆ ತನ್ನ ಅಭಿಮಾನಿಯಾಗಿ ಪರಿಚಯವಾಗುವವನು ವಿದೇಶೀಯನಾದ ಗುಲ್ಬಿಯಾನೊ. ಪಿಯಾನೊ ನುಡಿಸುತ್ತ ಮಧುರ ಮಾತನಾಡುವ ಗುಲ್ಬಿಯಾನೊಗೆ ಹೆಂಡತಿ ಹಾಗೂ ಮೂವರು ಮಕ್ಕಳಿರುವುದು ತಿಳಿದೂ ಇಂದಿರಾ ಅವನನ್ನು ಪ್ರೇಮಿಸುತ್ತಾಳೆ. ಇಂದಿರಾಳ ಹದಿಹರೆಯದ ಮಗಳಿಗೆ ಅಮ್ಮನ ಬದುಕಿನ ಕ್ರಮದ ಬಗ್ಗೆ ದ್ವೇಷವಿದೆ. ಕಳೆದುಕೊಂಡ ಅಪ್ಪನ ಕುರಿತಾಗಿ ವ್ಯಾಮೋಹವಿದೆ. ಗುಲ್ಬಿಯಾನೊ ಮತ್ತು ಅಮ್ಮನ ನಡುವಿನ ಸಂಬಂಧವನ್ನು ಸದಾ ಸಂಶಯಿಸುತ್ತಿದ್ದ ಮಗಳು ಅಮ್ಮನನ್ನು ನೋಯಿಸುವುದಕ್ಕಾಗಿ ಗುಲ್ಬಿಯಾನೊ ಜತೆ ಲೈಂಗಿಕ ಸಂಪರ್ಕ ಬೆಳೆಸಿ, ಗರ್ಭಿಣಿಯಾಗುತ್ತಾಳೆ. ಮಗಳು ತನ್ನ ಮೇಲಿನ ದ್ವೇಷದಿಂದಾಗಿ ಎಸಗಿದ ಕೃತ್ಯದಿಂದ ಉಂಟಾದ ಆಘಾತವನ್ನು ತಾಳಿಕೊಳ್ಳಲಾರದೆ ಇಂದಿರಾ ಸಾಯುತ್ತಾಳೆ.

ಗಾಢಪ್ರೀತಿಯ ಹುಡುಕಾಟದಲ್ಲಿರುವ ಮಗಳಿಗೆ ಅಮ್ಮನನ್ನು ಸಾಯಿಸುವ ಉದ್ದೇಶವಿರಲಿಲ್ಲ. ಅಮ್ಮನ ಪ್ರೇಮಿಯನ್ನು ತನ್ನವನಾಗಿಸಿಕೊಳ್ಳುವ ಮೂಲಕ ಅಮ್ಮನ ಮೇಲೆ ಸೇಡು ತೀರಿಸಿಕೊಳ್ಳಬಯಸಿದ್ದಳು ಅಷ್ಟೇ. ಅಮ್ಮ ಅಪ್ಪನಿಗೆ ವಿಚ್ಛೇದನವಿತ್ತ ಕಾರಣ ತಾನು ಅಪ್ಪನ ಪ್ರೀತಿಯಿಂದ ವಂಚಿತಳಾದೆ ಎಂಬುದು ಮಗಳ ಪ್ರಜ್ಞೆಯಲ್ಲಿ ಸುಪ್ತವಾಗಿದ್ದ ಸಿಟ್ಟಿಗೆ ಮೂಲಕಾರಣ. ಪಶ್ಚಾತ್ ಪರಿಣಾಮಗಳ ಕಲ್ಪನೆಯಿಲ್ಲದ ದುಡುಕಿನಿಂದ ಅಮ್ಮನನ್ನು ಕಳೆದುಕೊಂಡುದಲ್ಲದೆ ಗುಲ್ಬಿಯಾನೊನಿಂದಲೂ ತಿರಸ್ಕೃತಳಾಗಿ ಒಂಟಿಯಾಗುತ್ತಾಳೆ. ಈ ಕತೆಯು ಆಧುನಿಕ ಶಿಕ್ಷಣ ಪಡೆದು ಸ್ವತಂತ್ರ ಚಿಂತನೆಯುಳ್ಳವರಾಗಿರುವ ಇಂದಿರಾ ಮತ್ತು ಅವಳ ಮಗಳು ಇಬ್ಬರೂ ಪರಿಸ್ಥಿತಿಯ ಬಲಿಪಶುಗಳಾಗಿರುವುದನ್ನು ಗುರುತಿಸಿದೆ. ತಮಗೆ ನಿಜವಾಗಿಯೂ ಬೇಕಾಗಿರುವುದೇನು ಎಂಬುದು ಇಬ್ಬರಿಗೂ ಸ್ಪಷ್ಟವಿಲ್ಲ. ಕವಯಿತ್ರಿಯಾಗಿ ಸಮಾಜದ ಆದರ ಪಡೆದಿದ್ದ ತಾಯಿ ಮತ್ತು ಅಮ್ಮನ ಆಸ್ತಿಯ ಏಕೈಕ ಉತ್ತರಾಧಿಕಾರಿಣಿಯಾಗಿರುವ ಮಗಳು ಇಬ್ಬರಿಗೂ ಸುಖವಾಗಿ ಬದುಕುವ ಅವಕಾಶ ಲಭ್ಯವಿತ್ತು. ಪ್ರತೀಕಾರದ ಭ್ರಮೆಯಲ್ಲಿ ಬದುಕಿನ ನೆಮ್ಮದಿಯನ್ನು ಕಳೆದುಕೊಂಡಿದ್ದಾರೆ. ಗಂಡಿಗೊಂದು ನೀತಿ ಹೆಣ್ಣಿಗೊಂದು ನೀತಿ ಎಂಬಂತಿರುವ ಅಸಮಾನ ಲೈಂಗಿಕ ವ್ಯಾಖ್ಯೆಗಳು ಇಬ್ಬರ ಬದುಕನ್ನೂ ನಾಶಮಾಡಿವೆ. ವಿಷಯ ಲೋಲುಪತೆಯಲ್ಲಿ ಸುಖವನ್ನು ಹುಡುಕುತ್ತ ಭಾವನಾತ್ಮಕ ಮೌಲ್ಯಗಳನ್ನು ಮರೆತ ತಾಯಿ ಮತ್ತು ಅಮ್ಮನ ನೈತಿಕ ಅಧಃಪತನವನ್ನು ದ್ವೇಷಿಸಿ ಅದಕ್ಕಿಂತಲೂ ಕೆಳಮಟ್ಟಕ್ಕೆ ಇಳಿದ ಮಗಳು ಇಬ್ಬರೂ ತಮ್ಮ ಸ್ವಂತ ತೃಪ್ತಿಯ ಶೋಧದಲ್ಲಿ ತಪ್ಪುದಾರಿ ಹಿಡಿದಿದ್ದಾರೆ.

ಕಮಲಾದಾಸ್ ಅವರು ಬರೆದ 'ಮಾಹಿಮ್‌ನ ಮನೆ' ಎಂಬ ಕತೆಯ ನಾಯಕಿ ವಿದ್ಯಾವಂತೆ. ಸ್ವತಂತ್ರ ವಿಚಾರಧಾರೆಯುಳ್ಳವಳು. ಮೂರು ವರ್ಷಗಳ ಹಿಂದೆ 'ಒಂದು ಕನಸಿನಲ್ಲಿ ನಡೆದಂತೆ' ಅವಳ ಮದುವೆಯಾಗಿದೆ. ಪತಿ ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದೇಶದಲ್ಲಿರುವುದರಿಂದ ಅವಳಿನ್ನೂ ತವರಿನಲ್ಲೇ ಇದ್ದಾಳೆ. 'ತಿಂಗಳಿಗೊಮ್ಮೆ ಬರುವ ನೀಲಿ ಲಕೋಟೆ, ಅದರಲ್ಲಿರುವ ಸ್ವಲ್ಪವೂ ಕವಿತ್ವವಿಲ್ಲದ ಪತ್ರ ಮತ್ತು ಮಲಗುವ ಕೋಣೆಯ ಮೇಜಿನ ಮೇಲಿರುವ ಆತನ ಪುಟ್ಟ ಫೋಟೊ' ಮುಂತಾದುವನ್ನು ಕಾಣುವಾಗ ಮಾತ್ರ ಅವಳು 'ತನಗೆ ಮದುವೆಯಾಗಿದೆ' ಎಂದು ಜ್ಞಾಪಿಸಿಕೊಳ್ಳುತ್ತಾಳೆ. ಮದುವೆಯಾಗದೆ ಇರುವ ಗೆಳತಿಯರಂತೆ 'ಕನಸುಗಳನ್ನು ಹೆಣೆಯುತ್ತಾ, ಸುಂದರ ಯುವಕರನ್ನು ಕಂಡಾಗ ಹಾಸ್ಯ ಮಾಡಿ ನಗುತ್ತಾ ನಲಿಯಲು' ತನಗೆ ಸಾಧ್ಯವಿಲ್ಲವಾಗಿರುವ ಬಗ್ಗೆ ಅಸಹನೆಗೊಳ್ಳುತ್ತಾಳೆ. 'ಮದುವೆಯೆಂದರೆ ಹೆತ್ತವರು ಅಚ್ಚು ಹಾಕಿಸಿ ಕಳುಹಿಸುವ ಆಹ್ವಾನ ಪತ್ರಿಕೆಯೆ? ಒಂದು ದೀಪ ಮತ್ತು ಒಂದು ಪರ ಭತ್ತದ ಸುತ್ತಲೂ ಹಾಕುವ ಪ್ರದಕ್ಷಿಣೆಯೆ? ಒಂದು ಚುಂಬನದ ನೆನಪೆ?' ಎಂದೆಲ್ಲ ಯೋಚಿಸಿ ವಿಚಲಿತಳಾಗುತ್ತಾಳೆ. ವಿದೇಶದಿಂದ ಗಂಡ ಬರುವುದಕ್ಕೆ ಇನ್ನು ಒಂದೇ ತಿಂಗಳಿದೆ ಎನ್ನುವಾಗ 'ಕೊನೆಯ ಮಕ್ಕಳಾಟ' ಎಂದುಕೊಂಡು ತಾನು ದಿನಾ ನೋಡುವ ಗುಡಿಸಲ ಯುವಕನೊಬ್ಬನ ಪ್ರೀತಿಯಲ್ಲಿ ಸಿಕ್ಕಿಬೀಳುತ್ತಾಳೆ.

ಕೇವಲ 'ಏಕಾಂತ ಮತ್ತು ಏಕತಾನತೆಗಳನ್ನು ಕಳೆಯುವುದಕ್ಕಾಗಿ' ತನ್ನ ಮನೆಯ ಎದುರಿನ ಕಳ್ಳಭಟ್ಟಿ ತಯಾರಕನಾದ ರಾಜ ಎಂಬವನನ್ನು ಪ್ರೇಮಿಸುವ ಯುವತಿ, ದಿನವೂ ರಾಜನ ಹೆಂಡತಿ ದರ್ಜಿ ಕೆಲಸಕ್ಕಾಗಿ ಹೊರಗೆ ಹೋಗುವ ಹೊತ್ತು ಸಾಧಿಸಿ ಅವನನ್ನು ಭೇಟಿಯಾಗುತ್ತಾಳೆ. ರಾಜನ ಪತ್ನಿಯ ಅನುಮಾನದ ನೋಟದ ನಡುವೆಯೂ, ಸೋಮಾರಿಯೂ, ದಟ್ಟದರಿದ್ರನೂ, ಅವಿದ್ಯಾವಂತನೂ, ಶುಚಿ ಇಲ್ಲದವನೂ, ನಾಲ್ಕು ಮಕ್ಕಳ ತಂದೆಯೂ ಆದ ರಾಜನನ್ನು ಪ್ರೀತಿಸುವುದನ್ನು ನಿಲ್ಲಿಸಿಬಿಡುವುದು ಅವಳಿಂದ ಸಾಧ್ಯವಾಗುವುದಿಲ್ಲ. ಎರಡೇ ದಿನದಲ್ಲಿ ಪತಿ ವಿದೇಶದಿಂದ ಬರುವವನಿದ್ದಾನೆಂಬುದು ತಿಳಿದಾಗಲೂ ಅವಳಿಗೆ ಪತಿಯನ್ನು ಕಾಣುವ ಉತ್ಕಂಠೆಯಿಲ್ಲ. ಅವಳ ಅಪ್ಪನಿಗೆ ಅಳಿಯನನ್ನು ವಿದೇಶಕ್ಕೆ ಕಳುಹಿಸಿ ಓದಿಸುವ ಸಾಮರ್ಥ್ಯವಿದ್ದ ಕಾರಣಕ್ಕೆ ಅವಳ ಮದುವೆಯಾಗಿದೆ. ಹಾಗಾಗಿ ಕೇವಲ ವ್ಯಾವಹಾರಿಕ ದೃಷ್ಟಿಯಿಂದ ನಡೆದ ಈ ಮದುವೆಯ ಹಿಂದೆ ಪ್ರೀತಿಯ ಉದ್ದೇಶವಿಲ್ಲ, ಮುಂದಕ್ಕೆ ಅದು ಪ್ರೀತಿಯಾಗಿ ಬದಲಾಗುವ ಸಾಧ್ಯತೆಯೂ ಇಲ್ಲ ಎಂಬುದು ಈ ಯುವತಿಯ ಭಾವನೆಯಾಗಿದೆ. 'ಪ್ರೀತಿ ಯೋಚಿಸಿ ಆಗುವುದಲ್ಲವಲ್ಲ. ಪ್ರೀತಿ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಿಂದ ಹುಟ್ಟುತ್ತದೆ' ಎಂದವಳು ನಂಬಿದ್ದಾಳೆ. ವಿದೇಶದಲ್ಲಿ ಓದಲು ಬೇಕಾದ ಹಣಕ್ಕಾಗಿಯೆ ತನ್ನ ಪತಿ ತನ್ನನ್ನು ಮದುವೆಯಾಗಿರುವುದು ಅವಳಿಗೆ ತಿಳಿದಿರುವುದರಿಂದ ಅವನು ಪ್ರತಿ ತಿಂಗಳೂ ಬರೆಯುವ ಕವಿತ್ವವಿಲ್ಲದ ಪತ್ರದ ಹೊಸತನವಿಲ್ಲದ ನುಡಿಗಳು ಅವಳಲ್ಲಿ ಮಧುರ ಭಾವವನ್ನು ಹೊಮ್ಮಿಸಲು ಶಕ್ತವಾಗಿಲ್ಲ. ತನ್ನ ಅಂತಸ್ತು, ವಿದ್ಯೆ, ಅರ್ಹತೆಗಳಿಗೆ ಯಾವ ರೀತಿಯಲ್ಲೂ ಸಮಾನನಲ್ಲದ ಯಾವನೋ ಒಬ್ಬ ಅಪರಿಚಿತನನ್ನು ಪ್ರೇಮಿಸುವ ಮೂಲಕ, ತನ್ನ ಬದುಕಿನಲ್ಲಿ ನಡೆದ 'ಮದುವೆ' ಎಂಬ ಔಪಚಾರಿಕವಾದ ಸಂಬಂಧದ ಕುರಿತಾದ ಅತೃಪ್ತಿ, ಅಸಹನೆಗಳನ್ನು ಪ್ರಕಟಿಸಿ ತನ್ನ ಮನಸ್ಸಿನ ತಳಮಳವನ್ನು ಶಾಂತಪಡಿಸಿಕೊಳ್ಳುತ್ತಾಳೆ.

ಕೆ.ಆರ್. ಮೀರಾ ಅವರು ಬರೆದಿರುವ 'ಮಾಲು ಮಾರಾಟಕ್ಕಿದೆ' ಒಂದು ವಿಶಿಷ್ಟವಾದ ಕತೆ. ಈ ಕತೆಯಲ್ಲಿ ಪತಿಯ ಪ್ರೇಮವನ್ನು ಬಯಸಿ ನಿರಾಶಳಾಗಿರುವ ಸುಕನ್ಯಾ 'ಮೋಸಹೋದ ಸ್ತ್ರೀಯರು ಒಂದೋ ಸ್ತ್ರೀವಾದಿಗಳಾಗುತ್ತಾರೆ, ಇಲ್ಲ ವ್ಯಭಿಚಾರಿಯಾಗುತ್ತಾರೆ, ಇಲ್ಲ ಸನ್ಯಾಸಿನಿಯಾಗುತ್ತಾರೆ' ಎಂದು ಯೋಚಿಸುತ್ತಾಳೆ. ಮಾತಿಲ್ಲದೆ ಸೆಕ್ಸ್‌ನಲ್ಲಿ ತೊಡಗುವ ಮೂಲಕ ತನ್ನನ್ನು ಉಪೇಕ್ಷಿಸುತ್ತಿರುವ ಗಂಡನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿಯೆ ವ್ಯಭಿಚಾರಿಯಾಗಲು ಬಯಸುತ್ತಾಳೆ. ಸಿಂಗರಿಸಿಕೊಂಡು ಕಾರು ಹತ್ತಿ ಮಕ್ಕಳ ಶಾಲೆಗೆ ತೆರಳಿ ಮಧ್ಯಾಹ್ನದ ಊಟ ಮಾಡಿಸಿದ ನಂತರ ಬಸ್ ನಿಲ್ದಾಣಕ್ಕೆ ತೆರಳಿ ತನ್ನ ವ್ಯಭಿಚಾರಕ್ಕೆ ಹೊಂದುವ ಗಂಡಸರನ್ನು ಹುಡುಕುತ್ತಾಳೆ. ಉತ್ತಮ ನೌಕರಿಯಿರುವ ಗಂಡ, ಎರಡು ಮಕ್ಕಳು, ಮನೆ, ಕಾರು ಎಲ್ಲ ಹೊಂದಿರುವ ಸುಕನ್ಯಾ ಸಮಾಜದ ವ್ಯಾಖ್ಯಾನದಂತೆ ಸುಖೀ ಗೃಹಿಣಿ. ಆದರೆ ತನಗೆ ಲಭ್ಯವಾಗಿರುವ 'ಸುಖೀ ಕುಟುಂಬ'ದ ಗೆರೆಗಳನ್ನು ದಾಟಿ ಆತ್ಮತೃಪ್ತಿಯನ್ನು

ಕಂಡುಕೊಳ್ಳಲು ಬಯಸಿದ್ದಾಳೆ. ಸ್ತ್ರೀಯರು ಕುಟುಂಬದ ಹೊರಗೆ ನೆಮ್ಮದಿಯನ್ನು ಹುಡುಕುವುದಕ್ಕೆ ಕೌಟುಂಬಿಕ ಅಶಾಂತಿ ಮತ್ತು ಅತೃಪ್ತಿಗಳೆ ಪ್ರಧಾನ ಕಾರಣವಾಗಿರುವುದನ್ನು ಈ ಕತೆ ವಿಶ್ಲೇಷಿಸುತ್ತದೆ.

ಚಂದ್ರಮತಿ ಅವರು ಬರೆದ 'ಪ್ರಣಯ ಸಂಶಯಗಳು' ಕತೆಯಲ್ಲೂ ಇಂಥದೊಂದು ಪ್ರಶ್ನೆಯಿದೆ. ಹೈಸ್ಕೂಲಿನಲ್ಲಿ ಓದುತ್ತಿರುವ ಹದಿಹರೆಯದ ಹುಡುಗಿ ಕ್ಲೇರ್ ಆಂಜೆಲಾ ಮೇರಿ ವಿಲಿಯಮ್ಸ್‌ಳನ್ನು 'ಏಕಕಾಲದಲ್ಲಿ ಹಲವರನ್ನು ಪ್ರೇಮಿಸುವುದು ತಪ್ಪೇ' ಎಂಬಂಥ ಪ್ರಶ್ನೆ ಕಾಡುತ್ತದೆ. ಚೆಲುವೆಯಾದ ಆಂಜೆಲಾ ಏಕಕಾಲದಲ್ಲಿ ಹಲವರನ್ನು ಇಷ್ಟಪಡುತ್ತಾಳೆ ಮತ್ತು ಪರಸ್ಪರರಿಗೆ ತಿಳಿಯದಂತೆ ಅವರೊಂದಿಗೆ ಪ್ರೇಮಸಲ್ಲಾಪವನ್ನು ಮುಂದುವರಿಸಲು ಬಯಸುತ್ತಾಳೆ. ಒಬ್ಬ ಪುರುಷನಿಗೆ ಮಾತ್ರ ಸೀಮಿತವಾಗುವುದು ಅವಳಿಗೆ ಇಷ್ಟವಿಲ್ಲ. ಪುರುಷನು ಒಂದಕ್ಕಿಂತ ಹೆಚ್ಚು ಸಂಖ್ಯೆಯ ಪ್ರೇಯಸಿಯರನ್ನು, ಪತ್ನಿಯರನ್ನು ಹೊಂದಿರಬಹುದಾದ ವ್ಯವಸ್ಥೆಯಲ್ಲಿ ಸ್ತ್ರೀಯರೂ ಅಂಥ ಅವಕಾಶಗಳನ್ನು ಬಯಸುವುದು ಸಹಜವಾಗಿದೆ.

ಕೆ.ಆರ್. ಮೀರಾ ಅವರು ಬರೆದ 'ಸರ್ಪಯಜ್ಞ' ಕತೆಯ ಗೃಹಿಣಿ ತನ್ನ ಹೊಸಮನೆಯಲ್ಲಿ ಸೇರಿಕೊಂಡು ಸದಾ ತನ್ನನ್ನೇ ಗಮನಿಸುತ್ತಿರುವ ಹಾವನ್ನು ಪ್ರೇಮಿಸುತ್ತಾಳೆ. ಕುಡಿದು ಬರುವ ಗಂಡನ ಒರಟು ಮಾತು, ಲೋಭಿ ಸ್ವಭಾವ ಮತ್ತು ಪ್ರೀತಿಯಿಲ್ಲದ ಸ್ಪರ್ಶಗಳನ್ನು ಅಸಹ್ಯಿಸಿಕೊಳ್ಳುತ್ತಾಳೆ. ಬದಲಿಗೆ ತನ್ನ ಮೇಲೆ ಸಹಾನುಭೂತಿಯುಳ್ಳ ಹಾವಿನ ಸಹವಾಸ ಮತ್ತು ಸ್ಪರ್ಶಗಳನ್ನು ಇಷ್ಟಪಡುತ್ತ ಪುಲಕಗೊಳ್ಳುತ್ತಾಳೆ. ಎಲ್ಲರೂ ಹೆದರುವ, ವಿಷಪೂರಿತವಾದ ಹಾವಿನ ಸಾಹಚರ್ಯದಲ್ಲಿ ತನ್ನ ಮಾನಸಿಕ ಒಂಟಿತನವನ್ನು ತುಂಬಿಕೊಳ್ಳಲು ಯತ್ನಿಸುತ್ತಾಳೆ. ಅವಳನ್ನು ಕಾಡುವ ಪತಿಯ ಸ್ನೇಹಿತನನ್ನು ಕಚ್ಚಿ ಸಾಯಿಸಿಬಿಡುವ ಮೂಲಕ ಅವಳಿಗೆ ಸಹಾಯಮಾಡುವ ಹಾವು ಕ್ರಮೇಣ ಅವಳ ಪ್ರೇಮಕ್ಕೆ ಪಾತ್ರವಾಗುತ್ತದೆ. ಮೇಲ್ನೋಟಕ್ಕೆ ಕತೆಯ ವಸ್ತು ಅವಾಸ್ತವವೆನಿಸಿದರೂ ಪತಿಯ ಸ್ವಭಾವ, ವರ್ತನೆಗಳ ಬಗ್ಗೆ ಅತೃಪ್ತಿಯುಳ್ಳ ಹೆಣ್ಣೊಬ್ಬಳ ಸಾಂಗತ್ಯದ ಬಯಕೆ ಮತ್ತು ಅವಳು ಕಂಡುಕೊಳ್ಳುವ ಪರ್ಯಾಯಗಳ ಬಗ್ಗೆ ಗಮನ ಸೆಳೆಯುತ್ತದೆ.

ಮಲಯಾಳಂ ಕಥನಗಳ ಭಾಷಾಲೋಕದ ವಿನ್ಯಾಸಗಳ ಬಗೆಗೆ, ಸ್ತ್ರೀಯರ ತೃಪ್ತಿಯ ನೆಲೆಗಳ ಸಂಕೀರ್ಣತೆ ಮತ್ತು ಸ್ತ್ರೀಪ್ರತಿರೋಧದ ವಿಶಿಷ್ಟ ಸ್ವರೂಪದ ಕುರಿತಾಗಿ ಪ್ರತ್ಯೇಕ ಅಧ್ಯಯನವನ್ನು ಕೈಗೊಳ್ಳಲು ಅವಕಾಶವಿದೆ. ಆಯ್ದ ಕೃತಿಗಳ ವಿಶ್ಲೇಷಣೆಯ ಮೂಲಕ ಮಲಯಾಳಂ ಕಥನಸಾಹಿತ್ಯವು ಪ್ರತಿಬಿಂಬಿಸುವ ಸ್ತ್ರೀಲೋಕದ ಲೈಂಗಿಕ ನೆಲೆಯನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ:

- ಆಧುನಿಕತೆಯು ಸ್ತ್ರೀಯರ ಲೈಂಗಿಕ ಗ್ರಹಿಕೆಗಳನ್ನು ಬದಲಾಯಿಸಿದೆ. ಅವರ ಮಾತು ಮತ್ತು ಕೃತಿಗಳಲ್ಲಿ ಮಡಿವಂತಿಕೆ ಕಡಿಮೆಯಾಗಿದೆ. ಸದಾಚಾರದ ವ್ಯಾಖ್ಯೆಯನ್ನು ಪ್ರಶ್ನಿಸುವ ಮತ್ತು ನಿರಾಕರಿಸುವ ಪ್ರಯತ್ನಗಳನ್ನು ಸ್ತ್ರೀಯರು ಮಾಡಿದ್ದಾರೆ.
- ಸ್ತ್ರೀಯರು ಅಬಲೆಯರೆಂದು ಆರೋಪಿಸಿ ವಿಧಿಸಲಾಗಿರುವ ನಿರ್ಬಂಧಗಳು ಅವರ ಸಹಜ ಬೆಳವಣಿಗೆಯನ್ನು ತಡೆದಿವೆ.
- ಹೆಣ್ಣಿನ ಚೆಲುವು ಆಕೆಯನ್ನು ಮಾರುಕಟ್ಟೆಯ ಸರಕಾಗಿಸಿ ಕೇವಲ ಲಾಭದ ವಸ್ತುವಾಗಿ, ವಿನಿಮಯದ ಸಾಧನವಾಗಿ ಬಳಕೆಯಾಗಲು ಕಾರಣವಾಗಿದೆ.
- ಸ್ತ್ರೀಯ ಮೇಲೆ ನಡೆಯುವ ಕಿರುಕುಳ, ಹಿಂಸೆಗಳಿಗೆ ಕಾಲ, ದೇಶ, ವಯಸ್ಸುಗಳ ವ್ಯತ್ಯಾಸವಿಲ್ಲ. ಪುರುಷರು ಸುಲಭದಲ್ಲಿ ಅನುಭವಿಸಬಹುದಾದ ಒಂದು ದೇಹವನ್ನು ಹೊಂದಿರುವ ಕಾರಣಕ್ಕೆ ಸ್ತ್ರೀಯರು ನಿರಂತರ ಆಕ್ರಮಣಕ್ಕೆ ಒಳಗಾಗಿದ್ದಾರೆ.
- ಮದುವೆಗೆ ಮುನ್ನವೇ ಲೈಂಗಿಕ ಅನುಭವ ಹೊಂದಿರುವುದು, ಒಂದಕ್ಕಿಂತ ಹೆಚ್ಚು ಸ್ತ್ರೀಯರೊಡನೆ ಲೈಂಗಿಕ ಸಂಬಂಧ ಹೊಂದಿರುವುದು... ಮುಂತಾದವು ಪುರುಷರ ಮಟ್ಟಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿದ್ದರೆ ಸ್ತ್ರೀಯರ ಚಾರಿತ್ರ್ಯವನ್ನು ಅನುಮಾನಿಸುವ ಸಂಗತಿಗಳಾಗಿವೆ.
- ಸ್ತ್ರೀಯರ ನಡುವಿನ ಲೈಂಗಿಕ ಆಕರ್ಷಣೆಯನ್ನು ನಿರ್ವಚಿಸುವ, ಮಹಿಳಾ ಸಾಹಿತ್ಯಕ್ಕೆ ಹೊಸತು ಎನ್ನಬಹುದಾದ ಪ್ರಯತ್ನವನ್ನು ವಿಶೇಷವಾಗಿ ಲೇಖಕಿಯರು ಬರೆದ ಕತೆಗಳಲ್ಲಿ ಕಾಣಬಹುದು.
- ಸ್ವಗತ, ಮೌನ, ಗೊಣಗಾಟ ಮತ್ತು ಜಗಳಗಳು ಸ್ತ್ರೀ ಸಂವಹನದ ವಿಶಿಷ್ಟ ವಿನ್ಯಾಸಗಳಾಗಿವೆ.
- ಸ್ತ್ರೀಯರ ಲೈಂಗಿಕ ಬಯಕೆ ಮತ್ತು ತೃಪ್ತಿಯ ನೆಲೆಗಳು ಸಂಕೀರ್ಣವಾಗಿವೆ. ಸ್ತ್ರೀಯರು ಪಾತಿವ್ರತ್ಯದ ಚೌಕಟ್ಟುಗಳನ್ನು ದಾಟಲು ದಾಂಪತ್ಯದ ನಿರಾಸೆಯೆ ಪ್ರೇರಣೆಯಾಗಿದೆ.
- ಪ್ರಕೃತಿಯನ್ನು ಪ್ರೀತಿಯಿಲ್ಲದೆ ಬಳಸುವ ಪುರುಷನ ಸ್ವಾರ್ಥ ಮತ್ತು ಲಾಭಕೋರತನಗಳಿಗೆ ಪ್ರತಿಯಾಗಿ ಸ್ತ್ರೀಯರು ನಿಸರ್ಗದೊಂದಿಗೆ ಆಪ್ತಸಂಬಂಧ ಮತ್ತು ಸಹಜೀವನವನ್ನು ಹೊಂದಿ ಪರಿಸರದ ಸಂರಕ್ಷಕರಾಗಿದ್ದಾರೆ.
- ಹೊಂದಾಣಿಕೆಯಿಲ್ಲದ ದಾಂಪತ್ಯ, ಹಿಂಸೆ ಹಾಗೂ ಅಪಮಾನಗಳು ಪ್ರೀತಿಗಾಗಿ ಹಂಬಲಿಸುವ ಸ್ತ್ರೀಯರನ್ನು ಪತಿಯಿಂದ ವಿಮುಖರಾಗಿಸಿವೆ. ಪರಪುರುಷರೆಡೆಗೆ ಸೆಳೆದಿವೆ.

ಅಧ್ಯಾಯ ೪

ಆರ್ಥಿಕ ಮತ್ತು ರಾಜಕೀಯ ನೆಲೆಗಳು

೪.೧. ಸಂಪತ್ತಿನಿಂದ ಗೌರವ ಪಡೆದಿರುವವರು

೪.೨. ದುಡಿಮೆಯಲ್ಲಿ ನೆಮ್ಮದಿ ಕಂಡವರು

೪.೩. ದುಡಿಯುವವರ ಆತಂಕಗಳು

೪.೪. ಆರ್ಥಿಕ ಚಟುವಟಿಕೆಯಾಗಿ ಲೈಂಗಿಕ ದುಡಿಮೆ

೪.೫. ಆರ್ಥಿಕ ಅಸಹಾಯಕತೆ ಮತ್ತು ಹೊಂದಾಣಿಕೆಗಳು

೪.೬. ಆರ್ಥಿಕ ಪ್ರಜ್ಞೆ ಮತ್ತು ವ್ಯವಹಾರಜ್ಞಾನ

೪.೭. ರಾಜಕೀಯ: ಸ್ತ್ರೀಯರ ನಡೆ

೪.೮. ಅಧಿಕಾರದ ರಾಜಕೀಯದಲ್ಲಿ ದಾಳವಾದವರು

೪.೯. ಲಿಂಗ ರಾಜಕಾರಣ: ಸೃಜನತೆಗೆ ನಿರ್ಬಂಧ

೪.೧೦. ಪುರಾಣಸ್ತ್ರೀಯರ ಮರುನಿರೂಪಣೆ

ಅಧ್ಯಾಯ ೪: ಆರ್ಥಿಕ ಮತ್ತು ರಾಜಕೀಯ ನೆಲೆಗಳು

ಅಡುಗೆಮನೆಯ ನಾಲ್ಕು ಗೋಡೆಗಳ ಒಳಗೆ ಅಥವಾ ಹೊಲದ ಕೃಷಿಸಂಬಂಧಿ ಕೆಲಸಗಳಿಗೆ ಸೀಮಿತವಾಗಿ ಸಣ್ಣ ಚೌಕಟ್ಟಿನಲ್ಲಿ ಬದುಕುತ್ತಿದ್ದ ಸ್ತ್ರೀಯರು ಮನೆಯಂಗಳವನ್ನು ದಾಟಿ ಪುರುಷರಿಗೆ ಮಾತ್ರ ಎಂಬಂತಿದ್ದ ಕ್ಷೇತ್ರಗಳನ್ನು ಪ್ರವೇಶಿಸಿದ್ದು ಭಾರತದ ಮಟ್ಟಿಗೆ ಕಳೆದ ಶತಮಾನದ ಮಹತ್ವದ ಬೆಳವಣಿಗೆ. ಹೀಗೆ ಔದ್ಯೋಗಿಕ ಕಾರಣಗಳಿಗಾಗಿ ಹೊರಗಿಳಿದ ಸ್ತ್ರೀಯರಲ್ಲಿ ಕೆಲವರು ತಮ್ಮ ಕಾರ್ಯಕ್ಷಮತೆಯಿಂದ ಉನ್ನತ ಅಧಿಕಾರದ ಹುದ್ದೆಗಳನ್ನು ಪಡೆದು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಕೆಲವರು ರಾಜಕಾರಣದಲ್ಲೂ ಸಕ್ರಿಯರಾಗಿ ತಮ್ಮ ಹೆಜ್ಜೆಗುರುತುಗಳನ್ನು ಮೂಡಿಸಿದ್ದಾರೆ. ಆಯ್ದ ಮಲಯಾಳಂ ಕೃತಿಗಳ ಸೂಕ್ಷ್ಮ ಅವಲೋಕನದ ಮೂಲಕ ಕೇರಳದ ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಸ್ತ್ರೀಯರಿಗೆ ಸಿಕ್ಕಿರುವ ಪ್ರವೇಶ ಮತ್ತು ಅವಕಾಶಗಳನ್ನು, ಹಾಗೆ ಪ್ರವೇಶಿಸುವಾಗ ಅವರು ಎದುರಿಸಿದ ಸವಾಲು ಹಾಗೂ ಸಮಸ್ಯೆಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ದುಡಿಮೆ ಮತ್ತು ಸಂಪತ್ತು ಇವು ಸಮಾಜದಲ್ಲಿ ಹೆಣ್ಣಿನ ಸ್ಥಾನವನ್ನು ನಿರ್ಧರಿಸುವ ಮತ್ತು ಆಕೆಯ ಒಟ್ಟು ಬದುಕನ್ನು ನಿಯಂತ್ರಿಸುವ ಅಂಶಗಳಾಗಿವೆ. ಹಣವು ಸ್ತ್ರೀಯ ಬದುಕನ್ನು ನಿಯಂತ್ರಿಸುತ್ತದೆ. ದುಡಿಮೆಗೆ ಹಣದ ರೂಪದ ಪ್ರತಿಫಲ ಇಲ್ಲದೆ ಇದ್ದಾಗ ಹೆಣ್ಣು ಪುರುಷರನ್ನು ಅವಲಂಬಿಸಬೇಕಾಗುತ್ತದೆ. ಇದರಿಂದಾಗಿ ಆಕೆ ಸದಾ ಕೀಳರಿಮೆ ಅನುಭವಿಸುತ್ತಾಳೆ. ಮನೆ, ಭೂಮಿ ಮುಂತಾದ ಸ್ವಂತ ಸಂಪತ್ತು ಇಲ್ಲದ ಸ್ತ್ರೀಯರಾದರೂ ಮನೆಯೊಳಗೆ ಧ್ವನಿಯಿಲ್ಲದೆ ಬದುಕಬೇಕಾಗುತ್ತದೆ. ಹಣವಿದ್ದವನ ಕೈ ಹಿಡಿದರೆ ಸುಖವಾಗಿರಬಹುದು ಎಂಬ ಕಲ್ಪನೆಯಿಂದ ಹೆಣ್ಣುಮಕ್ಕಳು ಮತ್ತು ಹೆಣ್ಣುಹೆತ್ತವರು ಮದುವೆ ಸಂಬಂಧಗಳನ್ನು ಒಪ್ಪಿಕೊಳ್ಳುತ್ತಾರೆ. ಕುಟುಂಬ ನಿರ್ವಹಣೆಗೆ ಪತಿಯ ವರಮಾನ ಸಾಲದು ಎನಿಸಿದಾಗ ಕೃಷಿ, ಮೀನಿನ ಕೆಲಸ, ವ್ಯಾಪಾರ, ಬಡ್ಡಿವ್ಯಾಪಾರ, ಲೇವಾದೇವಿ, ಅಂಗಡಿ, ಕೋಳಿಸಾಕಣೆ, ಆಡುಸಾಕಣೆ, ಹಗ್ಗ ತಯಾರಿಸುವುದು, ಬಟ್ಟೆ ಹೊಲಿಯುವುದು... ಮುಂತಾದ ಕಸುಬುಗಳು, ಅನಿವಾರ್ಯವೆಂದು ಕಂಡರೆ ಭಿಕ್ಷೆ, ಕಳ್ಳತನ, ಲೈಂಗಿಕ ದುಡಿಮೆ... ಹೀಗೆ ಹಣಗಳಿಸುವ ಮತ್ತು ಬದುಕುವ ಬೇರೆ ಬೇರೆ ದಾರಿಗಳನ್ನು ಸ್ತ್ರೀಯರು ಶೋಧಿಸುತ್ತಾರೆ. ಆಧುನಿಕ ಶಿಕ್ಷಣವನ್ನು ಪಡೆದ ಸ್ತ್ರೀಯರು ಶಿಕ್ಷಕಿ, ದಾದಿ, ನಟಿ, ಸ್ವಾಗತಕಾರಿಣಿ, ಟೈಪಿಸ್ಟ್.. ಮುಂತಾದ ಮಧ್ಯಮ ಆದಾಯದ ಉದ್ಯೋಗಗಳನ್ನು ಗಳಿಸಿ ಆರ್ಥಿಕ

ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ಕೆಲವರು ಸರಕಾರಿ ಇಲಾಖೆಗಳಲ್ಲಿ ಉನ್ನತ ಅಧಿಕಾರ ಸ್ಥಾನಗಳಲ್ಲೂ ಪಡೆದಿದ್ದಾರೆ.

ಮಾಸಿಕ ವೇತನ ತರುವ ಆಧುನಿಕ ಉದ್ಯೋಗಗಳನ್ನು ಮಾಡುವ ಸ್ತ್ರೀಯರಲ್ಲದೆ ಮನೆಯೊಳಗೇ ಇದ್ದು ಬೇರೆ ಬೇರೆ ದುಡಿಮೆಯ ದಾರಿಗಳನ್ನು ಹುಡುಕಿ ಸ್ವಾವಲಂಬಿಗಳಾಗಿರುವವರು, ತವರು ಅಥವಾ ಪತಿಯ ಕಡೆಯಿಂದ ಭೂಮಿ, ಆಸ್ತಿ ಹೊಂದಿ ದುಡ್ಡಿನ ಸಂಕಷ್ಟವಿಲ್ಲದೆ ಬಾಳುವವರು, ತಾವೇ ಕಷ್ಟಪಟ್ಟು ಭೂಮಿ, ಮನೆಗಳನ್ನು ವೃದ್ಧಿಸಿಕೊಂಡು ಸಮಾಜದಲ್ಲಿ ವಿಶೇಷವಾಗಿ ಗುರುತಿಸಲ್ಪಟ್ಟವರು, ಜೀವನೋಪಾಯಕ್ಕೆ ಲೈಂಗಿಕ ದುಡಿಮೆಯನ್ನು ಬಳಸಿಕೊಂಡವರು... ಮುಂತಾದ ಸ್ತ್ರೀಯರ ಬದುಕನ್ನು ಈ ಅಧ್ಯಾಯದಲ್ಲಿ ಗಮನಿಸಿದೆ.

೪.೧. ಸಂಪತ್ತಿನಿಂದ ಗೌರವ ಪಡೆದಿರುವವರು

ಪಿತ್ರಾರ್ಜಿತವಾಗಿಯೋ, ಪತಿಯ ಮೂಲಕವೋ, ಸ್ವಂತ ಪರಿಶ್ರಮದಿಂದಲೋ ಹೊಲ, ಮನೆ, ಆಸ್ತಿಗಳನ್ನು ಗಳಿಸಿಕೊಂಡ ಸ್ತ್ರೀಯರು ಆರ್ಥಿಕ ಭದ್ರತೆಯನ್ನು ಹೊಂದಿದ್ದಾರೆ. ಅದೇ ಕಾರಣಕ್ಕಾಗಿ ಕುಟುಂಬ ಮತ್ತು ಸಮಾಜದಲ್ಲಿ ಗೌರವವನ್ನು ಹೊಂದಿ ತೃಪ್ತರಾಗಿದ್ದಾರೆ. ಈ ಸಂಪತ್ತು ತಮಗೆ ಸೇರಿದ್ದು ಎಂಬ ಅರಿವನ್ನು ಹೊಂದಿರುವ ಸ್ತ್ರೀಯರು ಪುರುಷರ ಅಡಿಯಾಳಾಗಿ ಇರಬಯಸದೆ ಸ್ವತಂತ್ರ ನಿಲುವು ಹೊಂದಿ ತಮ್ಮಿಚ್ಛೆಗೆ ಅನುಗುಣವಾಗಿ ಬದುಕಲು ಪ್ರಯತ್ನಿಸುವುದನ್ನು ಕಥೆಗಳಲ್ಲಿ ಗಮನಿಸಬಹುದು.

ಪುರುಷಕೇಂದ್ರಿತ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಗಂಡು ಸುರಕ್ಷಿತನಾಗಿರುವಂತೆ, ಮಾತೃಮೂಲೀಯ ವ್ಯವಸ್ಥೆಯಲ್ಲಿ ಹೆಣ್ಣು ಸುರಕ್ಷಿತೆಯಾಗಿ, ಗಂಡು ಅಸುರಕ್ಷಿತನಾಗಿ ಬದುಕುತ್ತಾರೆ. ಆಸ್ತಿಯು ಹೆಣ್ಣಿನ ಅಧಿಕಾರದಲ್ಲಿದ್ದಾಗ ಗಂಡು ಕೇವಲ ಅದರ ರಕ್ಷಕನಷ್ಟೇ ಆಗುತ್ತಾನೆ. ಯು.ಎ.ಖಾದರ್ ಅವರು ಬರೆದ 'ಹೇಂಟೆ ಕೂಗುವಲ್ಲಿ' ಎಂಬ ಕಥೆಯಲ್ಲಿ ಲಕ್ಷ್ಮೀಕುಟ್ಟಿಯಮ್ಮ ಎಂಬ ನಾಯರ್ ಹೆಣ್ಣುಮಗಳು ಊರಿಗೆ ಅದೃಷ್ಟಲಕ್ಷ್ಮಿಯಾಗಿ, ದೇವಿಯ ಅವತಾರವಾಗಿ ಬಾಳಿದ ಚಿತ್ರಣವಿದೆ. ಸಾಕ್ಷಾತ್ ಶ್ರೀಪಾರ್ವತಿಯೇ ಎಂದು ಎಲ್ಲರೂ ನಂಬಿರುವ ಮತ್ತು ಎಲ್ಲರಿಗೂ ಬೇಕಾಗಿರುವ, ಓರ್ವ ಗೌರವಾನ್ವಿತ ಮಹಿಳೆ ಲಕ್ಷ್ಮೀಕುಟ್ಟಿಯಮ್ಮ ಚಿರಪುರಾತನವಾದ ಕೋಳಿಕಲ್ ತರವಾಡಿನಲ್ಲಿ ಉಳಿದುಕೊಂಡಿರುವ ಏಕೈಕ ಸ್ತ್ರೀಯಾಗಿದ್ದಾಳೆ. ತಾಚ್ಚಿರೋತ್ತ್ ನಾರಾಯಣ ನಂಬಿಡಿಯು ಕಾಲಕೂಡಿದಾಗ ಹೂವು ಸೀರೆ ಕೊಟ್ಟು ಅವಳೊಂದಿಗೆ 'ಸಂಬಂಧ'ವನ್ನು ಗಟ್ಟಿಗೊಳಿಸಿದ್ದಾನೆ. ಅವಳ ಐವರು ಸೋದರರೂ ಇದೇ ರೀತಿಯ ಸಂಬಂಧದಲ್ಲಿ ತಮ್ಮ ಪತ್ನಿಯರೊಂದಿಗೆ ಐದು ಕಡೆಗಳಲ್ಲಿ ನೆಲೆನಿಂತು 'ಹೆಂಡತಿ ಮನೆಯೇ ಶರಣು' ಎಂಬ ಮಟ್ಟಿನಲ್ಲಿ ಪ್ರಾಮಾಣಿಕವಾಗಿ ಬಾಳುವೆ ನಡೆಸುತ್ತಿದ್ದಾರೆ. ಅವಳನ್ನು ಕೋಳಿಕಲ್ ವಂಶದ ಅಧಿದೇವತೆಯೆಂದು ನಂಬಿರುವ ಅವಳ ಪತಿಯೂ, ಐವರು ಸೋದರರೂ ಅವಳ ಬಗ್ಗೆ ಪೂಜ್ಯಭಾವ

ಹೊಂದಿದ್ದಾರೆ. ಗಂಡನೂ, ಗಂಡಸರಾಗಿ ಜನಿಸಿದ ಸೋದರರೂ ಹೀಗೊಂದು ಪೂಜ್ಯ ಪೀಠದಲ್ಲಿ ತನ್ನನ್ನು ಕುಳ್ಳಿರಿಸಿರುವ ಬಗ್ಗೆ ಆಕೆ ಸಂತೃಪ್ತೆ. ತನ್ನ ಪತಿಯು ತನಗೆ 'ಒಂದು ಪುರುಷಾಧಾರ, ನಂಗೆ ಯಾವತ್ತೂ ಆಧರಿಸಿ ನಿಲ್ಲುವುದಕ್ಕೆ ಒಂದು ಮರ'ವಾಗಿ ಮಾತ್ರ ಇರಬೇಕೆಂಬುದು ಆಕೆಯ ಬಯಕೆಯಾಗಿದೆ.

ಹೆಂಡತಿಯ ಮಾತಿಗೂ ಅವಳು ಎಳೆದ ಗೆರೆಗೂ ಚಾಚೂ ತಪ್ಪದ ನಾರಾಯಣ ನಂಬಿಡಿಗೆ ಪತ್ನಿ ಕಾಲು ತೊಳೆದ ನೀರೆಂಬುದು ಪವಿತ್ರ ತೀರ್ಥವೆಂಬಂಥ ಪೂಜ್ಯ ಭಾವನೆಯಿದೆ. ಅವಳ ಸಂಬಂಧಕಾರನಾಗಿ 'ಪತ್ನಿಗೆ ಬೇಕಾದವನಾಗಿ' ಇರುವಷ್ಟು ಕಾಲ ಅವನು ಅಲ್ಲಿದ್ದು ಅಲ್ಲಿನ ಸಂಪತ್ತನ್ನು ಅನುಭವಿಸಬಹುದಷ್ಟೆ ಹೊರತು ಅದರ ಮೇಲೆ ಅವನಿಗೆ ಯಾವುದೇ ಅಧಿಕಾರವಿಲ್ಲ. ತರವಾಡಿನ ವ್ಯವಹಾರಗಳಿಗೆ ಸಂಬಂಧಿಸಿಯಾಗಲೀ, ಪತ್ನಿಯ ಮಾತು, ವರ್ತನೆ, ಚಲನೆಗಳಿಗೆ ಸಂಬಂಧಿಸಿಯಾಗಲೀ ಯಾವುದೇ ಅಧಿಕಾರ ಚಲಾಯಿಸುವ ಅವಕಾಶವಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿದೇ ಅವನು ಈ ಸಂಬಂಧವನ್ನು ಒಪ್ಪಿಕೊಂಡಿದ್ದಾನೆ. ಹಾಗಾಗಿಯೆ ನಂಬಿಡಿಯು ಪೂರ್ಣ ಪ್ರಮಾಣದಲ್ಲಿ ಒಬ್ಬ ವಿಧೇಯ ಪತಿಯಾಗಿ ಪತ್ನಿಯ ತರವಾಡಿನಲ್ಲಿದ್ದಾನೆ. ತರವಾಡಿನ ಆಸ್ತಿಯೆಲ್ಲ ಲಕ್ಷ್ಮೀಕುಟ್ಟಿಯ ಹೆಸರಿನಲ್ಲಿ ಇರುವುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿದೆ.

ತರವಾಡಿನ ಏಕೈಕ ವಾರಸುದಾರಳಾಗಿ ಸಕಲ ಐಶ್ವರ್ಯಗಳನ್ನೂ ಹೊಂದಿದ್ದ ಲಕ್ಷ್ಮೀಕುಟ್ಟಿಗೆ ಅವಳನ್ನು ದೇವಿಯಂತೆ ಪೂಜಿಸುವ, ಮತ್ತು ಸದಾ ಅವಳನ್ನು ಪ್ರಶಂಸಿಸುತ್ತ ಪ್ರಸನ್ನಳಾಗಿಸುವ ವಿಧೇಯ ಪತಿಯಾಗಿರುವ ನಾರಾಯಣನ್ ನಂಬಿಡಿಯಲ್ಲಿ ಗೌರವವಿಲ್ಲ. ಅವಳ ಗರ್ಭವನ್ನು ಚಿಗುರಿಸಲು ಶಕ್ತನಾಗಿಲ್ಲದ ನಿರ್ವೀರ್ಯನಾದ ಗಂಡನ ಮುಖ ನೋಡಲೂ ಇಷ್ಟವಿಲ್ಲ. "ಮಲಗೋ ಹಾಸಿಗೆಯಲ್ಲಿ ಓರ್ವ ಪುರುಷ ಸುರುಟಿಯಾದ್ರೂ ಮಲಗಿದ್ರೆ ಸಾಕು ಅನ್ನೋ ಭ್ರಮೆ ನಂಗಿಲ್ಲ. ಜೊತೆಗೆ ಮಲಗೋದಕ್ಕೆ ಒಂದು ಕತ್ತೆ ಕೂಡ ಅಗತ್ಯವಿಲ್ಲ" (ಪು. ೧೨೫, ತೃಕೋಟ್ಟೂರ್ ನೀಳ್ಗತೆಗಳು) ಎಂಬಂಥ ಕಠಿಣ ಮಾತುಗಳಿಂದ ಜರೆದು ಅವನನ್ನು ತರವಾಡಿನಿಂದ ಹೊರಗೆ ಹಾಕುತ್ತಾಳೆ. ಲೈಂಗಿಕ ಸಾಮರ್ಥ್ಯವಿಲ್ಲದ ಪತಿಯನ್ನು ತನ್ನ ಬದುಕಿನಿಂದಲೆ ಹೊರದಬ್ಬುವುದಕ್ಕೆ ಹಿಂಜರಿಯದ, ನಮ್ಮ ಸಾಮಾಜಿಕ ಸಂದರ್ಭದಲ್ಲಿ ಅಪರೂಪವೆನ್ನಬಹುದಾದ ಈ ಸಾಮರ್ಥ್ಯ ಆಕೆಗೆ ಬಂದುದು ಅವಳು ಹೊಂದಿರುವ ಸಂಪತ್ತಿನಿಂದ. ಪತಿಯನ್ನು ಬೇಡವಾದಾಗ ಹೊರನೂಕುವ, ಬೇಕಾದಾಗ ಕರೆಸಿಕೊಳ್ಳುವ ಲಕ್ಷ್ಮೀಕುಟ್ಟಿಯಮ್ಮನ ಕೈಯಲ್ಲಿ ತರವಾಡಿನ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವಿದೆ. ಜಾತಕಫಲದ ಪ್ರಕಾರ ಮಗಳು ಕುಂತಿಯಂತೆ 'ವಿವಾಹವಿಲ್ಲದೆ ಹೆರುವ' ಸಾಧ್ಯತೆಯಿದೆ ಎಂಬ ವಿಚಾರವನ್ನು ಮುಂದಾಗಿ ತಿಳಿದುಕೊಂಡ ಲಕ್ಷ್ಮೀಕುಟ್ಟಿಯಮ್ಮ ಪತಿಯ ಅಭಿಪ್ರಾಯಕ್ಕೆ ಬೆಲೆಕೊಡದೆ, ತನ್ನ ತರವಾಡಿಗೆ ಬರಬಹುದಾದ ಕಳಂಕವನ್ನು ತಡೆಯುವುದಕ್ಕಾಗಿ 'ಈಗಾಗಲೇ ತಲೆ ತಿರುಗಿರುವ' ಮಗಳನ್ನು ಅಮೇರಿಕಾಕ್ಕೆ ಓದಲು

ಕಳಿಸಿಬಿಡುತ್ತಾಳೆ.ಕ್ರಮೇಣ ತರವಾಡಿನ ಸಂಪತ್ತು ನಾಶವಾಗುತ್ತ ಹೋದುದನ್ನು ಲೇಖಕರು 'ಹೇಂಟೆ ಕೂಗುವ ತಾಣದಲ್ಲಿ ಮೊಳಕೆಯೊಡೆಯದು' ಎಂಬ ನಾಣ್ಣುಡಿಯೊಂದಿಗೆ ಸಮೀಕರಿಸಿದ್ದಾರೆ. ಅದನ್ನೇ ಶೀರ್ಷಿಕೆಗೂ ಬಳಸಿಕೊಂಡಿದ್ದಾರೆ. ಎಷ್ಟೇ ಶಕ್ತಿ, ಸಾಮರ್ಥ್ಯಗಳಿದ್ದರೂ ಹುಂಜದಂತೆ ಮನೆಯ ಹೊರಗೆ ಬಂದು ಎತ್ತರದ ಸ್ಥಳವನ್ನೇರಿ ಕೂಗುವ ಶಕ್ತಿ ಹೇಂಟೆಗಿಲ್ಲ, ಇರಕೂಡದು ಎಂದು ಸಮಾಜವು ವಿಧಿಸಿದೆ. ಅಂದರೆ ಮನೆಯ ಹೊರಗೆ ಸ್ವೇಚ್ಛೆಯಾಗಿರುವ ಸ್ವಾತಂತ್ರ್ಯವಾಗಲೀ ಅವಕಾಶವಾಗಲೀ ಹೆಣ್ಣಿಗಿಲ್ಲ. ಹಾಗೊಂದು ವೇಳೆ ಆಕೆ ಸ್ವೇಚ್ಛೆಯಾಗಿರಲು ಬಯಸಿದ್ದೇ ಆದರೆ ಅಪಾಯ, ಅವನತಿ ತಪ್ಪಿದ್ದಲ್ಲ ಎಂಬ ಪಿತೃಪ್ರಧಾನ ಚಿಂತನೆಯ ಧ್ವನಿಯನ್ನು ಈ ಕತೆಯಲ್ಲಿ ಗುರುತಿಸಬಹುದು.

ತಾಯಿಮನೆ, ಗಂಡನಮನೆ ಎರಡೂ ಸುಭದ್ರವಾಗಿದ್ದು ಆರ್ಥಿಕ ಸ್ಥಿರತೆ ಹೊಂದಿರುವ ಹೆಣ್ಣಿಗೆ ಆಸ್ತಿಮನೆಗಳ ಒಡೆತನಕ್ಕಿಂತ ಸಂಬಂಧಗಳ ಪ್ರೀತಿಯೆ ಮುಖ್ಯವಾಗಿ ಕಾಣುತ್ತದೆ. ಇ. ಹರಿಕುಮಾರ್ ಅವರು ಬರೆದಿರುವ 'ಶ್ರೀ ಪಾರ್ವತಿಯ ಪಾದ' ಕಥೆಯಲ್ಲಿ ಹಳ್ಳಿಯ ದೊಡ್ಡಮನೆಯಲ್ಲಿ ಹುಟ್ಟಿ ಬೆಳೆದು ಕಾನ್ವೆಂಟ್ ಶಿಕ್ಷಣ ಪಡೆದು ಅನುಕೂಲಸ್ಥ ಗಂಡಿನ ಕೈಹಿಡಿದು ಸುಖವಾಗಿರುವ ಮಾಧವಿಗೆ ತನ್ನ ಮತ್ತು ಮಕ್ಕಳ ಭವಿಷ್ಯದ ಕುರಿತಾಗಿ ತಲ್ಲಣಗಳಿಲ್ಲ. 'ನನಗಿರುವುದು ಎರಡು ಗಂಡುಮಕ್ಕಳು ತಾನೆ? ಹೆಚ್ಚು ಮನೆಗಳು ಬೇಕಿದ್ದರೆ ಅವರೇ ಕಟ್ಟಿಕೊಳ್ಳಲಿ' ಎನ್ನುವ ಮನೋಭಾವವಿದೆ. ತಾನು ಹುಟ್ಟಿ ಬೆಳೆದ ಮನೆಯ ಆರ್ದ್ರ ನೆನಪುಗಳ ಆಸರೆಯಲ್ಲಿ ಬದುಕುತ್ತ ನೆನಪಾದಾಗೊಮ್ಮೆ ಹಳ್ಳಿಗೆ ಓಡಿ ಬರುವ ಅವಳಿಗೆ ಆ ಮನೆ, ಆಸ್ತಿ ತನಗೆ ದೊರಕಬೇಕೆಂಬ ಬಯಕೆಯಿಲ್ಲ. ತನಗೆ ಯಾವತ್ತೂ ಅಲ್ಲಿ ಮುಕ್ತ ಮತ್ತು ಆತ್ಮೀಯ ಪ್ರವೇಶ ದೊರಕಿದರೆ ಸಾಕು ಎಂಬ ಇಚ್ಛೆ ಮಾತ್ರವಿದೆ. ಹಾಗಾಗಿ ಆ ಮನೆಯನ್ನು ಅಕ್ಕನ ಹೆಸರಿಗೆ ಮಾಡಿಕೊಡಲು ಅವಳಿಗೆ ಯಾವ ಆಕ್ಷೇಪವೂ ಇಲ್ಲ. ಅಕ್ಕನ ಮಗಳು ಸುಪ್ರಿಯಾಳ ಮೇಲೆ ಅವಳಿಗೆ ಇನ್ನಿಲ್ಲದ ಅಕ್ಕರೆ. ಇದೆಲ್ಲವೂ ಅವಳಿಗೇ ದೊರೆಯಬೇಕಾದ ಆಸ್ತಿ ಎಂದೂ ಭಾವಿಸಿದ್ದಾಳೆ. ಆದರೆ ಒಮ್ಮೆ ಆಸ್ತಿಯ ದಾಖಲೆಗಳನ್ನು ಅಕ್ಕನ ಹೆಸರಿಗೆ ವರ್ಗಾಯಿಸಿದ ಬಳಿಕ ಅಲ್ಲಿನ ಸಂಬಂಧಗಳಲ್ಲಿ ಇದೇ ಹಳೆಯ ರೀತಿಯ ವಿಶ್ವಾಸ ಉಳಿದೀತೆ? ತನ್ನನ್ನು ಕಡೆಗಣಿಸಿಯಾರೆ? ತಾನು ಇಷ್ಟೇ ಸ್ವಚ್ಛಂದವಾಗಿ ವರ್ತಿಸಲು ಸಾಧ್ಯವೆ? ಎಂಬುದು ಅವಳ ಆತಂಕವಾಗಿದೆ. ಹಣ, ಆಸ್ತಿಗಿಂತ ಪ್ರೀತಿ, ವಿಶ್ವಾಸ ಮುಖ್ಯವೆನ್ನು ಮಾಧವಿಯ ಭಾವುಕತೆಗೆ ಆರ್ಥಿಕ ಸುಭದ್ರತೆ ಒಂದು ಪ್ರಧಾನ ಕಾರಣವಾಗಿದೆ.

ಆದರೆ ಮಾಧವಿಯ ಅಕ್ಕ ಶಾರದಳ ಮನಸ್ಥಿತಿ ಭಿನ್ನವಾಗಿದೆ. ಶಾರದ ತಾನು ಬದುಕಿರುವಾಗಲೆ ಆಸ್ತಿಯನ್ನು ತನ್ನ ಹೆಸರಿಗೆ ನೋಂದಣಿ ಮಾಡಿ ಕೊಟ್ಟರೆ ನಾಳೆ ತನ್ನ ಮಗಳ ಬದುಕು ಸುಭದ್ರವಾದೀತು ಎಂದು ಆಶಿಸುತ್ತಾಳೆ. ತಂಗಿ ಒಳ್ಳೆಯವಳೇ ಆದರೂ ನಾಳೆ ಅವಳ ಮಕ್ಕಳು ಮನಸ್ಸು ಬದಲಾಯಿಸಿದರೆ ಏನು ಗತಿ ಎಂಬುದು ಅವಳ ಆತಂಕಕ್ಕೆ ಕಾರಣ. ಅದಕ್ಕಾಗಿ ಈ ಮನೆ ನ್ಯಾಯಯುತವಾಗಿ ತನಗೇ ಸೇರಬೇಕಾದ್ದು ಎಂಬುದನ್ನು ತಂಗಿಗೆ ಮನಗಾಣಿಸುವ ಪ್ರಯತ್ನ ಮಾಡುತ್ತಾಳೆ. ಹಳ್ಳಿಯಲ್ಲೇ ಹುಟ್ಟಿ

ಬೆಳೆದ, ಗಂಡನಿಗೆ ಬೇರೆ ಉದ್ಯೋಗವಿಲ್ಲದೆ ಎಲ್ಲದಕ್ಕೂ ಭೂಮಿಯ ಉತ್ಪತ್ತಿಯನ್ನೇ ಅವಲಂಬಿಸಿ ಬದುಕಬೇಕಾದ, ಹೆಚ್ಚು ಓದದ ಶಾರದಳಿಗೆ ತಂಗಿಯಂತೆ ಪ್ರಕೃತಿಯ ಚೆಲುವನ್ನು ಸವಿಯುತ್ತ ಕೂರುವ ವ್ಯವಧಾನವಿಲ್ಲ. ನಾಳೆಗಳ ನಿಶ್ಚಿಂತೆಯ ಬಗೆಗಿನ ಆತಂಕ ಅವಳ ವರ್ತಮಾನದ ನೆಮ್ಮದಿಯನ್ನು ಕೆಡಿಸಿದೆ. ಸ್ವಭಾವತಃ ಕೆಟ್ಟವಳೇನೂ ಅಲ್ಲದ ಶಾರದಳನ್ನು ಸ್ವಲ್ಪ ಮಟ್ಟಿಗೆ ಸ್ವಾರ್ಥಿಯಾಗಿಸಿರುವುದು ಅವಳ ಆರ್ಥಿಕ ಪರಾವಲಂಬನೆ.

೪.೨. ದುಡಿಮೆಯಲ್ಲಿ ನೆಮ್ಮದಿ ಕಂಡವರು

ಕೆಳ ಮತ್ತು ಕೆಳಮಧ್ಯಮ ವರ್ಗದ ಮಹಿಳೆಯರ ದುಡಿಮೆಯು ಅವರಿಗೆ ಆತ್ಮವಿಶ್ವಾಸದ ಗಟ್ಟಿಧ್ವನಿಯನ್ನು ನೀಡಿದೆ. ಕೃಷಿ, ವ್ಯಾಪಾರ, ಮೀನಿನ ಕಸುಬು, ಲೇವಾದೇವಿ, ಸ್ವ ಉದ್ಯೋಗ, ಕೂಲಿಕೆಲಸ, ಮನೆಕೆಲಸ, ಶಿಕ್ಷಕಿ, ಆಸ್ಪತ್ರೆಯ ದಾದಿ, ಸಹಾಯಕಿ, ಕ್ಲೀನರ್, ಕಛೇರಿಯ ಗುಮಾಸ್ತೆಯಂಥಾ ಆಧುನಿಕ ಉದ್ಯೋಗಗಳು.. ಹೀಗೆ ದುಡಿಮೆಯ ವಿಭಿನ್ನ ದಾರಿಗಳನ್ನು ಸ್ತ್ರೀಯರು ಶೋಧಿಸಿದ್ದಾರೆ. ಶ್ರಮಜೀವಿಗಳಾದ ಸ್ತ್ರೀಯರು ಗೃಹವಾರ್ತೆ, ಉದ್ಯೋಗ ಎರಡನ್ನೂ ನಿಭಾಯಿಸುತ್ತ ಕುಟುಂಬದ ಆರ್ಥಿಕತೆಯನ್ನು ಬಲಪಡಿಸಿದ್ದಾರೆ.

ಆರ್ಥಿಕತೆಯ ವಿಷಯದಲ್ಲಿ ಸ್ತ್ರೀಯರು ಹೆಚ್ಚು ಪ್ರಾಯೋಗಿಕವಾಗಿ ಯೋಚಿಸುತ್ತಾರೆ. ಪೊಳ್ಳು ಹಿರಿಮೆಯ ಭ್ರಮೆಯಿಂದ ಹೊಟ್ಟೆ ತುಂಬುವುದಿಲ್ಲ ಎಂಬುದು ಅವರ ಜೀವನತತ್ವವಾಗಿದೆ. ಗಂಡನ ವರಮಾನ ಸಂಸಾರ ನಿರ್ವಹಣೆಗೆ ಸಾಲದು ಎನಿಸಿದಾಗ ತಾನೂ ದುಡಿಮೆಗೆ ಹೊರಡುವ, ಗಂಡನ ಆಸರೆ ಇಲ್ಲದಾಗ ಗಳಿಕೆಯ ಅನ್ಯದಾರಿಗಳನ್ನು ಶೋಧಿಸುವ ಮಹಿಳೆಯರು ಮಲಯಾಳಂ ಕಥನಸಾಹಿತ್ಯದಲ್ಲಿ ವಿಪುಲವಾಗಿ ಕಾಣಸಿಗುತ್ತಾರೆ.

ತಕಳಿ ಶಿವಶಂಕರ ಪಿಳ್ಳೆ ಅವರು ಬರೆದ 'ಕೆಂಪುಮೀನು' ಕಾದಂಬರಿಯ ಚಕ್ಕಿ ಶ್ರಮಜೀವಿ ಹಾಗು ವ್ಯವಹಾರಚತುರೆ. ಮೂಡಲಿಗೆ ಮೀನು ಹೊತ್ತುಕೊಂಡು ಹೋಗಿ ಮಾರುವುದು, ಸಣ್ಣ ಬಲೆ ಬಳಸಿ ತೀರದಲ್ಲಿ ಮೀನು ಹಿಡಿಯುವುದು, ಮೀನು ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕಿದಾಗ ಒಣಗಿಸಿಟ್ಟು ಮೀನು ಸಿಗದ ಕಾಲದಲ್ಲಿ ಹೆಚ್ಚಿನ ಕ್ರಯಕ್ಕೆ ಮಾರುವುದು, ಹೆಂಗಸರೊಂದಿಗೆ ಸಣ್ಣಮಟ್ಟ ಲೇವಾದೇವಿ ವ್ಯವಹಾರ ಮುಂತಾದ ಕೆಲಸಗಳನ್ನು ಮಾಡುತ್ತಾಳೆ. ಗಂಡನ ಆದಾಯಕ್ಕೆ ತನ್ನದೂ ಸೇರಿಸಿ ಕೂಡಿಟ್ಟು ಸ್ವಂತ ದೋಣಿ ಮತ್ತು ಬಲೆ ಕೊಳ್ಳುವಲ್ಲಿ ನೆರವಾಗುತ್ತಾಳೆ. ಗಂಡನ ಐಶ್ವರ್ಯಕ್ಕೆ ಕಾರಣವಾಗಿರುವ ಚಕ್ಕಿಗೆ ಅತಿಯಾಸೆಯಿಲ್ಲ. ಇನ್ನೊಬ್ಬರ ಹಣದ ಮೇಲೆ ಆಸೆಯೂ ಇಲ್ಲ. ಪರೀಕುಟ್ಟಿಯ ಹಣ ಹಿಂತಿರುಗಿಸಲು ಗಂಡ ಮನಸ್ಸು ಮಾಡದಿದ್ದಾಗ ಮಗಳ ಸಲಹೆಯಂತೆ ಗಂಡನ ಪೆಟ್ಟಿಗೆಯಿಂದ ಸ್ವಲ್ಪಸ್ವಲ್ಪವೇ ಹಣ ಕದ್ದು ಸಾಲ ತೀರಿಸುವುದಕ್ಕೆಂದು ತೆಗೆದಿರಿಸುತ್ತಾಳೆ. ಸ್ವಂತ ದೋಣಿಯ ಒಡೆಯರಾಗಿ ಮೀನು ಮಾರುವ

ಕಾಯಕ ಬಿಟ್ಟ ಬಳಿಕವೂ ತಾಯಿ ಮಗಳಿಬ್ಬರೂ ತಮ್ಮ ಪಾಲಿನ ಮೀನು ಒಣಗಿಸಿ ಮಾರಿ ಹಣ ಒಟ್ಟುಮಾಡುತ್ತಾರೆ. ಕಿರಿಯ ಮಗಳು ಪಂಚಮಿ ಕೂಡ ದಿನಾಲೂ ಒಂದು ಗೂಡೆ ಮೀನು ತೆಗೆದಿಟ್ಟು ಒಣಗಿಸಿ ಮಾರುವ ತಯಾರಿ ಮಾಡುತ್ತಾಳೆ. ಮುಂದೆ ಭವಿಷ್ಯದಲ್ಲಿ ತನ್ನದೆಂಬ ಹಣ ಬೇಕು ಎಂಬ ತಿಳುವಳಿಕೆ ಪುಟ್ಟ ಹುಡುಗಿ ಪಂಚಮಿಗೂ ಸಹಜವಾಗಿ ಬಂದಿದೆ.

ಮದುವೆಯಾದ ಬಳಿಕ ಕರುತ್ತಮ್ಮ ಕೂಡ ಅಮ್ಮನಂತೆ ಕುಟುಂಬದ ಆದಾಯವನ್ನು ಹೆಚ್ಚಿಸಲು ತನ್ನಿಂದಾದ ಪ್ರಯತ್ನ ಮಾಡುತ್ತಾಳೆ. ಗಂಡ ದುಡಿದದ್ದು ಸಾಲದು ಎನಿಸಿದಾಗ ತಾನೂ ಮೀನುಬುಟ್ಟಿ ಹೊತ್ತು ಮೂಡಲಿಗೆ ಹೋಗಿ ಮಾರಿ ಲಾಭ ಗಳಿಸುತ್ತಾಳೆ. ಅವಳ ಹಳೆಯ ಕಥೆಯನ್ನೆತ್ತಿ ಇತರ ಸ್ತ್ರೀಯರು ಹಂಗಿಸಿದಾಗಲೂ ದುಡಿಮೆ ನಿಲ್ಲಿಸದೆ ಆ ಕೆಲಸವನ್ನು ಬಿಟ್ಟು ಮೀನು ಒಣಗಿಸಿ ಉಪ್ಪು ಬೆರೆಸಿ ಹೆಚ್ಚು ಲಾಭಕ್ಕೆ ಮಾರಿ ಹಣ ಸಂಪಾದಿಸುತ್ತಾಳೆ. ಅವಳ ಚಾರಿತ್ರ್ಯದ ಬಗೆಗಿನ ಶಂಕೆಯಿಂದ ಪಳನಿಯ ಜೊತೆಗಾರರು ಅವನನ್ನು ದೋಣಿಯಿಂದ ಇಳಿಸಿದಾಗ ಪತಿಗೆ ಧೈರ್ಯ ತುಂಬಿ ತನ್ನ ಉಳಿಕೆಯ ಹಣ ಮತ್ತು ಚಿನ್ನ ಕೊಟ್ಟು ಸಣ್ಣ ದೋಣಿ ಖರೀದಿಸಿ ಸ್ವತಂತ್ರವಾಗಿ ಬದುಕುವ ಪ್ರಯತ್ನಕ್ಕೆ ಜೊತೆಗೂಡುತ್ತಾಳೆ. ತೀರದಿಂದ ಬಲೆ ಬೀಸಿ ಮೀನು ಎಳೆಯುವ ಯೋಚನೆಯೂ ಅವಳಿಗಿತ್ತು. ಆದರೆ ಅದಕ್ಕೆ ಒಬ್ಬ ಪುರುಷನ ಸಹಾಯದ ಅಗತ್ಯವಿದೆ. ಪಳನಿ ಒಪ್ಪದ ಕಾರಣದಿಂದ ಅದನ್ನು ಕೈಬಿಟ್ಟಿದ್ದಾಳೆ. ಗಂಡ ಒಬ್ಬನ ದುಡಿಮೆಯನ್ನಷ್ಟೇ ಅವಲಂಬಿಸಿ ಸೋಮಾರಿಯಾಗಿ ಕಾಲಕಳೆಯದೆ ತಾವೂ ದುಡಿದು ಕುಟುಂಬದ ಆರ್ಥಿಕತೆಯನ್ನು ಮೇಲೆತ್ತುವುದಕ್ಕಾಗಿ ಗಂಡನ ಅನುಮತಿ ಪಡೆದು ಸ್ತ್ರೀಯರು ಶ್ರಮಿಸುತ್ತಾರೆ. ಹಾಗೆ ದುಡಿಯುವಾಗ ಗಂಡನಿಗೆ ಮುಜುಗರ, ಕೀಳರಿಮೆ, ಅನುಮಾನ, ಅಪಮಾನಗಳು ಉಂಟಾಗದಂತೆ ಎಚ್ಚರ ವಹಿಸುತ್ತಾರೆ.

ಚಕ್ಕಿಯ ನೆರೆಯವಳಾದ ನಲ್ಲಪೆಣ್ಣು ಸ್ವಂತ ದೋಣಿ ಬಲೆ ಹೊಂದುವ ಪತಿಯ ಬಯಕೆಯನ್ನು ಕೈಗೂಡಿಸುವುದಕ್ಕಾಗಿ ತಾನೂ ದುಡಿಯುತ್ತಾಳೆ. ಗಂಡ ಪ್ರತಿದಿನ ದುಡಿದ ಹಣವನ್ನು ತನ್ನ ಕೈಯಲ್ಲಿ ತಂದಿರಿಸುವಂತೆ ಅತ್ತು ಕರೆದು ಜಗಳಾಡಿ ಒಪ್ಪಿಸಿ, ಹಣ ಕೂಡಿಡಲು ಯತ್ನಿಸುತ್ತಾಳೆ. ಕಡಲ ತೀರದಲ್ಲಿ ವಾಸಿಸುವ ಬೆಸ್ತ ಕುಟುಂಬಗಳಲ್ಲಿ ಬಹುಪಾಲು ಮಹಿಳೆಯರು ಸಂಸಾರ ನಿರ್ವಹಣೆಗಾಗಿ ಮೀನಿನ ಕೆಲಸದಲ್ಲಿ ತೊಡಗಿಸಿಕೊಂಡು ಸಂಸಾರ ನಿರ್ವಹಣೆಯಲ್ಲಿ ಕೈಜೋಡಿಸುತ್ತಾರೆ. ಮಕ್ಕಳ ಹೊಟ್ಟೆ ತುಂಬಿಸುವುದಕ್ಕಾಗಿ ಕೈಸಾಲ, ಒತ್ತೆಸಾಲ ಪಡೆಯುತ್ತಾರೆ. ಮಳೆಗಾಲದಲ್ಲಿ ಗಂಡಸರು ಕೆಲಸವಿಲ್ಲದೆ ಅಲೆಯುವ ಹೊತ್ತಿನಲ್ಲಿ ಮಕ್ಕಳನ್ನು ಪೋಷಿಸಬೇಕಾದ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸುತ್ತಾರೆ.

ತಕಳಿ ಶಿವಶಂಕರ ಪಿಳ್ಳೆ ಅವರು ಬರೆದ 'ಚೀಟಿಯ ಚಿಕ್ಕನಾಣಿ' ಸಣ್ಣಕತೆಯಲ್ಲಿ ಚಿಕ್ಕ ವಯಸ್ಸಿನಲ್ಲೇ ವ್ಯವಹಾರ ಕುಶಲತೆ ಮತ್ತು ಜಾಣ್ಮೆಗಳನ್ನು ಹೊಂದಿ ಹಣ ಸಂಪಾದಿಸುವ ದಾರಿಗಳನ್ನು ಹುಡುಕಿಕೊಂಡ ಚಿಕ್ಕನಾಣಿ ಎಂಬ ಹೆಣ್ಣುಮಗಳ ಚಿತ್ರಣವಿದೆ. ಚಿಕ್ಕನಾಣಿಯ ಅಮ್ಮ ಮತ್ತು ಅಕ್ಕ ತೆಂಗಿನ ನಾರಿನಿಂದ

ಹಗ್ಗ ಹೊಸೆದು ಗಂಡುದಿಕ್ಕಿಲ್ಲದ ಮನೆಯ ಖರ್ಚು ನಿಭಾಯಿಸಿದ್ದಾರೆ. ಆ ಹುರಿಹಗ್ಗವನ್ನು ಅಂಗಡಿಗೊಯ್ದು ಕೊಟ್ಟು ಬದಲಿಗೆ ಸಾಮಾನು ತಂದುಕೊಟ್ಟು ಅಕ್ಕ, ಅಮ್ಮನಿಂದ ಪುಡಿಗಾಸು ಗಳಿಸುತ್ತಿದ್ದ ಚಿಕ್ಕನಾಣಿ ಬಾಲ್ಯದಲ್ಲೇ ಹಣದ ಮಹತ್ವವನ್ನು ಅರಿತುಕೊಳ್ಳುತ್ತಾಳೆ. ತಾನು ಗಳಿಸಿದ ಪುಡಿಗಾಸಿನಿಂದ ಎರಡು ನೆನಸಿದ್ದ ಕಾಯಿಸಿಪ್ಪೆ ಖರೀದಿಸಿ ತಂದು ಪ್ರತ್ಯೇಕ ಹಗ್ಗ ಹೊಸೆದು ಹಣ ಸಂಪಾದಿಸುತ್ತಾಳೆ. ಸ್ವಲ್ಪ ಸಮಯದಲ್ಲೇ 'ಹಗ್ಗದ ಚೀಟಿ' ಆರಂಭಿಸಿ ನೆರೆಹೊರೆಯ ಹೆಂಗಸರಿಗೆ ತೆಂಗಿನ ಸಿಪ್ಪೆ ತಂದುಕೊಟ್ಟು ಹಗ್ಗ ತಯಾರಿಸಿ ಲಾಭ ಮಾಡಿಕೊಂಡಳು. ಎರಡು ವರ್ಷದ ಬಳಿಕ ದುಡ್ಡಿನ ಚೀಟಿ ಆರಂಭಿಸಿದ್ದಲ್ಲದೆ ಚಿಕ್ಕಪುಟ್ಟ ಒಡವೆಗಳನ್ನು ಒತ್ತೆ ಇಟ್ಟುಕೊಂಡು ಹಣ ನೀಡುವ ಲೇವಾದೇವಿಯನ್ನೂ ಆರಂಭಿಸಿದಳು. ತೀರ ಕಷ್ಟ ಬಂದಾಗ ಮನೆಗೂ ಅಕ್ಕಿ ಖರೀದಿಸಿ ಕೊಡುವ ಚಿಕ್ಕನಾಣಿಯ ಬುದ್ಧಿವಂತಿಕೆ, ಪ್ರಾಮಾಣಿಕತೆ ಮತ್ತು ವ್ಯವಹಾರ ಸಾಮರ್ಥ್ಯಗಳ ಬಗ್ಗೆ ಮನೆಯವರಿಗೆ, ಊರವರಿಗೆ ಗೌರವವಿದೆ. ಊರವರ ದೃಷ್ಟಿಯಲ್ಲಿ 'ಖಡಕ್ ಹೆಣ್ಣು' ಎನಿಸಿದ ಚಿಕ್ಕನಾಣಿಗೆ ವಿದ್ಯಾವಂತನಾದರೂ ಉದ್ಯೋಗವಿಲ್ಲದ ಉತ್ತಮ ಮನೆತನದ ಚೆಲುವನ ನೆಂಟಸ್ತಿಕೆ ಬಂದಾಗ, ಮನೆಯವರು ಹಿಂದೆಮುಂದೆ ನೋಡಿದರೂ ಒಪ್ಪಿ ಮದುವೆಯಾಗುತ್ತಾಳೆ. ಹೀಗೆ ನಿರುದ್ಯೋಗಿಯನ್ನು ಮದುವೆಯಾಗುವ ಧೈರ್ಯವನ್ನು ಅವಳಿಗೆ ನೀಡಿರುವುದು ಅವಳ ದುಡಿಮೆಯೆ.

ಮದುವೆಯ ನಂತರದ ಹೆಚ್ಚುವರಿ ಖರ್ಚಿಗಾಗಿ ಚಿಕ್ಕನಾಣಿ ಹೊಸ ಚೀಟಿ ಆರಂಭಿಸುತ್ತಾಳೆ. ಗಂಡನ ಊಟದ ಖರ್ಚಿಗಾಗಿ ತನ್ನ ತವರುಮನೆಗೆ ಅಕ್ಕಿ ಖರೀದಿಸಿ ಕೊಡುತ್ತಾಳೆ. ಅವನ ನಿತ್ಯದ ಅಗತ್ಯಗಳಾದ ಸೋಪು, ಶೇವಿಂಗ್ ಕ್ರೀಮುಗಳನ್ನು ತಂದುಕೊಡುತ್ತಾಳೆ. ಅವನು ಹೋಟೆಲ್‌ನಲ್ಲಿ ಚಾ ಕುಡಿಯುವುದಕ್ಕೆ, ಬೀಡಿ ಸೇದುವುದಕ್ಕೆ... ಇತ್ಯಾದಿಯಾಗಿ ಮಾಡಿದ್ದ ಕೈಸಾಲಗಳನ್ನು ತೀರಿಸುತ್ತಾಳೆ. ಇದಕ್ಕಾಗಿ ಅವಳು ಚಿಕ್ಕಂದಿನಿಂದ ದುಡಿದು ಕೂಡಿಟ್ಟ ಹಣವೆಲ್ಲವೂ ಖರ್ಚಾದರೂ ಆಕೆ ಧೈರ್ಯಗೆಡುವುದಿಲ್ಲ. ಅವನಿಗೆ ಉದ್ಯೋಗ ದೊರಕಿಸುವುದಕ್ಕಾಗಿ ಮುಂಬೈಗೆ ಕಳಿಸಲು, ಅಲ್ಲಿ ಅನಾರೋಗ್ಯಕ್ಕೆ ತುತ್ತಾದಾಗ ಚಿಕಿತ್ಸೆಗೆ, ಅವನನ್ನು ಮರಳಿ ಕರೆಸಲು ದಾರಿಖರ್ಚಿಗೆ, ತಿರುಗಿ ಬಂದವನ ದೇಹಪುಷ್ಟಿಗೆಂದು ಟಾನಿಕ್ಕಿಗೆ... ಹೀಗೆ ಹಣ ಒದಗಿಸುವುದಕ್ಕಾಗಿ ಚೀಟಿಯ ಹಣವನ್ನು ಬಳಸಿಕೊಂಡದ್ದರಿಂದ ಅವಳ ಚೀಟಿ ಮುಳುಗಿ, ಊರ ಮಂದಿ ಜಗಳಕ್ಕೆ ಬಂದಾಗಲೂ ದಿಟ್ಟಳಾಗಿ ಎದುರಿಸುತ್ತಾಳೆ. ಊರಲ್ಲಿ ಬದುಕುವುದು ಕಷ್ಟ ಎನಿಸಿದ ಸಂದರ್ಭದಲ್ಲಿ ತನ್ನ ಒಡವೆಗಳನ್ನು ಎತ್ತಿಕೊಂಡು ಯಾರಿಗೂ ಹೇಳದೆ ಗಂಡನೊಂದಿಗೆ ಊರುಬಿಡುತ್ತಾಳೆ. ಒಡವೆಗಳನ್ನು ಬಂಡವಾಳವಾಗಿ ತೊಡಗಿಸಿ ದೂರದ ನಗರದಲ್ಲಿ ಒಂದು ಹೋಟೆಲ್ ನಡೆಸಿ ಒಳ್ಳೆಯ ಆದಾಯ ಗಳಿಸಿ, ಊರಲ್ಲಿ ಯಾರಿಗೆ ತಾನು ಹಣನೀಡಬೇಕಿತ್ತೋ ಅವರಿಗೆ ಹಣ ಕಳಿಸತೊಡಗುತ್ತಾಳೆ. ಎಲ್ಲ ಸಾಲ ತೀರಿಸಿಯೆ ತಾನು ಊರಿಗೆ ಬರುವೆನೆಂದು ಅವಳು ಪತ್ರ ಬರೆದಾಗ ಹಿಂದೆ ಜಗಳಾಡಿದ ಅದೇ ಮಂದಿ 'ಚಿಕ್ಕನಾಣಿ ವ್ಯವಹಾರದಲ್ಲಿ ಪ್ರಾಮಾಣಿಕಳು' ಎಂದು ಮೆಚ್ಚಿಕೊಳ್ಳುತ್ತಾರೆ. ಸ್ವಂತ ಪರಿಶ್ರಮದಲ್ಲಿ ಅಚಲ ವಿಶ್ವಾಸ ಹೊಂದಿರುವ ಚಿಕ್ಕನಾಣಿ ಎದುರಾದ ತನ್ನ

ಕಠಿಣ ದುಡಿಮೆ ಮತ್ತು ಕುಗ್ಗದ ಆತ್ಮವಿಶ್ವಾಸಗಳ ಬಲದಿಂದ ಎಲ್ಲ ಕ್ಲಿಷ್ಟ ಪರಿಸ್ಥಿತಿಗಳನ್ನೂ ಎದುರಿಸಿ ಗೆದ್ದು ಎಲ್ಲರ ಅಭಿಮಾನ ಗಳಿಸುವಂತಾಗಿದೆ.

೪.೩. ದುಡಿಯುವವರ ಆತಂಕಗಳು

ಕುಟುಂಬದ ಆರ್ಥಿಕತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸ್ತ್ರೀಯರು ಕೆಲಸಕ್ಕೆ ಹೋಗುವುದು ಆಧುನಿಕ ಕಾಲಘಟ್ಟದಲ್ಲಿ ಅನಿವಾರ್ಯವಾಗಿದೆ. ಆದರೆ ಇದರಿಂದಾಗಿ ಸ್ತ್ರೀಯರ ಶ್ರಮ ಮತ್ತು ಜವಾಬ್ದಾರಿಗಳು ಹೆಚ್ಚಿವೆ. ಅವರು ಮನೆಯ ಒಳಗೆ ಮತ್ತು ಹೊರಗೆ ಎರಡೂ ಕಡೆ ದುಡಿಯುತ್ತ ಏಕಕಾಲದಲ್ಲಿ ದ್ವಿಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಹಿಂದೆಂದಿಗಿಂತಲೂ ಹೆಚ್ಚು ಒತ್ತಡ ಅನುಭವಿಸುತ್ತಿದ್ದಾರೆ. ಮನೆ ಮತ್ತು ಉದ್ಯೋಗದ ಸ್ಥಳ ಈ ಎರಡೂ ಕಡೆಯಲ್ಲಿ ನ್ಯಾಯ ಒದಗಿಸಬೇಕಾದ ಹೆಣ್ಣು ತನ್ನ ಎಲ್ಲ ಸೌಖ್ಯ-ಸ್ವಾತಂತ್ರ್ಯಗಳನ್ನು ಕಳೆದುಕೊಳ್ಳುತ್ತಿರುವುದನ್ನು ಮಲಯಾಳಂ ಲೇಖಕರು ಗುರುತಿಸಿದ್ದಾರೆ. ವಿಶೇಷವಾಗಿ ಲೇಖಕಿಯರ ಕಥೆಗಳಲ್ಲಿ ಉದ್ಯೋಗಸ್ಥ ಮಹಿಳೆಯ ಸಮಸ್ಯೆ, ಒಳತೋಟಗಳು ನಿರಂತರವಾಗಿ ಪ್ರತಿಪಾದಿಸಲ್ಪಟ್ಟಿವೆ. ದುಡಿಯುವ ಹೆಣ್ಣುಮಗಳು ಮನೆಯವರ ಪಾಲಿಗೆ ಲಾಭದಾಯಕ ಸೊತ್ತಾಗಿ, ಕರೆಯುವ ಹಸುವಾಗುವ ದುರಂತವನ್ನೂ ಕೆಲವು ಕೃತಿಗಳು ಚಿತ್ರಿಸಿವೆ.

ದುಡಿದು ಸ್ವಾವಲಂಬಿಯಾಗುವ ಹೆಣ್ಣಿನ ಬಗ್ಗೆ ಪುರುಷಪರ ಸಮಾಜಕ್ಕೆ ಅಸಹನೆ ಮತ್ತು ಗುಮಾನಿಗಳಿವೆ. ಅವಳನ್ನು ಬೆಳೆಯಗೊಡಬಾರದು ಎಂಬ ಉದ್ದೇಶದಿಂದ ಆಕೆಯನ್ನು ಹೆದರಿಸಿ, ಅಪಹಾಸ್ಯಗೈದು, ಅಪವಾದ ಹೊರೆಸಿ ಅವಳನ್ನು ನಿರಾಯುಧಳನ್ನಾಗಿ ಮಾಡುತ್ತದೆ. ದುಡಿಮೆಯ ಸ್ಥಳದಲ್ಲಿ ಸ್ತ್ರೀಯರು ಬೇರೆ ಬೇರೆ ರೀತಿಯ ಹಿಂಸೆ, ಕಿರುಕುಳಗಳಿಗೂ ಒಳಗಾಗುತ್ತಾರೆ. ಪುರುಷಮಾಲಕರು ಮತ್ತು ಸಹೋದ್ಯೋಗಿಗಳು ಸ್ತ್ರೀಯರನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಯತ್ನಿಸುತ್ತಲೆ ಇರುತ್ತಾರೆ. ಇಂಥ ವಿಚಾರಗಳನ್ನು ಬಹಿರಂಗಪಡಿಸುವುದರಿಂದ ತಮ್ಮ ಚಾರಿತ್ರ್ಯವು ಸಂಶಯ, ಅಪಮಾನಗಳಿಗೆ ಒಳಗಾಗುವುದೆಂದು ಭಾವಿಸಿ ಬಹುಪಾಲು ಹೆಣ್ಣುಮಕ್ಕಳು ಇಂಥ ಕಿರುಕುಳ, ಅಸಹನೆಗಳನ್ನು ಅನ್ಯ ದಾರಿಯಿಲ್ಲದೆ ಮೌನವಾಗಿ ಸಹಿಸಿಕೊಳ್ಳುತ್ತಾರೆ. ಹೀಗೆ ಮನೆಯ ಅಥವಾ ಕಛೇರಿಯ ಕೆಲಸಕ್ಕೆ ಬರುವ ಹೆಣ್ಣನ್ನು ಕಾಮದೃಷ್ಟಿಯಿಂದ ನೋಡುವ ಮತ್ತು ಕಾಡುವ ಸನ್ನಿವೇಶಗಳು ಅನೇಕ ಮಲಯಾಳಂ ಕತೆ ಮತ್ತು ಕಾದಂಬರಿಗಳಲ್ಲಿವೆ.

ತಗಳಿ ಶಿವಶಂಕರ ಪಿಳ್ಳೆಯವರು ಬರೆದಿರುವ 'ಎರಡು ಬಳ್ಳ' ಕಾದಂಬರಿಯಲ್ಲಿ ಕೂಲಿಕೆಲಸದ ಹೆಣ್ಣಾಳುಗಳನ್ನು ಮಾಲಕವರ್ಗದವರು ಲೈಂಗಿಕ ತೃಷೆಗೆ ಬಳಸಿಕೊಳ್ಳುವ ಉಲ್ಲೇಖವಿದೆ. ಧಣಿಯ ಮಗ ಚಾಕ್ಕೊನ ಗದ್ದೆಯಲ್ಲಿ ಕೆಲಸ ಮಾಡುವ ಎಲ್ಲ ಪರತಿಯರಿಗೂ ಅವನ ಕಾಮುಕತನದ ಅರಿವಿದೆ. ಒಡೆಯರನ್ನು ಎದುರಿಸಿ ಬದುಕುವುದು ಅಥವಾ ತಪ್ಪಿಸಿಕೊಳ್ಳುವುದು ಅಸಾಧ್ಯವೆಂಬ ವಾಸ್ತವವೂ

ಗೊತ್ತಿದೆ. ಹಾಗಾಗಿ ಅವನನ್ನು ಎದುರುಹಾಕಿಕೊಳ್ಳದೆ, ಅವನಿಗೆ ಅನುಕೂಲೆಯರಾಗಿ ಸಹಕರಿಸಿ ಆರ್ಥಿಕ ಪ್ರತಿಫಲ ಪಡೆದಿದ್ದಾರೆ. ಪ್ರಯತ್ನಿಸಿದರೂ ತಪ್ಪಿಸಿಕೊಳ್ಳಲಾಗದ ಇಂಥ ಸಂಬಂಧದಲ್ಲಿ ಲಾಭವೂ ಇರುವುದರಿಂದ ಎಳೆಯ ಪರಯ ಹೆಣ್ಣುಗಳು ಚಾಕ್ಕೊನನ್ನು ಆಸಕ್ತಿಯಿಂದ ನೋಡುತ್ತಾರೆ. ಹಿರಿಯ ಪರಯತಿಯಾಗಿರುವ ಮರಿಯಳ ಅಭಿಪ್ರಾಯದಂತೆ ಅವಳು ಸಣ್ಣವಳಿದ್ದಾಗ 'ಕಟ್ಟಿಕೊಂಡ ಗಂಡಲ್ಲದೆ ಮತ್ತೊಬ್ಬ ಮುಟ್ಟಿದ ಪರಯತಿ ಇರಲಿಲ್ಲ. ಇವತ್ತು ಪ್ರಾಯಕ್ಕೆ ಬಂದ ಹೆಣ್ಣಾಳುಗಳಿಗೆಲ್ಲ ಚಿಕ್ಕ ಧಣೀರ ಮೇಲೆ ಕಣ್ಣು.'

ಕಾಮಾಂಧನಾದ ಚಾಕ್ಕೊ ಚಿರುದೆ ಕೆಲಸಕ್ಕೆ ಬಂದ ದಿನದಿಂದಲೂ ಅವಳನ್ನು ಗಮನಿಸುತ್ತಿದ್ದಾನೆ. ಒಮ್ಮೆ ತೆಂಗಿನ ತೋಪಿನಲ್ಲಿ ಒಂಟಿಯಾಗಿ ಬರುತ್ತಿದ್ದ ಚಿರುದೆಯನ್ನು ಹಿಡಿಯಲು ಯತ್ನಿಸಿದ್ದಾನೆ. ಹೇಗೋ ಸೆಣಸಾಡಿ ತಪ್ಪಿಸಿಕೊಂಡ ಚಿರುದೆ ಆ ಸಂಗತಿಯನ್ನು ಮರಿಯಳಲ್ಲಿ ತಿಳಿಸಿ 'ಕೆಲಸಕ್ಕೆ ಅಂತ ಗದ್ದೆಗಿಳಿದರೆ, ಆತ ಹಿಂದೆ ಇರುತ್ತಾನೆ. ಕೊಯ್ಲು ಸಾಲಿಗೆ ಬಂದರೆ ಅಲ್ಲೂ ಅವನೇ' ಎಂದು ಅಲವತ್ತುಗೊಳ್ಳುತ್ತಾಳೆ. ಆದರೆ ಮರಿಯಳಿಗೆ ಇದೇನೂ ಹೊಸ ವಿಚಾರವಲ್ಲ. ಶ್ರೀಮಂತ ಭೂಮಾಲಕರು ಬಡ ಹೊಲತಿಯರು ಹಾಗೂ ಪರತಿಯರ ಚಾರಿತ್ರ್ಯವನ್ನು ಕೆಡಿಸಿದ ಹಲವು ಕತೆಗಳು ಅವಳಿಗೆ ಗೊತ್ತಿವೆ. ಮರಿಯ ನಿಧಾನವಾಗಿ ಉತ್ತರ ಹೇಳಿದಳು: "ಅದು ಹಾಗೇನೆ ಮಗಳೆ! ಪ್ರಾಯಬಂದ ಹುಡುಗಿಯರನ್ನೆಲ್ಲ ಅವನು ನೋಡುತ್ತಾನೆ; ಕೆಲವರನ್ನು ಹಿಡಿದೂ ಇದಾನೆ; ಕೊಯ್ಲಿಗೆ ಅಂತ ಬಂದಿವೆಯಲ್ಲಾ ಬೇರೆ ಊರಿನಿಂದ, ಆ ಪೈಕಿ ನಾಲ್ಕೈದಿವೆ. ಅವಕ್ಕೆ ಅವನು ನೆಲ್ಲು ಕೊಡೋದನ್ನ ನೋಡಿದೆಯ? ನಿನ್ನ ಮೇಲೆ ಆತ ಕಣ್ಣಿಡುವುದನ್ನು ನಾನು ಕಂಡಿದ್ದೇನೆ." (ಪು. ೭೮) ಮರಿಯಳ ಪ್ರಕಾರ ಪರಯತಿ ಹೆಂಗಸರು 'ಜಂಪರ್ ತೊಟ್ಟಂದಿನಿಂದ' ದಣಿಗಳ ಮಕ್ಕಳ ಕಾಮದ ಕಣ್ಣಿಗೆ ಆಹಾರವಾಗುತ್ತಿದ್ದಾರೆ. 'ಒಂದು ಹೆತ್ತ ಬಳಿಕ' ಇಂಥ ಕಾಟಗಳು ಕಮ್ಮಿಯಾಗುತ್ತವೆ. ಕೆಲಸದ ಸ್ಥಳದಲ್ಲಿ ಇಂಥದೆಲ್ಲ ಸಹಜ ಮತ್ತು ಮನೆಯಿಂದ ಹೊರಗೆ ಬಂದು ಕೆಲಸ ಮಾಡಬೇಕಾದ ಹೆಂಗಸರು ಇವನ್ನೆಲ್ಲ ಪ್ರಕಟವಾಗಿ ವಿರೋಧಿಸದೆ ಸಹಿಸಿಕೊಳ್ಳಬೇಕು ಎಂಬ ತಿಳುವಳಿಕೆ ಮರಿಯಳಿಗೆ ಜೀವನಾನುಭವದಿಂದ ಬಂದಿದೆ.

ಚಿಕ್ಕಧಣಿಯ ಉಪಟಳದ ಬಗ್ಗೆ ಗಂಡನಿಗೆ ಹೇಳಬೇಕೆಂಬ ಯೋಚನೆಯೂ ಚಿರುದೆಗೆ ಹಲವು ಬಾರಿ ಬಂದಿದೆ. ಆದರೆ 'ಬಾಯಿ ತೆರೆಯಬಾರದು, ಮಗಳೆ! ಪಾಪ ಹೈದನನ್ನು ಕೊಲೆಗೆ ಬಲಿ ಕೊಡಬೇಡ. ಅವನಿಗೆ ತಿಳಿದರೆ ಅವನು ರೇಗಿ ಮೇಲೆ ಬೀಳುತ್ತಾನೆ. ಇವರೆಲ್ಲ ಸೇರಿ ಅವನನ್ನು ಹೊಡೆದು ಸಾಯಿಸುತ್ತಾರೆ' ಎಂಬ ಮರಿಯಳ ತೀವ್ರವಾದ ಎಚ್ಚರಿಕೆ ಬಾಯಿ ಮುಚ್ಚಿಸಿದೆ. ಸಿಟ್ಟಿನಿಂದ ಕೋರ ತೋರಬಹುದಾದ ಪ್ರತಿಕ್ರಿಯೆ ಅವನ ಪ್ರಾಣಕ್ಕೂ, ತಮ್ಮ ಸಂಸಾರದ ಸುಖಕ್ಕೂ ಸಂಚಕಾರ ತರಬಾರದು ಎಂಬ ಎಚ್ಚರದಿಂದ ಚಾಕ್ಕೊ ತನ್ನ ಮೇಲೆರಗಲು ಯತ್ನಿಸಿದ ಘಟನೆಯನ್ನು ಗಂಡನಿಂದ

ಮುಚ್ಚಿಡುತ್ತಾಳೆ. 'ಅವನು ಕೆಟ್ಟವನು' ಎಂದಷ್ಟೇ ಪರೋಕ್ಷವಾಗಿ ಹೇಳಿ ತನ್ನ ಸಂಸಾರವನ್ನು ರಕ್ಷಿಸಿಕೊಳ್ಳಲು ಯತ್ನಿಸುತ್ತಾಳೆ.

'ಅವನು ಮತ್ತೆ ಬರುತ್ತಾನೆ' ಎಂಬ ಆತಂಕ, ಕಳವಳಗಳಿಂದ ಚಿರುದೆ ತನ್ನನ್ನು ಚೆಲುವೆಯಾಗಿ ಕಾಣಿಸುವ ಅಂದದ ಸೀರೆಯನ್ನು ಉಡದೆ 'ಚಿಂದಿಬಟ್ಟೆ, ಹರಕುಬಟ್ಟೆ ಸುತ್ತಿಕೊಂಡು ಅದೇ ಹಳೇ ಕಾಲದ ಪರತಿ ಆಗಿರುವ' ನಿಶ್ಚಯ ಮಾಡುತ್ತಾಳೆ. 'ನನಗೆ ಹೆರಬೇಕು' ಎಂದು ಬಯಸುತ್ತಾಳೆ. ಬಲವಾದ ಮರ ಮತ್ತು ಭದ್ರವಾದ ಬಾಗಿಲು ಬೀಗಗಳಿಲ್ಲದ ಸ್ವಂತ ಗುಡಿಸಲಿಗೆ ವಾಸ ಬದಲಾಯಿಸಲು ಹೆದರುತ್ತಾಳೆ. ಈ ಊರಿನಿಂದ ದೂರ ಹೋಗಿ ಬದುಕಬೇಕೆಂದು ಯೋಚಿಸುತ್ತಾಳೆ. ತಾವಿರುವ ಪುಷ್ಪವೇಲಿ ಮಾತ್ರವಲ್ಲ, ಆ ಪ್ರದೇಶದಲ್ಲಿಯೆ ಗುಡಿಸಲು ಕಟ್ಟುವುದು ಬೇಡ, ಅಲ್ಲಿಂದ ದೂರ ಹೊರಟುಬಿಡೋಣವೆಂದು ದಿನದಲ್ಲಿ ಅರವತ್ತು ಬಾರಿಯೆಂಬಂತೆ ಗಂಡನಿಗೆ ಹೇಳುತ್ತಾಳೆ. ಆದರೆ ಮರಿಯಾಳ ಪ್ರಕಾರ ಅದರಿಂದ ದೊಡ್ಡ ವ್ಯತ್ಯಾಸವೇನೂ ಆಗುವುದಿಲ್ಲ 'ಎಲ್ಲಿ ಹೋದರೂ ಇಷ್ಟೇನೆ. ಇದಕ್ಕಿಂತಲೂ ಕಷ್ಟ.' ಯಾಕೆಂದರೆ ಅಲ್ಲಿಯೂ ಧಣಿಯರ ಮನೆಯ ಪ್ರಾಯದ ಹುಡುಗರು ಇದ್ದೇ ಇರುತ್ತಾರೆ ಮತ್ತು 'ಗುಂಡುಗುಂಡಗಿರೋ ಪ್ರಾಯದ ಹೊಲೆಯ ಹುಡುಗೀರು, ಪರಯ ಹುಡುಗೀರನ್ನು' ಹುಡುಕುತ್ತಿರುತ್ತಾರೆ.

ಮನೆಯ ಒಳಗೆ ಮತ್ತು ಹೊರಗೆ ದುಡಿಯುವ ಹೆಣ್ಣನ್ನು ಒಂದು ಲಾಭದ ಸೊತ್ತು ಎಂದು ಸಮಾಜ ಗ್ರಹಿಸಿದೆ. ಗಟ್ಟಿ ಮೈಯ ಒಳ್ಳೆಯ ಕೆಲಸಗಾರ್ತಿಯಾಗಿರುವ ಚಿರುದೆ 'ಗದ್ದೆ ಕೆಲಸ ಮಾತ್ರ ಅಲ್ಲ, ಮನೆಕೆಲಸದಲ್ಲೂ ತುಂಬ ಜಾಣೆ' ಎನಿಸಿಕೊಂಡವಳು. ಪರಯ ಸಮಾಜದ ಯಾವ ಗಂಡಾದರೂ ಕೈ ಹಿಡಿಯಬಯಸುವ 'ಒಳ್ಳೆಯ ಹೆಣ್ಣು' ಆಗಿದ್ದವಳು. 'ಅವಳನ್ನು ಮದುವೆಯಾದಾತನ ಕುಟುಂಬದಲ್ಲಿ ಉಪವಾಸದ ಸುಳಿವೇ ಇರದು' ಎಂಬ ಮುಂದಾಲೋಚನೆಯಿಂದ ಅವಳನ್ನು ಮದುವೆಯಾಗಬಯುಸಿ ಗಂಡುಗಳು ಸಾಲು ಸಾಲಾಗಿ ಬರತೊಡಗುತ್ತಾರೆ. ಮದುವೆ ಮಾರುಕಟ್ಟೆಯಲ್ಲಿ ಮಗಳಿಗೆ ಹೆಚ್ಚಿನ ಬೇಡಿಕೆ ಇರುವುದು ತಿಳಿದಾಗ ಅವಳಪ್ಪ ಕಾಳಿ ಮಗಳ ಬೆಲೆ ಏರಿಸುತ್ತಾನೆ. 'ಅವಳು ಒಂದು ಬೆಲೆಯೇರಿದ ವಸ್ತು. ಎಷ್ಟು ಹೆಚ್ಚು ತೆರ ಕೇಳಿದರೂ ಸಿಗುತ್ತೆ' ಎಂಬುದು ಸ್ಪಷ್ಟವಾಗಿ ದಿನದಿನಕ್ಕೂ ತೆರದ ಮೊತ್ತ ಏರಿಸುತ್ತ ಹೋಗುತ್ತಾನೆ. ಅವಳು ಮದುವೆಯಾಗಿ ಹೊರಟುಹೋದರೆ 'ಇಲ್ಲಿನ ಕೆಲಸಗಳು ಅಸ್ತವ್ಯಸ್ತ ಆಗ್ತವೆ' ಎಂಬ ಭಯವೂ ಇರುವುದರಿಂದ ಗಂಡಿನ ಕಡೆಯವರೊಡನೆ ಒರಟು ಮಾತಾಡಿ ಜಗಳ ಕಾಯುತ್ತ ಮಗಳನ್ನು ಮದುವೆ ಮಾಡಿ ಕಳುಹಿಸುವ ದಿನವನ್ನು ಮುಂದೂಡುತ್ತ ಹೋಗುತ್ತಾನೆ. ಗಂಡ ಮಗಳನ್ನು ಉಪಯೋಗಿಸಿ ಹೆಚ್ಚು ತೆರ ಮತ್ತು ನೆಲ್ಲು ಗಳಿಸಲು ಯತ್ನಿಸುತ್ತಿರುವುದು ಚಿರುದೆಯ ತಾಯಿ ಕುಞ್ಞಾಳಿಗೆ ಅರ್ಥವಾಗಿ ಗಂಡನ ದುರಾಸೆಯನ್ನು ಪ್ರತಿಭಟಿಸುತ್ತಾಳೆ: "ಇದೆಂತ ಆಟ? ಬಂದ ಬಂದೋರನ್ನೆಲ್ಲ ಜಗಳ ತೆಗೆದು ಹಿಂದಕ್ಕಟ್ಟೋದೇನಿದು? ಯಾಕೆ ಹೀಗೆ ಮಾಡ್ತೀಯಾ? ಹುಡುಗಿ

ಹೀಗೆಯೇ ನಿಂತಿದ್ದರೆ ಸಾಕೇನು? ಮಗಳು ಗೈದು ತಂದದ್ದನ್ನು ತಿಂದು ಬದುಕೋಣ ಅಂತ ಕೂತಿದ್ದೀಯಾ ನೀನು, ನನಗ್ಗೊತ್ತಿಲ್ವಾ?" (ಪು. ೨) ಹೆಂಡತಿಯನ್ನು ಗದರಿ ಬಾಯಿಮುಚ್ಚಿಸುವ ಕಾಳಿಯ ಸ್ವಾರ್ಥ ಚಿರುದೆಯ ಮದುವೆಯ ಸಂದರ್ಭದಲ್ಲಿಯೂ ವ್ಯಕ್ತವಾಗುತ್ತದೆ. ಕೊಡಬೇಕಾದ ಹಣ ಬಾಕಿಯಿದೆಯೆಂದು ಜಗಳ ತೆಗೆದು ಹೆಣ್ಣನ್ನು ಉಳಿಸಿಕೊಳ್ಳಲು ಪ್ರಯತ್ನಿಸುವ ಕಾಳಿಗೆ ಮಗಳ ಭಾವನೆಗಳ ಬಗ್ಗೆ ಕಾಳಜಿಯಿಲ್ಲ. ಚಿರುದೆಯ ಅಪ್ಪ ಕಾಳಿ ಮತ್ತು ಅವಳ ಕೈ ಹಿಡಿಯಬಯಸುವ ಗಂಡುಗಳು.. ಇಬ್ಬರ ದೃಷ್ಟಿಯೂ ಚಿರುದೆಯಿಂದ ದೊರೆಯಬಹುದಾದ ಆರ್ಥಿಕ ಲಾಭದ ಕಡೆಗೆ ದೃಷ್ಟಿ ನೆಟ್ಟಿವೆ. ಅವರ ಪಾಲಿಗೆ ಚಿರುದೆ 'ಹೆಚ್ಚು ದುಡಿಯಬಲ್ಲ' ಒಂದು ಲಾಭದಾಯಕ ವಸ್ತುವಾಗಿದ್ದಾಳೆ.

ಕಮಲಾದಾಸ್ ಅವರ 'ಸ್ವಾತಂತ್ರ್ಯ ಹೋರಾಟಗಾರನ ಮಗಳು' ಕತೆಯಲ್ಲಿ ಶಿಕ್ಷಕಿಯಾಗಿರುವ ಭಾರತಿಯ ತಂದೆ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಕಾರಣದಿಂದಾಗಿ ಊರಜನರ ಗೌರವಕ್ಕೆ ಪಾತ್ರಳಾಗಿದ್ದಾಳೆ. ಅದೇ ಗೌರವಕ್ಕಾಗಿ ರಸ್ತೆಯಲ್ಲಿ ನಡೆಯುವಾಗ ಯುವಕರು ಅವಳನ್ನು ಚುಡಾಯಿಸದೆ ಬಿಟ್ಟಿದ್ದಾರೆ. ಅವಳ ಬಡಕಲು ದೇಹ, ಬತ್ತಿದ ಎದೆ ಮತ್ತು ಮುಂದಕ್ಕೆ ಚಾಚಿಕೊಂಡಿರುವ ಹಲ್ಲುಗಳು ಆ ಪೋಲಿ ಯುವಕರ ಸಭ್ಯತೆಗೆ ಕಾರಣವಾಗಿರಬಹುದಾದ ಸಾಧ್ಯತೆಯೂ ಕತೆಯಲ್ಲಿದೆ. ಸೌಂದರ್ಯ ಮತ್ತು ಹಣದ ಕೊರತೆಯಿಂದ ಮದುವೆಯಾಗದೆ ಉಳಿದಿರುವ ಭಾರತಿ ಇಳಿವಯಸ್ಸಿನ ಅಪ್ಪನಿಗೆ ಆಧಾರವಾಗಿದ್ದಾಳೆ. ತನ್ನ ಸೌಂದರ್ಯದ ಕುರಿತಾದ ಕೀಳರಿಮೆಯಿಂದಾಗಿ ಮದುವೆಯ ಆಸೆಯನ್ನೆ ಬಿಟ್ಟಿದ್ದಾಳೆ. 'ತನ್ನಂತಹ ಕುರೂಪಿ ಮಗಳಿರುವುದರಿಂದ ಅಪ್ಪ ಯಾವ ಕೊರತೆಯೂ ಇಲ್ಲದೆ ಬದುಕುತ್ತಿದ್ದಾರೆ. ತಾನು ಒಂದು ವೇಳೆ ಸುಂದರಿಯಾಗಿದ್ದಿದ್ದರೆ ಯಾರಾದರೊಬ್ಬ ಸಹೋದ್ಯೋಗಿ ಮದುವೆಯಾಗುತ್ತಿದ್ದನೋ ಏನೋ' ಎಂದು ಹತಾಶೆಯಿಂದ ಯೋಚಿಸುತ್ತಾಳೆ. ಸಹೋದ್ಯೋಗಿಗಳಾದ ಉಪಾಧ್ಯಾಯಿನಿಯರು ಮದುವೆಯಾಗಿ ತಾಯಂದಿರಾಗುವುದನ್ನೂ, ಎರಡು ಮಕ್ಕಳನ್ನು ಹೆತ್ತ ಬಳಿಕ ಕೆಲಸಕ್ಕೆ ರಾಜೀನಾಮೆ ಕೊಟ್ಟು ನೆಮ್ಮದಿಯಲ್ಲಿರುವುದನ್ನೂ ನೋಡುತ್ತ ನಿಟ್ಟುಸಿರಿಡುವ ಭಾರತಿಯ ಮುಂದೆ ಪರ್ಯಾಯ ದಾರಿಗಳಿಲ್ಲ.

ಸ್ವಾತಂತ್ರ್ಯ ಹೋರಾಟಗಾರನಾಗಿ ಸರಕಾರದಿಂದ ತಾಮ್ರಪತ್ರದ ಗೌರವವನ್ನು ಪಡೆದಿದ್ದ ಅವಳ ಅಪ್ಪನ ಆರೋಗ್ಯದ ಬಗ್ಗೆ ಎಲ್ಲರಿಗೂ ಕಾಳಜಿಯಿದೆ. ಆದರೆ ಕಳೆದುಹೋಗುತ್ತಿರುವ ಅವಳ ಯೌವನದ ಬಗ್ಗೆಯಾಗಲೀ ಉಸಿರುಗಟ್ಟಿದ ಸ್ಥಿತಿಯಲ್ಲಿನ ಬದುಕಿನ ಬಗ್ಗೆಯಾಗಲಿ ಅವರಾರಿಗೂ ಚಿಂತೆಯಿಲ್ಲ ಎಂಬುದು ಭಾರತಿಯ ದುಃಖಕ್ಕೆ ಕಾರಣವಾಗಿದೆ. ಶಾಲೆಯಲ್ಲಿ ತಾತ್ಕಾಲಿಕವಾಗಿ ರಜೆಯಲ್ಲಿ ಹೋಗಲಿರುವ ಮಾಸ್ತರರ ಬದಲಿಗೆ ಅವಳ ಅಪ್ಪ ದಿನಕ್ಕೆ ಒಂದು ಗಂಟೆ ಐದನೇ ತರಗತಿಯ ಮಕ್ಕಳಿಗೆ ಪಾಠ ಮಾಡಿದರೆ ಒಂದು ದಿನಕ್ಕೆ ಹದಿನೈದು ರೂಪಾಯಿ ಕೊಡುವ ಒಂದು ಪ್ರಸ್ತಾಪವನ್ನು ಮುಖ್ಯ ಶಿಕ್ಷಕರು ಮುಂದಿಟ್ಟಾಗ ಬಹಳ ಸಂತೋಷಪಡುತ್ತಾಳೆ. ಹಾಗಾದರೂ ಮನೆಯ ಖರ್ಚಿಗೆ ಒಂದಿಷ್ಟು

ಹೆಚ್ಚುವರಿ ಮೊತ್ತ ದೊರಕೀತು ಎಂಬ ಆಸೆ. ಆದರೆ ಅಪ್ಪನಿಗೋ ಐದನೇ ತರಗತಿಯ ಎಳೆಯ ಮಕ್ಕಳಿಗೆ ತನ್ನ ಸ್ವಾತಂತ್ರ್ಯ ಹೋರಾಟದ ಗಂಭೀರತೆಯನ್ನು ತಿಳಿದುಕೊಳ್ಳುವ ಪ್ರೌಢತೆಯಿಲ್ಲದೆ ಇರುವುದರಿಂದ ಅಲ್ಲಿ ಹೋಗಿ ತನ್ನ ಕಥೆಯನ್ನು ಹೇಳುವುದು ಅವಮಾನವೆಂಬ ಭಾವನೆ. ಉದ್ಯೋಗಸ್ಥ ಸ್ತ್ರೀಯರ ಇಬ್ಬಗೆಯ ಸ್ಥಿತಿಯ ಸಂಕಷ್ಟಗಳನ್ನೂ ಈ ಕಥೆ ಚಿತ್ರಿಸುತ್ತದೆ. ಕುಟುಂಬದ ಪಾಲಿಗೆ 'ಕರೆಯುವ ಹಸು'ಗಳಾಗಿರುವ ಭಾರತಿಯಂಥಾ ಸ್ತ್ರೀಯರು ಮದುವೆ–ಮಕ್ಕಳು ಮುಂತಾದ ಸ್ವಂತದ ಕನಸು, ಅಪೇಕ್ಷೆಗಳನ್ನು ಬಾಯಿಬಿಟ್ಟು ಹೇಳಲಾಗದೆ ಮನಸ್ಸಿನ ಒಳಗೇ ಅಡಗಿಸಿಕೊಂಡು, ಕ್ರಮೇಣ ತಾವು ಸ್ತ್ರೀಯರು ಎಂಬುದನ್ನೇ ಮರೆತು, ಕುಟುಂಬದ ಬೆನ್ನೆಲುಬಾಗುವುದಕ್ಕಾಗಿ ದುಡಿಯುವ ಯಂತ್ರಗಳಾಗುತ್ತಾರೆ. ಕುಟುಂಬದ ಒಳಗೆ ನಡೆಯುವ ಇಂಥ ಶೋಷಣೆಗಳು ಯಾರ ಗಮನಕ್ಕೂ ಬಾರದೆ ಹೆಣ್ಣಿನ ನಿಟ್ಟುಸಿರಿನೊಂದಿಗೆ ಮುಗಿದುಹೋಗುತ್ತವೆ.

ಈಗಾಗಲೆ ಪ್ರಸ್ತಾಪಿಸಲಾಗಿರುವ ಸಿತಾರಾ ಎಸ್. ಅವರ 'ಅಗ್ನಿ' ಕತೆಯು ಉದ್ಯೋಗಸ್ಥ ಹೆಣ್ಣಿನ ಕುರಿತಾಗಿ ಪುರುಷಪ್ರಧಾನ ಸಮಾಜದ ದೃಷ್ಟಿ, ದುಡಿಯುವ ಹೆಣ್ಣು ಎದುರಿಸಬೇಕಾಗುವ ಆತಂಕಗಳು ಮತ್ತು ಬೆಳೆಸಿಕೊಳ್ಳಬೇಕಾದ ಆತ್ಮಸ್ಥೈರ್ಯಗಳನ್ನು ವಿಶ್ಲೇಷಿಸುತ್ತದೆ. ಹಾಗೇ 'ಆಲಾಹಳ ಹೆಣ್ಣುಮಕ್ಕಳು' ಕೃತಿಯಲ್ಲಿ ಕೆಲಸವಿಲ್ಲದೆ ದಿನಗಳೆಯುವ ಹದಿನಾಲ್ಕು ಮಂದಿ ಕೇಡಿಗಳು ಹೆದರಿಸಿದರೆಂದು ಮನೆಯಲ್ಲಿ ಅಡಗದೆ ಹೊಟ್ಟೆಪಾಡಿಗಾಗಿ ಅಪ್ಪದ ಬುಟ್ಟಿಯನ್ನು ಹೊತ್ತು ಮಾರಾಟಕ್ಕೆ ಹೊರಡುವ ನೋನು ಮತ್ತು ಊರವರ ಗೊಣಗಾಟ ಗದರಿಕೆಗಳಿಗೆ ಬಗ್ಗದೆ ಸೂಲಗಿತ್ತಿ ಕೆಲಸವನ್ನು ಮುಂದುವರಿಸುವ ಮೌನಿ ಕುಂಜಿಲೆ.. ಇವರು ದುಡಿಯುವ ಮಹಿಳೆಯ ವಿವಿಧ ಸಮಸ್ಯೆಗಳ ಪ್ರತೀಕವಾಗಿದ್ದಾರೆ. ಹೊರಗೆ ಕಾಮುಕರಿದ್ದಾರೆಂದು ಮನೆಯಲ್ಲೆ ಅಡಗುವುದರ ಬದಲಿಗೆ ತಮಗೆ ಸಿಕ್ಕಿದ ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳನ್ನು ಸ್ತ್ರೀಯರು ಸರಿಯಾಗಿ ಬಳಸಿಕೊಳ್ಳಬೇಕು, ಪುರುಷರ ಅಹಮಿಕೆಯಿಂದ ಪ್ರೇರಿತವಾದ ಕಿರುಕುಳಗಳಿಗೆ ಅಳುಕದೆ ಶಕ್ತವಾಗಿ ಎದುರಿಸಿ ತಮ್ಮ ಸಾಮರ್ಥ್ಯವನ್ನು ಸ್ಥಾಪಿಸಬೇಕು ಎಂಬ ಆಶಯ ಮಲಯಾಳಂ ಕಥನಗಳಲ್ಲಿ ವ್ಯಕ್ತವಾಗಿದೆ.

೪.೪. ಆರ್ಥಿಕ ಚಟುವಟಿಕೆಯಾಗಿ ಲೈಂಗಿಕ ದುಡಿಮೆ

ದುಡಿಮೆಯ ಒಪ್ಪಿತ ದಾರಿಗಳು ಇಲ್ಲದೆ ಇದ್ದಾಗ ಹೆಣ್ಣು ತನ್ನ ದೇಹವನ್ನು ಅಧಿಕೃತ ವ್ಯಾಪಾರದ ವಸ್ತುವಾಗಿ ಬಳಸಿಕೊಳ್ಳುವ ಉದಾಹರಣೆಗಳು ಹಲವು ಕಥನಗಳಲ್ಲಿ ಸಿಗುತ್ತವೆ. ಈ ದೇಹ ತನ್ನದು, ಅದನ್ನು ಯಾವಾಗ ಮತ್ತು ಹೇಗೆ ಬಳಸಬೇಕು ಎಂಬ ಆಯ್ಕೆ ತನಗಿರಬೇಕು ಎಂಬ ಪರೋಕ್ಷ ಪ್ರತಿಪಾದನೆಯುಳ್ಳ ಸ್ತ್ರೀದೃಷ್ಟಿಯೂ ಕೆಲವೊಮ್ಮೆ ಕಂಡುಬರುತ್ತದೆ. ಜೀವನ ನಿರ್ವಹಣೆಗೆ ಅಗತ್ಯವೆನಿಸಿದಾಗ ಯಾವುದೇ ಮುಜುಗರವಿಲ್ಲದೆ ತನ್ನ ದೇಹವನ್ನು ಉಪಯೋಗಿಸಿ ಹಣ ಸಂಪಾದಿಸುವುದು ಅಪರಾಧವಲ್ಲ ಎಂಬ ನಿರಾಳ ಧೋರಣೆ ಕೆಲವು ಕಥೆಗಳಲ್ಲಿದೆ. ವೇಶ್ಯಾವೃತ್ತಿಯನ್ನು

ಇತರ ಎಲ್ಲ ವೃತ್ತಿಗಳಂತೆ ದುಡಿಮೆಯ ದಾರಿಯಾಗಿ, ಬದುಕಿನ ಒಂದು ಕ್ರಮವಾಗಿ, ಸಹಜ ಆರ್ಥಿಕ ಚಟುವಟಿಕೆಯಾಗಿ ಚಿತ್ರಿಸಲಾಗಿದೆ.

ಕಮಲಾದಾಸ್ ಅವರು ಬರೆದ 'ರುಕ್ಮಿಣಿಗೊಂದು ಬೊಂಬೆಮರಿ' ಕತೆಯಲ್ಲಿ ನಾಲ್ಕು ಹೆಣ್ಣುಗಳನ್ನು ಇಟ್ಟುಕೊಂಡು ವೇಶ್ಯಾವೃತ್ತಿ ನಡೆಸುತ್ತಿರುವ ಆಯಿಗೆ ಇತರ ವೃತ್ತಿಗಳಂತೆ ಇದೂ 'ಹೊಟ್ಟೆ ಹೊರೆದುಕೊಳ್ಳುವ ಒಂದು ಕಸುಬು' ಎಂಬ ಧೋರಣೆಯಿದೆಯೆ ಹೊರತು ಹಣಕ್ಕಾಗಿ ಮೈಮಾರುವುದು ಪಾಪವೆಂಬ ಕೀಳರಿಮೆಯಿಲ್ಲ. ತನ್ನ ಹುಡುಗಿಯರ ಆರೋಗ್ಯದ ಬಗ್ಗೆ, ದೇಹದ ಪೋಷಣೆಯ ಬಗ್ಗೆ ಕಾಳಜಿ ವಹಿಸುವ ವೃತ್ತಿಪರಳಾದ ಆಯಿಯ ಪ್ರಕಾರ 'ಸೂಳೆ' ಅನ್ನುವುದು ಒಂದು ಒರಟು ಶಬ್ದ. ಹಿಂದೊಮ್ಮೆ ತನ್ನ ಕೋಠಿಯಲ್ಲಿ ದುಡಿಯುತ್ತಿದ್ದ ಅನುಸೂಯೆಗೆ 'ಎಂದೂ ಕುಡಿಯದ ಒಳ್ಳೆಯ ಮನುಷ್ಯನನ್ನು' ತೋರಿಸಿ ಮದುವೆ ಮಾಡಿಸಿ ಹರಸಿ ಕಳುಹಿಸಿದ್ದಾಳೆ. ಆದರೆ ಅನುಸೂಯೆ 'ಯುವಕನನ್ನು ಬಯಸಿ' ಇನ್ನೊಂದು ಮದುವೆಯಾದಳು. ಈ ಕುರಿತು ಆಯಿಗೆ ಆಕ್ಷೇಪವಿದೆಯಾದರೂ ಮತ್ತೊಮ್ಮೆ ಅನುಸೂಯೆಯನ್ನು ಕೋಠಿಯಲ್ಲಿ ದುಡಿಸಲು ಆಯಿ ಬಯಸಿಲ್ಲ. ಹಾಗೇ ಮನೆಯಲ್ಲಿ ಹೊತ್ತಿಗೆ ಅನ್ನವಿಲ್ಲದೆ ಎಲ್ಲರೂ ಸಾಯುತ್ತಿದ್ದರೂ ಹೊಟ್ಟೆ ತುಂಬಿಸುವುದಕ್ಕಾಗಿ ಅನುಸೂಯೆ ಅಡ್ಡದಾರಿ ಹಿಡಿದಿಲ್ಲ. ಏಕೆಂದರೆ ಅವಳೀಗ ಒಬ್ಬನನ್ನು ಮದುವೆಯಾಗಿರುವ ಗರತಿಯಾಗಿದ್ದಾಳೆ. ಸಂದರ್ಭಕ್ಕೆ ಅಗತ್ಯಕ್ಕೆ ವೇಶ್ಯೆಯಾಗಿದ್ದ ಅನುಸೂಯೆ, ಮದುವೆ ಮಾಡಿಕೊಂಡು ಗೃಹಿಣಿಯಾಗಿ ಬಾಳುವ ಈ ಕಲ್ಪನೆಯಲ್ಲಿ ಸುಧಾರಣಾವಾದದ ಪ್ರೇರಣೆಯನ್ನೂ, ವೇಶ್ಯಾವೃತ್ತಿಯನ್ನು ಒಂದು ಆರ್ಥಿಕ ಚಟುವಟಿಕೆಯಾಗಿ ಪ್ರತಿಪಾದಿಸಿರುವುದನ್ನೂ ಗುರುತಿಸಬಹುದು.

ಮೊದಲ ಪತಿಯಿಂದ ಜನಿಸಿದ ಅಪ್ರಾಪ್ತ ವಯಸ್ಸಿನ ಮಗಳು ರುಕ್ಮಿಣಿಯ ಮೇಲೆ ಅನುಸೂಯಳ ಎರಡನೇ ಪತಿ ದೌರ್ಜನ್ಯವೆಸಗಿದಾಗ 'ಮಗಳ ರಕ್ಷಣೆ ಮತ್ತು ಆರೋಗ್ಯಕರ ಪೋಷಣೆಗೆ' ಬೇರೆ ದಾರಿ ಕಾಣದೆ ಆಯಿಯ ವೇಶ್ಯಾವಾಟಿಕೆಗೆ ತಂದುಬಿಡುತ್ತಾಳೆ. ಮನೆಯ ಬಡತನ, ಮಗಳು ಮೊಟ್ಟೆ ಪರೋಟದಂಥ ಒಳ್ಳೆಯ ಆಹಾರ ಸೇವಿಸಿ ಮೈಕೈ ತುಂಬಿಕೊಂಡು ಪುಷ್ಟಿಯಾಗಬೇಕು ಎಂಬ ಮಾತೃಸಹಜವಾದ ಆಸೆ, ಮಲತಂದೆಯ ಕಾಮುಕತೆಯಿಂದ ರಕ್ಷಿಸುವ ಹಂಬಲ... ಇವು ಆಕೆ ಸ್ವಂತ ಮಗಳನ್ನು ವೇಶ್ಯಾಗೃಹಕ್ಕೆ ತಂದು ಬಿಡುವಂತೆ ಮಾಡಿವೆ. 'ಆಯಿ ಹೇಳಿದಂತೆ ಕೇಳಬೇಕೆಂದು' ಮಗಳಿಗೆ ಬುದ್ಧಿ ಹೇಳಿ ಆಯಿಯ ಸುಪರ್ದಿಗೆ ಒಪ್ಪಿಸುವ ಅನುಸೂಯೆಗೆ ಪುಟ್ಟ ಮಗಳು ಅಪರಿಚಿತ ಗಂಡಸರನ್ನು 'ಸಹಿಸಿಕೊಳ್ಳಬೇಕಾಗುತ್ತದೆ' ಎಂಬ ಅರಿವಿದೆ. ಮನೆಯಲ್ಲಿ ಉಪವಾಸವಿರುವ ಇನ್ನೊಂದು ಮಗುವಿನ ನೆನಪಾಗಿ ಮಗಳಿಗೆ ಆಯಿ ಕೊಟ್ಟ ಬೆಲೆಯನ್ನೂ ನಿರಾಕರಿಸಲಾರದೆ ಸ್ವೀಕರಿಸಿದ್ದಾಳೆ.

ಅನುಸೂಯೆಯ ವರ್ತನೆಯ ಹಿಂದೆ ತೀರಾ ಪ್ರಾಯೋಗಿಕ ಜೀವನದೃಷ್ಟಿಯಿರುವುದನ್ನು ಗುರುತಿಸಬಹುದು. ಹಿಂದೆ ಅಲ್ಲೇ ಇದ್ದವಳಾಗಿ ಕೋಠಿಯ ಜೀವನಕ್ರಮ ಅನುಸೂಯೆಗೆ ತಿಳಿದಿದೆ.

ಮಗಳ ಭವಿಷ್ಯವೇನೆಂದು ಗೊತ್ತಿದೆ. ಹೊಟ್ಟೆ ಹೊರೆಯುವುದಕ್ಕಾಗಿ ಹೆಣ್ಣುಗಳನ್ನು ಖರೀದಿಸುವ ಮತ್ತು ಅವರ ದೇಹವನ್ನು ಬಳಸಿ ವ್ಯಾಪಾರ ಮಾಡುವ ಆಯಿಯ ಬಗ್ಗೆ ಅವಳಿಗೆ ಆಕ್ಷೇಪವಿಲ್ಲ. ಆದರೆ ಅಪ್ಪನ ಸ್ಥಾನದಲ್ಲಿರುವ ವ್ಯಕ್ತಿ ಮಗಳ ದೇಹದ ಮೇಲೆಸಗುವ ದೌರ್ಜನ್ಯವನ್ನು ಆಕೆ ಒಪ್ಪಲಾರಳು. ಜೊತೆಗೆ ಹದಿಹರೆಯದ ಮಗಳನ್ನು 'ಮಧ್ಯಾಹ್ನ ಕೇವಲ ಟೀ ಮತ್ತು ಕೆಲವೊಮ್ಮೆ ಬಾಳೆಹಣ್ಣು ಮಾತ್ರ' ದೊರೆಯುವ ಬಡತನದಿಂದ ಮುಕ್ತಗೊಳಿಸಿ ದೇಹದ ಬೆಳವಣಿಗೆಗೆ ಅಗತ್ಯವಿರುವ ಒಳ್ಳೆಯ ಆಹಾರವನ್ನು ಒದಗಿಸಬೇಕಾಗಿದೆ.

ಹರೆಯದಲ್ಲಿ ವೇಶ್ಯಾವೃತ್ತಿ ನಡೆಸಿ, ಒಂದಿಷ್ಟು ಗಳಿಸಿ, ಇಳಿವಯಸ್ಸಿನಲ್ಲಿ ಕೋಠಿ ನಡೆಸುತ್ತಿರುವ ಆಯಿ ಲಕ್ಷ್ಮೀಬಾಯಿಗೆ ಹೆಣ್ಣಿನ ಚಾರಿತ್ರ್ಯವೆಂಬುದು ಅವಳ ದೇಹಕ್ಕೆ ಸಂಬಂಧಿಸಿದ್ದು ಎಂಬ ಕಲ್ಪನೆಯೆ ಇಲ್ಲ. ಅನಾಥರಾದ, ಪರಿತ್ಯಕ್ತರಾದ ಹೆಣ್ಣುಮಕ್ಕಳನ್ನು ಪ್ರೀತಿ, ಕಾಳಜಿಯಿಂದ ಬೆಳೆಸಿ ದಂಧೆಗೆ ಹಚ್ಚುವ ಆಯಿ ತಾನೋರ್ವ ಉದ್ಯೋಗದಾತೆ ಎಂಬ ಭಾವನೆಯನ್ನು ಹೊಂದಿದ್ದಾಳೆ. ಕೋಠಿಯ ಹುಡುಗಿಯರಲ್ಲಿ ಎಲ್ಲರಿಗಿಂತ ಚಿಕ್ಕವಳೂ, ಹೆಚ್ಚು ಚೆಲುವೆಯೂ ಆಗಿರುವ ರುಕ್ಮಿಣಿಯನ್ನು ಎಂದಾದರೊಮ್ಮೆ ತಿರುಗಿ ಬರಬಹುದಾದ ಸ್ವಂತ ಮಗನಿಗೆ ಮದುವೆ ಮಾಡಿಕೊಡಬೇಕು, ಹಾಗೆ ಮಗನಿಗೆ ಮದುವೆ ಮಾಡಿಕೊಟ್ಟ ಬಳಿಕ ಯಾವುದಾದರೂ ಪುಣ್ಯಕ್ಷೇತ್ರದಲ್ಲಿ ತನ್ನ ಬದುಕಿನ ಇಳಿಗಾಲವನ್ನು ಕಳೆಯಬೇಕು ಎಂಬ ಹಂಬಲವಿದೆ. ಹಾಗೆಂದು ಮಗ ಬರುವವರೆಗೂ ರುಕ್ಮಿಣಿ ಗಿರಾಕಿಗಳೊಂದಿಗೆ ಸಹಕರಿಸಲೇಬೇಕಾಗಿದೆ. ಈ ಹಿಂದೆ ತನ್ನ ಕೋಠಿಯಲ್ಲಿದ್ದ ಸುಂದರಿ ಮೀರಾಳನ್ನು ಮಗನ ವಧುವೆಂದು ಆಕೆ ನಿಶ್ಚಯಿಸಿದ್ದಳು. ಆದರೆ ಮೀರಾಗೆ ಬೇರೆ ಹುಡುಗನ ಮೇಲೆ ಪ್ರೇಮ ಹುಟ್ಟಿತು. ಕಾಣಲೆಂದು ಬಂದು ಬಲುಹೊತ್ತು ಮಾತಿನಲ್ಲಿ ಕಳೆಯುವ ಆ ಕಾಲೇಜು ಹುಡುಗನ ಬಗ್ಗೆ ಆಯಿ ಆಡುವ ಆಕ್ಷೇಪದ ಮಾತುಗಳಲ್ಲಿಯೂ ಆಯಿಯ ವೃತ್ತಿಪರತೆಯನ್ನು ಗುರುತಿಸಬಹುದು 'ಇದು ಸೂಳೆಗೇರಿ. ಕಾನ್‌ಫರೆನ್ಸ್ ಹಾಲ್ ಅಲ್ಲ.'

ತನ್ನಂತೆಯೇ ವೇಶ್ಯಾವೃತ್ತಿ ನಡೆಸುವ ಪಕ್ಕದ ಬೀದಿಯ ಕೌಸಲ್ಯೆಯೊಂದಿಗೆ ಆಯಿಗೆ ವೃತ್ತಿಯಲ್ಲಿ ಪೈಪೋಟಿಯಿದೆ. ತನ್ನ ಕೋಠಿಗೆ ಬಂದ ಗಿರಾಕಿಗಳು ಪಕ್ಕದ ಕೋಠಿಗೆ ಹೋಗದಂತೆ ಅವರನ್ನು ಹಿಡಿದಿಟ್ಟುಕೊಳ್ಳಬೇಕಾಗಿದೆ. ಅದಕ್ಕಾಗಿ ಕೌಸಲ್ಯೆಯ ಹುಡುಗಿಯರಿಗಿಂತ ಯಾವುದರಲ್ಲೂ ಕಡಿಮೆ ಎನಿಸದ ರೀತಿಯಲ್ಲಿ ತನ್ನ ಹುಡುಗಿಯರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾಳೆ. ಪ್ರತಿದಿನ ಹುಡುಗಿಯರಿಗೆ ನೀಡುವ ನಾಶ್ತಾದಲ್ಲಿ 'ತುಪ್ಪದಲ್ಲಿ ಅದ್ದಿದ ಪರೋಟಾ, ಮೊಟ್ಟೆಯ ಪದಾರ್ಥ ಮತ್ತು ಒಂದು ಲೋಟ ಹಾಲು' ಒದಗಿಸುತ್ತಾಳೆ. ನಾಶ್ತಾದ ಬಳಿಕ ಮಧ್ಯಾಹ್ನ ಎರಡು ಗಂಟೆಯ ಊಟದವರೆಗೂ ಹುಡುಗಿಯರು 'ಚಾಪೆಗಳಲ್ಲಿ ಮುದುಡಿ ಬಿದ್ದುಕೊಳ್ಳಲು' ಅವಕಾಶ ನೀಡಿದ್ದಾಳೆ. ಹೀಗೆ ಹೊಟ್ಟೆತುಂಬ ಆಹಾರ ಮತ್ತು ಸಾಕಷ್ಟು ವಿಶ್ರಾಂತಿ ಪಡೆದು ಸಂಜೆ ಐದು ಗಂಟೆಯ ಬಳಿಕ ತುಸು ದೀರ್ಘವಾದ ಜಳಕದೊಂದಿಗೆ ಅಲಂಕರಿಸಿಕೊಂಡು ತಾಜಾ ಚೆಲುವೆಯರಾಗಿ ಹುಡುಗಿಯರು

ದುಡಿಮೆಗೆ ಸಿದ್ಧವಾಗುವಂತೆ ನೋಡಿಕೊಂಡಿದ್ದಾಳೆ. ಹುಡುಗಿಯರು ಲೈಂಗಿಕ ರೋಗಗಳಿಗೆ ಗುರಿಯಾಗದಂತೆ ನಿಗದಿತವಾಗಿ ವೈದ್ಯಕೀಯ ತಪಾಸಣೆಗೂ ಕಳುಹಿಸುತ್ತಾಳೆ.

ಸಣ್ಣ ಪ್ರಾಯದ ರುಕ್ಮಿಣಿ ಮತ್ತು ಸೀತೆಯರಿಗೆ ಗಿರಾಕಿಗಳೊಂದಿಗೆ ಇರುವುದೆಂದರೆ ತಮ್ಮ ಆಟದ ಸಮಯ ಕದಿಯುವ 'ನಿಜವಾಗಿಯೂ ನಾಯಿಗಳಂಥ ಗಂಡಸರ ಸಹವಾಸ'ವಾಗಿದೆ. ಗಿರಾಕಿಗಳಿಗೆ ತಮ್ಮ ದೇಹವನ್ನು ಒಪ್ಪಿಸಿಕೊಳ್ಳುವುದು ಪಾಪವೆಂಬ ಕಲ್ಪನೆ ಅವರಿಗಿಲ್ಲ. ಅಂಥ ಭಾವನೆ ಬರುವಂತೆ ಆಯಿ ಅವರನ್ನು ನಡೆಸಿಕೊಂಡಿಲ್ಲ. ಗಿರಾಕಿಯನ್ನು ಸಂತೃಪ್ತಿಪಡಿಸಿ ಕಳಿಸಿದ ಬಳಿಕ ಮಕ್ಕಳು ಬಳೆಯಾಟವನ್ನೋ ಬೊಂಬೆಯಾಟವನ್ನೋ ಮುಂದುವರಿಸಬಹುದಾಗಿದೆ. ಇನ್ನೂ ಪ್ರಾಪ್ತವಯಸ್ಸಿಗೆ ಬಂದಿಲ್ಲದ ಸೀತೆ, ರುಕ್ಮಿಣಿಯರು ಆಯಿಯ ನಿರ್ದೇಶನದಂತೆ ಬೇರೆ ಬೇರೆ ಪುರುಷರಿಗೆ ತಮ್ಮ ದೇಹಗಳನ್ನು ವಿರೋಧವಿಲ್ಲದೆ ಒಪ್ಪಿಸಿಕೊಳ್ಳುತ್ತಾರೆ. ಹಾಗೆ ಸಹಕರಿಸುವುದು ತಮ್ಮ ಜೀವನ ನಿರ್ವಹಣೆಗಾಗಿ ಮಾಡಲೇಬೇಕಾದ ಕೆಲಸ ಎಂದು ಅವರು ಅರ್ಥ ಮಾಡಿಕೊಂಡಿದ್ದಾರೆ.

ಪರಿಸ್ಥಿತಿಯ ಸೆಳೆತಕ್ಕೆ ಸಿಕ್ಕಿ ವೇಶ್ಯೆಯಾಗಿರುವವಳು ತನ್ನನ್ನು ಇಷ್ಟಪಟ್ಟು ಮದುವೆಯಾಗುವವನು ಸಿಕ್ಕಿದರೆ ವೇಶ್ಯಾವೃತ್ತಿ ತೊರೆದು ಗೃಹಿಣಿಯಾಗುವ ಅವಕಾಶಗಳಿವೆ. ಮುನಿದು ಮನೆ ಬಿಟ್ಟು ಹೋಗಿದ್ದ ಆಯಿಯ ಮಗ ಮರಳಿ ಬರುವೆನೆಂದು ಪತ್ರ ಬರೆದ ಬಳಿಕ 'ತನಗೂ ವಯಸ್ಸಾಗಿದೆ, ಇಳಿವಯಸ್ಸಿಗೆ ಸಾಲುವಷ್ಟು ಹಣವನ್ನು ಕೂಡಿಟ್ಟಾಗಿದೆ, ಇನ್ನು ಈ ವ್ಯವಹಾರವನ್ನು ಕೋಠಿಯ ಅನುಭವಸ್ಥ ಹೆಣ್ಣಾಗಿರುವ ಸರಸ್ವತಿಗೆ ವಹಿಸಿಕೊಟ್ಟು, ಕಾಶಿಯಲ್ಲಿ ನೆಲೆಸಿ ಅಲ್ಲೇ ಪ್ರಾಣಬಿಡುವುದೆಂದು, ಮಗ ಒಪ್ಪಿದರೆ ರುಕ್ಮಿಣಿಯನ್ನು ಅವನಿಗೆ ಮದುವೆ ಮಾಡಿಕೊಡುವುದೆಂದು' ಆಯಿ ದೃಢವಾಗಿ ನಿರ್ಧರಿಸುತ್ತಾಳೆ.

ಈ ಕತೆಯು 'ಸೂಳೆ' ಎಂಬೊಂದು ಅನುಚಿತ ಶಬ್ದದ ಬಳಕೆಯ ಬಗ್ಗೆ ಒಂದು ಮುಖ್ಯವಾದ ಪ್ರಶ್ನೆಯನ್ನು ಎತ್ತಿದೆ. ವೇಶ್ಯಾಗೃಹಕ್ಕೆ ಹೋಗುವ ಪುರುಷನನ್ನು ಯಾವುದೇ ಪ್ರತ್ಯೇಕ ಪದದಿಂದ ಗುರುತಿಸಲಾಗುವುದಿಲ್ಲ. ಅಂದ ಮೇಲೆ ಸ್ತ್ರೀಯರು ಮಾತ್ರ ಏಕೆ ಕೀಳರಿಮೆ ಉಂಟು ಮಾಡುವ ಪದಗಳಿಂದ ಅರಿಯಲ್ಪಡಬೇಕು ಎಂಬ ಪ್ರಶ್ನೆ ನ್ಯಾಯವೇ ಆಗಿದೆ. ತಮ್ಮ ಆಯ್ಕೆಯಿಂದಲ್ಲದೆ ವೇಶ್ಯೆಯರಾಗಿರುವ ಈ ಸ್ತ್ರೀಯರು ಲೈಂಗಿಕ ದುಡಿಮೆಗಾರ್ತಿಯರಾಗಿದ್ದಾರೆ. ಇತರ ಯಾವುದೇ ಉದ್ಯೋಗಸ್ಥ ಸ್ತ್ರೀಯರಂತೆ ತಮ್ಮ ದೇಹದ ಆರೋಗ್ಯ ಮತ್ತು ಶುಚಿತ್ವವನ್ನು ಅವರೂ ಕಾಪಾಡಿಕೊಳ್ಳಬೇಕಾಗಿದೆ. ಇತರ ಹೆಣ್ಣುಮಕ್ಕಳಂತೆಯೇ ಅವರಿಗೂ ಬಟ್ಟೆ, ಒಡವೆ, ಅಲಂಕಾರಗಳಲ್ಲಿ, ಮನೋರಂಜನೆಯಲ್ಲಿ ಆಸಕ್ತಿಯಿದೆ. ದೇವರಲ್ಲಿ ಶ್ರದ್ಧೆಯಿದೆ. ತಮ್ಮ ಭವಿಷ್ಯದ ಬಗ್ಗೆ ಕಾತರವಿದೆ. ಸ್ತ್ರೀಯ ಚಾರಿತ್ರ್ಯದ ಬಗೆಗಿನ ಸಾಂಪ್ರದಾಯಿಕ ತಿಳುವಳಿಕೆಗಳನ್ನು ನಿರಾಕರಿಸಿ, ವೇಶ್ಯಾವೃತ್ತಿಯನ್ನು ಇತರ ವೃತ್ತಿಗಳಷ್ಟೇ ಸಹಜವಾದ ಆರ್ಥಿಕ ಚಟುವಟಿಕೆಯಾಗಿ ನಿರೂಪಿಸುವ, ಅವಕಾಶ ಸಿಕ್ಕಿದಾಗ

ವೇಶ್ಯೆಯೊಬ್ಬಳು ಮದುವೆಯಾಗಿ ಗರತಿಯಾಗುವ ದಾರಿಯನ್ನು ತೆರೆದಿಡುವ ಈ ಕಥೆ ಮಲಯಾಳಂ ಸಾಹಿತ್ಯದ ಸ್ತ್ರೀನಿರ್ವಚನಕ್ಕೆ ಒಂದು ಹೊಸ ಆಯಾಮವನ್ನು ಒದಗಿಸುತ್ತದೆ.

ಕಮಲಾದಾಸ್ ಅವರು ಬರೆದಿರುವ 'ಪದ್ಮಾವತಿ ಎಂಬ ವೇಶ್ಯೆ' ಕತೆಯು ದುಡಿದು ಆಯಾಸಗೊಂಡ ವೇಶ್ಯೆಯೊಬ್ಬಳು ಪದೇಪದೇ ತನ್ನ ಕನಸಿನಲ್ಲಿ ಬರುವ ದೇವರನ್ನು ಹುಡುಕಿಕೊಂಡು ಬೆಟ್ಟದ ತುದಿಯನ್ನೇರಿ ದೇಗುಲದ ಬಾಗಿಲಲ್ಲಿ ನಿಂತು ಅನನ್ಯ ಶ್ರದ್ಧೆಯಿಂದ ದೇವರನ್ನೇ ಒಲಿಸಿಕೊಳ್ಳುವ ವಿಶಿಷ್ಟ ಆಶಯವುಳ್ಳದ್ದು. ಮುಚ್ಚಿದ ದೇವಸ್ಥಾನದ ಬಾಗಿಲನ್ನು ತೆರೆದುಕೊಂಡು 'ಮುದಿತನದಿಂದಾಗಿ ಸ್ಥೂಲ ದೇಹವನ್ನು ಹೊಂದಿರುವ' ದೇವರೇ ಹೊರಬಂದು ಅವಳನ್ನು ಸ್ವೀಕರಿಸುತ್ತಾನೆ. ಕಥೆಯಲ್ಲಿ ಫ್ಯಾಂಟಸಿಯಿದ್ದರೂ ದೇವರಿಗೆ ಕಾಣಿಕೆಯಾಗಿ ಕೊಡಲು ಏನೂ ಇಲ್ಲದೆ ಪದ್ಮಾವತಿ ಸ್ವಂತ ದೇಹವನ್ನೇ ಅರ್ಪಿಸುವುದು ವಿಶೇಷವಾಗಿ ಗಮನಿಸಬೇಕಾದ ಅಂಶ. ದೇವರಿಗಾಗಿ ತಂದ ಉಡುಗೊರೆಗಳನ್ನೆಲ್ಲ ದಾರಿಯಲ್ಲಿ ಯಾರ್ಯಾರೋ ಕಿತ್ತುಕೊಂಡಿರುವುದರಿಂದ ಅವಳಲ್ಲಿ ಈಗ ಉಳಿದಿರುವುದು ದೇಹ ಮಾತ್ರ. 'ಎಷ್ಟು ಮಂದಿ ಜಲಕ್ರೀಡೆಯಾಡಿದರೂ, ಮುಳುಗಿ ಮುಳುಗಿ ಮಿಂದರೂ, ಎಷ್ಟು ತೆಪ್ಪಗಳು ತೇಲಿದರೂ, ಕ್ಷಯಿಸದ ನದಿಯಂತೆ ಕೊನೆಯಿಲ್ಲದೆ ಉಳಿದಿರುವ' ಪದ್ಮಾವತಿಯ ದೇಹವನ್ನು ಅವಳ ನಿವೇದನೆಯಂತೆ ದೇವರು ಸಂತೋಷದಿಂದ ಸ್ವೀಕರಿಸುತ್ತಾನೆ. ಮತ್ತು 'ಆ ಸ್ವಲ್ಪ ಹೊತ್ತಿಗೆ ಮಾತ್ರವಲ್ಲ, ಎಂದೆಂದಿಗೂ' ಅವಳವನಾಗುತ್ತಾನೆ.

ಬೆಟ್ಟವೇರುವ ದಾರಿಯಲ್ಲಿ ಪದ್ಮಾವತಿಯನ್ನು ಕಾಡಿದ, ಅಸಹ್ಯ ಬಯಕೆಗಳನ್ನು ಮುಂದಿಟ್ಟ ಸೋಮಾರಿ ಯುವಕರು ಆಕೆ ಬೆಟ್ಟವಿಳಿದು ಬರುವಾಗ ಅವಳನ್ನು ತಡೆಯುವುದಿಲ್ಲ. ಅಷ್ಟು ಮಾತ್ರವಲ್ಲ; 'ಅಮ್ಮಾ ನಮ್ಮನ್ನೆಲ್ಲ ಆಶೀರ್ವದಿಸು' ಎಂದಷ್ಟೇ ಹೇಳಲು ಶಕ್ತರಾಗುತ್ತಾರೆ. ಅಂದರೆ ದೇವರೊಂದಿಗಿನ ಸಂಗಮದಿಂದ ಪದ್ಮಾವತಿಯೆಂಬ ವೇಶ್ಯೆ ತಾಯಿಯಂತೆ ಪವಿತ್ರಳಾಗಿದ್ದಾಳೆ. ಅಸಹಾಯಕ ಹೆಣ್ಣಿನ ದೇಹವನ್ನು ಬಳಸಿಕೊಂಡು ಸಮಾಜದ ಆರೋಗ್ಯವನ್ನು ಕಾಪಾಡಿಕೊಳ್ಳುವ ವ್ಯವಸ್ಥೆ ಅವಳನ್ನು ವೇಶ್ಯೆ ಎಂಬ ಹಣೆಪಟ್ಟಿಯಿತ್ತು ಮುಖ್ಯವಾಹಿನಿಯಿಂದ ದೂರವಿಡುತ್ತದೆ. ಆದರೆ ಹೆಣ್ಣಿಗೆ ದೇಹವೂ ದುಡಿಮೆಯ ಒಂದು ದಾರಿ ಮಾತ್ರವಾಗಿದೆ ಹೊರತು ಅದರ ಬಗ್ಗೆ ಕೀಳರಿಮೆಯಿಲ್ಲ. ಅವಳನ್ನು ನಿಶ್ಯರ್ತ ಸ್ವೀಕರಿಸುವ ದೇವರು ಸಮಾಜವು ಚಾರಿತ್ರ್ಯಹೀನೆಯೆಂದು ಹೀಗಳೆಯುವ ವೇಶ್ಯೆಯ ಮಾನಸಿಕ ಮತ್ತು ದೈಹಿಕ ಪರಿಶುದ್ಧತೆಯ ಪ್ರಮಾಣವಾಗಿದ್ದಾನೆ ಎಂದು ಈ ಕತೆ ಪ್ರತಿಪಾದಿಸುತ್ತದೆ.

ದೇಹಸುಖಕ್ಕಾಗಿ ವೇಶ್ಯೆಯರನ್ನು ಮುಲಾಜಿಲ್ಲದೆ ಉಪಯೋಗಿಸುವ ಪುರುಷರಿಗೆ ಅವರ ಬಗ್ಗೆ ಕಿಂಚಿತ್ತಾದರೂ ಕಾಳಜಿ, ಗೌರವಗಳಿಲ್ಲ. ತಮ್ಮ ಮನೆಯ ಮರ್ಯಾದಸ್ಥ ಸ್ತ್ರೀಯರು ವೇಶ್ಯೆಯರ ಸಂಪರ್ಕಕ್ಕೆ ಬರುವುದು ಇಷ್ಟವಿಲ್ಲ. ಸಿತಾರಾ ಎಸ್. ಅವರು ಬರೆದ 'ಸರಕು' ಎಂಬ ಸಣ್ಣಕತೆಯು ಸಮಾಜದ ಈ ದ್ವಂದ್ವ ನಿಲುವಿನ ಬಗ್ಗೆ ಗಮನ ಸೆಳೆಯುತ್ತದೆ. ಈ ಕತೆಯ ನಾಯಕಿ ವೇಶ್ಯೆಯರ

ಪುನರ್ವಸತಿಗಾಗಿ ಓಡಾಡುವ ಕೆಲಸದಲ್ಲಿ ತೊಡಗಿಸಿಕೊಂಡಿರುವವಳು. ಪತ್ನಿಯ ಉದ್ಯೋಗದ ಬಗ್ಗೆ ಅವಳ ಗಂಡನಿಗೆ ತಾತ್ಸಾರವಿದೆ. ಅದೊಂದು ಉಪಯೋಗವಿಲ್ಲದ ಕೆಲಸ, ಗೌರವವಿಲ್ಲದ ವೃತ್ತಿ ಎಂದಾತ ಭಾವಿಸಿದ್ದಾನೆ. ಸ್ತ್ರೀಯರು ತಮ್ಮ ಪಾವಿತ್ರ್ಯಕ್ಕೆ ತೊಂದರೆಯಾಗದ, ಸಾಂಪ್ರದಾಯಿಕ ಉದ್ಯೋಗಗಳನ್ನು ಮಾತ್ರ ಮಾಡಬಹುದು ಎಂಬುದು ಅವನ ನಂಬಿಕೆ. ಈ ವಿಷಯವಾಗಿ ಅವರ ನಡುವೆ ಬಿಸಿಬಿಸಿ ಚರ್ಚೆ ನಡೆದು ಮನೆಯಲ್ಲಿ ಕಿರಿಕಿರಿ ಉಂಟಾಗಿದೆ. ವೇಶ್ಯೆಯರ ಸಮಸ್ಯೆಗಳ ಕುರಿತಾಗಿ ನಡೆದ ಬಹಿರಂಗ ಸಂವಾದದ ಸಭೆಯಲ್ಲಿ ಹೆಂಗಸರನ್ನು 'ಸರಕುಗಳು' ಎಂದು ಉಲ್ಲೇಖಿಸಿದ ಪತ್ರಕರ್ತ ಸ್ವಾಮಿನಾಥನ್‌ನ ಕೆನ್ನೆಗೆ ಹೊಡೆಯುತ್ತಾಳೆ. ಸಮಾಜದ ಸ್ವಾಸ್ಥ್ಯಕ್ಕಾಗಿ ವೇಶ್ಯೆಯರು ವೇಶ್ಯೆಯರಾಗಿಯೆ ಉಳಿಯಬೇಕು ಎಂಬ ಅವನ ವಾದವು ಒಟ್ಟು ಸಮಾಜದ ಆಶಯವೇ ಆಗಿದೆ. ಹೆಣ್ಣಿನ ಚಹರೆಯು ರೂಢಿಗಿಂತ ಭಿನ್ನವಾಗುವುದನ್ನು ಪಿತೃಪರ ವ್ಯವಸ್ಥೆಯು ಸಹಿಸುವುದಿಲ್ಲ. ವೇಶ್ಯಾವೃತ್ತಿ ತೊರೆದ ಸ್ತ್ರೀಯರು ನೆಮ್ಮದಿಯ ಬದುಕು ಸಾಗಿಸುವುದಕ್ಕೆ ಅವಕಾಶ ಮಾಡಿಕೊಡಬಹುದಾದ ಉದ್ಯೋಗಗಳನ್ನು ಹುಡುಕುತ್ತ ಅಲೆಯುವಾಗ ಎದುರಿಸಿದ ಅವಮಾನ ಅಗ್ನಿಪರೀಕ್ಷೆಗಳು ಅವಳಿಗೆ ತನ್ನ ಗಂಡನೂ ಸೇರಿದಂತೆ ಸಮಾಜದ ಸ್ತ್ರೀವಿರೋಧಿಯಾದ ನಿಲುವನ್ನು ಕಾಣಿಸಿವೆ. ವೇಶ್ಯೆಯರ ಪುನರ್ವಸತಿಯ ಕುರಿತಾಗಿ ನಡೆದ ಚರ್ಚೆಯ ಸಂದರ್ಭದಲ್ಲಿ 'ನಿಮಗೆ ಸರಕಾಗುವ ಯೋಗ್ಯತೆಯೂ ಇಲ್ಲ' ಎಂದು ಸ್ವಾಮಿನಾಥನ್‌ಗೆ ದಿಟ್ಟವಾಗಿ ಪ್ರತ್ಯುತ್ತರ ಕೊಡುವ ಮೂಲಕ, ವೇಶ್ಯೆಯಾಗುವುದು ಕೂಡ ಹೆಣ್ಣಿನ ಸಾಮರ್ಥ್ಯ, ಅರ್ಹತೆಗಳಿಗೆ ಸಿಕ್ಕಿದ ಸ್ಥಾನವಾಗಿದೆ; ಗಂಡಸಾದವನು ಬಯಸಿದರೂ ಅದನ್ನು ಪಡೆದುಕೊಳ್ಳಲಾರ ಎಂದು ಸರಕು ಕತೆಯು ಪ್ರತಿಪಾದಿಸುತ್ತದೆ.

೪.೫. ಆರ್ಥಿಕ ಅಸಹಾಯಕತೆ ಮತ್ತು ಹೊಂದಾಣಿಕೆಗಳು

ಆರ್ಥಿಕ ಪ್ರತಿಫಲವಿಲ್ಲದ ಮನೆ ಅಥವಾ ಕುಟುಂಬದ ಕೆಲಸದಲ್ಲಿ ತೊಡಗಿಸಿಕೊಂಡಿದ್ದು ಸ್ವಂತಕ್ಕೆಂದು ಯಾವುದೇ ಆದಾಯ ಹೊಂದಿರದ ಸ್ತ್ರೀಯರು ಸಣ್ಣಪುಟ್ಟ ಖರ್ಚುಗಳಿಗಾಗಿ ಪರರನ್ನು ಅವಲಂಬಿಸಿರುತ್ತಾರೆ. ತಮಗೆ ಇಷ್ಟವಾದುದನ್ನು ಹೊಂದಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲದೆ ಇನ್ನೊಬ್ಬರ ಮುಂದೆ ದೈನ್ಯರಾಗಿ ನಿಲ್ಲುತ್ತಾರೆ. ತಮ್ಮದಾದ ಆದಾಯವಿಲ್ಲದ ಸ್ತ್ರೀಯರು ಕೌಟುಂಬಿಕ ಹಿಂಸೆಯನ್ನು ಸಹಿಸಿಕೊಳ್ಳಬೇಕಾಗುತ್ತದೆ. ಅನಿಶ್ಚಿತತೆಯಲ್ಲಿ ಬದುಕಬೇಕಾಗುತ್ತದೆ. ಆರ್ಥಿಕ ಅವಲಂಬನೆಯು ಹೆಣ್ಣಿನ ನೆಮ್ಮದಿಯನ್ನು ಕಸಿಯುತ್ತದೆ. ಆಕೆ ನಂಬಿದ ಮೌಲ್ಯಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಕಾರಣವಾಗುತ್ತದೆ.

ವೈಕ್ಕಂ ಮುಹಮ್ಮದ್ ಬಷೀರ್ ಬರೆದ 'ಪಾತುಮ್ಮನ ಆಡು' ಮತ್ತು 'ಬಾಲ್ಯಕಾಲ ಸಖಿ' ಈ ಎರಡೂ ಕಿರುಕಾದಂಬರಿಗಳಲ್ಲಿ ಬರುವ ಸ್ತ್ರೀಯರು ಪರಂಪರಾಗತ ಮುಸ್ಲಿಂ ಸಮಾಜದ ಆರ್ಥಿಕ ಸ್ವಾತಂತ್ರ್ಯವಿಲ್ಲದ ಹೆಣ್ಣುಗಳ ಪರಾಧೀನತೆಯ ಪ್ರತೀಕವಾಗಿದ್ದಾರೆ. ತನ್ನ ಸಂಸಾರಕ್ಕೆ ಸಾಲದ ಪುಟ್ಟ

ಗುಡಿಸಲಲ್ಲಿ ವಾಸಿಸುವ ಪಾತುಮ್ಮ ತಾನು ಸಾಕಿದ ಆಡಿಗೆ ಕಂಡದ್ದನ್ನೆಲ್ಲ ತಿನ್ನುವ ಚುರುಕನ್ನು ಕಲಿಸಿದ್ದಾಳೆ. ಪಕ್ಕದಲ್ಲೇ ಇರುವ ಅಮ್ಮನ ಮನೆಗೆ ದಿನಾಲೂ ಅದನ್ನು ಅಟ್ಟಿಬಿಡುತ್ತಾಳೆ. ಅಂಗಳದ ಹಲಸಿನಮರದ ಎಲೆಗಳು, ಮನೆಯೊಳಗೆ ಸಿಕ್ಕಿದ ವಸ್ತುಗಳನ್ನು ತಿಂದು ಅದು ಹೊಟ್ಟೆ ತುಂಬಿಸಿಕೊಳ್ಳುತ್ತದೆ. ಅಮ್ಮ, ತಂಗಿ, ನಾದಿನಿಯರಲ್ಲಿ ಹಕ್ಕೊತ್ತಾಯ ಮಂಡಿಸಿ ದಿನಾಲೂ ಅದಕ್ಕೆ ಗಂಜಿನೀರನ್ನು ಒದಗಿಸುವಂತೆಯೂ ನೋಡಿಕೊಳ್ಳುತ್ತಾಳೆ. ಈ ಆಡು ಮರಿ ಹಾಕಿದಾಗ ಪಾತುಮ್ಮ ಗಂಡ ಮಕ್ಕಳಿಗೆ ಮೊದಲಿನಂತೆಯೇ ಕಪ್ಪು ಚಹಾ ಕೊಟ್ಟು ಆಡಿನ ಹಾಲನ್ನು ಹೋಟೆಲಿಗೆ ಮಾರುತ್ತಾಳೆ. 'ಇದುವರೆಗೆ ಹಾಲಿಲ್ಲದೆ ಚಾ ಕುಡಿದಿಲ್ವಾ?' ಎಂದು ಸಮರ್ಥಿಸಿಕೊಳ್ಳುತ್ತಾಳೆ. ಅಮ್ಮನ ಮನೆಯಲ್ಲಿ ತಂಗಿ ನಾದಿನಿಯರು ಸೇರಿ ಅದರ ಹಾಲು ಕರೆದು ಚಹಾ ತಯಾರಿಸಿ ಕುಡಿದದ್ದು ತಿಳಿದಾಗ ಅತ್ತು ಕರೆದು ಅವರಿಗೆ ದಿನಾಲೂ ಅರ್ಧ ಬಾಟ್ಲು ಹಾಲು ಕಳಿಸಿಕೊಡುವ ಒಪ್ಪಂದಕ್ಕೆ ಬರುತ್ತಾಳೆ. ಆಕೆ ಹಾಗೆ ಕಳಿಸುವ ಹಾಲಿನೊಂದಿಗೆ ಅವರು ದಿನಾಲೂ ಸಣ್ಣ ಮಕ್ಕಳನ್ನು ಆಡಿನ ಮರಿಗಳನ್ನಾಗಿ ಕೆಚ್ಚಲಿಗೆ ಬಿಟ್ಟು ಇನ್ನೊಂದಷ್ಟು ಹಾಲು ಕರೆದುಕೊಳ್ಳುವುದು ಸ್ವಾರಸ್ಯವಾಗಿದೆ.

ಅಮ್ಮ, ತಂಗಿ, ತಮ್ಮ ಎಲ್ಲರೂ ತಮಗಾಗಿ ದೊಡ್ಡಣ್ಣ ಬಶೀರರ ಪಂಚೆ ಷರಟು ಕದ್ದು ಅಡಗಿಸಿಟ್ಟಿದ್ದಾರೆ. ಮಗನಿಗೆ ಪುಸ್ತಕ ಬರೆದ ಬಾಬ್ತು ಹಣ ಬಂದಾಗೆಲ್ಲ ಆಸೆಯಿಂದ ಬಂದು ಮಗನೆದುರು ಕೂರುವ ಅಮ್ಮ ಆಗೀಗ ಗುಟ್ಟಾಗಿ ಹಿರಿಮಗನಲ್ಲಿ ಹಣ. ಕೇಳಿ ಪಡೆದುಕೊಳ್ಳುತ್ತಾಳೆ. ಮನೆಯ ಅಂಗಳದ ಚಾಂಬಕಾಯಿ, ಅಂಬಟೆಕಾಯಿಗಳನ್ನು ಗಿರಾಕಿ ಹುಡುಕಿ ಮಾರುತ್ತಾಳೆ. ಮಾಂಸ ಮತ್ತು ಮೊಟ್ಟೆಯ ಮಾರಾಟದ ಉದ್ದೇಶಕ್ಕಾಗಿ ನೂರಾರು ಕೋಳಿಗಳನ್ನು ಸಾಕುತ್ತಾಳೆ. ಮಗನನ್ನು ಭೇಟಿಯಾಗಲು ಬರುವವರ ಉಪಯೋಗಕ್ಕೆಂಬ ಕಾರಣವೊಡ್ಡಿ ಮನೆಗೆ ಬಟ್ಟಲು, ಗ್ಲಾಸು, ಪಿಂಗಾಣಿ ಪಾತ್ರೆಗಳು, ಹಾಸಿಗೆ, ತಲೆದಿಂಬು, ತಾಮ್ರದ ಪಾತ್ರೆಗಳನ್ನು ತರಿಸಿಕೊಳ್ಳುತ್ತಾಳೆ. ಪಾತುಮ್ಮ ಮತ್ತು ಆನುಮ್ಮ ಇಬ್ಬರು ತಂಗಿಯರೂ ಅಣ್ಣನಿಂದ ಗುಟ್ಟಾಗಿ ಚಿನ್ನದೊಡವೆ, ಪಾತ್ರೆಗಳು ಮುಂತಾದ ಸಹಾಯವನ್ನು ಆಶಿಸುತ್ತಾರೆ. ಪಾತುಮ್ಮ ತಮ್ಮಂದಿರಿಗೆ ದಪ್ಪ ಹಾಲು ಹಾಕಿದ ಚಹಾದ ಲಂಚ ಕೊಟ್ಟು ತನ್ನ ಕುಪ್ಪಸ ಹೊಲಿದುಕೊಡುವಂತೆ, ತನ್ನ ಗಂಡನಿಗೆ ಸಾಲ ಕೊಟ್ಟ ಬಗ್ಗೆ ಕೇಸು ಹಾಕದಂತೆ ಮನವೊಲಿಸುತ್ತಾಳೆ. ಹೆಂಗಸರಿಗೆ ಸ್ವಂತ ಆದಾಯವಿಲ್ಲದ ಬಡತನ ಇಂಥ ಸಣ್ಣಪುಟ್ಟ ಕೌಟುಂಬಿಕ ವಂಚನೆ ಎನಿಸಬಹುದಾದ ಕೃತ್ಯಗಳಿಗೆ ಕಾರಣವಾಗಿದೆ.

'ಬಾಲ್ಯಕಾಲಸಖಿ' ಕೃತಿಯ ಮಜೀದ್‌ನ ತಂದೆ ತನ್ನಂಥ ಯೋಗ್ಯರಾದ ಗಂಡಸರಿಗೆ 'ಈಗಲೂ ಹತ್ತು ಸಾವಿರ ರೂಪಾಯಿ ಸ್ತ್ರೀಧನ ಕೊಟ್ಟು ಹೆಣ್ಣು ಕೊಡ್ತಾರೆ, ಇನ್ನೊಂದು ಮದುವೆಯಾಗ್ತೇನೆ' ಎಂದು ಹೆಂಡತಿಯೊಡನೆ ಹೇಳುತ್ತಾನೆ. ಅವನ ಪರಿಗ್ರಹಿಕೆಯಲ್ಲಿ 'ಯೋಗ್ಯ' ಎಂದರೆ ಹಣವುಳ್ಳವ ಎಂದೇ ಆಗಿದೆ. ಬೆಳೆದ ಎರಡು ಮಕ್ಕಳ ತಂದೆಯಾಗಿರುವ ಅವನಿಗೆ ಇನ್ನೂ ಹೆಣ್ಣು ಕೊಡುವವರಿದ್ದಾರೆಂಬುದು

ಅವನ ಪತ್ನಿಗೂ ತಿಳಿದಿದೆ. ವರಮಾನವಾಗಲೀ ಆಸ್ತಿಯಾಗಲೀ ಇಲ್ಲದೆ ಪತಿಯ ಗಳಿಕೆಯನ್ನು ಅವಲಂಬಿಸಿ ಬದುಕುವ ಅವಳು ಈ ಮಾತಿಗೆ ಯಾವ ವಿರೋಧವನ್ನೂ ವ್ಯಕ್ತಪಡಿಸದೆ ಗಂಡನ ಹೊಡೆತ, ಒದೆತಗಳನ್ನು ಸಹಿಸಿಕೊಳ್ಳುತ್ತಾಳೆ.

ತಂದೆ ತೀರಿಕೊಂಡ ಕಾರಣ ಹಿರಿಯ ಮಗಳಾದ ಸುಹ್ರಾ ಚಿಕ್ಕ ಪ್ರಾಯದಲ್ಲೇ ಓದು ನಿಲ್ಲಿಸಿ ಅಮ್ಮ ಮತ್ತು ತಂಗಿಯರ ಜವಾಬ್ದಾರಿ ಹೊರುತ್ತಾಳೆ. ಅವಳ ಅಭಿಪ್ರಾಯ ಕೇಳದೆ ನಡೆದ ಮದುವೆಯ ವ್ಯವಸ್ಥೆಯಲ್ಲೂ ಅವಳು ತೆಂಗಿನ ಸಿಪ್ಪೆ ಜಜ್ಜಿ ಹಗ್ಗ ತಯಾರಿಸಿ ಪತಿಗೆ ಹಣ ತಂದು ಕೊಡಬೇಕಾಗುತ್ತದೆ. ಹಾಗೆ ದುಡಿದರೂ ಅವಳಿಗೆ ಬೈಗುಳ, ಹೊಡೆತ ತಪ್ಪಿದ್ದಲ್ಲ. ಅವಳ ಚಿನ್ನವನ್ನು ಮುಗಿಸಿದ್ದಲ್ಲದೆ ಆಸ್ತಿ ತರುವಂತೆಯೂ ದಿನಾ ಪೀಡಿಸುತ್ತಾನೆ. ಇಷ್ಟಾದರೂ ಆಕೆ ಪ್ರತಿಭಟಿಸದಂತೆ ತಡೆಯುವುದು ಅವಳ ಆರ್ಥಿಕ ಅಸುರಕ್ಷತೆಯ ಸ್ಥಿತಿಯಾಗಿದೆ. ತವರಿಗೆ ಮರಳೋಣವೆಂದರೆ ಅಲ್ಲೂ ಬಡತನವೇ ಇರುವುದರಿಂದ ಆಕೆ ಎಲ್ಲ ಹಿಂಸೆಯನ್ನೂ ಸಹಿಸಿಕೊಂಡು ಗಂಡನ ಮನೆಯಲ್ಲಿ ತೊತ್ತಾಗಿ ಬಾಳುತ್ತಾಳೆ.

ಏಳು ವರ್ಷ ಮನೆ ಬಿಟ್ಟು ಹೋದ ಮಜೀದ್ ಮರಳಿ ಬಂದು ಸುಹ್ರಾಳನ್ನು ವರಿಸಲು ಸಿದ್ಧನಾದಾಗ, ಮಜೀದ್‌ನ ಅವಿವಾಹಿತ ತಂಗಿಯರ ಪ್ರಶ್ನೆ ಎದುರಾಗುತ್ತದೆ. ಅವನಿಲ್ಲದ ಅವಧಿಯಲ್ಲಿ ತಂದೆಯ ವ್ಯಾಪಾರ ಮುಳುಗಿ ಎಲ್ಲವನ್ನೂ ಕಳಕೊಂಡ ಬಳಿಕ, ತಂಗಿಯರು ತೆಂಗಿನ ಸಿಪ್ಪೆ ಜಜ್ಜಿ ಹಗ್ಗ ತಯಾರಿಸಿ ಮನೆಯ ಖರ್ಚು ನಿಭಾಯಿಸಿದ್ದಾರೆ. ವಯಸ್ಸು ಮೀರಿದರೂ ಮದುವೆಯಾಗದೆ ಉಳಿದಿರುವ ಅವರಿಗಾಗಿ ಒಡವೆ, ಸ್ತ್ರೀಧನಕ್ಕೆ ಹಣ ಕೂಡಿಸಿ ಮತ್ತೆ ಮದುವೆಯಾಗುವಂತೆ ಅಮ್ಮ ಹೇಳಿದ ಮೇರೆಗೆ ಮಜೀದ್ ಸಂಪಾದನೆಗೆಂದು ನಗರ ಸೇರಿ ಅಪಘಾತದಲ್ಲಿ ಕಾಲು ಕಳೆದುಕೊಳ್ಳುತ್ತಾನೆ. ಕ್ಷಯರೋಗದಿಂದ ಹಾಸಿಗೆ ಸೇರಿದ ಸುಹ್ರಾ ಸರಿಯಾದ ಚಿಕಿತ್ಸೆಗೂ ಹಣವಿಲ್ಲದೆ ಪ್ರಾಣ ಬಿಡುತ್ತಾಳೆ. ಸುಹ್ರಾ, ಅವಳ ಅಮ್ಮ, ತಂಗಿಯರು, ಮಜೀದ್‌ನ ಅಮ್ಮ ಮತ್ತು ತಂಗಿಯರು... ಈ ಎಲ್ಲ ಹೆಂಗಸರ ಬದುಕಿನ ನೆಮ್ಮದಿ ಹಣದ ಸಮಸ್ಯೆಯಿಂದಾಗಿ ನಾಶವಾಗಿದೆ.

ಪಿ. ಕೇಶವದೇವ್ ಅವರ 'ಅಪ್ಪ ಮತ್ತು ಹೆಂಡತಿ' ಕಥೆಯ ಕಲ್ಯಾಣಿಗೆ ನೆರೆಹೊರೆಯ ಕುಟುಂಬಗಳ ಗಂಡಸರು ಮಿಲಿಟ್ರಿಗೆ ಸೇರಿ ತಮ್ಮ ಹೆಂಡತಿಯರಿಗೆ ಪ್ರತಿ ತಿಂಗಳು ಹಣ, ಸೀರೆ, ಉಡುಗೊರೆ ಕಳಿಸುವುದನ್ನು ಕಂಡು ಆಸೆಯಾಗಿ, ಒತ್ತಾಯದಿಂದ ತನ್ನ ಪತಿಯನ್ನೂ ಸೇನೆಗೆ ಕಳಿಸುತ್ತಾಳೆ. ಆದರೆ ಮಾಧವ ವಯಸ್ಸಾದ ಅಪ್ಪನ ಹೆಸರಿಗೆ ಮನಿಯಾರ್ಡರ್ ಕಳಿಸತೊಡಗಿದಾಗ ಅವಳ ಕನಸು ಕೈಗೂಡುವುದಿಲ್ಲ. ದಿನದ ಎರಡು ಪಾವು ಅಕ್ಕಿಗೆ ಬೇಕಾದಷ್ಟೇ ಲೆಕ್ಕಮಾಡಿ ಮಾವ ಕೊಡುವ ದುಡ್ಡಿಗೆ ಕೈಯೊಡ್ಡಬೇಕಾದಾಗ ಆಕೆ ಅತ್ಯಂತ ಅವಮಾನ ಮತ್ತು ನಿರಾಸೆಗಳನ್ನು ಅನುಭವಿಸುತ್ತಾಳೆ. ಊರಲ್ಲಿ ಇದ್ದಾಗ ಗಂಡ ದುಡಿಯುತ್ತಿದ್ದುದು ನಾಲ್ಕುಕಾಸಾದರೂ ಅದನ್ನ ಪತ್ನಿಯ ಕೈಗೆ ತಂದುಕೊಡುತ್ತಿದ್ದ. ಈಗ ತನ್ನ ಕೈಗೆ ಒಂದು ಕಾಸೂ ಸಿಕ್ಕುವುದಿಲ್ಲವೆಂದ ಮೇಲೆ ಪತಿ ಸೇನೆಗೆ ಮರಳಿ ಹೋಗುವುದೇ ಬೇಡವೆಂದು

ಆಕೆ ಗಟ್ಟಿಯಾಗಿ ನಿರ್ಧರಿಸುತ್ತಾಳೆ. ಕಲ್ಯಾಣಿ ದುಡಿವ ಹೆಣ್ಣಲ್ಲ, ಹಾಗಾಗಿ ಪತಿಯ ಆದಾಯವನ್ನೇ ಅವಲಂಬಿಸಿದ್ದಾಳೆ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಮಾವ ಮೊಮ್ಮಗುವಿಗಾಗಿ ಹೋಟೆಲಿನಿಂದ ತಂದುಕೊಟ್ಟ 'ಸೀಯಪ್ಪ'ವನ್ನು ಮಗು ತಿನ್ನಲು ಬಿಡದೆ ದೂರ ಎಸೆಯುವುದು, ಅಡುಗೆ ಕೋಣೆಯಲ್ಲಿ ಮಡಕೆ ಒಡೆದುಹಾಕುವುದು, ಮಗುವಿಗೆ ಹೊಡೆಯುವುದು, ಪತಿ ಮಾವನ ಹೆಸರಿಗೆ ಬರೆದ ಪತ್ರವನ್ನು ಓದಿ ಹೇಳಲು ನಿರಾಕರಿಸುವುದು.. ಇಲ್ಲೆಲ್ಲ ಆರ್ಥಿಕ ಮೂಲವಿಲ್ಲದ ಹೆಣ್ಣಿನ ನೋವು, ಅಸಹನೆಗಳ ತೀವ್ರತೆ ಪ್ರಕಟವಾಗುತ್ತದೆ.

'ಆಲಾಹಳ ಹೆಣ್ಣುಮಕ್ಕಳು' ಕಾದಂಬರಿಯಲ್ಲಿ ಕುಟುಂಬದ ಯಜಮಾನ ಎಂದು ಕರೆಸಿಕೊಳ್ಳುವ ಗಂಡಸು ಒಂದು ಕಾಸೂ ಸಂಪಾದನೆ ಮಾಡದೆ ಬೇಜವಾಬ್ದಾರಿಯಿಂದ ಪೀಪಿ ಊದುತ್ತ ಕುಳಿತುಕೊಂಡು ಹೆಂಡತಿಯೇ ತನ್ನ ಹೊಟ್ಟೆ ತುಂಬಿಸಬೇಕು ಎಂದು ಬಯಸುವ ಸ್ಥಿತಿಯಲ್ಲಿ ಕೋಕ್ಕಾಂಚರ ಮರಿಯ ಎಂಬ ಹೆಂಗಸು ತೋರುವ ಧೈರ್ಯ ಸಾಹಸಗಳ ಚಿತ್ರಣವಿದೆ. ಗಂಡನ ಸ್ಥಿತಿ ಹಾಗಾದರೆ ಊರನಾಳುವ ಮಂದಿಯ ಸ್ವಾರ್ಥ ಮತ್ತು ಕಿರುಕುಳಗಳು ಇನ್ನೊಂದೆಡೆ ಮರಿಯಳನ್ನು ಕಾಡುತ್ತವೆ. ಪುರುಷಪಾರಮ್ಯದ ಈ ಸಾಮಾಜಿಕ ಪರಿಸ್ಥಿತಿಯಲ್ಲಿ ಅಸಹಾಯಕಳಾಗಿ ಕೂರದೆ ಧೈರ್ಯ ತಂದುಕೊಳ್ಳುವುದು ಮರಿಯಳಂಥ ಹೆಂಗಸರಿಗೆ ಅಗತ್ಯ ಮತ್ತು ಅನಿವಾರ್ಯವಾಗಿದೆ.

ಈ ಕಾದಂಬರಿಯಲ್ಲಿ ಬರುವ ಹೆಚ್ಚಿನ ಪುರುಷರು ಹೊಣೆಗೇಡಿಗಳು. ಕಳ್ಳಿನಂಗಡಿಯಲ್ಲಿ ಸ್ವರ್ಗ ಕಾಣುವವರು. ಸಂಸಾರದ ಖರ್ಚಿನ ಬಗ್ಗೆ ಯೋಚಿಸದೆ ಕೇವಲ ಅಧಿಕಾರ ಚಲಾಯಿಸುವವರು. ಹಾಗಾಗಿ ಮನೆ ನಡೆಸುವುದು ಇಲ್ಲಿನ ಪ್ರತಿಯೊಬ್ಬ ಹೆಣ್ಣಿಗೂ ಕರ್ತವ್ಯವಾಗಿದೆ. ದುಡಿಯದಿದ್ದರೆ ಬದುಕು ಸಾಧ್ಯವಿಲ್ಲ ಎಂಬ ಸತ್ಯದ ಅರಿವು ಮತ್ತು ಹಸಿವಿನ ಪ್ರಶ್ನೆಗಳು ಅವರ ಬದುಕನ್ನು ನಿಯಂತ್ರಿಸುತ್ತವೆ. ಸ್ವದೇಶಿ ಆಂದೋಲನದ ಪ್ರೇರಣೆಯಿಂದ ಫ್ರಾನ್ಸಿಸ್ ಪಾದ್ರಿ ನಡೆಸುವ ಚರಕಾ ಕ್ಲಾಸಿಗೆ ಹೋಗಿ ನೂಲು ತೆಗೆಯಲು ಕಲಿತ ಬಳಿಕ ನೂಲು ಮಾರಿ ಬರುವ ಹಣ ಬಹಳ ಕಡಿಮೆ, ತಮ್ಮ ಅಗತ್ಯಗಳಿಗೆ ಸಾಲವು ಎಂದು ತಿಳಿದಾಗ ಹೆಂಗಸರು ಅದನ್ನು ಬಿಟ್ಟು ಬೇರೆ ಕೆಲಸಕ್ಕೆ ಹೋಗುತ್ತಾರೆ. 'ತಿರುಪೆಯೆತ್ತಿದ ದುಡ್ಡು ಮತ್ತು ಹಾಲುಪುಡಿ ತಗಂಡ್ರೆ ಮನೆ ನಡಿಯಲ್ಲ' ಎಂಬ ತೀಕ್ಷ್ಣ ಸತ್ಯದ ಅರಿವಿನಿಂದ ಈ ನಿರ್ಧಾರ ತೆಗೆದುಕೊಳ್ಳುತ್ತಾರೆ. 'ಎಂಟುಕೋಣೆ' ಮನೆಯನ್ನು ಕೆಡವಲು ಬಂದವರನ್ನು ಪೊರಕೆ ಮತ್ತು ಸೌದೆಕೊಳ್ಳಿಗಳಿಂದ ಎದುರಿಸಿ ಓಡಿಸುವ ಈ ಸ್ತ್ರೀಯರು ತಾವು ಅನುಭವಿಸಿದ ಕಷ್ಟಪರಂಪರೆಯಿಂದಲೆ ಗಟ್ಟಿಯಾದವರು. ಮತ್ತು ಇವರ ಶಕ್ತಿ ಧೈರ್ಯಗಳು ನಿಂತಿರುವುದು ಆಲಾಹಳ ನಮಸ್ಕಾರದ ಮೇಲೆ. ಆಲಾಹಳೊಂದಿಗೂ, ಭೂತ ಪ್ರೇತಗಳೊಂದಿಗೂ ಸಂವಾದ ನಡೆಸುತ್ತ ಹೆಂಗಸರಿಗೆ ಧೈರ್ಯ ತುಂಬುವ, ನಿಂತ ನೆಲವೆ ಮುಳುಗುತ್ತಿರುವ ಹೊತ್ತಿನಲ್ಲೂ ಮಳೆ-ಗಾಳಿಗಳನ್ನು ತಡೆಹಿಡಿಯುವ ವಿಶ್ವಾಸದಲ್ಲಿ ಕೈಚಾಚಿ

ನಿಲ್ಲುವ ಮರಿಯಜ್ಜಿ ರಟ್ಟೆಯ ಬಲದಲ್ಲಿ ನಂಬಿಕೆಯಿಟ್ಟಿರುವ ಹೆಣ್ಣಿನ ಅಸಾಧ್ಯ ಇಚ್ಛಾಶಕ್ತಿಯ ಪ್ರತೀಕವಾಗಿದ್ದಾಳೆ.

'ಆಲಾಹಳ ಹೆಣ್ಣುಮಕ್ಕಳು' ಕಾದಂಬರಿಯ ಹಲವು ಸ್ತ್ರೀ ಪಾತ್ರಗಳು 'ಹೊಟ್ಟೆಗೇನಾದ್ರೂ ಬಿದ್ರೆ ಸಾಕು' ಎಂಬ ಒಂದು ವಾಕ್ಯವನ್ನು ಮತ್ತೆ ಮತ್ತೆ ಹೇಳುತ್ತವೆ. ಇಲ್ಲಿರುವುದು ಹಸಿವಿನ ಪ್ರಶ್ನೆ. ಇಡೀ ಲೋಕವನ್ನು ಕುರಿತು ಮರಿಯ ಕೂಗಿ ಕೇಳುವ ಪ್ರಶ್ನೆಯೂ ಇದೇ 'ಹಸಿವಿಗಿಂತ ದೊಡ್ಡ ಪಿಶಾಚಿಯಿದ್ಯಾ?' ಮರಿಯಳ ಚೆಲುವೆಯಾದ ಮಗಳು ಚೆರಿಚ್ಚಿಯನ್ನು ವರದಕ್ಷಿಣೆ ಇಲ್ಲದೆ ಮದುವೆಯಾಗಲು ಸುರಾಯಿ ಪಾದ್ರಿ ಡೇವಿಡ್ ಬಯಸಿದಾಗ ಆ ಮದುವೆಗಾಗಿ ತನ್ನ ಇಡೀ ಕುಟುಂಬವನ್ನೇ (ಅವನು ಬಯಸಿದ್ದು ಚೆರಿಚ್ಚಿ ಸುರಾಯಿಗೆ ಸೇರಬೇಕೆಂದು ಮಾತ್ರ ಆಗಿತ್ತು) ರೋಮನ್‌ನಿಂದ ಸುರಾಯಿಗೆ ಸೇರಿ ತನ್ನ ಧಾರ್ಮಿಕ ನಿಷ್ಠೆಯನ್ನು ಬದಲಿಸಿಕೊಳ್ಳಲು ಮರಿಯಾ ನಿರ್ಧರಿಸುತ್ತಾಳೆ. ಈ ನಿರ್ಧಾರದ ಹಿಂದಿರುವುದೂ ಆರ್ಥಿಕ ಪ್ರಶ್ನೆಯೇ. 'ಅವನೊಂದಿಗೆ ಸಂಬಂಧ ಬೆಳೆಸಿದರೆ ಒಬ್ಬಳು ಮಗಳು ಮಾತ್ರವಲ್ಲ, ಒಂದು ಕುಟುಂಬವೇ ಮೇಲೇರಬಹುದು' ಎಂಬುದು ಅವಳ ಲೆಕ್ಕಾಚಾರ. ಅಳಿಯನ ಮೂಲಕ ತನ್ನ ಉಳಿದಿಬ್ಬರು ಹೆಣ್ಣುಮಕ್ಕಳ ಮದುವೆಯೂ ಸುಲಭವಾಗಿ ನಡೆಯಬಹುದು ಎಂದು ನಿರೀಕ್ಷಿಸುತ್ತಾಳೆ.

ಮರಿಯಳ ಅವಿವಾಹಿತ ಹೆಣ್ಣುಮಕ್ಕಳು ಚಿನ್ನಮ್ಮನೂ ಚಿಯ್ಯಮ್ಮನೂ ರವಕೆಯ ಗುಂಡಿ ಮತ್ತು ಬಾಡಿಯ ಲೇಸು ಹೊಲಿದುಕೊಟ್ಟು ಹಣ ಸಂಪಾದಿಸಿ ಮನೆಯ ಖರ್ಚಿಗೆ ಸಹಾಯಮಾಡುತ್ತಾರೆ. ಚರ್ಚು ಏರ್ಪಡಿಸಿದ ಸಾಮೂಹಿಕ ಮದುವೆಯಲ್ಲಿ ಚಿಯ್ಯಮ್ಮನನ್ನು ಕುಂಜಿಪ್ಪಾಲುವಿಗೆ ಮದುವೆ ಮಾಡಿಕೊಡುವ ವ್ಯವಸ್ಥೆಯಾಗುವಾಗ ಹೆಣ್ಣು ನೋಡಲು ಬಂದ ಒಬ್ಬ ಅಜ್ಜ ಹೇಳುತ್ತಾನೆ: 'ನಿಮ್ಮದು ಅದೃಷ್ಟ. ಅಷ್ಟು ಒಳ್ಳೆ ಹುಡುಗ ನಮ್ಮ ಕುಂಜಿಪ್ಪಾಲು. ಕುಡಿವ ಅಭ್ಯಾಸವಿಲ್ಲ, ಬೀಡಿ ಚಟವಿಲ್ಲ, ಹೆಣ್ಣಿನ ಹುಚ್ಚೂ ಇಲ್ಲ. ರಿಕ್ಷಾ ಎಳೆದು ಸಿಗೋ ದುಡ್ಡನ್ನು ಸ್ವಲ್ಪಾನೂ ಖರ್ಚು ಮಾಡದೆ ಮನೆಗೆ ತಗಂಡೋಗಿ ಕೊಡ್ತಾನೆ'. (ಪು. ೮೪, ಆಲಾಹಳ ಹೆಣ್ಣುಮಕ್ಕಳು) ಮುಂದಕ್ಕೆ ಹೆಣ್ಣಿಗೆ ಹಣಕಾಸಿನ ತೊಂದರೆ ಇರುವುದಿಲ್ಲ, ಅವಳು ದುಡಿಯಬೇಕಾಗಿಲ್ಲ ಎಂಬುದು ಅಜ್ಜನ ಧ್ವನಿಯಾಗಿದೆ. ಇಂಥ 'ಒಳ್ಳೆಯ ಗಂಡನ್ನು' ಪಡೆಯುವುದಕ್ಕಾಗಿ ಚಿಯ್ಯಮ್ಮನ ಮನೆಯವರು ಹತ್ತು ಪವನು ಬಂಗಾರ ಮತ್ತು ಔತಣದ ಖರ್ಚಿನ ಬಾಬ್ತು ಎರಡು ಸಾವಿರ ರೂಪಾಯಿ ಕೊಡಬೇಕಾಗಿದೆ.

ಜೋರು ಬಾಯಿಯ ಅಹಂಕಾರದ ಹೆಣ್ಣು ಬಿಳಿ ಕುಂಜಾರ ಮತ್ತು ಗಂಡಸರ ಮುಂದೆ ಬಾರದ, ಸರಿಯಾಗಿ ಮಾತನಾಡಲಾರದ ಕಪ್ಪುಕುಂಜಾರ ಇವರಿಬ್ಬರು ಅಕ್ಕತಂಗಿಯರಾಗಿದ್ದು ಚೀಟಿ ವ್ಯವಹಾರ ನಡೆಸುವ ಸ್ವಾವಲಂಬಿಗಳಾಗಿದ್ದಾರೆ. ಬಿಳಿ ಕುಂಜಾರ ವ್ಯವಹಾರಕುಶಲಿಯಾಗಿದ್ದು ಚೀಟಿಯಲ್ಲಿ ಲಾಭ ಬಂದ ಗಂಡಸರನ್ನು ತನ್ನ ವಯ್ಯಾರದ ಮಾತು ಮತ್ತು ವರ್ತನೆಗಳಿಂದ ವಂಚಿಸುತ್ತಾಳೆ. ಆ ಗಂಡಸರ ಪತ್ನಿಯರೇನಾದರೂ ಜಗಳಕ್ಕೆ ಬಂದರೆ ಅಶ್ಲೀಲ ಬೈಗುಳ ಮತ್ತು ಕಿವಿಗಪ್ಪಳಿಸುವ ಸ್ವರದಿಂದ ದಬಾಯಿಸಿ

ಬಾಯಿ ಮುಚ್ಚಿಸುತ್ತಾಳೆ. ಬಿಳಿ ಕುಂಜಾರಳ ನಗು ಮತ್ತು ಒಗೆದ ಬಟ್ಟೆಯೊಳಗಿಂದ ಕಾಣುವ ಬಾಡಿಯ ಲೇಸು ನೋಡುತ್ತ ಅವಳ ಮಟ್ಟಿಗೆ ಉದಾರವಾಗುವ ಗಂಡಸರು ಈ ಜಗಳದಲ್ಲಿ ಹಂಡತಿಯ ಪರವಾಗಿ ನಿಲ್ಲುವುದಿಲ್ಲ. ಯಾರನ್ನೂ ವಂಚಿಸದೆ ಲಾಭ ಸಿಕ್ಕಿದರೆ ಅಂದೇ ದುಡ್ಡು ಎಣಿಸಿ ಕೊಡುವ ಕಪ್ಪು ಕುಂಜಾರಳ 'ಕುರಿ'ಯಲ್ಲಿ ಹೆಂಗಸರಿಗೆ ವಿಶ್ವಾಸ, ಆಸಕ್ತಿ ಹೆಚ್ಚು. ಆದರೆ ಗಂಡಸರು ಸಾಮಾನ್ಯವಾಗಿ ಬಿಳಿ ಕುಂಜಾರಳ 'ಕುರಿ'ಗೆ ಸೇರುತ್ತಾರೆ. ಹಾಗೆಂದು ಬಿಳಿ ಕುಂಜಾರಳೇನೂ ಸುಲಭ ಹಣದ ಸಂಪಾದನೆಗಾಗಿ ಅನೈತಿಕ ಸಂಬಂಧಗಳಿಗೆ ಎಳಸುವವಳಲ್ಲ. ಪುರುಷರ ಸ್ತ್ರೀವ್ಯಾಮೋಹವನ್ನು ತನ್ನ ಆರ್ಥಿಕತೆಯ ಅಭಿವೃದ್ಧಿಗೆ ಬಳಸಿಕೊಳ್ಳುವ ಬಿಳಿ ಕುಂಜಾರಳ ಚಾತುರ್ಯವನ್ನು ಇಲ್ಲಿ ಗುರುತಿಸಬಹುದು.

'ಕೆಂಪುಮೀನು' ಕೃತಿಯಲ್ಲಿ ಕಂಡನ್ ಕೋರನ ಪತ್ನಿಯಾಗಿ ಸುಖವಾಗಿದ್ದ ಮೇಲ್ವರ್ಗದ ಅರಯನ್ ಸ್ತ್ರೀ ಪಾಪ್ಪಿಕುಞ್ಞಿ ಪತಿ ಗತಿಸಿದ ಬಳಿಕ ಮನೆ ಆಸ್ತಿ ಕಳೆದುಕೊಂಡು ಬದುಕುವ ದಾರಿ ಕಾಣದೆ ಬೆಸ್ತ ಚೆಂಪನ್‌ಕುಞ್ಞನ ಕೈ ಹಿಡಿಯುತ್ತಾಳೆ. ಮೊದಲ ಪತಿಯಿಂದ ಹುಟ್ಟಿದ ಮಗನ ಪಾಲನೆಯ ಹೊಣೆಯೂ ಅವಳ ಮೇಲಿದೆ. ಮಗನ ಕಿರುಕುಳ ತಡೆಯಲಾಗದೆ ಚೆಂಪನ್‌ನ ಹಣ ಕದ್ದು ಮಗನಿಗೆ ಸ್ವಂತ ವ್ಯಾಪಾರಕ್ಕೆಂದು ಕೊಡುತ್ತಾಳೆ. ಇದರಿಂದ ಸಿಟ್ಟಾದ ಚೆಂಪನ್, ಕ್ರಮಪ್ರಕಾರ 'ವಸ್ತ್ರ ಕೊಟ್ಟು' ಹೆಂಡತಿಯಾಗಿ ಕರೆದುಕೊಂಡು ಬಂದ ಪಾಪ್ಪಿಯನ್ನು ಮನೆಯಿಂದ ಹೊರಗೆ ಹಾಕುತ್ತಾನೆ. ಪಂಚಾಯ್ತಿ ನಡೆದು ಅರಯನ್ ವಿಚಾರಣೆ ನಡೆಸಿದಾಗ ತಾನು ಆಕೆಯನ್ನು ಮದುವೆಯಾಗಿಲ್ಲ, ಕೆಲಸಕ್ಕೆ ಇಟ್ಟುಕೊಂಡಿದ್ದೆ, ಆಕೆ ಹಣ ಕದ್ದಳು, ಹೊರಗೆ ಹಾಕಿದೆ ಎಂದು ಹೇಳುತ್ತಾನೆ. ಪಾಪ್ಪಿ ಒಂದು ಮಾತೂ ಎದುರಾಡದೆ ಅದನ್ನೇ ಒಪ್ಪಿಕೊಳ್ಳುತ್ತಾಳೆ ಮಾತ್ರವಲ್ಲ, ವಿಚಾರಣೆ ಮುಗಿದ ಬಳಿಕವೂ ಚೆಂಪನ್‌ನನ್ನೇ ಹಿಂಬಾಲಿಸುತ್ತಾಳೆ. ಪಾಪ್ಪಿಯ ವರ್ತನೆ ಆರ್ಥಿಕ ಶಕ್ತಿಯಿಲ್ಲದ ಹೆಣ್ಣಿನ ಪರಿಸ್ಥಿತಿಯನ್ನು ಪ್ರತಿಪಾದಿಸುತ್ತದೆ. ಅನುಕೂಲಸ್ಥ ಮನೆಯಲ್ಲಿ ಬದುಕಿದ ಪಾಪ್ಪಿಗೆ ಸ್ವತಂತ್ರವಾಗಿ ದುಡಿದು ಬದುಕುವ ದಾರಿ ತಿಳಿಯದು. ಹಾಗಾಗಿಯೆ ಚೆಂಪನ್ ಹೊರದೂಡಿದಾಗ ಏನು ಮಾಡಲೂ ತೋಚದೆ ಇಡೀ ದಿನ ಸಮುದ್ರ ತೀರದಲ್ಲಿ ಅಲೆಯುತ್ತಾಳೆ. ದುಡಿಮೆಯ ದಾರಿ ತಿಳಿಯದ ಸ್ತ್ರೀಯರು ಸದಾ ಇನ್ನೊಬ್ಬರ ಹಂಗಿನಲ್ಲಿರಬೇಕಾಗುವುದನ್ನು ಕೃತಿ ಗುರುತಿಸುತ್ತದೆ.

ಕುಟುಂಬದ ಆರ್ಥಿಕತೆ ಹಾಗೂ ಸಮಾಜವು ವಿಧಿಸಿದ ನಿರ್ಬಂಧಗಳು ಕರುತ್ತಮ್ಮ ಎಂಬ ಮುಗ್ಧೆಯಾದ ಬೆಸ್ತರ ಹೆಣ್ಣಿನ ಬದುಕಿನ ದುರಂತಕ್ಕೆ ಕಾರಣವಾಗುತ್ತವೆ. ಕರುತ್ತಮ್ಮನ ತಂದೆ ತನ್ನ ಮಗಳ ಮೇಲೆ ಸಾಹುಕಾರನಾದ ಪರೀಕ್ಕುಟ್ಟಿಗೆ ಇರುವ ಸೆಳೆತವನ್ನು ಅವನಿಂದ ಆರ್ಥಿಕ ಸಹಾಯ ಪಡೆಯಲು ಬಳಸಿಕೊಳ್ಳುತ್ತಾನೆ. ಪರೀಕ್ಕುಟ್ಟಿಯಿಂದ ಸಾಲ ಪಡೆದು ಸ್ವಂತ ದೋಣಿ ಮತ್ತು ಬಲೆ ಪಡೆದು ಸ್ಥಿತಿವಂತನಾಗುತ್ತಾನೆ. ಮಗಳ ಮೇಲೆ ಆಸೆ ಇಟ್ಟುಕೊಂಡಿರುವ ಪರೀಕ್ಕುಟ್ಟಿ ಹಣವನ್ನು ಮರಳಿ ಕೇಳಲಾರನೆಂಬ ವಿಶ್ವಾಸದಿಂದ, ತಾನು ಪಡೆದುಕೊಂಡ ಸಾಲವನ್ನು ಹಿಂತಿರುಗಿಸುವ ಗೊಡವೆಗೆ

ಹೋಗುವುದಿಲ್ಲ. ಈ ಋಣಭಾರ ಕರುತ್ತಮ್ಮಳನ್ನು ಪರೀಕ್ಕುಟ್ಟಿಯ ಬಗ್ಗೆ ಆರ್ದ್ರಳನ್ನಾಗಿಸಿದೆ. ಹಾಗಾಗಿ ಅವನ ಪ್ರೇಮವನ್ನು ನಿರಾಕರಿಸಲಾಗದೆ ಒಪ್ಪಿಕೊಳ್ಳುತ್ತಾಳೆ.

ಮುಸಲ್ಮಾನನಾದ ಪರೀಕ್ಕುಟ್ಟಿಯನ್ನು ಪ್ರೀತಿಸುತ್ತಿದ್ದ ಕರುತ್ತಮ್ಮ ಅಮ್ಮನ ಮಾತನ್ನು ಒಪ್ಪಿ ಅವನನ್ನು ಮರೆತು ಪಳನಿಯನ್ನು ಮದುವೆಯಾಗುತ್ತಾಳೆ. ಮದುವೆಯ ಬಳಿಕ ಹಿಂದಿನದೆಲ್ಲವನ್ನೂ ಮರೆತು ಪತಿಯನ್ನು ಪ್ರೇಮಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾಳೆ. ಪತಿಯ ಕೆಲಸಕ್ಕೆ ಒತ್ತಾಸೆಯಾಗಿ ತಾನೂ ಮೀನಿನ ಕೆಲಸಕ್ಕೆ ಕೈಜೋಡಿಸುತ್ತಾಳೆ. ಹೊಸ ಕನಸುಗಳನ್ನು ಕಟ್ಟುತ್ತಾಳೆ. ಆದರೆ ಆರಂಭದಲ್ಲಿ ಅವಳ ಮೇಲೆ ಪ್ರೀತಿ ಹೊಂದಿದ್ದ ಪಳನಿ ಊರಿನವರು ಅವಳ ಪೂರ್ವಚಾರಿತ್ರ್ಯದ ಕುರಿತು ಆಡಿಕೊಳ್ಳುವುದನ್ನು ಕೇಳಿದ ಬಳಿಕ ಪತ್ನಿಯ ಮೇಲೆ ಸಂಶಯ ತಾಳುತ್ತಾನೆ. ದಾಂಪತ್ಯದಲ್ಲೂ ಉದ್ಯೋಗದಲ್ಲೂ ಆಸಕ್ತಿ ಕಳೆದುಕೊಳ್ಳುತ್ತಾನೆ. ಕುಟುಂಬಕ್ಕಾಗಿ ಮೈಮುರಿಯೆ ದುಡಿಯುವ ಹೆಣ್ಣಿನ ಶ್ರಮವನ್ನು ಗಣಿಸದೆ ಲೈಂಗಿಕ ಸದಾಚಾರವೆ ಅವಳ ಯೋಗ್ಯತೆಯ ಪ್ರಮಾಣವೆಂಬ ಸಮಾಜದ ಪೂರ್ವಾಗ್ರಹವು ಕರುತ್ತಮ್ಮನ ನೋವು, ನಿರಾಸೆ, ಆಕ್ರೋಶಗಳಿಗೆ ಕಾರಣವಾಗಿ ಅವಳು ದಾಂಪತ್ಯದಲ್ಲಿ ನಂಬಿಕೆ ಕಳೆದುಕೊಳ್ಳುತ್ತಾಳೆ. ತನ್ನನ್ನು ಅಮಿತವಾಗಿ ಪ್ರೀತಿಸುವ ಪರೀಕ್ಕುಟ್ಟಿಯ ತೆಕ್ಕೆಯಲ್ಲಿ ಸಾವನ್ನು ಬರಮಾಡಿಕೊಳ್ಳುತ್ತಾಳೆ. ಕರುತ್ತಮ್ಮ ಪಾತಿವ್ರತ್ಯದ ಗೆರೆ ದಾಟಿದ ಹೊತ್ತಿನಲ್ಲಿಯೆ ಪಳನಿ ಕಡಲಿನ ಹೆದ್ದೆರೆಗಳಿಗೆ ಬಲಿಯಾಗುವಂತೆ ಲೇಖಕರು ಚಿತ್ರಿಸಿದ್ದಾರೆ.

ಮೀನು ಹಿಡಿಯಲು ಕಡಲಿಗೆ ಹೋದ ಬೆಸ್ತನ ಪ್ರಾಣ ದಡದಲ್ಲಿದ್ದುಕೊಂಡು ಅವನ ಬರುವಿಕೆಯನ್ನು ಕಾಯುವ ಪತ್ನಿಯ ನಿಷ್ಠೆಯಲ್ಲಿರುತ್ತದೆ ಎಂಬ ಪಾರಂಪರಿಕ ನಂಬುಗೆಯ ಅರಿವು ಕರುತ್ತಮ್ಮನಿಗಿದೆ. ಆದರೂ ಪ್ರಿಯಕರನ ಕುರಿತಾದ ಅನುಕಂಪ ಮತ್ತು ಆಕರ್ಷಣೆಗಳಿಂದ ತಪ್ಪಿಸಿಕೊಳ್ಳಲು ವಿಫಲಳಾಗಿದ್ದಾಳೆ. ಸಂಶಯಿಸುವ ಪತಿಯ ಇಚ್ಛೆಗೆ ವಿರುದ್ಧವಾಗಿ ಪರೀಕ್ಕುಟ್ಟಿಯನ್ನು ಭೇಟಿಯಾಗಲು ತೀರ್ಮಾನಿಸುತ್ತಾಳೆ. ಎಷ್ಟು ಪ್ರಮಾಣಗಳನ್ನು ಕೊಟ್ಟರೂ ನಂಬದ ಪತಿಗಿಂತ ತನ್ನ ಮೇಲಿನ ಪ್ರೀತಿಗಾಗಿ ಎಲ್ಲವನ್ನೂ ಕಳೆದುಕೊಂಡು ಇನ್ನೂ ತನ್ನ ನೆನಪಲ್ಲಿ ಬದುಕಿರುವ ಪ್ರೇಮಿಯೆ ಮೇಲು ಎಂದು ಅವಳು ತೀರ್ಮಾನಿಸಿರುವುದು ಸ್ಪಷ್ಟವಾಗಿದೆ. ಗಂಡ ಮತ್ತು ಪ್ರಿಯಕರ ಇಬ್ಬರನ್ನೂ ಪ್ರೀತಿಸುವ ಕರುತ್ತಮ್ಮನ ಪಾತ್ರದ ಮೂಲಕ ಸ್ತ್ರೀಗೆ ಮಾತ್ರ ವಿಧಿಸಲ್ಪಟ್ಟಿರುವ ಲೈಂಗಿಕ ಪರಿಶುದ್ಧತೆಯ ಮೌಲ್ಯವನ್ನು ಲೇಖಕರು ಪ್ರಶ್ನಿಸಿದ್ದಾರೆ. ತಂದೆ ಮಾಡಿದ ಸಾಲಕ್ಕೆ ಕರುತ್ತಮ್ಮನ ಬದುಕು ಬಲಿಯಾಗುವುದನ್ನು ಕಾದಂಬರಿ ಗುರುತಿಸಿದೆ. ಸ್ತ್ರೀಯರಿಗೆ ಸದಾಚಾರವನ್ನು ವಿಧಿಸುವ ಕುಟುಂಬ ಮತ್ತು ಸಮಾಜಗಳು ಆರ್ಥಿಕ ಅವಶ್ಯಕತೆಗಳಿಗಾಗಿ ಹೆಣ್ಣಿನ ಚಾರಿತ್ರ್ಯವು ಒತ್ತೆಯಾಗುವ ಸಂದರ್ಭದಲ್ಲಿ ಕಂಡೂ ಕಾಣದಂತೆ ನಟಿಸುತ್ತವೆ. ಇದು ಸ್ತ್ರೀ ಶೋಷಣೆಯ ಇನ್ನೊಂದು ಮುಖ.

'ಕೆಂಪುಮೀನು' ಕಾದಂಬರಿಯಲ್ಲಿ ಮೀನಿನ ಕೆಲಸಕ್ಕೆಂದು ಮೂಡಲಿಂದ ಬರುವ ಕೆಳವರ್ಗದ ಸ್ತ್ರೀಯರಿಂದಾಗಿ ಕಡಲು ಅಶುದ್ಧವಾಗುವ ಪ್ರಸ್ತಾಪ ಬರುತ್ತದೆ. ದುಡಿಮೆಯ ದಾರಿ ಹುಡುಕಿಕೊಂಡು ಪರವೂರಿಗೆ ಹೋಗುತ್ತಿದ್ದ ಸ್ತ್ರೀಯರು ಅನಿವಾರ್ಯವೆನಿಸುವ ಲೈಂಗಿಕ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತಿದ್ದರು. ಜೀವನೋಪಾಯದ ಪ್ರಶ್ನೆ ಬಂದಾಗ ಹೆಣ್ಣಿನ ದೇಹ ಕೂಡ ಒಂದು ಬೆಲೆಯುಳ್ಳ ಸೊತ್ತು ಅಷ್ಟೇ ಆಗಿದೆ. ಇಂಥ 'ದೈಹಿಕ' ಹೊಂದಾಣಿಕೆಗಳು ಬೆಸ್ತ ಹೆಂಗಸರ ಬದುಕಲ್ಲೂ ನಡೆಯುತ್ತಿದ್ದವು ಎಂಬುದು ಹೆಂಗಸರ ಜಗಳದ ಸಂದರ್ಭದಲ್ಲಿ ಅಭಿವ್ಯಕ್ತವಾಗುತ್ತದೆ.

ಮನೆಯಲ್ಲಿ ಸದಾ ನೆಮ್ಮದಿ ಮತ್ತು ಪ್ರೀತಿ ಬಯಸುವ ಸ್ತ್ರೀಯರ ಮಟ್ಟಿಗೆ ಆದಾಯದ ಮೂಲಕ್ಕಿಂತ ಅದು ನೀಡುವ ಭೌತಿಕ ಪ್ರತಿಫಲವೆ ಕೆಲವೊಮ್ಮೆ ಮುಖ್ಯವಾಗಬಹುದು. ರೇಖಾ ಕೆ. ಅವರು ಬರೆದ 'ರಂಗಪಟ' ಕಥೆಯ ಗೃಹಿಣಿ ಆರ್ಥಿಕ ಅಗತ್ಯಗಳಿಗಾಗಿ ಧಾರಾವಾಹಿಗಳಲ್ಲಿ ನಟಿಸುತ್ತಾಳೆ. ಕಾಲೇಜು ದಿನಗಳಲ್ಲಿ ಅತ್ಯಂತ ಶುದ್ಧ ಚಾರಿತ್ರ್ಯ ಹೊಂದಿದ್ದ, ಉತ್ತಮ ನೃತ್ಯಗಾತಿಯೂ ಆಗಿದ್ದ ಅವಳು ಸಿನಿಮಾ ಮತ್ತು ಟಿ.ವಿ. ಸೀರಿಯಲ್‌ಗಳ ನಟಿಯಾದಾಗ ತನ್ನ ಆದ್ಯತೆಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಆ ಧಾರಾವಾಹಿಗಳಲ್ಲಿ ಮನೆಯಲ್ಲೇ ಇರುವ ನಾಯಕಿಯ ಪಾತ್ರವಾದರೂ ನಾಲ್ಕೈದು ಚಿನ್ನದ ಸರ ಧರಿಸಲೇಬೇಕಾದಾಗ ಮೊದಮೊದಲು ನಕಲಿ ಚಿನ್ನದ ಒಡವೆ ಹಾಕಿ ನಟಿಸಿದ್ದಾಳೆ. ಅದರಿಂದ ಕುತ್ತಿಗೆ ತುರಿಸುವ ಸಮಸ್ಯೆ ಬಂದು ತೊಂದರೆ ಅನುಭವಿಸಿದ್ದಾಳೆ. 'ಒಂದೆರಡು ಬಾರಿ ದಾರಿತಪ್ಪಿ ನಡೆದ ಬಳಿಕ' ಚಿನ್ನ ಖರೀದಿಸಲು ಬೇಕಾದ ಹಣ ಒಟ್ಟಾಗಿದೆ. ಆ ಮೂಲಕ ಕುತ್ತಿಗೆ ತುರಿಸುವ ಸಮಸ್ಯೆಯಿಂದ ಮುಕ್ತಳಾಗಿದ್ದಾಳೆ.

ಹೀಗೆ ಒಂದಿಷ್ಟು ಹೊಂದಾಣಿಕೆ ಮಾಡಿಕೊಂಡಿದ್ದರಿಂದ ತನ್ನ ಮನೆಗೆ ಹಾಗೂ ಬದುಕಿಗೆ ಬೇಕಾದ್ದನ್ನು ತಾನೇ ಸಂಪಾದಿಸಿ ತವರುಮನೆ, ಗಂಡನಮನೆ ಎರಡು ಕಡೆಯೂ ನಟಿಗೆ ಗೌರವ ಲಭಿಸಿದೆ. ತಿಂಡಿಪೋತನೂ ಸೋಮಾರಿಯೂ ಆದ ಅವಳ ಗಂಡ ಪತ್ನಿಯ ಆದಾಯದ ಮೂಲ ಯಾವುದು ಎಂಬ ಜಿಜ್ಞಾಸೆಯೆ ಇಲ್ಲದೆ ಹಗಲೆಲ್ಲ ಮನೆಯಲ್ಲಿ ಮಲಗಿದ್ದು, ಅವಳು ದಿನಾ ತರುವ ಐಸ್‌ಕ್ರೀಂ ಸವಿಯುತ್ತ ಆರಾಮವಾಗಿರುವವನು. ಮಗ ಬಡವರ ಮನೆ ಹೆಣ್ಣನ್ನು ಪ್ರೇಮಿಸಿ ಮದುವೆಯಾದನೆಂಬ ಸಿಟ್ಟಿಗೆ ಮನೆಯಿಂದ ಹೊರಗಿಟ್ಟಿದ್ದ, ಮನೆಯ ಕೆಲಸಕ್ಕೆ ಜನದ ಅಗತ್ಯ ಬಿದ್ದಾಗ ಉಪಾಯವಾಗಿ ಮಗನೊಂದಿಗೆ ಸೊಸೆಯನ್ನೂ ಮನೆಗೆ ಸೇರಿಸಿಕೊಂಡು ಒಂದು ಹೊತ್ತು ಊಟ ಹಾಕುವುದಕ್ಕೂ ಹಂಗಿಸುತ್ತಿದ್ದ ಅವಳ ಅತ್ತೆ, ಸೊಸೆ ನಟಿಯಾಗಿ ಧಾರಾಳ ಗಳಿಸಲು ಆರಂಭಿಸಿದ ನಂತರ ಬಹಳ ಅಭಿಮಾನದಿಂದ ನಡೆಸಿಕೊಳ್ಳುತ್ತಾರೆ. ಚರ್ಚಿನಲ್ಲಿ ಇತರರಿಗೆ ಸೊಸೆಯನ್ನು ಪರಿಚಯಿಸಲು ಹೆಮ್ಮೆಪಡುತ್ತಾರೆ. ಮಾತ್ರವಲ್ಲ ಅವಳು ಜನಪ್ರಿಯ ಸೀರಿಯಲ್‌ಗಳಲ್ಲಿ ಉಟ್ಟ ಸೀರೆಗಳನ್ನು ತನಗೆ ಉಡುಗೊರೆಯಾಗಿ ನೀಡಬೇಕೆಂದು ಬೇಡಿಕೆಯಿಡುತ್ತಾರೆ. ಬಡವರ ಮನೆಯ ಹುಡುಗಿಯೆಂದು

ಅನಾದರಕ್ಕೆ ತುತ್ತಾಗಿದ್ದ ನಟಿಯು ಹೀಗೆ ಗಂಡನ ಮನೆಯಲ್ಲಿ ಗೌರವ ಪಡೆದುಕೊಳ್ಳುವುದಕ್ಕೆ ಕಾರಣವಾಗಿರುವುದು ಮೇಲ್ಮಟ್ಟಕ್ಕೇರಿರುವ ಅವಳ ಆರ್ಥಿಕತೆ. ಹಣವು ಸ್ತ್ರೀಯ ಬದುಕನ್ನೂ ಸಂಬಂಧಗಳನ್ನೂ ಬದಲಾಯಿಸುವ ಶಕ್ತಿ ಹೊಂದಿರುವುದನ್ನು ಗಮನಿಸಬಹುದು.

ಈ ನಟಿಯೇನೂ ಬಯಸಿ ಪರಪುರುಷ ಸಂಗ ಮಾಡಿದವಳಲ್ಲ. ಮನೆಯ ಖರ್ಚು, ಒಳ್ಳೆಯ ಸೀರೆಗಳು, ಚಿನ್ನ, ಸ್ವಂತ ಫ್ಲಾಟು ಮುಂತಾದವುಗಳಿಗೆ ಹಣ ಹೊಂದಿಸಬೇಕಾಗಿದೆ. ವೃತ್ತಿಬದುಕಿನಲ್ಲಿ ಮೇಲೇರಬೇಕಾಗಿದೆ. ಅದಕ್ಕಾಗಿ ನಟ, ನಿರ್ಮಾಪಕರ ಅಪೇಕ್ಷೆಯನ್ನು ತಣಿಸಬೇಕಾಗುತ್ತದೆ. ಚಿತ್ರೀಕರಣದ ಬಳಿಕ ನಿರ್ಮಾಪಕ ಕರೆದಲ್ಲಿಗೆ ತೆರಳಿ ಅವನನ್ನು ತೃಪ್ತಿಪಡಿಸುವುದು ತನ್ನ ವೃತ್ತಿಯ ಭಾಗವೆಂದೂ, ವೃತ್ತಿಜೀವನದ ಯಶಸ್ಸಿಗೆ ಅನಿವಾರ್ಯವೆಂದೂ ಆಕೆ ಅರಿತುಕೊಂಡಿದ್ದಾಳೆ. ಹಾಗೆ ಅರ್ಥಮಾಡಿಕೊಂಡ ಬಳಿಕವೇ ಗಂಡನ ಮನೆಯೊಂದಿಗೆ ತನ್ನ ತವರನ್ನೂ ಆರ್ಥಿಕವಾಗಿ ಉದ್ಧರಿಸುವುದು, ಪೋಷಕ ನಟಿಯಾಗಿ ಹಲವು ಪ್ರಶಸ್ತಿಗಳನ್ನು ಗೆದ್ದುಕೊಳ್ಳುವುದು ಸಾಧ್ಯವಾಗಿದೆ. ಪ್ರತಿದಿನ ಹತ್ತರಿಂದ ಹದಿನೈದು ಸಾವಿರದಷ್ಟು ದುಡಿಯುತ್ತಿರುವ ನಟಿಯೀಗ ಆರ್ಥಿಕವಾಗಿ ಸಬಲೆಯಾಗಿದ್ದಾಳೆ. ತನಗಿಷ್ಟವಾದ ಸೀರೆ, ಆಭರಣಗಳನ್ನು ಖರೀದಿಸುವ ಸಾಮರ್ಥ್ಯ ಹೊಂದಿದ್ದಾಳೆ. ಎಲ್ಲಿ, ಯಾವಾಗ, ಎಷ್ಟು ಬಜೆಟಿನ ಮನೆ ಕೊಳ್ಳಬೇಕು.. ಎಂಬಿತ್ಯಾದಿ ಸಂಗತಿಗಳು ಅವಳದೇ ಆಯ್ಕೆಯಾಗಿವೆ. ಹೀಗೆ ವೃತ್ತಿಯಲ್ಲಿ ಮೇಲೇರುವ ಮೂಲಕ ಈ ಹಿಂದೆ ಅಸಡ್ಡೆ ತೋರಿದ್ದ ಅತ್ತೆಯಿಂದಲೂ ಮೆಚ್ಚುಗೆ ಪಡೆಯುತ್ತಾಳೆ. ಅಪ್ಪ ಅಮ್ಮನ ಗೌರವವನ್ನೂ ಉಳಿಸುತ್ತಾಳೆ. ವೃತ್ತಿಯಲ್ಲಿ ಎಷ್ಟೇ ಮೇಲೇರಿದರೂ ಪತಿಯನ್ನು ಚೆನ್ನಾಗಿ ನೋಡಿಕೊಳ್ಳುವುದು ಪತ್ನಿಯಾಗಿರುವ ತನಗೆ ಆದ್ಯ ಕರ್ತವ್ಯವೆಂದು ಭಾವಿಸಿ, ತನ್ನ ವೃತ್ತಿಯ ಮಧ್ಯೆ ಪತಿಯ ಹೊತ್ತುಹೊತ್ತಿನ ಊಟ ಉಪಚಾರಗಳಿಗೆ ತೊಂದರೆಯಾಗದಂತೆ ಎಲ್ಲ ರೀತಿಯ ವ್ಯವಸ್ಥೆಯನ್ನು ಮಾಡಿದ್ದಾಳೆ. ಅಗತ್ಯಗಳೆಲ್ಲ ಪರಿಶ್ರಮವಿಲ್ಲದೆ ನೆರವೇರುವುದರಿಂದ ಅವಳ ಪತಿಯೂ ಸಂತೃಪ್ತನಾಗಿದ್ದಾನೆ.

ಘಟಿಸಿದ ವಿಷಯಗಳ ಬಗ್ಗೆ ಅವಳಿಗೆ ಅಪರಾಧಿ ಭಾವವಿಲ್ಲ. ಯಾರದೋ ಆಸೆ ತೀರಿಸುವುದಕ್ಕಾಗಿ ಹೊರಗೆ ಹೋಗಿ ಮನೆಗೆ ಮರಳುವುದು ತಡರಾತ್ರಿಯಾದಾಗ ಮರೆಯದೆ ಪತಿಗಾಗಿ ಅವನಿಗೆ ಇಷ್ಟವಾದ ಸ್ಟ್ರಾಬೆರಿ ಐಸ್‌ಕ್ರೀಮನ್ನು ಕೊಂಡುತರುತ್ತಾಳೆ. 'ಬಣ್ಣಬಳಿದು ಕೆಟ್ಟುಹೋದ' ನಟಿಯರೆಂದರೆ ತಾತ್ಸಾರವಿರುವ ಡ್ರೈವರ್‌ಗೆ ಕೂಡ ಐಸ್‌ಕ್ರೀಂ ಕರಗುವ ಮೊದಲು ಪತಿಗೆ ತಿನ್ನಿಸಿ ಅವನ ಮೆಚ್ಚುಗೆ ಪಡೆಯಬೇಕೆಂದು ಬಯಸುವ ಅವಳ ಬಗ್ಗೆ ಆದರ, ಅನುಕಂಪಗಳಿವೆ. ನಟಿಯ ಬದುಕಿನಲ್ಲಿ ಶೀಲವಂತಿಕೆ ಸಾಧ್ಯವಿಲ್ಲ ಎಂದು ಡ್ರೈವರ್ ಅರ್ಥಮಾಡಿಕೊಂಡಿದ್ದಾನೆ. 'ಎಷ್ಟು ತಡವಾದರೂ ಐಸ್‌ಕ್ರೀಂ ತೆಗೆದುಕೊಂಡು ನೀವು ಮನೆಗೆ ಹೋಗುವಾಗ ಅನುಭವಿಸುವ ಧರ್ಮಸಂಕಟ – ಮಾಡಿದ ತಪ್ಪುಗಳೇನೇ ಇದ್ದರೂ ಅದರಲ್ಲಿ ಪರಿಹಾರವಾಗುತ್ತವೆ' ಎಂಬ ಅವನ ಮಾತುಗಳು

ಗಮನಾರ್ಹವಾಗಿವೆ. ಮದುವೆಗೆ ಮುನ್ನ 'ಬೆರಳ ತುದಿಗಳಲ್ಲಿ ಪಾವಿತ್ರ್ಯವನ್ನು, ಉಗುರಿನ ತುದಿಯಲ್ಲಿ ಒಂದಿಷ್ಟೂ ಕೊಳೆಯಿಲ್ಲದ ಸ್ವಚ್ಛತೆಯನ್ನು' ಹೊಂದಿದ್ದ ಅವಳು ಸಂಸಾರ ನಿರ್ವಹಣೆಗಾಗಿ, ದಾಂಪತ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ಮತ್ತು ಗೌರವದ ಬದುಕಿಗಾಗಿ ತನ್ನ ಶೀಲವನ್ನು ಕಳೆದುಕೊಂಡಿದ್ದಾಳೆ. ಶೀಲವತಿಯಾಗಿ ಬದುಕಲು ಕಷ್ಟಪಡುವುದಕ್ಕಿಂತ ಒಂದಿಷ್ಟು ಹೊಂದಾಣಿಕೆ ಮಾಡಿಕೊಂಡು ಬದುಕು ಕಟ್ಟಿಕೊಳ್ಳುವುದು ಕೆಲವೊಮ್ಮೆ ಹೆಣ್ಣಿನ ಆದ್ಯತೆಯಾಗಿರುವುದನ್ನು ಈ ಕತೆಯಲ್ಲಿ ಗಮನಿಸಬಹುದು.

ಯು.ಎ. ಖಾದರ್ ಬರೆದಿರುವ 'ಮೊಂಡುಕೈಯ ನಾರಾಯಣನ್' ಕತೆಯ ಕ್ಷೌರಿಕ ನಾರಾಯಣನ್ ಕುಡುಕ. ಕೆಲಸ ಮುಗಿಸಿ ಕಂಠಪೂರ್ತಿ ಕುಡಿದು ಸಿನೆಮಾಗಳ ಕಾಲ್ಪನಿಕ ಲೋಕದ ಲಹರಿಯಲ್ಲಿ ಗಟ್ಟಿಯಾಗಿ ಹಾಡುತ್ತ ತನ್ನ ಮೆಚ್ಚಿನ ನಾಯಿ ರಾಮೋಟ್ಟಿಯೊಂದಿಗೆ ತಡರಾತ್ರಿಯಲ್ಲಿ ಮನೆ ಸೇರುವವ. ಪತ್ನಿ ದಾಕ್ಷಾಯಿಣಿ ಗಂಡನನ್ನು ನಗು ವಯ್ಯಾರಗಳಿಂದ ಒಲಿಸಿಕೊಂಡು ಮನೆಗೆ ಬೇಕಾದ ವಸ್ತುಗಳನ್ನು ತರಬೇಕಾಗಿದೆ. ಇಲ್ಲದಿದ್ದರೆ ಎಲ್ಲ ಹಣವೂ ಕುಡಿತಕ್ಕೆ ಹೋಗುತ್ತದೆ. ಸಂಜೆ ಅವನ ಅಂಗಡಿ ಮುಚ್ಚುವ ಮೊದಲೇ ಅಂಗಡಿಗೆ ಬಂದು ಮನೆಗೆ ತರಬೇಕಾದ ವಸ್ತುಗಳ ಲೆಕ್ಕ ಹೇಳಿ ಹಣ ಒಯ್ಯುತ್ತಾಳೆ. ಪತಿಯ ಈ ತೆರನಾದ ಬೇಜವಾಬ್ದಾರಿ ಮತ್ತು ಕುಡಿತಗಳು ಅವಳು ಪರಪುರುಷರ ಸಂಗಕ್ಕೆ ಎಳಸುವಂತೆ ಮಾಡಿವೆ. ದಾಕ್ಷಾಯಿಣಿಯ ಪ್ರಿಯಕರನ ಸುಳಿವು ಹತ್ತಿ ಗಲಭೆ ಎಬ್ಬಿಸಿದ ಅವನ ನಾಯಿಯ ಪ್ರಾಣವೂ ರಕ್ಷಿಸಲು ಹೋದ ನಾರಾಯಣನ ಎಡಗೈಯೂ ರೈಲಿನಡಿಗೆ ಆಹುತಿಯಾಗಬೇಕಾಗಿ ಬಂದ ಬಗ್ಗೆ ದಾಕ್ಷಾಯಿಣಿಗೆ ಖೇದವಿಲ್ಲ. ಅವಳ ಪ್ರಕಾರ ದುಡಿದು ತಂದು ಹಾಕದ ಗಂಡನಿಗೆ ಹೆಂಡತಿಯ ನಿಷ್ಠೆಯನ್ನು ಪ್ರಶ್ನಿಸುವ ಅಧಿಕಾರವಿಲ್ಲ. ಎಡಗೈ ಕಳೆದುಕೊಂಡು ಆಸ್ಪತ್ರೆ ಸೇರಿದ ಗಂಡನನ್ನು ಆರೈಕೆ ಮಾಡಿ, ಧೈರ್ಯ ತುಂಬಿ ಮತ್ತೆ ಒಂದು ಕೈಯಿಂದ ಕ್ಷೌರದ ಕೆಲಸ ಮುಂದುವರಿಸುವಂತೆಯೂ ಮಾಡಿದ್ದಾಳೆ.

ಗಂಡ ಕುಡುಕನಾಗಿರಲಿ, ಅಂಗವಿಕಲನಾಗಿರಲಿ, ಭ್ರಮಿತನಾಗಿರಲಿ... ಅವನ ಮತ್ತು ಅವನ ಮಕ್ಕಳ ಹೊಟ್ಟೆ ತುಂಬಿಸುವುದು ಹೆಣ್ಣಿಗೆ ಕರ್ತವ್ಯವಾಗಿದೆ. ಪತಿಯ ದುಡಿಮೆಗೆ ಪೂರಕವಾಗಿ ದಾಕ್ಷಾಯಿಣಿ ಮೀನಿನ ಕೆಲಸ ಮಾಡುತ್ತಾಳೆ. ಪತಿ ವಿಕಲಾಂಗನಾಗಿ ದುಡಿಯಲಾರದ ಸ್ಥಿತಿಗೆ ಬಂದಾಗಲೂ ಅಂಜದೆ ಬುಟ್ಟಿಯ ತುಂಬ ಸಾಮಾನು ತಂದು ಮನೆ ನಡೆಸುತ್ತಾಳೆ. ಗಂಡ ನೋಡಿಯಾನೆಂಬ ಅಳುಕು ಈಗಿಲ್ಲ. ಅವನಿಗೆ ಕುಡಿಯಲು ಹಣ ಕೊಟ್ಟು ಜಗಲಿಯಲ್ಲಿ ಮಲಗಿರೆಂದು ಹೇಳಿ ನಿರಾಳವಾಗಿ ತನ್ನ ಲೈಂಗಿಕ ವ್ಯವಹಾರ ಮುಂದುವರಿಸುತ್ತಾಳೆ. ಅವಳ ವಿವಾಹೇತರ ಸಂಬಂಧದ ಹಿಂದಿರುವುದು ಆರ್ಥಿಕ ಕಾರಣವೆನ್ನುವುದು ಸ್ಪಷ್ಟ

ಅಂಗಡಿ ಕೆಲಸ ಮುಗಿದ ಬಳಿಕ ಸೇಂದಿ ಅಂಗಡಿಗೆ ತೆರಳಿ ರಾತ್ರಿಯವರೆಗೂ ಕಂಠಪೂರ್ತಿ ಕುಡಿಯುವ ಗಂಡ 'ಮಿತಿ ತಪ್ಪಿದರೆ ಸೇಂದಿ ಅಂಗಡಿಯ ಇಳಿಮಾಡಿನ ಅಡಿಯಲ್ಲೋ ಯಾವುದಾದರೂ ಅಂಗಡಿಯ ದಿಣ್ಣೆಯಲ್ಲೋ ಮಲಗಿ ನಿದ್ರಿಸಿ ಬೆಳಗ್ಗೆ ಬಂದರೆ ಸಾಕೆ'ನ್ನುವ ದಾಕ್ಷಾಯಿಣಿ ರಾತ್ರಿ ಕುಡಿದು ತೂರಾಡುತ್ತ ಬರುವ ಗಂಡನಿಗಾಗಿ ಕಾಯುವ ಗರತಿಯರಾದ ಹೆಂಡತಿಯರ ಸಾಲಿಗೆ ಸೇರಿದವಳಲ್ಲ. 'ರಾತ್ರಿಯಾಗುವಾಗ ಬಂದು ತಲುಪಿದರೆ ಒಳ್ಳೆಯದು. ತಲುಪದಿದ್ದರೆ ಅದಕ್ಕಿಂತಲೂ ಒಳ್ಳೆಯದು' ಎಂಬ ರೀತಿಯ ಸ್ವಭಾವದವಳು. ರಾತ್ರಿ ತಡವಾಗಿ ಅವನು ತನ್ನ ಪ್ರೀತಿಯ ನಾಯಿಯೊಂದಿಗೆ ತೂರಾಡುತ್ತ ಮನೆಗೆ ಬಂದರೆ 'ದಾರೀಲೆಲ್ಲೂ ಬಿದ್ದು ಸಾಯ್ಲಿಲ್ವಾ ಎರಡೂ?' ಎಂದು ಖಾರವಾಗಿ ಕೇಳುವ ದಾಕ್ಷಾಯಿಣಿಗೆ ಗಂಡನಿಗೆ ನಿದ್ರೆ ಕಡಿಮೆಯಾದೀತೆಂಬ ಅರಿವಿದೆ. ಅದಕ್ಕಾಗಿ ಅವನಿಗೆ ಚಾಪೆ ಹಾಸಿ ಕೊಡುತ್ತಾಳೆ. ಸಂತೃಪ್ತಿಯುಳ್ಳ ಓರ್ವ ಮನೆಯೊಡತಿಯ ಹಾಗೆ ಬೆಳಗ್ಗೆ ಕಾಗೆ ಕೂಗುವುದನ್ನು ಕಿವಿಗೊಟ್ಟು ಕೇಳಿ ಚಾಪೆ ಬಿಟ್ಟೇಳುತ್ತಾಳೆ. ಹಾಲುಗಂಜಿ ಮಾಡಿಟ್ಟು ಗಂಡನನ್ನು ಕರೆದು ಎಬ್ಬಿಸುತ್ತಾಳೆ. ಆತ 'ಬೆಳಗ್ಗೆ ಎದ್ದು ಕೆಲಸಕ್ಕೆ ಸಿದ್ಧವಾಗಿ ಹೋಗಬೇಕಾದ ವ್ಯಕ್ತಿಯಲ್ಲವೆ? ತನ್ನ ಹಾಗೂ ಮಕ್ಕಳ ಗಂಟಲಿನ ಕೀಲಿ ಕೈಯಲ್ಲವೆ?' (ಪು. ೧೦೬, ತೃಕೋಟ್ಟೂರ್ ನೀಳ್ಗತೆಗಳು) ಎಂಬ ಅರಿವು ಅವಳಿಗಿದೆ.

'ಹೆತ್ತ ಹೆಂಗಸಿನ ನಗೆಯ ದನಿಯಲ್ಲಿ' ಗಂಡನ ಕುಡಿಯುವ ಅಭ್ಯಾಸವನ್ನು ಮೂದಲಿಸುವ ದಾಕ್ಷಾಯಿಣಿ ಗಂಡನ ಆರೋಗ್ಯ ಚೆನ್ನಾಗಿದ್ದಾಗ ಅವನನ್ನು ಬಹುಮಟ್ಟಿಗೆ ಚೆನ್ನಾಗಿಯೆ ನೋಡಿಕೊಂಡಿದ್ದಾಳೆ. ಗಂಡನ ದೈಹಿಕ ಮತ್ತು ಲೈಂಗಿಕ ಸಾಮರ್ಥ್ಯಗಳ ಬಗ್ಗೆ ತೃಪ್ತಳಾಗಿದ್ದಾಳೆ: 'ಕಳ್ಳಪುರುಷನಲ್ಲದಿದ್ದರೂ ನೋಡುವುದಕ್ಕೆ ಒಳ್ಳೆ ಗಟ್ಟಿಮುಟ್ಟು, ಕತ್ತರಿ, ಬಾಳು ಹಿಡಿಯಲು ಎರಡು ಕೈಗಳೂ ಇರುವ ಓರ್ವ ಪುರುಷನಲ್ಲವೆ ನಾರಾಯಣನ್. ಕ್ಷೌರಿಕನಾಗಿದ್ದರೂ ಗಂಡಸಿನ ಪಂಚ ಪೌರುಷವನ್ನು ಒಳಗೊಂಡ ನವಮನ್ಮಥನಲ್ಲವೆ?' (ಪು. ೧೦೮, ಅದೇ) ಆದರೆ ಪ್ರೀತಿಯ ನಾಯಿಯನ್ನು ರಕ್ಷಿಸುವ ಯತ್ನದಲ್ಲಿ ನಾರಾಯಣನ್ ಎಡಗೈಯನ್ನು ಕಳಕೊಂಡ ನಂತರ ಬದುಕು ಬದಲಾಗುತ್ತದೆ. ಮೊಂಡುಕೈಯಲ್ಲಿಯೆ ಆತ ಕ್ಷೌರಿಕ ಕಾಯಕವನ್ನು ಮತ್ತೆ ಆರಂಭಿಸಿದ ಬಳಿಕ 'ಅವ್ನಿಗೆ ಸರಿಯಿಲ್ಲ' ಎಂದು ಜನ ಆಡಿಕೊಳ್ಳುತ್ತಿರುವ ಕಾಲದಲ್ಲಿ ತನ್ನ ಅಂಗಡಿಯ ಮುಂಭಾಗದಿಂದಲೆ ಹಾದು ಹೋಗುತ್ತಿರುವ ದಾಕ್ಷಾಯಿಣಿಯ ಬುಟ್ಟಿಯಲ್ಲೂ ಕುಕ್ಕೆಯಲ್ಲೂ ವಸ್ತುಗಳು ತುಂಬಿರುವುದನ್ನು, ಹಾಗೆ ತುಂಬಿಸಲು ಕಾರಣನಾದ ಒಬ್ಬಾತ ಅವಳ ಜೊತೆಗಿರುವುದನ್ನು ನಾರಾಯಣನ್ ಕಾಣುವಂತಾಯಿತು. 'ಹಣೆಬರಹ ಕೆಟ್ಟವಳ ಕಪಾಳಕ್ಕೆ ನಾಲ್ಕು ಬೀಸಿ ಕೊಡುವ, ಅಥವಾ ಕೈಯಲ್ಲಿದ್ದ ಹರಿತವಾದ ಬಾಳನ್ನು ಒಮ್ಮೆ ಬೀಸಿ ಅವಳ ತಲೆ ಮರಳಲ್ಲಿ ಬಿದ್ದು ಹೊರಳಾಡುವುದನ್ನು ಕಾಣುವ' ಆಸೆ ಮೂಡಿದರೂ ಹೆಂಡತಿಯನ್ನು ಕಾಣುವಾಗ 'ದೇಹವಿಡೀ ಒಂಥರ ನಡುಕ' ಹುಟ್ಟುವುದರಿಂದ ಅಸಹಾಯಕನಾಗಿ ಸುಮ್ಮನೆ ನೋಡುತ್ತಿರುತ್ತಾನೆ.

ನಾರಾಯಣನ್‌ನ ಆರ್ಥಿಕ ಮತ್ತು ಶಾರೀರಿಕ ಅಸಾಮರ್ಥ್ಯಗಳು ಹೆಂಡತಿಯ ಮುಂದೆ ಅವನನ್ನು ದುರ್ಬಲನಾಗಿಸಿವೆ. ಬುಟ್ಟಿಯಲ್ಲಿ ಮನೆಯ ಸಾಮಾನು ತುಂಬಿಸಿಕೊಂಡ ದಾಕ್ಷಾಯಿಣಿ, ಒಳಗೇ ಉಕ್ಕುವ ಕ್ರೋಧದಿಂದ ಬಾಳನ್ನು ಹರಿತಗೊಳಿಸುತ್ತಿದ್ದ ಗಂಡನ ಅಂಗಡಿಗೆ ಬಂದು 'ಕಲ್ಲಿಗೆ ತಲೆ ಜಜ್ಜದೆ ಕುಡಿದು ಎಲ್ಲಾದ್ರೂ ಮಲಕ್ಕೊಳ್ಳಿ – ಅಲ್ದಿದ್ರೆ ಗುಡಿಸ್ಲಿಗೆ ಬಂದು ಮಾಡಿನಡಿಯಲ್ಲಿ ಮಲಕ್ಕೊಳ್ಳಿ. ಲಂಗುಲಗಾಮಿಲ್ದೆ ಬಂದ್ರೆ ನಾ ಬಾಗಿಲು ತೆರೀಲಿಕ್ಕಿಲ. ಅದು ಮನಸ್ಸಿನಲ್ಲಿರ್ಲಿ' (ಪು. ೧೧೫, ಅದೇ) ಎಂಬ ತಾಕೀತಿನೊಂದಿಗೆ ಅವನ ಕೈಯಲ್ಲಿ ಒಂದು ನೋಟನ್ನಿಟ್ಟು ತೆರಳಿದಾಗಲೂ ಪ್ರತಿನುಡಿಯಲಾರದೆ ನಿರುತ್ತರನಾಗುತ್ತಾನೆ. ತಡೆಯಲಾರದ ಸಿಟ್ಟಿನಿಂದ ಒಮ್ಮೆ ಅವಳ ವಂಚನೆಯನ್ನು ಹಿಡಿದೇಬಿಡುವ ಉತ್ಸಾಹದಿಂದ ಸೊಂಟದಲ್ಲಿ 'ಬಾಳ'ನ್ನು ಸಿಕ್ಕಿಸಿಕೊಂಡು ಎದ್ದೇಳಲಾಗದಷ್ಟು ಕುಡಿದು ಅವನೊಮ್ಮೆ ಮನೆ ತಲುಪಿದ್ದಿದೆ. ಆಗ ಬೆಂಕಿ ಉರಿಯುವ ಕಣ್ಣುಗಳೊಂದಿಗೆ ದಾಕ್ಷಾಯಿಣಿ ಹೊರಗೆ ಬಂದು 'ಇದಕ್ಕಾ ನಾ ಕಾಸು ಕೊಟ್ಟದ್ದು? ಕುಡ್ದು ಎಲ್ಲಾದ್ರೂ ಮಲ್ಕೊಳ್ಳಿಕ್ಕಲ್ವ?' ಎಂದು ನೇರವಾಗಿಯೆ ಕೇಳಿದ್ದಾಳೆ. ಈ ಪ್ರಶ್ನೆಯ ಮೂಲಕ ಕುಟುಂಬದ ಖರ್ಚು ಭರಿಸದ ಪತಿಗೆ ಹೆಂಡತಿಯನ್ನು ನಿಯಂತ್ರಿಸುವ ಅಧಿಕಾರವಿಲ್ಲ ಎಂಬ ಅಂಶವನ್ನು ದಾಕ್ಷಾಯಿಣಿ ಪ್ರತಿಪಾದಿಸುತ್ತಾಳೆ. ಏಳುವ ಶಕ್ತಿಯಿಲ್ಲದಂತೆ ಸೊಂಟದ ಮಡಿಕೆಯಲ್ಲಿ ತೆಪ್ಪಗೆ ಮಲಗಿರುವ ಕಿರುಗತ್ತಿಯೊಂದಿಗೆ ನಾರಾಯಣನ್ 'ಎಲ್ಲಿಗೆಂದಿಲ್ಲದೆ ತೆಪ್ಪಗೆ ಹೊರನಡೆಯುವುದು' ಆರ್ಥಿಕ ಶಕ್ತಿಯಿಲ್ಲದ ಪುರುಷರು ಕುಟುಂಬದೊಳಗೆ ಗೌರವ ಕಳೆದುಕೊಳ್ಳುವುದನ್ನು ಸೂಚಿಸುತ್ತದೆ. ದುಡಿದು ಗಳಿಸಲಾರದ ಅಸಹಾಯಕತೆ ಅವನ ಬಾಯಿ ಮುಚ್ಚಿಸಿದೆ.

ಎಂ. ಮುಕುಂದನ್ ಅವರು ಬರೆದ 'ದೇವರ ವಿಕರಾಳಗಳು' ಎಂಬ ಕಾದಂಬರಿಯು ಹಣಕ್ಕಾಗಿ ಬೇರೆಯವರಿಗೆ ಮೈ ಒಪ್ಪಿಸಿಕೊಳ್ಳುವುದು ಪಾಪವೆಂಬ ಪ್ರಜ್ಞೆ ಇದ್ದಾಗಲೂ, ಬದುಕಿಗೆ ತೀರಾ ಅನಿವಾರ್ಯವೆನಿಸಿದಾಗ ಆ ದಾರಿಯನ್ನು ಹಿಡಿಯುವುದು ಅಪರಾಧವಲ್ಲ ಎಂದು ಭಾವಿಸಿ ನಡೆದುಕೊಳ್ಳುವ ಕೆಳ ಮಧ್ಯಮ ವರ್ಗದ ಸ್ತ್ರೀಯರ ವರ್ತನೆಗಳನ್ನು ಬಹಳ ಸಹಜವಾಗಿ ನಿರೂಪಿಸುತ್ತದೆ. ಗಾಂಜಾದ ಅಮಲಲ್ಲಿ ಮುಳುಗಿ ತಾನು ಮಯ್ಯಳಿಯ ಸೃಷ್ಟಿಕರ್ತನೆಂದು ಭ್ರಮಿಸುವ, ಜಾದೂ ಹೊರತು ಇನ್ನೊಂದು ಕೆಲಸ ತಿಳಿಯದೆ ತನ್ನ ಗಾಂಜಾಕ್ಕಾಗಿಯೂ ನಿತ್ಯ ಸಾಲ ಮಾಡುವ ಅಲ್ಫೋನ್ಸಯ್ಯನ ಪತ್ನಿ ಮಗ್ಗಿಬಾಯಿ ಈ ಕೃತಿಯಲ್ಲಿ ಗಮನಿಸಬೇಕಾದ ವಿಶಿಷ್ಟ ಸ್ತ್ರೀಪಾತ್ರ. ಮಗ ಮೈಕಲ್ ರಾಶಿಹಣದೊಂದಿಗೆ ಬರುತ್ತಾನೆಂದು ನಂಬಿದ್ದು ಸುಳ್ಳಾದಾಗ, ಪತಿಯಿಂದ ತಮ್ಮನ್ನು ಸಾಕುವುದು ಸಾಧ್ಯವೆ ಇಲ್ಲ ಎಂದರಿವಾದಾಗ ಮಗ್ಗಿಬಾಯಿ ದಾಂಪತ್ಯದ ಪವಿತ್ರ ಚೌಕಟ್ಟನ್ನು ದಾಟುತ್ತಾಳೆ. ಇಳಿ ವಯಸ್ಸಿನಲ್ಲಿ ತುಟಿಗೆ ರಂಗು, ಮೈಗೆ ಅತ್ತರು ಬಳಿದು, ಗಿಡ್ಡ ಲಂಗಗಳನ್ನು ಧರಿಸಿ, ತನ್ನ ಬಿಳಿ ಕಾಲುಗಳನ್ನು ತೋರಿಸಿ ತನಗಿಂತ ಸಣ್ಣ ವಯಸ್ಸಿನ ಧರ್ಮಪಾಲನನ್ನು ಆಕರ್ಷಿಸಿ, ಅವನೊಂದಿಗೆ ಲೈಂಗಿಕ ಸಂಬಂಧ ಬೆಳೆಸಿಕೊಂಡು ಮನೆಯಲ್ಲಿ ಹೊತ್ತು ಹೊತ್ತಿಗೆ ಒಲೆ ಉರಿಯುವಂತೆ ನೋಡಿಕೊಳ್ಳುತ್ತಾಳೆ.

ಮಗ್ಗಿಬಾಯಿ ಪರಸಂಗಕ್ಕೆ ಎಳಸಲು ಕಾರಣವಾದದ್ದು ಗಂಡನ ಬೇಜವಾಬ್ದಾರಿ. ದುಡಿದು ಸಂಪಾದಿಸದಿದ್ದರೂ ದಿನಾ ಗಾಂಜಾ ಸೇವಿಸಿ ಕಲ್ಪನಾಲೋಕದಲ್ಲಿ ಮಾಂತ್ರಿಕನಾಗಿ ವಿಹರಿಸಬಯಸುವ ಗಂಡನಿಗೆ ಬೇಕಾದ ಹಣ ಒದಗಿಸಿ ಸಂತೋಷಪಡಿಸುತ್ತಾಳೆ. ಮನೆಯಲ್ಲಿರುವ ಮಗಳಿಗೆ ತಿಳಿದೀತೆಂಬ ಅಂಜಿಕೆಯಿಲ್ಲದೆ ಪ್ರತಿನಿತ್ಯ ತನ್ನ ಪ್ರಿಯಕರ ಮನೆಗೆ ಬರುವುದಕ್ಕೆ ಅವಕಾಶ ಮಾಡಿಕೊಡುತ್ತಾಳೆ. ಅವನು ದಿನಾ ಬರುವುದೇಕೆಂದು ಮಗಳು ಅಸಹನೆಯಿಂದ ಪ್ರಶ್ನಿಸಿದಾಗ 'ನಿನ್ನಂತೆ ಕಂಡವರ ಪಕ್ಕದಲ್ಲಿ ಮಲಗಿ ಹೊಟ್ಟೆ ಮುಂದೆ ಬರಿಸಿಕೊಳ್ಳುವುದಿಲ್ಲ' ಎಂದು ಬಾಯಿ ಮುಚ್ಚಿಸುತ್ತಾಳೆ. ಹೀಗೆ ಹಾಡುಹಗಲಲ್ಲೇ ಪರಪುರುಷ ಸಂಗ ಮಾಡುವ ಧೈರ್ಯವನ್ನು ಮಗ್ಗಿಬಾಯಿ ಪಡೆದಿರುವುದು ಅವಳ ಸಂಪಾದನೆಯಿಂದ ಮತ್ತು ಸ್ವಾರ್ಥಕ್ಕಲ್ಲದೆ ಕುಟುಂಬದ ಪೋಷಣೆಗಾಗಿ ತಾನು ಪರಪುರುಷನ ಸಂಗ ಮಾಡಬೇಕಾಗಿದೆ ಎಂಬ ಸಕಾರಣದಿಂದ.

ಕಾರೂರ್ ನೀಲಕಂಠಪಿಳ್ಳೆ ಅವರು ಬರೆದಿರುವ 'ಸೈತಾನ' ಕಥೆಯಲ್ಲಿ ಅಸೌಖ್ಯದಿಂದ ಹಾಸಿಗೆ ಹಿಡಿದಿರುವ ಪತಿಯ ಚಿಕಿತ್ಸೆ ಮತ್ತು ಬೆಳೆಯುತ್ತಿರುವ ಮೂರು ಹೆಣ್ಣುಮಕ್ಕಳಿರುವ ಮನೆಯ ಖರ್ಚುವೆಚ್ಚಗಳನ್ನು ತೂಗಿಸಲಾಗದ ಅಸಹಾಯಕ ತಾಯಿ ಮರಿಯಾಮ್ಮಳಿಗೆ 'ನಿನ್ನ ಘನಸ್ತಿಕೆ, ಹೆಮ್ಮೆಗಳನ್ನು ಬಿಟ್ಟು ಸ್ವಲ್ಪ ಹೊಂದಾಣಿಕೆ ಮಾಡಿಕೋ' ಎಂದು ಪಕ್ಕದ ಮನೆಯ ಮುದುಕಿ ತಿಳುವಳಿಕೆ ಹೇಳುತ್ತಾಳೆ. ಅವಳ ಪ್ರಕಾರ ಚೆಲುವೆಯಾದ ಹಿರಿಯ ಮಗಳನ್ನು ಕೊಟ್ಟು ದೇವರು ಮರಿಯಾಮ್ಮಳಿಗೆ ಒಂದು ದಾರಿಯನ್ನು ತೋರಿದ್ದಾರೆ. ಆ ದಾರಿಯೆಡೆಗೆ ಕಣ್ಣು ಮುಚ್ಚಿಕೊಂಡಿರದೆ ಸ್ವಲ್ಪ ಜಾಣ್ಮೆಯಿಂದ ಬಳಸಿಕೊಂಡರೆ ಎಲ್ಲ ಕಷ್ಟಗಳೂ ತೀರುತ್ತವೆಂದು ಸಲಹೆ ಕೊಡುತ್ತಾಳೆ: "ಲೇ ನೋಡೇ ಒಂದು ಬಂಗಾರದ ಗಟ್ಟಿಯನ್ನೇ ಅಲ್ಲವಾ ದೇವರು ನಿನಗೆ ಕೊಟ್ಟಿರೋದು! ನಿನ್ನ ಬದಲು ನಾನಾಗಬೇಕಿತ್ತು. ಲೇ, ನಾನು ಬಂಗಾರದ ಬಂಗಲೆಯನ್ನೇ ಕಟ್ಟಿಸುತ್ತಿದ್ದೆ" (ಪು. ೯೩, ಆಯ್ದ ಮಲಯಾಳ ಸಣ್ಣ ಕಥೆಗಳು) ಹೇಗಾದರೂ ಮಾಡಿ ಹಣ ಹೊಂದಿಸಿ ಗಂಡನ ಖಾಯಿಲೆಯನ್ನು ಗುಣಪಡಿಸುವುದು ಹೆಂಡತಿಯಾದವಳ ಕರ್ತವ್ಯವಾಗಿದೆ ಎಂಬುದನ್ನು ಮುದುಕಿ ನೆನಪಿಸುತ್ತಾಳೆ. ಅವಳ ಮಾತಿಗೆ ಕಿವಿಗೊಟ್ಟ ಆಸುಪಾಸಿನ ಮಹಿಳೆಯರು ಆರ್ಥಿಕ ತೊಂದರೆಗಳಿಂದ ಮುಕ್ತರಾಗಿದ್ದಾರೆ. 'ಅಗತ್ಯ ಬಿದ್ದಲ್ಲಿ ಐದೋ ಹತ್ತೋ ರೂಪಾಯಿ' ಆ ಹೆಣ್ಣುಗಳ ಕೈಯಲ್ಲಿರುತ್ತದೆ. ಅನುಭವಿಯಾದ ಮುದುಕಿಯ ಮಾತುಗಳಲ್ಲಿ ಪ್ರಕಟವಾಗುವ ಹೆಣ್ಣಿನ ಜೀವನದೃಷ್ಟಿ ಹೀಗಿದೆ: "ಪ್ರತಿಯೊಬ್ಬರಿಗೂ ಇರುತ್ತೆ ವ್ಯಥೆ. ಮಕ್ಳು ಉಪವಾಸಬಿದ್ರೆ ವ್ಯಥೆ. ಗಂಡ ಖಾಯಿಲೆಬಿದ್ರೆ ವ್ಯಥೆ. ಮದುವೆ ಪ್ರಾಯ ದಾಟಿದ ಹೆಣ್ಮಕ್ಳು ಮನೇಲಿದ್ರೆ ವ್ಯಥೆ. ಇದಕ್ಕೆಲ್ಲಾ ಅಳ್ತಾ ಕೂತ್ರೆ ಸಾಕಾ?" (ಪು. ೯೪, ಅದೇ) ಲೈಂಗಿಕತೆಯ ಬಗ್ಗೆ ಏನೂ ತಿಳಿಯದ ಎಳೆಯ ಯುವತಿ ಶೋಶಾಮ್ಮಳಿಗೆ ಪ್ರೇಮ ಪ್ರಣಯದ ಕಥೆಗಳನ್ನು ಹೇಳಿ, ಮಾನಸಿಕವಾಗಿ ಸಿದ್ಧಗೊಳಿಸುತ್ತಾಳೆ. ಹೀಗೆ ಸುಲಭವಾಗಿ ಹಣ ಗಳಿಸಿ ಅಪ್ಪನ ಖಾಯಿಲೆಯನ್ನು ಗುಣಪಡಿಸಬಲ್ಲ ದಾರಿಯನ್ನು ತೋರಿಸಿ ಆ ಮನೆಯ ಸಮಸ್ಯೆಯನ್ನು ನಿವಾರಿಸುತ್ತಾಳೆ. ಸಾಕಷ್ಟು ಆದಾಯವಿಲ್ಲದ ಕೆಳ

ಮಧ್ಯಮವರ್ಗದ ಸ್ತ್ರೀಯರು 'ಹೇಗಾದರೂ ಮಾಡಿ' ಮನೆ ನಿಭಾಯಿಸಬೇಕಾಗಿ ಬಂದಾಗ ವಿಶೇಷವಾದ ಅಪರಾಧೀಪ್ರಜ್ಞೆಯೇನೂ ಇಲ್ಲದೆ ಬದುಕಿಗಾಗಿ ನೈತಿಕತೆಯ ಗೆರೆಗಳನ್ನು ದಾಟುತ್ತಾರೆ.

'ಮೃಗತೃಷ್ಣೆ' ಎಂಬ ಕತೆಯಲ್ಲಿ ಕಮಲಾದಾಸ್ ಅವರು ಕೇವಲ ರೇಶ್ಮೆ ಸೀರೆ ಮತ್ತು ಒಡವೆಗಳಿಗಾಗಿ ವಿದೇಶೀ ಸಾಹೇಬನಾಗಿರುವ 'ಬಿಳಿಯ ವಿಲ್ಸನ್' ಜತೆ ಮಲಗುವಂತೆ ಹದಿನಾರರ ಬಾಲಕಿ ನೀಲಂಳನ್ನು ಸ್ವಂತ ಅಪ್ಪ ಅಮ್ಮನೇ ಕಳಿಸಿಕೊಡಲು ಪ್ರೇರಣೆಯಾಗಿರುವ ಬಡತನ ಮತ್ತು ಆರ್ಥಿಕ ಅಗತ್ಯಗಳ ಕಡೆಗೆ ಗಮನ ಸೆಳೆಯಲು ಯತ್ನಿಸಿದ್ದಾರೆ. 'ನೀನು ಸಾಹೇಬನನ್ನು ಸಂತೋಷಪಡಿಸಬೇಕು. ಸಾಹೇಬನೇ ನಮ್ಮೆಲ್ಲರ ನೆರಳು' (ಪು. ೧೫೩, ಒಂದು ಪ್ರೀತಿಯ ಕತೆ ಮತ್ತು ಇತರ ಕತೆಗಳು) ಎಂಬ ಹಿತವಚನದೊಂದಿಗೆ ಮಗಳನ್ನು ಸಾಹೇಬನ ಮನೆಯಲ್ಲಿ ಬಿಟ್ಟುಬರುವ ಅಮ್ಮನಿಗೆ ಮಗಳು ತಮ್ಮ ಬಡತನವನ್ನು ದೂರಮಾಡುತ್ತಾಳೆಂದು ಅವಳ ಬಗ್ಗೆ ಅಭಿಮಾನವಿದೆ. ಸಾಹೇಬನ ಮನೆಯಿಂದ ತನ್ನ ಮನೆಗೆ ಮೊದಲ ಬಾರಿ ಹೋದಾಗ "ನೀನು ನನಗೊಂದು ಹೊದಿಕೆ ತೆಗೆದುಕೊಡಬೇಕು. ನಾನು ಸಾಧ್ಯವಾಗುವಷ್ಟು ಕಾಲ ಈ ಮನೆಗಾಗಿ ದುಡಿದೆ. ಈಗ ಇವರ‍್ಯಾರೂ ನನ್ನನ್ನು ಗಮನಿಸ್ತಿಲ್ಲ" (ಪು. ೧೫೫, ಅದೇ) ಎಂಬ ಕೋರಿಕೆ ಸಲ್ಲಿಸುವ ವಯಸ್ಸಾದ ಅಪ್ಪನಿಗೂ, "ಅಪ್ಪನಿಗೆ ಔಷಧಿ ಕೊಂಡು ಕುಡಿಯಲು ಕೂಡ ಹಣವಿಲ್ಲ. ನಾನು ಎಷ್ಟೂಂತ ಕೆಲಸ ಮಾಡ್ಲಿ?" (ಪು. ೧೫೬, ಅದೇ) ಎನ್ನುವ ಅಮ್ಮ ಇಬ್ಬರಿಗೂ 'ಆ ಬಿಳಿಯ ಅನುಭವಿಸಿ ಬಿಸಾಡಿ ಬಿಡುವ ಮುನ್ನ' ಮಗಳು ಸಾಕಷ್ಟು ಸಂಪತ್ತು ಗಳಿಸಬೇಕೆಂಬ ಅಪೇಕ್ಷೆಯಿದೆ.

ಹೆಣ್ಣಿಗೆ ತನ್ನ ಆಸೆ, ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಆರ್ಥಿಕತೆಯಿರುವುದು ಬಹಳ ಅಗತ್ಯವೆಂದು ಈ ತಾಯಿ ನಂಬಿದ್ದಾಳೆ. ಮಗಳಿಗಾಗಿ ಸಾಹೇಬ ಕೊಡಿಸಿದ ರೇಷ್ಮೆ ಸೀರೆಗಳು, ಒಡವೆಗಳನ್ನು ನೋಡುತ್ತ "ನೀನು ಅದೃಷ್ಟವಂತಳು. ಏನೂ ಕೆಲಸ ಮಾಡದೆಯೆ ನಿನ್ನ ಹಸಿವನ್ನು ನೀಗಿಸಲು ನಿನಗೊಬ್ಬರಿದ್ದಾರೆ. ಉಡಲು ಸೀರೆಗಳಿವೆ. ಅದಕ್ಕಿಂತಲೂ ಹೆಚ್ಚಾಗಿ ಒಂದು ಹೆಣ್ಣಿಗೆ ಇನ್ನೇನು ಬೇಕು?" (ಪು. ೧೫೫) ಎನ್ನುವ ಅಮ್ಮನ ಮಾತುಗಳಲ್ಲಿ ಮಗಳು ಸರಿಯಾದ ಮನೆಗೆ ಸೇರಿದ್ದಾಳೆ ಎಂಬ ಸಮಾಧಾನವಿದೆ. ಬಿಳಿಯ ಸಾಹೇಬ ಮಗಳಿಗಾಗಿ ಕೊಡುವ ಹಣ, ಉಡುಗೊರೆಗಳಿಂದ ಅಪ್ಪ ಅಮವಿಬ್ಬರೂ ಸಂತೃಪ್ತರಾಗಿದ್ದಾರೆ. ದುಡಿಮೆಗೆ ಅನ್ಯದಾರಿಯಿಲ್ಲದಾಗ 'ಕೇವಲ ಒಬ್ಬರೊಡನೆ ಮಲಗುವುದರಿಂದ' ಅನಾಯಾಸವಾಗಿ ಹಣ ಲಭಿಸುವುದಾದರೆ ಅದರಲ್ಲಿ ಅಪರಾಧವೇನೂ ಇಲ್ಲ ಎನ್ನುವಂಥ ಈ ಮನೋಭಾವ ಬಡತನಕ್ಕೆ ಸಹಜವಾದುದಾಗಿದೆ.

ಆದರೆ ನೀಲಂಳಿಗೆ ತನ್ನ ದೇಹವನ್ನು ಮಾತ್ರ ಬಯಸುವ ಈ ಸಂಬಂಧ ಕ್ರಮೇಣ ಹಿಂಸೆ ಎನಿಸುತ್ತದೆ. ಮಾವನ ಮಗನೂ ಬಾಲ್ಯದ ಸಂಗಾತಿಯೂ ಆಗಿರುವ ಚಿದಂಬರಂನ ಹೆಣ್ಣಾಗಿರುತ್ತೇನೆಂದು ಈ ಹಿಂದೆ ಅವಳು ಮಾತು ಕೊಟ್ಟಿದ್ದಳು. ತನ್ನ ಮೇಲೆ ನಿಜವಾದ ಪ್ರೀತಿಯಿಲ್ಲದೆ ಕೇವಲ ಶಾರೀರಿಕ ಅಗತ್ಯಗಳಿಗಾಗಿ

ಮಾತ್ರ ತನ್ನನ್ನು ಇಷ್ಟಪಡುವ ಬಿಳಿಯ ವಿಲ್ಸನ್ ಒಬ್ಬ ದುಷ್ಟನೆಂದೂ, ನಿಜವಾಗಿಯೂ ತಾನು ಮಾವನ ಮಗನಿಗೆ ಸೇರಿದವಳೆಂದೂ ಅರ್ಥವಾದ ಬಳಿಕ, ಕ್ರಾಂತಿಕಾರಿಯಾದ ಚಿದಂಬರಂ ಬಿಳಿಯ ವಿಲ್ಸನ್‌ನನ್ನು ಕೊಲೆ ಮಾಡುವುದಕ್ಕೆ ಅಗತ್ಯ ಮಾಹಿತಿ, ಸಂದರ್ಭಗಳನ್ನು ಅವಳೇ ಒದಗಿಸುತ್ತಾಳೆ. ಬಿಳಿಯ ವಿಲ್ಸನ್ ಸತ್ತು ಅವಳು ತವರಿಗೆ ಮರಳುವಾಗ ಬಿಳಿಯ ವಿಲ್ಸನ್ ತನಗಾಗಿ ಕೊಂಡುಕೊಟ್ಟಿದ್ದ ಬೆಲೆಬಾಳುವ ರೇಷ್ಮೆಸೀರೆಗಳು ಮತ್ತು ಒಡವೆಗಳನ್ನು ಅವನ ಮನೆಯಲ್ಲೇ ಬಿಟ್ಟು ಬರುತ್ತಾಳೆ. ವಿಷಯ ತಿಳಿದಾಗ "ಛೆ! ಎಷ್ಟು ಒಡವೆಗಳಿದ್ದವು; ಎಷ್ಟು ಸೀರೆಗಳು! ಇವಳಂಥಾ ಮೂರ್ಖ ಶಿಖಾಮಣಿಯನ್ನು ನಾನು ಕಂಡೇ ಇಲ್ಲ" (ಪು. ೧೬೦, ಅದೇ) ಎಂದು ಹಳಹಳಿಸುವ ಅಮ್ಮನ ಮಾತುಗಳಲ್ಲಿ ಸ್ತ್ರೀಯರ ಆದ್ಯತೆಗಳು ಮತ್ತು ಪರಪುರುಷ ಸಂಗಕ್ಕೆ ಪ್ರೇರಣೆಯಾಗುವ ಆರ್ಥಿಕ ಪರಿಸ್ಥಿತಿಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಗೀತಾ ಹಿರಣ್ಯನ್ ಅವರು ಬರೆದಿರುವ 'ಅಸಂಘಟಿತೆ' ಕತೆಯಲ್ಲಿ ತಂದೆ ಇಲ್ಲದ ಸ್ಮಿತಾ ತನ್ನ ಶಿಕ್ಷಣ ಮತ್ತಿತರ ಖರ್ಚುವೆಚ್ಚಗಳಿಗಾಗಿ ದೂರದ ಸಂಬಂಧಿಯಾದ ಮಧು ಅಣ್ಣನೊಂದಿಗೆ ಲೈಂಗಿಕ ಸಂಬಂಧ ಬೆಳೆಸುತ್ತಾಳೆ. ಆತನ ಸೂಚನೆಯಂತೆ ಅವನ ಮೇಲಿರುವ ವಂಚನೆಯ ಕೇಸಿನಿಂದ ಬಿಡುಗಡೆ ಮಾಡುವುದಕ್ಕಾಗಿ ವಿಚಾರಣಾ ಸಮಿತಿಯ ನಾಲ್ವರು ಪುರುಷರನ್ನು ತೃಪ್ತಿಪಡಿಸುವುದಕ್ಕೂ ಒಪ್ಪಿಕೊಳ್ಳುತ್ತಾಳೆ. ರಸ್ತೆಯಲ್ಲಿ ನಡೆಯುವಾಗ ತಾನು ಮೈಮಾರುವವಳೆಂಬ ವಿಷಯ ಬಟ್ಟೆ ಅಂಗಡಿಯ ಸೇಲ್ಸ್‌ಮ್ಯಾನ್‌ಗೆ ಗೊತ್ತಿರಬಹುದೆ ಎಂದು ಅಳುಕುತ್ತಾಳೆ. ಬದುಕಿಗಾಗಿ ವ್ಯಭಿಚಾರಿಣಿಯಾಗುವ ಸ್ಮಿತಾ ತೆರೆದ ಕೊಳದಲ್ಲಿ ಮೀಯುವಾಗ ದೊಡ್ಡಮ್ಮ ತನ್ನ ಅರೆನಗ್ನ ದೇಹದ ಭಾಗಗಳನ್ನು ನೋಡುವುದನ್ನು ಇಷ್ಟಪಡದಿರುವುದು, ಹೋಟೆಲ್ ಕೋಣೆಯಲ್ಲಿ ವಿಚಾರಣಾ ಸಮಿತಿಯ ನಾಲ್ಕನೆಯ ಪುರುಷನಿಗೆ ಬೆನ್ನ ಮೇಲಿನ ಗಾಯವನ್ನು ತೋರಿಸಿ ಮಧು ಅಣ್ಣ ಹೊಡೆದದ್ದೆಂದು ಹೇಳಿ ಅನುಕಂಪ ಗಳಿಸುವುದು... ಈ ಅಂಶಗಳು ಅವಳು ಅನೈತಿಕ ಸಂಬಂಧದಲ್ಲಿ ತೊಡಗಿರುವುದು ಸ್ವಂತ ಇಚ್ಛೆಯಿಂದಲ್ಲ ಎಂಬುದನ್ನು ಸೂಚಿಸುತ್ತವೆ. ತನ್ನನ್ನು ಅಸಹಾಯಕಳನ್ನಾಗಿಸಿ ಹಾಸಿಗೆಗೆಳೆದುದಲ್ಲದೆ ಬೇಕಾದಂತೆ ಬಳಸಿಕೊಳ್ಳುತ್ತಿರುವ ಮಧು ಅಣ್ಣನ ಮೇಲೆ ಅವಳಿಗೆ ಸಿಟ್ಟಿದೆ. ಆದರೆ ಆರ್ಥಿಕ ಪರಿಸ್ಥಿತಿ ಅವಳ ಅಸಹಾಯಕತೆಗೆ ಕಾರಣವಾಗಿದೆ.

ಎಸ್.ಕೆ. ಪೊಟ್ಟೆಕ್ಕಾಟ್ ಅವರು ಬರೆದಿರುವ 'ಒಂಟೆ' ಕಥೆಯಲ್ಲಿ ಹೋಟೆಲ್‌ನ ಅಡುಗೆಯಾಕೆ ಮಾದಿ ಹಣದ ಆಸೆಗಾಗಿ ಧಣಿಗಳೊಂದಿಗೆ ದೈಹಿಕ ಸಂಪರ್ಕ ಬೆಳೆಸಿ ಬಸುರಾಗಿ, ತಿಳುವಳಿಕೆಯಿಲ್ಲದ ಕುರೂಪಿಯನ್ನು ಮದುವೆಯಾಗಿ ಗಂಡನಾದವನಿಗೆ ನಗುವನ್ನಷ್ಟೇ ದಯಪಾಲಿಸಿ, ಮದುವೆಯಾದ ಆರೇ ತಿಂಗಳಲ್ಲಿ ಧಣಿಯ ಮಗುವನ್ನು ಹೆತ್ತು ನಿರಾಳವಾಗಿರುತ್ತಾಳೆ. ತಾನು ಮಾಡುತ್ತಿರುವುದು ತಪ್ಪು ಎಂಬ ಭಾವನೆ ಅವಳಿಗೆ ಕಿಂಚಿತ್ತೂ ಇಲ್ಲ. ಬದುಕಿನ ಅವಶ್ಯಕತೆಗಳನ್ನು ಈಡೇರಿಸುವುದಕ್ಕೆ ಇಂಥ ಹೊಂದಾಣಿಕೆಗಳು ಅವಶ್ಯವೆಂದು ಅವಳು ನಂಬಿದ್ದಾಳೆ.

ವೆಟ್ಟೂರ್ ರಾಮನ್ ನಾಯರ್ ಅವರು ಬರೆದಿರುವ 'ಹಸಿವು ಮತ್ತು ದಾಹ' ಎಂಬ ಕತೆಯಲ್ಲಿ ಯಜಮಾನ ತನ್ನನ್ನು ಬಯಸಿದನೆಂದು ಕೆಲಸ ಬಿಟ್ಟು ಬಂದ ಹೆಣ್ಣೊಬ್ಬಳು ದಾರಿಯಲ್ಲಿ ಪರಿಚಯವಾದ ಪೊನ್ನಾನ್ ಎಂಬವನಲ್ಲಿ ಇದ್ದ ಕೇವಲ ಒಂದು ರೂಪಾಯಿಯನ್ನು ತೆಗೆದುಕೊಂಡು ಅವನೊಂದಿಗೆ ಮಲಗುತ್ತಾಳೆ. ಯಜಮಾನನ ಕಾಮಪೂರೈಕೆಗೆ ಒದಗದೆ ನಿರಾಕರಿಸಿದ ಈ ಹೆಂಗಸಿಗೆ ಖರ್ಚಿಗೆ ಅಗತ್ಯವಾಗಿ ಬೇಕಾದ ಹಣಕ್ಕಾಗಿ ತನ್ನ ದೇಹವನ್ನು ಉಪಯೋಗಿಸಿಕೊಳ್ಳಲು ಆಕ್ಷೇಪವಿಲ್ಲ.

ಇ.ಕೆ. ಷೀಬಾ ಅವರು ಬರೆದಿರುವ 'ಪವಿತ್ರ ಮೇರಿ' ಎಂಬ ಕತೆಯಲ್ಲಿ ಅಸೌಖ್ಯದಲ್ಲಿರುವ ಪತಿಯನ್ನು ಉಳಿಸಿಕೊಳ್ಳುವುದಕ್ಕೆ ಅನ್ಯ ದಾರಿಯಿಲ್ಲದ ಅಸಹಾಯಕ ಸ್ತ್ರೀಯೊಬ್ಬಳು ಅಪರಿಚಿತನೊಂದಿಗೆ ಹಾಸಿಗೆ ಹಂಚಿಕೊಳ್ಳುತ್ತಾಳೆ. ಮೇರಿಯು ಪ್ರೇಮಿಸಿ ಮದುವೆಯಾದ ಅಹಮದನಿಗೆ ಹೃದಯದ ಖಾಯಿಲೆಯಾಗಿ ಆಪರೇಷನ್‌ಗೆ ಹಣದ ಅಗತ್ಯವಿದೆ. ಪ್ರೇಮಕ್ಕಾಗಿ ಕುಟುಂಬದವರಿಂದ ದೂರವಾಗಿ ದುಡಿದು ಬದುಕುತ್ತಿರುವವರಿಗೆ ಆದಾಯದ ಅನ್ಯ ಮೂಲಗಳಿಲ್ಲ. ಇದ್ದೆಲ್ಲ ಒಡವೆಗಳನ್ನು ಮಾರಿಯೂ ಚಿಕಿತ್ಸೆಗೆ ಬೇಕಾದಷ್ಟು ಹಣ ಹೊಂದಿಸುವುದು ಆಗದೆ ಇದ್ದಾಗ ಸರಿತಪ್ಪುಗಳ ಬಗ್ಗೆ ಹೆಚ್ಚೇನೂ ಯೋಚಿಸುವ ಗೊಡವೆಗೆ ಹೋಗದೆ ತನ್ನ ದೇಹಸೌಂದರ್ಯವನ್ನು ವಿಕ್ರಯಿಸಿ ಗಂಡನ ಚಿಕಿತ್ಸೆಗೆ ಬೇಕಾದ ಹಣವನ್ನು ಒದಗಿಸಿಕೊಂಡಳು. ಅದುವರೆಗೂ ಪತಿಯನ್ನಲ್ಲದೆ ಇನ್ನೊಬ್ಬ ಗಂಡಸಿನ ಬಗ್ಗೆ ಮನಸ್ಸಿನಲ್ಲಿಯೂ ಆಲೋಚಿಸದೆ ಪವಿತ್ರಳಾಗಿದ್ದ, ಅನ್ಯ ಮತದವನನ್ನು ಮದುವೆಯಾದರೂ ಪ್ರತಿವಾರವೂ ತಪ್ಪದೆ ಚರ್ಚಿಗೆ ಹೋಗುತ್ತಿದ್ದ ಧರ್ಮಿಷ್ಠಳಾದ ಮೇರಿ ಶರೀರದ ಪವಿತ್ರತೆಗಿಂತ ಪತಿಯ ಪ್ರಾಣವೆ ಮುಖ್ಯವೆಂದು ನಿಶ್ಚಯಿಸಿದಳು. ಒಂದು ಹೊತ್ತಿನ ಮಟ್ಟಿಗೆ ಸ್ವಂತದ್ದಾದ ದೇಹವನ್ನು ದುಡಿಮೆಗೆ ಬಳಸಿಕೊಂಡು ಗಂಭೀರವಾದ ಆರ್ಥಿಕ ಬಿಕ್ಕಟ್ಟೊಂದನ್ನು ಪರಿಹರಿಸಿಕೊಂಡಳು. ಅನ್ಯಪುರುಷನ ಸ್ಪರ್ಶದಿಂದ ಮಲಿನವಾದ ಶರೀರವನ್ನು ಚೆನ್ನಾಗಿ ತೊಳೆದುಕೊಂಡು ಶುದ್ಧಮನಸ್ಸಿನೊಂದಿಗೆ ಪತಿಯ ಪ್ರೀತಿಯ ತೆಕ್ಕೆಗೆ ಮರಳಿ ಸ್ವಸ್ಥವಾಗಲು ಪ್ರಯತ್ನಪಟ್ಟಳು. ಆ ಅಪರಿಚಿತನಲ್ಲಿ ಅವಳಿಗೆ ಬೇಕಾದಷ್ಟು ಹಣವಿತ್ತು. ಅಪರಿಚಿತನನ್ನು ತೃಪ್ತಿಪಡಿಸಬಹುದಾದ ಯೌವನ, ಚೆಲುವಿಕೆಗಳು ಮೇರಿಯಲ್ಲಿದ್ದವು. ಶೀಲ, ಪಾವಿತ್ರ್ಯ ಮುಂತಾದ ಮೌಲ್ಯಗಳ ಭ್ರಮೆಯನ್ನು ಬಿಟ್ಟು ಪ್ರಾಯೋಗಿಕವಾಗಿ ಯೋಚಿಸಿದರೆ ಅದೊಂದು ಪರಸ್ಪರ ವಿನಿಮಯದ ವ್ಯವಹಾರವಾಗಿತ್ತು. ಸ್ವಲ್ಪ ಮಟ್ಟಿನ ಹೊಂದಾಣಿಕೆಯಿಂದ ಬದುಕಿನ ಹಣಕಾಸಿನ ಸಮಸ್ಯೆಗಳನ್ನು ನಿವಾರಿಸುವುದು ಸಾಧ್ಯವಾಗುವುದಾದರೆ ಸ್ತ್ರೀಯರು ಹೆಚ್ಚೇನೂ ವಿಚಾರ ಮಾಡದೆ ತಮಗೆ ಸರಿಕಂಡಂತೆ ಮುಂದುವರಿಯುವುದನ್ನು ಈ ಕತೆಯಲ್ಲಿ ಸಹಜ ವಿದ್ಯಮಾನವೆಂಬಂತೆ ನಿರೂಪಿಸಲಾಗಿದೆ.

ಮನೆಯಲ್ಲಿ ದುಡಿದು ತಂದು ಹಾಕುವ ಗಂಡಸರಿಲ್ಲದೆ ಇದ್ದಾಗ ಸಂಸಾರದ ಖರ್ಚು ನಿಭಾಯಿಸುವುದು ಹೆಣ್ಣಿಗೆ ಕರ್ತವ್ಯವಾಗಿದೆ. ಕುಟುಂಬದ ಅಗತ್ಯಗಳು ಮತ್ತು ವೈಯಕ್ತಿಕ ಬಯಕೆಗಳನ್ನು ತೀರಿಸಿಕೊಳ್ಳುವ

ಅನಿವಾರ್ಯತೆಯಿಂದ ಹೆಂಗಸರು ವಿವಾಹೇತರ ಸಂಬಂಧಗಳನ್ನು ಬೆಳೆಸುತ್ತಾರೆ. ಪರಪುರುಷರನ್ನು ಸಹಿಸಿಕೊಳ್ಳುತ್ತಾರೆ. ನಂಬಿದ ಮೌಲ್ಯಗಳಲ್ಲಿ ಸ್ವಲ್ಪ ಮಟ್ಟಿನ ಹೊಂದಾಣಿಕೆ ಮಾಡಿಕೊಳ್ಳುವುದರಿಂದ ಮನೆಯ ಸಮಸ್ಯೆಗಳು ಪರಿಹಾರವಾಗುವುದಾದರೆ ಅಂಥ ದಾರಿಯಲ್ಲಿ ನಡೆಯುವುದು ತಪ್ಪಲ್ಲ ಎಂಬ ವಾಸ್ತವವಾದಿ ಧೋರಣೆಯನ್ನು ಮಹಿಳೆಯರು ಹೊಂದಿದ್ದಾರೆ. ಸ್ತ್ರೀಯರ ಕುಟುಂಬದ ಹೊರಗಿನ ಕಾಮಸಂಬಂಧಗಳ ಹಿಂದೆ ಇಂಥ ಆರ್ಥಿಕ ಆಯಾಮವಿರುವುದನ್ನು ಮಲಯಾಳಂ ಕಥನಸಾಹಿತ್ಯವು ಗುರುತಿಸಿದೆ.

೪.೬. ಆರ್ಥಿಕ ಪ್ರಜ್ಞೆ ಮತ್ತು ವ್ಯವಹಾರಜ್ಞಾನ

ಕೆಲಸಕ್ಕೆ ಹೋಗದೆ ಗೃಹವಾರ್ತೆ ನಿರ್ವಹಿಸುವ ಸ್ತ್ರೀಯರಿಗೆ ಕುಟುಂಬದ ಆದಾಯದ ಮೇಲೆ ಹಕ್ಕಿದೆ, ಗಂಡನ ಸಂಪಾದನೆಯಲ್ಲಿ ಅಧಿಕಾರವಿದೆ ಎಂಬ ಅರಿವು ಹೊಂದಿರುವ ಕೆಲವು ಸ್ತ್ರೀಯರನ್ನು ಮಲಯಾಳಂ ಕೃತಿಗಳಲ್ಲಿ ಕಾಣಬಹುದು. ಸ್ವಂತ ಆದಾಯವಿಲ್ಲದೆ ಮನೆಯೊಳಗಿನ ಕೆಲಸಕ್ಕಷ್ಟೇ ಸೀಮಿತವಾಗಿರುವ ಸ್ತ್ರೀಯರು ಪತಿಯ ಆರ್ಥಿಕ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳಬಯಸುತ್ತಾರೆ. ಪತಿಯ ಕಷ್ಟದಲ್ಲಿ ಜೊತೆ ಕೊಡುತ್ತಾರೆ. ದುಡಿಯದ ಪತಿಯನ್ನು ಖಂಡಿಸುತ್ತಾರೆ.

'ತೋಟಿಯ ಮಗ' ಕಾದಂಬರಿಯ ವಲ್ಲಿ ತನ್ನ ಗಂಡ ಸ್ವಂತ ಮನೆಹಿತ್ತಿಲು ಕೊಳ್ಳುವುದಕ್ಕೆಂದು ಪ್ರೆಸಿಡೆಂಟನಲ್ಲಿ ಕೊಟ್ಟಿರುವ ಹಣದ ಲೆಕ್ಕ ಕೇಳುತ್ತಾಳೆ. ಚುಡಲಮುತ್ತು ನೆರೆಯವರಿಗೆ ಬಡ್ಡಿಗೆ ಹಣ ಕೊಡುವ ಯೋಚನೆ ಮಾಡಿದಾಗ ಪ್ರತಿಭಟಿಸುತ್ತಾಳೆ. ಲೇವಾದೇವಿ ವ್ಯವಹಾರ ಅನ್ಯಾಯದ್ದು ಎಂದು ಬುದ್ಧಿ ಹೇಳುತ್ತಾಳೆ. ಮೋಸದ ಹಣ ಉಳಿಯುವುದಿಲ್ಲವೆಂದು ನಿಶ್ಚಯವಾಗಿ ಹೇಳುತ್ತಾಳೆ. ನೆರೆಯವನಿಗೆ ಕಷ್ಟ ಬಂದೊದಗಿದ ಸಂದರ್ಭದಲ್ಲಿ ಹಣವಿದ್ದೂ ಕೊಡದೆ ಹೋದ ಗಂಡನಿಗೆ 'ಮನುಷ್ಯನಂತೆ ವರ್ತಿಸು' ಎಂದು ಬುದ್ಧಿ ಹೇಳುತ್ತಾಳೆ.

ವರ್ಗಸಂಘರ್ಷವೇ ಪ್ರಧಾನ ಆಶಯವಾಗಿರುವ ಈ ಕಾದಂಬರಿಯಲ್ಲಿ ವಲ್ಲಿಯ ಪಾತ್ರಕ್ಕೆ ಪ್ರವೇಶ ಮತ್ತು ನಿರೂಪಣೆಯ ಅವಕಾಶಗಳು ಕಡಿಮೆಯಾದರೂ ಪತಿಗೆ ಮುಖಾಮುಖಿಯಾಗಿ ನಿಲ್ಲುವ ಗಟ್ಟಿ ಪಾತ್ರ ಅವಳದು. ರೋಗನಿವಾರಣೆಯ ಬಗ್ಗೆ ದೇವಸ್ಥಾನಕ್ಕೆ ಹಣದ ಪಾಲು ಕೊಡಲು ಗಂಡ ಒಪ್ಪದಿದ್ದಾಗ ವಲ್ಲಿ ಎಚ್ಚರಿಸುತ್ತಾಳೆ. ಹಣದ ಮೂಲಕ ಮೇಲುವರ್ಗದವನಾಗುವ ಹಂಬಲದಲ್ಲಿ ಮಗನನ್ನೇ ಮುಟ್ಟಲಾರದೆ, ತನಗೆ ತಾನೇ ಅಪರಿಚಿತನಾಗುತ್ತ ನಡೆವ ಚುಡಲಮುತ್ತುವಿನ ಗೊಂದಲ ಇಬ್ಬಂದಿತನಗಳು ಅವಳಿಗಿಲ್ಲ. ಹಣವಿದ್ದರೂ ತಮ್ಮ ಮಗನನ್ನು ಮೇಲುವರ್ಗದವರಂತೆ ಬೆಳೆಸಲಾರೆವು ಎಂಬ ಸತ್ಯವನ್ನು ವಲ್ಲಿ ಅರ್ಥಮಾಡಿಕೊಂಡಿದ್ದಾಳೆ.

ವಲ್ಲಿಗೆ ಹಣದ ಲೆಕ್ಕ ಗೊತ್ತಿದೆ. ವ್ಯಾವಹಾರಿಕ ಜ್ಞಾನವೂ ಇದೆ. ತನ್ನ ಗಂಡ ಹಣದ ಲೆಕ್ಕವನ್ನು ಗುಟ್ಟಾಗಿ ಏಕೆ ಮಾಡಬೇಕು? ತಾನೇಕೆ ಕೇಳಬಾರದು? ಪ್ರೆಸಿಡೆಂಟನಿಗೆ ಎಷ್ಟು ಕೊಡಬೇಕಾಗಿದೆ? ಎಷ್ಟು ಉಳಿಯುತ್ತದೆ? ಸ್ವಂತ ಜಾಗ-ಮನೆಗೆ ಎಷ್ಟು ಬೇಕು? ಇತ್ಯಾದಿ ಪ್ರಶ್ನೆಗಳಿವೆ. ಕೇಳಿದರೆ ಅವನಿಗೆ 'ಲೆಕ್ಕ ತಪ್ಪೀತು' ಎಂದಾಕೆ ಯೋಚಿಸುತ್ತಾಳೆ. ಕೊನೆಗೂ ಚುಡಲಮುತ್ತುವಿನಿಂದ ಹಣ ಪಡೆದುಕೊಂಡ ಪ್ರೆಸಿಡೆಂಟ್ ಜಾಗವನ್ನು ಕೊಡದೆ ವಂಚಿಸಿದಾಗ ವಲ್ಲಿಯ ಸಾಮಾನ್ಯಜ್ಞಾನ ಮತ್ತು ವ್ಯಾವಹಾರಿಕ ಪ್ರಜ್ಞೆಗಳು ಚುಡಲಮುತ್ತುವಿಗೆ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸಮರ್ಥೆಯೂ, ಸಂವೇದನಾಶೀಲೆಯೂ, ಬುದ್ಧಿವಂತೆಯೂ ಆಗಿರುವ ವಲ್ಲಿ, ಗಂಡನ ಸಂಪಾದನೆ ತನ್ನದೂ ಹೌದು ಎಂಬ ಅಭಿಪ್ರಾಯವನ್ನು ಹೊಂದಿದ್ದಾಳೆ. ಪತ್ನಿಗೂ ಆರ್ಥಿಕ ಸ್ವಾತಂತ್ರ್ಯವಿದೆ, ಕುಟುಂಬರಕ್ಷಣೆಯ ಸಮಾನ ಹೊಣೆಯಿದೆ, ದುಡಿಯುವವನಿಗೆ ಮಾತ್ರ ಪ್ರತಿಫಲದಲ್ಲಿ ಅಧಿಕಾರವಲ್ಲ, ಪೂರ್ಣಾವಧಿ ಗೃಹಿಣಿಯಾಗಿ ಮನೆ ಮತ್ತು ಸಂಸಾರವನ್ನು ನಿಭಾಯಿಸುವ ಪತ್ನಿಗೂ ಗಂಡನ ಗಳಿಕೆಯಲ್ಲಿ ಹಕ್ಕಿದೆ ಎಂಬ ಸುಧಾರಣಾವಾದಿ ಆಲೋಚನೆಯನ್ನು ವಲ್ಲಿಯ ಪಾತ್ರದ ಮೂಲಕ ಲೇಖಕರು ಉದ್ದೇಶಪೂರ್ವಕ ಪ್ರತಿಪಾದಿಸುತ್ತಾರೆ.

ಓದು ಬರೆಹ ಅರಿತವಳಲ್ಲದ ವಲ್ಲಿ ಓದಿದವರಿಗಿಂತ ಯಾವುದೇ ರೀತಿಯಲ್ಲಿ ಕಡಿಮೆಯದಲ್ಲದ ರೀತಿಯಲ್ಲಿ ನ್ಯಾಯಯುತವಾಗಿ ಬದುಕುವವಳು. ವಾಸ್ತವದ ಅರಿವಿರುವ ಬುದ್ಧಿವಂತೆ. ತನಗಿಷ್ಟವಾದ ಗಂಡನ್ನು ವರಿಸುವಲ್ಲಿ ಯಾವುದೇ ನಿರ್ಬಂಧವನ್ನು ಒಪ್ಪುವವಳಲ್ಲ. ಇಷ್ಟಪಟ್ಟು ವರಿಸಿದ ಚುಡಲಮುತ್ತು ದಾರಿ ತಪ್ಪುತ್ತಿದ್ದಾನೆ ಎನಿಸಿದಾಗ ನೇರವಾಗಿ ಬುದ್ಧಿ ಹೇಳುತ್ತಾಳೆ. ಪತಿಯ ಪ್ರೇಮವನ್ನು ಮಾನಸಿಕವಾಗಿಯೂ ಇನ್ನೊಂದೆಡೆ ಹರಿಯಲು ಬಿಡದಂತೆ ಎಚ್ಚರ ವಹಿಸುತ್ತಾಳೆ. ಪ್ರತಿಭಟನೆ ಮತ್ತು ಅಳುವಿನ ಮೂಲಕ ಪತಿಗೆ ತನ್ನ ಅಗತ್ಯವನ್ನು ಮನಗಾಣಿಸುತ್ತಾಳೆ. ಸಂವೇದನೆ ಉಳ್ಳ ಹೆಣ್ಣಾಗಿ, ಆದರ್ಶ ಪತ್ನಿಯಾಗಿ ಚಿತ್ರಿಸಲ್ಪಟ್ಟಿರುವ ವಲ್ಲಿ, ಪತಿ ಒಬ್ಬಂಟಿಯಾಗಿ ಎದೆಗುಂದುವಾಗ, ಸಾವಿನ ಭಯದಲ್ಲಿ ನಡುಗುವಾಗ, ಏನು ಬಂದರೂ ಒಟ್ಟಿಗೆ ಎದುರಿಸೋಣ ಎಂದು ಧೈರ್ಯ ಹೇಳುತ್ತಾಳೆ. ಬದುಕಿನ ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸ ಮತ್ತು ಸ್ಥೈರ್ಯದಲ್ಲಿ ಗಂಡನಿಗಿಂತಲೂ ಗಟ್ಟಿಗಿತ್ತಿಯಾಗಿದ್ದಾಳೆ. ಗಂಡನ ವರ್ಗಪ್ರಜ್ಞೆಯ ಕಾರಣದಿಂದ ನೆರೆಹೊರೆಯ ತೋಟಿಗಳೊಂದಿಗೆ, ಸ್ವತಃ ತನ್ನನ್ನು ಬೆಳೆಸಿದ ಅಜ್ಜಿಯೊಂದಿಗೆ ಸಂಬಂಧ ಕಳೆದುಕೊಳ್ಳಬೇಕಾದಾಗ ಆಕೆಯ ಮನಸ್ಸಿಗೆ ನೋವಾಗುತ್ತದೆ. ಅದನ್ನಾಕೆ ಆಡಿ ತೋರಿಸುತ್ತಾಳೆ ಕೂಡ. ಪತಿಯ ಮೇಲಿನ ಪ್ರೀತಿಯಿಂದ ಅವನ ಇಚ್ಛೆಯಂತೆ ನಡೆದುಕೊಳ್ಳುವ ವಲ್ಲಿ ಪತಿಯ ವರ್ತನೆ ಅಮಾನವೀಯವೆನ್ನಿಸಿದಾಗ ತಿದ್ದುವ ಯತ್ನವನ್ನೂ ಮಾಡುತ್ತಾಳೆ. ಕೆಳವರ್ಗದ ಹೆಂಗಸರ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯದ ಮಾದರಿಯಾಗಿ ವಲ್ಲಿಯ ಪಾತ್ರ ಕಾಣಿಸಿಕೊಂಡಿದೆ.

'ಎರಡು ಬಳ್ಳ' ಕಾದಂಬರಿಯ ಚಿರುದೆ ಒಡೆಯರ ಗದ್ದೆಯಲ್ಲಿ ಬಿತ್ತನೆಯ ಕೆಲಸ ಮುಗಿದ ಮೇಲೂ ಬೆಳೆಯ ಮೇಲಿನ ವ್ಯಾಮೋಹದಿಂದ ಅಲ್ಲೇ ಇರುತ್ತ ಸಮಯಕ್ಕೆ ಸರಿಯಾಗಿ ಊಟ ತಿಂಡಿಯನ್ನು ಮಾಡದಿರುವ ಪತಿಯನ್ನು 'ಹೀಗೆ ದುಡಿದರೆ ಸಿಗೋದೇನು? ನೆಲ್ಲು ಬೆಳೆದರೆ ಧಣಿಗಳು ಸಾಗಿಸುತ್ತಾರೆ. ಏಕೆ? ಅವರು ಧಣಿಗಳು ಅಂತಲೆ?' ಎಂದು ಎಚ್ಚರಿಸುತ್ತಾಳೆ. ಕೋರನನ್ನು ಅವಾಕ್ಕಾಗಿಸಿದ, ಅವನಲ್ಲೂ ಎಚ್ಚರ ಹುಟ್ಟುವಂತೆ ಮಾಡಿದ ಪ್ರಶ್ನೆ ಅದು. ತಮ್ಮ ದುಡಿಮೆಯಿಂದ ಶ್ರೀಮಂತರಾಗುತ್ತಿರುವ ಧಣಿಗಳು ತಮ್ಮ ಯೋಗಕ್ಷೇಮಕ್ಕೂ ಬಾಧ್ಯರಾಗುವುದು ನ್ಯಾಯ ಎಂಬಂಥಾ ತಿಳುವಳಿಕೆ ಚಿರುದೆಯ ಮಾತುಗಳಲ್ಲಿ ವ್ಯಕ್ತವಾಗಿದೆ: 'ಈ ಧಣಿಗಳಿಗೆ ದುರಾಸೆ. ಅವರ ಗದ್ದೆ ಕೆಲಸಕ್ಕೆ ನಿಂತ ನಾವು, ನಾವೇ ಮಣ್ಣೆತ್ತಿ, ಸುರಿದು, ನೆಲ ಎತ್ತರಿಸಿಕೊಂಡು, ಅದರ ಮೇಲೆ ಗುಡಿಸಲು ಕಟ್ಟಿಕೊಳ್ಳಬೇಕೇನು?' ದುರಾಸೆಯ ಈ ಧಣಿ ಮತ್ತು ತೀರ ಡೊಂಕಾದ ನೋಟ ನಡತೆಗಳನ್ನು ಹೊಂದಿರುವ ಚಿಕ್ಕಧಣಿಯ ಹಂಗಿನಲ್ಲಿ ಉಳಿದರೆ ತಾವು ಬದುಕಿನಲ್ಲಿ ಮೇಲೇರುವುದು ಸಾಧ್ಯವಿಲ್ಲ. ಎಲ್ಲಿಗಾದರೂ ದೂರ ಹೋಗಿ ಬದುಕುವುದು ಲೇಸೆಂಬ ಎಚ್ಚರ ಅವಳಿಗಿದೆ. 'ಈ ವರ್ಷದ ಆದಾಯ ತೆಗೆದುಕೊಂಡು ನಾವು ಅತ್ತಲಾಗೆ ಹೋದರೇನಂತೆ?' ಎಂದೂ ಯೋಚಿಸಿದ್ದಾಳೆ. ಚಿರುದೆ ಹೀಗೆ ಎಚ್ಚರಿಸಿದ್ದರಿಂದಲೆ ಕೋರನಿಗೆ ತಾನು ಕೃಷಿ ಮಾಡಿದ ಗದ್ದೆಯಲ್ಲಿ ಎಷ್ಟು ಬೆಳೆ ಬಂದಿದೆ ಎಂಬ ವಿಚಾರವನ್ನು ತಿಳಿಯುವ ಕುತೂಹಲ ಹುಟ್ಟಿದೆ. ಅದು ತನ್ನ ದುಡಿಮೆಯ ಫಲ, ಅದರಿಂದ ಬರುವ ಆದಾಯದಲ್ಲಿ ತನಗೂ ಪಾಲಿರುವುದು ನ್ಯಾಯವೆಂಬ ಅರಿವು ಮೂಡಿದೆ.

ಕೋರ ಬೆಳೆದ ಪುಂಜಗದ್ದೆಯ ನೆಲ್ಲಿನ ಕೊಯ್ಲು ಸಂದರ್ಭದಲ್ಲಿ ಹೆಣ್ಣಾಳುವೊಬ್ಬಳು ಕದಿರು ಚೆಲ್ಲಿದಾಗ 'ಇದು ತಾನು ಬೆವರಿಳಿಸಿ ಬೆಳೆಸಿದ್ದು' ಎಂಬ ಅತಿಯಾದ ಅಭಿಮಾನದಿಂದ ಕೋರ ಜಗಳಕ್ಕಿಳಿಯುತ್ತಾನೆ. ಹಾಗೆ ಆ ಹೆಣ್ಣಾಳಿನೆಡೆಗೆ ಸಿಟ್ಟಿನಲ್ಲಿ ಧಾವಿಸುತ್ತಿದ್ದ ಕೋರನ ಕೈಯನ್ನು ಚಿರುದೆ ಬಲವಾಗಿ ಹಿಡಿದು ತಡೆಯುತ್ತಾಳೆ. 'ಏನಿದು! ನೆಲ್ಲು ನೋಡಿದಾಗ ನಯವಿನಯ ಮರೆತು ಹೋಯ್ತೇನು?' ಎಂದು ಗಟ್ಟಿಯಾಗಿ ಪ್ರಶ್ನಿಸಿ ಅವನ ಬುದ್ಧಿಯನ್ನು ತಿಳಿಗೊಳಿಸುತ್ತಾಳೆ. ಬಳಿಕ ಅವನು ನೆಲ್ಲು ಕೊಯ್ಯುವ ಸಂದರ್ಭದಲ್ಲಿಯೂ ಕದಿರು ಬೀಳಿಸಿದ್ದನ್ನು ಕರೆದು ತೋರಿಸಿ ವಾಸ್ತವಪ್ರಜ್ಞೆಯನ್ನು ಮೂಡಿಸುತ್ತಾಳೆ. ಚಿರುದೆಯ ವ್ಯಾವಹಾರಿಕ ಜಾಣ್ಮೆ ಮತ್ತು ವಿಚಾರವಂತಿಕೆಗಳನ್ನು ಚಾತ್ತನ ಮೆಚ್ಚುಗೆಯಲ್ಲಿ ಗಮನಿಸಬಹುದು: 'ಕೋಪದ ಆವೇಶದಿಂದ ಕುಣಿಯುತ್ತಿದ್ದವನನ್ನು ಹಿಡಿದು ತಂದು ಬೈದು ವೀಳ್ಯ ಕೊಟ್ಟಳು. ಕೊಂಚ ಹೊತ್ತು ಅವಳ ಸಮೀಪದಲ್ಲಿ ನಿಲ್ಲಿಸಿ ಮಾತನಾಡಿಸಿದಾಗ ಶಾಂತವಾದ, ಸಾಧುವಾದ. ತಾನು ಮಡಯ ಎಂದು ಒಪ್ಪಿಕೊಂಡ. ಅಬ್ಬ! ಅವಳ ಶಕ್ತಿ ಎಂಥದ್ದು!' (ಪು. ೫೮) ಬೆಳೆದವನ ಶ್ರಮಕ್ಕೆ ಕೂಲಿಯಷ್ಟೇ ಪ್ರತಿಫಲವಲ್ಲದೆ ಬೆಳೆಯ ಮೇಲೆ ಯಾವ ಹಕ್ಕೂ ಇಲ್ಲ; ಅದರ ಬಗ್ಗೆ ಅತಿಯಾದ ವ್ಯಾಮೋಹವಿಟ್ಟುಕೊಳ್ಳುವುದು ಅರ್ಥಹೀನವೆಂದು ಚಿರುದೆಗೆ ಸ್ಪಷ್ಟವಾಗಿ ಗೊತ್ತಿದೆ.

ತನ್ನ ಮದುವೆಯ ಸಂಬಂಧವಾಗಿ ಗಂಡನು ಅಪ್ಪನಿಗೆ ಕೊಡಲು ಬಾಕಿಯಿರುವ ತೆರವನ್ನು ತೀರಿಸುವುದಕ್ಕಾಗಿ ಹಾಗೂ ತಮ್ಮದೇ ಆದ ಒಂದು ಗುಡಿಸಲನ್ನು ಕಟ್ಟಿಕೊಳ್ಳುವುದಕ್ಕಾಗಿ ಹಣದ ಉಳಿತಾಯ ಮಾಡಬೇಕೆಂಬ ಯೋಚನೆ ಚಿರುದೆಗಿದೆ. ಗಂಡನ ದುಡಿಮೆಯಲ್ಲಿ ತನಗೆ ಹಕ್ಕಿದೆಯೆಂಬ ತಿಳುವಳಿಕೆಯೂ ಇದೆ. ಆದ್ದರಿಂದಲೆ 'ದಿನವೂ ಒಂದು ಬಳ್ಳ ನನ್ನ ಕೈಗೆ ಒಪ್ಪಿಸು. ಒಟ್ಟಾಗಿ ಕೂಡಿಸಿ ಅಪ್ಪನಿಗೆ ಕೊಡಬೇಕು' ಎಂದು ಗಂಡನಿಗೆ ಹೇಳುತ್ತಾಳೆ. ಹಾಗೆ ತಾಕೀತು ಮಾಡದಿದ್ದರೆ ಗಂಡ ದುಡಿದು ಉಳಿಸಿದ್ದನ್ನು ಹೆಂಡದಂಗಡಿಗೆ ಸುರಿದಾನೆಂಬ ಆತಂಕವೂ ಇದೆ.

ಉರೂಬ್ ಅವರು ಬರೆದಿರುವ 'ಬಾಡಿಗೆ ಮನೆಗಳು' ಕತೆಯಲ್ಲಿ ಶ್ರೀಮಂತ ತಂದೆಯ ಮಗಳಾಗಿದ್ದ ಪಂಕಜ, ಅತ್ತೆಯ ಮನೆಯಲ್ಲಿ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಗುಲಾಮನಂತೆ ಬದುಕುವ ಗಂಡನೊಂದಿಗೆ ಸಂಸಾರ ಮಾಡಲು ನಿರಾಕರಿಸಿ ತವರಿಗೆ ಮರಳುತ್ತಾಳೆ. 'ನೀನಿಲ್ಲದೆ ಬದುಕಲಾರೆ'ನೆಂದು ಗಂಡ ಗೋಗರೆದಾಗ ಹತ್ತು ಅಂಗಡಿಗಳನ್ನು ತನ್ನ ಹೆಸರಿಗೆ ಬರೆಯಿಸುವಂತೆ ಬೇಡಿಕೆಯಿಡುತ್ತಾಳೆ. 'ಎಲ್ಲ ಅಂಗಡಿ ನಿನ್ನ ಹೆಸರಿಗೇ ಬರೆದಿದ್ದೇನೆ' ಎಂದು ಕಾಗದಪತ್ರಗಳನ್ನು ತೋರಿಸಿದ ತಕ್ಷಣ ಗಂಡನನ್ನು ಕ್ಷಮಿಸಿಬಿಡುತ್ತಾಳೆ. ಸರಿಯಾದ ಸಮಯದಲ್ಲಿ ಪತಿಯನ್ನು ಮಣಿಸಿ ತನ್ನ ಆರ್ಥಿಕತೆಯನ್ನು ಬಲಪಡಿಸಿಕೊಳ್ಳುವ ಪಂಕಜಳ ವ್ಯವಹಾರಜ್ಞಾನವೂ ಉತ್ತಮವಾಗಿದೆ. ಅದುವರೆಗೂ ಉಚಿತ ಊಟ ಮತ್ತು ಬಾಡಿಗೆಯಲ್ಲಿ ರಿಯಾಯಿತಿ ಒದಗಿಸಿದ್ದ ಕಥೆಗಾರನಿಗೆ 'ಕೋಣೆ ಖಾಲಿ ಮಾಡುವಾಗ ಬೆಡ್ಡಿಂಗ್ ಬಿಟ್ಟು ಹೋಗು, ಬಾಡಿಗೆ ಹಣವನ್ನು ತಂದುಕೊಟ್ಟು ಬೆಡ್ಡಿಂಗ್ ತೆಗೆದುಕೊಂಡು ಹೋಗು' ಎಂದು ತಾಕೀತು ಮಾಡುವುದನ್ನು ಗಮನಿಸಬಹುದು.

ಪೊನ್‌ಕುನ್ನಂ ವರ್ಕಿ ಬರೆದ 'ಅಂಗಡಿಯ ಕೀಲಿ' ಸಣ್ಣಕತೆಯ ಕೋಶಿಯ ಹೆಂಡತಿ ಮರಿಯ ಗಂಡನಿಗಿಂತ ಹೆಚ್ಚಿನ ವ್ಯವಹಾರಜ್ಞಾನವುಳ್ಳವಳು. ಪಾಲುದಾರಿಕೆಯ ಅಂಗಡಿಯ ವ್ಯವಹಾರದಲ್ಲಿ ವರ್ಗೀಸ್ ತನ್ನ ಪತಿಯನ್ನು ವಂಚಿಸುತ್ತಿರುವುದನ್ನು ಮೊದಲೇ ಊಹಿಸುತ್ತಾಳೆ. ವರ್ಗೀಸನ ಹೆಂಡತಿಯ ಚಿನ್ನ, ಮಕ್ಕಳ ಉಡುಗೆ ತೊಡುಗೆ ಮತ್ತು ಮನೆಯ ಭೌತಿಕ ಸ್ವರೂಪವನ್ನು ಸೂಕ್ಷ್ಮವಾಗಿ ಅವಲೋಕಿಸಿ ವರ್ಗೀಸನು ತನ್ನ ಪತಿಗೆ ತಿಳಿಯದಂತೆ ಅಂಗಡಿಯ ಲಾಭವನ್ನು ಸ್ವಂತಕ್ಕೆ ಬಳಸಿಕೊಳ್ಳುತ್ತಿರುವುದನ್ನು ಪತ್ತೆಹಚ್ಚುತ್ತಾಳೆ. ಪಾಲುದಾರಿಕೆ ವ್ಯಾಪಾರದಲ್ಲಿ ಜಾಗ್ರತೆಯಿಂದ ಇರುವಂತೆ ಪತಿಯನ್ನು ಎಚ್ಚರಿಸುತ್ತಾಳೆ. ಮನೆಯ ನಾಲ್ಕು ಗೋಡೆಗಳ ಒಳಗಿರುವ ಸ್ತ್ರೀಯರು ಅವಕಾಶ ಸಿಕ್ಕಿದರೆ ವ್ಯಾಪಾರ ವ್ಯವಹಾರಗಳನ್ನು ಸ್ವತಂತ್ರವಾಗಿ ನಡೆಸಬಲ್ಲ ಜಾಣ್ಮೆ ಹೊಂದಿದ್ದಾರೆ.

೪.೭. ರಾಜಕೀಯ: ಸ್ತ್ರೀಯರ ನಡೆ

ಭಾರತೀಯ ಸಂದರ್ಭದಲ್ಲಿ ಸಾಮಾನ್ಯವಾಗಿ ಹೆಂಗಸರಿಗೆ ರಾಜಕೀಯ ಪ್ರಜ್ಞೆಯಿಲ್ಲ ಎಂದು ತಿಳಿಯಲಾಗುತ್ತದೆ. ಮತ್ತು ಇದೇ ಕಾರಣಕ್ಕಾಗಿ ರಾಜಕೀಯದಿಂದಲೂ, ಅಧಿಕಾರದಿಂದಲೂ ಅವರನ್ನು ದೂರವಿಡಲಾಗುತ್ತದೆ. ಹೀಗೆ ದೂರವಿಟ್ಟ ಕಾರಣದಿಂದಾಗಿ ಬಹುಪಾಲು ಸ್ತ್ರೀಯರಿಗೆ ರಾಜಕೀಯ ವಿದ್ಯಮಾನಗಳು ಅರ್ಥವಾಗುವುದಿಲ್ಲ. ಹೀಗೆ ರಾಜಕಾರಣದಲ್ಲಿ ಅನಾಸಕ್ತರಾಗಿರುವ ಬಹುಪಾಲು ಸ್ತ್ರೀಯರ ನಡುವೆ, ಪುರುಷನಿಷ್ಠವಾದ ನಿರ್ಬಂಧಗಳನ್ನು ಮೀರಿಯೂ ರಾಜಕೀಯದಲ್ಲಿ ಆಸಕ್ತಿ, ರಾಜಕೀಯ ವಿದ್ಯಮಾನಗಳ ಅರಿವು ಮತ್ತು ಖಚಿತ ಧೋರಣೆಯನ್ನು ಹೊಂದಿರುವ, ರಾಜಕೀಯ ಚಳವಳಿಗಳಲ್ಲಿ ತೊಡಗಿಸಿಕೊಂಡಿರುವ, ಸಕ್ರಿಯ ರಾಜಕಾರಣಿಗಳಾಗಿರುವ ಸ್ತ್ರೀಯರನ್ನು ಮಲಯಾಳಂ ಕಥನಸಾಹಿತ್ಯದಲ್ಲಿ ಗುರುತಿಸಬಹುದು.

ಹಕ್ಕುಗಳ ಖಚಿತ ಅರಿವು ಮತ್ತು ಹೋರಾಟದ ಒಲವುಳ್ಳ ಚಿರುದೆ

'ಎರಡು ಬಳ್ಳ' ಕಾದಂಬರಿಯ ಚಿರುದೆ ತನ್ನ ಬದುಕಿನ ಬಗ್ಗೆ ಸ್ವಂತ ಅಭಿಪ್ರಾಯವನ್ನು ಹೊಂದಿರುವ, ಸ್ವತಂತ್ರವಾಗಿ ಯೋಚಿಸುವ ಗಟ್ಟಿ ನಿಲುವಿನ ಹೆಣ್ಣು. ಗಂಡಿನ ಸಮಸಮವಾಗಿ ದುಡಿಯುವ ತನಗೆ ಆಯ್ಕೆಯ ಸ್ವಾತಂತ್ರ್ಯವಿದೆ, ಸ್ವಂತ ವ್ಯಕ್ತಿತ್ವವಿದೆ ಎಂದು ಪ್ರತಿಪಾದಿಸುತ್ತಾಳೆ. ದುಡಿಯುವ ವರ್ಗದವರು ತಮ್ಮ ಹಕ್ಕುಗಳಿಗಾಗಿ ಸಂಘಟಿತರಾಗಿ ಹೋರಾಡಬೇಕೆಂಬ ಅರಿವು ಅವಳಿಗಿದೆ. ದುಡಿದು ತಂದು ಹಾಕಬೇಕಾದ ಗಂಡ ಯೂನಿಯನ್ ಸೇರಿ ಬೇಸಾಯ ಕೆಲಸಗಾರರ ಪರವಾಗಿ ಹೋರಾಟಕ್ಕಿಳಿದಾಗ ಬೆಂಬಲಿಸುತ್ತಾಳೆ. ಭೂಗತನಾಗಿರುವ ಪತಿ ಇನ್ನು ಪ್ರತಿದಿನ ಮನೆಗೆ ಬರಲಾರ, ಹಿಂದಿನಂತೆ ದುಡಿದು ಗಳಿಸಲಾರ, ಖರ್ಚಿಗೆ ಕೊಡಲಾರ ಎಂದು ತಿಳಿದಾಗಲೂ ಹಿಂಜರಿಯದೆ ಗಂಡನ ಕಷ್ಟಸುಖಗಳಲ್ಲಿ ಪಾಲುಗೊಳ್ಳಲು ಬದ್ಧಳಾಗಿದ್ದಾಳೆ. ಕಣ್ಣಿಗೆ ಮಬ್ಬು ಹಿಡಿದಿರುವ, ಏಳಲಾರದ ಕೋರನ ವೃದ್ಧ ತಂದೆಯೊಂದಿಗೆ ಗುಡಿಸಲಲ್ಲಿದ್ದು ಶುಶ್ರೂಷೆ ಮಾಡುತ್ತಾಳೆ. ತಾನು ಉಪವಾಸವಿದ್ದು ಮಾವನಿಗೆ ಆಹಾರ ಒದಗಿಸುತ್ತಾಳೆ. ಪ್ರತಿ ರಾತ್ರಿಯೂ ಮಡಕೆಯಲ್ಲಿ ಅಂಬಲಿ, ಗೆಣಸು ಉಳಿಸಿ ಗಂಡನಿಗಾಗಿ ಕಾಯುತ್ತಾಳೆ. ಕೋರನ ತಂದೆ ಕೊನೆಯುಸಿರೆಳೆದ ರಾತ್ರಿಯಲ್ಲೂ ಅವಳು ಗುಡಿಸಲಲ್ಲಿ ಒಬ್ಬಳೇ ಇದ್ದಳು. ಅರ್ಧರಾತ್ರಿ ಹೊತ್ತಿನಲ್ಲಿ ಹೆಣದ ಸಮೀಪದಲ್ಲಿ 'ನಾಲ್ಕೂ ಕಡೆ ಪಿಶಾಚಿಗಳು ಊಳಿಡುತ್ತಿದ್ದಂತೆ' ತೋರಿದರೂ ಹೆದರದೆ ಕುಳಿತುಕೊಳ್ಳುತ್ತಾಳೆ. ಇಂಥ ವಿಚಾರಗಳಿಗೆ ತಾನು ಹೆದರಿದರೆ ಗಂಡನ ಹೋರಾಟಕ್ಕೆ ಅಡ್ಡಿಯಾಗುತ್ತದೆ ಎಂಬ ತಿಳುವಳಿಕೆ ಅವಳಿಗಿದೆ.

ಹೋರಾಟಕ್ಕೆ ಇಳಿದು ಪೋಲೀಸರಿಂದ ತಪ್ಪಿಸಿಕೊಂಡು ಅಲೆಯುತ್ತಿರುವ ಕೋರ 'ನೀನು ನನಗೆ ಒಂದು ತೊಡಕು. ನೆಟ್ಟಗೆ ಸಂಸಾರ ನಡೆಸುವುದು ನನ್ನ ಹಣೆಯಲ್ಲಿ ಬರೆದಿಲ್ಲ' ಎಂದು ನೊಂದುಕೊಂಡಾಗ

ಅವಳೇ ಸಮಾಧಾನ ಹೇಳುತ್ತಾಳೆ. ಚಿರುದೆಯ ಉತ್ತರ ಸಾಮಾನ್ಯ ಮಹಿಳೆಯರಿಗಿಂತ ಭಿನ್ನವಾಗಿರುವುದನ್ನು ಗಮನಿಸಬಹುದು "ನಾನು ಯಾವುದಕ್ಕೂ ತೊಡಕಾಗಿರುವುದಿಲ್ಲ. ಎಲ್ಲಿ ಹೋದರೂ ನಿಮಗೆ ನಾನು ಹೊರೆ ಎನಿಸುವುದಿಲ್ಲ. ನಾನು ಯಾವುದಕ್ಕೂ ಅಡ್ಡ ಬರುವುದಿಲ್ಲ. ಒಬ್ಬಳು ಮಾಡುತ್ತಿರುವ ಪ್ರಾರ್ಥನೆ ನಿನ್ನ ಬೆನ್ನಿಗೆ ರಕ್ಷೆಯಾಗಿರುತ್ತೆ. ನಾನು ಉಪವಾಸ ಬೀಳಬಲ್ಲೆ. ಈ ಕೂಸನ್ನು ನಾನು ಸಾಕುತ್ತೇನೆ. ಅದರ ಯೋಚನೆ ಬಿಡು" (ಪು. ೧೦೦) ಹೀಗೆ ಅವಳು ಗಟ್ಟಿಯಾಗಿ ಆಶ್ವಾಸನೆ ನೀಡಿದ್ದರಿಂದಲೆ ಕೋರ ತನ್ನ ಹೋರಾಟವನ್ನು ಯಶಸ್ವಿಯಾಗಿ ಮುಂದುವರಿಸುವುದು ಸಾಧ್ಯವಾಗುತ್ತದೆ.

ಚಿರುದೆಯ ದಿಟ್ಟತನ ಮತ್ತು ದೃಢತೆಯಲ್ಲಿ ವಿಶ್ವಾಸವಿರುವ ಕೋರ ಎಲ್ಲ ಗಂಡಂದಿರಂತೆ ಹೆಂಡತಿಯನ್ನು ಅಜ್ಞಾನದಲ್ಲಿಡದೆ ಅವಳಿಗೂ ಹೋರಾಟದ ಪ್ರೇರಣೆ ಕೊಟ್ಟಿದ್ದಾನೆ. ಅವನಿಲ್ಲದ ಹೊತ್ತು ಧಣಿಗಳು ಬಂದು ಗುಡಿಸಲಿನಿಂದ ಎಳೆದು ಹೊರ ಹಾಕಿಸಿದರೆ ಭಯಪಡದೆ 'ಮತ್ತೆ ಗುಡಿಸಲಿನೊಳಗೆ ನುಗ್ಗಿ ಬಿದ್ದುಕೋಬೇಕು' ಎಂದು ಹೇಳಿಕೊಟ್ಟಿದ್ದಾನೆ. ಅವರೇನಾದರೂ ಸಾಯುವಂತೆ ಹೊಡೆದರೆ ಎಂದವಳು ಹೆದರಿದಾಗ 'ಅವರು ಹೊಡೆದು ಸಾಯಿಸಿದರೆ ಸಾಯಿಸಲಿ. ಒಳ್ಳೇದು! ಪರಯನಿಗೂ ಹೊಲೆಯನಿಗೂ ಬಹಳ ಒಳ್ಳೇದು' ಎನ್ನುತ್ತಾನೆ. ಗಂಡನ ಮಾತುಗಳಲ್ಲಿದ್ದ ನಿಶ್ಚಯ ಮತ್ತು ಛಲವಂತಿಕೆಗಳು ಚಿರುದೆಯಲ್ಲಿ ಹೋರಾಟದ ಕೆಚ್ಚು ತುಂಬಿವೆ. ಹೋರಾಟದ ಅಂಗವಾಗಿ ಗಂಡ ಜೈಲಿಗೆ ಹೋಗಬಹುದು ಎಂದು ತಿಳಿದಾಗ ಮಹಿಳಾ ಕಾರ್ಮಿಕರ ಹೋರಾಟದಲ್ಲಿ ತಾನೂ ಪಾಲುಗೊಳ್ಳುವ ಉತ್ಸಾಹ ತೋರಿಸುತ್ತಾಳೆ. "ನೀವು ಗಂಡಸರಿಗೆ ಮಾತ್ರ ಸಾಕೇನು ಯೂನಿಯನ್? ಹೆಣ್ಣುಮಕ್ಕಳು ನಾವೂ ಕೂಡಿಸುತ್ತೇವೆ, ಸಂಘ. ನಮಗೂ ಇದೆ, ಸಾಧಿಸುವ ಕಾರ್ಯಗಳು. ನಮ್ಮ ಜನದ ಪ್ರಾಯದ ಹುಡುಗಿಯರು ಮಾನವಾಗಿ ಬದುಕಬೇಕು. ನಾನೂ ಜೈಲಿಗೆ ಹೋಗುತ್ತೇನೆ" (ಪು. ೧೦೦) ಎನ್ನುತ್ತಾಳೆ. ತಾನು ಗರ್ಭಿಣಿಯೆಂದು ಹೆದರದೆ, ಪರೆಯತಿ ಸ್ತ್ರೀಯರು ನಿರ್ಭಯರಾಗಿ ಬದುಕಬಲ್ಲ ಹಕ್ಕಿಗಾಗಿ ಹೋರಾಡುವ ಸಂಕಲ್ಪ ಮತ್ತು ಇಚ್ಛಾಶಕ್ತಿಗಳನ್ನು ಚಿರುದೆ ಹೊಂದಿದ್ದಾಳೆ.

ಬೇರೊಬ್ಬನ ಕೈ ಹಿಡಿದು ಹೋಗುವಂತೆ ಗಂಡ ಹೇಳಿದರೂ ಚಿರುದೆ ಸಿದ್ಧಳಿಲ್ಲ. ಅವನಿಗೆ ಹದಿನೈದು ವರ್ಷ ಜೈಲುವಾಸದ ಶಿಕ್ಷೆಯಾದಾಗಲೂ ಧೃತಿಗೆಡದೆ ಅವನಿಗಾಗಿ ಕಾಯುವ ನಿರ್ಧಾರ ಮಾಡುತ್ತಾಳೆ. ಜೈಲು ಸೇರಿದ ಕೋರ ಬಸುರಿ ಪತ್ನಿಯ ಪೋಷಣೆಯ ಬಗ್ಗೆ ಚಿಂತಿತನಾದಾಗ 'ನನ್ನನ್ನು ಯಾರೂ ನೋಡಿಕೊಳ್ಳಬೇಕಾಗಿಲ್ಲ. ನಾನು ಹೆಣ್ಣುಮಕ್ಕಳ ಯೂನಿಯನ್ನಿಗೆ ಸೇರುತ್ತೇನೆ' (ಪು. ೧೧೫) ಎನ್ನುತ್ತಾಳೆ.

ಹದಿನೈದು ವರ್ಷ ಸೆರೆವಾಸದ ಶಿಕ್ಷೆಯಾಗಿ ಜೈಲಿನಲ್ಲಿದ್ದ ಕೋರ ಸಂದರ್ಶನಕ್ಕೆಂದು ಬಂದ ಚಿರುದೆಯ ಕೈಯನ್ನು ಚಾತ್ತನ ಕೈಯಲ್ಲಿಟ್ಟು ನಿರಾಳವಾದ ಬಗ್ಗೆ ಚಿರುದೆಗೆ ಅಸಮಾಧಾನವಿದೆ. 'ಹೆಂಡತಿಯನ್ನು ಮತ್ತೊಬ್ಬನಿಗೆ ಕೊಡುವ ಹಕ್ಕಿದೆಯೆ ಗಂಡನಿಗೆ? ಅವಳಿಗೂ ಇಲ್ಲವೆ ಹಲಕೆಲವು ಹಕ್ಕುಗಳು, ಇಷ್ಟ ಅನಿಷ್ಟಗಳು?' (ಪು. ೧೧೭) ಎಂಬ ವಾದ ಅವಳದು. ಆದ್ದರಿಂದ 'ಒಬ್ಬನೇ ಒಬ್ಬ ಗಂಡ, ಜೀವಿತದ

ಅಂತ್ಯದವರೆಗೂ' ಎಂದು ನಿರ್ಧರಿಸಿದ್ದಾಳೆ. ಹಾಗಾಗಿ 'ಇನ್ನು ಏನೇ ಬರಲಿ ನಾನು ಮತ್ತೊಬ್ಬನ ಹೆಣ್ಣಾಗಲಾರೆ' ಎಂದವಳು ದೃಢವಾಗಿ ಚಾತ್ತನಲ್ಲಿ ಹೇಳುತ್ತಾಳೆ. 'ನನ್ನನ್ನು ತಂಗಿ ಎಂದು ತಿಳಿದುಕೊ ಸಾಕು' ಎಂದು ಪ್ರತಿಬಂಧಿಸುತ್ತಾಳೆ.

ಚಿರುದೆ ಅನಕ್ಷರಸ್ಥೆಯಾಗಿದ್ದರೂ ತನ್ನ ಹಕ್ಕುಗಳು ಮತ್ತು ಸ್ವಾತಂತ್ರ್ಯದ ತಿಳುವಳಿಕೆ ಹೊಂದಿದ್ದವಳು; ಹೆಣ್ಣು ಕೇಳಲು ಬಂದ ಕೋರನನ್ನು ಇಷ್ಟಪಟ್ಟು ಅಪ್ಪನ ವಿರೋಧವನ್ನು ಕಟ್ಟಿಕೊಂಡು ಕೋರನ ಮಡದಿಯಾಗಿ ಬಂದವಳು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮದುವೆಯ ಸಂದರ್ಭದಲ್ಲಿ ತನ್ನ ತಂದೆ ನಡೆದುಕೊಂಡ ರೀತಿ ಚಿರುದೆಗೆ ಸರಿಕಂಡಿರಲಿಲ್ಲ. 'ಹೆತ್ತವರು ಹೆಣ್ಣುಮಕ್ಕಳನ್ನು ಮದುವೆ ಮಾಡಿ ಕಳುಹಿಸುವುದೆ ಹೀಗೆಯೇನು? ಇದು ಪ್ರೀತಿ ಇರುವ ತಂದೆಯ ಲಕ್ಷಣವೆ?' ಎಂದು ಯೋಚಿಸಿದ್ದಳು. ಮದುವೆ ಬಾಬ್ತು ತೆರಬೇಕಾದ 'ತೆರ'ದ ಹಣವನ್ನು ಪೂರ್ತಿಯಾಗಿ ತೆರದೆ ಹೆಣ್ಣನ್ನು ಕರೆದುಕೊಂಡು ಹೋಗಬಹುದೊ ಬೇಡವೊ ಎಂಬ ಬಗ್ಗೆ ಮದುವೆಮಂಟಪದಲ್ಲಿ ನಡೆಯುತ್ತಿರುವ ಜಗಳ, ವಾದ-ಪ್ರತಿವಾದಗಳು ಅವಳಿಗೆ ಒಪ್ಪಿಗೆಯಿಲ್ಲ. ತಂದೆಯ ಇಲ್ಲವೇ ಗಂಡನ ಪಕ್ಷ ಹಿಡಿದು ಹೋರಾಡುತ್ತಿರುವವರು ನಿಜವಾಗಿಯೂ ತಂದೆಯ ಮತ್ತು ಗಂಡನ ವೈರಿಗಳು ಎಂಬ ತಿಳುವಳಿಕೆ ಅವಳಿಗಿದೆ. 'ಅವರಿಬ್ಬರೂ ಏಕೆ ಇದರಲ್ಲಿ ಸೇರುತ್ತಿದ್ದಾರೆ? ಇರುವವರೆಲ್ಲ ಶತ್ರುಗಳೆಂದು ತಿಳಿಯಬಾರದೆ?' ಆದ್ದರಿಂದಲೆ ತನ್ನ ಮನಸ್ಸಿಗೆ ಒಪ್ಪಿಗೆಯಾದ ಕೋರನೊಂದಿಗೆ ಅವಳು ತಂದೆಯ ಮನೆಯಿಂದ ಹೊರಟುಬಂದಿದ್ದಾಳೆ.

ರಾಜನೀತಿಜ್ಞೆ ಕುಂತಿ

ಎಂ.ಟಿ. ವಾಸುದೇವನ್ ನಾಯರ್ ಅವರು ಬರೆದಿರುವ 'ಭೀಮಾಯಣ' ಕಾದಂಬರಿಯ ಕುಂತಿಯನ್ನು ಒಳ್ಳೆಯ ರಾಜನೀತಿಜ್ಞೆಯಾಗಿ ಗುರುತಿಸಬಹುದು. ಅಜ್ಞಾತವಾಸದ ಅವಧಿ ಕಳೆದು ಯುಧಿಷ್ಠಿರನ ಬಯಕೆಯಂತೆ ಯುದ್ಧ ಸಂಧಾನವಾಗುವ ಒಂದು ಸಂದರ್ಭ ಬಂದಿತ್ತು. ಅದಕ್ಕೆ ಆಸ್ಪದವೆ ಕೊಡದಂತೆ ಕೃಷ್ಣನ ಮೂಲಕ ಯುದ್ಧಸಂದೇಶ ಕಳಿಸಿ ನಿದ್ರಿಸುತ್ತಿದ್ದ ಹಗೆತನವನ್ನು ಎಬ್ಬಿಸಿದವಳು ಕುಂತಿ. ಸಂಧಾನಕಾರನಾಗಿ ಬಂದಿದ್ದ ಕೃಷ್ಣನ ಮೂಲಕ 'ಯುದ್ಧವನ್ನು ಗೆದ್ದು ಅಣ್ಣನ್ನು ಅರಸನನ್ನಾಗಿ ಮಾಡಬೇಕು' ಎಂದು ಭೀಮಾರ್ಜುನರಿಗೆ ಹೇಳಿಕಳುಹಿಸುತ್ತಾಳೆ. ಶಾಂತಿಪ್ರಿಯನಾದ ಯುಧಿಷ್ಠಿರನಿಗೆ 'ರಾಜ್ಯವನ್ನೂ ಪ್ರಜೆಗಳನ್ನೂ ಕಾಪಾಡಲರಿಯದ ಅರಸನಿಗೆ ವಿಧಿಸಿದ್ದು ವೀರಸ್ವರ್ಗವಲ್ಲ, ಮಹಾನರಕ' ಎಂಬ ಸಂದೇಶವನ್ನು ಕಳುಹಿಸಿ ಕೆರಳಿಸುತ್ತಾಳೆ. ಯುದ್ಧ ಆರಂಭವಾಗುವುದಕ್ಕೆ ಮುನ್ನ ಕರ್ಣನನ್ನು ರಹಸ್ಯವಾಗಿ ಭೇಟಿ ಮಾಡಿ ಅವನು ತನ್ನ ಮಗನೆಂಬ ರಹಸ್ಯ ತಿಳಿಸಿ, ತನಗೆ ಅನುಕೂಲವಾದ ವಾಗ್ದಾನ ಪಡೆದು, ಭಾವನಾತ್ಮಕವಾಗಿ ಅವನನ್ನು ದುರ್ಬಲಗೊಳಿಸಿ ಪಾಂಡವರ ಗೆಲುವನ್ನು ಸುಗಮಗೊಳಿಸುತ್ತಾಳೆ.

ಯುದ್ಧದ ಬಳಿಕ ಯುಧಿಷ್ಠಿರ ರಾಜಕಾರಣದಲ್ಲಿ ವಿರಕ್ತನಾಗಿ, ಭೀಮನಿಗೆ ಪಟ್ಟ ಕಟ್ಟಿ ತಾನು ವಾನಪ್ರಸ್ಥಕ್ಕೆ ಹೊರಡುವುದಾಗಿ ಅವನು ತೀರ್ಮಾನ ಮಾಡಿದಾಗಲೂ ಅದನ್ನು ತಡೆದವರು ಕುಂತಿ ಮತ್ತು ದ್ರೌಪದಿ. ಯುಧಿಷ್ಠಿರ ರಾಜನಾದರೆ ದ್ರೌಪದಿ ಮಹಾರಾಣಿಯಾಗುತ್ತಾಳೆ. ಹಿರಿಯಣ್ಣನ ಆಜ್ಞಾಧಾರಕರಾಗಿ ಉಳಿದ ಸೋದರರು ಸಾಮ್ರಾಜ್ಯವನ್ನು ರಕ್ಷಿಸುತ್ತಾರೆ. ಹಾಗಲ್ಲದೆ ಮುಂಗೋಪಿಯೂ ಬಲಶಾಲಿಯೂ ಭಾವನಾಜೀವಿಯೂ ಆದ ಭೀಮ ರಾಜನಾದರೆ ಪಾಂಡವರಲ್ಲಿ ವಿಘಟನೆಯಾಗುತ್ತದೆ. ಈ ವಿಷಯವನ್ನು ಮನಗಂಡ ಕುಂತಿ ವಿದುರನೊಂದಿಗೆ ಭೀಮನನ್ನು ಭೇಟಿಯಾಗಿ ಅವನು ಪಟ್ಟವನ್ನು ನಿರಾಕರಿಸುವಂತೆ ಒಪ್ಪಿಸುತ್ತಾಳೆ: "ಅಣ್ಣನೇ ಅರಸನಾಗಬೇಕು. ಧರ್ಮಶಾಸ್ತ್ರ, ರಾಜನೀತಿ ಒಂದೂ ತಿಳಿಯದ ನೀನು ಅದಕ್ಕೆ ಅರ್ಹನಲ್ಲ." (ಪು. ೨೫೭)

ತನ್ನ ಮಕ್ಕಳು ರಾಜ್ಯವಾಳಬೇಕು ಎಂಬುದು ಕುಂತಿಯ ಆಕಾಂಕ್ಷೆಯಾಗಿತ್ತು. ಅದಕ್ಕಾಗಿ ಸೂಕ್ತವಾದ ಸಿದ್ಧತೆಯನ್ನು ಅವಳು ಯುಧಿಷ್ಠಿರನನ್ನು ಹೆರುವುದಕ್ಕೆ ಮುನ್ನವೇ ಆರಂಭಿಸಿದ್ದಳು. ಧರ್ಮ ಮತ್ತು ರಾಜನೀತಿಗಳನ್ನು ತಿಳಿದವನಾದ, ರಾಜನಾಗಲು ಯೋಗ್ಯನಾದ ಯುಧಿಷ್ಠಿರನಂಥ ಮಗನನ್ನು ಮೊದಲು, ಆ ಬಳಿಕ ರಾಜನಿಗೆ ಪೂರಕರಾಗಬಹುದಾದ, ಅತಿ ಪರಾಕ್ರಮಿಗಳಾದ ಭೀಮಾರ್ಜುನರನ್ನು ಹೆತ್ತವಳು. ಯಾರ ಮಕ್ಕಳನ್ನು ಹೆರಬೇಕೆಂಬುದನ್ನು ಸಾಕಷ್ಟು ಯೋಚಿಸಿಯೇ ನಿರ್ಧರಿಸಿದ್ದವಳು. ಹಾಗಾಗಿಯೆ ಕಾನೀನನಾದ ಮಗ ಕರ್ಣನನ್ನು ಧನುರ್ವಿದ್ಯಾ ಪ್ರದರ್ಶನದ ಸಂದರ್ಭದಲ್ಲಿಯೆ ಗುರುತಿಸಿದಳಾದರೂ ಆ ರಹಸ್ಯವನ್ನು ಬಹುಕಾಲ ಕಾಪಾಡುತ್ತಾಳೆ. ಕುರುಕ್ಷೇತ್ರ ಯುದ್ಧ ಮುಗಿದು ಮಕ್ಕಳು ರಾಜ್ಯವಾಳುವ ಅರ್ಹತೆ ಪಡೆದ ಬಳಿಕವಷ್ಟೇ ಈ ರಹಸ್ಯವನ್ನು ಬಹಿರಂಗಪಡಿಸುತ್ತಾಳೆ.

ತಮ್ಮಿಂದ ಹತನಾದ ಕರ್ಣ ಸ್ವಂತ ಅಣ್ಣನೆಂದು ತಿಳಿದ ಬಳಿಕ ವಿಚಲಿತನಾಗುವ ಯುಧಿಷ್ಠಿರ 'ಎಲ್ಲ ನಾಶಗಳಿಗೂ ಕಾರಣ ಆ ಹೆಂಗಸು' ಎಂದು ತಾಯಿಯ ಬಗ್ಗೆ ಅಸಹನೆ ವ್ಯಕ್ತಪಡಿಸುವುದನ್ನು ಇಲ್ಲಿ ಗಮನಿಸಬಹುದು. ಕುಂತಿ ಬಯಸಿದ್ದರೆ ಯುದ್ಧವನ್ನು ತಡೆಯಬಹುದಾಗಿತ್ತು. ಕರ್ಣನನ್ನೇ ರಾಜನಾಗಿಸಬಹುದಾಗಿತ್ತು. ಆದರೆ ಅಧಿಕೃತ ಪತಿಯಾದ ಪಾಂಡುವಿನ ಕ್ಷೇತ್ರದಲ್ಲಲ್ಲದೆ ಮೊದಲೇ ಹುಟ್ಟಿದ ಕರ್ಣನಿಗೆ ಹಸ್ತಿನಾವತಿಯ ಸಿಂಹಾಸನಕ್ಕೆ ಅರ್ಹತೆಯಿದೆಯೆ ಎಂಬಂಥ ತಾರ್ಕಿಕ ಪ್ರಶ್ನೆ ಹುಟ್ಟುವ ಸಂಭವವಿದೆ. ಅಲ್ಲದೆ ಆರಂಭದಿಂದಲೂ ದುರ್ಯೋಧನನೊಂದಿಗೆ ಗುರುತಿಸಿಕೊಂಡು ಪಾಂಡವರಿಗೆ ಅನ್ಯಾಯವನ್ನೇ ಮಾಡಿದ ಕರ್ಣನನ್ನು ಪಾಂಡವರು ಹಿರಿಯಣ್ಣನೆಂದು ಒಪ್ಪಿ ವಿಧೇಯರಾಗುವುದು ಸಂದೇಹಾಸ್ಪದ. ಈ ಎಲ್ಲ ವಿಚಾರಗಳನ್ನು ಕುಂತಿ ಮೊದಲೇ ಯೋಚಿಸಿದ್ದಾಳೆ. ಹಾಗಾಗಿಯೆ ಮೃತರಿಗೆ ತರ್ಪಣ ಬಿಡುವ ಭಾವುಕ ಸಂದರ್ಭವನ್ನು ನೋಡಿಕೊಂಡು, ತಾನು ಕನ್ಯೆಯಾಗಿದ್ದಾಗ ಹೆತ್ತ ಚೊಚ್ಚಲಮಗನ ರಹಸ್ಯವನ್ನು ಮಕ್ಕಳ ಮುಂದೆ ಹೊರಗೆಡವುತ್ತಾಳೆ: "ರಾಧೆ

ಮತ್ತು ಅಧಿರಥ ಪೋಷಿಸಿದ ಕರ್ಣನೇ ನನ್ನ ಮೊದಲ ಮಗ. ಒಂದು ಬೊಗಸೆ ನೀರು ಆ ಕರ್ಣನಿಗೂ" (ಪು. ೨೫೨)

ಯುದ್ಧ ಗೆದ್ದ ಬಳಿಕ ರಾಜಮಾತೆಯಾಗಿ ಅಧಿಕಾರವನ್ನು ಅನುಭವಿಸುವ ಅವಕಾಶವನ್ನು ಬಿಟ್ಟುಕೊಟ್ಟು ಕುಂತಿ ವಾನಪ್ರಸ್ಥಕ್ಕೆ ತೆರಳುವುದಕ್ಕೂ ಕಾರಣವಿದೆ. ಕರ್ಣನು ಹಿರಿಯಣ್ಣನೆಂದು ತಿಳಿದ ಬಳಿಕ ಯುಧಿಷ್ಠಿರನಿಂದ ತೊಡಗಿ ಎಲ್ಲ ಪಾಂಡವರೂ ಅಮ್ಮನ ಮೇಲೆ ಅಸಮಾಧಾನ ಹೊಂದಿರುವುದು ಕುಂತಿಯ ಅನುಭವಕ್ಕೆ ಬಂದಿದೆ. ತಮ್ಮ ಹುಟ್ಟಿನ ಹಿಂದೆಯೂ ಗುಟ್ಟಿರಬಹುದೆ ಎಂಬ ಗುಮಾನಿಯೂ ಪಾಂಡವರಿಗಿದೆ. ಹೀಗಿರುವಾಗ ಅರಮನೆಯಲ್ಲಿದ್ದು ಮಕ್ಕಳ ಅಸಹನೆಯನ್ನು ಎದುರಿಸುವುದಕ್ಕಿಂತ ಸದ್ಯದ ಪರಿಸ್ಥಿತಿಯಲ್ಲಿ ಕಾಡೊಳಗೆ ವಿರಕ್ತಜೀವನವನ್ನು ನಡೆಸುವುದು ಗೌರವಯುತವಾದದ್ದು ಎಂದಾಕೆ ನಿರ್ಧರಿಸುತ್ತಾಳೆ. ಆಗ ಮಕ್ಕಳ ಅಸಮಾಧಾನದ ತೀವ್ರತೆಯೂ ಕಡಿಮೆಯಾಗುತ್ತದೆ. ಪ್ರಜೆಗಳ ದೃಷ್ಟಿಯಲ್ಲಿ ಗೌರವವೂ ಉಳಿಯುತ್ತದೆ.

'ಕ್ಷತ್ರಿಯರಿಗೆ ಪತ್ನಿಯರೆಂದರೆ ಬೀಜವನ್ನು ಸ್ವೀಕರಿಸಲಿರುವ ಬರೀ ಗರ್ಭಪಾತ್ರೆಗಳು' ಎಂಬ ಅರಿವು ಕುಂತಿ ಮತ್ತು ದ್ರೌಪದಿ ಇಬ್ಬರಿಗೂ ಇದೆ. ಅಧಿಕೃತನಾದ ಒಬ್ಬ ಪತಿಯೊಂದಿಗೆ ಮಕ್ಕಳಿಗಾಗಿ ಇತರ ನಾಲ್ವರು ಪುರುಷರ ಸಂಪರ್ಕ ಹೊಂದಿದ್ದ ಕುಂತಿ ಮತ್ತು ಏಕಕಾಲದಲ್ಲಿ ಸರದಿಯಂತೆ ಐವರಿಗೆ ಪತ್ನಿಯಾದ ದ್ರೌಪದಿ ಇವರಿಬ್ಬರೂ ಕ್ಷತ್ರಿಯರಲ್ಲಿ ಪ್ರಚಲಿತವಿದ್ದ ಬಹುಪತ್ನಿತ್ವ ಪದ್ಧತಿಗೆ ಪ್ರತಿರೋಧವನ್ನು ತೋರುವುದನ್ನು 'ಭೀಮಾಯಣ' ಕಾದಂಬರಿಯಲ್ಲಿ ಗುರುತಿಸಬಹುದು.

ಯುದ್ಧಪ್ರಿಯೆ ದ್ರೌಪದಿ

'ಭೀಮಾಯಣ' ಕಾದಂಬರಿಯ ಹಿನ್ನುಡಿಯಲ್ಲಿ ಲೇಖಕರು ಅಭಿಪ್ರಾಯಪಟ್ಟಿರುವಂತೆ ಭೀಮನ ಜೀವನದ ಗತಿ–ವಿಗತಿಗಳನ್ನು ನಿಯಂತ್ರಿಸುವ ಪಾತ್ರಗಳೆಂದರೆ ಕುಂತಿ ಮತ್ತು ದ್ರೌಪದಿಯರ ಪಾತ್ರಗಳು. ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಎಲ್ಲವನ್ನೂ ನಿಯತ್ರಿಸುವ ಕುಂತಿಯೂ, ನ್ಯಾಯವಾದದಲ್ಲಿ ಚತುರೆಯಾಗಿರುವ, ತನ್ನ ವಾದಕ್ಕೆ ಪೂರಕವಾಗಿ ಕಣ್ಣೀರನ್ನೂ ಸಂದರ್ಭವರಿತು ಬಳಸಿಕೊಳ್ಳುವ ದ್ರೌಪದಿಯೂ ತಮ್ಮ ಕಾರ್ಯ ಸಾಧಿಸಿಕೊಳ್ಳುವ ಚತುರ ರಾಜಕಾರಣಿಗಳು. ಪಾಂಡವರನ್ನು ಕೌರವರ ವಿರುದ್ಧ ಯುದ್ಧಕ್ಕೆ ಪ್ರೇರೇಪಿಸಿದವರು. ಯುದ್ಧಪ್ರಿಯನಾದ ಭೀಮನನ್ನು ಸದಾ ಮಸೆದ ಕತ್ತಿಯಂತೆ ಇರಿಸುವವಳು ದ್ರೌಪದಿ. ಮೊದಲ ಭೇಟಿಯಲ್ಲಿಯೆ 'ಭೀಮಸೇನನ ಕರಬಲದಿಂದ ಮಾತ್ರ ದ್ರುಪದನ ಸಭೆಯಲ್ಲಿ ಅರ್ಜುನ ಬದುಕಿ ಉಳಿದದ್ದು' ಎಂಬಂಥಾ ಮಾತಿನಿಂದ ಭೀಮನ ಶೌರ್ಯ ಸಾಮರ್ಥ್ಯಗಳನ್ನು ಹೊಗಳಿ ಅವನ ಪರಾಕ್ರಮದ ಬಗ್ಗೆ ಆತ್ಮವಿಶ್ವಾಸ ಮೂಡಿಸುತ್ತಾಳೆ.

ತನಗೇನು ಬೇಕೆಂಬುದು ಮತ್ತು ಅದನ್ನು ಸಾಧಿಸಿಕೊಳ್ಳುವುದು ಹೇಗೆಂಬುದು ತಿಳಿದಿರುವ ದ್ರೌಪದಿಗೆ ಗೊಂದಲಗಳಿಲ್ಲ. ಬ್ರಾಹ್ಮಣರ ವೇಷದಲ್ಲಿ ಸ್ವಯಂವರಕ್ಕೆ ಬಂದವರು ಪಾಂಡವರು ಎಂಬುದನ್ನು ಮೊದಲೇ ಊಹಿಸಿ ನಿರಾಳವಾಗಿರುತ್ತಾಳೆ. ಕರ್ಣ ಬಿಲ್ಲನ್ನು ಹೆದೆಯೇರಿಸಿ ಇನ್ನೇನು ಪಣ ಗೆಲ್ಲುತ್ತಾನೆ ಎಂಬ ನಿರೀಕ್ಷೆಯ ಹೊತ್ತಿಗೆ 'ನೀಚ ಕುಲದವನನ್ನು ಸ್ವೀಕರಿಸುವುದಿಲ್ಲ' ಎಂದು ಸ್ಪಷ್ಟವಾಗಿ ನಿರಾಕರಿಸಿ ತನ್ನಿಚ್ಛೆಯಂತೆ ಅರ್ಜುನನ್ನೇ ವರಿಸುವ ದಾರಿಯನ್ನು ಸುಗಮಗೊಳಿಸುತ್ತಾಳೆ.

ಸಾಮಾನ್ಯವಾಗಿ ಸ್ತ್ರೀಯರನ್ನು ಶಾಂತಿಪ್ರಿಯರು, ಅಳುಕುವವರು, ಅರಕ್ಷಿತೆಯರು ಎಂದೆಲ್ಲ ಭಾವಿಸಲಾಗುತ್ತದೆ. 'ಭೀಮಾಯಣ'ದ ದ್ರೌಪದಿ ಈ ಮಾತಿಗೆ ಅಪವಾದವಾಗಿ ಕಾಣುತ್ತಾಳೆ. ಸ್ವಯಂವರ ಮಂಟಪದಲ್ಲಿ ಜಗಳವು ಹೊತ್ತಿಕೊಂಡು ಹರಡುವುದನ್ನು ಆಸ್ವಾದಿಸುತ್ತಾಳೆ. ಜಗಳವು ನಿಂತುಹೋದಾಗ 'ಅಲ್ಲಿ ನಿಜವಾದೊಂದು ಯುದ್ಧ ಶುರುವಾಗಿದ್ದರೆ ಗಂಗಾನದಿಯವರೆಗೂ ಹರಿಯುವ ನೆತ್ತರಿನಿಂದಾಗಿ ಅಲ್ಲಿ ಉಂಟಾಗಬಹುದಾಗಿದ್ದ ನೋಡಬೇಕಾದ ದೃಶ್ಯವೇ ತಪ್ಪಿಹೋಯಿತೆಂದು' ಬೇಸರಿಸುತ್ತಾಳೆ. ಭೀಮ ಕಿಮ್ಮೀರನನ್ನು ಕೊಲ್ಲದೆ ಮಿತ್ರತ್ವ ಬೆಳೆಸಿ ಬೀಳ್ಕೊಂಡು ಮರಳಿದ್ದು ತಿಳಿದಾಗಲೂ ಸಿಟ್ಟಾಗುತ್ತಾಳೆ. ಯುದ್ಧವಿವರಣೆಯ ಆತುರದಲ್ಲಿದ್ದ ಅವಳಿಗೆ ನಿರಾಸೆಯಾಗಿದೆ.

ಭೀಮ ಬಕನನ್ನು ಕೊಂದ ಕಥೆಯಲ್ಲಿ ಘಟನೆಗಳೆಲ್ಲ ಹೇಗೆ ನಡೆದವೆಂದು ಅವನಿಂದಲೇ ಕೇಳಿ ತಿಳಿದುಕೊಳ್ಳಲು ದ್ರೌಪದಿ ಉತ್ಸುಕತೆ ತೋರುತ್ತಾಳೆ. ಅದನ್ನು ತಿಳಿಯುವ ಉದ್ದೇಶದಿಂದಲೆ ಭೀಮನ ಸರದಿಗೂ ಮೊದಲೇ ಏಕಾಂತದಲ್ಲಿ ಭೀಮನನ್ನು ಕಾಣುತ್ತಾಳೆ. ಸರದಿಯ ಮೊದಲ ರಾತ್ರಿಯಲ್ಲಿ ಪ್ರೇಮಾತುರನಾದ ಭೀಮನನ್ನು ತಡೆದು 'ಕೂಡದು... ಯುದ್ಧದ ಕತೆ ಹೇಳು, ಮೊದಲು' ಎಂದು ಒತ್ತಾಯಿಸುತ್ತಾಳೆ. ಪೂರ್ಣವಾದ ಯುದ್ಧನಿರೂಪಣೆಯಿಂದ ಜರಾಸಂಧನನ್ನು ಕೊಂದ ಬಗೆಯನ್ನು ಕೇಳಿದ ಬಳಿಕ ಕಾಮೋತ್ತೇಜಿತಳಾಗಿ ಬಳಲಿಕೆ ಮರೆತು ಭೀಮನನ್ನು ಉನ್ಮತ್ತಳಾಗಿ ಆವರಿಸುತ್ತಾಳೆ "ಸುಳಿಗಾಳಿ ಎಂಬಂತೆ ನನ್ನ ದೇಹವನ್ನು ಆವರಿಸಿದ್ದಾಳೆ. ಹಲ್ಲುಗಳು, ಉಗುರುಗಳು ನನ್ನನ್ನು ಎಲ್ಲೆಲ್ಲೂ ನೋಯಿಸಿದವು. ನೋವಲ್ಲ, ಮೋಹ. ಮೋಹವಲ್ಲ, ಮೂರ್ಛೆ. ನಾನು ರಾತ್ರಿಯಿಡೀ ತೇಲಾಡಿದೆ" (ಪು. ೧೩೦) ಕಿರಾತರಂತೆ ಒರಟು ಸ್ವಭಾವದವನಾಗಿದ್ದ ಭೀಮನಿಗೆ ಇಂಥ ಹಿಂಸಾರತಿಯ ಲೈಂಗಿಕ ಅನುಭವವು ಅತೀವ ಸುಖವನ್ನು ನೀಡುವಂಥದ್ದು ಎಂಬುದನ್ನು ದ್ರೌಪದಿ ಬಲ್ಲಳು. ಐವರು ಪತಿಯರಿಗೆ ಮಡದಿಯಾದ ದ್ರೌಪದಿ ಪಾಂಡವರ ಸ್ವಭಾವ, ಅಭಿರುಚಿಗಳನ್ನು ತಿಳಿದುಕೊಂಡು, ಅನುಗುಣವಾಗಿ ನಡೆದುಕೊಂಡು ಕೊನೆಯವರೆಗೂ ಐವರಿಗೂ ಪ್ರಿಯಸತಿಯಾಗಿದ್ದವಳು. ದ್ರೌಪದಿಯ ಹುಟ್ಟಿನಲ್ಲಿಯೇ ದ್ರುಪದನ ಪ್ರತೀಕಾರದ ಕಿಚ್ಚಿದೆ; ಅವಳು ಹುಟ್ಟಿದುದು ಎಲ್ಲವನ್ನೂ ಸುಟ್ಟುಬಿಡುವಂಥ ಅಗ್ನಿಯಲ್ಲಿ; ಬೆಳೆಯುತ್ತ ಅಣ್ಣ ದೃಷ್ಟದ್ಯುಮ್ನನಿಗೆ ಸಮಸಮವಾಗಿ ಶಸ್ತ್ರಾಸ್ತ್ರ ಪ್ರಯೋಗದ ಕ್ಷಾತ್ರವಿದ್ಯೆಯನ್ನೂ ಅವಳು ಕಲಿತುಕೊಂಡಿದ್ದಾಳೆ ಎಂಬ ವಿಚಾರಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ಜಟನೆಂಬ ಒಬ್ಬ ಕಾಡ ಕಿರಾತ ಒಮ್ಮೆ ದ್ರೌಪದಿಯನ್ನು ಹೊತ್ತೊಯ್ಯುವ ಪ್ರಯತ್ನ ಮಾಡಿದಾಗ ಅವಳು ನೋಡಲೆಂದೇ ಭೀಮ ಜಟನೊಂದಿಗೆ ಒಂದು ಯುದ್ಧ ಮಾಡಿದ. ಆ ಯುದ್ಧದಲ್ಲಿ ಭೀಮ ಜಟನನ್ನು ಕೊಲ್ಲದೆ ಬಿಟ್ಟ ಬಗ್ಗೆ ಅವಳಿಗೆ ಅಸಮಾಧಾನವಿದೆ. ವಿರಾಟನಗರಿಯಲ್ಲಿ ಅಜ್ಞಾತವಾಸದಲ್ಲಿದ್ದಾಗ ಹಬ್ಬದ ಪ್ರಯುಕ್ತ ನಡೆದ ಜಟ್ಟಿಕಾಳಗದಲ್ಲಿ ಜೀಮೂತನೆಂಬ ಮಲ್ಲನೊಂದಿಗೆ ಬಾಣಸಿಗನ ವೇಷದ ಭೀಮ ಕಾದುವಾಗ ಸೈರಂಧ್ರಿಯಾಗಿ ಹೆಂಗಸರ ತಂಡದೊಂದಿಗೆ ಕುಳಿತು ಆ ಹೋರಾಟವನ್ನು ನೋಡುತ್ತ 'ಹೊಡೆ, ಕೊಲ್ಲು' ಎಂದು ಪ್ರಚೋದಿಸುತ್ತಾಳೆ. ಭೀಮ ಅವನನ್ನು ಕೇವಲ ಸೋಲಿಸಿ ಬಿಟ್ಟದ್ದು ದ್ರೌಪದಿಗೆ ಸಮ್ಮತವಲ್ಲ. ಅವಳ ಪ್ರಕಾರ ಭೀಮ ಜೀಮೂತ ಜಟ್ಟಿಯನ್ನು ಕೊಂದಿದ್ದರೆ ಎಲ್ಲರೂ ವಲಲನಿಗೆ ಹೆದರುತ್ತಿದ್ದರು. ಕೀಚಕನನ್ನು ವಧಿಸುವಂತೆ ಭೀಮನನ್ನು ಉತ್ತೇಜಿಸಿದ್ದು ಕೂಡ ದ್ರೌಪದಿಯೆ. "ಅವನನ್ನು ಹೊಡೆದು ಗುದ್ದಿ ಪುಡಿ ಮಾಡಬೇಕು. ಶಿಲೆಯ ಮೇಲೆ ಮಣ್ಣಿನ ಕೊಡದಂತೆ ಅವನ ಶಿರವನ್ನು ಒಡೆಯಬೇಕು. ನಾಡಿದ್ದು ಸೂರ್ಯೋದಯದ ಹೊತ್ತಿಗೆ ಅವ ಜೀವಂತ ಇದ್ದಾನೆ ಎಂದಾದರೆ ನಾನು ವಿಷ ಸೇವಿಸಿ ಈ ಅಡುಗೆಮನೆಯ ಅಂಗಳದಲ್ಲಿ ಬಿದ್ದು ಸಾಯುತ್ತೇನೆ ಖಂಡಿತ" (ಪು. ೧೮೯) ಎಂದು ಭೀಮನಿಗೆ ತಾಕೀತು ಮಾಡುತ್ತಾಳೆ. ಕೀಚಕವಧೆಯನ್ನು ಪೂರೈಸಿದ್ದಕ್ಕೆ ಉಡುಗೊರೆಯೆಂಬಂತೆ ಕಾಲ ಸಂದರ್ಭಗಳ ಪರಿವೆಯಿಲ್ಲದೆ ಸರದಿಯ ಹಂಗಿಲ್ಲದೆ ತನ್ನ ಆಯ್ಕೆಯಿಂದ ಭೀಮನನ್ನು ಕೂಡಿ ಸಂತೋಷಗೊಳಿಸುತ್ತಾಳೆ. ಗೋಗ್ರಹಣದ ಸಂದರ್ಭದಲ್ಲಿ ಕೌರವಸೇನೆಯನ್ನು ಇದಿರಿಸಲು ಹೊರಟ ಉತ್ತರನಿಗೆ ಸಾರಥಿಯಾಗಿ ಬೃಹನ್ನಳೆಯ ವೇಷದಲ್ಲಿದ್ದ ಅರ್ಜುನನನ್ನು ಕಳುಹಿಸಲು ಒತ್ತಾಯಿಸಿದವಳು ಕೂಡ ಸೈರಂಧ್ರಿಯೇ ಎಂಬುದನ್ನು ಕೃತಿ ಗುರುತಿಸಿದೆ.

ಅಜ್ಞಾತವಾಸದ ಬಳಿಕ ಕೌರವರಲ್ಲಿಗೆ ತೆರಳಿದ್ದ ಸಂಧಾನಕಾರನ ಉತ್ತರ ತಿಳಿಯುವುದಕ್ಕಾಗಿ ಕಾತರಿಸುವ ದ್ರೌಪದಿ 'ಶಮವನ್ನು ವರಿಸುವುದು' ಎಂಬ ಧೃತರಾಷ್ಟ್ರನ ಸಂದೇಶದಿಂದ ವಿಚಲಿತಳಾಗುತ್ತಾಳೆ. ಉಳಿದ ಪಾಂಡವರು ಸ್ವಲ್ಪಮಟ್ಟಿಗೆ ಶಾಂತಿಪ್ರಿಯರೂ ಹಿರಿಯಣ್ಣನ ಆಣತಿಗೆ ಬದ್ಧರಾದವರೂ ಆಗಿರುವುದರಿಂದ ದ್ರೌಪದಿಗೆ ಭೀಮನ ಪ್ರತಿಕ್ರಿಯೆ, ಅಭಿಪ್ರಾಯಗಳನ್ನು ತಿಳಿಯಬೇಕಾಗಿದೆ. ಯುಧಿಷ್ಠಿರನ ಇಚ್ಛೆಗೆ ಎದುರಾಡಲಾರದೆ ಭೀಮನೂ ಯುದ್ಧವಿಮುಖನಾದಂತೆ ಕಂಡಾಗ, ಇನ್ನೇನು ಸಂಧಾನವೆ ನಡೆಯುವುದೇನೊ ಅನಿಸಿದಾಗ ದ್ರೌಪದಿ ಹತಾಶಳಾಗುತ್ತಾಳೆ. ಸಂಧಾನದ ಮಾತಿಗಾಗಿ ಮತ್ತೊಮ್ಮೆ ಕೃಷ್ಣನನ್ನು ಕಳಿಸುವ ಕುರಿತು ಪಾಂಡವರೊಳಗೆ ಮಾತುಕತೆ ನಡೆಯುತ್ತಿದ್ದಾಗಲಂತೂ ಅವಳ ಸಹನೆಯ ಕಟ್ಟೆಯೊಡೆಯುತ್ತದೆ. 'ಇದು ರಾಜನೀತಿಗೆ ಸಂಬಂಧಿಸಿದ ಒಂದು ಮಂತ್ರಾಲೋಚನೆಯಾದ್ದರಿಂದ ಸ್ತ್ರೀಯರು ಭಾಗವಹಿಸುವಂತಿಲ್ಲ' ಎಂದು ಯುಧಿಷ್ಠಿರ ನೆನಪಿಸಿದರೂ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಪ್ರಕಟಿಸುತ್ತಾಳೆ. 'ಕುರುವಂಶದಲ್ಲಿ ಸ್ತ್ರೀಯರು ಬಾಳಿ ಬದುಕಬೇಕಿದ್ದರೆ ಕುರುಡರಾಗಿರಬೇಕು. ಇಲ್ಲವಾದರೆ ಮೂಕರಾಗಬೇಕು' ಎಂದು ಕಟಕಿಯಾಡುತ್ತಾಳೆ. 'ಶಮವನ್ನು ಬೇಡಲು ಹೊರಡುವ ಮೊದಲು

ಇದನ್ನೊಮ್ಮೆ ನೋಡಿ' ಎಂದು ತನ್ನ ಬಿಚ್ಚಿ ಹರಡಿದ್ದ ತುರುಬನ್ನು ತೋರಿಸಿ ಪಾಂಡವರನ್ನು ಕುಟುಕುತ್ತಾಳೆ.

ದ್ರೌಪದಿಯ ವ್ಯಂಗ್ಯ, ಕಟಕಿ ಎಲ್ಲವೂ ನೇರವಾಗಿ ಭೀಮನನ್ನು ಉದ್ದೇಶಿಸಿರುವುದು ಸ್ಪಷ್ಟ. ವಸ್ತ್ರಾಪಹರಣದ ಸಂದರ್ಭದಲ್ಲಿ ಅಣ್ಣ ತಡೆದರೂ ಕೇಳದೆ ಸಿಡಿದೆದ್ದು ಶಪಥ ಮಾಡಿದ ಭೀಮನ ಸಿಟ್ಟಿನ ತೀವ್ರತೆಯನ್ನು ನೆನಪಿಸುತ್ತಾಳೆ. ದುಶ್ಯಾಸನ ಹಿಡಿದೆಳೆದಾಗ ಬಿಚ್ಚಿದ ತುರುಬನ್ನು ಹಾಗೇ ಉಳಿಸಿಕೊಳ್ಳುವ ಮೂಲಕ 'ಒಳಗೆ ಉರಿಯುತ್ತಿರುವ ಬೆಂಕಿ ಕಣ್ಣೀರಲ್ಲಿ ನಂದಿಹೋಗದಂತೆ' ಹದಿಮೂರು ವರ್ಷ ಕಾಪಾಡಿಕೊಂಡಿರುವ, 'ಈಗ ಕೌರವರನ್ನೆಲ್ಲ ಒಬ್ಬಂಟಿಯಾಗಿ ಕೊಲ್ಲುತ್ತೇನೆಂದು ಆಣೆ ಹಾಕಿದ ಮನುಷ್ಯ ಕೂಡ ಧರ್ಮಜನಾಗಿ ಬದಲಾಗಿದ್ದಾನೆ' ಎಂದು ವಿಷಾದಿಸುವ ದ್ರೌಪದಿ 'ಶಾಪದ ಬೀಜಗಳನ್ನು ಕೈಗಳಲ್ಲಿ, ಸಂಹಾರದ ಕಿಡಿಗಳನ್ನು ಕಣ್ಣುಗಳಲ್ಲಿ ಹೊತ್ತು ನಿಂತಿರುವ ಕೃತ್ಯೆ ಎಂಬ ದುಷ್ಟದೇವತೆಯಂತೆ' ಭೀಮನ ಕಣ್ಣಿಗೆ ಭಾಸವಾಗುತ್ತಾಳೆ. ಪತ್ನಿಯ ಮೇಲೆ ಅಪಾರವಾದ ಪ್ರೇಮ-ಅನುಕಂಪಗಳನ್ನು ಉಳ್ಳವನೂ, ಸ್ವಭಾವತಃ ಹೋರಾಟಪ್ರಿಯನೂ ಆದ ಭೀಮ ಗಟ್ಟಿಯಾಗಿ ನಿಂತರೆ ಯುದ್ಧ ನಡೆಯುತ್ತದೆ ಎಂಬುದು ಅವಳಿಗೆ ಗೊತ್ತಿದೆ. ಕ್ರೋಧ ಮತ್ತು ಅಳು ಎರಡೂ ಅಸ್ತ್ರಗಳನ್ನು ಪ್ರಯೋಗಿಸಿ ಭೀಮನಲ್ಲಿ ಪ್ರತೀಕಾರದ ಕಿಡಿ ಹೊತ್ತಿಸುತ್ತಾಳೆ. ಯುದ್ಧ ನಡೆದೇ ತೀರುವಂತೆ ಒತ್ತಡ ಹೇರುತ್ತಾಳೆ.

'ಭೀಮಾಯಣ'ದಲ್ಲಿ ಯುದ್ಧಪ್ರಿಯೆಯಾಗಿ ಚಿತ್ರಿತವಾಗಿರುವ ದ್ರೌಪದಿಯು ಕುರುಕ್ಷೇತ್ರ ಯುದ್ಧದ ಪರಿಣಾಮಗಳನ್ನು ಕಂಡು ವಿಚಲಿತಳಾಗಿ 'ಯುದ್ಧವೆಂಬುದು ಎಲ್ಲ ಕಾಲಕ್ಕೂ ಸ್ತ್ರೀವಿರೋಧಿಯಾದದ್ದು, ಸ್ತ್ರೀಯರನ್ನು ನೋವಿಗೆ ಗುರಿಮಾಡುವಂಥದ್ದು' ಎಂದು ಅರ್ಥಮಾಡಿಕೊಳ್ಳುವುದನ್ನು 'ನಾನಿನ್ನು ನಿದ್ರಿಸುವೆ' ಕಾದಂಬರಿ ಗುರುತಿಸುತ್ತದೆ. ಅಂದರೆ ಸ್ತ್ರೀಯರೇ ಮುಂತಾದ ಸ್ವಜನರ ರಕ್ಷಣೆಗಾಗಿ, ದಬ್ಬಾಳಿಕೆ, ದೌಷ್ಟ್ಯಗಳನ್ನು ತಡೆಯುವುದಕ್ಕಾಗಿ, ಪರಾಕ್ರಮವನ್ನು ಸಿದ್ಧಪಡಿಸುವುದಕ್ಕಾಗಿ ನಡೆಯುವ ಹೋರಾಟಗಳು ಅನಿವಾರ್ಯವಾಗಿವೆ. ಆದರೆ ಒಪ್ಪತಕ್ಕ ಕಾರಣಗಳೇನೂ ಇಲ್ಲದೆ ಕೇವಲ ಪುರುಷರ ಅಹಂ ಮತ್ತು ಪ್ರತಿಷ್ಠೆಗಳನ್ನು ಸ್ಥಾಪಿಸುವುದಕ್ಕಾಗಿ ನಡೆಯುವ ಯುದ್ಧವು ಅರ್ಥಹೀನವಾದದ್ದು ಎಂಬುದು ದ್ರೌಪದಿಯ ಪಾತ್ರದ ಮೂಲಕ ವ್ಯಕ್ತವಾಗುವ ಸ್ತ್ರೀದೃಷ್ಟಿ. ಇದೇ ಅಭಿಪ್ರಾಯವನ್ನು 'ಅಶೋಕ' ಕತೆಯ ಸೀತೆ ಕೂಡ ಹೊಂದಿದ್ದಾಳೆ.

ಕುರುಕ್ಷೇತ್ರ ಯುದ್ಧ ಕಳೆದು ಪಾಂಡವರು ಗೆದ್ದ ಬಳಿಕ ಯುಧಿಷ್ಠಿರ ಖಿನ್ನನಾಗಿ ತನಗೆ ಪಟ್ಟ ಬೇಡವೆಂದಾಗ ಅವನ ಪಟ್ಟದರಸಿಯಾಗಿ ರಾಜಸಭೆಯಲ್ಲಿ ಆಸೀನಳಾಗುವ ಹಂಬಲ ಹೊಂದಿದ್ದ ದ್ರೌಪದಿ ಹತಾಶಳಾಗುತ್ತಾಳೆ. ಆ ಸಂದರ್ಭದಲ್ಲಿ ಆಕೆ ಕೆಲಸ ಸಾಧಿಸಿಕೊಂಡ ದಾರಿ ಬಹಳ ಜಾಣ್ಮೆಯದು ಮತ್ತು ಪ್ರೌಢಿಮೆಯದು. ಒಂದು ವೇಳೆ ಧರ್ಮಜ ಸಿಂಹಾಸನವನ್ನು ನಿರಾಕರಿಸಿದನೆಂದು ನಂತರದವನಾದ ಭೀಮನಿಗೆ ಪಟ್ಟವಾದರೆ ಬಲಂಧರೆ ಪಟ್ಟದರಸಿಯಾಗುತ್ತಾಳೆ. ಪರಿಣಾಮದಲ್ಲಿ

ದ್ರೌಪದಿ ಬಲಂಧರೆಯ ದಾಸಿಯಾಗಿ ಅಂತಃಪುರದ ಮೂಲೆಯಲ್ಲಿ ಕೊಳೆಯಬೇಕಾಗುತ್ತದೆ. ಈ ಎಲ್ಲ ಅಂಶಗಳನ್ನು ದ್ರೌಪದಿ ಮುಂಗಂಡಿದ್ದಾಳೆ. ಆರಂಭದಿಂದಲೂ ದ್ರೌಪದಿಯ ಬಗ್ಗೆ ಆರ್ದ್ರಭಾವ ಹೊಂದಿದ್ದ ಭೀಮನ ಮೂಲಕ ತನ್ನ ಪಟ್ಟದ ಹಾದಿಯನ್ನು ಸುಗಮಗೊಳಿಸಿಕೊಳ್ಳುತ್ತಾಳೆ. "ಕಾಡೊಳಗೆ ಕಳೆಯುತ್ತಿದ್ದಾಗ, ದಾಸಿಯಾಗಿದ್ದಾಗ ಒಂದು ಮೋಹವಿತ್ತು–ಒಮ್ಮೆ ಇಲ್ಲಿ ಬರಬಹುದೆಂದು. ಅದನ್ನು ಈ ದ್ರೌಪದಿಗೆ ನಿರಾಕರಿಸುವುದೆ? ಯಾವತ್ತೂ ಸೈರಂಧ್ರಿಯಾಗಿರಲು ಹುಟ್ಟಿದವಳು ಪಾಂಚಾಲಿ!" (ಪು. ೨೫೭) ಎಂಬಂಥ ಭಾವುಕ ಮಾತುಗಳು ಮತ್ತು ಕಣ್ಣೀರಿನಿಂದ ಭೀಮನ ಮನಸ್ಸನ್ನು ಕದಡಿ ಅವನು ಪಟ್ಟವನ್ನು ತಾನಾಗಿಯೆ ನಿರಾಕರಿಸುವಂತೆ ಮಾಡುತ್ತಾಳೆ. ಯುಧಿಷ್ಠಿರನ ಪಟ್ಟಮಹಿಷಿಯಾಗಿ ಬಹುಕಾಲದ ಹಂಬಲವನ್ನು ನೆರವೇರಿಸಿಕೊಳ್ಳುತ್ತಾಳೆ.

ರಾಜಪತ್ನಿಯಾಗಿ ಸಭೆಯಲ್ಲಿ ಆಸೀನಳಾದ ದಿವಸ ಶ್ರೀಗಂಧ ಲೇಪನದ ಸುಗಂಧ ಮತ್ತು ರೇಷ್ಮೆಬಟ್ಟೆಗಳ ಹೊಳಪಿನಲ್ಲಿ ತೃಪ್ತಳಾಗಿದ್ದ ದ್ರೌಪದಿಯನ್ನು 'ಸತ್ತಮಕ್ಕಳ ನೆನಪೂ ತಳಮಳಗೊಳಿಸುವುದಿಲ್ಲ' ಎಂಬ ಅಂಶವನ್ನು ಭೀಮ ಅಚ್ಚರಿಯಿಂದ ಗಮನಿಸುತ್ತಾನೆ. ಆಯ್ಕೆಯಿಲ್ಲದೆ ಐವರ ಮಡದಿಯಾದ ದ್ರೌಪದಿ ಗಂಡ–ಮಕ್ಕಳು ಮುಂತಾದ ಸಂಬಂಧಗಳಲ್ಲಿ ಗಾಢ ಅನುಬಂಧವನ್ನು ಹೊಂದಿಲ್ಲ. ಪ್ರತೀಕಾರ ಮತ್ತು ಅಧಿಕಾರಗಳೆಡೆಗೆ ಹೆಚ್ಚಿನ ಗಮನ ಕೇಂದ್ರೀಕರಿಸುವ ಹಾಗೂ ತನ್ನ ಸ್ಥಾನಗೌರವವನ್ನು ಉಳಿಸಿಕೊಳ್ಳುವ ಶುದ್ಧ ರಾಜಕೀಯ ಒಲವು ಹೊಂದಿದ್ದಾಳೆ.

ಯಶಸ್ವೀ ರಾಜಕಾರಣಿ: ಮಾನಸಿ

ಸ್ತ್ರೀಯರನ್ನು ಬಳಸಿಕೊಂಡು ಅಧಿಕಾರಸ್ಥಾನವನ್ನು ಬಲಪಡಿಸಿಕೊಳ್ಳುವ ಪುರುಷರು ಇರುವಂತೆಯೆ ಪುರುಷರನ್ನು ತಮ್ಮ ದೇಹಸೌಂದರ್ಯದಿಂದ ಮರುಳುಗೊಳಿಸಿ ಅಧಿಕಾರ, ಅಂತಸ್ತು, ವಶೀಲಿ ಮುಂತಾಗಿ ಪ್ರಯೋಜನಕ್ಕೆ ಬಳಸಿಕೊಳ್ಳುವ ಸ್ತ್ರೀಯರೂ ಇರುತ್ತಾರೆ. 'ಮಾನಸಿ' ಎಂಬ ನೀಳ್ಗಥೆಯಲ್ಲಿ ಕಮಲಾದಾಸ್ ಅವರು ಚಿತ್ರಿಸಿರುವ ಪಾತ್ರವಾಗಿರುವ ಮಾನಸಿ ಮಿತ್ರ ಎಂಬ ಜನಪ್ರಿಯ ಲೇಖಕಿ ಅಂಥ ಒಬ್ಬ ಮಹಿಳೆಯಾಗಿದ್ದಾಳೆ. ಒಬ್ಬ ಸರಕಾರಿ ಅಧಿಕಾರಿಯಾಗಿದ್ದರೂ ಪ್ರಾಮಾಣಿಕನಾಗಿರುವ ಕಾರಣ ಹೆಚ್ಚು ಗಳಿಸಲಾಗದ, ನೆನಪಿನಲ್ಲಿರಿಸಿಕೊಳ್ಳುವಂಥ ಯಾವುದೇ ಉಡುಗೊರೆಯನ್ನು ಹೆಂಡತಿಗಾಗಿ ತಂದುಕೊಡಲಾರದ ಪತಿಯ ರೂಪವನ್ನೂ, ಈ ಹಿಂದೆ ತಾನು ಮೆಚ್ಚಿದ್ದ ಆದರ್ಶಗುಣಗಳನ್ನೂ ಅಸಹ್ಯಿಸಿಕೊಳ್ಳುವ ಮಾನಸಿಗೆ ತನ್ನ ಅಪ್ರತಿಮ ಸೌಂದರ್ಯ ಮಾಸಿ ಹೋಗುವ ಮುನ್ನ 'ಸರಿಯಾಗಿ ಬಳಸಿಕೊಳ್ಳಬೇಕು' ಎಂಬ ಎಚ್ಚರವಿದೆ. ಹಿಂದೊಮ್ಮೆ ತನ್ನ ಪ್ರಿಯತಮನಾಗಿದ್ದವನ ತಮ್ಮನೂ, ಪ್ರಸ್ತುತ ರಾಜಕೀಯವಾಗಿ ಉನ್ನತ ಸ್ಥಾನದಲ್ಲಿರುವವನೂ ಆದ ವಿಜಯ್‌ರಾಜೇಯನ್ನು ಮೋಹದಲ್ಲಿ ಬೀಳಿಸಿಕೊಂಡು ಸಾಹಿತ್ಯದಿಂದ ರಾಜಕೀಯ ರಂಗಕ್ಕೆ ಯಶಸ್ವೀ ಪ್ರವೇಶ ಪಡೆಯುತ್ತಾಳೆ. ಪ್ರಧಾನಮಂತ್ರಿಗಳನ್ನೂ ತನ್ನ ಸೌಂದರ್ಯ ಮತ್ತು ಬುದ್ಧಿಮತ್ತೆಯ ದಾಸರಾಗಿಸಿ ಪಕ್ಷದಲ್ಲಿ ಅತಿ ಪ್ರಭಾವಿ

ವ್ಯಕ್ತಿಯಾಗಿ ಬೆಳೆಯುತ್ತಾಳೆ. ಅಧಿಕಾರದಲ್ಲಿ ಉನ್ನತಿಯೊಂದನ್ನೇ ಗಮ್ಯವಾಗಿಸಿಕೊಂಡಿರುವ ಮಾನಸಿಗೆ ಇದರಿಂದಾಗಿ ತನ್ನ ಪುಟ್ಟ ಸಂಸಾರ ಒಡೆದುಹೋಗುತ್ತಿರುವುದು ಗೊತ್ತಾದರೂ ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸುವುದಿಲ್ಲ. ಅಮ್ಮನ ಮೇಲಿನ ಸಿಟ್ಟಿಗೆ ಅಮ್ಮನ ಪ್ರಿಯಕರನಾದ ವಿಜಯ್‌ರಾಜೇಯನ್ನೇ ಪ್ರೇಮಿಸಿ ಗರ್ಭಿಣಿಯಾಗಿರುವ ಮಗಳಿಗೆ ಗರ್ಭಪಾತ ಮಾಡಿಸಿ ಪ್ರಧಾನಿಯವರ ಮಗನಿಗೆ ಅವಳನ್ನು ಮದುವೆಮಾಡಿಕೊಡುವ ಯೋಜನೆ ಹಾಕಿಕೊಳ್ಳುತ್ತಾಳೆ. ಆ ಮೂಲಕ ತನ್ನ ಅಧಿಕಾರಸ್ಥಾನವನ್ನು ಭದ್ರಪಡಿಸಿಕೊಳ್ಳುವ ಹುನ್ನಾರ ಅವಳದು. ಬಡತನದ ಬವಣೆ ಅನುಭವಿಸಿರುವ ಮಾನಸಿಗೆ ಉನ್ನತ ಸ್ಥಾನದಲ್ಲಿದ್ದರೆ ಗೌರವ ತನ್ನಿಂತಾನೆ ಬರುತ್ತದೆ ಎಂಬ ವರ್ತಮಾನದ ಸತ್ಯ ತಿಳಿದಿದೆ. ತಾನು ಪಟ್ಟ ಕಷ್ಟ ತನ್ನ ಮಗಳಿಗೆ ಬರಬಾರದು ಎಂಬ ಎಚ್ಚರವಿದೆ. ಬದುಕಿಗೆ ಉಪಯೋಗವಿಲ್ಲದ ಭಾವುಕ ಸಾಹಿತ್ಯಕ್ಕಿಂತ ಸಮಾಜದಲ್ಲಿ ಗೌರವದ ಸ್ಥಾನ ಕಲ್ಪಿಸುವ ಅಧಿಕಾರ, ಸಂಪತ್ತುಗಳೆ ಉತ್ತಮ ಎಂಬ ಸ್ವಾನುಭವದಿಂದ ಪುಷ್ಟಗೊಂಡ ಧೋರಣೆ ಅವಳ ರಾಜಕೀಯ ನಡೆಗಳಿಗೆ ಕಾರಣವಾಗಿದೆ.

ಭಾರತದ ಸಂದರ್ಭದಲ್ಲಿ ದೇಶದ ಮತ್ತು ಒಟ್ಟು ಜಗತ್ತಿನ ರಾಜಕೀಯ ವಿದ್ಯಮಾನಗಳ ಅರಿವು, ಆಸಕ್ತಿಗಳನ್ನು ಪುರುಷರು ಮಾತ್ರ ಹೊಂದಿರುತ್ತಾರೆ ಎಂದು ಭಾವಿಸಲಾಗಿದೆ. ಆ ಮೂಲಕ ಅಧಿಕಾರ ಮತ್ತು ಆಯ್ಕೆಗಳಿಂದ ಸ್ತ್ರೀಯರನ್ನು ದೂರವಿಡಲಾಗಿದೆ. ತಪ್ಪದೆ ದಿನಪತ್ರಿಕೆಗಳನ್ನು ಓದುವ ಮತ್ತು ಟಿ.ವಿ. ವಾರ್ತೆಗಳನ್ನು ಗಮನಿಸುವ ಪುರುಷರ ನಡುವಿನ ಅನೌಪಚಾರಿಕ ಮಾತುಕತೆಗಳಲ್ಲಿ ರಾಜಕೀಯ ವಿಚಾರಗಳ ವಿಶ್ಲೇಷಣೆಯೆ ಪ್ರಧಾನವಾಗಿರುತ್ತದೆ; ಮಹಿಳೆಯರಾದರೆ ಗಂಡ, ಮನೆ, ಮಕ್ಕಳು ಮುಂತಾಗಿ ಕೌಟುಂಬಿಕ ಸಂಗತಿಗಳ ಬಗ್ಗೆಯೆ ಮಾತನಾಡುತ್ತಾರೆ ಎಂಬುದು ಸಾಮಾನ್ಯ ಗ್ರಹಿಕೆಯಾಗಿದೆ. ಕಮಲಾದಾಸ್ ಅವರು ಬರೆದಿರುವ 'ಚುನಾವಣೆಗೆ ಮೊದಲು' ಎಂಬ ಕತೆಯಲ್ಲಿ ಗರ್ಭಕೋಶವನ್ನು ಕತ್ತರಿಸಿ ತೆಗೆಯಲೇಬೇಕಾದ ಪರಿಸ್ಥಿತಿಯಲ್ಲಿರುವ ಮೇನೋನ್‌ರ ಪತ್ನಿ ಈ ಮಾತಿಗೆ ಅಪವಾದವಾಗಿರುವುದು ವಿಶಿಷ್ಟವಾಗಿದೆ. ಗರ್ಭಕೋಶದ ಸರ್ಜರಿ ಮಾಡಿಸಿಕೊಳ್ಳಲು 'ಚುನಾವಣೆ ಮುಗಿಯಲಿ. ನಾನು ಓಟು ಹಾಕ್ಲೇಬೇಕು' ಎಂದಾಕೆ ಗಂಡನಲ್ಲಿ ಹಟ ಹಿಡಿಯುತ್ತಾಳೆ. ಓಟುಹಾಕುವುದು ತನ್ನ ಹಕ್ಕು ಎಂದು ಪ್ರತಿಪಾದಿಸುತ್ತಾಳೆ. ಕಾಂಗ್ರೆಸ್ ಪಕ್ಷದ ಮೇಲೆ ಒಲವಿರುವ ಗಂಡನಿಗೆ ತನ್ನನ್ನು ಅನುಸರಿಸಿ ಹೆಂಡತಿಯೂ ಕಾಂಗ್ರೆಸ್ಸಿಗೆ ಓಟು ಹಾಕಬೇಕು ಎಂಬ ಆಶಯ. ಆದರೆ 'ಹೆಣ್ಣುಬುದ್ಧಿಯಲ್ಲವೆ? ಯಾವಾಗ ಅದಕ್ಕೆ ವ್ಯತ್ಯಯವಾಗತ್ತೋ ಹೇಳಬರುವುದಿಲ್ಲ' ಎಂಬ ಸಂಶಯವೂ ಆತನಿಗಿದೆ. ಹಾಗಾಗಿ ಅವಳದೊಂದು ಓಟು ತಪ್ಪಿಹೋದರೆ ಒಳ್ಳೆಯದೇ ಎಂಬ ಭಾವವಿದೆ. ಆದರೆ ಪತ್ನಿಗೆ ತನ್ನ ಪೌರತ್ವದ ಹಕ್ಕು ಮತ್ತು ಹೊಣೆಗಾರಿಕೆಗಳ ಅರಿವಿದೆ. ಸರಿಯಾದ ವ್ಯಕ್ತಿಯನ್ನು ಚುನಾಯಿಸುವ ಮೂಲಕ ದೇಶದ ರಾಜಕೀಯದಲ್ಲಿ ಪರೋಕ್ಷವಾಗಿ ಭಾಗವಹಿಸುವ ಆಶಯವನ್ನು ಹೊಂದಿದ್ದಾಳೆ. ಪತ್ನಿಗೆ ಪತಿಗಿಂತ

ಭಿನ್ನವಾದ ಸ್ವಂತ ಅಭಿಪ್ರಾಯ ಮತ್ತು ಆಯ್ಕೆಗಳನ್ನು ಹೊಂದುವ ಹಕ್ಕಿರುವುದನ್ನು ಇರುವುದನ್ನು ಈ ಕತೆ ಪ್ರತಿಪಾದಿಸುತ್ತದೆ.

೪.೮. ಅಧಿಕಾರದ ರಾಜಕೀಯದಲ್ಲಿ ದಾಳವಾದವರು

ಅಧಿಕಾರ, ಹಣ ಮತ್ತು ಅಂತಸ್ತಿನಲ್ಲಿ ಮೇಲೇರಬೇಕೆಂಬ ಪುರುಷರ ಬಯಕೆ ಸ್ತ್ರೀಯರನ್ನು ದಾಳಗಳಾಗಿ ಉಪಯೋಗಿಸುತ್ತದೆ. ಹಾಗೆ ಬಳಸಿಕೊಂಡ ಪುರುಷರು ಆ ಸ್ತ್ರೀಯರ ಮನಸ್ಥಿತಿಯ ಬಗ್ಗೆ ಯಾವುದೇ ಕಾಳಜಿಯಿಲ್ಲದೆ ತಮ್ಮ ಕೆಲಸವಾದ ಬಳಿಕ ಅವರನ್ನು ಮರೆತುಬಿಡುತ್ತಾರೆ. ಆದರೆ ಭಾವನಾತ್ಮಕ ಸಂಬಂಧಗಳಿಗೆ ಪ್ರಾಧಾನ್ಯ ಕೊಡುವ ಸ್ತ್ರೀಯರು ಪುರುಷರ ಸ್ವಾರ್ಥ ಮತ್ತು ವ್ಯವಹಾರಬುದ್ಧಿಯನ್ನು ಅರ್ಥಮಾಡಿಕೊಳ್ಳಲಾಗದೆ ಪರಿತಪಿಸುತ್ತಾರೆ.

ತಗಳಿ ಶಿವಶಂಕರ ಪಿಳ್ಳೆಯವರು ಬರೆದಿರುವ 'ಏಣಿಯ ಮೆಟ್ಟಿಲುಗಳು' ಅಧಿಕಾರಶಾಹಿಯ ವ್ಯವಸ್ಥೆಯ ಕೆಳಗಿನ ಹಂತದಲ್ಲಿ ಕೇವಲ ಗುಮಾಸ್ತನಾಗಿದ್ದ ಕೇಶವ ಪಿಳ್ಳೆ ಎಂಬ ವ್ಯಕ್ತಿಯು ಇಬ್ಬರು ಮಹಿಳೆಯರನ್ನು ಬಳಸಿಕೊಂಡು ಮುಖ್ಯ ಕಾರ್ಯದರ್ಶಿಯ ಪಟ್ಟಕ್ಕೆ ಏರುವ ಕುತೂಹಲಕಾರಿ ಕಥೆಯುಳ್ಳ ಕಾದಂಬರಿ. ಶೀರ್ಷಿಕೆಯೆ ಸೂಚಿಸುವಂತೆ ಈ ಕೃತಿಯಲ್ಲಿ ಎರಡು ಮೆಟ್ಟಿಲುಗಳಿವೆ. ಕೇಶವ ಪಿಳ್ಳೆ ತನ್ನ ಬದುಕಲ್ಲಿ ಮೇಲೇರುವುದಕ್ಕೆ, ವೃತ್ತಿಜೀವನದಲ್ಲಿ ಅತ್ಯುಚ್ಚ ಸ್ಥಾನವನ್ನು ಗಳಿಸುವುದಕ್ಕೆ ಬಳಸಿಕೊಂಡ ತಂಗಮ್ಮ ಮತ್ತು ಕಾತ್ಯಾಯಿನಿ ಎಂಬ ಎರಡು ಮಹಿಳೆಯರೇ ಇಲ್ಲಿನ ಎರಡು ಮೆಟ್ಟಿಲುಗಳು. ಮೇಲೇರಿದ ಬಳಿಕ ಅವನಿಗೆ ಈ ಮಹಿಳೆಯರ ಬಗ್ಗೆ ಗೌರವ, ಕಾಳಜಿಗಳಿಲ್ಲ. ಇಬ್ಬರಿಗೂ ಅವನು ನಿಷ್ಠನಾಗಿ ಉಳಿದವನಲ್ಲ. ಪತ್ನಿ, ಸ್ನೇಹಿತೆ, ಹೆತ್ತವರು, ಬಂಧುಗಳು ಎಲ್ಲರೂ ಕೇಶವಪಿಳ್ಳೆಯ ದೃಷ್ಟಿಯಲ್ಲಿ ಏಣಿಯ ಮೆಟ್ಟಿಲುಗಳು ಮಾತ್ರ. ಇಲಾಖೆಯಲ್ಲಿ ಪ್ರಭಾವಶಾಲಿಯಾಗಿದ್ದ ತಂಗಮ್ಮನನ್ನು ಅವನು ಪ್ರೀತಿಸುವುದಾಗಲೀ, ನೋಡಲು ಸುಂದರಿಯಲ್ಲದಿದ್ದರೂ ಜಾತಕದ ಪ್ರಕಾರ 'ಗಂಡನ ಪಾಲಿಗೆ ಪರಮ ಭಾಗ್ಯವತಿಯಾಗಬಹುದಾದ' ಕಾತ್ಯಾಯಿನಿಯನ್ನು ಮದುವೆಯಾಗುವುದಾಗಲೀ ತನ್ನ ಗುರಿಸಾಧನೆಗಾಗಿ ಮಾತ್ರ. ಹೆಣ್ಣು ತನ್ನ ಉಪಯೋಗಕ್ಕೆ ಒದಗಿಬರುವ ಒಂದು ಉಪಕರಣವೆಂದು ಕೇಶವಪಿಳ್ಳೆ ಭಾವಿಸಿದ್ದಾನೆ.

ಪುರುಷಕೇಂದ್ರಿತವಾದ ಮೌಲ್ಯಗಳು ಹೆಣ್ಣಿನ ಬದುಕನ್ನು ನರಕವಾಗಿಸುವುದನ್ನು ಕಾದಂಬರಿಯು ಪರಿಣಾಮಕಾರಿಯಾಗಿ ವಿಶ್ಲೇಷಿಸುತ್ತದೆ. ಕೇಶವಪಿಳ್ಳೆಯ ಮೇಲಿನ ಪ್ರೇಮದಿಂದಾಗಿ ಸರ್ವಪ್ರಯತ್ನವನ್ನೂ ಮಾಡಿ ಅವನಿಗೆ ಭಡ್ತಿ ಕೊಡಿಸಿದವಳು ತಂಗಮ್ಮ. ಅವನಾದರೋ ತನ್ನ ಮದುವೆಯ ವಿಚಾರವನ್ನೇ ಮುಚ್ಚಿಟ್ಟು ತಂಗಮ್ಮನನ್ನು ಪ್ರೀತಿಸುವ ನಾಟಕವಾಡುತ್ತಾನೆ. ಅವಕಾಶ ಸಿಕ್ಕಿದಾಗ ಅವಳಿಂದ ನುಣುಚಿಕೊಳ್ಳುತ್ತಾನೆ. ಅವಳಿಗಾಗಿ ಮನೆ ಖರೀದಿಸಿಕೊಟ್ಟು ಅವಳ ಋಣವನ್ನು ತೀರಿಸಿದೆನೆಂದು ಭಾವಿಸುತ್ತಾನೆ. ಅವನ ಹಣ, ಆಸ್ತಿಯಲ್ಲಿ ಯಾವುದೇ ಆಸಕ್ತಿಯಿಲ್ಲದ ತಂಗಮ್ಮನಾದರೋ ಶುದ್ಧ

ಪ್ರೀತಿಯ ಹಂಬಲದಲ್ಲಿ ಬದುಕು ಕೆಡಿಸಿಕೊಂಡವಳು. ಅವಳ ಇಡೀ ಬದುಕೇ ಶುದ್ಧ ಪ್ರೇಮದ ಹುಡುಕಾಟ. ಅವಳು ದಾರಿ ತಪ್ಪುವುದಕ್ಕೆ ಅವನ ವಿಮುಖತೆಯೆ ಕಾರಣವಾಗಿದೆ. ಕೇಶವ ಪಿಳ್ಳೆ ತನ್ನನ್ನು ಪ್ರೀತಿಸುತ್ತಿಲ್ಲವೆಂದು ಅನಿಸಿದಾಗ ದಿಕ್ಕೆಟ್ಟು ಅಸ್ಪಷ್ಟ ದಾರಿಗಳಲ್ಲಿ ಅಲೆಯುತ್ತಾಳೆ. ಪ್ರೀತಿಯ ಕೊರತೆ ಎನಿಸಿದಾಗೆಲ್ಲ ಪ್ರಿಯಕರರನ್ನು ಬದಲಾಯಿಸುತ್ತ ತನಗೆ ಸರಿಕಂಡಂತೆ ಬದುಕಿದ ಅವಳನ್ನು ಸಮಾಜ ಚರಿತ್ರಹೀನೆಯಾಗಿ ನೋಡುತ್ತದೆ. ಅವಳು ವಿರಾಗಿನಿಯಾಗಿ ಜಪಧ್ಯಾನಗಳಲ್ಲಿ ನಿರತಳಾದಾಗಲೂ ಅವಳ ಪೂರ್ವಚರಿತ್ರೆಯನ್ನು ಅರಿತಿದ್ದ ಜನ ಹೊಸಬರಿಗೂ ಅದನ್ನು ತಿಳಿಸುತ್ತ ತಂಗಮ್ಮಳನ್ನು ಗುಮಾನಿಯಿಂದಲೆ ನೋಡುತ್ತಾರೆ.

ತಣಿಯದ ಕಾಮ ಮೋಹಗಳಿಂದಾಗಿ ಬಳಸುದಾರಿ ಹಿಡಿಯುವ ತಂಗಮ್ಮಳನ್ನು ದುರ್ಮಾರ್ಗಿ ಎನ್ನಲಾಗದು. ವ್ಯವಸ್ಥೆ ಅವಳ ವರ್ತನೆಗೆ ಕಾರಣವಾಗಿದೆ. ಕೇಶವನ ನಿಜವಾದ ಪ್ರೀತಿ ಅವಳಿಗೆ ಒಮ್ಮೆಯೂ ದೊರೆತಿಲ್ಲ. ಅವನ ನಿರ್ದಯ ಅವಗಣನೆಯೇ ಅವಳು ಅನ್ಯದಾರಿ ಹಿಡಿಯಲು, ಬೇರೆ ಬೇರೆ ಪುರುಷರನ್ನು ಬದುಕಿಗೆ ಬರಮಾಡಿಕೊಳ್ಳಲು ಕಾರಣವಾಗಿದೆ. ಅವನ ಸ್ಪರ್ಶದಲ್ಲಿ, ಅಪ್ಪುಗೆಯಲ್ಲಿ ಪ್ರೀತಿಯ ಕೊರತೆ ಅನುಭವಕ್ಕೆ ಬಂದಾಗ, 'ತನ್ನನ್ನು ತೃಪ್ತಿಗೊಳಿಸಲು ಅವನಿಗೆ ಶಕ್ತಿ ಸಾಲದು' ಅನಿಸಿದ್ದರಿಂದಲೇ ತಂಗಮ್ಮ ಅವನನ್ನು ದಾಕ್ಷಿಣ್ಯವಿಲ್ಲದೆ ತನ್ನ ಹಾಸಿಗೆಯಿಂದಲೂ ಬದುಕಿನಿಂದಲೂ ಹೊರನೂಕಿದ್ದಾಳೆ. ಅವಳೇ ಹೇಳುವಂತೆ 'ತನ್ನನ್ನು ನಿಜವಾಗಿ ಪ್ರೀತಿಸುವ ಒಬ್ಬ ದಂಡಿಸುವವನಾಗಲೀ, ತಡೆದು ನಿಲ್ಲಿಸುವವನಾಗಲೀ ಇಲ್ಲದ ಕಾರಣ' ಅವಳು ತಪ್ಪುದಾರಿಯಲ್ಲಿ ಹೋಗಿದ್ದಾಳೆ. ಈ ದಾರಿಯಿಂದ ಒಳ್ಳೆಯ ದಾರಿಗೆ ಹೊರಳಿಕೊಳ್ಳೋಣವೆಂದು ಒಮ್ಮೆ ಬಯಸಿ ಅವಳು ಸನ್ಯಾಸವನ್ನು ಸ್ವೀಕರಿಸಿದರೂ ಕಾಷಾಯವಸ್ತ್ರಕ್ಕೂ ಜಪಧ್ಯಾನಗಳಿಗೂ ಒಗ್ಗದ ಅವಳ ಮನಸ್ಸು ಮತ್ತೆ ವಿಷಯಾಸಕ್ತಿಯತ್ತ ಹರಿಯುತ್ತದೆ. ಅಧ್ಯಾತ್ಮದಲ್ಲೂ ತಾನು ಬಯಸಿದ ನೆಮ್ಮದಿ ಸಿಕ್ಕದೆ ಹೋದಾಗ ಮೊದಲ ಪ್ರೀತಿಯೆಡೆಗೆ ಮರಳುತ್ತಾಳೆ. ತಮ್ಮ ಪ್ರೀತಿಯನ್ನು ಗಟ್ಟಿಗೊಳಿಸಲು, ಸಾರ್ಥಕಗೊಳಿಸಲು ಪ್ರಯತ್ನಿಸುತ್ತಾಳೆ. ವಿವಾಹಿತನಾಗಿರುವ ಕೇಶವಪಿಳ್ಳೆಯನ್ನು ಸಂಪೂರ್ಣವಾಗಿ ತನ್ನವನಾಗಿಸಿಕೊಳ್ಳುವುದು ಯಾವತ್ತೂ ಸಾಧ್ಯವಿಲ್ಲ ಎಂಬುದು ಸ್ಪಷ್ಟವಾದ ಬಳಿಕ ತಂಗಮ್ಮ ಅವನ ಮಗುವನ್ನು ಹೆರುವ ಮೂಲಕ ಅವನನ್ನು ಎಂದೆಂದಿಗೂ 'ತನ್ನವನಾಗಿ ಬಂಧಿಸಿದ' ಸಂತೃಪ್ತಿ ಹೊಂದುತ್ತಾಳೆ. ಅವನ ಮಗುವಿಗೆ ಜನ್ಮ ನೀಡುವ ಮೂಲಕ ತಮ್ಮ ಸಂಬಂಧವು ಕೇವಲ ಕಾಮಸಂಬಂಧವಾಗದೆ ನಿಜವಾದ ಪ್ರೇಮದ ಸಂಬಂಧವಾಯಿತು, ಅದಕ್ಕೊಂದು ದೃಢೀಕರಣ ಸಿಕ್ಕಿತೆಂದು ತೃಪ್ತಿಪಟ್ಟುಕೊಳ್ಳುತ್ತಾಳೆ.

ಕೃತಿಯ ಕೊನೆಯಲ್ಲಿ ಕೇಶವಪಿಳ್ಳೆಗೆ ತನ್ನ ತಪ್ಪು ಅರಿವಾಗಿ ಪಶ್ಚಾತ್ತಾಪ ಮೂಡುತ್ತದೆ. ತನ್ನ ಔದ್ಯೋಗಿಕ ಬದುಕಿನ ಶ್ರೇಯಸ್ಸಿಗೆ ಮೂಲ ಕಾರಣವಾಗಿದ್ದ ತಂಗಮ್ಮಳನ್ನು ಮತ್ತೊಮ್ಮೆ ಪ್ರೀತಿಸುವ, ಅವಳ ಬದುಕಿಗೊಂದು ಭದ್ರತೆ ಒದಗಿಸುವ ಪ್ರಯತ್ನವನ್ನೂ ಮಾಡುತ್ತಾನೆ. ಅವರು ಮತ್ತೆ ಒಂದಾಗಬಹುದಾದ

ಸೂಚನೆಯೂ ಕೃತಿಯಲ್ಲಿದೆ. ಆದರೆ ಅದಕ್ಕಾಗಿ ಅವಳು ತೆತ್ತ ಬೆಲೆ ಮತ್ತು ಅನುಭವಿಸಿದ ಅಪಮಾನಗಳು ಯಾವ ಪರಿಹಾರ ಕೊಟ್ಟರೂ ತುಂಬಿಕೊಡಲು ಸಾಧ್ಯವಿಲ್ಲದಂಥವು.

ಕೇಶವಪಿಳ್ಳೆಯ ಮೇಲಧಿಕಾರಿಯಾಗಿದ್ದ ಕೃಷ್ಣನ್ ನಾಯರ್ ಕೂಡ ತನ್ನ ಪತ್ನಿ ಭಗವತಿ ಕುಟ್ಟಿಯಮ್ಮನ ಬುದ್ಧಿವಂತಿಕೆಯಿಂದಲೆ ಚೀಫ್ ಸೆಕ್ರೆಟರಿಯಂಥ ಉನ್ನತ ಅಧಿಕಾರ ಸ್ಥಾನಕ್ಕೆ ಏರಿದವನು. ಗಂಡನ ಅಭ್ಯುದಯಕ್ಕಾಗಿ ಭಗವತಿ ಕುಟ್ಟಿ ಬೇರೆ ಬೇರೆ ತ್ಯಾಗಗಳನ್ನು ಮಾಡಿದ್ದಾಳೆ. ಗಳಿಸಿದ್ದನ್ನೆಲ್ಲ ಲಂಚವಾಗಿ ನೀಡಿದ್ದಾಳೆ. ಇಷ್ಟವಿಲ್ಲದಿದ್ದರೂ ಯಾರು ಯಾರೊಂದಿಗೋ ಹಾಸಿಗೆ ಹಂಚಿಕೊಂಡಿದ್ದಾರೆ. ಗಂಡ ಅಸಮರ್ಥ ಎಂದು ಗೊತ್ತಿದ್ದೂ ಅವನಿಗೆ ಪ್ರಮೋಶನ್ ಕೊಡಿಸಿದ್ದು ತಪ್ಪುಹಾದಿ ಎಂದು ಅವಳಿಗೇ ಒಮ್ಮೊಮ್ಮೆ ಅನಿಸಿದೆ. ಆದರೆ ಚೀಫ್ ಸೆಕ್ರೆಟರಿಯ ಹೆಂಡತಿಯಾಗಬೇಕು ಎಂಬ ಮಹತ್ವಾಕಾಂಕ್ಷೆಯೆ ಅವಳ ತ್ಯಾಗಗಳಿಗೆ ಕಾರಣವಾಗಿದೆ. ವೃತ್ತಿಜೀವನದ ಉನ್ನತಿಗೆ ಇದೆಲ್ಲ ಅನಿವಾರ್ಯವೆಂಬ ಅರಿವಿನಿಂದಾಗಿ ಕೃಷ್ಣನ್ ನಾಯರ್ ಪತ್ನಿಯ ತೆರೆಮರೆಯ ಆಟಗಳು ಗೊತ್ತಿದ್ದರೂ ಗೊತ್ತಿಲ್ಲದವರಂತೆ ಇರುತ್ತಾನೆ. ಕೇಶವಪಿಳ್ಳೆಯೂ ಬಹುತೇಕ ಇದೇ ಹಾದಿಯನ್ನು ಅನುಸರಿಸಿ, ಸ್ತ್ರೀಯರನ್ನು ದಾಳವಾಗಿಸಿ ಗಮ್ಯವನ್ನು ತಲುಪುತ್ತಾನೆ.

'ಭೀಮಾಯಣ' ಕೃತಿಯು ಪುರುಷರ ಅಧಿಕಾರಲಾಲಸೆಯೆ ಮುಂತಾದ ರಾಜಕೀಯ ಉದ್ದೇಶಗಳಿಗೆ ಸ್ತ್ರೀಯರು ದಾಳವಾಗಿ ಬಳಕೆಯಾಗುವುದನ್ನು ಸ್ಪಷ್ಟವಾಗಿ ಗುರುತಿಸಿದೆ. ಅರಗಿನ ಮನೆಯಿಂದ ತಪ್ಪಿಸಿಕೊಂಡು ಬ್ರಾಹ್ಮಣರ ವೇಷದಲ್ಲಿದ್ದ ಪಾಂಡವರಿಗೆ ಪಾಂಚಾಲದ ರಾಜಕುಮಾರಿ ದ್ರೌಪದಿಯ ಸ್ವಯಂವರ ನಡೆಯಲಿದೆಯೆಂಬ ವರ್ತಮಾನ ತಿಳಿದಾಗ 'ಒಂದು ಕೈ ನೋಡಬೇಕು. ಕಳಕೊಳ್ಳಲು ನಮಗೇನಿಲ್ಲ. ಸ್ವಯಂವರದಲ್ಲಿ ಗೆದ್ದು ದ್ರುಪದನು ಬಂಧುವಾಗಿ ಸಿಕ್ಕಿದರೆ ಆ ಕ್ಷಣ ಪಾಂಡವರು ಜೀವಂತವಿದ್ದಾರೆಂದು ಘೋಷಿಸಬಹುದು' (ಪು. ೯೫) ಎಂದು ಯುಧಿಷ್ಠಿರ ಅಭಿಪ್ರಾಯಪಡುತ್ತಾನೆ. ಧನುರ್ವಿದ್ಯೆಯ ಪರಿಣತಿಯನ್ನು ಪರೀಕ್ಷಿಸುವ ಪಣವಿರುವುದರಿಂದ ಅರ್ಜುನನನ್ನೂ, ಅಲ್ಲೇನಾದರೂ ಸಮಸ್ಯೆಯುಂಟಾದರೆ ಪರಿಹರಿಸಬಲ್ಲ ಮಹಾಬಲನಾದ ಭೀಮನನ್ನೂ ಸ್ವಯಂವರಕ್ಕೆ ಕಳಿಸಿಕೊಡುತ್ತಾನೆ. ಪಣದಲ್ಲಿ ಗೆದ್ದು ದ್ರೌಪದಿಯೊಂದಿಗೆ ಪಾಂಚಾಲ ಸೇನೆಯ ನೆರವನ್ನೂ ಪಡೆದು ಕೌರವರನ್ನು ಎದುರಿಸಿ ರಾಜ್ಯಾಧಿಕಾರವನ್ನು ಪಡೆದುಕೊಳ್ಳುವ ಮುಂದಾಲೋಚನೆ ಯುಧಿಷ್ಠಿರನದು.

ರಾಜಕೀಯ ಕಾರಣಗಳಿಗಾಗಿ ನಡೆಯುವ ವಿವಾಹ ಸಂಬಂಧಗಳು ಮತ್ತು ಗರ್ಭಧಾರಣೆಯ ಪ್ರಕ್ರಿಯೆಗಳಲ್ಲಿ ಸ್ತ್ರೀಯರ ವೈಯಕ್ತಿಕ ಅಭಿಪ್ರಾಯಗಳಿಗೆ ಬೆಲೆಯಿಲ್ಲದಿರುವುದನ್ನು 'ಭೀಮಾಯಣ'ವು ಗುರುತಿಸಿದೆ. ಅಂಧನನ್ನು ವರಿಸಬೇಕಾಗಿ ಬಂದ ಗಾಂಧಾರಿ, ಸಂತಾನಪ್ರಾಪ್ತಿಯಾಗದೆಂದು ತಿಳಿದೂ ಪಾಂಡುವಿನ ಕೈ ಹಿಡಿಯಬೇಕಾಗಿ ಬಂದ ಮಾದ್ರಿ, ಗೆದ್ದವನು ಒಬ್ಬನಾದರೂ ರೂಢಿಗೆ ವಿರುದ್ಧವಾಗಿ ಐವರನ್ನು ಪತಿಯಾಗಿ ಸ್ವೀಕರಿಸಬೇಕಾದ ದ್ರೌಪದಿಯರನ್ನು ಉಲ್ಲೇಖಿಸಿ 'ಹೆಂಗಸರ ಹಿತಾಹಿತಗಳನ್ನು

ನೋಡುವ ಸಂಪ್ರದಾಯ ಮೊದಲೇ ಇಲ್ಲವಷ್ಟೇ' (ಪು. ೧೦೫) ಎಂದು ಭೀಮ ಯುಧಿಷ್ಠಿರನಲ್ಲಿ ಅಸಮಾಧಾನವನ್ನು ವ್ಯಕ್ತಪಡಿಸುತ್ತಾನೆ. ನಪುಂಸಕನಾದ ಪಾಂಡುವಿನ ಕ್ಷೇತ್ರದಲ್ಲಿ ನಿಯೋಗಪದ್ಧತಿಯ ಮೂಲಕ ಪರಾಕ್ರಮಿಗಳಾದ ಮಕ್ಕಳನ್ನು ಹೆತ್ತುಕೊಟ್ಟ ಕುಂತಿ, ಪ್ರಖರನಿಲುವಿನ ಜಟೆಬಿಟ್ಟ ವ್ಯಾಸರ ಸಂಗ ಇಷ್ಟವಿಲ್ಲದಿದ್ದರೂ ಸಹಿಸಿಕೊಂಡು ಮಕ್ಕಳನ್ನು ಸಿಂಹಾಸನಕ್ಕೆ ವಾರಸುದಾರರನ್ನು ಹೆತ್ತುಕೊಟ್ಟ ಅಂಬಿಕೆ, ಅಂಬಾಲಿಕೆಯರ ಪ್ರಸಂಗವನ್ನು, ಪಾಂಡವರ ವಿದ್ಯಾಭ್ಯಾಸದ ಸಂದರ್ಭದಲ್ಲಿ ಆಚಾರ್ಯರು ಹೇಳಿಕೊಟ್ಟಂತೆ 'ಕ್ಷತ್ರಿಯರ ಪಾಲಿಗೆ ಸ್ತ್ರೀಯರೆಂದರೆ ಬೀಜವನ್ನು ಸ್ವೀಕರಿಸುವ ಗರ್ಭಪಾತ್ರೆಗಳು. ಬೀಜ ಬಿತ್ತಲು ಮಾತ್ರವಿರುವ ಗದ್ದೆಗಳು' ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು.

ವನವಾಸದ ಸಂದರ್ಭದಲ್ಲಿ ಮನಸ್ಸಿನ ವ್ಯಾಕುಲತೆಯ ನಿವಾರಣೆಗಾಗಿ ದೇಶ ಸಂಚಾರದಲ್ಲಿದ್ದ ಭೀಮ ಅನಿರೀಕ್ಷಿತವಾಗಿ ಬಲಂಧರೆಯೆಂಬ ರಾಜಕುಮಾರಿಯನ್ನು ಮದುವೆಯಾದ ಪ್ರಕರಣವನ್ನು ಇಲ್ಲಿ ಉದಾಹರಿಸಬಹುದು. ಸ್ವಯಂವರದಲ್ಲಿ ಅತುಲ ಪರಾಕ್ರಮಿಯಾದ ಭೀಮನನ್ನು ಮೆಚ್ಚಿ ವರಿಸಿದ ಬಲಂಧರೆಗೆ ಕೆಲವು ದಿನಗಳ ಮಟ್ಟಿಗಷ್ಟೇ ಗಂಡನ ಸಾಂಗತ್ಯದ ಭಾಗ್ಯ ದೊರೆಯುತ್ತದೆ. ಅವಳಿಂದ ಬೀಳ್ಕೊಂಡ ಗಂಡನನ್ನು ಮತ್ತೊಮ್ಮೆ ಆಕೆ ಕಾಣುವಂತಾದುದು ಪಾಂಡವರ ವನವಾಸದ ಅಂತ್ಯದಲ್ಲಿ. ಭೀಮನಿಂದ ಅವಳು ಪಡೆದ ಬಲಶಾಲಿಯಾದ ಒಬ್ಬನೇ ಮಗನನ್ನು ಕುರುಕ್ಷೇತ್ರ ಯುದ್ಧದಲ್ಲಿ ಕಳೆದುಕೊಳ್ಳಬೇಕಾಗುತ್ತದೆ. ಮಗನ ಪಾಲನೆ ಪೋಷಣೆಯ ಯಾವ ಹೊಣೆಯನ್ನೂ ಹೊರದೆ ಹೀಗೆ ರಾಜಕೀಯ ಸ್ವಾರ್ಥಕ್ಕೆ ಬಳಸಿಕೊಳ್ಳಬೇಕಾದ ರಾಜಕೀಯ ತುರ್ತು ಭೀಮನಿಗಿದೆ. ಸುಭದ್ರೆಯ ಒಬ್ಬನೇ ಮಗ ಅಭಿಮನ್ಯು, ಉಪಪಾಂಡವರೆನಿಸಿಕೊಂಡ ಐದು ಜನ ಪಾಂಡವಪುತ್ರರು, ಹಿಡಿಂಬೆಯಲ್ಲಿ ಭೀಮ ಪಡೆದ ಅತುಲ ಪರಾಕ್ರಮಿಯಾದ ಘಟೋತ್ಕಚ... ಇವರೆಲ್ಲ ಯುದ್ಧದ ಉದ್ದೇಶವನ್ನು ಸ್ಪಷ್ಟವಾಗಿ ಅರಿತುಕೊಳ್ಳದ ವಯಸ್ಸಿನಲ್ಲಿಯೆ ಯುದ್ಧೋತ್ಸಾಹಿಗಳಾಗಿದ್ದವರು. ಪುರುಷರ ನಡುವೆ ಅಧಿಕಾರ, ಪ್ರತಿಷ್ಠೆಗಳಿಗಾಗಿ ನಡೆಯುವ ಯುದ್ಧದಲ್ಲಿ ಗಾಂಧಾರಿ, ದ್ರೌಪದಿ, ಸುಭದ್ರೆ, ಹಿಡಿಂಬೆ, ಬಲಂಧರೆಯಂಥ ಸ್ತ್ರೀಯರ ಮಡಿಲು ಬರಿದಾಗಿದೆ. ಯುದ್ಧಗಳನ್ನು ಗೆಲ್ಲುವುದಕ್ಕಾಗಿಯೆ ವೀರಪುತ್ರರನ್ನು ಪಡೆಯುವ ರಾಜಕೀಯ ಉದ್ದೇಶಕ್ಕೆ ಸ್ತ್ರೀಯರು ನಿಮಿತ್ತವಾಗಿ ಬಳಕೆಯಾಗಿದ್ದಾರೆ.

ಸ್ವಯಂವರದಲ್ಲಿ ಗೆದ್ದು ಬಂದ ಭೀಮಾರ್ಜುನರನ್ನು ಉದ್ದೇಶಿಸಿ 'ಎಲ್ಲರೂ ಒಟ್ಟಾಗಿ ಹಂಚಿಕೊಂಡು ಅನುಭೋಗಿಸಿರಿ' (ಪು. ೧೦೮) ಎಂದ ಕುಂತಿಗೆ ಮಕ್ಕಳು ತಂದುದು ಓರ್ವ ಹೆಣ್ಣನ್ನು ಎಂಬ ಅರಿವು ಮೊದಲೇ ಇತ್ತು. 'ಭಿಕ್ಷೆ ದ್ರೌಪದಿಯೆಂದು ತಿಳಿದುಕೊಂಡೇ' ಹಾಗೆ ಹೇಳಿದ್ದಾಳೆ. ದ್ರೌಪದಿಯ ಅಪೂರ್ವ ಚೆಲುವಿನಿಂದ ತನ್ನ ಮಕ್ಕಳೆಲ್ಲರೂ ಮೋಹಿತರಾದುದನ್ನು, 'ದ್ರೌಪದಿಯನ್ನು ನೋಡಿದ ಕಣ್ಣುಗಳಲ್ಲಿ ಕಾಮವಿದ್ದುದನ್ನು' ಹೆಂಗಸಾದ ಕುಂತಿ ಗಮನಿಸಿದ್ದಾಳೆ. ವನವಾಸ ಕಳೆದು ರಾಜ್ಯಾಧಿಕಾರವನ್ನು ಮರಳಿ ಗಳಿಸುವ ವಿಕ್ರಮವನ್ನು ಉಳಿಸಿಕೊಳ್ಳಲು ಪಾಂಡವರು ಒಗ್ಗಟಾಗಿರುವುದು ಬಹಳ ಅಗತ್ಯವಾಗಿತ್ತು. ತನ್ನ

ಮಕ್ಕಳನ್ನು ಏಕಸೂತ್ರದಲ್ಲಿ ಉಳಿಸಿಕೊಳ್ಳಲು ಕುಂತಿ ದ್ರೌಪದಿಯ ಚೆಲುವನ್ನು ಬಳಸಿಕೊಳ್ಳುತ್ತಾಳೆ. ಅವಳಿಚ್ಛೆ ಫಲಿಸುತ್ತದೆ ಕೂಡ.

ಬಲಶಾಲಿಗಳಾದ ಭೀಮ ಮತ್ತು ಅರ್ಜುನರು ಕಾಲಾಂತರದಲ್ಲಿ ಯುಧಿಷ್ಠಿರನಿಗೆ ಶತ್ರುಗಳಾಗಬಹುದಾದ ಅಪಾಯವನ್ನು ತಪ್ಪಿಸಲು ಕುಂತಿ ದ್ರೌಪದಿಯನ್ನು ದಾಳವಾಗಿ ಬಳಸಿಕೊಂಡಿದ್ದಾಳೆ ಎಂಬುದು ಅವಳ ಮಾತುಗಳಲ್ಲೇ ಸ್ಪಷ್ಟವಾಗುತ್ತದೆ: "ನೀವು ಐದು ಮಂದಿ ಕೂಡ ಪರಸ್ಪರ ವಿರೋಧಿಸಿ ಬೇರ್ಪಡದೆ ಇದ್ದರೆ ಮಾತ್ರ ಪಾಂಡವರು ಒಂದು ಶಕ್ತಿಯಾಗಬಹುದು. ಐದು ಮಂದಿ ಪಾಂಡವರು ಐಕ್ಯವಾಗಿರುವುದರಲ್ಲಿ ಐದು ಆಕ್ಷೋಹಿಣಿಗಿಂತಲೂ ಹೆಚ್ಚಿನ ಬಲವಿದೆ" (ಪು. ೧೦೭) ದ್ರೌಪದಿಯ ಚೆಲುವಿನಿಂದ ಮೋಹಗೊಂಡ ಯುಧಿಷ್ಠಿರ ಅವಳನ್ನು ಅನುಭವಿಸುವ ಉದ್ದೇಶದಿಂದಲೆ ಅಮ್ಮನ ಮಾತುಗಳು ಶಾಸ್ತ್ರಸಮ್ಮತವೆಂದು ಒಪ್ಪಿಕೊಳ್ಳುತ್ತಾನೆ. ಸಮರ್ಥನೆಗಾಗಿ ಪುರಾಣದ ಸಪ್ತರ್ಷಿಗಳ ಪತ್ನಿ ಜಟಿಲೆಯ ಕಥೆಯನ್ನೂ ನೆನಪಿಸಿಕೊಳ್ಳುತ್ತಾನೆ. ಅಜ್ಞಾತವಾಸದ ಸಂದರ್ಭದಲ್ಲಿ ಅರ್ಜುನನ ನೃತ್ಯಶಿಷ್ಯೆಯಾಗಿದ್ದ ಉತ್ತರೆಯನ್ನು ಅಭಿಮನ್ಯುವಿಗೆ ತಂದುಕೊಳ್ಳುವ ಉಪಾಯವನ್ನು ಕೃಷ್ಣ ಸೂಚಿಸುವಲ್ಲಿಯೂ ರಾಜಕೀಯ ಉದ್ದೇಶವಿದೆ. ಉತ್ತರೆಯ ಮೂಲಕ ಪಾಂಡವರು ವಿರಾಟನಿಗೆ ಹೆಚ್ಚು ಹತ್ತಿರವಾಗಲು ಹಾಗೂ ಮುಂದೆ ಒದಗಬಹುದಾದ ಯುದ್ಧದಲ್ಲಿ ವಿರಾಟನ ದೊಡ್ಡ ಸೈನ್ಯದ ನೆರವನ್ನು ಪಡೆಯಲು ಅನುಕೂಲವಾಗುತ್ತದೆ ಎಂಬುದು ಕೃಷ್ಣನ ದೂರಾಲೋಚನೆ.

ಅಧಿಕಾರದ ನಿರ್ಣಯಕ್ಕಾಗಿ ಪುರುಷರು ನಡೆಸುವ ಯುದ್ಧಗಳಲ್ಲಿ ವಿಧವೆಯರಾಗುವ ಸ್ತ್ರೀಯರ ಬದುಕು ನರಕವಾಗುವುದನ್ನು 'ಭೀಮಾಯಣ' ಕಾದಂಬರಿ ಗುರುತಿಸುತ್ತದೆ. ಕುರುಕ್ಷೇತ್ರ ಯುದ್ಧ ಮುಗಿದ ಬಳಿಕ ಯುದ್ಧದಲ್ಲಿ ಮರಣಿಸಿದ ಗಂಡಸರಿಗೆ ತರ್ಪಣ ಕೊಡುವುದಕ್ಕಾಗಿ ಹೊಳೆಯ ಬಳಿಗೆ ತೆರಳುವ ದುಃಖಿತ ಸ್ತ್ರೀಯರ ಚಿತ್ರಣವೊಂದು ಹೀಗಿದೆ: "ಬಿಳಿಬಟ್ಟೆಯಿಂದ ತಲೆಮರೆಸಿದ ಬಾಲವಿಧವೆಯರು ಮುಂದೆ ನಡೆದರು. ಹಿಂದಿನಿಂದ ವೈಧವ್ಯದ ಸೀಮಂತ ರೇಖೆಯನ್ನು ಮರೆಸಿದ ತರುಣಿಯರು" (ಪು. ೨೫೨) ಗಂಡಂದಿರನ್ನು ಕಳೆದುಕೊಂಡ ಈ ಸ್ತ್ರೀಯರು ಮುಂದಿನ ಸುದೀರ್ಘ ಜೀವಿತವನ್ನು ಒಂಟಿಯಾಗಿ ಕಳೆಯಬೇಕಾಗಿದೆ. ಇಂಥದೇ ಚಿತ್ರಣವೊಂದು 'ನಾನಿನ್ನು ನಿದ್ರಿಸುವೆ' ಕಾದಂಬರಿಯಲ್ಲೂ ಇದ್ದು ಯುದ್ಧದ ಪರಿಣಾಮವಾಗಿ ದುರಂತವಾಗುವ ಸ್ತ್ರೀಬದುಕಿನ ಬಗ್ಗೆ ಗಮನ ಸೆಳೆಯುತ್ತದೆ.

ಕೆ. ಕವಿತ ಅವರು ಬರೆದಿರುವ 'ಮಾಯಾಸೀತೆ' ಪುರಾಣಗಳ ಮೂಲಕ ಸ್ಥಿರೀಕರಿಸಿರುವ 'ಮರ್ಯಾದಾ ಪುರುಷೋತ್ತಮ' ಎನಿಸಿದ ಶ್ರೀರಾಮನ ಕೃತ್ಯಗಳನ್ನು ಸ್ತ್ರೀದೃಷ್ಟಿಯಿಂದ ವಿಶ್ಲೇಷಿಸುತ್ತ ಅವನ ವ್ಯಕ್ತಿತ್ವದ ಶ್ರೇಷ್ಠತೆಯನ್ನು ಒಡೆಯುವ ವಿಶಿಷ್ಟವಾದ ಕೃತಿ. ರಾಮಾಯಣದ ಸೀತೆಯ ಪಡಿಯಚ್ಚಾಗಿರುವ ರೂಪವನ್ನು ಹೊಂದಿ ವನವಾಸದ ಮತ್ತು ಅಶೋಕವನದ ಕಷ್ಟಗಳನ್ನು ಅನುಭವಿಸುವುದಕ್ಕಷ್ಟೇ

ಸೀಮಿತಳಾದ, ಸೀತೆಗೆ ಪರ್ಯಾಯವಾಗಿ ಬಳಕೆಯಾದ ಮಾಯಾಸೀತೆಯ ಪೋಷಣೆ ಮತ್ತು ನಿಯೋಜನೆಯ ಹಿಂದಿನ ರಾಜಕೀಯ ಕ್ರೌರ್ಯವನ್ನು ಬಯಲಿಗೆಳೆಯಲು ಯತ್ನಿಸುತ್ತದೆ.

ರಾಮನ ನಿಜವಾದ ಪತ್ನಿಗೆ ಯಾವುದೇ ಸಂಕಷ್ಟಗಳು ಒದಗದಂತೆ, ಪೂರ್ವನಿರ್ಧರಿತ ರಾಜತಂತ್ರದಂತೆ ಅವಳ ಸ್ಥಾನದಲ್ಲಿ ಬದಲಿ ಸೀತೆಯಾಗಿ ಬಳಕೆಯಾದವಳು ಮುನಿಕನ್ಯೆಯಾದ ಮಾಯೆ. ವನವಾಸ ಮತ್ತು ಲಂಕಾವಾಸದ ಕಷ್ಟಗಳು, ರಾವಣನ ಕಿರುಕುಳ, ಅಶೋಕವನದ ಬವಣೆಗಳನ್ನು ಅನುಭವಿಸಿದ ಮಾಯಾಸೀತೆ ಲೋಕಸುಖಕ್ಕಾಗಿ ತನ್ನ ಸುಖವನ್ನು ತ್ಯಾಗಮಾಡುತ್ತಾಳೆ. ತಾನು ಯಾವತ್ತೂ ರಾಮನ ಪತ್ನಿಯಾಗುವುದು ಸಾಧ್ಯವಿಲ್ಲ ಎಂಬ ಸತ್ಯವನ್ನು ತಿಳಿದಿದ್ದರೂ ಸೀತೆಯಂತೆಯೆ ನಡೆದುಕೊಳ್ಳುತ್ತಾಳೆ.

ರಾಮನ ಪ್ರೀತಿ ಮತ್ತು ದೈವತ್ವದ ಭ್ರಮೆ ಹರಿದ ಬಳಿಕ ತನ್ನ ಬದುಕಿನ ಘಟನೆಗಳನ್ನು ಒಂದೊಂದಾಗಿ ನೆನಪಿಸಿಕೊಳ್ಳುವ ಮಾಯೆಗೆ ಅಶೋಕವನಕ್ಕೆ ಕಳುಹಿಸಿದ ಮಾರುತಿಯ ಮುಖಾಂತರ ರಾಮ ತನ್ನ ಮದುವೆಯುಂಗುರವನ್ನು ಉಪಾಯವಾಗಿ ಮರಳಿ ಪಡೆದುಕೊಂಡದ್ದು ಅರ್ಥವಾಗುತ್ತದೆ. 'ರಾಜ್ಯದ ಭದ್ರತೆಗೆ ಸ್ತ್ರೀದ್ರೋಹ ಅನಿವಾರ್ಯವೆಂದು ಮನುಮಹಾರಾಜರು ವಿಧಿಸಿರಲಿಕ್ಕಿಲ್ಲ' ಎಂದುಕೊಳ್ಳುತ್ತಾಳೆ. ಮನುಸ್ಮೃತಿಯಲ್ಲಿ ಇಲ್ಲದ ಸ್ತ್ರೀಶೋಷಣೆಯನ್ನು ಪುರುಷರು ತಮ್ಮ ಸ್ವಾರ್ಥಕ್ಕಾಗಿ ವ್ಯವಸ್ಥೆಯಲ್ಲಿ ತುರುಕಿರುವುದನ್ನು ಅರ್ಥಮಾಡಿಕೊಳ್ಳುತ್ತಾಳೆ. ರಾಮನೇ ಉದ್ದೇಶಪೂರ್ವಕವಾಗಿ ಕುಟೀರದ ಮರೆಯಲ್ಲಿ ನಿಂತು 'ಹಾ ಸೀತಾ' ಎಂದು ಕೂಗಿ ಲಕ್ಷ್ಮಣನು ಅಲ್ಲಿಂದ ತೆರಳುವಂತೆಯೂ, ರಾವಣ ತನ್ನನ್ನು ಅಪಹರಿಸುವಂತೆಯೂ ತಂತ್ರ ಮಾಡಿದ್ದಿರಬಹುದು ಎಂದೂ ಆಕೆಗೆ ಅನಿಸುತ್ತದೆ. ಪುರುಷನಿರ್ಮಿತ ವ್ಯವಸ್ಥೆಯ ಸುರಕ್ಷೆಯ ಭ್ರಮೆಯಿಂದ ಹೊರಬಂದ ಮಾಯೆ ಜಾಗೃತ ಸ್ತ್ರೀಯಾಗಿ ರಾಮಾಯಣದಲ್ಲಿ ತನ್ನ 'ಚಹರೆ'ಯನ್ನು ಹುಡುಕುತ್ತಾಳೆ.

ಸೀತೆಯನ್ನು ರಾವಣನ ಸೆರೆಯಿಂದ ಬಿಡಿಸಿ ತನ್ನ ಬಳಿಗೆ ಕರೆಸಿಕೊಂಡ ಶ್ರೀರಾಮ ಭರತ, ಲಕ್ಷ್ಮಣ, ಸುಗ್ರೀವ, ವಿಭೀಷಣ... ಯಾರನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಲು ಆಕೆ ಸ್ವತಂತ್ರೆ ಎಂದುಬಿಡುತ್ತಾನೆ. ರಾಮನಿಂದ ಪ್ರಚೋದಿತಳಾದ ಮಾಯಾಸೀತೆಯ ಇಚ್ಛೆಯಂತೆ ಲಕ್ಷ್ಮಣ ಒಟ್ಟಿದ ಅಗ್ನಿಯನ್ನು ಕಲಂಕ ನಿವಾರಣೆಯ ವಿಶ್ವಾಸದಲ್ಲಿ ಪ್ರವೇಶಿಸಿದ ಮರುಕ್ಷಣ ಮಾಯಾಸೀತೆಯ ಪಾತ್ರದ ನಿರ್ವಹಣೆ ಮುಗಿಯುತ್ತದೆ. ಮಾಯೆಯನ್ನು ಅವಳ ಅರಿವಿಗೇ ಬಾರದಂತೆ ಸ್ಥಳಾಂತರಗೊಳಿಸಿ ನಿಜವಾದ ಸೀತೆಯನ್ನು ಅಲ್ಲಿಗೆ ತರಲಾಗುತ್ತದೆ. ಪಾತ್ರದ ಆಯ್ಕೆಯೆ ಇಲ್ಲದೆ ನಟಿಸಬೇಕಾಗಿ ಬಂದ ಮಾಯಾಸೀತೆಯ ಮನಸ್ಸಿನಲ್ಲಿ ಮೂಡುವ ಸಂದೇಹಗಳು ಪರಂಪರೆಯ ಸ್ತ್ರೀವಿರೋಧಿ ನೀತಿಯ ಕಾಠಿಣ್ಯವನ್ನು ಕಾಣಿಸುವ ಪ್ರಶ್ನೆಗಳಾಗಿವೆ. ರಾಮನ ದೈವತ್ವವನ್ನು ನಿರಾಕರಿಸುವ ಪ್ರಶ್ನೆಗಳಾಗಿವೆ.

ಪುರುಷರ ಅಧಿಕಾರ ಮತ್ತು ಆಸ್ತಿಯ ಲಾಲಸೆಗೆ ಸ್ತ್ರೀಯರನ್ನು ಉಪಯೋಗಿಸಿಕೊಳ್ಳುವುದು ಸಾವಿರಾರು ವರ್ಷಗಳಿಂದ ಸಹಜವೆಂಬಂತೆ ನಡೆದು ಬಂದ ಕ್ರಮವಾಗಿದೆ. ರಾಮ ತನ್ನ ಹೆಸರಾಂತ ವಂಶಕ್ಕೆ ತಗಲಿದ ಕಳಂಕವನ್ನು ನಿವಾರಿಸುವುದಕ್ಕಾಗಿ 'ಸೀತೆಯ ಹೆಸರಿನಲ್ಲಿ' ಮಹಾಯುದ್ಧವನ್ನು ಮಾಡಬೇಕಾಗಿ ಬಂದುದು ತಿಳಿದಾಗ ಸೀತೆಯ ಸ್ಥಾನದಲ್ಲಿರುತ್ತ ಸೀತೆಯೇ ಆಗಿಹೋಗಿರುವ ಮಾಯೆ ಕುಸಿದುಹೋಗುತ್ತಾಳೆ. ರಾವಣನ ವಧೆಗೆ ಆಯುಧವಾಗಿ, ರಾಜಕಾರಣದ ಗೆಲುವಿಗಾಗಿ ಒಬ್ಬಾಕೆಯ ಮುಗ್ಧ ಭಾವನೆಗಳ ಬಲಿಯಾಗಿದೆ. 'ನಿನ್ನ ಕರ್ತವ್ಯ ಮುಗಿಯಿತು. ಮುಂದಕ್ಕೆ ನಿನಗೆ ತಪಸ್ಸು ವಿಧಿಸಲ್ಪಟ್ಟಿದೆ' ಎಂದು ತಂದೆ ಹೇಳಿದಾಗ ಅವಳಿಗೆ ಸತ್ಯದ ಅರಿವಾಗುತ್ತದೆ. ಸತ್ಯವಿಷಯವನ್ನು ತಿಳಿಸದೆ, ಅನುಮತಿಯನ್ನೂ ಕೇಳದೆ ಬಳಸಿಕೊಂಡು, ಉದ್ದೇಶ ಪೂರೈಸಿದ ಬಳಿಕ, ತಪ್ಪೊಪ್ಪಿಗೆಯಾಗಲೀ ಪಶ್ಚಾತ್ತಾಪವಾಗಲೀ ಇಲ್ಲದೆ ರಾಮ ಅವಳನ್ನು ಉಪಾಯವಾಗಿ ತ್ಯಜಿಸಿಬಿಡುತ್ತಾನೆ. ಬದಲಿ ಸೀತೆಯಾಗಿ ತನ್ನ ಪ್ರವೇಶ ಮತ್ತು ನಿರ್ಗಮನ ಎರಡೂ ರಾಮನಿಗೆ ಅರಿವಿದ್ದೇ ನಡೆದಿವೆ ಎಂಬುದು ಮಾಯಾಸೀತೆಗೆ ಅರ್ಥವಾಗುತ್ತದೆ.

ಸೀತಾಪಹರಣದ ಪ್ರಸಂಗದಲ್ಲಿ ಮಾಯಾಸೀತೆ ಒಂದು ದಾಳವಾಗಿ ಬಳಕೆಯಾಗಿದ್ದಾಳೆ. ರಾಕ್ಷಸರ ಮರಣದಿಂದ ವಿಧವೆಯರಾಗಿ, ತಮ್ಮದಲ್ಲದ ತಪ್ಪಿಗೆ ಜೀವಮಾನವಿಡೀ ಆಸರೆಯಿಲ್ಲದೆ ಬದುಕಬೇಕಾದ ಸಾವಿರಾರು ರಾಕ್ಷಸಿಯರಾದರೂ ಅಷ್ಟೇ. ಅಶೋಕವನದಲ್ಲಿ ಅವಳ ಸೇವೆಗೆ ನಿಯೋಜಿತರಾದ ಅಂಗವಿಕಲೆಯರಾದ ರಾಕ್ಷಸಿಯರು ಕೂಡ ಸ್ವ-ಇಚ್ಛೆಯಂತೆ ಬಾಳುವ ಅವಕಾಶವಿಲ್ಲದವರು. ರಾಣೀವಾಸದ ಸೇವೆಗೆಂದೇ ಬೆಳೆಸಲಾಗುವ ಸ್ತ್ರೀಯರನ್ನು ಬಾಲ್ಯದಲ್ಲಿಯೆ ಅಂಗಭೇದ ಮಾಡಿ ಕುರೂಪಿಗಳನ್ನಾಗಿ ಮಾಡುತ್ತಾರೆ. ಬೇಕಾದಷ್ಟು ಮದ್ಯಮಾಂಸಗಳನ್ನು ಅವರಿಗೆ ಉಣಿಸಲಾಗುತ್ತದೆ. ಸಹಜ ಕಾಮನೆಗಳು ಬೆಳೆಯಲು ಅವಕಾಶವೆ ಇಲ್ಲದಂತೆ ನಪುಂಸಕರಾಗಿ, ಒಡೆಯರಿಗೆ ನಿಷ್ಠರಾಗಿ ಬೆಳೆಯುವ ಅವರ ಸೇವೆಯಲ್ಲಿ ಅಂತಃಪುರ ಸುರಕ್ಷಿತವಾಗಿರುತ್ತದೆ. 'ಈ ಕ್ರಮ ಲಂಕೆಗೆ ಮಾತ್ರ ಸೀಮಿತವಲ್ಲ, ಎಲ್ಲ ರಾಜ್ಯಾಡಳಿತಗಳಲ್ಲೂ ಇದು ನಡೆಯುತ್ತದೆ' ಎಂಬುದು ತ್ರಿಜಟೆಯ ಮಾತುಗಳಲ್ಲಿ ತಿಳಿಯುತ್ತದೆ. ಸ್ವರ್ಗದ ನರ್ತಕಿಯರಾದ ಅಪ್ಸರೆಯರಾದರೂ ತನ್ನಂತೆಯೆ ಎಳೆವಯಸ್ಸಿನಲ್ಲಿ ಬೇಕಾದಂತೆ ರೂಪಿಸಲ್ಪಟ್ಟು ಅಧಿಕಾರವರ್ಗದ ಮುಂದೆ ಕುಣಿಯಲು ಬದ್ಧರಾದವರು ಎಂದು ಮಾಯೆ ಯೋಚಿಸುತ್ತಾಳೆ. 'ಸ್ತ್ರೀಪೀಡನ ನನ್ನ ಜತೆಯಲ್ಲೇ ಕೊನೆಗೊಳ್ಳಬೇಕು' ಎಂಬ ಅವಳ ಆಶಯ ಲೇಖಕಿಯ ಆಶಯವೂ ಹೌದು. ಮಾಯಾಸೀತೆಯ ಪ್ರಕರಣದಲ್ಲಿ ಸ್ತ್ರೀಪೀಡನದ ಉದ್ದೇಶವು ಸಂಪೂರ್ಣವಾಗಿ ರಾಜಕೀಯವಾಗಿರುವುದನ್ನು ಗುರುತಿಸಬಹುದು.

೪.೯. ಲಿಂಗ ರಾಜಕಾರಣ: ಸೃಜನತೆಗೆ ನಿರ್ಬಂಧ

ವಾಸ್ತವದಲ್ಲಿ ಪಡೆಯಲಾಗದ ಅನುಭವಗಳನ್ನು ಬರವಣಿಗೆಯಲ್ಲಿ ಪಡೆದುಕೊಳ್ಳುವ, ಮುಖಾಮುಖಿ ಹೇಳಲಾಗದ್ದನ್ನು ಬರೆದು ಹಗುರಾಗುವ, ಪುರುಷರಂತೆಯೆ ವೈವಿಧ್ಯಮಯ ಸಾಹಿತ್ಯವನ್ನು ಓದಿ ತನ್ನ ಚಿಂತನೆಯನ್ನು ಗಟ್ಟಿಮಾಡಿಕೊಳ್ಳುವ ಹೆಣ್ಣಿನ ಪ್ರಯತ್ನಗಳಿಗೆ ಸಮಾಜದಲ್ಲಿ ಬೆಂಬಲವಿಲ್ಲ. ಅವಳು ಯೋಗ್ಯ ಗೃಹಿಣಿಯಾಗಿ ಪತಿಗೂ ಮಕ್ಕಳಿಗೂ ಅನುಕೂಲೆಯಾಗಿ ಸಂಸಾರ ನಡೆಸಿದರೆ ಸಾಕು ಎಂಬುದು ಪುರುಷನಿರ್ಮಿತ ವ್ಯವಸ್ಥೆಯ ನಿರೀಕ್ಷೆಯಾಗಿದೆ. ಮದುವೆಯಾದ ನಂತರ ತನ್ನಲ್ಲಿ ಇರುವ ಪ್ರತಿಭೆಯ ಪೋಷಣೆ ಮತ್ತು ಪ್ರಕಟನೆಗೆ ಸೂಕ್ತ ಸ್ಥಳ ಹಾಗೂ ಅವಕಾಶಗಳನ್ನು ಬಯಸುವ ಸ್ತ್ರೀಯರು ಅದನ್ನು ದಕ್ಕಿಸಿಕೊಳ್ಳುವುದಕ್ಕಾಗಿ ಹೋರಾಡಬೇಕಾಗಿದೆ. ಮಾಡಬೇಕಾದ ಸಾಂಸಾರಿಕ ಕರ್ತವ್ಯಗಳನ್ನೆಲ್ಲ ಮುಗಿಸಿದ ಬಳಿಕವೂ ತನಗಾಗಿ, ತನ್ನ ಕಲಾತ್ಮಕತೆ ಮತ್ತು ಸೃಜನಶೀಲ ಅಭಿವ್ಯಕ್ತಿಗಾಗಿ ಒಂದಿಷ್ಟು ಹೊತ್ತನ್ನು ಮೀಸಲಿಡುವುದು ಸ್ತ್ರೀಗೆ ಕಷ್ಟದ ಕೆಲಸವಾಗಿದೆ. ಪತ್ನಿ ತನ್ನ ಅಂಕೆಯನ್ನು ಮೀರಿ ಶ್ರೇಷ್ಠಳಾಗುವುದು ಪತಿಯ ಅಸ್ತಿತ್ವಕ್ಕೆ ಕಳವಳ, ಕೀಳರಿಮೆಗಳನ್ನು ಉಂಟುಮಾಡುವ ಪ್ರಶ್ನೆಯಾಗಿರುವುದರಿಂದ ಎಲ್ಲ ರೀತಿಯಲ್ಲೂ ಅವಳ ಸೃಜನತೆಯನ್ನು ತಡೆಯುವ ಪ್ರಯತ್ನವನ್ನು ಮಾಡಲಾಗುತ್ತದೆ. ಇದೊಂದು ವ್ಯವಸ್ಥಿತವಾದ ಲಿಂಗ ರಾಜಕಾರಣವಾಗಿದೆ.

ಸಾಮಾನ್ಯವಾಗಿ ಹೆಣ್ಣುಮಕ್ಕಳನ್ನು ಮದುವೆ, ತಾಯ್ತನ... ಇಷ್ಟಕ್ಕೇ ಸೀಮಿತಗೊಳಿಸಿ ಬೆಳೆಸಲಾಗುತ್ತದೆ. ಮದುವೆಗೆ ಮೊದಲು ಸಾಹಿತ್ಯ, ಸಂಗೀತ, ನೃತ್ಯ, ಕಸೂತಿ, ಚಿತ್ರಕಲೆ... ಮುಂತಾಗಿ ಹಲವು ತೆರನಾದ ಆಸಕ್ತಿಗಳನ್ನು ಹೊಂದಿದ್ದ ಪ್ರತಿಭಾವಂತ ಸ್ತ್ರೀಯರು ಮದುವೆಯ ಬಳಿಕ ಅವನ್ನೆಲ್ಲ ಮರೆತು ಮನೆ–ಮಕ್ಕಳ ಜವಾಬ್ದಾರಿಯಲ್ಲಿ ತೊಡಗಿಸಿಕೊಳ್ಳುತ್ತಾರೆ. ತಮ್ಮೊಳಗಿನ ಕಲೆಗಾರಿಕೆಯನ್ನು ಮರೆತುಬಿಡುತ್ತಾರೆ. ಇದಕ್ಕೆ ಭಿನ್ನವಾಗಿ ಓದು, ಬರವಣಿಗೆ, ಲಲಿತಕಲೆಗಳು, ಸಮಾಜಸೇವೆ, ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿ ಸಾಧನೆಗೆ, ಅಭಿವ್ಯಕ್ತಿಗೆ ಅವಕಾಶ ಪಡೆದುಕೊಂಡಿರುವ ಹಾಗೂ ನಿರ್ಬಂಧಗಳನ್ನು ಮೀರುವ ಸ್ತ್ರೀಯರ ಹಲವು ಮಾದರಿಗಳನ್ನು ಕನ್ನಡಕ್ಕೆ ಬಂದಿರುವ ಮಲಯಾಳಂ ಕೃತಿಗಳಲ್ಲಿ ಗುರುತಿಸಬಹುದು.

ಸಾರಾ ಜೋಸೆಫ್ ಅವರು ಬರೆದ 'ಪ್ರತಿಯೊಬ್ಬ ಬರಹಗಾರ್ತಿಯ ಒಳಗೂ' ತನಗೆ ಇಷ್ಟವಾದ ಬರವಣಿಗೆಯನ್ನು ಮುಂದುವರಿಸಿಕೊಂಡು ಹೋಗಲು ಹೆಣ್ಣು ಮಾಡಬೇಕಾದ ತ್ಯಾಗಗಳ ಕುರಿತು ಗಮನ ಸೆಳೆಯುವ ವಿಡಂಬನಾ ಶೈಲಿಯ ನಿರೂಪಣೆಯುಳ್ಳ ಕತೆ. ಕತೆಯ ನಾಯಕಿ ಬರಹಗಾತಿಯಾಗಿದ್ದು ತನ್ನ ಬರೆಹಕ್ಕಾಗಿ ಒಂದಿಷ್ಟು ಸಮಯ ಮತ್ತು ಏಕಾಂತಗಳನ್ನು, ಸಾಹಿತ್ಯದ ಚರ್ಚೆಗಳಲ್ಲಿ ಭಾಗವಹಿಸುವ ಅವಕಾಶವನ್ನು ಬಯಸುತ್ತಾಳೆ. ಪತಿಯ ಮನೆಯಲ್ಲಿ ಅಂಥ ಅವಕಾಶ ದೊರೆಯುವುದಿಲ್ಲ. ಪತಿಯೊಂದಿಗೆ 'ತುಂಬಾ ಜಗಳಗಳ ನಂತರ' ತಾನು ವಾಸವಾಗಿರುವ ಜಾಗ ಬಿಡಲು ನಿರ್ಧರಿಸುತ್ತಾಳೆ. ಪತಿಯ ವಿರೋಧವನ್ನು ಮೀರಿ ತನಗೆ ಪ್ರಿಯಳಾದ 'ಮೇಬಲ್ ಆಂಟಿ'ಯ

ಮನೆಗೆ ಹೊರಡುತ್ತಾಳೆ. ಅವಳಿಗೆ ಶಾಂತತೆ ಮತ್ತು ಸಮಯಗಳ ಅಗತ್ಯವಿದೆ. 'ಬಿಡುಗಡೆಯ ಮೂಲಕ ನನ್ನ ಅಸ್ಮಿತೆಯನ್ನು ಹೊಸದಾಗಿ ಸೃಷ್ಟಿಸಿಕೊಳ್ಳಬೇಕು' ಎಂಬ ಬಯಕೆಯಿದೆ. ಕಟ್ಟಿಹಾಕುವ ಮನೆ ಮತ್ತು ಮಕ್ಕಳಿಂದ ಬಿಡುಗಡೆ ಬೇಕಿದೆ. ಸ್ವತಂತ್ರ ಅನುಭವಕ್ಕಾಗಿ ಪ್ರಯಾಣಿಸುವ, ಆ ಮೂಲಕ ತನ್ನ ಕಾದಂಬರಿಯನ್ನು ಚೆನ್ನಾಗಿ ಬರೆಯುವ ಹಂಬಲವಿದೆ.

ಗಂಡನ ಮನೆಯ ಗೋಡೆಗಳೂ, ಕಿಟಕಿಗಳೂ ಅವಳನ್ನು ಬಿಗಿಯಾಗಿ ಹಿಡಿದು ಕಟ್ಟಲು ಪ್ರಯತ್ನಿಸುತ್ತವೆ. ಅಡುಗೆ ಮನೆ ಮತ್ತು ಊಟದ ಮನೆಯ ನಡುವೆ ಪ್ರತಿಭಟಿಸಿ ಉರುಳಾಡುತ್ತವೆ. ಈ ಚಲಿಸುವ ಗೋಡೆಗಳು ಪತಿಯನ್ನು ಹಿಡಿದು ಬೇಟೆಯಾಡುವ ಬಗ್ಗೆ ಅವಳಿಗೆ ವಿಶ್ವಾಸವಿಲ್ಲ. ಏಕೆಂದರೆ ಅವನ ಮಾಂಸಪೇಶಿಗಳು ಹೆಚ್ಚು ಬಲಯುತವಾಗಿವೆ ಮತ್ತು ಅವನೇ ಹೇಳುವಂತೆ 'ಅವನ ತಲೆಯೊಳಗೆ ಅವಳಲ್ಲಿರುವುದಕ್ಕಿಂತ ಹೆಚ್ಚಿನದಾದ ಏನೋ ಇದೆ.' ಕೊಳೆಯಾದ ತಟ್ಟೆಗಳು ಸಿಂಕ್‌ನಿಂದ ಎದ್ದು ಬಂದು ಮಾತಾಡತೊಡಗುತ್ತವೆ. ಏನಾದರೂ ಕನಸು ಕಾಣಬೇಕೆಂದು ಯೋಚಿಸಿ ಆರಾಮಕುರ್ಚಿಯಲ್ಲಿ ಕುಳಿತರೆ ಗಂಡ ಬಳಸಿ ಎಸೆದ ಒಳ ಉಡುಪುಗಳ ನಾತ ಮೂಗಿಗೆ ಬಡಿಯುತ್ತದೆ. ಒಂದರ ಮೇಲೊಂದರಂತೆ ಅವಳ ಮುಖ, ಕತ್ತು, ಎದೆಗಳ ಮೇಲೆ ಬಿದ್ದು ಉಸಿರುಗಟ್ಟಿಸುತ್ತವೆ. ಅಪಮಾನದ ಖಡ್ಗವೊಂದು ಎದೆಯನ್ನು ಇರಿಯುತ್ತದೆ. ತಾಯ್ತನವು ತನ್ನ ಕತ್ತಿನ ಸುತ್ತ ಹಿಸುಕುವ ಕಬ್ಬಿಣದ ಸಂಕೋಲೆಯಾಗಿರುವುದನ್ನು ಅವಳು ಗುರುತಿಸಿದ್ದಾಳೆ. ಆ ಸಂಕೋಲೆಯನ್ನು ಮುರಿಯಬೇಕೆಂದೂ ಬಯಸಿದ್ದಾಳೆ. "ನಾನು ಮಕ್ಕಳನ್ನು ಏನು ಮಾಡುವ ಯೋಜನೆ ಹಾಕಿದ್ದೇನೆಂದು ಪುರುಷೋತ್ತಮ ಖಂಡಿತ ಕೇಳುತ್ತಾನೆ. ಈ ಪ್ರಶ್ನೆಯಲ್ಲಿ ಅಸಹಾಯಕತೆಯ ಭಾವಕ್ಕಿಂತಲೂ ಒಂದು ಆಕ್ರಮಣದ ಧ್ವನಿಯಿರುವುದು ನನ್ನ ಗಮನಕ್ಕೆ ಬಂದಿದೆ ಎಂಬುದನ್ನು ಪುರುಷೋತ್ತಮನಿಗೆ ಅರ್ಥಮಾಡಿಸಬೇಕು" (ಪು. ೧೧, ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು) ಎಂದು ನಿರ್ಧರಿಸುತ್ತಾಳೆ.

ಮಹಿಳೆಯರಿಗೆ ಸ್ವತಂತ್ರ ಹಾಗೂ ಸುರಕ್ಷಿತ ಪ್ರಯಾಣಗಳನ್ನು ಸಮಾಜವು ನಿರಾಕರಿಸಿರುವುದನ್ನು ಅವಳು ಬಲ್ಲಳು: 'ನಾನು ಹುಟ್ಟಿದ ಕೂಡಲೇ ತಾಯಿ ನನಗೆಂದೇ ವಿಶೇಷವಾಗಿ ಮಾಡಿಸಿಟ್ಟ ಪಂಚಲೋಹದ ಬಳೆಯನ್ನು ಕಾಲಿಗೆ ತೂರಿಸಿಟ್ಟಿದ್ದಳು. ಮುಂದಕ್ಕೆ ಪಂಚಲೋಹದ ಈ ಬಳೆಯು ನನ್ನ ಮಾಂಸದ ಒಳಗೆ ಕುಳಿತು ಇನ್ನೂ ಹಲವಾರು ಅಂಥದೇ ಬಳೆಗಳ ಮೊಟ್ಟೆಗಳಾಗಿ ಹೆಚ್ಚಾಗುತ್ತ, ಕಾಲುಗಳನ್ನು ಇಳಿಬಿಟ್ಟು ಕುಳಿತುಕೊಂಡಾಗಲೆಲ್ಲ ಈ ಬಳೆಗಳು ತಮ್ಮ ಅಸ್ತಿತ್ವವನ್ನು ಘೋಷಿಸುತ್ತ ಅಸಹನೀಯ ನೋವಿನ ಕೂಪಕ್ಕೆ ತಳ್ಳುತ್ತಿದ್ದವು.' (ಪು. ೧೨, ಅದೇ) ಕವಿಮಿತ್ರರ ಚರ್ಚೆಗಳಲ್ಲಿ ಭಾಗವಹಿಸುವ ಇಚ್ಛೆಯಿಂದ ನಿಂತು ಆಲಿಸಿದರೆ ಅವರು 'ತಮ್ಮ ಬಂಗಾರದ ರೆಕ್ಕೆಗಳನ್ನು ಬಿಡಿಸಿ, ತಡವಾಗುತ್ತಿದೆ ಎಂದು ಸೂಚಿಸುತ್ತ, ಬಹಳ ಔಪಚಾರಿಕವಾಗಿ ನನ್ನನ್ನು ಮನೆಯತನಕ ಕರೆತಂದು ಬಿಡುವ ಮಟ್ಟಕ್ಕೆ ಇಳಿಯುತ್ತಿದ್ದರು.' (ಪು. ೧೩, ಅದೇ) ಹೆಣ್ಣು ವೈಚಾರಿಕವಾಗಿ ಬೆಳೆಯಲು, ನಿರಾಳ ಸಂಚರಿಸಲು

ಸಮಾಜ ಅವಕಾಶ ಕೊಡುವುದಿಲ್ಲ. ಸದಾ ಅವಳನ್ನು ರಕ್ಷಿಸುತ್ತಾ ಸ್ವತಃ ಅವಳಿಗೇ ತಾನು ದುರ್ಬಲೆ, ನಿಶ್ಶಕ್ತೆ ಅನಿಸುವಂತೆ ಮಾಡುತ್ತದೆ.

ಕತೆಗಾರ್ತಿ ಇಷ್ಟಪಡುವ ಮತ್ತು 'ಅಂಥದೊಂದು ಹೆಸರಿನ ಆಂಟಿ ಅವಳಿಗೆ ಇಲ್ಲವೇ ಇಲ್ಲ' ಎಂದು ಅವಳ ಗಂಡ ಲೇವಡಿ ಮಾಡುವ ಮೇಬಲ್ ಆಂಟಿಯ ಮನೆಯಾದರೆ 'ಸರಳು, ಚಿಲಕ, ಗೋಡೆಗಳಿಲ್ಲದ ಮನೆಯಾಗಿದೆ. ಅಲ್ಲಿ ರಕ್ತನಾಳಗಳಿವೆ, ತುಡಿಯುವ ನರಗಳ ಗುಂಪುಗಳಿವೆ.' ಈ ಬರಹಗಾತಿಯ ಯೋಜನೆ ಕೇವಲ ಮೇಬಲ್ ಆಂಟಿಯ ಮನೆಯತನಕ ಮಾತ್ರ ಹೋಗುವುದಲ್ಲ. ಹೊರಗಿನ ದೃಶ್ಯಗಳನ್ನು ನೋಡಿ ತಿಳಿದುಕೊಳ್ಳುವ ಉದ್ದೇಶದಿಂದ ಮುಕ್ತವಾಗಿ ಪ್ರಯಾಣ ಮಾಡುವ ಬಯಕೆ ಹೊಂದಿದ್ದಾಳೆ. 'ಯಾರ ನಿರ್ಬಂಧವೂ ಇಲ್ಲದೆ ನಿರಾಳವಾಗಿ ಸಂಚರಿಸುತ್ತ ಉಸಿರಾಡುವ ಗಾಳಿಯು ತನ್ನ ಕೃತಿಯನ್ನು ಸ್ವತಂತ್ರವಾಗಿ ರೂಪಿಸುತ್ತದೆ' ಎಂದಾಕೆ ನಂಬಿದ್ದಾಳೆ. ಸ್ತ್ರೀಯರು ಬರೆದುದನ್ನು ಅಡುಗೆಮನೆಯ ಸಾಹಿತ್ಯವೆಂದು, ಅದರಲ್ಲಿ ಪುರುಷರ ಬರಹಗಳಲ್ಲಿರುವ ಜೀವನಾನುಭವಗಳು ಇಲ್ಲವೆಂದು ವಿಮರ್ಶಿಸುವವರ ಬಗ್ಗೆ ಈ ಬರಹಗಾರ್ತಿಗೆ ತಿಳಿದಿದೆ. ಆದ್ದರಿಂದ ತನ್ನ ಜೀವನಾನುಭವವನ್ನು ಪುರುಷರಂತೆ ವಿಸ್ತಾರವಾಗಿಸಿಕೊಳ್ಳುವುದಕ್ಕಾಗಿ ಪ್ರಯಾಣ ಮಾಡುವ ಉದ್ದೇಶವನ್ನು ಹೊಂದಿದ್ದಾಳೆ. ತನ್ನ ಪ್ರಯಾಣದ ಖರ್ಚಿಗೆ ಅವಳಿಗೆ ಹಣದ ಸಮಸ್ಯೆಯಿದೆ. ಮೇಬಲ್ ಆಂಟಿಯಲ್ಲಿ ತನ್ನ ಪ್ರಯಾಣಕ್ಕೆ ನೀಡಲು ಹಣವಿದೆಯೆ ಎಂಬುದೂ ಅವಳಿಗೆ ತಿಳಿದಿಲ್ಲ. ಆದರೂ ತನಗಾಗಿ ಬದುಕಬಯಸಿ ಪತಿಯ ಮನೆಯಿಂದ ಹೊರಡುವ ಧೈರ್ಯಮಾಡಿದ್ದಾಳೆ.

ಈ ಬರಹಗಾರ್ತಿ ಪತಿಯ ಎಲ್ಲ ಉಪಾಯಗಳನ್ನು, ತಾಯ್ತನದ ಕರ್ತವ್ಯಗಳನ್ನೆಲ್ಲ ನೆನಪಿಸಿ ಕಟ್ಟಿಹಾಕುವ ಪ್ರಯತ್ನವನ್ನು ಮೀರಿ, ಮನೆಯೊಳಗಿಂದ ನೆಗೆದು ಗೇಟುದಾಟಿ, ಕೈಬೀಸಿ ಹೊರಗೆ ಹೋಗುವ ಸನ್ನಿವೇಶವನ್ನು ಲೇಖಕಿ ತುಂಬ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಉತ್ತಮಪುರುಷ ನಿರೂಪಣೆಯಲ್ಲಿ ಅವಳ ಬಿಡುಗಡೆಯ ಸಂತಸವನ್ನು ಕಾಣಿಸಿದ್ದಾರೆ "ನನ್ನ ತೋಳುಗಳು ಕ್ಷಿತಿಜವನ್ನು ಸ್ಪರ್ಶಿಸಿ ಹಿಂದೆ ಬಂದವು. ನನ್ನ ಕೂದಲ ಎಳೆಗಳನ್ನು ಮತ್ತು ಉಡುಪಿನ ಅಂಚನ್ನು ರೆಕ್ಕೆಯುಳ್ಳ ಒಂದು ಗಾಳಿ ನಡುಗಿಸಿತು. ನನ್ನ ಮುಂಗುರುಳು ಸಡಿಲಾಗಿ ಮೇಲೆ ಹಾರಿ ಆಕಾಶವನ್ನು ಮುಟ್ಟಿತು. ನನ್ನ ಲಂಗ ಸುರುಳಿಯಾಗಿ ಸುತ್ತುತ್ತಾ ಭೂಮಿಯನ್ನು ಆವರಿಸಿಕೊಂಡಿತು." (ಪು. ೧೫, ಅದೇ)

ಕೆ.ಪಿ.ಸುಧೀರಾ ಬರೆದ 'ಅವಳ ಮನೆ' ಕಥೆಯ ಉದ್ಯೋಗಸ್ಥ ಗೃಹಿಣಿಗೆ ಬರೆಯುವ ತುಡಿತ. ಆದರೆ ಮನೆಯಲ್ಲಿ ಗಂಡನಿಂದ ಅದಕ್ಕೆ ವಿರೋಧವಿದೆ. ತನ್ನದೇ ಆದ ಒಂದು ದೊಡ್ಡ ಮನೆಯನ್ನು ಕಟ್ಟುವುದಕ್ಕಾಗಿ ಅವಳು ಭಾರ ಹೊರುವ ಕತ್ತೆಯಂತೆ ದುಡಿದಿದ್ದಾಳೆ. ಗಂಡ, ಮಕ್ಕಳು, ಬಂಧು–ಬಳಗದೆಡೆಗಿನ ಎಲ್ಲ ಕರ್ತವ್ಯಗಳನ್ನೂ ವ್ಯತ್ಯಯವಿಲ್ಲದೆ ಪೂರೈಸಿದ್ದಾಳೆ. ಇಷ್ಟೆಲ್ಲ ಮಾಡಿಯೂ ಅವಳ ಪಾಲಿಗೆ ಸಿಕ್ಕಿದ ಸಂಪಾದನೆಯೆಂದರೆ ಕಣ್ಣೀರು ಮಾತ್ರವಾಗಿದೆ. ಇಂಥ ಒತ್ತಡ, ನೋವಿನ ಮಧ್ಯೆ ಆಕೆ

ಬರೆದು ಹಗುರಾಗಬಯಸಿದ್ದಾಳೆ. ಆದರೆ ಅವಳಿಗಾಗಿ ಒಂದು ಬರೆಯುವ ಕೋಣೆ ಆ ಮನೆಯಲ್ಲಿಲ್ಲ. ಬರೆಯುವುದಕ್ಕೆ ಒಂದು ಟೇಬಲ್ ಕೂಡ ಇರಲಿಲ್ಲ. ಮಲಗುವ ಕೋಣೆಯ ಮೂಲೆಯಲ್ಲಿರುವ ಬೆತ್ತದ ಕುರ್ಚಿಯಲ್ಲಿ ಮರದ ಹಲಗೆಯನ್ನಿಟ್ಟುಕೊಂಡು ಅವಳು ಬರೆಯುತ್ತಿದ್ದಳು. ಅದೂ ಗಂಡ ತಡವಾಗಿ ಮನೆಗೆ ಬರುವ ದಿನಗಳಲ್ಲಿ ಮಾತ್ರ. ಬರೆವ ಹಲಗೆ ಮತ್ತು ಹಾಳೆಗಳನ್ನು ಪತಿಗೆ ಕಾಣದಂತೆ ಮಂಚದಡಿಯಲ್ಲಿ ಅಡಗಿಸಿಡುತ್ತಿದ್ದಳು. 'ನನ್ನ ಮುಂದೆ ಕೂತು ಅವಳು ಬರೆದೇ ಇಲ್ಲ' ಎಂದು ಒಪ್ಪಿಕೊಳ್ಳುವ ಪತಿ ಒಂದು ಮಧ್ಯರಾತ್ರಿ ಎದ್ದಾಗ ಪತ್ನಿ ಪಕ್ಕದಲ್ಲಿ ಇರಲಿಲ್ಲ. 'ಯಾರಾದರೂ ಅಭಿಮಾನಿ ಯುವಕನೊಂದಿಗೆ ಓಡಿಹೋಗಿರಬಹುದೇ' ಎಂಬ ಸಂಶಯದಿಂದ ಅವಳನ್ನು ಹುಡುಕಿದಾಗ ಮನೆಯ ಕೆಳ ಅಂತಸ್ತಿನಲ್ಲಿ ಯಾರಿಗೂ ಬೇಡದ ವಸ್ತುಗಳನ್ನು ಬಿಸಾಕುತ್ತಿದ್ದ ಕೋಣೆಯಲ್ಲಿ ಒಂದು ಮೇಣದ ಬತ್ತಿ ಉರಿಸಿಟ್ಟು ಅವಳು ಬರೆಯುತ್ತಿರುತ್ತಾಳೆ. ಕದ್ದುಮುಚ್ಚಿ ಬರೆಯುತ್ತಿರುವ ಪತ್ನಿಯನ್ನು ಆಗಲೇ ಮನೆಯಿಂದ ಹೊರಹಾಕುವ ಬಯಕೆಯಾದರೂ ಮಗಳ ನೆನಪಾಗಿ ಸುಮ್ಮನಾಗಿದ್ದಾನೆ.

ಈ ಕಥೆಗಾರ್ತಿಗೆ ಬರೆಹವೇ ಅಸ್ಮಿತೆಯಾಗಿದೆ. ಪತಿಯನ್ನು ಪ್ರತಿಭಟಿಸದೆ, ಹಕ್ಕುಗಳಿಗಾಗಿ ಹೋರಾಡದೆ, ಕಾವ್ಯರಚನೆಯಲ್ಲಿ ಬಿಡುಗಡೆ ಕಂಡುಕೊಂಡಿದ್ದಾಳೆ. ಅದರಲ್ಲಿ ಯಶಸ್ಸನ್ನೂ ಪಡೆಯುತ್ತಾಳೆ. ಹಲವು ಕೃತಿಗಳನ್ನು ಬರೆದು ಪ್ರಕಟಿಸಿ ಒಳ್ಳೆಯ ರಾಯಲ್ಟಿಯನ್ನೂ, ಕೀರ್ತಿಯನ್ನೂ ಗಳಿಸಿದ್ದಾಳೆ. ಆದರೆ ಪತಿಗೆ ಅವಳು ಬರೆಯುವುದು ಇಷ್ಟವಿಲ್ಲ. ಅವಳ ಬರೆಹವನ್ನೂ ಖ್ಯಾತಿಯನ್ನೂ ದ್ವೇಷಿಸುತ್ತಾನೆ. 'ಅವಳು ಯಾಕೆ ಕವಿತೆ ಬರೀಬೇಕು? ಅವಳಿಗೊಂದು ಒಳ್ಳೆಯ ಮನೆಯಿಲ್ಲವೆ? ಗಂಡನಿಲ್ಲವೆ? ಮಗಳಿಲ್ಲವೆ? ಅವಳು ಬರೆಯದಿದ್ದರೆ ಈ ಲೋಕ ಅಂತ್ಯವಾಗಿ ಬಿಡುತ್ತದೆಯೆ?' (ಪು. ೮೮, ನೆರಳು ಮರಗಳಿಲ್ಲದ ದಾರಿ) ಇಂಥ ದ್ವೇಷ, ಭಯ, ವಿರೋಧಗಳ ನಡುವೆಯೂ ಅವಳು ಬರೆದೇ ಬರೆಯುತ್ತಾಳೆ ಮತ್ತು ಆ ಕೃತಿಗಳನ್ನು ಪ್ರಕಟಿಸುತ್ತಾಳೆ ಕೂಡ. ಇಂಥ ಒತ್ತಡದಲ್ಲಿ ಅವಳು ಬರೆಯುತ್ತಿದ್ದ ಕವಿತೆಗಳಲ್ಲಿ ಎಂದೂ ಬತ್ತದ ಮನುಷ್ಯ ಪ್ರೀತಿ ತುಡಿಯುತ್ತಿರುತ್ತದೆ.

ಕೃಷ್ಣನ್ ಕುಟ್ಟಿ ಅವರು ಬರೆದ 'ಗ್ರೀನ್ ಅಂಡ್ ರೆಡ್ ಚಿಲ್ಲಿ ಆನ್ ತಂಬುರ್ಬುಚ್ಚಿ' ಎಂಬ ಕಥೆ ಅಡುಗೆ ಮಾಡುವ ಸಾಮರ್ಥ್ಯವನ್ನೇ ತನ್ನ ಶಕ್ತಿಯನ್ನಾಗಿ ಬಳಸಿ ದೊಡ್ಡ ಮೊತ್ತದ ಬಹುಮಾನ ಗೆದ್ದು ಪತಿಯ ಮೆಚ್ಚುಗೆಗೆ ಪಾತ್ರಳಾಗುವ ಮಾಲತಿ ಎಂಬ ಸಾಮಾನ್ಯ ಗೃಹಿಣಿಯ ಕುರಿತಾದದ್ದು. ಮಾಲತಿ ಹೆಚ್ಚು ಓದಿದವಳಲ್ಲ. ಆ ಕಾರಣಕ್ಕೆ ಮಾರ್ಕ್ಸ್‌ವಾದಿ ಮೇಷ್ಟ್ರಾಗಿದ್ದ ಪತಿಯಿಂದಲೂ ಕಾನ್ವೆಂಟ್ ಶಾಲೆಗೆ ಹೋಗುವ ಮಕ್ಕಳಿಂದಲೂ ಲೋಕಜ್ಞಾನವಿಲ್ಲದವಳೆಂದೂ, ದಡ್ಡ ಶಿಖಾಮಣಿ ಎಂದೂ ಗ್ರಹಿಸಲ್ಪಟ್ಟವಳು. ಗಂಡ ಮಕ್ಕಳು ಮನೆಯಿಂದ ಹೋದ ಬಳಿಕ ಟಿ.ವಿ. ನೋಡುತ್ತ ಕಾಲಕಳೆಯುವವಳು. ಟಿ.ವಿ. ಯಿಂದ ಹೊಸ ಅಡುಗೆ, ಹೊಸ ಫ್ಯಾಶನ್ ವಿನ್ಯಾಸಗಳನ್ನು ಕಲಿತು ಮನೆಯಲ್ಲಿ ಪ್ರಯೋಗಿಸುತ್ತಾಳೆ. ಟಿ.ವಿ. ರಿಯಾಲಿಟಿ ಶೋದಲ್ಲಿ ನಡೆದ ಪಾಕಶಾಸ್ತ್ರ ಸ್ಪರ್ಧೆಗೆ ಆಯ್ಕೆಯಾಗಿ ಐದು ಸುತ್ತುಗಳಲ್ಲೂ ಗೆದ್ದು

ಅಂತಿಮವಾಗಿ ಅತ್ತೆ ಮಾಡುತ್ತಿದ್ದ ವಿಧಾನದಲ್ಲಿ ತಂಬುಳ್ಚುಚ್ಚಿ ಬಳಸಿ ವಿಶಿಷ್ಟ ಖಾದ್ಯ ತಯಾರಿಸಿ ವಿಜಯಿಯಾಗುತ್ತಾಳೆ. ವಿಚಾರವಾದಿಯೂ, ಸಾಹಿತ್ಯ ಓದಿಕೊಂಡವನೂ ಆಗಿರುವ ಗಂಡ ಜೀವಮಾನವಿಡೀ ದುಡಿದರೂ ಸಂಪಾದಿಸಲಾಗದ ಒಂದು ಹೊಸ ಫ್ಲಾಟು, ಕಾರು ಮತ್ತು ನೂರು ಪವನು ಬಂಗಾರ ಗೆದ್ದು ಗಂಡನ ಕೈಲಿ ಸದಾ ಪಿ.ಎಂ. (ಪೆದ್ದು ಮುಂಡೇದು) ಎಂದು ಕರೆಸಿಕೊಳ್ಳುವ ತನ್ನ ಪ್ರತಿಭೆಯನ್ನು ಸಾಬೀತುಪಡಿಸುತ್ತಾಳೆ.

ಹಾಗೆ ನೋಡಿದರೆ ಗಂಡ ಮಕ್ಕಳು ಪೆದ್ದು ಎಂದು ಕರೆದರೆ ವಿರೋಧಿಸದೆ ಸುಮ್ಮನಿರುವ ಮಾಲತಿಗೆ ಸ್ವಂತ ಅಭಿಪ್ರಾಯಗಳಿವೆ. 'ಗೃಹಿಣಿಯೊಬ್ಬಳ ಅಡುಗೆಯ ರುಚಿಯಾಗುವುದು ಪ್ರೀತಿಯೆಂಬ ದಿವ್ಯವಾದ ಭಾವನೆಯ ಮೂಲಕ' ಎಂಬ ಟಿ.ವಿ. ನಿರೂಪಕಿಯ ಮಾತು ಮಾಲತಿಗೆ ಒಪ್ಪಿಗೆಯಿಲ್ಲ. ಆದರೆ 'ಸಂಗೀತದಂತೆ, ಬರವಣಿಗೆಯಂತೆ ಅಡುಗೆ ಎಂಬುದು ಕೂಡಾ ಒಂದು ಕಲೆ. ಇದೊಂದು ಕಲಾಸೃಷ್ಟಿ. ಇದು ಅಡುಗೆಮನೆಯ ಕವಿತೆಯೇ ಸರಿ' ಎಂಬ ತೀರ್ಪುಗಾರರ ಅಭಿಪ್ರಾಯ ಅವಳ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಅಡುಗೆ ಸ್ಪರ್ಧೆಯ ನಡುವೆ ತೋರಿಸಿದ 'ಕಾಮಿಡಿ ಶೋ'ದಲ್ಲಿ ಅಡುಗೆ ವಿಷಯದಲ್ಲಿ ಜಗಳವಾಡುತ್ತ ಗಂಡ ಹೊಡೆದಾಗ 'ಹೆಂಡತಿ ತಿರುಗಿ ಹೊಡೆಯುವುದನ್ನು' ಇಷ್ಟಪಡುತ್ತಾಳೆ. 'ಹೆಂಡತಿಯೆಂದರೆ ಹೀಗಿರಬೇಕು' ಎಂದುಕೊಳ್ಳುತ್ತಾಳೆ. ತಾನು ಹಾಗೆ ಮಾಡುವವಳಲ್ಲವಾದರೂ ಹೆಣ್ಣಿಗೂ ತಿರುಗಿ ಹೊಡೆಯುವ ಅವಕಾಶವಿರಬೇಕೆಂದು ಅವಳು ಬಯಸುವುದು ವಿಶೇಷವಾಗಿದೆ.

ರೇಖಾ ಕೆ. ಅವರು ಬರೆದ 'ಓಟಗಾರ್ತಿ' ಎಂಬ ಕತೆಯ ಶ್ರೀಜಾಳಿಗೆ ತಾಯ್ತನವು ತನ್ನ ಕ್ರೀಡಾಭವಿಷ್ಯವನ್ನು ನಾಶ ಮಾಡಿದ ಬಗ್ಗೆ ಖೇದವಿದೆ. ಒಳ್ಳೆಯ ಅಥ್ಲೆಟ್ ಆಗಿದ್ದವಳು ನಿರೀಕ್ಷಿತವಾಗಿ ಒದಗಿಬಂದ ತಾಯ್ತನದ ಕಾರಣಕ್ಕಾಗಿ ಕ್ರೀಡೆಯಿಂದ ವಿಮುಖಳಾಗಿ ಗೃಹಿಣಿಯಾಗಬೇಕಾಯಿತು. ಆದ್ದರಿಂದಲೆ 'ಮಗು ಹೊಟ್ಟೆಯೊಳಗೆ ಕುಣಿದರೂ ಶ್ರೀಜಾಳಿಗೆ ಅವನ ಮೇಲೆ ಪ್ರೀತಿ ಉಂಟಾಗಲಿಲ್ಲ.' ಸಾಲದಂತೆ ಎಷ್ಟಾದರೂ ಕೇವಲ ಹೆಂಗಸಾಗಿರುವ ಅವಳ ಬಗ್ಗೆ ಗಂಡನಿಗೆ ಅಸಡ್ಡೆ. 'ನೀನೊಬ್ಬಳು ಮಂಡೂಕ, ಮನೆಗೂ ಸಾಲದು, ಮಗು ನೋಡಿಕೊಳ್ಳಲೂ ಸಾಲದು, ನಿನ್ನ ದೇಹವನ್ನು ಮುಟ್ಟಿದಲ್ಲೆಲ್ಲ ಮಸಲ್‌ಗಳು, ಹಾಸಿಗೆಯಲ್ಲೂ ಉಪಯೋಗವಿಲ್ಲ' ಹೀಗೆಲ್ಲ ಅವಳ ಪತಿ ಹೀಯಾಳಿಸುತ್ತಿರುತ್ತಾನೆ. ಅಪ್ಪನ ನೆರಳಿನಂತಿರುವ ಮಗನೂ ಇತ್ತೀಚೆಗೆ ಅವಳೊಂದಿಗೆ ಅನಾದರದಿಂದ ವರ್ತಿಸುತ್ತಿರುವುದು ಅವಳನ್ನು ಹೆಚ್ಚು ನೋಯಿಸುತ್ತದೆ. ಇಬ್ಬರೂ ಸೇರಿಕೊಂಡು ಜೋರಾಗಿ ನಕ್ಕು ಅವಳನ್ನು ಅವಮಾನಿಸುತ್ತಿರುತ್ತಾರೆ.

ವ್ಯಾಯಾಮವಿಲ್ಲದೆ ಜಡ್ಡುಗಟ್ಟಿದ್ದ ಅವಳ ದೇಹವು ಪತಿಯ ದೋಷಾರೋಪಣೆಯನ್ನು ಕೇಳುತ್ತ ಕೇಳುತ್ತ ವರ್ಷಗಳ ನಂತರ 'ಓರ್ವ ಅಥ್ಲೆಟ್‌ನ ಛಲದಿಂದ' ಎಚ್ಚರಗೊಳ್ಳುತ್ತದೆ. 'ಆತ ಸಿದ್ಧಪಡಿಸಿಕೊಟ್ಟ ಜೀವನದ ಟ್ರ್ಯಾಕ್ ಅನ್ನು ಬಿಟ್ಟು ಓಡಬೇಕೆಂದು' ಹಲವು ಬಾರಿ ಅವಳಿಗೆ ನೆನಪು ಮಾಡಿಕೊಡುತ್ತದೆ. 'ಅವನ ಮಾತುಗಳ ಮೊನಚಾದ ಬಾಣಗಳ ಅಪಾಯಗಳನ್ನು ಹಾರಿ ದಾಟಿ ವಿಜಯಪೀಠದಲ್ಲಿ ನಿಲ್ಲುವ ಒಂದು

ದಿನಕ್ಕಾಗಿ' ಅವಳು ಹಂಬಲಿಸುತ್ತಿದ್ದಾಳೆ. 'ನಿನಗೊಂದು ಬಾಳು ಕೊಡುತ್ತೇನೆಂದೆಣಿಸಿ ನಿನ್ನನ್ನು ಮದುವೆಯಾದೆ. ರಕ್ಷಿಸಲಿಕ್ಕೆ ಅಂತ' ಅವನ ಈ ನುಡಿಗಳನ್ನು ಗಟ್ಟಿಯಾಗಿ ಪ್ರಶ್ನಿಸುವ ಬಲವಾದ ಇಚ್ಛೆ ಹೊಂದಿದ್ದಾಳೆ. ಟಿ.ವಿ.ಯ ಮುಂದೆ ಒಬ್ಬ ಯಜಮಾನನಂತೆ ಹೂಂಗುಡುತ್ತ ಚಾನಲ್ಲುಗಳನ್ನು ಬದಲಾಯಿಸುವ ಮೋಹನ ಹಾಗೂ ಹೋಂವರ್ಕ್ ಮಾಡುತ್ತಿರುವ ಮಗ ಈ ಇಬ್ಬರ ಸಾನಿಧ್ಯವೂ ತನ್ನ ಕಣ್ಣಿಗೆ ಕಾಣದಂತೆ ಇರಲು ಆಕೆ ಪ್ರಯತ್ನಪಡುವುದು ಬಹಳ ಅರ್ಥಪೂರ್ಣವಾಗಿದೆ. ಕಥೆಯ ಕೊನೆಯಲ್ಲಿ ಶ್ರೀಜಾ ಪತಿಯ ಮೂದಲಿಕೆಯ ಮಾತು ಮುಗಿಯುವುದಕ್ಕೆ ಮುನ್ನವೇ 'ಹೂದಾನಿಯ ಹೂಗಳನ್ನು ಎಳೆದು ಬಿಸಾಕಿ ಹೂದಾನಿಯನ್ನು ಒಡೆದು ಎರಡು ತುಂಡು ಮಾಡಿದಳು. ದೊಡ್ಡದೊಂದು ಓಟಕ್ಕೆ ಸಿದ್ಧತೆ ನಡೆಸುತ್ತ ಟ್ರ್ಯಾಕ್‌ನಲ್ಲಿ ಬಾಗಿ ನಿಂತಳು' (ಪು. ೧೭೦, ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು) ಎಂಬ ಸಾಲುಗಳು ಅವಳ ಸಾತ್ವಿಕ ಪ್ರತಿರೋಧವನ್ನು ಸಂಕೇತಿಸುವ ಶಕ್ತ ಪ್ರತಿಮೆಗಳಾಗಿವೆ. ತನ್ನ ಪರಿಶ್ರಮದ ಕ್ಷೇತ್ರವಾಗಿರುವ ಕ್ರೀಡೆಯಲ್ಲಿ ಸಾಧನೆಯನ್ನು ಮಾಡುವ ಮೂಲಕ ತನ್ನ ಪತಿ ಮಾಡಿರುವ ಅವಮಾನಕ್ಕೆ ಉತ್ತರಿಸುವ ಸಂಕಲ್ಪವನ್ನು ಮಾಡಿದ್ದಾಳೆ. ಆ ಮೂಲಕ ತಾನು ಬಯಸುವ ಸ್ಪೇಸ್ ಅನ್ನು ದೊರಕಿಸಿಕೊಳ್ಳುವ ಪ್ರಯತ್ನದಲ್ಲಿದ್ದಾಳೆ.

ಶಾಹಿನಾ ಇ.ಕೆ. ಅವರು ಬರೆದ 'ಕಲಾವಿದೆ' ಎಂಬ ಕತೆಯ ಫಿಸಾ ಅದ್ಭುತ ಚಿತ್ರಗಾತಿ. ಹೆಂಡತಿ ಬರೆಯುವ ಚಿತ್ರಗಳನ್ನು ಅರ್ಥಮಾಡಿಕೊಳ್ಳಲಾಗದ ಪತಿ ಹಾಫೀಸ್ ಕೀಳರಿಮೆಯಿಂದ ಅವಳು ಬರೆಯುವ ಗೆರೆಗಳ ಕುರಿತು ಅನಾದರ ಪ್ರಕಟಿಸುತ್ತಾನೆ. 'ಫಿಸಾ' ಎಂಬ ಅವಳ ಹೆಸರಿನ ಅರ್ಥವೇನೆಂದು ಅವನು ಕೇಳಿದಾಗ ಮಂಜು ಪಸರಿಸುತ್ತಿರುವ ಪ್ರಕೃತಿಯ ಸುಂದರವಾದ ಒಂದು ಚಿತ್ರವನ್ನು ಅವನ ಮುಂದಿಟ್ಟು 'ಮಂಜಿನ ಮುಸುಕು' ಎಂಬುದು ತನ್ನ ಹೆಸರಿನ ಅರ್ಥವೆಂದು ಸಾಂಕೇತಿಕವಾಗಿ ಸೂಚಿಸುತ್ತಾಳೆ. ಇದು ಅವನಲ್ಲಿ ಅಚ್ಚರಿಯೊಂದಿಗೆ ಕೀಳರಿಮೆಯನ್ನೂ ಉಂಟುಮಾಡುತ್ತದೆ. ಇಂಥ ಒಬ್ಬ ಹೆಣ್ಣುಮಗಳನ್ನು ಅವನು ಈವರೆಗೆ ನೋಡಿಲ್ಲ. ಸಾಮಾನ್ಯವಾಗಿ ಅವನು ನೋಡಿರುವ ಹೆಣ್ಣುಮಕ್ಕಳೆಂದರೆ ಸುಮ್ಮನೆ ಗಲಗಲ ಮಾತನಾಡುತ್ತ ಹರಟೆ ಹೊಡೆಯುತ್ತ ಹೋಗುವವರು. ಅವರ ಉಡುಗೆ ತೊಡುಗೆ, ಬಳೆಗಳ ಕಿಂಕಿಣಿ, ಕಳ್ಳ ಕುಡಿನೋಟಗಳು, ಫ್ಯಾಶನ್–ಸಿನಿಮಾಗಳ ಕುರಿತು, ಕೆಲವೊಮ್ಮೆ ಹುಡುಗರ ಕುರಿತು ಮಾತನಾಡುವವರು... ಅವನ ಅನುಭವಕ್ಕೆ ಸಿಕ್ಕಿದ ಹೆಣ್ಣುಮಕ್ಕಳ ಈ ಕಲ್ಪನೆಗಿಂತ ಫಿಸಾ ಭಿನ್ನವಾಗಿರುವುದು ಅವನನ್ನು ಕೆರಳಿಸುತ್ತದೆ.

ಅವಳಿಗೆ ಕಲ್ತಪ್ಪ ಸುಡಲು, ಬಿರಿಯಾನಿ ಮಾಡಲು, ಚುಕ್ಕಪ್ಪ ಮಾಡಲು ಬರುವುದಿಲ್ಲವೆಂದ ಮೇಲೆ ಅವಳ ಪೆಯಿಂಟು ಹೊಡೆಯುವಿಕೆಯಾಗಲಿ, ಗೀಚುವುದಾಗಲಿ ಯಾವುದೇ ಪ್ರಯೋಜನದ್ದಲ್ಲ ಎಂದು ಹಾಫೀಸನ ಉಮ್ಮ ತಾತ್ಸಾರ ವ್ಯಕ್ತಪಡಿಸುತ್ತಾರೆ: "ಅಡುಗೆ ಮನೆಯ ಕೆಲಸವೆಂದರೆ ಕಡಲಿದ್ದಂತೆ. ಅದು ಮುಗಿಯಿತು ಅಂತ ಹೇಳಿಬಿಡುವುದಾದರೂ ಹೇಗೆ? ಚಿತ್ರ ಬರೆಯುವುದು ಹೆಣ್ಣುಮಕ್ಕಳಿಗೆ ಹೇಳಿದ

ಕೆಲಸವೇ ಅಲ್ಲ. ಕುಟುಂಬದ ಗಂಡಸರಿಗೆ ಬಾಯಿಗೆ ರುಚಿರುಚಿಯಾಗಿ ಏನಾದರೂ ಮಾಡಿಕೊಡುವುದು... ಮಕ್ಕಳಿಗೆ ಬೇಕು ಬೇಕಾದುದನ್ನು ಮಾಡಿಕೊಡುವುದು... ಇದುವೇ ಹೆಣ್ಣುಮಕ್ಕಳಿಗೆ ಹೇಳಿಸಿದ ಕೆಲಸ. ಅಲ್ಲದಿದ್ದರೆ ನಾಳೆಯಿಂದ ಇಲ್ಲಿ ಕುಳಿತು ನಮಗೆಲ್ಲರಿಗೂ ಚಿತ್ರ ಬರೆದುಕೊಡು. ಯಾರೂ ಏನಾದರೂ ತಿನ್ನುವುದಾಗಲಿ ಕುಡಿಯುವುದಾಗಲಿ ಬೇಡ." (ಪು. ೧೩೨, ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು) ಪ್ರೋತ್ಸಾಹವಿಲ್ಲದ ಅಸಹನೆಯ ಸನ್ನವೇಶದ ಒತ್ತಡದಲ್ಲಿ ಹೆಣ್ಣಿನ ಸೃಜನತೆ ಅರಳಬೇಕಾಗಿದೆ.

ಫಿಸಾ ಬರೆದ ಚಿತ್ರಗಳನ್ನು ನೋಡಿ ಪತಿಯ ಗೆಳೆಯ 'ದೇವರು ಸ್ಪರ್ಶಿಸಿದ ಬೆರಳುಗಳು ಆಕೆಯವು' ಎಂದು ಮುಕ್ತ ಪ್ರಶಂಸೆ ವ್ಯಕ್ತಪಡಿಸಿದಾಗ ಹಾಫೀಸ್‌ನ ಮನಸ್ಸಿನಲ್ಲಿ ಉರಿಯೇಳುತ್ತದೆ. ಕಾಲೇಜು ದಿನಗಳಲ್ಲೂ ಆಕೆ ಚಿತ್ರ ಬರೆಯುತ್ತಿದ್ದುದು, ಎಲ್ಲರ ಅಭಿನಂದನೆ ಮತ್ತು ಮೊದಲ ಬಹುಮಾನ ಗಿಟ್ಟಿಸುತ್ತಿದ್ದುದು ಗೆಳೆಯನಿಂದ ತಿಳಿದಾಗ ಅವನ ಅನುಮಾನ, ಅಸಹನೆ ಇನ್ನಷ್ಟು ಹೆಚ್ಚುತ್ತವೆ. ಅವಳ ಚಿತ್ರಗಳನ್ನು ನೋಡಲು ಮತ್ತು ಅವಳನ್ನು ಸಂದರ್ಶಿಸಲು ಯಾರ್ಯಾರೋ ಮನೆಗೆ ಬಂದುದು, 'ಒಂದು ಒಳ್ಳೆಯ ಎಗ್ಸಿಬಿಷನ್‌ಗೆ ಏರ್ಪಾಡು ಮಾಡ್ತೀವಿ' ಅಂದುದು.. ಇವೆಲ್ಲವೂ ಅವನ ನೆಮ್ಮದಿಗೆಡಿಸುವ ಬೆಳವಣಿಗೆಗಳು. ಪತಿಗಾಗಲಿ ಅತ್ತೆಗಾಗಲಿ ಎದುರು ಮಾತನಾಡದ, ಚಿತ್ರ ಬಿಡಿಸುವುದರಲ್ಲಿಯೆ ಕಳೆದುಹೋಗುವ ಅವಳ ಏಕಾಗ್ರತೆ ಮತ್ತು ತಾಳ್ಮೆಗಳು ಅವನ ಮೇಲ್ಮೆಯನ್ನು ಕೆಣಕುವಂತಿವೆ. ಫಿಸಾಳ ನೋಟ, ನಿಶ್ಶಬ್ದ ಅಳು ಮತ್ತು ಮೌನಗಳು ಮಾತಿಗಿಂತಲೂ ಅಸಹನೀಯವೆಂದು ಅವನ ಅನುಭವಕ್ಕೆ ಬಂದಿದೆ. ಕೇಳಿದಾಕ್ಷಣ ಚಹಾ ಕೊಡಲಿಲ್ಲವೆಂಬ ಕ್ಷುಲ್ಲಕ ಕಾರಣಕ್ಕೆ ಅವಳು ಬರೆಯುತ್ತಿದ್ದ ಸುಂದರವಾದ ಚಿತ್ರದ ಬ್ರಶ್ ಎಳೆದು ಬಿಸಾಕಿ ಚಿತ್ರವನ್ನು ಹಾಳುಮಾಡುತ್ತಾನೆ. ಅವಳು ಆಗಲೂ ಪ್ರತಿಭಟಿಸದೆ ನಿಶ್ಶಬ್ದವಾದ ಅಳುವಿನೊಂದಿಗೆ ಬಣ್ಣ ಹರಡಿದ ತನ್ನ ಕೈಗಳನ್ನು ತೊಳೆದುಕೊಂಡು ಪತಿಗೆಂದು ಈಗಾಗಲೇ ಸಿದ್ಧ ಮಾಡಿ ಇರಿಸಿದ್ದ ಚಹ ಮತ್ತು ಪತ್ತಿರಿಗಳನ್ನು ಕೊಡುವುದು ಸಾಂಕೇತಿಕವಾಗಿದೆ. ಹೆಣ್ಣಿನ ಮೌನವೂ ಒಂದು ಬಗೆಯ ಪ್ರತಿರೋಧವೇ. ಗಂಡಿನ ಪಾಶವೀ ಶಕ್ತಿಯ ಅಹಂಕಾರವನ್ನು ದುರ್ಬಲಗೊಳಿಸಬಹುದಾದ ಸಾತ್ವಿಕ ಪ್ರತಿರೋಧ. ಚಿತ್ರಗಾತಿಯಾಗಿದ್ದು ರೇಖೆಗಳು ಮತ್ತು ಬಣ್ಣಗಳ ಮೂಲಕ ಸಂವಹಿಸಬಲ್ಲ ಫಿಸಾ ಪ್ರತ್ಯುತ್ತರ, ಸಮರ್ಥನೆ, ಜಗಳಗಳಿಲ್ಲದ ಅದ್ಭುತ ಮೌನದಿಂದಲೇ ಪತಿಯ ಅಸಹನೆ, ಸಣ್ಣತನಗಳಿಗೆ ಪ್ರತಿರೋಧವನ್ನು ವ್ಯಕ್ತಪಡಿಸುವುದು ಅರ್ಥಪೂರ್ಣವಾಗಿದೆ.

ಇ.ವಿ. ಕೃಷ್ಣಪಿಳ್ಳೆ ಅವರ 'ಅವಳ ಕತೆ ಬರವಣಿಗೆ' ಸಣ್ಣಕತೆಯ ನಾಯಕಿ ಪತಿಯ ಸಂಬಳದಲ್ಲಿ ಬಹುಪಾಲನ್ನು ತನ್ನ ಪುಸ್ತಕ ಓದುವ ಗೀಳಿಗೆ ಖರ್ಚುಮಾಡುತ್ತಾಳೆ. ದೊಡ್ಡ ದೊಡ್ಡ ಲೇಖಕರ ದುಬಾರಿ ಪುಸ್ತಕಗಳನ್ನು ಕೊಂಡು ಓದುತ್ತಾಳೆ. ಹೆಂಡತಿಯ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಖರ್ಚು ಮಾಡುವುದು ಗಂಡನ ಕರ್ತವ್ಯ, ಗಂಡನ ಸಂಪಾದನೆಯಲ್ಲಿ ತನಗೂ ಅಧಿಕಾರವಿದೆ ಎಂಬುದು ಅವಳ

ಅಭಿಪ್ರಾಯವಾಗಿದೆ. ಕೊನೆಗೊಮ್ಮೆ ಅವಳಿಗೇ ಬರೆಯಬೇಕು ಅನಿಸಿದ ಹೊತ್ತಿಗೆ ಕಾದಂಬರಿ ರಚನೆಗೆ ಅಗತ್ಯವಾದ ಕಾಗದಕ್ಕಾಗಿ ಗಂಡನಾದವ ಗದ್ದೆಯನ್ನು ಗೇಣಿಗೆ ಕೊಟ್ಟು ಮುಂಗಡ ಪಡೆಯಬೇಕಾಗುತ್ತದೆ. ಹೆಣ್ಣು ಮನೆವಾರ್ತೆ ಬಿಟ್ಟು ಓದಲು ಬರೆಯಲು ತೊಡಗಿದರೆ ಗಂಡ ಆಸ್ತಿ–ಮನೆ ಕಳಕೊಳ್ಳಬೇಕಾದೀತು ಎಂಬೊಂದು ವ್ಯಂಗ್ಯವೂ ಇಲ್ಲಿದೆ.

'ಅವಳು' ಬರೆಯುತ್ತಿರುವ ಕಾದಂಬರಿಯ ಕಥೆಯನ್ನು, ಸಂಭಾಷಣೆಯನ್ನು ಆಗೀಗ ಪತಿಗೆ ಓದಿ ಹೇಳುತ್ತಾ ಸಾಹಿತ್ಯಿಕ ಭಾಷೆಯಲ್ಲೇ ಮಾತನಾಡುತ್ತಾ ಸಂಪೂರ್ಣವಾಗಿ ಕೃತಿರಚನೆಯ ಗುಂಗಿನಲ್ಲೇ ಇರುತ್ತಾಳೆ. ಆರಂಭದಲ್ಲಿ ಪತ್ನಿಯ ವಿಚಿತ್ರ ವರ್ತನೆಗಳನ್ನು ಸಹಿಸಿಕೊಂಡಿದ್ದ ಪತಿ ಕ್ರಮೇಣ ಆಕೆಯ ಪತಿನಿಷ್ಠೆಯ ಬಗ್ಗೆ ಸಂಶಯ ತಾಳುತ್ತಾನೆ. ಕಾದಂಬರಿಯಲ್ಲಿ ಬರುವ ಗೃಹಿಣಿಗೆ ತನ್ನ ಪತಿಯ ಗೆಳೆಯನಲ್ಲಿ ಅನುರಾಗ ಉಂಟಾಗಿದೆ. ಆ ನಾಯಕನ ರೂಪಲಕ್ಷಣಗಳು ಲೇಖಕಿಯ ಪತಿಯ ಗೆಳೆಯನನ್ನೇ ಹೋಲುತ್ತವೆ. ಕಾದಂಬರಿಯ ನಾಯಕಿ ತನ್ನ ಪ್ರಿಯಕರನನ್ನು ರಾತ್ರಿ ರಹಸ್ಯವಾಗಿ ಸಂಧಿಸುವ ಸನ್ನಿವೇಶದ ಚಿತ್ರಣಕ್ಕೆ ನೈಜ ಅನುಭವವನ್ನು ಕೂಡಿಸಬೇಕೆಂದು, ಕತೆಗಾರ್ತಿ ಇರುಳಿನಲ್ಲಿ ಒಬ್ಬಳೇ ಮಾವಿನ ತೋಪಿಗೂ ಹೋಗಿದ್ದು ಬರುತ್ತಾಳೆ. ಸಾಲದ್ದಕ್ಕೆ ಕಾದಂಬರಿಯಲ್ಲಿ ತದ್ವತ್ತಾಗಿ ಪತಿಯ ಸ್ವಭಾವವನ್ನು ಹೋಲುವ ಹಾಸ್ಯಪಾತ್ರವೊಂದಿದೆ. ಇವೆಲ್ಲ ಕಲ್ಪನೆಯಲ್ಲದೆ ನಿಜವೇ ಇರಬೇಕೆಂಬ ಶಂಕೆಯಿಂದ ಸಿಟ್ಟಾದ ಪತಿ ಪತ್ನಿಯ ಕಪಾಳಕ್ಕೆ ಬಿಗಿದು ಕತೆ ಬರವಣಿಗೆಯನ್ನು ನಿಲ್ಲಿಸುತ್ತಾನೆ. ಪರಿಣಾಮದಲ್ಲಿ ಆಕೆ ಈಗ 'ದೊಡ್ಡ ಕಾದಂಬರಿಗಳನ್ನು ಓದುವುದನ್ನು' ಬಿಟ್ಟಿದ್ದಾಳೆ. 'ಉತ್ತಮ ಗೃಹಿಣಿಯರಾಗುವುದು ಹೇಗೆ ಎಂಬುದನ್ನು ಹೇಳಿಕೊಡುವ ಪತ್ರಿಕೆಗಳನ್ನು' ಮಾತ್ರ ಓದುತ್ತಿದ್ದಾಳೆ. ಅವಳ ಬರವಣಿಗೆಗಾಗಿ ಖರ್ಚಾಗಬಹುದಾಗಿದ್ದ ತನ್ನ ಸಂಪತ್ತು ಉಳಿಯಿತು ಎಂದು ಅವಳ ಪತಿ ನಿರಾಳವಾಗಿದ್ದಾನೆ. ಬಲಪ್ರಯೋಗದಿಂದ ಸ್ತ್ರೀಯರನ್ನು ನಿರ್ಬಂಧಿಸಿ ವ್ಯವಸ್ಥೆಗೆ ಅನುಕೂಲೆಯರನ್ನಾಗಿ ರೂಪಿಸುವ ಲಿಂಗ ರಾಜಕಾರಣವನ್ನು ಈ ಸಣ್ಣಕತೆಯಲ್ಲಿ ಕಾಣಬಹುದು.

ಚಂದ್ರಮತಿ ಅವರು ಬರೆದ 'ಕವಿತೆಯ ಕಥೆ'ಯ ನಾಯಕಿ ಸುಷ್ಮಾ ಮನೆಕೆಲಸವನ್ನೆಲ್ಲ ಮುಗಿಸಿದ ನಂತರ 'ಭಯಪಡುತ್ತ' ಒಂದು ಪ್ರೇಮಕವಿತೆ ಬರೆಯುತ್ತಿದ್ದಾಳೆ. ಸ್ತ್ರೀಯರು ಬರೆದ ಕವಿತೆಗಳಲ್ಲಿ ಓದುಗರು ಮತ್ತು ವಿಮರ್ಶಕರು ಅವರ ಆತ್ಮಕಥಾಂಶವನ್ನು ಹುಡುಕಲು ಯತ್ನಿಸುತ್ತಾರೆಂಬುದು ಅವಳ ದಿಗಿಲಿಗೆ ಕಾರಣವಾಗಿದೆ. ತನ್ನ ಪತ್ನಿ ಸೀಸರನ ಪತ್ನಿಯಂತೆ ಸಂಶಯಾತೀತಳಾಗಿರಬೇಕೆಂಬ ನಿಲುವನ್ನು ಹೊಂದಿರುವ ಅವಳ ಪತಿ ರಘುರಾಮನೂ ಸಹ ಇಂತಹ ಕವನವನ್ನು ಬರೆದ ತನ್ನ ಪತ್ನಿಯನ್ನು ನಿಷ್ಕಳಂಕಿನಿ ಎಂಬ ದೃಷ್ಟಿಯಿಂದ ನೋಡಲಾರ. ಹೀಗೆ ತನ್ನ ಪತ್ನಿ ಪರಿಶುದ್ಧೆಯಾಗಿರಬೇಕೆಂದು ಬಯಸುವ ರಘುರಾಮ ಆಫೀಸಿನಲ್ಲಿ ಪಕ್ಕದ ಸೀಟಿನಲ್ಲಿ ಕೂರುವ ಸಹೋದ್ಯೋಗಿ ಶ್ರೀರಂಜಿನಿಯಲ್ಲಿ ಆಸಕ್ತನಾಗಿದ್ದಾನೆ. ಅವಳ ಶರೀರದ ಕೆಲವು ಭಾಗಗಳು ತನ್ನ ಹೆಂಡತಿಗಿದ್ದಿದ್ದರೆ... ಎಂದಾತ ಆಸೆಪಟ್ಟದ್ದೂ

ಇದೆ. ಆದರೆ ಶ್ರೀರಂಜಿನಿ ತನ್ನ ಹೆಂಡತಿಯಾಗಿದ್ದಿದ್ದರೆ ಎಂದಾತ ಒಮ್ಮೆಯೂ ಯೋಚಿಸಿಲ್ಲ. ಏಕೆಂದರೆ 'ಹೆಂಡತಿಯಾಗಿ ಯಾವಾಗಲೂ ಸುಷ್ಮಾಳಂತಹ ಹೆಣ್ಣೇ ಒಳ್ಳೆಯದು.' ಲೋಕದ ಹೆಚ್ಚಿನ ಗಂಡಸರಂತೆ 'ಹೆಚ್ಚು ಮಾತಾಡದ, ಸಂಕೋಚ ಹಿಂಜರಿಕೆಗಳಿಂದ ಸದಾ ನಾಚಿಕೊಳ್ಳುವ, ಮನೆವಾರ್ತೆ ಚೆನ್ನಾಗಿ ನೋಡಿಕೊಳ್ಳುವ, ಅಡುಗೆಯಲ್ಲಿ ನುರಿತ ಒಬ್ಬಳು ಹೆಣ್ಣು' ಮಾತ್ರ ಪತ್ನಿಯಾಗುವುದಕ್ಕೆ ಯೋಗ್ಯಳು ಎಂದಾತ ನಂಬಿದ್ದಾನೆ. ಶ್ರೀರಂಜಿನಿಯಂಥವಳು 'ಗೆಳತಿಯಾಗಿರಲು ಪರವಾಗಿಲ್ಲ.' ಇಂಗ್ಲೀಷಿನಲ್ಲಿ ಕವಿತೆ ಬರೆಯುವ, ಸ್ತ್ರೀಯರ ಪಕ್ಷ ಹಿಡಿದು ಜೋರಾಗಿ ಮಾತನಾಡುವ ಶ್ರೀರಂಜಿನಿಯಂಥ ಸ್ತ್ರೀವಾದಿಗಳು ಅವನ ಪ್ರಕಾರ 'ಯಾವಾಗಲೂ ಬೇರೆಯವರ ಹೆಂಡತಿಯಾಗಿರುವುದೇ ಒಳ್ಳೆಯದು.'

ತಾನು ಬಾಯಿಬಿಟ್ಟು ಹೇಳಲಾಗದ್ದನ್ನು ಸುಷ್ಮಾ ಕವಿತೆಯಾಗಿಸುತ್ತಾಳೆ. ತನ್ನ ಪತ್ನಿಯ ಸೊಂಟದಲ್ಲಿ ಕಾಣಿಸಿಕೊಂಡಿರುವ ಮಡಿಕೆಗಳ ಬಗ್ಗೆ ಆತ ಸ್ನೇಹಿತರ ಮುಂದೆ ವ್ಯಂಗ್ಯವಾಡಿ ನೋಯಿಸಿದ ಸಂಜೆಯ ನೆನಪು ಸುಷ್ಮಾಳಿಗೆ ವೇದನೆ ಉಂಟುಮಾಡಿವೆ. ಅದರಿಂದಾಗಿ ಅವಳ ಕವಿತೆಗೆ ಮತ್ತಷ್ಟು ಹೊಸ ಸಾಲುಗಳು ಸೇರಿಕೊಂಡಿವೆ. ಬೆಳಗ್ಗಿನಿಂದ ಸಂಜೆಯವರೆಗೂ ಮಳೆ, ಮಳೆಯ ತಾಳ ಮತ್ತು ವಿದ್ಯುತ್ ಹರಿಯುತ್ತಿರುವ ಬೆರಳ ತುದಿಗಳಿರುವ ಯಾವುದೋ ಲೋಕವನ್ನು ಪ್ರವೇಶಿಸಿ, ಮನಸ್ಸಿನೊಳಗೂ ಮಳೆ ಸುರಿಸಿಕೊಳ್ಳುತ್ತ ಒಂದೊಂದೇ ಸಾಲುಗಳನ್ನು ಸೇರಿಸುತ್ತ ಕೊನೆಗೂ ಮಧ್ಯಾಹ್ನದ ಹೊತ್ತಿಗೆ ಅವಳ ಕವಿತೆ ಪೂರ್ಣಗೊಂಡು ಅವಳಲ್ಲಿ ತೃಪ್ತಿಯುಂಟುಮಾಡಿದೆ. 'ಸೂರ್ಯನ ಜತೆಗೆ ಎದ್ದು ಸೂರ್ಯನ ಜತೆಗೆ ಇದುವರೆಗೂ ಸಾಗಿಬಂದ' ಆಯಾಸ ಈಗ ಅವಳ ಮುಖದಲ್ಲಿಲ್ಲ. ಬದಲಿಗೆ 'ಕಾಡಿನ ಒಳಹೊಕ್ಕು ಗುಟ್ಟಾಗಿ ಒಂದು ಮಗುವನ್ನು ಹೆತ್ತ ಅಪ್ಸರ ಸ್ತ್ರೀಯ ಪ್ರಫುಲ್ಲತೆಯಿದೆ.' ಆದರೆ ಸಂಜೆಯಾಗುತ್ತಿದ್ದಂತೆ, ಪತಿ ಮನೆಗೆ ಬರುವ ಸಮಯ ಸಮೀಪಿಸುತ್ತಿರುವಂತೆ ಸುಷ್ಮಾ ವಿಪರೀತ ಅಸ್ವಸ್ಥಗೊಳ್ಳುತ್ತಾಳೆ. ಮಡಿಲಲ್ಲಿ ಮಲಗಿರುವ ಕವಿತೆ ಅವಳಲ್ಲಿ ಚಡಪಡಿಕೆ ಉಂಟು ಮಾಡಿದೆ. ಕಷ್ಟಪಟ್ಟು ಬರೆದ ಕವಿತೆಯನ್ನು ಹರಿದು ಚೂರು ಮಾಡಿ ಕಿಟಕಿಯಿಂದ ಹೊರಗೆಸೆದು ಸಹಜಸ್ಥಿತಿಗೆ ಬಂದು ಸಾಮಾನ್ಯ ಗೃಹಿಣಿಯಾಗುವ ಸುಷ್ಮಾ, ಕುಟುಂಬದ ಸ್ವಾಸ್ಥ್ಯಕ್ಕಾಗಿ ನಾಶವಾಗುವ ಹೆಣ್ಣಿನ ಸೃಜನತೆಯ ಪ್ರತಿಮೆಯಾಗಿದ್ದಾಳೆ.

ಇ.ಕೆ.ಷೀಬಾ ಅವರು ಬರೆದ 'ಕೆಂಡದ ಲೇಖನ' ಎಂಬ ಕತೆಯ ಮಾಲಿನಿ ನಾರಾಯಣ್‌ಗೆ ಕತೆ ಬರೆವ ಗೀಳಿದೆ. ಮಹಿಳಾ ಮನಸ್ಸಿನ ವ್ಯಕ್ತಿವೈಶಿಷ್ಟ್ಯ ಪ್ರಜ್ಞೆಯ ಉತ್ತಮ ಕತೆಗಳನ್ನು ಬರೆದಿರುವ ಮಾಲಿನಿ ಸಾಹಿತ್ಯದ ಓದುಗರು ಮತ್ತು ವಿಮರ್ಶಕರಿಗೆ ಬಹುಮಟ್ಟಿಗೆ ಅಪರಿಚಿತೆಯಾಗಿ ಉಳಿದಿರುವಾಕೆ. ತನ್ನ ಕತೆಗಳಲ್ಲಿ 'ಪರಂಪರೆಯ ಸರಪಳಿಯನ್ನು ಕಡಿದು ಬಿಸಾಡಲು ಪ್ರಚೋದನೆ ನೀಡುವ' ತೀಕ್ಷ್ಣರೀತಿಯ ಮಾತುಗಳನ್ನು ಬರೆಯುವ ಈ ಕಥೆಗಾರ್ತಿಯ ಸಂದರ್ಶನಕ್ಕೆಂದು ಅರಸಿ ಬಂದ ಟಿ.ವಿ. ನಿರೂಪಕಿಯ ಮೂಲಕ ಮಾಲಿನಿಯ ನಿಜಬದುಕು ಮತ್ತು ಆಕೆ ಬರೆಯುವ ಕತೆಗಳ ಸ್ತ್ರೀಪಾತ್ರಗಳಿಗೆ ಸ್ವಲ್ಪವೂ ತಾಳೆಯಿಲ್ಲದಿರುವ ವಿಪರ್ಯಾಸವು ಅನಾವರಣಗೊಳ್ಳುತ್ತದೆ. ಭೇಟಿಗೆ ಬಂದವರೊಡನೆ ಸ್ವಲ್ಪ ಹೊತ್ತು

ಕುಳಿತು ಮಾತನಾಡುವ ಬಿಡುವು, ಸ್ವಾತಂತ್ರ್ಯಗಳೂ ಮಾಲಿನಿಗೆ ಲಭ್ಯವಿಲ್ಲ. ಮನೆಯ ಕೆಲಸಗಳನ್ನು ನಿರ್ವಹಿಸುತ್ತಲೇ ಮಾತನಾಡಬೇಕಾಗಿದೆ. ನಡುನಡುವೆ ಅಮ್ಮ ಏನೇನೊ ನೆವನಗಳನ್ನು ಹುಡುಕಿ ಕೋಣೆಗೆ ಬಂದು ಹೋಗುತ್ತ ಅವಳ ಮೇಲೆ ಕಣ್ಣಿಟ್ಟಿದ್ದಾರೆ. ಇಂಥ ಕಣ್ಗಾವಲನ್ನು ತಪ್ಪಿಸಿ ಮಾಲಿನಿಯ ಕಥಾಪಾತ್ರಗಳು ಸೃಷ್ಟಿಯಾಗಿವೆ.

ಮೂರು ತಲೆಮಾರು ಕುಳಿತು ಉಂಡರೂ ಮುಗಿಯದ ದೊಡ್ಡಮನೆಯ ಸೊಸೆಯಾಗುವ ಅವಕಾಶ ಪಡೆದು ಅಮ್ಮನ ಮತ್ತು ಊರವರ ದೃಷ್ಟಿಯಲ್ಲಿ 'ಭಾಗ್ಯವಂತೆ' ಎನಿಸಿಕೊಂಡ ಮಾಲಿನಿಗೆ ಮದುವೆಯನ್ನು ತಪ್ಪಿಸಿಕೊಳ್ಳುವ ಅವಕಾಶವೆ ಲಭಿಸಿಲ್ಲ. 'ಉಣ್ಣಲೂ, ಉಡಲೂ, ಕೆಲಸ ಮಾಡಲೂ ಬೇಕಾದಷ್ಟಿರುವ' ಆ ಮನೆಯಲ್ಲಿ ಓದುವುದಕ್ಕೂ, ಕನಸು ಕಾಣುವುದಕ್ಕೂ ಸಮಯವಿಲ್ಲ ಎಂಬ ಅವಳ ದೂರು ಎಲ್ಲರಿಗೂ ತಮಾಶೆ ಎನಿಸಿತ್ತು. 'ಹೆಚ್ಚು ಓದಿದ್ದರಿಂದಲೇ ನಿನಗೆ ಕೇಡು ಬಂದಿರೋದು' ಎಂಬ ಬೈಗುಳವೂ ಸಿಕ್ಕಿತ್ತು. ಸಾಹಿತ್ಯದಲ್ಲಿ ಬಿ.ಎ. ಮತ್ತು ಬಿ.ಎಡ್. ಪದವಿಗಳನ್ನು ಮುಗಿಸಿರುವ ಮಾಲಿನಿಯ ಗಂಡನಮನೆಯ ಪಕ್ಕದಲ್ಲಿ ಕುಟುಂಬದ ಒಡೆತನಕ್ಕೆ ಸೇರಿದ ಸ್ವಂತ ಶಾಲೆಯಿದೆ. ಎಂದಾದರೂ ಅಲ್ಲಿ ಶಿಕ್ಷಕಿಯಾಗುವ ಅವಕಾಶ ತನಗೆ ಲಭಿಸಬಹುದು ಎಂಬ ನಿರೀಕ್ಷೆಯೂ ಅವಳಿಗಿತ್ತು. ಆದರೆ ಅದು ಕನಸಾಗಿಯೆ ಉಳಿಯಿತು. ಶಾಲೆಯಲ್ಲಿ ಖಾಲಿಯಿದ್ದ ಶಿಕ್ಷಕಿಯ ಹುದ್ದೆಗೆ ಮಾಲಿನಿಯ ಸಹಪಾಠಿಯೆ ಆಯ್ಕೆಯಾಗಿ ಹದಿನೈದು ವರ್ಷವಾಗಿವೆ. ಹತ್ತಿರದಲ್ಲೇ ಮನೆ ಮಾಡಿಕೊಂಡಿರುವ ಆಕೆ ಆಗೀಗ ಭೇಟಿಗೆಂದು ಬಂದಾಗ ಮಾಲಿನಿ ಸಮಾಧಾನ ಮತ್ತು ಸಂಕಟಗಳೆರಡನ್ನೂ ಒಟ್ಟಿಗೆ ಅನುಭವಿಸುತ್ತಾಳೆ: 'ನನ್ನ ಕನಸಿನ ಜೀವನ ನಡೆಸುತ್ತಿರುವ ಮತ್ತೋರ್ವಳವಳು.. ನನಗದು ಅಸ್ವಸ್ಥತೆಯನ್ನುಂಟುಮಾಡುತ್ತದೆ.'

ಅವಳ ಬರೆಹದ ಬಗ್ಗೆ ಕಿಂಚಿತ್ತಾದರೂ ಅಭಿಮಾನವಿಲ್ಲದ, ಸಾಹಿತ್ಯ, ಕಲೆಗಳ ಬಗ್ಗೆ ಗೌರವವೆ ಇಲ್ಲದ ದೊಡ್ಡ ಮನೆಯೊಂದರ ಸೊಸೆಯಾಗಿ, ಬೆಳಗ್ಗಿನಿಂದ ನಡುರಾತ್ರಿಯವರೆಗೂ ಮನೆಯ ಕೆಲಸಗಳಲ್ಲಿ ಮುಳುಗಿರುವ ಮಾಲಿನಿ ರಾತ್ರಿ ಹನ್ನೆರಡು ಗಂಟೆಯ ನಂತರ ಮಕ್ಕಳ ನೋಟ್ ಬುಕ್ಕಿನ ಪುಟಗಳನ್ನು ಹರಿದು ಬೆಳಕು ಹರಿಯುವವರೆಗೂ ಬರೆದದ್ದಿದೆ. ಏಕಾಂತದಲ್ಲಿ ಕುಳಿತು ಬರೆಯಲು ಅವಳದೇ ಆದ ಒಂದು ಕೋಣೆ, ಒಂದು ಮೇಜಿನ ವ್ಯವಸ್ಥೆ ಹಾಗಿರಲಿ, ಒಂದಿಷ್ಟು ಹಾಳೆಗಳನ್ನು ಕೂಡ ಒದಗಿಸಿಕೊಳ್ಳಲಾಗದ ಈ ಕಥೆಗಾರ್ತಿ ಹೊಸ್ತಿಲ ಒಳಗೆ ತನ್ನನ್ನು ಬಂಧಿಸಿರುವ ವ್ಯವಸ್ಥೆಯ ಬಗೆಗಿನ ಆಕ್ರೋಶವನ್ನು ಬರಹವಾಗಿಸಿದ್ದಾಳೆ. ಬರಹ, ಓದುವಿಕೆಗಳು ಮನುಷ್ಯರನ್ನು ಕೇಡಿಗೆ ಈಡು ಮಾಡುತ್ತವೆ ಎಂದು ನಂಬುವವರ ನಡುವೆ, ತನಗಾಗಿ ಬದುಕುವ ಅವಕಾಶವೆ ಇಲ್ಲದೆ ಬೆಂಕಿಯಂತೆ ಉರಿಯುವ ಹೊತ್ತಿನಲ್ಲಿ ಸುಡುವ ಕೆಂಡದಂಥ ಮಾಲಿನಿಯ ಕತೆಗಳು ಹುಟ್ಟಿಕೊಂಡಿವೆ.

ತನ್ನ ಜೀವನಕ್ರಮದಲ್ಲಿ ಯಾವುದೇ ಬದಲಾವಣೆಯಾಗಲು ಸಾಧ್ಯವಿಲ್ಲ ಎಂಬುದನ್ನು ಮಾಲಿನಿ ಒಪ್ಪಿಕೊಂಡಿದ್ದಾಳೆ. "ತುಂಬಿದ ಮನೆತನ.. ಅವಶ್ಯಕತೆಗಿಂತಲೂ ಹೆಚ್ಚಾಗಿರುವ ಸಿರಿ ಸಂಪತ್ತು.. ಗಂಡ, ಮಕ್ಕಳು.. ಮತ್ತೆ ಮನೆಕೆಲಸ... ಅದು ಮನೆಯಾಕೆಯ ಕರ್ತವ್ಯವಲ್ಲವೇ.. ಅವುಗಳ ಬಗ್ಗೆ ಹೇಳಲು ಸಾಧ್ಯವಿಲ್ಲ" (ಪು. ೩೨, ಕಥಾ ಸಮಾಹಾರಂ) ಮದುವೆಗೆ ಮುನ್ನ ಕಂಡಿದ್ದ ಕನಸುಗಳು ಭಗ್ನವಾದ ನಿರಾಸೆಯನ್ನು ಶಮನಗೊಳಿಸುವುದಕ್ಕಾಗಿ ಬರೆಯುತ್ತಿದ್ದಾಳೆ. 'ಕಟ್ಟಿಕೊಂಡದ್ದನ್ನು ವಾಂತಿಮಾಡುವಂತೆ, ದಪ್ಪವಾಗಿ ಊದಿಕೊಂಡಿದ್ದ ಕುರು ಒಡೆದು ನೋವನ್ನು ಶಮನಗೊಳಿಸಿದಂತೆ... ಏನೋ ಒಂದು ರೀತಿಯ ಸಮಾಧಾನ' ಕ್ಕಾಗಿ ಮಾತ್ರ ಬರೆಯುವ ಮಾಲಿನಿ ಟಿವಿ ಚಾನೆಲ್ಲಿನ ಸಂದರ್ಶನಕ್ಕೆ ಒಪ್ಪಿಗೆ ಕೊಡುವ ಸ್ವಾತಂತ್ರ್ಯ ಹೊಂದಿಲ್ಲ. ಸಂದರ್ಶನವೇನಾದರೂ ಪ್ರಸಾರವಾದರೆ 'ಬದುಕು ದುಸ್ತರವಾಗುತ್ತದೆ. ಬಹಳ ಜನರ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ' ಎಂಬ ಎಚ್ಚರದಿಂದ 'ದಯವಿಟ್ಟು ಕ್ಯಾಮರಾದೊಂದಿಗೆ ಬರಬೇಡಿ' ಎಂಬ ದಯನೀಯ ಬೇಡಿಕೆಯೊಂದಿಗೆ ಸಂದರ್ಶಕಿಯನ್ನು ಕಳಿಸಿಕೊಡುತ್ತಾಳೆ. 'ಜೀವಿಸುತ್ತಿದ್ದೇನೆಂದು ಸ್ವಯಂ ಮನದಟ್ಟು ಮಾಡಿಕೊಡುವುದಕ್ಕಾಗಿ' ಮಾತ್ರ ಬರೆಯುತ್ತಿರುವ ಮಾಲಿನಿಗೆ ತನ್ನ ಬರಹಕ್ಕೆ ಮನ್ನಣೆ, ಮೆಚ್ಚುಗೆ ದೊರೆಯಬೇಕು ಎಂಬಂಥ ನಿರೀಕ್ಷೆಗಳೆ ಇಲ್ಲ. ಅಂತರಂಗದ ಚಡಪಡಿಕೆ ಮತ್ತು ಒತ್ತಡಗಳನ್ನು ಹೊರಹಾಕುವುದಕ್ಕಾಗಿ ಬರೆಯುವ ಮಾಲಿನಿಯ ಮಟ್ಟಿಗೆ ಬರಹ ಒಂದು ಬಿಡುಗಡೆಯಾಗಿದೆ. ಈಡೇರದ ಬಯಕೆಗಳನ್ನು ಸಾಕಾರಗೊಳಿಸುವ ಸೃಜನಶೀಲ ಅಭಿವ್ಯಕ್ತಿಯಾಗಿದೆ.

ಮಾನಸಿ ಅವರು ಬರೆದ 'ಸೇತುವೆ ಇಲ್ಲದ ಹೊಳೆ' ಕಥೆಯ ಸುಶಿಕ್ಷಿತ ಹೆಣ್ಣುಮಗಳು ಸುಮಾಳಿಗೆ ಗಂಡನ ಮನೆಯಲ್ಲಿ ಕಥೆ ಓದಲು, ಇಂಗ್ಲೀಷ್ ಪತ್ರಿಕೆ ಓದಲು, ಕೊನೆಗೆ ತನಗಿಷ್ಟವಾದ ವೀಣೆಯನ್ನು ಏಕಾಂತದಲ್ಲಿ ನುಡಿಸಲೂ ಸ್ವಾತಂತ್ರ್ಯವಿಲ್ಲ ಎಂಬುದು ಅರಿವಾದಾಗ ಗಂಡನ ಮನೆಯನ್ನು ಬಿಟ್ಟು ತವರಿಗೆ ಮರಳುತ್ತಾಳೆ. 'ಇಲ್ಲಿಗೆ ಬಂದಾಗೆಲ್ಲ ಎಷ್ಟೂಂತ ನೋಡದೆ ಕೈತುಂಬ ಹಣ ಕೊಡುತ್ತಿದ್ದ' ಗಂಡನನ್ನು ಮೊಮ್ಮಗಳು ಬಿಟ್ಟು ಬಂದ ಬಗ್ಗೆ ಅಜ್ಜಿ ಬೈಗುಳ ಮಳೆ ಸುರಿಸುತ್ತಾರೆ: 'ಅವನು ನಿನಗೆ ಊಟ ಬಟ್ಟೆ ಕೊಟ್ಟು ಸಾಕುವುದಿಲ್ಲವೆ? ಹಚ್ಚಿಕೊಳ್ಳಲು ಎಣ್ಣೆ ತಂದು ಕೊಡುವುದಿಲ್ಲವೆ? ಇದಕ್ಕೆ ಅಹಂಕಾರ ಅಂತಲ್ಲದೆ ಬೇರೇನು ಹೆಸರು?' (ಪು. ೪೩, ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು) ತನ್ನ ಸ್ವಂತ ಅಭಿರುಚಿ, ಅಭಿವ್ಯಕ್ತಿಗಳಿಗೆ ಅವಕಾಶವಿಲ್ಲದ ಮನೆಯಲ್ಲಿ ತಾನಿರಲಾರೆ ಎಂಬ ಕಾರಣಕ್ಕಾಗಿ ಅನುಕೂಲವಂತನಾದ ಗಂಡನ ಮನೆಯನ್ನು ಬಿಟ್ಟು ಬಡತನವಿದ್ದ ತವರಿಗೆ ಹಿಂತಿರುಗುವ ಮೊಮ್ಮಗಳಿಗೆ ಮದುವೆ ಎಂದರೆ ಕೇವಲ ಆರ್ಥಿಕ ಕಾರಣಗಳಿಗಾಗಿ ಏರ್ಪಡಿಸಿಕೊಳ್ಳುವ ಸಂಬಂಧವಲ್ಲ. ತನ್ನತನದ ಉಳಿವಿಗಾಗಿ ಅವಳು ವ್ಯವಸ್ಥೆಯನ್ನು ಧಿಕ್ಕರಿಸುವುದು, ತನ್ನ ಶಾಶ್ವತ ನೆಲೆಯಾಗಿರುವ ತವರಿಗೆ ಮರಳುವುದು ಹೆಣ್ಣಿನ ಪ್ರತಿರೋಧದ ಸಾಂಕೇತಿಕ ಕ್ರಿಯೆಯಾಗಿದೆ. ತವರು ಮತ್ತು ಗಂಡನ ಮನೆಗಳ ನಡುವೆ ಪ್ರವಹಿಸುವ ಜೀವನದ ಹೊಳೆಗೊಂದು ಸೇತುವೆ ಕಟ್ಟಿ ಎರಡರ ನಡುವೆ ಹೊಂದಾಣಿಕೆ

ಸಾಗಿಸುವುದಾಗಲೀ, ಸೇತುವೆಯ ಮುಖಾಂತರ ದಾಟುವ ಜನರು ಹೊಳೆಯ ಏಕಾಂತಕ್ಕೆ, ಸ್ವಚ್ಛಂದ ಹರಿವಿಗೆ ಭಂಗ ತರುವುದಾಗಲೀ ಸುಮಾಳಿಗೆ ಇಷ್ಟವಿಲ್ಲ. ಪತಿಯೊಂದಿಗೆ ಬದುಕುವುದು ಸಾಧ್ಯವಾಗದಿದ್ದರೆ ಸಂಬಂಧವನ್ನು ಕಡಿದುಕೊಂಡು ತವರಿಗೆ ಹಿಂತಿರುಗುವುದಕ್ಕೆ ಕೇರಳದ ನಾಯರ್ ಹೆಣ್ಣುಮಕ್ಕಳಿಗೆ ಇರುವ ವಿಶೇಷವಾದ ಸ್ವಾತಂತ್ರ್ಯವನ್ನು ಈ ಕಥೆಯಲ್ಲಿ ಗುರುತಿಸಬಹುದು.

ರೇಖಾ ಕೆ. ಅವರು ಬರೆದ 'ಯಾರದ್ದೋ ಓರ್ವ ಸಂಗಾತಿ' ಕತೆಯ ನಾಯಕಿ ಕಮ್ಯುನಿಸ್ಟ್ ಪಕ್ಷದ ಆಶಯಗಳ ಪ್ರಚಾರ ಮತ್ತು ಸಂಘಟನೆಗಾಗಿ ತನ್ನ ಸ್ವಂತ ಸುಖವನ್ನು ತ್ಯಾಗ ಮಾಡುತ್ತಾಳೆ. ಕಲಿಯಲು ಜಾಣೆಯಾಗಿದ್ದವಳು ಪರೀಕ್ಷೆಯನ್ನೂ ಸಕಾಲದಲ್ಲಿ ಕಟ್ಟಲಾಗದೆ, ಉದ್ಯೋಗ ಹುಡುಕದೆ, ತನ್ನ ಮೇಲೆ ನಿರೀಕ್ಷೆ ಇಟ್ಟುಕೊಂಡಿದ್ದ ಅಮ್ಮ, ಅಕ್ಕಂದಿರ ಕಷ್ಟಕ್ಕಾಗದೆ ಸುಧಾರಣೆಯ ಹುಮ್ಮಸ್ಸಿನಲ್ಲಿ ಪಕ್ಷದ ಕಾಮ್ರೇಡ್ ಆಗಿ ನಿರ್ವಂಚನೆಯಿಂದ ದುಡಿಯುತ್ತಾಳೆ. ತಿಂಗಳ ಋತುಸ್ರಾವದ ದಿನಗಳೆಂದು ಲೆಕ್ಕಿಸದೆ ಮುಷ್ಕರದಲ್ಲಿ ಭಾಗವಹಿಸುತ್ತಾಳೆ. ಪೋಲೀಸರು ಎಳೆದೊಯ್ದಾಗ ಅವಳು ಧರಿಸಿದ್ದ ಉಡುಪಿನಲ್ಲಿ ರಕ್ತದ ಕಲೆಗಳಾದಾಗಲೂ ಹಿಂಜರಿಯದೆ ಗಟ್ಟಿಯಾಗಿ ಘೋಷಣೆ ಕೂಗುತ್ತ ಹೋರಾಟದ ಕೆಚ್ಚು ಉಳಿಸಿಕೊಂಡವಳು. ತಾನು ಹೆಣ್ಣು ಎಂಬ ನೆನಪೇ ಇಲ್ಲದೆ ಸಂಘಟನೆಗಾಗಿ ದುಡಿದಿದ್ದಾಳೆ. ಪೊಲೀಸರು ಸೊಂಟಕ್ಕೆ ಹೊಡೆದು ರಕ್ತ ಸುರಿದಾಗಲೂ ಹೋರಾಟದಿಂದ ಹಿಮ್ಮೆಟ್ಟಿಲ್ಲ. ಆದರೆ ವರ್ಷಗಳು ಕಳೆದರೂ ಗುಣವಾಗದ ಸೊಂಟನೋವಿನ ಬಗ್ಗೆ ಅವಳ ಸಂಗಾತಿಗಳಿಗೆ ಕಾಳಜಿಯಿಲ್ಲ. ಪಕ್ಷದೊಳಗಿನ ಸ್ವಾರ್ಥ ಮತ್ತು ಲಿಂಗ ರಾಜಕಾರಣದಿಂದಾಗಿ ಅವಳ ಪರಿಶ್ರಮಕ್ಕೆ ಸರಿಯಾದ ಪ್ರತಿಫಲವೂ ಸಿಗುವುದಿಲ್ಲ. 'ಸ್ತ್ರೀಯರನ್ನು ಸಂಘಟಿಸಿ ಪಕ್ಷದೊಳಗೆ ಬಿರುಕುಂಟು ಮಾಡಲು ಯತ್ನಿಸುತ್ತಾಳೆ' ಎಂದು ಆರೋಪಿಸಿ ಅವಳ ಉತ್ಸಾಹ, ಪ್ರಭಾವಗಳನ್ನು ಕುಂದಿಸಲು ಪಕ್ಷದ ಸಂಗಾತಿಗಳೇ ಕಾರಣರಾಗುತ್ತಾರೆ. ಅವಳು ಆಗೀಗ ಬರೆವ ಕವನಗಳ ಬಗ್ಗೆಯೂ ಪುರುಷಸಂಗಾತಿಗಳಿಗೆ ಒಳ್ಳೆಯ ಅಭಿಪ್ರಾಯವಿಲ್ಲ. ಬದಲಿಗೆ ರೊಮ್ಯಾಂಟಿಕ್ ಆದ ಆ ಕವಿತೆಗಳು ಅವಳ ಸ್ವಂತ ಅನುಭವ ಮತ್ತು ಅಭಿಪ್ರಾಯಗಳೆಂಬಂತೆ ಗ್ರಹಿಸುತ್ತಾರೆ. ಹೆಣ್ಣಿನ ಬರೆಹವನ್ನು ಕಲ್ಪನೆಯೆಂದಲ್ಲದೆ ವಾಸ್ತವ ಅನುಭವಗಳಿಗೆ, ಖಾಸಗಿ ಬದುಕಿಗೆ ಸಂಬಂಧಪಟ್ಟದ್ದು ಎಂದು ಗುಮಾನಿಯಿಂದ ನೋಡುವ ಲಿಂಗ ರಾಜಕಾರಣ ಇಲ್ಲಿ ವ್ಯಕ್ತವಾಗಿದೆ.

೪.೧೦. ಪುರಾಣಸ್ತ್ರೀಯರ ಮರುನಿರೂಪಣೆ

ಪಿತೃಪ್ರಧಾನ ಸಂಸ್ಕೃತಿಯು ಹೆಣ್ಣುಮಕ್ಕಳಿಗೆ ಬುದ್ಧಿ ತಿಳಿದಾಗಿನಿಂದಲೂ ಅವರನ್ನು ಪತಿವ್ರತೆ ಮಾದರಿಯಲ್ಲಿ ಬೆಳೆಸುವ ಪ್ರಯತ್ನವನ್ನು ನಡೆಸುತ್ತದೆ. ಇದೇ ಸಹಜವೆಂದೂ ಅಪೇಕ್ಷಿತವೆಂದೂ ಹೆಣ್ಣುಮಕ್ಕಳನ್ನು ನಂಬಿಸಲಾಗುತ್ತದೆ. ಸಾಮಾನ್ಯವಾಗಿ ಮನೆಯ ಹಿರಿಯ ಸ್ತ್ರೀಯರೇ ಈ ರೀತಿ ಪತಿವ್ರತಾಧರ್ಮದ ಬಗೆಗೆ ಹೆಣ್ಣುಮಗುವಿಗೆ ಬೋಧನೆ ನೀಡುವವರಾಗಿರುತ್ತಾರೆ. ಪತಿವ್ರತಾಧರ್ಮವನ್ನು ಮೆರೆದು ಮಾನ್ಯರಾದ ಪುರಾಣಸ್ತ್ರೀಯರ ಪ್ರತಿಮೆಗಳನ್ನು ಈ ಬೋಧನೆಗೆ ಪೂರಕವಾಗಿ

ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತದೆ. ಇಂಥ ಪುರಾಣಗಳ ಸಂರಚನೆ ಮತ್ತು ನಿರಚನಗಳನ್ನು ಸ್ತ್ರೀವಿಶಿಷ್ಟ ದೃಷ್ಟಿಕೋನದೊಂದಿಗೆ ಪರಿಶೀಲಿಸುವ, ಪುರಾಣೋಕ್ತರಾದ ಸ್ತ್ರೀಮಾದರಿಗಳನ್ನು ಮಾನವೀಯ ನೆಲೆಯಲ್ಲಿ ವಿಶ್ಲೇಷಿಸುವ ಶಿಸ್ತನ್ನು ಪುರಾಣ ಸ್ತ್ರೀವಾದ ಎನ್ನುತ್ತೇವೆ. ಪುರಾಣಗಳನ್ನು ರಚಿಸಿದ ಸಂದರ್ಭ ಮತ್ತು ಉದ್ದೇಶಗಳನ್ನು ಆಧರಿಸಿ ಅಲ್ಲಿನ ಸ್ತ್ರೀಪಾತ್ರಗಳ ನಿರೂಪಣೆ, ನಿರ್ಮಾಣಗಳು ನಡೆಯುತ್ತವೆ. "ಪುರುಷರು ನಿರ್ಮಿಸಿದ ಪುರಾಣಗಳು ಮತ್ತು ಪುರುಷ ಚಿಂತನ ಕ್ರಮದ ಮಹಿಳೆಯರು ನಿರ್ಮಿಸಿದ ಪುರಾಣಗಳು ರಾಚನಿಕವಾಗಿ ಭಿನ್ನವಾಗಿರುವುದಿಲ್ಲ. ಸ್ತ್ರೀ ಸಂವೇದನೆಯ ಪುರುಷರು ಮತ್ತು ಸ್ತ್ರೀಯರು ನಿರ್ಮಿಸಿದ ಪುರಾಣಗಳು ಹೆಣ್ಣನ್ನು ಕಂಡ ಮತ್ತು ಕಂಡರಿಸಿದ ಬಗೆಗಳು ಭಿನ್ನವಾಗಿರುತ್ತವೆ. ಮತ್ತೆ ಸ್ತ್ರೀ ಸಂವೇದನೆಯೆಂದು ಹೇಳಿದಾಗಲೂ ಅದು ಏಕಾಕೃತಿಯ ಚಿಂತನಕ್ರಮ ಆಗಿರುವುದಿಲ್ಲ." (ಬಿ ಎ ವಿವೇಕ ರೈ, ಅಕ್ಕರಮನೆ, ಪು. ೧೬೦)

ಆಧುನಿಕ ಶಿಕ್ಷಣದಿಂದ ದತ್ತವಾದ ಸ್ತ್ರೀ ಸಂವೇದನೆಯ ಪ್ರಭಾವದಿಂದ ರಾಮಾಯಣ, ಮಹಾಭಾರತದಂಥ ಭಾರತೀಯ ಮಹಾಕಾವ್ಯಗಳ ಸ್ತ್ರೀಪಾತ್ರಗಳನ್ನು ಕೇಂದ್ರವಾಗಿರಿಸಿಕೊಂಡು ಸಂಸ್ಕೃತೇತರ ಭಾಷೆಗಳಲ್ಲಿ ಸೃಜನಶೀಲ ಸಾಹಿತ್ಯದ ರಚನೆಯಾಯಿತು. ಪುರಾಣೋಕ್ತ ಮಾದರಿಗಳ ಪುನರ್ ರಚನೆ ಮತ್ತು ಪುನರ್ ನಿರೂಪಣೆಗಳ ಮೂಲಕ ಸಾರ್ವತ್ರಿಕವೆಂದು ಬಿಂಬಿಸಲಾದ ಸಾಂಸ್ಕೃತಿಕ ಮೌಲ್ಯಗಳು ಹಾಗೂ ಮಾನದಂಡಗಳನ್ನು ಒರೆಗೆ ಹಚ್ಚುವ ಕೆಲಸ ನಡೆಯಿತು. ಈ ಪ್ರಕ್ರಿಯೆಯನ್ನು 'ನಿರ್‌ಪುರಾಣೀಕರಣ'ವೆಂದು ಗುರುತಿಸಲಾಗಿದೆ. ಮಲಯಾಳಂನಲ್ಲೂ ಅಂಥ ಪ್ರಯತ್ನಗಳು ನಡೆದಿರುವುದನ್ನು ಗಮನಿಸಬಹುದು. ಪುರಾಣಗಳ ಮೂಲಕ ಪ್ರತಿಪಾದಿಸಲಾಗಿರುವ ಆದರ್ಶ ಸ್ತ್ರೀಯರ ಮಾದರಿಗಳನ್ನು ಗುಮಾನಿಯಿಂದ ನೋಡುವ ಪ್ರಯತ್ನವನ್ನು ಕೆಲವು ಕೃತಿಗಳಲ್ಲಿ ಕಾಣಬಹುದಾಗಿದೆ. ಸೀತೆ, ದ್ರೌಪದಿಯರಂಥಾ ಪುರಾಣೋಕ್ತ ಮಹಾಪತಿವ್ರತೆಯರ ಒಳಗನ್ನು ಮಾನವೀಯ ಮತ್ತು ಮನೋವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸುವ ಯತ್ನವನ್ನು 'ನಾನಿನ್ನು ನಿದ್ರಿಸುವೆ' ಎಂಬ ಕಾದಂಬರಿಯಲ್ಲಿ ಹಾಗೂ 'ಅಶೋಕ' ಎಂಬ ಕತೆಯಲ್ಲಿ ಕಾಣಬಹುದು. ಪಂಚಪಾಂಡವರ ಪತ್ನಿಯಾಗಿಯೂ ನಾನಾ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದ ದ್ರೌಪದಿ ಮತ್ತು ಜಗತ್ತು ದೇವರೆಂದು ಕೊಂಡಾಡುವ ಶ್ರೀರಾಮನ ಮಡದಿಯಾಗಿ ಪಡಬಾರದ ಪಾಡುಪಟ್ಟ ಸೀತೆಯ ಮಾನವೀಯ ತಲ್ಲಣಗಳನ್ನು ಈ ಕೃತಿಗಳು ದಾಖಲಿಸಿವೆ.

ಪಿ.ಕೆ. ಬಾಲಕೃಷ್ಣನ್ ಅವರು ಬರೆದಿರುವ 'ನಾನಿನ್ನು ನಿದ್ರಿಸುವೆ' ಮಹಾಭಾರತದ ಕುರುಕ್ಷೇತ್ರ ಯುದ್ಧ ಮುಗಿದ ಬಳಿಕದ ವಿದ್ಯಮಾನಗಳನ್ನು ಐವರು ಪತಿಗಳಿಗೆ ಮಡದಿ ಎನಿಸಿಕೊಂಡ ದ್ರೌಪದಿಯ ನಿರೂಪಣೆಯಲ್ಲಿ ತಿಳಿಸುವ ಕಾದಂಬರಿ. ಮಹಾಭಾರತ ಕಥೆಯೆಂಬುದು ಈಗಾಗಲೇ ಅಸಂಖ್ಯಾತ ಕವಿಗಳು ಮತ್ತು ಕಥೆಗಾರರ ಮೂಲಕ ಭಿನ್ನವಾಗಿಯೂ, ವಿಶಿಷ್ಟವಾಗಿಯೂ ನಿರೂಪಿತವಾದ ಬಹು

ಪರಿಚಿತವಾಗಿರುವಂಥದ್ದು. ಆದರೂ ಮತ್ತೆ ಅದೇ ಕಥಾನಕವನ್ನು ಸೃಜನಶೀಲ ನಿರೂಪಣೆಗೆ ಎತ್ತಿಕೊಂಡ ಲೇಖಕರ ಆಯ್ಕೆಯಲ್ಲಿಯೆ ಸ್ತ್ರೀಪರವಾದ ಒಲವಿದೆ. ಇದೇ ಒಲವು ಈ ಕೃತಿಯ ಕನ್ನಡ ಅನುವಾದಕ್ಕೂ ಪ್ರೇರಣೆಯಾಗಿದೆ.

ಪೌರಾಣಿಕ ಕಥಾನಕವೊಂದನ್ನು ವರ್ತಮಾನಕ್ಕೆ ಒಗ್ಗಿಸಿಕೊಳ್ಳುವ ಪ್ರಯತ್ನವನ್ನು ಕಥೆಯ ವಿಶಿಷ್ಟವಾದ ಶೀರ್ಷಿಕೆಯೆ ತಿಳಿಸುತ್ತದೆ. ಐವರು ವೀರರ ಮಡದಿಯಾಗಿ ಪಡಬಾರದ ಪಾಡುಪಟ್ಟ ದ್ರೌಪದಿ ತನ್ನ ಇದುವರೆಗಿನ ಛಲ, ಪ್ರತೀಕಾರ, ಮಕ್ಕಳನ್ನು ಕಳಕೊಂಡ ನೋವು... ಇದೆಲ್ಲವನ್ನೂ ಮರೆತು ಒಬ್ಬ ಸಾಮಾನ್ಯ ಸ್ತ್ರೀಯಂತೆ ದುಗುಡ ದುಮ್ಮಾನಗಳಿಲ್ಲದ ನೆಮ್ಮದಿಯ ನಿದ್ದೆಗಾಗಿ ಹಂಬಲಿಸುವುದು ಬಹಳ ಸಾಂಕೇತಿಕವಾಗಿದೆ. ಗಂಡ, ಮನೆ, ಮಕ್ಕಳು ಎಂದು ಕುಟುಂಬದ ಒಳಿತು ಗೌರವಗಳಿಗಾಗಿ ಒದ್ದಾಡುತ್ತ ವಿಶ್ರಾಂತಿ ಇಲ್ಲದೆ ಬದುಕುವ ಸ್ತ್ರೀ, ಸ್ವಂತ ಸಮಾಧಾನವನ್ನು ನಿದ್ರೆಯಲ್ಲಷ್ಟೇ ಪಡೆಯಬೇಕಾಗಿದೆ ಎಂಬ ಸತ್ಯವನ್ನೂ ಅದು ಧ್ವನಿಸುತ್ತದೆ. ಹದಿಮೂರು ವರ್ಷಗಳ ಬಳಿಕ ಈಶ್ವರನ ಅನುಗ್ರಹದಿಂದ ನೆಮ್ಮದಿಯ ನಿದ್ರೆಗೆ ಜಾರಿದ ದ್ರೌಪದಿ ಅರ್ಧರಾತ್ರಿಯ ಚೀರಾಟಗಳಿಂದ ಅಕಾಲದಲ್ಲಿ ಎಚ್ಚರಗೊಳ್ಳಬೇಕಾಗಿ ಬರುವುದು ಕೂಡ ಅರ್ಥಪೂರ್ಣವಾಗಿದೆ. ಹೆಣ್ಣಿಗೆ ನಿದ್ರೆ ಅರ್ಥಾತ್ ವಿಶ್ರಾಂತಿ ಎಂಬುದು ಕನಸು ಮಾತ್ರ, ತನ್ನತನವನ್ನು, ಸ್ವಂತ ಅಸ್ತಿತ್ವವನ್ನು ಕಳೆದುಕೊಂಡು ಸಂಸಾರವೆ ಸರ್ವಸ್ವ ಎಂದು ನಂಬಿ ದುಡಿಯುವ ಹೆಣ್ಣು ಕೊನೆಗೂ ಒಂಟಿಯೇ ಎಂಬ ನಿಲುವು ಇಲ್ಲಿದೆ. ಹಾಗೆ ಎಚ್ಚರಾದ ಬಳಿಕ ದ್ರೌಪದಿಯ ಬದುಕಲ್ಲಿ ನಡೆದ ಸಂಗತಿಗಳು ಅವಳ ಇದುವರೆಗಿನ ಅರಿವನ್ನು ಎಚ್ಚರಿಸುತ್ತವೆ. ತಿಳುವಳಿಕೆಯನ್ನು ವಿಸ್ತರಿಸುತ್ತವೆ. ಕೊನೆಗೂ ದ್ರೌಪದಿ 'ತನ್ನ ನೋವು ತನ್ನದು ಮಾತ್ರ, ಪತಿಗಳೈವರಿದ್ದೂ ತಾನು ಒಂಟಿ' ಎಂಬ ಸತ್ಯವನ್ನು ಅರಿತುಕೊಳ್ಳುತ್ತಾಳೆ.

ವನವಾಸಕ್ಕೆ ತೆರಳುವುದಕ್ಕೆ ಮುನ್ನ ದ್ರೌಪದಿ ತನ್ನ ಐವರು ಗಂಡಂದಿರೊಡನೆ ದಾಂಪತ್ಯ ನಡೆಸಿದ್ದಾಳೆ. ಐವರು ಮಕ್ಕಳನ್ನೂ ಪಡೆದಿದ್ದಾಳೆ. ಆದರೆ ಐವರು ಪತಿಯರಿದ್ದೂ ತಾನು ಸ್ತ್ರೀತ್ವದ ಪರಿಪೂರ್ಣತೆಯನ್ನು ಒಂದು ನಿಮಿಷವೂ ಅನುಭವಿಸಿಲ್ಲ ಎಂಬುದು ಅವಳಿಗೆ ವೇದ್ಯವಾಗುವುದು ದುಃಖದ ನೆರಳುಗಳಾಗಿರುವ ಸ್ತ್ರೀರೂಪದಂತಿರುವ ಸಣ್ಣವಯಸ್ಸಿನ ಯುದ್ಧವಿಧವೆಯರನ್ನು ಕಂಡಾಗ. ಜೀವನದ ಮುಂದಿನ ದಿನಗಳನ್ನು ಪತಿಯ ಸಂಗದ ಮಧುರ ನೆನಪಿನಲ್ಲೆ ಕಳೆಯಬಹುದಾದ, ಅವರು ಅನುಭವಿಸಿದ 'ಪೂರ್ಣ ಸಾಫಲ್ಯದ ಆ ನಿಮಿಷ ತನ್ನ ಅರಿವಿಗೆ ಬರಲೆ ಇಲ್ಲ' ಎಂದಾಕೆ ಯೋಚಿಸುತ್ತಾಳೆ. ಐವರು ಪತಿಗಳಿದ್ದೂ ತಾನು ಲೈಂಗಿಕ ಸಂತೃಪ್ತಿಯನ್ನು ಪಡೆಯಲಿಲ್ಲವೆಂದು ದ್ರೌಪದಿ ಮನವರಿಕೆ ಮಾಡಿಕೊಳ್ಳುವುದು ಒಂದು ರೀತಿಯಲ್ಲಿ ಸಾಂಪ್ರದಾಯಿಕವಾದ 'ಪೌರುಷ'ದ ವ್ಯಾಖ್ಯಾನವನ್ನೆ ಅಣಕಿಸಿದಂತೆ. ಸ್ವಂತ ಸ್ತ್ರೀತ್ವವನ್ನು ನಿಷೇಧಿಸಿದ ಸ್ಥಿತಿಯಲ್ಲಿ ದ್ರೌಪದಿ ಹದಿಮೂರು ವರ್ಷಗಳನ್ನು ಕಳೆದಿದ್ದಾಳೆ. 'ಗಂಡಂದಿರ ಸೇವೆ ಮಾಡುತ್ತಾ ಗಂಡಂದಿರೊಡನೆ ಮಲಗುವುದು – ಸ್ತ್ರೀಯಂತಲ್ಲದೆ

ಮಲಗುವುದು' ಎಂಬ ಅವಳ ಸ್ವಗತವೇ ಅವಳ ಕಷ್ಟಕರ ಸ್ಥಿತಿಯನ್ನು ಧ್ವನಿಸುತ್ತದೆ. ಇಲ್ಲಿ ನಿದ್ರೆ ಎಂಬುದು ಕೇವಲ ಭೌತಿಕ ನಿದ್ರೆಯಾಗದೆ, ನೆಮ್ಮದಿಯ ಸಂಕೇತವಾಗಿದೆ.

ಕೃಷ್ಣ-ಕುಂತಿ ಇವರಿಬ್ಬರೂ ಕುರುಕ್ಷೇತ್ರ ಯುದ್ಧದ ಪೂರ್ವದಲ್ಲಿ ಕರ್ಣನನ್ನು ಸಂಧಿಸಿ ನೀಡಿದ ವಾಗ್ದಾನದಲ್ಲಿ 'ದ್ರೌಪದಿ' ಅವನ ಪಟ್ಟಮಹಿಷಿಯಾಗುವ ಉಡುಗೊರೆಯೂ ಸೇರಿತ್ತು ಎಂಬುದು ತಿಳಿದಾಗ, ತಾನು ಪಾಂಡವರ ವಶವಿರುವ ಬರಿದೆ ಸೊತ್ತು ಮಾತ್ರವಲ್ಲದೆ ತನಗೊಂದು ಸ್ವಂತ ಅಸ್ತಿತ್ವವೇ ಇರಲಿಲ್ಲವೆಂಬುದು ಅರಿವಾಗಿ ದ್ರೌಪದಿ ತಲ್ಲಣಿಸುತ್ತಾಳೆ. 'ಕರ್ಣ ಆ ಉಡುಗೊರೆಯನ್ನು ಒಪ್ಪಿಕೊಂಡಿದ್ದರೆ?' ಎಂಬ ಪ್ರಶ್ನೆ ಒಂದು ಅಸಹನೀಯ ಕನಸಾಗಿ ಅವಳನ್ನು ಕಾಡುತ್ತದೆ. ಕರ್ಣ ತನಗೆ ಆರನೆಯ ಪತಿಯಾಗಿರುತ್ತಿದ್ದ ಎಂಬ ಕಲ್ಪನೆಯನ್ನು ದ್ವೇಷಿಸುತ್ತಾಳೆ. ಹೆಣ್ಣನ್ನು 'ಶಕ್ತಿವಂತನಿಗೆ ಉಡುಗೊರೆಯಾಗುವ ವಸ್ತುವಾಗಿ' ಗ್ರಹಿಸುವುದು ದ್ರೌಪದಿಗೆ ಒಪ್ಪಿಗೆಯಿಲ್ಲ. ಇಂಥ ಉಡುಗೊರೆಯ ಪ್ರಸ್ತಾಪ ಮಾಡುವಾಗ ಕೃಷ್ಣನಾಗಲೀ, ಕುಂತಿಯಾಗಲೀ ಅವಳ ಸಮ್ಮತಿ ಕೇಳಿಲ್ಲ. ಗೆದ್ದವ ಅರ್ಜುನನಾದರೂ ಕುಂತಿಯ ಆಣತಿಯಂತೆ ಪಾಂಡವರೈವರು ಆಕೆಯನ್ನು ಹಂಚಿಕೊಂಡರು; ಅಗತ್ಯ ಬಿದ್ದರೆ ಆರನೆಯವನೊಂದಿಗೆ ಹಂಚಿಕೊಳ್ಳುವುದಕ್ಕೂ ಸಿದ್ಧರಿದ್ದಾರೆ. ಈ ಕಲ್ಪನೆ ಮಾತ್ರದಿಂದಲೆ ಆಕೆ ತನ್ನ ಪರಾಕ್ರಮಿಗಳಾದ ಪತಿಗಳನ್ನು ಅಸಹ್ಯಿಸಿಕೊಳ್ಳುತ್ತಾಳೆ.

ದುಶ್ಶಾಸನ ಸೀರೆ ಎಳೆದಾಗ, ಕೀಚಕ ಮುಡಿಗೆ ಕೈ ಹಾಕಿ ಜಗ್ಗಿ ಬೀಳಿಸಿದಾಗ, ಜಯದ್ರಥ ಹೊತ್ತುಕೊಂಡು ಹೋದಾಗ, ಅವಳ ಐವರು ಪತಿಗಳು ಅವಳನ್ನು ರಕ್ಷಿಸಿಕೊಳ್ಳಲಿಲ್ಲ ಎಂಬುದನ್ನು ನೆನಪಿಸಿಕೊಳ್ಳುವ ದ್ರೌಪದಿ ತನ್ನ ಪ್ರಜ್ಞೆಯೊಳಗೆ ಪಾಂಡವರ ಪೌರುಷವನ್ನು ನಿರಾಕರಿಸುತ್ತಿದ್ದಾಳೆ. ಕರ್ಣನ ಕೃಪೆಯಿಂದ ತನ್ನ ಮಾಂಗಲ್ಯ ಉಳಿಯುವಂತಾದ ಬಗ್ಗೆ ಅವಳಿಗೆ ಸಮಾಧಾನವಿಲ್ಲ. ಅರ್ಜುನನನ್ನುಳಿದು ತನ್ನ ನಾಲ್ವರು ಗಂಡಂದಿರು ಕರ್ಣನಿಂದ ಜೀವದಾನ ಪಡೆದವರಾದುದರಿಂದ ಫಲದಲ್ಲಿ ಮೃತಪಟ್ಟವರು; ಹಾಗಾಗಿ 'ತಾನೂ ವಿಧವೆಯೆ' ಎಂಬ ದ್ರೌಪದಿಯ ಭಾವನೆ ಪರಮ ಪರಾಕ್ರಮಿಗಳಾದ ಪಾಂಡವರ ಅಸ್ತಿತ್ವವನ್ನೆ ಅಲುಗಾಡಿಸುವಂಥದ್ದು.

ಯುಧಿಷ್ಠಿರನ ವರ್ತನೆಯ ಕುರಿತಾಗಿ ಅಸಮಾಧಾನವಿದ್ದರೂ ಅಣ್ಣನನ್ನು ಕೊಂದ ಪಾಪದಿಂದ ತೊಳಲುವವನನ್ನು ಓರ್ವ ತಾಯಿಯಂತೆ ಸಂತೈಸುವ ದ್ರೌಪದಿ, ತನ್ನ ಮಕ್ಕಳಿಗೆ ಅಮ್ಮನ ವಾತ್ಸಲ್ಯ ನೀಡಲಿಲ್ಲ. ಎಲ್ಲ ತಾಯಂದಿರಂತೆ ಅವರನ್ನು ಲಾಲಿಸಲಿಲ್ಲ, ಪಾಲಿಸಲಿಲ್ಲ. 'ಪತಿಸ್ನೇಹದ ಅಂಧಕಾರದಲ್ಲಿ ಕರಗಿ ಹೋಗಿದ್ದ ತನಗೆ ಮಕ್ಕಳನ್ನು ಪ್ರೀತಿಸಲಾಗಲಿಲ್ಲ' ಎಂಬುದು ದ್ರೌಪದಿಗೆ ತಡವಾಗಿ ಅರ್ಥವಾಗುತ್ತದೆ. ಸೂರ್ಯ, ಪಾಂಡು, ಯಮ, ವಾಯು, ಇಂದ್ರರಿಂದ ಮಕ್ಕಳನ್ನು ಪಡೆದ ಕುಂತಿ ಹಾಗೂ ಐವರಿಗೆ ಪತ್ನಿಯಾಗಿ ಮಕ್ಕಳನ್ನು ಪಡೆದ ತಾನು, ಇಬ್ಬರೂ 'ಹಲವು ತಂದೆಯಂದಿರಿಂದ ಓರ್ವ ತಾಯಿಗೆ ಹುಟ್ಟಿದ ಎಲ್ಲಾ ಮಕ್ಕಳಿಗಾಗಿ ವಿಧಿ ಸೃಷ್ಟಿಸಿದ ಏಕಪತ್ನಿ' ಯಾದುದನ್ನು 'ವಿಧಿ ರಚಿಸಿದ

ಮನರಂಜನಾ ಕಥೆ' ಎಂದು ದ್ರೌಪದಿ ಭಾವಿಸುತ್ತಾಳೆ. ಸಾಮಾನ್ಯ ಸ್ತ್ರೀಯರಂತೆ ಗರತಿಯರಾಗುವುದು ಕುಂತಿ, ದ್ರೌಪದಿಯರಿಗೆ ಸಾಧ್ಯವಾಗಿಲ್ಲ.

ಹೆಣ್ಣಿಗೆ ಸೌಂದರ್ಯವೇ ಅಪಾಯವನ್ನುಂಟುಮಾಡುತ್ತದೆ ಎಂಬುದು ದ್ರೌಪದಿಯ ಅನುಭವವಾಗಿದೆ. ಹಾಗಾಗಿ ಭುವನಪ್ರಸಿದ್ಧವಾದ ತನ್ನ ನೀಳ ಸುರುಳಿಗೂದಲನ್ನು ದ್ವೇಷಿಸುತ್ತಾಳೆ. ವಿಟರು ಸುತ್ತಿ ಹಿಡಿದು ಸ್ತ್ರೀತನಕ್ಕೆ ಗಾಯವುಂಟು ಮಾಡಲೆಂದೇ ವಿಧಿ ಇದನ್ನು ನೀಡಿತೆಂದು ಯೋಚಿಸುತ್ತಾಳೆ. ಯುದ್ಧದಲ್ಲಿ ಪುತ್ರರನ್ನೂ ಸ್ವಜನರನ್ನೂ ಕಳೆದುಕೊಂಡ ದುಃಖಕ್ಕಿಂತಲೂ, ಈ ದುಃಖ ತನ್ನಂತೆ ತನ್ನ ಗಂಡಂದಿರನ್ನು ಬಾಧಿಸುತ್ತಿಲ್ಲ ಎಂಬುದು ಅವಳನ್ನು ಹೆಚ್ಚು ನೋಯಿಸುತ್ತದೆ. ಧರ್ಮವೇ ಮುಖ್ಯವಾದ ಯುಧಿಷ್ಠಿರ ಮತ್ತು ಅಣ್ಣನಿಗೆ ಸದಾ ವಿಧೇಯರಾದ ಭೀಮಾದಿಗಳ ನಡುವೆ ಯುದ್ಧದ ಕಿಡಿಯನ್ನು ಎದೆಯೊಳಗೆ ಉರಿಸಿಕೊಂಡೇ ಬದುಕಿದವಳು ತಾನು ಮಾತ್ರ ಎಂಬ ಸತ್ಯ ದ್ರೌಪದಿಯನ್ನು ಕಾಡುತ್ತದೆ.

ಕಾನೀನ ಸಂತಾನವಾಗಿ ಹೆತ್ತವರ ಪ್ರೀತಿಗೆ ಎರವಾಗಿ ಸೂತಪುತ್ರ ಎಂಬ ಅವಮಾನದಿಂದ ಬೆಳೆದರೂ ಅಸೀಮ ವೀರನಾಗಿ ರೂಪುಗೊಳ್ಳುವ ಕರ್ಣ ಇಲ್ಲಿನ ದ್ರೌಪದಿಯ ಮಟ್ಟಿಗೆ ಉದಾತ್ತ ಪಾತ್ರ. ದ್ರೌಪದಿ ತನ್ನ ಸ್ವಯಂವರದ ಸಂದರ್ಭದಿಂದಾರಂಭಿಸಿ ಕುರುಕ್ಷೇತ್ರ ಯುದ್ಧದಲ್ಲಿ ಆತ ಸಾಯುವಲ್ಲಿನವರೆಗೂ ಅವನನ್ನು ದ್ವೇಷಿಸಿದ್ದಾಳೆ. ಆದರೆ ಆತ 'ಪಾಂಡವಾಗ್ರಜ' ಎಂಬೊಂದು ಸತ್ಯ ಬಯಲಾಗುತ್ತಲೇ ಕರ್ಣನ ಕುರಿತಾದ ನಿರ್ವಚನಗಳು ಬದಲಾಗುತ್ತವೆ. ಸಂಜಯನ ಅಂತರ್‌ದೃಷ್ಟಿಯ ಮೂಲಕ ಕರ್ಣನ ಬದುಕನ್ನು ಬದಲಾಯಿಸಿದ ಸಂದರ್ಭಗಳನ್ನು ಆಕೆ ಮುಖತಃ ಕಾಣುವಂತಾಗುತ್ತದೆ. ಸುಯೋಧನನ ಸ್ನೇಹಕ್ಕಾಗಿ ಕುರುವಂಶದ ಚಕ್ರವರ್ತಿ ಪಟ್ಟವನ್ನು ತಿರಸ್ಕರಿಸುವ ಕರ್ಣನ ಸ್ವಾಮಿನಿಷ್ಠೆ, ಕುಂತಿಯ ಬಯಕೆಯಂತೆ ಮಧ್ಯಮ ಪಾಂಡವನನ್ನುಳಿದು ಇತರರನ್ನು ಕೊಲ್ಲುವುದಿಲ್ಲವೆಂಬ ತನ್ನ ಅಭಯನುಡಿಯನ್ನು ಪಾಲಿಸುವಲ್ಲಿನ ಪ್ರಾಮಾಣಿಕತೆ, ತಂದೆಯಾದ ಸೂರ್ಯ ಮುನ್ನೆಚ್ಚರಿಕೆ ಕೊಟ್ಟಿದ್ದರೂ ದೇವೇಂದ್ರ ಮಾರುವೇಷದಲ್ಲಿ ಬಂದು ಬೇಡಿದನೆಂದು ಜನ್ಮದತ್ತವಾದ ಕಲಶಕುಂಡಲಗಳನ್ನು ಹರಿದು ಕೊಟ್ಟು ಅವನು ಮೆರೆದ ದಾನಪರತೆ.. ಇಂಥ ಸಂಗತಿಗಳು ದ್ರೌಪದಿಯ ಗ್ರಹಿಕೆಗಳನ್ನು ಅಲುಗಾಡಿಸುತ್ತವೆ. ಅಲ್ಲಿಂದಾಚೆಗೆ ದ್ರೌಪದಿ ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ಎತ್ತುವ ಪ್ರಶ್ನೆಗಳು ಕೃತಿಯನ್ನು ರೂಪಿಸಿವೆ.

'ದ್ರೌಪದೀ, ನೀನು ಪತಿವ್ರತೆಯೇ? ನಿನಗೆಂದಾದರೂ ಸ್ನೇಹ ದೊರೆತಿದೆಯೇ? ಪ್ರಾಣಸಹಿತ ಐದು ಜನ ಪತಿಯರಿರುವ ನೀನು ಸನಾಥಳೇ?' ಇವು ದ್ರೌಪದಿಯ ಹೃದಯದ ಅಂದರೆ ಸ್ವಗತದ ಪ್ರಶ್ನೆಗಳು. ಆತ್ಮಶೋಧನೆಯ ಪ್ರಶ್ನೆಗಳು. ಸ್ನೇಹ ಅಂದರೇನು? ಎಂಬ ವಿಶ್ಲೇಷಣೆಯಲ್ಲಿ ತೊಡಗಿದ ದ್ರೌಪದಿಗೆ ತನಗೆಂದೂ ತನ್ನ ಪತಿಗಳಿಂದ ಸ್ನೇಹ ದೊರೆಯಲಿಲ್ಲ ಎಂಬುದು ತುಂಬ ನೋವು ಕೊಡುವ ಸಂಗತಿ. 'ತನ್ನನ್ನು ಕುರಿತ ಸ್ನೇಹದಿಂದ ತನ್ನ ಗಂಡಂದಿರು ಒಂದು ನಿಮಿಷವೂ ಅಂಧರಾಗಲಿಲ್ಲ. ತನಗೆ ಗರತಿತನ,

ವೈಧವ್ಯ ಎರಡೂ ಸಾಧ್ಯವಾಗಲಿಲ್ಲ' ಎಂಬುದು ಅವಳ ನೋವು ತುಂಬಿದ ಆತ್ಮನಿವೇದನೆ. ತಾನು ಒಮ್ಮೆಯೂ ಪತಿವ್ರತಾ ಧರ್ಮವೆಂಬ ದಿವ್ಯ ವಿಗ್ರಹವನ್ನು ಭಂಜಿಸಲಿಲ್ಲ ಎಂದು 'ಸ್ವಂತ ವಿಶ್ವಾಸಕ್ಕಾಗಿ ಎಂಬಂತೆ' ಮತ್ತೆ ಮತ್ತೆ ಚಿಂತಿಸುವ ದ್ರೌಪದಿಗೆ ತಾನು ಪಾತಿವ್ರತ್ಯದ ಗೆರೆಯನ್ನು ದಾಟಲಿಲ್ಲವೆಂಬ ಬಗ್ಗೆ ಸ್ವತಃ ವಿಶ್ವಾಸವಿಲ್ಲ.

'ಪತಿವ್ರತೆಯರಾದ ಕುಲೀನ ಸ್ತ್ರೀಯರನ್ನು ರಾಜಸಭೆಗೆ ಕರೆಸಿಕೊಳ್ಳುವ ಪದ್ಧತಿ ಇಲ್ಲವಲ್ಲಾ?' ಎಂಬ ದ್ರೌಪದಿಯ ಪ್ರಶ್ನೆ, 'ತಾನು ರಜಸ್ವಲೆಯಾಗಿದ್ದು ಒಂದೇ ಬಟ್ಟೆಯಲ್ಲಿರುವುದರಿಂದ ರಾಜಸಭೆಗೆ ಬರುವಂತಿಲ್ಲ' ಎಂಬ ಆಕೆಯ ವಿನಂತಿ, 'ದಾಸಿಯಾದ ನೀನು ಒಂದೇ ಬಟ್ಟೆ ಧರಿಸಿದರೇನು? ಬಟ್ಟೆಯನ್ನೇ ಧರಿಸದಿದ್ದರೇನು?' ಎಂಬ ದುಶ್ಯಾಸನನ ಉಡಾಫೆಯ ಉತ್ತರ.. ಇವು ಪುರಾಣಕಾಲದ ಹೆಣ್ಣಿನ ಸ್ಥಿತಿಯನ್ನು ಬಿಂಬಿಸುವಂತಿವೆ. ದಾಸಿ ಎಂದರೆ 'ವೇಶ್ಯೆ' ಎಂದೇ ಪರಿಭಾವಿಸುವ ರಾಜಕೀಯ ವ್ಯವಸ್ಥೆ, ರಜಸ್ವಲೆಯಾದ ಹೆಣ್ಣು ಏಕಾಂತದಲ್ಲಿ ಏಕಬಟ್ಟೆಯಲ್ಲಿ ಮರೆಯಾಗಿರಬೇಕಾದ ಸಾಮಾಜಿಕ ಪದ್ಧತಿ ಇಂದು ನಿನ್ನೆಯದಲ್ಲ. ಸೂತನಾದ ಕರ್ಣನೂ ಹಲವು ಸ್ತ್ರೀಯರನ್ನು ವರಿಸಿದ್ದಾನೆ ಎಂಬ ವಿಚಾರವು ಅವನ ಮತ್ತು ಕುಂತಿಯ ನಡುವಿನ ಸಂಭಾಷಣೆಗಳಿಂದ ತಿಳಿಯುತ್ತದೆ. ಅಂದರೆ ಬಹುಪತ್ನಿತ್ವವೆಂಬುದು ಕುಲದ ಪ್ರಶ್ನೆಯಾಗದೆ, ಅಧಿಕಾರದ, ಅಂತಸ್ತಿನ, ಸಾಮರ್ಥ್ಯದ ಪ್ರಶ್ನೆಯಾಗಿತ್ತು; ಸಾಕುತಂದೆಯಾದ ಅಧಿರಥನಂತೆ ಕರ್ಣನು ಕೇವಲ ರಥಿಕನಾಗಿರದೆ, ಅಂಗರಾಜನಾದುದರಿಂದ ಬಹುಪತ್ನಿಯರನ್ನು ಹೊಂದಿದ್ದಾನೆ ಎಂದು ತಿಳಿಯಬಹುದು.

ಸತ್ಯದ ಕಾಲ, ಧರ್ಮದ ಕಾಲ ಎಂದು ಬಿಂಬಿಸಲ್ಪಟ್ಟಿರುವ ಪುರಾಣಕಾಲದಲ್ಲೂ ಹೆಣ್ಣಿಗೆ ವೈಧವ್ಯವು ಶಾಪವೇ ಆಗಿತ್ತು. ಸಾಮಾನ್ಯ ಮಹಿಳೆಯರು ಮಾತ್ರವಲ್ಲ, ರಾಜಮನೆತನದ ಸ್ತ್ರೀಯರೂ ಸಾಮಾಜಿಕ ವ್ಯವಸ್ಥೆಯಲ್ಲಿ ಶೋಷಣೆಗೆ ಒಳಗಾದವರೇ ಆಗಿದ್ದರು. ಹೆಣ್ಣುಮಕ್ಕಳಿಗೆ ಗಂಡ ಹೆಂಡತಿಯ ಸಂಬಂಧವನ್ನು ತಿಳಿದುಕೊಳ್ಳಲಾಗದ ಸಣ್ಣ ವಯಸ್ಸಿನಲ್ಲಿಯೆ ಮದುವೆ ಮಾಡುತ್ತಿದ್ದರು. ಮರಣಿಸಿದ ಪತಿಯನ್ನು ನೆನಪಿಸಿಕೊಂಡು ದುಃಖಿಸುತ್ತ ಹಸ್ತಿನಾವತಿಯ ರಾಜಬೀದಿಯಲ್ಲಿ ಕುಲ, ಲಜ್ಜೆ, ಮಾನಗಳನ್ನು ಮರೆತು ಒಂದೇ ಬಟ್ಟೆ ತೊಟ್ಟು ಸಾಗುತ್ತಿದ್ದ ಯುದ್ಧವಿಧವೆಯರನ್ನು ಕಂಡು ದ್ರೌಪದಿ ಮರುಗುತ್ತಾಳೆ. ಅದುವರೆಗೂ ಹಿಂಸಾಪ್ರಿಯಳಾಗಿ ಯುದ್ಧವನ್ನು ಬೆಂಬಲಿಸಿದ್ದ ದ್ರೌಪದಿಯು ಯುದ್ಧದ ನಿಸ್ಸಾರತೆಯನ್ನು ಮನಗಾಣುವಂತೆ ಮಾಡಿದ ದೃಶ್ಯ ಅದು. 'ಗಂಡನೆಂದರೆ ಜೊತೆಯಲ್ಲಿ ಆಟವಾಡುವ ಒಡನಾಡಿ ಎಂದೇ ತಿಳಿದಿದ್ದ ಎಳೆಯ ಹೆಣ್ಣುಮಕ್ಕಳು. ಆಗಲೇ ಅವರಿಗೆ ನಿತ್ಯ ವೈಧವ್ಯ' ಪ್ರಾಪ್ತವಾಗಿದೆ. ಪತಿಯನ್ನು ಕಳಕೊಂಡಲ್ಲಿಗೆ ಆ ಎಳೆಯ ಯುವತಿಯರ ಬದುಕಿನ ಸಂತೋಷದ ದಿನಗಳು ಮುಗಿದಂತೆಯೆ. 'ಭಕ್ತರ ಉದ್ಧಾರಕ್ಕಾಗಿ ಭೂಮಿಯಲ್ಲಿ ಅವತರಿಸಿದ ದೇವರುಗಳು ಕೂಡ ಪತಿಯನ್ನು ಕಳೆದುಕೊಂಡು ಒಂಟಿಯಾಗುವ ಸ್ತ್ರೀಯರನ್ನು ನೋವಿನಿಂದ ಉದ್ಧರಿಸುವ ಪ್ರಯತ್ನ ಮಾಡಿಲ್ಲ' ಎಂದು

ಯೋಚಿಸುವ ದ್ರೌಪದಿ ಹೆಣ್ಣಿನ ನೋವಾಗಲೀ, ಸಮಸ್ಯೆಯಾಗಲೀ ಸಮಾಜದ ಕಾಳಜಿಯಾಗದೆ ಅವಳ ವೈಯಕ್ತಿಕ ನೆಲೆಯ ದುರಂತವಾಗಿ ಉಳಿಯುವುದನ್ನು ಗುರುತಿಸಿದ್ದಾಳೆ.

ಯುದ್ಧವಿಧವೆಯರ ದಾರುಣ ಸ್ಥಿತಿಗೆ ಕಾರಣವಾದ ಕುರುಕ್ಷೇತ್ರ ಯುದ್ಧವು ಪುರುಷನ ಅಹಂಗಾಗಿ ಅನಿವಾರ್ಯವಾಯಿತೆ ಹೊರತು ತನಗಾದ ಅನ್ಯಾಯಕ್ಕಾಗಿ ಅಲ್ಲ ಎಂಬ ಸತ್ಯವನ್ನು ಯುದ್ಧ ಮುಗಿದ ಮರುದಿನ ದ್ರೌಪದಿ ಅರ್ಥಮಾಡಿಕೊಳ್ಳುತ್ತಾಳೆ. ಹದಿನೇಳು ರಾತ್ರಿಗಳನ್ನು ನಿದ್ರೆಯಿಲ್ಲದ ಆತಂಕದಲ್ಲಿ ಕಳೆದ ಮಹಿಳೆಯರು ನವವಧುಗಳಂತೆ ಅಲಂಕರಿಸಿಕೊಂಡು ಲಾಸ್ಯದಿಂದ ಸಿದ್ಧರಾಗಿದ್ದಾರೆ. ಈ ಮಹಿಳೆಯರು ಸುಖಿಗಳಲ್ಲ, ಯುದ್ಧ ಅವರಿಗೆ ಸ್ವಜನರ ಅಗಲುವಿಕೆಯ ನೋವು ಕೊಟ್ಟಿದೆ. ಆದರೆ ಪ್ರಭುತ್ವದ ಆಣತಿಯಂತೆ ಅವರದನ್ನು ಮರೆತು ಅಥವಾ ಮರೆತಂತೆ ತೋರಿಸಿಕೊಂಡು ವಿಜಯವನ್ನು ಆಚರಿಸಲೇಬೇಕಾಗಿದೆ. 'ಪತಿವ್ರತೆಯರ ಮಹಡಿಗಳಲ್ಲಿ ಮಂಗಳ ದೀಪಗಳು ಸಾಲುಸಾಲಾಗಿ ಬೆಳಗಿದವು. ಮೃತರಾದ ಸ್ವಜನರನ್ನು ನೆನೆದು ದುಃಖಿತರಾಗಿದ್ದ ರಾಣಿಯರು ಕೂಡಾ ಸ್ವಪಕ್ಷಕ್ಕೆ ದೊರೆತ ವಿಜಯದಿಂದ ವೇದನೆ ಮರೆತು ಸಂತೋಷ ಪ್ರಕಟಿಸುವುದರಲ್ಲಿ ಮಗ್ನರಾದರು' ಎಂಬ ಸಾಲುಗಳು ಪತಿಯನ್ನು ಕಳೆದುಕೊಂಡು ಅಳುತ್ತಿದ್ದ ವಿಧವೆಯರೂ ವೈಯಕ್ತಿಕ ದುಃಖ ಮರೆತು ರಾಜನ ಸಂತೋಷದಲ್ಲಿ ಪಾಲುಗೊಳ್ಳಬೇಕಾದ ಅನಿವಾರ್ಯತೆಯನ್ನು ಕಾಣಿಸುತ್ತವೆ. ಸತ್ತವರು ವೀರಸ್ವರ್ಗವನ್ನು ಸೇರಿದವರು ಎಂದು ನಂಬಿಸುವ ಮೂಲಕ ಬದುಕಿರುವವರ ಸಂಕಟವನ್ನು ನಿಯಂತ್ರಿಸುವ, ರಾಜರ ರಾಜ್ಯದಾಹಕ್ಕಾಗಿ ಮತ್ತಷ್ಟು ವೀರರನ್ನು ಒದಗಿಸುವ ಯುದ್ಧದ ಪರಿಕಲ್ಪನೆಯಲ್ಲಿಯೆ ರಾಜಕೀಯವಿದೆ. ಅಧಿಕಾರವು ನಿರ್ದೇಶಿಸಿದಂತೆ ಬದುಕಬೇಕಾದ ಇಂಥ ಹೆಂಗಳೆಯರಿಗೆ ಸ್ವಂತ ಬದುಕೆಂಬುದಿಲ್ಲ.

ರೋದಿಸುತ್ತಿರುವ ವಿಧವಾ ಶತ್ರುಗಳು ಒಬ್ಬರನ್ನೊಬ್ಬರು ಸಂಧಿಸುತ್ತಿರುವ ದೃಶ್ಯವನ್ನು ಕಂಡ ಸಂಜಯನಿಗೆ ಯುದ್ಧಭೂಮಿಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕೆಂದು ತೋರುತ್ತದೆ. ಗಂಡಸರ ನಡುವೆ ಮೇಲ್ಮೆಯ ಸ್ಥಾಪನೆಗಾಗಿ ನಡೆವ ಯುದ್ಧದಲ್ಲಿ ಯಾರೇ ಗೆಲ್ಲಲಿ, ಯಾರೇ ಸೋಲಲಿ, ಸಾವಿರಾರು ಮಹಿಳೆಯರು ವಿಧವೆಯರಾಗುತ್ತಾರೆ, ನಿರ್ಗತಿಕರಾಗುತ್ತಾರೆ ಎಂಬುದಂತೂ ವಾಸ್ತವ ಎಂಬ ಅಂಶವೊಂದು ಸಂಜಯನ ಪ್ರಜ್ಞೆಯಿಂದ ಓದುಗರ ಪ್ರಜ್ಞೆಗೆ ದಾಟುತ್ತದೆ. 'ಯುದ್ಧವು ವಿಧವೆಯರನ್ನು ಸೃಷ್ಟಿಸುತ್ತದೆ' ಎಂಬ ಸಾರ್ವತ್ರಿಕ ಗ್ರಹಿಕೆಗೆ ಕುರುಕ್ಷೇತ್ರ ಯುದ್ಧಭೂಮಿಯ ಚಿತ್ರ ಪುಷ್ಟಿಯನ್ನೊದಗಿಸುತ್ತದೆ. ಪುರುಷರ ಅಹಂನ ಸ್ಥಾಪನೆಗಾಗಿ ನಡೆಯುವ ಯುದ್ಧಗಳು ಹಲವು ರೂಪದಲ್ಲಿ ಸ್ತ್ರೀಯರನ್ನು ಅಧೀನರನ್ನಾಗಿ ಉಳಿಸುವ 'ಅಧಿಕಾರ ರಾಜಕಾರಣ'ದ ಪೋಷಣೆ ಮಾಡುತ್ತವೆ.

ಸ್ತ್ರೀಯರ ಶೋಷಣೆಗೆ ಕಾರಣವಾಗುವ ಪುರುಷರ ಅಧಿಕಾರದ ಬಗೆಗೆ ದ್ರೌಪದಿಗೆ ಗಂಭೀರವಾದ ಪ್ರಶ್ನೆಗಳಿವೆ. ವರ್ತಮಾನದ ರಾಜಕಾರಣದ ಪ್ರಜ್ಞೆಯೂ ಇದೆ. ಧರ್ಮ, ಪರಂಪರೆ, ಸಮಾಜ ಮುಂತಾದ ಆದರ್ಶಗಳಲ್ಲಿ ವಾಸ್ತವ ಮರೆತವಳಲ್ಲ ಅವಳು. ಸಂಜಯನ ನಿರೂಪಣೆಯ ಮೂಲಕ ಕುರುಕ್ಷೇತ್ರದ

ಘಟನೆಗಳನ್ನು ಅರ್ಥಮಾಡಿಕೊಳ್ಳುತ್ತ, 'ತಾನೂ ಆ ವಿಧವೆಯರೆಡೆಯಲ್ಲಿ ಓರ್ವ ವಿಧವೆ' ಎಂದಾಕೆಗೆ ಅನಿಸಿಬಿಡುತ್ತದೆ. ತನ್ನ ಗಂಡಂದಿರ ಪ್ರಾಣಗಳು ಕರ್ಣನ ಭಿಕ್ಷೆ ಎಂಬುದನ್ನು ಆಕೆ 'ಅವಮಾನ' ಎಂದು ಗ್ರಹಿಸುತ್ತಾಳೆ. ಕರ್ಣನ ಶೌರ್ಯದ ಮುಂದೆ ನಿಲ್ಲಲಾಗದೆ, ಗಾಯಗೊಂಡ ದೇಹ ಮತ್ತು ಗಾಯಗೊಂಡ ಅಭಿಮಾನಗಳೊಂದಿಗೆ ಯುದ್ಧ ವಿಮುಖರಾಗಿ ಸೋತು ಹಿಂತಿರುಗುವ ಪಾಂಡವರ ಚಿತ್ರ ಆಕೆಗೆ ಅಸಹನೀಯವಾಗಿದೆ.

ಪುರುಷ ದೌಷ್ಟ್ಯಕ್ಕೆ, ಸ್ವಾರ್ಥಕ್ಕೆ, ಅಹಮ್ಮಿಗೆ ಎದುರಾಗಿ ನಿಲ್ಲುವ ದ್ರೌಪದಿ ಗಂಡನ ಪದವಿಯ ಅರ್ಹತೆಯನ್ನು ಒರೆಗೆ ಹಚ್ಚುವ ಮಹತ್ವದ ಪ್ರಶ್ನೆಯೊಂದನ್ನು ರಾಜಸಭೆಯಲ್ಲಿ ಕೇಳುತ್ತಾಳೆ. ಜೂಜಿನ ಹುಚ್ಚಿನಿಂದ ತನ್ನನ್ನು ತಾನೇ ಸೋತು ಗುಲಾಮನಾದ ರಾಜನಿಗೆ ತಾನು ಸೋತ ಬಳಿಕ ತನ್ನ ಪತ್ನಿಯ ಸ್ವಾತಂತ್ರ್ಯವನ್ನು ಪಣಕ್ಕಿಡಲು ಶಾಸ್ತ್ರದ ಅನುಮತಿ ಇದೆಯೇ ಎಂಬುದೇ ಆ ಪ್ರಶ್ನೆ. ಈ ಸೂಕ್ಷ್ಮವಾದ ಪ್ರಶ್ನೆಗೆ ಉತ್ತರ ಹೇಳುವುದು ಭೀಷ್ಮ, ದ್ರೋಣ, ಕೃಪ ಮುಂತಾದ ಮಹಾಜ್ಞಾನಿಗಳು ಇರುವ ಆ ಸಭೆಯಲ್ಲಿ ಯಾರಿಗೂ ಸಾಧ್ಯವಾಗುವುದಿಲ್ಲ. ಸ್ತ್ರೀಯರು ತಮಗೆ ವಿಧಿಸಲಾದುದನ್ನು ಪ್ರಶ್ನಿಸದೆ ಒಪ್ಪಿಕೊಳ್ಳುವುದನ್ನಷ್ಟೇ ನಿರೀಕ್ಷಿಸುವ ಸಮಾಜವು ಸ್ತ್ರೀಯರ ನ್ಯಾಯವಾದ ಪ್ರಶ್ನೆಗಳಿಗೆ ಉತ್ತರಿಸುವ ನೈತಿಕತೆಯನ್ನು ಹೊಂದಿಲ್ಲ. ಸರಿಯಾದ ಉತ್ತರವಿಲ್ಲದೆ ಹೋದಾಗ ಪ್ರಶ್ನೆಯನ್ನು ನಿರ್ಲಕ್ಷಿಸಿ ಸುಮ್ಮನಿರುತ್ತದೆ ಅಥವಾ ಪ್ರಶ್ನಿಸಿದ ಸ್ತ್ರೀಯನ್ನು ಅಧಿಕಾರಬಲದಿಂದ ಸುಮ್ಮನಿರಿಸುತ್ತದೆ.

ಮಹಾ ಮುಂಗೋಪಿಯಾದ ದೂರ್ವಾಸ ಒಂದು ವರ್ಷ ಕುಂತೀಭೋಜನ ಆತಿಥ್ಯದಲ್ಲಿ ಇರಲು ಬಯಸಿದಾಗ, ಅರಸ ತನ್ನ ಸಾಕುಮಗಳಾದ ಕುಂತಿಯನ್ನು ಮುನಿಗಳ ಆತಿಥ್ಯಕ್ಕೆ ಬಳಸಿಕೊಳ್ಳುತ್ತಾನೆ. ಈ ಆಯ್ಕೆಗೆ ಕಾರಣ ಆಕೆ 'ಬಾಲೆಯೂ, ಸುಂದರಿಯೂ, ಸುಶೀಲೆಯೂ, ಸಹನಶೀಲೆಯೂ' ಆಗಿರುವುದು. ಹೆಣ್ಣಿನಿಂದ ಸಮಾಜ ಬಯಸುವ ಗುಣಗಳ ಈ ಪಟ್ಟಿಯೇ ಆ ಕಾಲದ ಸಮಾಜದ ಸ್ತ್ರೀ ನಿರ್ವಚನಕ್ಕೆ ಒಳ್ಳೆಯ ಉದಾಹರಣೆಯಾಗಿದೆ. ಈ ಒಳ್ಳೆಯ ಗುಣಗಳೇ ಆಕೆಗೆ ಮುಳುವಾಗುತ್ತವೆ. ದೂರ್ವಾಸ ಒತ್ತಾಯದಿಂದ ಕೊಟ್ಟ ವರವೇ ಆಕೆಗೆ ಶಾಪವಾಗುತ್ತದೆ. ಮುನಿಯಿಂದ ಸಾಕುತಂದೆಗೆ ಶಾಪ ತಟ್ಟೀತು ಎಂದು ಹೆದರಿ ಕುಂತಿ ವರಮಂತ್ರವನ್ನು ಸ್ವೀಕರಿಸುತ್ತಾಳೆ. ಅನನುಭವಿ ವಯಸ್ಸಿನ ಅದಮ್ಯ ಕುತೂಹಲದಿಂದ ಸೂರ್ಯನನ್ನು ಕರೆದು ಪಾಯವನ್ನು ಆಹ್ವಾನಿಸಿಕೊಳ್ಳುತ್ತಾಳೆ. ತಕ್ಷಣವೆ ದುಡುಕಿನ ಅರಿವಾಗಿ ಅವನನ್ನು ಹಿಂದಿರುಗುವಂತೆ ಬೇಡಿಕೊಂಡರೂ ಸೂರ್ಯ ಅದಕ್ಕೊಪ್ಪದೆ, 'ಮಂತ್ರವನ್ನು ಧಿಕ್ಕರಿಸಿದರೆ ಆತ್ಮವಿನಾಶವೆ ಫಲ. ಪುತ್ರೋತ್ಪಾದನೆ ಮಾಡಲೇಬೇಕು' ಎಂದು ಒತ್ತಡ ಹೇರುತ್ತಾನೆ. ಮಾತ್ರವಲ್ಲ, "ಒಪ್ಪದಿದ್ದರೆ ನಿನ್ನನ್ನೂ, ನಿನ್ನ ತಂದೆಯನ್ನೂ, ವರವಿತ್ತ ಭೂಸುರನನ್ನೂ ಶಾಪವಿತ್ತು ಭಸ್ಮ ಮಾಡುವೆ" ಎಂದಾತ ಬೆದರಿಸುವುದು ಪುರುಷ ದೌರ್ಜನ್ಯದ ಪ್ರತೀಕವಾಗಿದೆ. "ಗರ್ಭಧರಿಸಿದ ಮೇಲೂ ನೀನು ಕನ್ಯೆಯಾಗಿ ಉಳಿಯುವೆ. ನಿನ್ನ ಕೌಮಾರ್ಯಕ್ಕೆ, ವಂಶಗೌರವಕ್ಕೆ ಈ ಸಂಗದಿಂದ

ಉಲ್ಲಂಘನೆಯಾಗದು" ಎಂದು ಸೂರ್ಯ ಆಶ್ವಾಸನೆ ಕೊಡುತ್ತಾನೆ. ಹಾಗಿದ್ದರೆ ಹೆಣ್ಣಿನ 'ಕನ್ಯತ್ವ' ಎಂಬುದು ಕೇವಲ ಒಂದು ಭೌತಿಕ ಸತ್ಯವಾಗಿ, ನಂಬಿಸಬೇಕಾದ ಸತ್ಯವಾಗಿ ಮಾತ್ರ ಇದೆ. ಇಂಥದೇ ಘಟನೆಯೊಂದು ಮಹಾಭಾರತದ ಪರಾಶರ-ಮತ್ಸ್ಯಗಂಧಿಯರ ಸಂದರ್ಭದಲ್ಲೂ ನಡೆದ ಪ್ರಕರಣವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ದೂರ್ವಾಸರಿಂದ ಮಂತ್ರವನ್ನು ಪಡೆದ ಕುಂತಿ ಸೂರ್ಯನನ್ನು ಕರೆದುದು ಕೇವಲ ವಿನೋದಕ್ಕಾಗಿ; ಅದು ಹೆಣ್ಣಿನ ಅಪಕ್ವ ಬುದ್ಧಿಯನ್ನು ತೋರುತ್ತದೆ ಎಂದು ಪುರಾಣಗಳು ಪ್ರತಿಪಾದಿಸಿವೆ. ವಯೋಸಹಜವಾದ ಹುಡುಗಾಟದೊಂದಿಗೆ 'ಋಷಿಯಿತ್ತ ವರ ಸತ್ಯವಾಗಿರಬಹುದೆ' ಎಂಬ ಕುತೂಹಲ ಮತ್ತು ಪ್ರಯೋಗಶೀಲ ಮನೋಭಾವಗಳು ಕುಂತಿಯನ್ನು ಪ್ರಚೋದಿಸಿವೆ. ನಂತರದ ಪರಿಣಾಮಗಳ ಕಲ್ಪನೆಯಿಲ್ಲದೆ ಕುಂತಿ ಸೂರ್ಯನನ್ನು ಕರೆದುದು ಸ್ಪಷ್ಟ. ಹುಟ್ಟಿದ ಮಗುವನ್ನು ನೀರಲ್ಲಿ ತೇಲಬಿಟ್ಟು ಸಂಬಂಧವನ್ನೇ ಕಡಿದುಕೊಂಡು, ಮತ್ತೆ ಕನ್ಯತ್ವವನ್ನು ಪಡೆದುಕೊಂಡ ನಿರಾಳತೆಯಿಂದ ಪಾಂಡುವನ್ನು ಮದುವೆಯಾದದ್ದು, ಪತಿಯ ಸಂಗ ನಿಷೇಧವೆಂದಾಗ ಆತನ ಅನುಮತಿ ಪಡೆದು ಯಮಧರ್ಮ, ವಾಯು, ದೇವೇಂದ್ರರ ಸಂಗ ಮಾಡಿ ಮಕ್ಕಳನ್ನು ಪಡೆದದ್ದು, ಶಸ್ತ್ರಪ್ರದರ್ಶನದ ದಿನ ಕಾಣಿಸಿಕೊಂಡ ಕರ್ಣ ತನ್ನ ಮಗನೆಂದರಿತಾಗಲೂ ರಹಸ್ಯವನ್ನು ಉಳಿಸಿಕೊಂಡದ್ದು, ಪುತ್ರರ ಪ್ರಾಣಕ್ಕೆ ಕರ್ಣನಿಂದ ಅಪಾಯವಿದೆ ಎಂದಾಗ ಆತನನ್ನು ಭೇಟಿ ಮಾಡಿ ಪುತ್ರರ ಪ್ರಾಣಭಿಕ್ಷೆ ಪಡೆದದ್ದು.. ಈ ಘಟನೆಗಳು ವ್ಯವಸ್ಥೆಗೆ ತೊಂದರೆಯಾಗದಂತೆ, ಪರಂಪರೆಗೆ ಲೋಪವಾಗದಂತೆ ನಡೆಸಿಕೊಂಡು ಹೋಗಬೇಕಾದ ಹೆಣ್ಣಿನ ಅಸಹಾಯಕತೆ ಮತ್ತು ಸಮಯಸ್ಫೂರ್ತಿಗಳನ್ನು ಪ್ರತಿಪಾದಿಸುತ್ತವೆ. ಇನ್ನೂ ಬುದ್ಧಿ ಪಕ್ವವಾಗದ ಹೆಣ್ಣುಮಗಳಿಗೆ ಅಂತದೊಂದು ವರವನ್ನು ರಹಸ್ಯವಾಗಿ ನೀಡಿದ ದೂರ್ವಾಸರು ಮತ್ತು ಕೇವಲ ಕುತೂಹಲಕ್ಕಾಗಿ ಕರೆದರೂ ಮಗುವನ್ನು ಧರಿಸಿ ಹೆರಲೇಬೇಕು ಎಂದು ಪ್ರತಿಬಂಧಿಸಿದ ಸೂರ್ಯ ಇಬ್ಬರೂ ಪ್ರಬುದ್ಧರಾಗಿದ್ದವರು. ಅವರ ತಪ್ಪುಗಳನ್ನು ಸಮಾಜ ಆಕ್ಷೇಪಿಸದೆ, ಕರ್ಣನ ಬದುಕಿನ ದುರಂತಗಳಿಗೆ ಕುಂತಿಯನ್ನು ಮಾತ್ರ ಹೊಣೆಯಾಗಿಸಿದೆ.

ಪೌರಾಣಿಕ ಸ್ತ್ರೀವಾದವೆಂಬ ವಿಚಾರಪಂಥದ ಚಿಂತಕರ ದೃಷ್ಟಿಯಿಂದ 'ನಾನಿನ್ನು ನಿದ್ರಿಸುವೆ' ಒಂದು ಮಹತ್ವದ ಕಾದಂಬರಿ. ಪುರಾಣ ಕಥನವೊಂದನ್ನು ಸ್ತ್ರೀ ನಿರೂಪಣೆಯ ಮಾದರಿಯಾಗಿ ಹೊಸ ಆಲೋಚನೆಗಳೊಂದಿಗೆ ಲೇಖಕರು ನಿರೂಪಿಸಿದ್ದಾರೆ. ಮನುಷ್ಯರ ವ್ಯಕ್ತಿತ್ವ ಮತ್ತು ಸಂಬಂಧಗಳನ್ನು, ಅದರಲ್ಲೂ ಯುದ್ಧದಂಥ ರಾಜಕೀಯ ಸಂಘರ್ಷವನ್ನು ದ್ರೌಪದಿಯ ದೃಷ್ಟಿಕೋನದ ಮೂಲಕ ಒರೆಗೆ ಹಚ್ಚಿರುವ ಲೇಖಕರು 'ದ್ರೌಪದಿ' ಮತ್ತು 'ಕುಂತಿ' ಈ ಎರಡು ಪಾತ್ರಗಳ ಮೂಲಕ ಹೆಣ್ಣಿನ ಲೈಂಗಿಕ ಬಯಕೆ ಮತ್ತು ಅಗತ್ಯತೆಗಳ ಬಗೆಗೆ ಎತ್ತಿರುವ ಪ್ರಶ್ನೆಗಳು ಸ್ತ್ರೀ ನಿರ್ವಚನದ ನೆಲೆಯಿಂದ ಬಹಳ ಪ್ರಮುಖವಾದವುಗಳು.

ಸೀತೆಯ ಪಾತ್ರವನ್ನು ಸ್ತ್ರೀದೃಷ್ಟಿಯಿಂದ ನಿರೂಪಿಸುವ ಕತೆಯೊಂದನ್ನು ಸಾರಾ ಜೋಸೆಫ್ ಬರೆದಿದ್ದಾರೆ. 'ಅಶೋಕ' ಎಂಬ ಶೀರ್ಷಿಕೆಯುಳ್ಳ ಈ ಕತೆಯು ರಾಮನಿಗೆ ಸೀತೆಯು ಪ್ರತಿಷ್ಠೆಯ ಪ್ರಶ್ನೆ ಮಾತ್ರ ಆಗಿರುವುದನ್ನು ಗುರುತಿಸುತ್ತದೆ. ರಾಮ ಲಂಕೆಯ ಮೇಲೆ ಯುದ್ಧ ಸಾರಿದ್ದು ಕೂಡಾ ಪತ್ನಿಯ ರಕ್ಷಣೆಯು ತನ್ನ ಪೌರುಷದ ಪ್ರಶ್ನೆಯೆಂಬ ಕಾರಣಕ್ಕೆ ಹೊರತು ಅವಳ ಮೇಲಿನ ಪ್ರೇಮದಿಂದಲ್ಲ ಎಂಬ ವಾಸ್ತವವನ್ನು ಕಾಣಿಸುತ್ತದೆ.

ರಾವಣ ಅವಳನ್ನು ಒಯ್ದುದು ತನ್ನ ವಿಕ್ರಮಕ್ಕೆ ಒಂದು ಸವಾಲು ಎಂದು ರಾಮ ಭಾವಿಸಿರುವುದು ಅವನ ಈ ಮಾತುಗಳಲ್ಲಿ ಸ್ಪಷ್ಟವಾಗುತ್ತದೆ: "ನಿನ್ನನ್ನು ಮರಳಿ ಪಡೆಯಲೆಂದಲ್ಲ ನಾನೀ ಯುದ್ಧವನ್ನು ಜಯಿಸಿದ್ದು. ನನಗೆ ಮತ್ತು ನನ್ನ ವಂಶಕ್ಕಾದ ಅಪಮಾನವನ್ನು..." (ಪು. ೨೦, ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು) ಸೀತೆ ನಿರೀಕ್ಷಿಸಿದ್ದಂತೆ ಲಂಕೆಯನ್ನು ಗೆದ್ದ ಮರುಕ್ಷಣ ಪ್ರೀತಿಯ ಮಡದಿಯನ್ನು ಕಾಣುವುದಕ್ಕೆ ಅವನು ಧಾವಿಸಲಿಲ್ಲ. ಸೀತೆಯನ್ನು ಕಂಡಾಗಲೂ ಅವನಲ್ಲಿ ಭಾವತೀವ್ರತೆಯಿಲ್ಲ. ವಿಜೇತ ಮತ್ತು ಪರಾಜಿತರ ನಡುವೆ ಪ್ರತಿಷ್ಠೆಯ ಪಣದಂತೆ ಭಾವಿಸಲ್ಪಡುವ ಸೀತೆಗೆ ಸ್ವಂತದ್ದಾದ ಒಂದು ವ್ಯಕ್ತಿತ್ವವಿದೆ ಎಂದು ರಾಮ-ರಾವಣ ಇಬ್ಬರೂ ಭಾವಿಸಿಲ್ಲ. ರಾಮನೆಂಬ ಏಕಪತ್ನೀವ್ರತಸ್ಥನ ನೈತಿಕ ನಿಷ್ಠೆಯ ಗೌರವವನ್ನು ಉಳಿಸುವುದಕ್ಕಾಗಿ ಶೂರ್ಪನಖಿಯ ಬಲಿಯಾಗಿದೆ. ರಾವಣನನ್ನು ಕೊಂದು ಲಂಕೆಯನ್ನು ಗೆದ್ದ ರಾಮನ ಪ್ರಕಾರ 'ಸೀತೆಯೆಂಬ ಸಂಪತ್ತು ಲಂಕೆಯ ಹಕ್ಕು. ಸೀತೆಯೂ ಲಂಕೆಯೂ ಒಂದೇ.' ಅವಳಿಗೆ ತನ್ನ ಹೊರತಾಗಿ ಯಾರನ್ನಾದರೂ ಮುಂದಿನ ಸಂಗಾತಿಯನ್ನಾಗಿ ಆಯ್ದುಕೊಳ್ಳುವ ಅವಕಾಶವನ್ನು ರಾಮ ಕೊಡುತ್ತಾನೆ. ಹೀಗೆ ಅವಳಿಗೆ ಕೊಡುವ ಆಯ್ಕೆಗಳಾದರೂ ಸೀತೆ ಅವನ ಪಾಲಿಗೆ ಒಂದು ಸೊತ್ತು ಮಾತ್ರ ಎಂಬುದನ್ನೇ ದೃಢಪಡಿಸುತ್ತವೆ: "ವಿದಾಯ ಹೇಳಿ ದಶದಿಕ್ಕುಗಳಲ್ಲಿ ಯಾವುದಾದರೂ ಒಂದನ್ನು ಆಯ್ದುಕೊಂಡು ನೀನು ಹೋಗಬಹುದು. ಲಕ್ಷ್ಮಣನ ಜತೆಗೋ ಭರತನ ಜತೆಗೋ ಸುಗ್ರೀವನ ಜತೆಗೋ ವಿಭೀಷಣನ ಜತೆಗೋ ಕಳೆಯಬಹುದು..." (ಪು. ೨೨, ಅದೇ) ಅವನ ಔದಾರ್ಯದ ಹಿಂದಿರುವುದು ಸಂಶಯ ಎಂಬುದು ಸೀತೆಗೆ ಅರ್ಥವಾಗುತ್ತದೆ. ಲೋಕಾಪವಾದವನ್ನು ಹೊತ್ತು ತನ್ನ ಧವಳಕೀರ್ತಿಯನ್ನು ಕೆಡಿಸಿಕೊಳ್ಳಲು ಅವನು ಸಿದ್ಧನಿಲ್ಲ.

ರಾವಣವಧೆಯ ನಂತರ ರಾಮ ಪತ್ನಿಯನ್ನು ನೋಡಬಯಸಿದಾಗ ಸೀತೆ ಸ್ನಾನ, ಅಲಂಕಾರಗಳಿಗೆ ಒಪ್ಪುವುದಿಲ್ಲ. ತಾನು ಅಶೋಕವನದಲ್ಲಿ ಇಷ್ಟುಕಾಲ ಯಾವಸ್ಥಿತಿಯಲ್ಲಿ ಇದ್ದೆನೋ ಅದೇ ಸ್ಥಿತಿಯಲ್ಲಿ ಅವನು ತನ್ನನ್ನು ನೋಡಬೇಕೆಂಬುದು ಅವಳ ಬಲವಾದ ಕೋರಿಕೆಯಾಗಿದೆ. ಆದರೆ ಅವಳ ಇಚ್ಛೆ ನಡೆಯುವುದಿಲ್ಲ. ರಾಮನ ಆಣತಿಯಂತೆ ಅವಳನ್ನು ಮೀಯಿಸಿ, ಅಲಂಕರಿಸಿ, ಸುಗಂಧದ್ರವ್ಯಗಳನ್ನು ಪೂಸಿ ರಾಮನೆದುರಿಗೆ ಕರೆದೊಯ್ಯುತ್ತಾರೆ. ಸೀತೆಯ ಇಚ್ಛೆಗೆ ವಿರುದ್ಧವಾಗಿ ನಡೆಯುವ ಈ ಒಟ್ಟು ಪ್ರಕ್ರಿಯೆ ಅವಳಿಗೆ ಬಲಿಪಿಂಡಕ್ಕೆ ಸುತ್ತು ಬಂದಂತೆ ಭಾಸವಾಗುತ್ತದೆ. ಸ್ನಾನಕ್ಕೆ ತೆರಳುವ ದಾರಿಯುದ್ದಕ್ಕೂ

ಆಪ್ತರನ್ನು ಕಳೆದುಕೊಂಡು ಶೋಕಿಸುವ ಸ್ತ್ರೀಯರನ್ನು, ಹೆಣಗಳನ್ನು ತಿನ್ನುವ ಸನ್ನಾಹದಲ್ಲಿರುವ ಹದ್ದುಗಳನ್ನು ಸೀತೆ ನೋಡುತ್ತಾಳೆ. ರಾಮನ ಈ ವಿಜಯಕ್ಕೆ ಮಂಡೋದರಿಯೂ ಸೇರಿದಂತೆ ಎಷ್ಟು ಹೆಂಗಳೆಯರ ಸುಖದ ಬಲಿಯಾಗಿದೆ ಎಂಬುದನ್ನು ವೀಕ್ಷಿಸುತ್ತ ರಾಮನನ್ನು ಒಳಗೇ ಅಸಹ್ಯಿಸಿಕೊಳ್ಳುತ್ತಾಳೆ. ಅವನಿಂದ ವಿಮುಖಳಾಗುತ್ತಾಳೆ. ತನ್ನ ಸಭ್ಯತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಶೂರ್ಪನಖಿಯ ಕಿವಿಮೂಗು ಕೊಯ್ದು, ಮಂಡೋದರಿ ಮತ್ತಿತರ ಸಾವಿರಾರು ಹೆಂಗಸರ ವೈಧವ್ಯಕ್ಕೆ ಕಾರಣನಾದ ರಾಮನ ವರ್ತನೆ ಅವಳಿಗೆ ಒಪ್ಪಿಗೆಯಿಲ್ಲ. ರಾವಣ ಮಾಡಿದ ಅನ್ಯಾಯಕ್ಕಿಂತ ರಾಮನದೇನೂ ಕಡಿಮೆಯದ್ದಲ್ಲ ಎಂದು ಯೋಚಿಸುತ್ತಾಳೆ. 'ಪಾಪ ಯಾರದ್ದು? ಪ್ರೇಮಭಿಕ್ಷೆ ಯಾಚಿಸಿದ ತಪ್ಪಿಗೆ ಕೀಳು ಜಾತಿಯ ಹೆಣ್ಣಿನ ಕಿವಿ ಮೂಗುಗಳನ್ನು ಕತ್ತರಿಸಿದ ಆರ್ಯ ಪೌರುಷದ್ದೇ ಅಥವಾ ಸೇಡು ತೀರಿಸಲೋಸುಗ ಅವನ ಹೆಣ್ಣು-ಮಣ್ಣುಗಳ ಮೇಲೆ ಕೈಹಾಕಿದ ಕೀಳು ಜನರ ನೀತಿಯದ್ದೇ? ಪಾಪದ ಫಲವನ್ನು ಯಾರು ಅನುಭವಿಸಬೇಕು?' ಸೀತೆಯ ಮನಸ್ಸಿನಲ್ಲಿ ಉದಯಿಸುವ ಈ ಪ್ರಶ್ನೆಗಳು ಪುರಾಣ ಸ್ತ್ರೀವಾದದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿವೆ.

ರಾಮನ ಆಜ್ಞೆ ಹೊತ್ತು ಲತಾಮಂಟಪಕ್ಕೆ ಬರುವ ವಿಭೀಷಣನ ಉಚ್ಛ್ವಾಸದಲ್ಲಿ ಭ್ರಾತೃವಂಚನೆಯ ಪಾಪದ ವಾಸನೆಯನ್ನು ಗುರುತಿಸುತ್ತಾಳೆ. ರಾಮನ ಆಜ್ಞೆಯಲ್ಲಿ ಏನೋ ಅಶುದ್ಧವಾದುದು ಇದೆಯೆಂದು ಅರ್ಥವಾಗಿ ಕುಸಿದು ಬೀಳುವ ಸೀತೆಯ ಕಣ್ಣುಗಳು ಒಂದು ಹನಿ ಕಣ್ಣೀರನ್ನೂ ಸುರಿಸಲಾಗದೆ ಸುಡುತ್ತವೆ. ವಿಭೀಷಣನ ಹೆಂಗಸರು ತಮ್ಮ ಮೊಲೆಹಾಲು ಹನಿಸಿ ಸೀತೆಯ ಕಣ್ಣುಗಳನ್ನು ತಂಪು ಮಾಡುತ್ತಾರೆ. ಬಿಕ್ಕಳಿಕೆ ಹೊರಬರದೆ ಅವಳೆದೆ ಬೀಗಿದಾಗ ಅವರು ಜೋಗುಳ ಹಾಡುವಂತೆ ಎದೆಯನ್ನು ನೇವರಿಸುತ್ತಾರೆ. ಸೀತೆಯ ಎದೆಯಲ್ಲಿ ಉರಿಯುವ ಚಿತೆಯ ಬಿಸಿ ಮತ್ತು ಬೆಳಕು ಅವಳ ಕಣ್ಣಲ್ಲಿ ಜ್ವಲಿಸಿದಾಗ ಕಾಡಿಗೆ ಹಚ್ಚುವ ಯತ್ನದಲ್ಲಿದ್ದ ಹೆಂಗಸರು ಕೈ ಹಿಂದೆಳೆದುಕೊಳ್ಳುತ್ತಾರೆ.

ಲಂಕೆಯನ್ನು ಗೆದ್ದ ರಾಮನ ದೃಷ್ಟಿಯಲ್ಲಿ 'ಸೀತೆಯೂ ಲಂಕೆಯೂ ಒಂದೇ' ಆಗಿವೆ. 'ಪರಾಜಿತನ ಮಡಿಲಲ್ಲಿ ಕುಳಿತವಳೂ, ಅವನ ಮನೆಯಲ್ಲಿ ರಾತ್ರಿ ಕಳೆದವಳೂ' ಆಗಿರುವ ಸೀತೆ ರಾಮನ ಮಟ್ಟಿಗೆ ಕಳಂಕಿತೆ. 'ಸುಂದರಿಯೂ, ಅಧೀನದಲ್ಲಿ ಇರುವವಳೂ ಆಗಿರುವ' ಸೀತೆಯನ್ನು ರಾವಣ ಮುಟ್ಟಿಲ್ಲ ಎಂಬುದನ್ನು ನಂಬಲು ಅವನು ಸಿದ್ಧನಿಲ್ಲ. ಅವಳ ಚಾರಿತ್ರ್ಯವನ್ನು ಶಂಕಿಸುತ್ತಾನೆ. ಅವನ ಶಂಕೆಗೆ ದಿಟ್ಟ ಉತ್ತರವಾಗಿ ಸೀತೆ ಅಗ್ನಿಪ್ರವೇಶ ಮಾಡಲು ನಿರ್ಣಯಿಸುತ್ತಾಳೆ. ಹಾಗೆ ಚಿತೆಯನ್ನು ಏರುತ್ತಲೇ 'ರಾಮನ ಸ್ಪರ್ಶಮಾತ್ರಕ್ಕೆ ಆರ್ದ್ರವಾಗುತ್ತಿದ್ದ ತನ್ನೊಳಗಿನ ಭೂಮಿ ಒಣಗಿ ಕರಟಿ ಹೋಗಿದ್ದು' ಅವಳ ಅನುಭವಕ್ಕೆ ಬರುತ್ತದೆ. 'ಇನ್ನುಮೇಲೆ ಆತನ ಕೈಗಳು ಮಣ್ಣಿನಲ್ಲಿ ಯಾವ ಪುಳಕವನ್ನೂ ಬಿತ್ತಲಾರದು. ಇನ್ನು ಒಂದೇ ಒಂದು ಚುಂಬನವೂ ಮಣ್ಣಿನ ನಾಡಿಗಳಲ್ಲಿ ಕಂಪನವಾಗಲಿ, ಕಂಪನದಿಂದ ವನ್ಯಸುಗಂಧವಾಗಲಿ ಏಳುವಂತೆ ಮಾಡಲಾರದು. ಇನ್ನು ಎಂದೆಂದಿಗೂ ನೆನಪಿನಲ್ಲಿ ಇಟ್ಟುಕೊಳ್ಳಲಿಕ್ಕಿರುವುದು

ಹಗಲುಬೆಳಕಿನಲ್ಲಿ ಜನರ ನಡುವೆ ಆತ ಎಸೆದ ಕಟುಮಾತುಗಳ ಮೊನಚು ಮಾತ್ರ. ಜ್ವಲಿಸುತ್ತಿರುವ ಅಗ್ನಿಕುಂಡಕ್ಕೆ ಹಸಿದೇಹದೊಂದಿಗೆ ಹೋಗಿ ಪ್ರವೇಶಿಸುತ್ತಿರುವ ಈ ಕ್ಷಣದ ನಡುಕಗಳು ಮಾತ್ರ' (ಪು. ೨೩, ಅದೇ) ಎಂಬ ನಿರ್ಧಾರದೊಂದಿಗೆ ಸ್ವಲ್ಪವೂ ಅಳುಕದೆ ಶುಭ ಸಮಾರಂಭವೋ ಎಂಬಂತೆ ಬಲಗಾಲಿಟ್ಟು ಚಿತೆಯೇರುತ್ತಾಳೆ. ಸೀತೆಯ ಈ ನಿರ್ಧಾರ ಹೆಣ್ಣಿನ ಸ್ವಾಭಿಮಾನದ ಸಂಕೇತವಾಗಿದೆ. ಗಂಡಸು ಅವಳ ದೇಹದ ಮೇಲೆ ಒಡೆತನವನ್ನು ಸ್ಥಾಪಿಸಬಹುದು, ಮನಸ್ಸಿನ ಮೇಲಲ್ಲ ಎಂಬ ಸಂದೇಶ ಇಲ್ಲಿದೆ. ಹೆಣ್ಣನ್ನು ಒಂದು ಜೀವವಾಗಿಯಲ್ಲದೆ ಕೇವಲ ಪ್ರತಿಷ್ಠೆಯ ಸೊತ್ತಾಗಿ, ಪೌರುಷದ ಸಂಕೇತವಾಗಿ ಬಳಸಿಕೊಳ್ಳುವ ಪುರುಷ ಮೇಲ್ಮೆಯ ಲಿಂಗ ರಾಜಕಾರಣವನ್ನು ಸೀತೆಯ ಪಾತ್ರದ ಮೂಲಕ ಲೇಖಕಿ ಕಾಣಿಸಿದ್ದಾರೆ ಮತ್ತು ವಿರೋಧಿಸಿದ್ದಾರೆ.

'ಭೀಮಾಯಣ' ಮತ್ತು 'ಮಾಯಾಸೀತೆ' ಈ ಕೃತಿಗಳು ಕೂಡ ಪುರಾಣಸ್ತ್ರೀಯರ ಮರುನಿರೂಪಣೆಯ ಆಶಯವನ್ನು ಹೊಂದಿ ರಚನೆಯಾಗಿರುವಂಥವು. ಅವನ್ನು ಇದೇ ಅಧ್ಯಾಯದ ಬೇರೊಂದು ಉಪಶೀರ್ಷಿಕೆಯ ಅಡಿಯಲ್ಲಿ ಈಗಾಗಲೆ ವಿಶ್ಲೇಷಿಸಲಾಗಿದೆ.

ಹೆಣ್ಣಿನ ಆರ್ಥಿಕ ಅಸ್ಥಿರತೆ ಮತ್ತು ಅಗತ್ಯಗಳ ಕುರಿತು, ಹೆಣ್ಣಿನ ದುಡಿಮೆಯ ವ್ಯಾಖ್ಯಾನದ ಕುರಿತು ಓದುಗರು ಯೋಚಿಸುವಂತೆ ಮಾಡುವಲ್ಲಿ ಮಲಯಾಳಂ ಲೇಖಕರು ಯಶಸ್ವಿಯಾಗಿದ್ದಾರೆ. ಹಾಗೇ ಲಿಂಗ ರಾಜಕಾರಣ ಮತ್ತು ಅಧಿಕಾರ ರಾಜಕಾರಣಗಳು ಸ್ತ್ರೀಯರ ಸಹಜವಾದ ಸಾಮರ್ಥ್ಯಗಳನ್ನು ಮಸುಕಾಗಿಸಿರುವುದನ್ನು ಗುರುತಿಸಿದ್ದಾರೆ. ಸೂಕ್ತ ಅವಕಾಶಗಳನ್ನು ಒದಗಿಸಿದರೆ ಸ್ತ್ರೀಯರು ಕೂಡಾ ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಯಶಸ್ವಿಯಾಗುವ ಸಾಧ್ಯತೆಗಳನ್ನು ಕಾಣಿಸಿದ್ದಾರೆ.

ಆಯ್ದ ಕೃತಿಗಳ ವಿಶ್ಲೇಷಣೆಯ ಮೂಲಕ ಮಲಯಾಳಂ ಕಥನಸಾಹಿತ್ಯವು ಪ್ರತಿಬಿಂಬಿಸುವ ಸ್ತ್ರೀಲೋಕದ ಆರ್ಥಿಕ ಮತ್ತು ರಾಜಕೀಯ ನೆಲೆಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ:

- ಸಂಪತ್ತು ಮತ್ತು ದುಡಿಮೆಗಳು ಮಹಿಳೆಯರ ಆತ್ಮವಿಶ್ವಾಸವನ್ನು ಹೆಚ್ಚಿಸಿವೆ. ಸ್ವಾವಲಂಬಿಯಾಗಿಸಿವೆ.
- ಕುಟುಂಬದ ಆರ್ಥಿಕತೆಯಲ್ಲಿ ಸ್ತ್ರೀಯರ ಪಾತ್ರವಿದೆ ಹಾಗೂ ಪತಿಯ ಆದಾಯದ ಮೇಲೆ ಪತ್ನಿಗೆ ಅಧಿಕಾರವಿದೆ ಎಂಬ ಅಂಶವನ್ನು ಸ್ತ್ರೀಯರು ಪ್ರತಿಪಾದಿಸುತ್ತಾರೆ.
- ಹೊಟ್ಟೆಪಾಡಿಗಾಗಿ ಮನೆಯಿಂದ ಹೊರಗಿನ ದುಡಿಮೆಗೆ ಬರುವ ಸ್ತ್ರೀಯರ ಬಗ್ಗೆ ಪುರುಷರಿಗೆ ಗೌರವಕ್ಕಿಂತ ಆಕರ್ಷಣೆಯೆ ಹೆಚ್ಚಿದೆ.
- ವೇಶ್ಯಾಟನೆಯು ಕೂಡಾ ಇತರ ಎಲ್ಲ ಉದ್ಯೋಗಗಳಂತೆ ದುಡಿಮೆಯ ಒಂದು ಕ್ರಮವಾಗಿದೆ.

- ಸ್ವಂತ ಆದಾಯವಿಲ್ಲದ ಸ್ತ್ರೀಯರು ಜೀವನ ನಿರ್ವಹಣೆಗಾಗಿ ವಿವಾಹೇತರ ಸಂಬಂಧಗಳೂ ಸೇರಿದಂತೆ ಹಲವು ಬಗೆಯ ಹೊಂದಾಣಿಕೆಗಳಿಗೆ ಒಪ್ಪಿಕೊಳ್ಳುತ್ತಾರೆ.
- ಕಥೆ, ಕವಿತೆ ಬರೆಯುವುದು, ಸಂಗೀತ, ನೃತ್ಯಗಳಂಥಾ ಲಲಿತಕಲೆಗಳು ಸ್ತ್ರೀಯರ ಜೀವನೋಪಾಯವಾಗಿರುವುದು ಅಥವಾ ಆದಾಯ ಮೂಲಗಳಾಗಿರುವುದು ಕಂಡುಬರುವುದಿಲ್ಲ. ಸ್ತ್ರೀಯರ ಸೃಜನತೆಯನ್ನು ನಿರ್ಬಂಧಿಸುವ ಲಿಂಗ ರಾಜಕಾರಣವು ಇದಕ್ಕೆ ಕಾರಣವಾಗಿದೆ.
- ಅಧಿಕಾರದ ರಾಜಕಾರಣವು ಪುರುಷರ ಸ್ವಾರ್ಥಸಾಧನೆಗೆ ಸ್ತ್ರೀಯರನ್ನು ಬಳಸಿಕೊಂಡಿದೆ.
- ಆದರ್ಶ ಸ್ತ್ರೀಯ ಕಲ್ಪನೆಯನ್ನು ಬಲಪಡಿಸುವ ಪಿತೃಪುರಾಣಗಳ ಮರುಓದು ಮತ್ತು ಮರುನಿರೂಪಣೆಯ ಮೂಲಕ ಅವುಗಳಲ್ಲಿರುವ ಸ್ತ್ರೀದ್ವೇಷ ಮತ್ತು ಪುರುಷ ಪಕ್ಷಪಾತವನ್ನು ಗುರುತಿಸಬಹುದು.

ಅಧ್ಯಾಯ ೫

ಸಮಾರೋಪ

ಸ್ತ್ರೀ ಸಬಲೀಕರಣದ ರೂಪಕಗಳು

ಅಧ್ಯಾಯ ೫: ಸಮಾರೋಪ – ಸ್ತ್ರೀ ಸಬಲೀಕರಣದ ರೂಪಕಗಳು

ಮಲಯಾಳಂ ಕಥನಸಾಹಿತ್ಯದ ಓದಿನ ಮೂಲಕ ಅಲ್ಲಿನ ಸ್ತ್ರೀಯರ ಸಾಮಾಜಿಕ, ಲೈಂಗಿಕ, ಆರ್ಥಿಕ ಮತ್ತು ರಾಜಕೀಯ ಬದುಕಿನ ಸಂದರ್ಭಗಳನ್ನು ಗಮನಿಸಬಹುದು ಎಂಬುದು ಪ್ರಸ್ತುತ ಅಧ್ಯಯನದಿಂದ ವೇದ್ಯವಾಗಿದೆ. ಸಾಹಿತ್ಯದಲ್ಲಿನ ಸ್ತ್ರೀಪಾತ್ರಗಳ ಅಧ್ಯಯನವು ಇಲ್ಲಿನ ಪ್ರಧಾನ ಗಮ್ಯವಾಗಿದ್ದರೂ ಪರೋಕ್ಷವಾಗಿ ಇದು ಪಿತೃಪ್ರಧಾನ ಸಂಸ್ಕೃತಿಯ ಒಟ್ಟು ಗ್ರಹಿಕೆ ಮತ್ತು ನಿಲುವುಗಳ ಅಭ್ಯಾಸವೂ ಆಗಿದೆ. ಕನ್ನಡದ ಓದುಗರ ನೆಲೆಯಲ್ಲಿ ಮಲಯಾಳಂ ಸಮಾಜದ ಚಿಂತನೆ ಮತ್ತು ಚಟುವಟಿಕೆಗಳನ್ನು ವಿಶ್ಲೇಷಿಸಿ ಅಲ್ಲಿನ ಸ್ತ್ರೀಬದುಕನ್ನು ಗ್ರಹಿಸುವುದು ಸಾಧ್ಯವಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ಒಟ್ಟು ವಿಶ್ಲೇಷಣೆಯನ್ನು ಸ್ತ್ರೀ ನಿರ್ವಚನದ ಸಾಮಾಜಿಕ ನೆಲೆ, ಲೈಂಗಿಕ ನೆಲೆ, ಆರ್ಥಿಕ ಮತ್ತು ರಾಜಕೀಯ ನೆಲೆ ಎಂಬ ಮೂರು ಪ್ರಧಾನ ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು ವಿಶ್ಲೇಷಣೆಯಲ್ಲಿ ಕಂಡುಕೊಂಡ ವಿಷಯಗಳನ್ನು ಆಧರಿಸಿ ಅಧ್ಯಯನದ ಫಲಿತಗಳನ್ನು ಹೀಗೆ ಸಂಗ್ರಹಿಸಬಹುದು:

ಮಹಿಳಾ ಸಾಮಾಜಿಕತೆ

ಪರಂಪರೆ, ಸಂಪ್ರದಾಯಗಳನ್ನು ವಿಶ್ಲೇಷಿಸುವ ಸಾಮಾಜಿಕ ಕಾದಂಬರಿಗಳಲ್ಲಿ ಮಲಯಾಳಂ ಲೇಖಕರ ಲಿಂಗಭೇದವಿಲ್ಲದ ಜೀವಪರ ಕಾಳಜಿಯು ಪ್ರಕಟವಾಗಿದೆ. ವಿವಾಹ, ತಾಯ್ತನ, ಕುಟುಂಬ, ಧರ್ಮ ಮುಂತಾದ ಸಾಂಸ್ಥಿಕ ನೆಲೆಯ ಸ್ತ್ರೀಶೋಷಣೆಯ ನಿರೂಪಣೆಗೆ ಹೆಚ್ಚು ಗಮನ ಹರಿಸಿದ್ದಾರೆ.

ತರವಾಡು ಮನೆಗಳ ಪ್ರತಿಷ್ಠೆಯಲ್ಲಿ ಕಳೆದುಹೋಗುವ ಸ್ತ್ರೀಚಹರೆಗಳನ್ನು ಕಥನಗಳು ದಾಖಲಿಸಿವೆ. ಕೇರಳದ ನಂಬೂದಿರಿ ಬ್ರಾಹ್ಮಣರಲ್ಲಿ ಪ್ರಚಲಿತವಿರುವ 'ಸಂಬಂಧಂ' ಎಂಬ ಸಡಿಲವಾದ ವೈವಾಹಿಕ ವ್ಯವಸ್ಥೆಯನ್ನು, ನಾಯರ್ ತರವಾಡು ಮನೆತನಗಳ ಮರುಮಕ್ಕತ್ತಾಯ ಪದ್ಧತಿಯನ್ನು ಸ್ತ್ರೀಸಂವೇದನೆಯೊಂದಿಗೆ ಒರೆಗೆ ಹಚ್ಚಿವೆ.

ಮದುವೆ ಎಂಬ ಕೇಂದ್ರಕಾಳಜಿಯು ಸ್ತ್ರೀಗೆ ಸ್ವಂತ ಬದುಕನ್ನು ನಿಷೇಧಿಸಿದೆ. ದಾಂಪತ್ಯದ ಹಿಂಸೆಗೆ ಸ್ತ್ರೀಯರು ಕಂಡುಕೊಳ್ಳುವ ಪರಿಹಾರದ ದಾರಿಗಳು ವಿಶಿಷ್ಟವಾಗಿವೆ. ವಿಚ್ಛೇದನವನ್ನು

ವಿಷಮದಾಂಪತ್ಯದಿಂದ ಬಿಡುಗಡೆಯಾಗಿ ಗ್ರಹಿಸಲಾಗಿದೆ. ಪತಿಯೊಂದಿಗೆ ಬದುಕುವುದು ಸಾಧ್ಯವಾಗದಿದ್ದರೆ ಸಂಬಂಧವನ್ನು ಕಡಿದುಕೊಂಡು ತವರಿಗೆ ಹಿಂತಿರುಗುವುದಕ್ಕೆ ಕೇರಳದ ನಾಯರ್ ಹೆಣ್ಣುಮಕ್ಕಳಿಗೆ ಇರುವ ವಿಶೇಷವಾದ ಸ್ವಾತಂತ್ರ್ಯವನ್ನು ಕೃತಿಗಳಲ್ಲಿ ಕಾಣಬಹುದು.

ತಾಯ್ತನದ ಭಿನ್ನ ಮಾದರಿಗಳು

ಸಂಬಂಧಂ ವ್ಯವಸ್ಥೆಯಿಂದಾಗಿ ಹಾಗೂ ಹೆಚ್ಚಿನ ಕುಟುಂಬಗಳ ಪುರುಷರು ದುಬೈ ಮತ್ತಿತರ ಹೊರರಾಷ್ಟ್ರಗಳಲ್ಲಿ ಕೆಲಸದಲ್ಲಿ ಇರುವುದರಿಂದಾಗಿ ಪುರುಷನಿಲ್ಲದ ಕುಟುಂಬಗಳು ಕೇರಳದಲ್ಲಿ ಸಾಮಾನ್ಯ. ಕುಟುಂಬ ಮತ್ತು ಮಕ್ಕಳ ಪಾಲನೆ ಪೋಷಣೆಯ ಜವಾಬ್ದಾರಿಗಳನ್ನು ನಿಭಾಯಿಸುವ ಒಂಟಿತಾಯಂದಿರ ಚಿತ್ರಗಳು ಮಲಯಾಳಂ ಕೃತಿಗಳಲ್ಲಿ ಬಹಳ ಸಹಜವೆಂಬಂತೆ ಕಾಣಸಿಗುತ್ತವೆ. ತಾಯ್ತನವೆಂಬುದು ಹೆಣ್ಣಿಗೆ ಅತ್ಯಂತ ಪವಿತ್ರ ಮತ್ತು ಅನಿವಾರ್ಯ ಮೌಲ್ಯವಾಗುವುದನ್ನು ಪ್ರಜ್ಞಾವಂತ ಸ್ತ್ರೀಯರು ನಿರಾಕರಿಸಿದ್ದಾರೆ. ಗರ್ಭಧರಿಸುವುದು ಮತ್ತು ಹೆರುವುದು ಹೆಣ್ಣಿನ ಸ್ವಂತ ಆಯ್ಕೆ ಅದಕ್ಕೆ ಪುರುಷರ ಒಪ್ಪಿಗೆ ಮತ್ತು ಅಧಿಕೃತತೆಯ ಅಗತ್ಯವಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಹೆಣ್ಣು ತಾಯ್ತನದ ಪ್ರತೀಕವೆಂಬ ಸಿದ್ಧಮಾದರಿಗೆ ಭಿನ್ನವಾಗಿ, ಸ್ವಂತ ಮಗುವಿನ ಕುರೂಪವನ್ನು ಅಸಹ್ಯಿಸಿಕೊಳ್ಳುವ, ಸಮಾಜದಲ್ಲಿ ಗೌರವಕ್ಕಾಗಿ ಹೆತ್ತ ಮಗುವನ್ನು ತ್ಯಜಿಸುವ, ಸ್ವಂತ ಮಕ್ಕಳಿಂದ ತಿರಸ್ಕೃತಳಾದಾಗ ಮನಸ್ಸನ್ನು ಕಠಿಣವಾಗಿಸಿಕೊಳ್ಳದೆ ತಾನು ಹೆರದ ಮಕ್ಕಳಿಗೆ ಅಮ್ಮನ ಪ್ರೀತಿ ತೋರಿ ಸಂತಸಪಡುವ, ಮನೆತನದ ಗೌರವವು ಮಗುವಿಗಿಂತ ಮುಖ್ಯವೆಂದು ಭಾವಿಸಿರುವ ವಾಸ್ತವಪ್ರಜ್ಞೆಯ 'ಅಮ್ಮ' ಮಾದರಿಗಳು ಕಥನಗಳಲ್ಲಿವೆ.

ಶಿಕ್ಷಣದಿಂದ ಸ್ತ್ರೀಪ್ರಜ್ಞೆಯ ಉಗಮ

ಶಿಕ್ಷಣ ಮತ್ತು ಪರಿವರ್ತನೆಗೆ ಇರುವ ಸಂಬಂಧಗಳನ್ನು ಮಲಯಾಳಂ ಕಥನಸಾಹಿತ್ಯವು ಗುರುತಿಸಿದೆ. ಮೊದಲ ಘಟ್ಟದ ಸಾಹಿತ್ಯವು ಸಂದರ್ಭಗಳಿಗೆ ಹೊಂದುವಂತೆ ಸ್ತ್ರೀಯರು ಬದಲಾಗುವ ಅವಶ್ಯಕತೆಯನ್ನು ಪ್ರತಿಪಾದಿಸಿದೆ. ಶಿಕ್ಷಣದ ಮೂಲಕ ಸ್ತ್ರೀಯ ನೈತಿಕತೆಯನ್ನು ಉತ್ತಮ ಮಟ್ಟದಲ್ಲಿ ಇರಿಸುವ ಆಶಯವನ್ನು ಹೊಂದಿದೆ. ಸ್ತ್ರೀಯರಿಗೆ ಲಭ್ಯವಾಗುವ ಸ್ವಾತಂತ್ರ್ಯವು ಸ್ವೇಚ್ಛೆಯಾಗುವ ಆತಂಕವನ್ನು ವ್ಯಕ್ತಪಡಿಸಿದೆ. ಆಧುನಿಕ ಶಿಕ್ಷಣವು ಸ್ತ್ರೀಯರಲ್ಲಿ ಆತ್ಮವಿಶ್ವಾಸ, ಸ್ವಪ್ರಜ್ಞೆ ಮತ್ತು ಸ್ವತಂತ್ರ ಚಿಂತನೆಗಳನ್ನು ಮೂಡಿಸಿದೆ. ಪಿತೃವ್ಯವಸ್ಥೆಯು ತಮ್ಮನ್ನು ಕೆಳಸ್ತರದಲ್ಲಿ ಇರಿಸಿ ವಂಚಿಸಿರುವುದನ್ನು ಗಮನಿಸಿರುವ ಸುಶಿಕ್ಷಿತೆಯರು ವಿವಾಹವೆಂದರೆ ಹೆಣ್ಣಿನ ಸ್ವತಂತ್ರ ಅಸ್ತಿತ್ವದ ನಾಶವೆಂದು ಭಾವಿಸಿದ್ದಾರೆ. ಸಂಬಂಧಗಳಲ್ಲಿ ನಿರಾಶರಾದಾಗ ಕುಟುಂಬ ವ್ಯವಸ್ಥೆಗೆ ಪರ್ಯಾಯವಾಗಿ ಸನ್ಯಾಸವನ್ನು ಆಯ್ದುಕೊಂಡಿದ್ದಾರೆ.

ಜೀವಪರವಾಗಿರುವ ಸ್ತ್ರೀಧರ್ಮ

ಧರ್ಮದ ಕುರಿತಾಗಿ ಜೀವಪರವಾದ ಖಚಿತ ಅಭಿಪ್ರಾಯಗಳನ್ನು ಹೊಂದಿದ ವಿಶಿಷ್ಟವಾದ ಸ್ತ್ರೀದೃಷ್ಟಿಯನ್ನು ಕೃತಿಗಳು ಕಾಣಿಸಿವೆ. ಧರ್ಮದ ಬಲೆಯೊಳಗೆ ಚಡಪಡಿಸುವ ಸ್ತ್ರೀಯರು ಎತ್ತುವ ಪ್ರಶ್ನೆಗಳಿಗೆ ಸಾಹಿತ್ಯವು ಧ್ವನಿಯಾಗಿದೆ. ಧರ್ಮದ ನೆಲೆಗಟ್ಟು ಪುರುಷಾಧಿಕಾರಕ್ಕೆ ಪೂರಕವಾಗಿರುವುದನ್ನು ಗುರುತಿಸಿರುವ ಸ್ತ್ರೀಯರು ಅನಿವಾರ್ಯವಾದಾಗ ಮತಾಚಾರಗಳ ಗೆರೆಯನ್ನು ದಾಟಿ ಜೀವಪ್ರೀತಿಯನ್ನು ಎತ್ತಿ ಹಿಡಿಯುತ್ತಾರೆ. ಎರಡು ಧರ್ಮಗಳಲ್ಲಿ ಏಕರೀತಿಯ ಶ್ರದ್ಧೆ ಇರಿಸಿಕೊಂಡು ಬದುಕುವ 'ಸೆಕ್ಯುಲರ್' ಸ್ತ್ರೀಯರನ್ನೂ ಕಾಣಬಹುದು.

ಲಿಂಗತ್ವ ಮತ್ತು ಲೈಂಗಿಕತೆ

ಪಿತೃವ್ಯವಸ್ಥೆಯು ಹೆಣ್ಣನ್ನು ಕೆಲವು ಸಿದ್ಧಮಾದರಿಗಳಲ್ಲಿ ಬರೆದಿಟ್ಟಿದೆ. 'ಅಪೇಕ್ಷಿತ' ಮತ್ತು 'ಅನಪೇಕ್ಷಿತ' ಸ್ತ್ರೀಗುಣಗಳನ್ನು ಹೊಂದಿರುವ ಇಂಥ ಮಾದರಿಗಳು ಸ್ತ್ರೀಯ 'ಸಾಮಾಜಿಕ ಲಿಂಗ' ಅಥವಾ 'ಸ್ತ್ರೀಲಿಂಗತ್ವದ' ಪರಿಕಲ್ಪನೆಯನ್ನು ದೃಢಪಡಿಸುತ್ತವೆ. ಬದಲಾವಣೆಯ ದಾರಿಯನ್ನು ಮೊಟಕುಗೊಳಿಸುತ್ತವೆ. ಇಂಥ ಪುರುಷಾನುಕೂಲಿಯಾದ ಸ್ತ್ರೀಮಾದರಿಗಳಿಗೆ ಭಿನ್ನವಾಗಿ, ಲವಲವಿಕೆ, ಛಲಗಾರಿಕೆ, ಪರಿಶ್ರಮ, ಧೈರ್ಯ, ಸಾಹಸ, ದೃಢತೆ ಮುಂತಾದ 'ಪುರುಷಗುಣ ಮತ್ತು ಸಾಮರ್ಥ್ಯಗಳನ್ನು' ಹೊಂದಿ, ಮನೆಯ ಸರ್ವ ಜವಾಬ್ದಾರಿಗಳನ್ನೂ ನಿರ್ವಹಿಸುವ, ತೇಜಸ್ವೀ ಸ್ತ್ರೀಯರನ್ನು ಮಲಯಾಳಂ ಕೃತಿಗಳು ಚಿತ್ರಿಸಿವೆ. ಪರಂಪರೆಯ ಸಾರ್ವತ್ರಿಕ ಸ್ತ್ರೀಕಲ್ಪನೆಯಿಂದ ಸಿಡಿದುನಿಂತ ಪುನರ್ ನವೀಕರಿಸಿದ ಸ್ತ್ರೀವಿನ್ಯಾಸಗಳಾಗಿ ಇವನ್ನು ಗುರುತಿಸಬಹುದು.

ಹೆಣ್ಣಿಗೆ ಹೆಣ್ಣನ್ನು ಶತ್ರುವಾಗಿಸುವ ಲೈಂಗಿಕ ರಾಜಕಾರಣವನ್ನು ಕೃತಿಗಳು ಗುರುತಿಸಿವೆ. ಸ್ತ್ರೀಯರ ನಡುವಿನ ಹಾರ್ದಿಕ ಮೈತ್ರಿಯನ್ನು ಪ್ರತಿಪಾದಿಸುವ ಕಥನಗಳಲ್ಲಿ ಸ್ತ್ರೀಯರು ಪರಸ್ಪರರ ಅಗತ್ಯಕ್ಕೆ ಒದಗುವ, ಬದುಕು ಕಟ್ಟಿಕೊಳ್ಳಲು ನೆರವಾಗುವ ಉದಾಹರಣೆಗಳಿವೆ. ಕಣ್ಣಿಗೆ ಕಾಣದ ಯಕ್ಷಿ, ಪಿಶಾಚಿಯಂಥ ಕಾಲ್ಪನಿಕ ಸ್ತ್ರೀಯರೊಂದಿಗೆ ಸ್ನೇಹಸಂಬಂಧವನ್ನು ಹೊಂದಿರುವ ಮಹಿಳೆಯರನ್ನು ಕೆಲವು ಕತೆಗಳಲ್ಲಿ ಕಾಣಬಹುದು.

ಸ್ತ್ರೀಯರ ಸಲಿಂಗಕಾಮದ ಗಟ್ಟಿತನವನ್ನು ಕೆಲವು ಕೃತಿಗಳು ಪ್ರತಿಪಾದಿಸಿವೆ. ಗಂಡಿಗೂ ಇರಬೇಕಾದ ಸದಾಚಾರ ಮತ್ತು ಲೈಂಗಿಕ ನಿಷ್ಠೆಗಳ ಕುರಿತು ಚರ್ಚಿಸಿವೆ. ಗಂಡು-ಹೆಣ್ಣಿನ ಲೈಂಗಿಕ ಸಂಬಂಧಗಳು, ದಾಂಪತ್ಯನಿಷ್ಠೆಯಿಲ್ಲದ ಪುರುಷರು, ಲೈಂಗಿಕ ಸಾಮರ್ಥ್ಯದ ಕೊರತೆಯಿರುವ ಪುರುಷರು, ಹೆಣ್ಣಿನ ಲೈಂಗಿಕ ನಿರಾಸೆ ಮತ್ತು ಅತೃಪ್ತಿಗಳು, ಅಧಿಕ ಲೈಂಗಿಕಾಸಕ್ತಿ ಮತ್ತು ಸಾಮರ್ಥ್ಯಗಳನ್ನು ಹೊಂದಿರುವ ಸ್ತ್ರೀಯರು, ಅನಿವಾರ್ಯ ವ್ಯಭಿಚಾರಗಳು, ಸ್ವಂತ ಉನ್ನತಿಗಾಗಿ ಗಂಡನೇ ಪರಪುರುಷ ಸಂಬಂಧಕ್ಕೆ

ಪ್ರೇರೇಪಿಸುವುದು.. ಹೀಗೆ ನೈಸರ್ಗಿಕ ಕಾಮ ಮತ್ತು ಲೈಂಗಿಕತೆಗಳ ಕುರಿತಾದ ಚರ್ಚೆಯನ್ನು ಮಲಯಾಳೀ ಕಥನಗಳಲ್ಲಿ ಪ್ರಧಾನವಾಗಿ ಗಮನಿಸಬಹುದು. ಸ್ತ್ರೀಲೈಂಗಿಕತೆಯನ್ನು ಕೇಂದ್ರವಾಗಿಟ್ಟುಕೊಂಡು ತೊಡಗುವ ಈ ಕಥನಗಳು ಕಾಮದ ಅಪೇಕ್ಷೆ ಮತ್ತು ಸಾಮರ್ಥ್ಯಗಳು ಗಂಡಿನಷ್ಟೇ ಪ್ರಬಲವಾಗಿ ಅಥವಾ ಗಂಡಿಗಿಂತ ಸ್ವಲ್ಪ ಹೆಚ್ಚೇ ಪ್ರಮಾಣದಲ್ಲಿ ಹೆಣ್ಣಿನಲ್ಲೂ ಇರಬಹುದಾದ ಸಾಧ್ಯತೆಗಳನ್ನು ಕಾಣಿಸುತ್ತವೆ.

ಲೈಂಗಿಕ ಕಾಮನೆಗಳನ್ನು ತೃಪ್ತಿಪಡಿಸುವುದು ಪುರುಷರಂತೆ ಸ್ತ್ರೀಯರಿಗೂ ಒಂದು ಜೈವಿಕ ಅಗತ್ಯವಾಗಿದೆ ಎಂದು ಪ್ರತಿಪಾದಿಸುವ ಮಲಯಾಳಂ ಬರಹಗಾರರು ಪಾವಿತ್ರ್ಯದ ಪ್ರಶ್ನಾತೀತ ಮಾದರಿಗಳೆಂದು ಭಾವಿಸಲಾಗಿರುವ ಪುರಾಣಸ್ತ್ರೀಯರ ಲೈಂಗಿಕತೆಯನ್ನು ವಿಶ್ಲೇಷಿಸುವ ದಿಟ್ಟತನ ತೋರಿದ್ದಾರೆ. ಸ್ತ್ರೀಲೈಂಗಿಕತೆಯನ್ನು ಕೇಂದ್ರ ಸಮಸ್ಯೆಯಾಗಿಟ್ಟುಕೊಂಡು ಚರ್ಚಿಸುವ ಇಂಥ ಕಥನಗಳು ಕನ್ನಡದಲ್ಲಿ ಇರುವಂತೆ ಕಾಣುವುದಿಲ್ಲ. ಕನ್ನಡದ ಮಹಿಳಾ ಕಥೆಗಳು ಮುಖ್ಯವಾಗಿ ಜಾತಿ, ವರದಕ್ಷಿಣೆ, ಕೌಟುಂಬಿಕ ಸಂಬಂಧಗಳ ಸ್ವಾರ್ಥ ಮುಂತಾದ ಲೈಂಗಿಕೇತರ ಸಮಸ್ಯೆಗಳನ್ನು ಚರ್ಚಿಸುತ್ತವೆ. ಒಟ್ಟು ಸಾಮಾಜಿಕ ಚೌಕಟ್ಟಿನಲ್ಲಿ ಹೆಣ್ಣನ್ನು ಇರಿಸಿ ವಿಶ್ಲೇಷಿಸುತ್ತವೆ. ಲೈಂಗಿಕತೆಗೆ ಸಂಬಂಧಿಸಿದಂತೆ ಹೆಣ್ಣಿನ ತೃಪ್ತಿ, ಅತೃಪ್ತಿ ಮತ್ತು ತತ್ಸಂಬಂಧಿಯಾದ ಪ್ರತಿಕ್ರಿಯೆಗಳನ್ನು ಬರಹದ ಕೇಂದ್ರವಾಗಿಸಿದ್ದು ಮುಖ್ಯವಾಗಿ ಮಲಯಾಳೀ ಕಥನಗಾರಿಕೆಯ ವೈಶಿಷ್ಟ್ಯವೆನ್ನಬಹುದು.

ಭಾಷೆಯಲ್ಲಿ ಹೆಣ್ತನದ ವಿನ್ಯಾಸಗಳು

ಲೇಖಕಿಯರು ರಚಿಸಿರುವ ಕೃತಿಗಳಲ್ಲಿ ಭಾವಪಕ್ಷಪಾತವನ್ನು ಗುರುತಿಸಬಹುದು. ಸ್ತ್ರೀಬದುಕಿನ ದಟ್ಟ ಅನುಭವಗಳನ್ನು ಅನಾವರಣಗೊಳಿಸುವ ಉಪಮೆ-ರೂಪಕಗಳು ಮಹಿಳಾ ಬರವಣಿಗೆಯಲ್ಲಿ ವಿಪುಲವಾಗಿ ಬಳಕೆಯಾಗಿವೆ. ಭಾಷೆಯ ನಿಯಮಗಳಿಗಿಂತ ಸಂವಹನಶೀಲತೆ ಮತ್ತು ಪರಿಣಾಮಗಳೆ ಮುಖ್ಯವೆಂದು ಭಾವಿಸುವ ಸ್ತ್ರೀಯರು ಸನ್ನಿವೇಶದ ಅಗತ್ಯಕ್ಕೆ ತಕ್ಕಂತೆ ಸರಳ ಪದಗಳನ್ನು ಸೃಷ್ಟಿಸುತ್ತಾರೆ. ರೂಢಿಯಲ್ಲಿ ನಿಷಿದ್ಧವಾದ ಅಶ್ಲೀಲ ಪದಗಳನ್ನು ಮುಜುಗರವಿಲ್ಲದೆ ಬಳಸುತ್ತಾರೆ. ಸ್ವಗತ, ಗೊಣಗಾಟ, ಜಗಳ ಮತ್ತು ಆಕ್ರಮಣಕಾರಿ ವರ್ತನೆಗಳು ಹೆಣ್ಣಿನ ಅಭಿವ್ಯಕ್ತಿಯ ವಿಶಿಷ್ಟ ದಾರಿಗಳಾಗಿವೆ. ಗಮನಾರ್ಹ ಸಂಖ್ಯೆಯ ಕತೆಗಳ ಮುಖ್ಯಭೂಮಿಕೆಯಲ್ಲಿರುವ ಸ್ತ್ರೀಯರಿಗೆ ನಿರ್ದಿಷ್ಟವಾದ ಹೆಸರನ್ನು ಸೂಚಿಸದೆ 'ಅವಳು' ಎಂದು ಮಾತ್ರ ನಿರೂಪಿಸುವ ಲೇಖಕಿಯರು ಸ್ತ್ರೀಯರ ಸಮಸ್ಯೆ, ಅನುಭವ, ಸನ್ನಿವೇಶಗಳು ವೈಯಕ್ತಿಕವಾಗಿರದೆ ಒಟ್ಟು ಸ್ತ್ರೀಪ್ರಜ್ಞೆಗೆ, ಸ್ತ್ರೀ ಸಮುದಾಯಕ್ಕೆ ಸಂಬಂಧಿಸಿರುವುದನ್ನು ಗುರುತಿಸಿದ್ದಾರೆ.

ಪ್ರಕೃತಿಯೊಂದಿಗೆ ಸಮೀಕರಿಸುವ ಸ್ತ್ರೀಪ್ರಜ್ಞೆ

ಪುರುಷನ ದುರಾಸೆಗೆ ಪರಿಸರವು ಬಲಿಯಾಗುವುದನ್ನು ಮಲಯಾಳಂ ಕೃತಿಗಳು ಗುರುತಿಸಿವೆ. ತಮ್ಮಂತೆಯೇ ಪ್ರಕೃತಿಗೂ ಪುರುಷರಿಂದ ಅಪಾಯವಿರುವುದನ್ನು ಅರ್ಥಮಾಡಿಕೊಂಡಿರುವ ಸ್ತ್ರೀಯರು ಪರಿಸರವನ್ನು ಆರೋಗ್ಯಕರವಾಗಿ ಉಳಿಸಿಕೊಳ್ಳಬೇಕಾದ ಅಗತ್ಯವನ್ನು ಪ್ರತಿಪಾದಿಸಿದ್ದಾರೆ. ಜೀವಪರವಾದ ಪ್ರಕೃತಿಯೊಂದಿಗೆ ತಮ್ಮನ್ನು ಸಮೀಕರಿಸಿಕೊಳ್ಳುವ ಸ್ತ್ರೀಯರು ನಿಸರ್ಗದ ಗಿಡ–ಮರ, ಪ್ರಾಣಿ–ಪಕ್ಷಿ, ಕೆರೆ–ನದಿಗಳನ್ನು ತಮ್ಮೊಂದಿಗೆ ಸಹಜೀವನ ನಡೆಸುತ್ತಿರುವ ಸ್ನೇಹಿತೆ ಅಥವಾ ಸೋದರಿಯಂತೆ ಗ್ರಹಿಸುತ್ತಾರೆ. ಪಿತೃವ್ಯವಸ್ಥೆಯೊಂದಿಗೆ ಆರೋಗ್ಯಕರವಾದ ಸಂವಾದ ಮಾಡಲಾಗದ ಸ್ತ್ರೀಪ್ರಜ್ಞೆಯು ಪ್ರಕೃತಿಯೊಂದಿಗೆ ಆಪ್ತವಾದ ಸ್ನೇಹಸಂಬಂಧವನ್ನು ಸ್ಥಾಪಿಸುತ್ತದೆ. ಮಾತನಾಡುವ ಸಂಸ್ಕೃತಿಯ ಪ್ರಾಮಾಣಿಕತೆಯನ್ನು ಗುಮಾನಿಯಿಂದ ನೋಡುವ ಸ್ತ್ರೀಯರು ಮಾತನಾಡದ ಪ್ರಕೃತಿಯ ಒಡನಾಟದಲ್ಲಿ ಸಾಂತ್ವನ ಪಡೆಯುತ್ತಾರೆ.

ಹೆಣ್ಣಿನ ತೃಪ್ತಿಯ ನೆಲೆಗಳು ಮತ್ತು ಸ್ತ್ರೀವಿಶಿಷ್ಟವಾದ ಪ್ರತಿರೋಧ

ಹೆಣ್ಣಿನ ತೃಪ್ತಿಯ ನೆಲೆಗಳು ಸಂಕೀರ್ಣವಾಗಿವೆ. ವೈವಾಹಿಕ ಬದುಕಿನ ನಿರಾಸೆ ಮತ್ತು ಪರಿಸ್ಥಿತಿಗಳು ಸ್ತ್ರೀಯರ ವಿವಾಹೇತರ ಸಂಬಂಧಗಳಿಗೆ ಕಾರಣವಾಗಿವೆ. ವ್ಯಭಿಚಾರ, ಆತ್ಮಹತ್ಯೆ ಇಲ್ಲವೇ ಸನ್ಯಾಸವು ತಪ್ತೆಯರ ಆಯ್ಕೆಯಾಗಿದೆ. ಪತಿಯಿಂದ ನಿರೀಕ್ಷಿತ ಪ್ರೀತಿ ಅಥವಾ ಲೈಂಗಿಕ ತೃಪ್ತಿ ದೊರೆಯದ ಸ್ತ್ರೀಯರು ಪತಿಯ ಮೇಲಿನ ಪ್ರತೀಕಾರಕ್ಕೆಂಬಂತೆ ದಾಂಪತ್ಯದ ಗೆರೆಗಳನ್ನು ಮೀರುತ್ತಾರೆ. ದಾಂಪತ್ಯ ಸಂಬಂಧದಲ್ಲಿ ಇರುತ್ತಲೇ ಪರಪುರುಷರ ಸಂಗ ಮಾಡುತ್ತಾರೆ.

ಪುರುಷಾಧಿಕಾರದ ನೆಲೆಯು ತಮ್ಮ ಅಭಿರುಚಿ ಮತ್ತು ಅಭಿವ್ಯಕ್ತಿಗಳಿಗೆ ವಿಧಿಸಿರುವ ನಿರ್ಬಂಧಗಳನ್ನು ಸ್ತ್ರೀಯರು ಗುರುತಿಸಿದ್ದಾರೆ ಮತ್ತು ಮೀರಲು ಪ್ರಯತ್ನಿಸಿದ್ದಾರೆ. ಹೆಣ್ಣೆಂದರೆ ಶರೀರ ಮಾತ್ರವೆಂದು ಗ್ರಹಿಸುವ ಪುರುಷಾಧಿಪತ್ಯಕ್ಕೆ ಮಾತು, ಮೌನ, ಕೃತಿ, ಬರೆಹ... ಹೀಗೆ ಬೇರೆಬೇರೆ ವಿಧಾನಗಳ ಮೂಲಕ ಪ್ರತಿರೋಧ ತೋರಿದ್ದಾರೆ.

ಪಿತೃವ್ಯವಸ್ಥೆಯ ದಬ್ಬಾಳಿಕೆಗೆ ಹೆಣ್ಣು ವಿನೂತನ ರೀತಿಯಲ್ಲಿ ತಿರುಗಿ ಬೀಳುವುದನ್ನು ದಾಖಲಿಸುವ ಕಥನಗಳು ಮಲಯಾಳಂನಲ್ಲಿವೆ. ಅತ್ಯಾಚಾರ ಸಂತ್ರಸ್ತೆಯೊಬ್ಬಳು ತನ್ನನ್ನು ಬಲಾತ್ಕರಿಸಿದ ದುರುಳರನ್ನು ನಿತ್ಯವೂ ಮಾತನಾಡಿಸಿ ತಬ್ಬಿಬ್ಬುಗೊಳಿಸಿ ನೈತಿಕವಾಗಿ ಮಣಿಸುವುದು, ಹೋರಿಯ, ಪಿಶಾಚಿಯ, ಅತ್ಯಾಚಾರಿಯ ಮಗುವನ್ನು ಹೆರುವುದು, ಅಪ್ಪ ಯಾರೆಂದು ತಿಳಿಯದ ಮಗುವನ್ನು 'ಕೇವಲ ಅಮ್ಮನ ಮಗುವಾಗಿ' ಹೆತ್ತು ಬೆಳೆಸಲು ನಿರ್ಧರಿಸುವ ಮೂಲಕ ಗರ್ಭದ ಮೇಲೆ ಹೆಣ್ಣಿನ ಸ್ವಂತ ಹಕ್ಕನ್ನು ಪ್ರತಿಪಾದಿಸುವುದು, ದಾಂಪತ್ಯದಲ್ಲಿ ತೃಪ್ತಿಯಿಲ್ಲದ ಹೆಣ್ಣು ಗುಳ್ಳೆನರಿಯನ್ನೋ ಹಾವನ್ನೋ ಪ್ರೇಮಿಸಿ

ನೆಮ್ಮದಿ ಪಡೆಯುವುದು, ಪ್ರೇಮದ ನಂಬಿಕೆ ಹುಟ್ಟಿಸಿ ವಂಚಿಸಿದವನ ಗುಪ್ತಾಂಗವನ್ನು ಕತ್ತರಿಸಿ ವೈದ್ಯರಿಗೆ ಕರೆ ಮಾಡಿ ಅವನ ಜೀವ ಉಳಿಸುವುದು.. ಇವು ಹೆಣ್ಣಿನ ತೃಪ್ತಿ ಮತ್ತು ಪ್ರತಿರೋಧದ ಸ್ವರೂಪಕ್ಕೆ ಸಂಬಂಧಿಸಿದಂತೆ ಭಾರತೀಯ ಸಂದರ್ಭದಲ್ಲಿ ವಿಶಿಷ್ಟವೆನಿಸುವ ಸ್ತ್ರೀ ನಿರ್ವಚನ. ಇಂಥ ಉದಾಹರಣೆಗಳು ಸಾಹಿತ್ಯದ ಮೂಲಕ ಸ್ತ್ರೀ ಸಬಲೀಕರಣವನ್ನು ಸಾಧಿಸುವ ನಿಟ್ಟಿನಲ್ಲಿ ಪೂರಕ ಹೆಜ್ಜೆಗಳಾಗಿವೆ.

ಮಹಿಳಾ ಆರ್ಥಿಕತೆ ಮತ್ತು ಲಿಂಗ ರಾಜಕಾರಣ

ಸ್ತ್ರೀಯರ ಮಟ್ಟಿಗೆ ಸಬಲೀಕರಣವೆಂಬುದು ಕೇವಲ ಆರ್ಥಿಕತೆಗೆ ಸೀಮಿತವಾಗುವ ಭೌತಿಕ ಸತ್ಯವಾಗದೆ, ನಿರ್ಬಂಧಗಳಿಲ್ಲದೆ ಬದುಕುವ ಅವಕಾಶವನ್ನು ಹೊಂದಿ ಅರ್ಥಪೂರ್ಣವಾಗಬೇಕಾದ ಅಗತ್ಯವನ್ನು ಕೃತಿಗಳು ಕಾಣಿಸಿವೆ. ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳು ಸ್ತ್ರೀಯರ ಅಭದ್ರತೆಯನ್ನು ಕಡಿಮೆ ಮಾಡಿಲ್ಲ. ಉದ್ಯೋಗದ ಸ್ಥಳದಲ್ಲಿನ ಆತಂಕಗಳು ಅವರ ಆತ್ಮವಿಶ್ವಾಸವನ್ನು ತಗ್ಗಿಸಿವೆ. ಸಂಸಾರದಲ್ಲಿ ಸಮರಸವಿಲ್ಲದ ಸ್ತ್ರೀಯರಿಗೆ ಕೇವಲ ಸಂಪತ್ತು, ಆದಾಯಗಳಿಂದ ನೆಮ್ಮದಿ ದೊರೆಯುವುದಿಲ್ಲ.

ಸ್ತ್ರೀಯರ ಆರ್ಥಿಕತೆಯು ಅವರ ಬದುಕಿನ ಕ್ರಮ, ಸಂಬಂಧಗಳು ಮತ್ತು ಕುಟುಂಬದಲ್ಲಿನ ಸ್ಥಾನವನ್ನು ನಿರ್ಧರಿಸಿದೆ. ಸ್ವಂತ ಆದಾಯವಿಲ್ಲದ ಸ್ತ್ರೀಯರು ಕುಟುಂಬದೊಳಗಿನ ಹಿಂಸೆ ಅವಮಾನಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ಹಣವಿದ್ದರೆ ಸುಖವಾಗಿರಬಹುದು ಎಂಬ ಕಲ್ಪನೆಯು ಅಸಮ ವಿವಾಹ ಮತ್ತು ವಿಷಮ ದಾಂಪತ್ಯಗಳಿಗೆ ಕಾರಣವಾಗಿದೆ. ದುಡಿಯುವ ಮಹಿಳೆಯರಿಗೆ ಕುಟುಂಬದ ಆಗುಹೋಗುಗಳಲ್ಲಿ ಸಹಭಾಗಿತ್ವವಿದೆ, ಸಮಭಾಗಿತ್ವವಿಲ್ಲ.

ದುಡಿಮೆಯ ವಿಭಿನ್ನ ದಾರಿಗಳನ್ನು ಸ್ತ್ರೀಯರು ಕಂಡುಕೊಂಡಿದ್ದಾರೆ. ಕುಟುಂಬದ ಆರ್ಥಿಕತೆಯಲ್ಲಿ ಸ್ತ್ರೀಯರ ಪಾತ್ರವಿರುವುದನ್ನು, ಪತಿಯ ಗಳಿಕೆಯಲ್ಲಿ ಪತ್ನಿಗೂ ಅಧಿಕಾರವಿರುವುದನ್ನು ಕೃತಿಗಳು ಪ್ರತಿಪಾದಿಸಿವೆ. ವರ್ಗಸಂಘರ್ಷದ ನೆಲೆಯಲ್ಲಿ ರಚಿತವಾಗಿರುವ ಕಾದಂಬರಿಗಳು ಸ್ತ್ರೀಯರನ್ನು ಕುಟುಂಬ ಮತ್ತು ಸಮಾಜ ಎರಡರಿಂದಲೂ ಅನ್ಯಾಯಕ್ಕೆ ಒಳಗಾಗುವ ಶೋಷಿತ ವರ್ಗವಾಗಿ ಗುರುತಿಸಿವೆ. ಉದ್ಯೋಗದ ಸ್ಥಳದಲ್ಲಿನ ಆತಂಕಗಳು ಸ್ತ್ರೀಯರು ಆತ್ಮವಿಶ್ವಾಸವನ್ನು ತಗ್ಗಿಸಿವೆ.

ಅತ್ಯಾಚಾರ ಮತ್ತು ವೇಶ್ಯಾಟನೆಗಳ ಹಿಂದಿನ ಆರ್ಥಿಕ ಮತ್ತು ಅಧಿಕಾರದ ನೆಲೆಗಳನ್ನು ಕೃತಿಗಳು ವಿಶ್ಲೇಷಿಸಿವೆ. ಹೆಣ್ಣಿನ ದೇಹವನ್ನು ದುಡಿಮೆಯ ದಾರಿಯಾಗಿ ಬಳಸುವುದು ಮತ್ತು ಗಂಡಿನ ಅಹಂನ ತೃಪ್ತಿಗಾಗಿ ಬಳಸುವುದು ಇವೆರಡೂ ಅಂತಿಮವಾಗಿ ಪುರುಷನ ಅಧಿಕಾರದ ಸ್ಥಾಪನೆಗಾಗಿ ನಡೆಯುವ ಪ್ರಕ್ರಿಯೆಗಳಾಗಿದ್ದು ಅತ್ಯಾಚಾರ ಮತ್ತು ವೇಶ್ಯಾಟನೆಗಳನ್ನು ನೋಡುವ ಸಮಾಜದ ದೃಷ್ಟಿ ಬದಲಾಗಬೇಕಿರುವ ಅಗತ್ಯವನ್ನು ಪ್ರತಿಪಾದಿಸಿವೆ. ಸ್ತ್ರೀಯರು ಸಂಸಾರದ ಪೋಷಣೆಗಾಗಿ ಕುಟುಂಬದ

ಚೌಕಟ್ಟನ್ನು ಮೀರುವ ಅಸಹಾಯ ಸನ್ನಿವೇಶಗಳನ್ನು ಸಹಾನುಭೂತಿಯಿಂದ ನಿರೂಪಿಸಿ ಸ್ತ್ರೀಲೈಂಗಿಕತೆಯ ಆರ್ಥಿಕ ಆಯಾಮಗಳನ್ನು ಕಾಣಿಸಿವೆ.

ಕುಟುಂಬ ಮತ್ತು ಸಮಾಜದಲ್ಲಿನ ಲಿಂಗ ರಾಜಕಾರಣವು ಹೆಣ್ಣಿನ ಸೃಜನತೆಗೆ ನಿರ್ಬಂಧ ಹೇರಿ 'ಸ್ಪೇಸ್'ಗಾಗಿ ಚಡಪಡಿಸುವಂತೆ ಮಾಡಿದೆ. ಕೌಟುಂಬಿಕ, ಲೈಂಗಿಕ ಮತ್ತು ಧಾರ್ಮಿಕ ನೆಲೆಯ ರಾಜಕಾರಣವು ಅಂತಿಮವಾಗಿ ಪುರುಷನನ್ನು ಅಧಿಕಾರದ ಸ್ಥಾನದಲ್ಲಿ, ಸ್ತ್ರೀಯನ್ನು ಅಧೀನ ಸ್ಥಾನದಲ್ಲಿ ಇರಿಸುವುದನ್ನು ಕಥನಗಳು ಗುರುತಿಸಿವೆ. ಅಧಿಕಾರದ ರಾಜಕಾರಣವು ಸ್ತ್ರೀಯರನ್ನು ದಾಳವಾಗಿ ಬಳಸಿಕೊಂಡಿದೆ. ಪುರುಷರ ಮೇಲ್ಮೆಗಾಗಿ ನಡೆಯುವ ಯುದ್ಧದಂಥ ರಾಜಕೀಯ ಸಂಘರ್ಷವು ಸ್ತ್ರೀಯರ ನೋವಿಗೆ ಕಾರಣವಾಗಿದೆ. ಪಿತೃವ್ಯವಸ್ಥೆಯ ಭಾಷಿಕ ರಾಜಕಾರಣವು ಸ್ತ್ರೀಧರ್ಮದ ನೆಲೆಗಟ್ಟಿನಲ್ಲಿ ವ್ಯಾಖ್ಯಾನಿಸಿರುವ ಪುರಾಣಸ್ತ್ರೀಯರನ್ನು, ಮಾನವೀಯ ನೆಲೆಯಲ್ಲಿ ಮರುನಿರೂಪಿಸುವ ಪ್ರಯತ್ನವು ಮಲಯಾಳಂ ಸಾಹಿತ್ಯದಲ್ಲಿ ವಿಶೇಷವಾಗಿ ನಡೆದಿದೆ. ನಿರ್‌ಪುರಾಣೀಕರಣದ ಈ ಪ್ರಕ್ರಿಯೆಯಲ್ಲಿ ಮಲಯಾಳಂನ ಪುರುಷ ಮತ್ತು ಮಹಿಳಾ ಬರಹಗಾರರು ಭಾಗವಹಿಸಿದ್ದಾರೆ.

ಪೆಣ್ಣೆಳುತ್ತ್ (ಸ್ತ್ರೀ ಬರವಣಿಗೆ): ಲಿಂಗ ಪ್ರತಿನಿಧೀಕರಣ

ಮಲಯಾಳಂ ಸಾಹಿತ್ಯಲೋಕದಲ್ಲಿ 'ಪೆಣ್ಣೆಳುತ್ತ್' ಎಂದು ಗುರುತಿಸಿಕೊಂಡಿರುವ ಮಹಿಳಾ ಬರವಣಿಗೆಯು ಮಹಿಳಾ ಸಮಸ್ಯೆಗಳನ್ನು ಕೇಂದ್ರವಾಗಿರಿಸಿಕೊಂಡಿದೆ. ಕೇವಲ ಪತಿ–ಮನೆ–ಮಕ್ಕಳು ಇಷ್ಟಕ್ಕೇ ಸೀಮಿತವಾಗದೆ, ದೇವರು, ಧರ್ಮ, ಕಾಮ, ಪರಿಸರ, ಭಾಷೆ, ಆರ್ಥಿಕತೆ, ಲೈಂಗಿಕ ಹಿಂಸೆ, ಸಮಾಜದ ಇಬ್ಬಗೆಯ ನೀತಿ, ಆಧುನಿಕತೆ ತಂದೊಡ್ಡುವ ಸವಾಲುಗಳು, ಸೃಜನತೆಗೆ ಇರುವ ಆತಂಕಗಳು... ಹೀಗೆ ವೈವಿಧ್ಯಮಯ ವಿಷಯಗಳನ್ನು ಕೈಗೆತ್ತಿಕೊಂಡು ಮಹಿಳಾ ಚಿಂತನೆಗಳನ್ನು ದಾಖಲಿಸಿದೆ. ಸ್ತ್ರೀಯರ ಅಂತರಂಗದ ಭಾವನೆಗಳು ಹಾಗೂ ದಟ್ಟವಾದ ಸ್ತ್ರೀ ಅನುಭವಗಳ ನಿರೂಪಣೆಗೆ ಲೇಖಕಿಯರು ಆದ್ಯತೆ ನೀಡಿದ್ದಾರೆ. ಪರಂಪರೆಯಿಂದ ಸಾಗಿಬಂದು ಸತ್ಯವೇ ಆಗಿಬಿಟ್ಟಿರುವ ಸುಳ್ಳುಗಳನ್ನೂ, ಭ್ರಮೆಗಳನ್ನೂ ಬಯಲಿಗೆಳೆಯುವ ಸಮರ್ಥ ಮಾಧ್ಯಮವನ್ನಾಗಿ ಸಣ್ಣಕತೆಗಳನ್ನು ವಿಶೇಷವಾಗಿ ಬಳಸಿಕೊಂಡಿದ್ದಾರೆ.

ಜಾಗೃತ ಮತ್ತು ಪ್ರಖರವಾದ ಸ್ತ್ರೀಪ್ರಜ್ಞೆಯೊಂದಿಗೆ ಬರೆಯುವ ಲೇಖಕಿಯರ ರಚನೆಗಳಲ್ಲಿ ಸ್ತ್ರೀವಾಚಿಯಾದ ಶೀರ್ಷಿಕೆಗಳನ್ನು ಹೊಂದಿರುವುದು, ಸ್ತ್ರೀಯರನ್ನು ಪ್ರಧಾನ ಭೂಮಿಕೆಗಳಲ್ಲಿ ಹೊಂದಿರುವುದು, ಸ್ತ್ರೀಯರಿಗೆ ನೇರವಾಗಿ ಸಂಬಂಧಿಸಿರುವ ಸಂಗತಿಗಳನ್ನು ಕಥಾವಸ್ತುವಾಗಿಸುವುದು, ಸ್ತ್ರೀಸಮೂಹಕ್ಕೆ ಆಪ್ತವಾಗುವ ಭಾಷೆ ಮತ್ತು ನಿರೂಪಣೆಯ ಶೈಲಿಗಳನ್ನು ಬಳಸಿಕೊಳ್ಳುವುದು.. ಮುಂತಾಗಿ ಲಿಂಗ ಪ್ರತಿನಿಧೀಕರಣದ ವಿಶೇಷ ಪ್ರಯತ್ನವು ಕಾಣುತ್ತದೆ. ಇಲ್ಲಿನ ಸ್ತ್ರೀಪ್ರತಿಮೆಗಳು

ಲೇಖಕಿಯರ ಕಲ್ಪನೆಯಲ್ಲಿ ಮೊದಲೇ ರೂಪುಗೊಂಡ ಸಿದ್ಧ ಪಡಿಯಚ್ಚುಗಳಾಗಿರದೆ ಕಥೆಯ ಸಂದರ್ಭಕ್ಕೆ ಸರಿಯಾಗಿ ಪ್ರತಿಕ್ರಿಯಿಸುವ ಅವಕಾಶಗಳನ್ನು ಪಡೆದುಕೊಂಡು ಹೆಣ್ಣಿನ ಅಂತಃಶಕ್ತಿಯನ್ನು ಪ್ರಕಟಿಸಿವೆ. ಲೇಖಕಿಯರ ಕೃತಿಗಳು ಸಮಕಾಲೀನ ಮಲಯಾಳಂ ಕಥನಸಾಹಿತ್ಯದ ಸ್ತ್ರೀ ನಿರ್ವಚನವನ್ನು ಅರಿಯುವ ದಾರಿಯಲ್ಲಿ ಮಹತ್ವದ ಆಕರಗಳಾಗಿವೆ.

ಸ್ತ್ರೀಪರ ಕಥನಪ್ರಜ್ಞೆ

ಸ್ತ್ರೀಸಂವೇದನೆಯ ದಾಖಲಾತಿ ಮತ್ತು ಪ್ರಕಟನೆಗೆ ಅವಕಾಶವಿರುವ ಕಥನಗಳಿಗೆ ಮಲಯಾಳಂ ಸಾಹಿತ್ಯವು ಮಾಧ್ಯಮವಾಗಿದೆ. ಸಾಹಿತ್ಯದ ಮೂಲಕ ಸ್ತ್ರೀಪರವಾದ ಒಂದು ಎಚ್ಚರವನ್ನು ಮೂಡಿಸಲು ಬರಹಗಾರರು ಯತ್ನಿಸಿದ್ದಾರೆ. ಸುತ್ತಲಿನ ಬದುಕಿನಲ್ಲಿ ತಾವು ಕಂಡ ಸ್ತ್ರೀ–ಪುರುಷ ಪಾತ್ರಗಳನ್ನು ಪ್ರಜ್ಞಾಪೂರ್ವಕವಾಗಿ ಮುಖಾಮುಖಿಯಾಗಿಸಿ ಸ್ತ್ರೀಬದುಕನ್ನು ಪುನರ್‌ರೂಪಿಸಲು ಯತ್ನಿಸಿದ್ದಾರೆ. ಸ್ತ್ರೀಯರ ಬದುಕಿಗೆ ಸಂಬಂಧಿಸಿದಂತೆ, ಸಮಾಜದಲ್ಲಿ ಕಾಲಕಾಲಕ್ಕೆ ನಡೆದಿರುವ ಪಲ್ಲಟಗಳನ್ನು ಗುರುತಿಸಿ ದಾಖಲಿಸಿದ್ದಾರೆ.

ಅನುಭವದ ನಿರೂಪಣೆಗೆ ಹೆಚ್ಚು ಒತ್ತು ಕೊಡುವ ಸಣ್ಣಕತೆಗಳು ಸ್ತ್ರೀಪರವಾದ ಕಾಳಜಿಯೊಂದಿಗೆ ಬದುಕಿನ ವಿವಿಧ ಮಗ್ಗುಲುಗಳನ್ನು ಶೋಧಿಸುತ್ತ ಜೀವವಿರೋಧಿಯಾದ ಸಾಮಾಜಿಕ ವ್ಯವಸ್ಥೆಯಲ್ಲಿ ಒಣಗಿಹೋದ ಸ್ತ್ರೀ ಹೃದಯಗಳ ನಿಟ್ಟುಸಿರನ್ನು ಕಾಣಿಸಿವೆ. ತಗಳಿ, ಬಶೀರ್‌ರಂಥ ಹಿರಿಯ ಲೇಖಕರು ಇತಿಹಾಸವು ನಿರ್ಲಕ್ಷಿಸಿದ ಸಾಮಾನ್ಯ ಮಹಿಳೆಯರ ಬದುಕನ್ನು ಕಾದಂಬರಿಯ ಕೇಂದ್ರವಾಗಿಸಿ ಒಂದು ಹೊಸ ಮಾದರಿಯನ್ನು ಹಾಕಿಕೊಟ್ಟಿದ್ದಾರೆ. ಸ್ತ್ರೀಮನಸ್ಸಿನ ಒಳಪದರಗಳ ಅತೃಪ್ತಿ, ಚಡಪಡಿಕೆಗಳನ್ನು ಶೋಧಿಸಲು ವಾಸುದೇವನ್ ನಾಯರ್, ಕಮಲಾದಾಸ್, ಲಲಿತಾಂಬಿಕಾ ಅಂತರ್ಜನಂ ಪ್ರಯತ್ನಿಸಿದ್ದಾರೆ. ಪಿತೃವ್ಯವಸ್ಥೆಯು ಕೊರೆದಿಟ್ಟ ಲಕ್ಷ್ಮಣರೇಖೆಗಳನ್ನು ದಾಟಿ ಬದುಕುವ ಸ್ತ್ರೀಮಾದರಿಗಳನ್ನು ಎಸ್.ಕೆ. ಪೊಟ್ಟೆಕ್ಕಾಟ್ಟ್, ವೆಟ್ಟೂರ್ ರಾಮನ್ ನಾಯರ್, ಉರೂಬ್, ಸೇತುಮಾಧವನ್ ತೋರಿಸಿಕೊಟ್ಟಿದ್ದಾರೆ. ವೈಕ್ಕಂ ಮುಹಮ್ಮದ್ ಬಶೀರ್‌ರಿಂದ ತೊಡಗಿದ ಮುಸ್ಲಿಂ ಸ್ತ್ರೀಸಂವೇದನೆಯು ಬಿ.ಎಂ. ಸುಹರಾ ಅವರಲ್ಲಿ ಮುಂದುವರಿದಿದ್ದು ಕೇವಲ ಮದುವೆಯ ದೃಷ್ಟಿಯಿಂದಲೆ ಬೆಳೆಸಲಾಗುವ ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳು ಬುರಖಾದ ಒಳಗೆ ಅನುಭವಿಸುವ ನೋವನ್ನು ತಮ್ಮ ಬರಹದಲ್ಲಿ ಅಭಿವ್ಯಕ್ತಿಸಿದ್ದಾರೆ. ವಿವಾಹದ ಅರ್ಥಹೀನತೆ, ಸಂಪ್ರದಾಯದ ಸ್ವಾರ್ಥ, ಪುರುಷರ ಕ್ರೌರ್ಯಗಳಿಗೆ ಹೆಣ್ಣು ತೋರುವ ಪ್ರತಿಕ್ರಿಯೆ–ಪ್ರತಿರೋಧ ಮುಂತಾದವುಗಳನ್ನು ಸಾರಾ ಜೋಸೆಫ್, ಗ್ರೇಸಿ, ಸಿತಾರಾ ಎಸ್., ಇ.ಕೆ. ಷೀಬಾ, ಮಾನಸಿ, ಕೆ.ಪಿ. ಸುಧೀರ, ರೇಖಾ ಕೆ., ಶಾಹಿನಾ ಇ.ಕೆ., ಕೆ.ಪಿ. ಕೃಷ್ಣನ್ ಕುಟ್ಟಿ, ಇರ್ಷಾದ್ ಬತೇರಿ ಮುಂತಾದ ಬರಹಗಾರರು ದಾಖಲಿಸಿದ್ದಾರೆ. ಹೊಸ ತಲೆಮಾರಿನ ಮುಸ್ಲಿಂ ಬರಹಗಾರ್ತಿಯಾಗಿರುವ ಇ.ಕೆ. ಷೀಬಾ

ಕೇವಲ ಮುಸ್ಲಿಂ ಸಂವೇದನೆಗೆ ಸೀಮಿತವಾಗದೆ ತನ್ನ ಸುತ್ತಲಿನ ಹಲವು ವಿದ್ಯಮಾನಗಳಿಗೆ ಧ್ವನಿಯಾಗಲು ಬಯಸಿದ್ದಾರೆ.

ಸ್ತ್ರೀಲೈಂಗಿಕತೆಯ ಕುರಿತಾದ ದಿಟ್ಟ ಅಭಿವ್ಯಕ್ತಿಯನ್ನು ಕಮಲಾದಾಸ್, ಸಾರಾ ಜೋಸೆಫ್, ಸಿತಾರಾ ಎಸ್. ಇವರ ಬರಹಗಳಲ್ಲಿ ಕಾಣಬಹುದು. ಸ್ತ್ರೀಯರ ಕಷ್ಟಪರಂಪರೆಗೆ ಕಾರಣವಾಗಿರುವ ಸಮಾಜ, ಧರ್ಮ ಮತ್ತು ಸಂಪ್ರದಾಯಗಳನ್ನು ನವಿರಾಗಿ ಛೇಡಿಸುವ ಬಶೀರ್ ಅವರ ಹ್ಯೂಮರ್ ಅಥವಾ ವ್ಯಂಗ್ಯವಿನೋದದ ನಿರೂಪಣಾ ವಿಧಾನವನ್ನು ಮಾನಸಿ, ಸಾರಾ ಜೋಸೆಫ್, ಗ್ರೇಸಿ ಇವರ ರಚನೆಗಳಲ್ಲಿ ಗುರುತಿಸಬಹುದು. ಕಥನಗಳ ವಸ್ತು, ಆಶಯ ಮತ್ತು ದರ್ಶನಗಳ ದೃಷ್ಟಿಯಿಂದ ಗಮನಿಸಿದರೆ ಪ್ರತಿಯೊಂದು ಕಥನವೂ ಭಿನ್ನವಾಗಿದೆ ಮತ್ತು ವಾಸ್ತವದ ಬದುಕಿಗೆ ಹತ್ತಿರವಾಗಿದೆ. ಸ್ತ್ರೀಪರವಾದ ಲಿಂಗ ಪ್ರತಿನಿಧೀಕರಣವನ್ನು ಹೊಂದಿರುವ ಮಲಯಾಳಂ ಕಥನಲೋಕವು ಪುರುಷವಿರೋಧಿಯಾಗಿಲ್ಲ. ಕೃತಿಗಳಲ್ಲಿ ಬರುವ ಪುರುಷರೆಲ್ಲ ಕ್ರೂರಿಗಳಲ್ಲ, ಬಹುಮಟ್ಟಿಗೆ ಉದಾರಿಗಳೂ ಇರುವುದನ್ನು ಕಾಣಬಹುದು.

ಹೀಗೆ ಮಲಯಾಳಂ ಕಥನಸಾಹಿತ್ಯವು ಸ್ತ್ರೀವಿಷಯಕವಾದ ಚಿಂತನೆ ಮತ್ತು ನಿರೂಪಣೆಗೆ ಮಾಧ್ಯಮವಾದ ಬಗೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ. ಮಲಯಾಳಂ ಕಥನಸಾಹಿತ್ಯವು ಸ್ತ್ರೀಕೇಂದ್ರಿತವಾದ ಅಭ್ಯಾಸಕ್ಕೆ ಬಹಳ ಸೂಕ್ತವಾಗಿದೆ. ಮಲಯಾಳಂ ಕಥನಗಳಲ್ಲಿನ ಸ್ತ್ರೀನಿರ್ವಚನದ ಅಧ್ಯಯನವು ಮಲಯಾಳೀ ಸ್ತ್ರೀಯರ ಬದುಕಿನ ಕ್ರಮ ಮತ್ತು ಆಲೋಚನೆಗಳ ಜೊತೆಗೆ ಅಲ್ಲಿನ ಸಂಸ್ಕೃತಿಯ ವಿಶಿಷ್ಟ ಅಂಶಗಳನ್ನು ತಿಳಿಸುತ್ತದೆ. ಕನ್ನಡದ ಓದುಗರ ನೆಲೆಯಲ್ಲಿ ಮಲಯಾಳಂ ಸಮಾಜದ ಸ್ತ್ರೀವಿಷಯಕ ಚಿಂತನೆ, ಚಟುವಟಿಕೆ ಮತ್ತು ಬದುಕನ್ನು ಗಮನಿಸುವುದು, ಗುರುತಿಸುವುದು ಮತ್ತು ದಾಖಲಿಸುವುದು ಬಹಳ ಉಪಯುಕ್ತವಾದ ಕೆಲಸವಾಗಿದೆ. ಕನ್ನಡ ಸಾಹಿತ್ಯದ ಮೇಲೆ ಮಲಯಾಳಂ ಕಥನಸಾಹಿತ್ಯದ ಪ್ರಭಾವ ಮತ್ತು ಪರಿಣಾಮಗಳನ್ನು ವಿಶ್ಲೇಷಿಸುವ ನೆಲೆಯಲ್ಲಿ ಅಧ್ಯಯನಗಳು ನಡೆಯಬೇಕಾಗಿವೆ.

ಅನುಬಂಧಗಳು

ಅನುಬಂಧ ೧: ಪ್ರಾಥಮಿಕ ಆಕರಗಳು

- ಕಾದಂಬರಿಗಳು
- ಕಥಾ ಸಂಕಲನಗಳು
- ಆತ್ಮಕಥನಗಳು

ಅನುಬಂಧ ೨: ಪರಾಮರ್ಶನ ಗ್ರಂಥಗಳು

- ಕನ್ನಡ ಕೃತಿಗಳು
- ಇಂಗ್ಲೀಷ್ ಕೃತಿ

ಅನುಬಂಧ ೧: ಪ್ರಾಥಮಿಕ ಆಕರಗಳು

ಕಾದಂಬರಿಗಳು

೧. ಅಗ್ನಿಸಾಕ್ಷಿ (೧೯೮೧, ೨೦೧೦) ಲಲಿತಾಂಬಿಕಾ ಅಂತರ್ಜನಂ (ಅನು: ಕೆ.ಕೆ. ನಾಯರ್) ಸಾಹಿತ್ಯ ಅಕಾದೆಮಿ ನವದೆಹಲಿ

೨. ಅಶ್ವತ್ಥಾಮ (೧೯೯೦) ಮಾಡಾಂಬ್ ಕುಂಜುಕುಟ್ಟನ್ (ಅನು: ಡಾ. ನಾ. ದಾಮೋದರ ಶೆಟ್ಟಿ) ಅಭಿವ್ಯಕ್ತ ಪ್ರಕಾಶನ ಮಂಗಳೂರು

೩. ಆಗ್ನೇಯ (೨೦೧೫) ವತ್ಸಲ ಪಿ. (ಅನು: ಎ. ಮೋಹನ ಕುಂಟಾರ್) ಸಾಹಿತ್ಯ ಅಕಾದೆಮಿ ನವದೆಹಲಿ

೪. ಆಡುಜೀವನ (೨೦೧೨) ಬೆನ್ಯಾಮಿನ್ (ಅನು: ಡಾ.ಅಶೋಕ್ ಕುಮಾರ್) ಹೇಮಂತ ಸಾಹಿತ್ಯ ಬೆಂಗಳೂರು

೫. ಆಲಾಹಳ ಹೆಣ್ಣುಮಕ್ಕಳು (೨೦೦೯) ಸಾರಾ ಜೋಸೆಫ್ (ಅನು: ಪಾರ್ವತಿ ಜಿ. ಐತಾಳ್) ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು

೬. ಇಂದುಲೇಖಾ (೧೯೯೫) ಚಂದುಮೆನೊನ್ (ಅನು: ಸಿ. ರಾಘವನ್) ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ ನವದೆಹಲಿ

೭. ಎರಡು ಬಳ್ಳ (೧೯೬೧) ತಗಳಿ ಶಿವಶಂಕರ ಪಿಳ್ಳೆ (ಅನು: ನಾ. ಕಸ್ತೂರಿ, ಬಿ. ಶಂಕರಭಟ್ಟ) ಸಾಹಿತ್ಯ ಅಕಾದೆಮಿ ಹೊಸದೆಹಲಿ

೮. ಏಣಿಯ ಮೆಟ್ಟಲುಗಳು (೧೯೭೩) ತಕಳಿ ಶಿವಶಂಕರ ಪಿಳ್ಳೆ (ಅನು: ಬಿ.ಕೆ. ತಿಮ್ಮಪ್ಪ) ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ ನವದೆಹಲಿ

೯. ಒಂದು ಊರಿನ ಕಥೆ (೧೯೯೭) ಪೊಟ್ಟೆಕ್ಕಾಟ್ಟ್ ಎಸ್.ಕೆ. (ಕೆ.ಕೆ. ನಾಯರ್ ಮತ್ತು ಅಶೋಕ್ ಕುಮಾರ್) ಸಾಹಿತ್ಯ ಅಕಾದೆಮಿ ನವದೆಹಲಿ

೧೦. ಕಾಲ (೧೯೭೮) ವಾಸುದೇವನ್ ನಾಯರ್ ಎಂ.ಟಿ. (ಅನು: ಬಿ.ಕೆ. ತಿಮ್ಮಪ್ಪ) ಸಾಹಿತ್ಯ ಅಕಾದೆಮಿ ನವದೆಹಲಿ

೧೧. ಕಾಲವು ಅಳಿಸಿದ ಕಾಲ ಗುರುತುಗಳು (೨೦೧೧) ಮಾರಿಯತ್ತ್ ಸಿ. ಎಚ್. (ಅನು: ಪಾರ್ವತಿ ಜಿ. ಐತಾಳ್) ಶ್ರೀನಿವಾಸ ಪುಸ್ತಕ ಪ್ರಕಾಶನ ಬೆಂಗಳೂರು

೧೨. ಕೆಂಪುಮೀನು (೧೯೬೪) ತಕಳಿ ಶಿವಶಂಕರ ಪಿಳ್ಳೆ (ಅನು: ನಾ. ಕಸ್ತೂರಿ) ಸಾಹಿತ್ಯ ಅಕಾದೆಮಿ ನವದೆಹಲಿ

೧೩. ಕೊಚ್ಚರೇತ್ತಿ (೨೦೧೧) ನಾರಾಯಣ್ (ಅನು: ನಾ. ದಾಮೋದರ ಶೆಟ್ಟಿ) ಸಾಹಿತ್ಯ ಅಕಾದೆಮಿ ನವದೆಹಲಿ

೧೪. ಗುರುತುಗಳು (೨೦೧೧) ಸೇತು ಮಾಧವನ್ (ಅನು: ಅಶೋಕ್ ಕುಮಾರ್) ಸಾಹಿತ್ಯ ಅಕಾದೆಮಿ ನವದೆಹಲಿ

೧೫. ತೋಟಿಯ ಮಗ (೨೦೦೦, ೨೦೧೩) ತಗಳಿ ಶಿವಶಂಕರ ಪಿಳ್ಳೆ (ಅನು: ಎ. ಮೋಹನ ಕುಂಟಾರ್) ಯಾಜಿ ಪ್ರಕಾಶನ ಹೊಸಪೇಟೆ

೧೬. ದುರ್ಬೀಜ (೨೦೦೦) ವಾಸುದೇವನ್ ನಾಯರ್ ಎಂ.ಟಿ. (ಅನು: ಪಾರ್ವತಿ ಜಿ. ಐತಾಳ್) ಇಂದಿರಾ ಪ್ರಕಾಶನ ಬೆಂಗಳೂರು

೧೭. ದೇವರ ಕಣ್ಣು (೨೦೦೯) ಮಹಮ್ಮದ್ ಎನ್.ಪಿ. (ಅನು: ಪಾರ್ವತಿ ಜಿ. ಐತಾಳ್) ಸಾಹಿತ್ಯ ಅಕಾದೆಮಿ ನವದೆಹಲಿ

೧೮. ದೇವರ ವಿಕರಾಳಗಳು (೨೦೦೦) ಮುಕುಂದನ್ ಎಂ. (ಅನು: ನಾ. ದಾಮೋದರ ಶೆಟ್ಟಿ) ಸಾಹಿತ್ಯ ಅಕಾದೆಮಿ ನವದೆಹಲಿ

೧೯. ನನ್ನಜ್ಜನಿಗೊಂದಾನೆಯಿತ್ತು (೧೯೭೩) ವೈಕ್ಕಂ ಮುಹಮ್ಮದ್ ಬಶೀರ್ (ಅನು: ವೆಂಕಟರಾಜ ಪುಣಿಂಚತ್ತಾಯ) ಸಾಹಿತ್ಯ ಅಕಾದೆಮಿ ಹೊಸದೆಹಲಿ

೨೦. ನಾನಿನ್ನು ನಿದ್ರಿಸುವೆ (೨೦೦೦) ಬಾಲಕೃಷ್ಣನ್ ಪಿ.ಕೆ. (ಅನು: ಸಾರಾ ಅಬೂಬಕ್ಕರ್) ಸಾಹಿತ್ಯ ಅಕಾದೆಮಿ ***ನವದೆಹಲಿ***

೨೧. ನಿರ್ಗಮನ (೨೦೧೦) ಸುಧಾಕರನ್ ರಾಮಂತಳಿ (ಅನು: ಕೆ.ಕೆ.ಗಂಗಾಧರನ್) ಹೇಮಂತ ಸಾಹಿತ್ಯ ಬೆಂಗಳೂರು

೨೨. ಪಾತುಮ್ಮನ ಆಡು ಮತ್ತು ಬಾಲ್ಯಕಾಲ ಸಖಿ (೧೯೭೨) ವೈಕ್ಕಂ ಮಹಮ್ಮದ್ ಬಷೀರ್ (ಅನು: ಬಿ.ಕೆ. ತಿಮ್ಮಪ್ಪ) ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ

೨೩. ಬದುಕಲು ಮರೆತ ಸ್ತ್ರೀ (೧೯೯೯) ವೆಟ್ಟೂರ್ ರಾಮನ್ ನಾಯರ್ (ಅನು: ಪಾರ್ವತಿ ಜಿ. ಐತಾಳ್) ಜನಪ್ರತಿನಿಧಿ ಪ್ರಕಾಶನ ಕುಂದಾಪುರ

೨೪. ಬಲೆ (೧೯೯೭, ೨೦೧೨) ಝುಹರಾ ಬಿ.ಎಂ. (ಅನು: ಡಾ.ಸಾರಾ ಅಬೂಬಕ್ಕರ್) ಚಂದ್ರಗಿರಿ ಪ್ರಕಾಶನ ಮಂಗಳೂರು

೨೫. ಬಿಡುಗಡೆ (೨೦೧೧) ಬಾಲಚಂದ್ರನ್ ಜಿ. (ಅನು: ಕೆ.ಕೆ. ನಾಯರ್) ಲೋಹಿಯಾ ಪ್ರಕಾಶನ ಬಳ್ಳಾರಿ

೨೬. ಭೀಮಾಯಣ (೨೦೦೩) ವಾಸುದೇವನ್ ನಾಯರ್ ಎಂ.ಟಿ. (ಅನು: ಸಿ. ರಾಘವನ್) ಸಾಹಿತ್ಯ ಅಕಾದೆಮಿ ನವದೆಹಲಿ

೨೭. ಮನೋಮಿ (೧೯೯೩, ೨೦೧೨) ಕಮಲಾದಾಸ್ (ಅನು: ಡಾ. ಸಾರಾ ಅಬೂಬಕ್ಕರ್) ಚಂದ್ರಗಿರಿ ಪ್ರಕಾಶನ ಮಂಗಳೂರು

೨೮. ಮರಣತೋರಣ (೨೦೧೦) ಏಟುಮಾನೂರ್ ಶಿವಕುಮಾರ್ (ಅನು: ಕೆ.ಕೆ. ನಾಯರ್) ಯಶವಂತ ಪ್ರಕಾಶನ ಬೆಂಗಳೂರು

೨೯. ಮಾಯಾಸೀತೆ (೨೦೧೦) ಕವಿತ ಕೆ (ಅನು: ಕೆ.ಕೆ. ನಾಯರ್) ಹೇಮಂತ ಸಾಹಿತ್ಯ ಬೆಂಗಳೂರು

೩೦. ಮಿಸ್‌ವರ್ಲ್ಡ್ (೨೦೧೦) ಸುಬೈರ್ (ಅನು: ಕೆ.ಕೆ. ನಾಯರ್) ಯಶವಂತ ಪ್ರಕಾಶನ ಬೆಂಗಳೂರು

೩೧. ಮುಂಬೆಳಕು (೨೦೧೧) ಖದೀಜಾ ಮುಮ್ತಾಝ್ (ಡಾ) (ಅನು: ಡಾ. ಸಾರಾ ಅಬೂಬಕ್ಕರ್) ಚಂದ್ರಗಿರಿ ಪ್ರಕಾಶನ ಮಂಗಳೂರು

೩೨. ವಯನಾಡಿನ ಕನಸು (೨೦೧೭) ಕೃಷ್ಣನ್ ಕುಟ್ಟಿ (ಅನು: ಪಾರ್ವತಿ ಜಿ. ಐತಾಳ್) ದೇಸಿ ಪುಸ್ತಕ ಬೆಂಗಳೂರು

೩೩. ವಿಷಕನ್ನಿಕೆ (೧೯೯೩) ಪೊಟ್ಟೆಕ್ಕಾಟ್ಟ್ ಎಸ್.ಕೆ. (ಅನು: ಶ್ರೀಕೃಷ್ಣ ಭಟ್ ಅರ್ತಿಕಜೆ) ಎನ್.ಬಿ.ಟಿ. ಇಂಡಿಯಾ ಹೊಸದೆಹಲಿ

೩೪. ಶಾರದ (೨೦೧೬) ಚಂದು ಮೆನೋನ್ ಒ. (ಅನು: ಎ. ಮೋಹನ ಕುಂಟಾರ್) ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಬೆಂಗಳೂರು

೩೫. ಸುಂದರಿಯರು ಸುಂದರರು (೨೦೦೭) ಉರೂಬ್ (ಅನು: ಡಾ. ಮೋಹನ ಕುಂಟಾರ್) ಸಾಹಿತ್ಯ ಅಕಾದೆಮಿ ನವದೆಹಲಿ

೩೬. ಹಗ್ಗ – ಭಾಗ ೧ (೨೦೦೭) ತಗಳಿ ಶಿವಶಂಕರ ಪಿಳ್ಳೆ (ಅನು: ಕೆ.ಕೆ. ನಾಯರ್, ಅಶೋಕ್ ಕುಮಾರ್) ಸಾಹಿತ್ಯ ಅಕಾದೆಮಿ ನವದೆಹಲಿ

೩೭. ಹಗ್ಗ – ಭಾಗ ೨ (೨೦೦೭) ತಗಳಿ ಶಿವಶಂಕರ ಪಿಳ್ಳೆ (ಅನು: ಕೆ.ಕೆ. ನಾಯರ್, ಅಶೋಕ್ ಕುಮಾರ್) ಸಾಹಿತ್ಯ ಅಕಾದೆಮಿ ನವದೆಹಲಿ

೩೮. ಹಗ್ಗ – ಭಾಗ ೩ (೨೦೦೭) ತಗಳಿ ಶಿವಶಂಕರ ಪಿಳ್ಳೆ (ಅನು: ಕೆ.ಕೆ. ನಾಯರ್, ಅಶೋಕ್ ಕುಮಾರ್) ಸಾಹಿತ್ಯ ಅಕಾದೆಮಿ ನವದೆಹಲಿ

ಕಥಾ ಸಂಕಲನಗಳು

೧. ಆಯ್ದ ಮಲಯಾಳ ಸಣ್ಣ ಕಥೆಗಳು (೧೯೮೯) ಗುಪ್ತನ್ ನಾಯರ್ (ಸಂ) (ಅನು: ಕೆ.ಕೆ. ನಾಯರ್) ಸಾಹಿತ್ಯ ಅಕಾದೆಮಿ ನವದೆಹಲಿ

೨. ಕಥಾ ಭಾರತೀ: ಮಲೆಯಾಳಿ ಕಥೆಗಳು (೧೯೭೩) ಓಮ್ ಚೆರಿ ಎನ್.ಎನ್. ಪಿಳ್ಳೆ (ಸಂ) (ಅನು: ಕುಮಾರತನಯ) ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ ನವದೆಹಲಿ

೩. ಕಥಾ ಸಮಾಹಾರಂ (೨೦೧೯) ಷೀಬಾ ಇ.ಕೆ. (ಅನು: ಪ್ರಭಾಕರನ್ ಕೆ) ಸೃಷ್ಟಿ ಪಬ್ಲಿಕೇಷನ್ಸ್ ಬೆಂಗಳೂರು

೪. ಕಮಲಾದಾಸ್ ಅವರ ಒಂದು ಪ್ರೀತಿಯ ಕತೆ ಮತ್ತು ಇತರ ಕತೆಗಳು (೨೦೧೭) (ಅನು: ಕೆ.ಕೆ. ಗಂಗಾಧರನ್) ವಸಂತ ಪ್ರಕಾಶನ ಬೆಂಗಳೂರು

೫. ಕಮಲಾದಾಸ್ ಅವರ ಬೇಸಿಗೆಯ ರಜೆ ಮತ್ತು ಇತರ ಕತೆಗಳು (೨೦೧೭) (ಅನು: ಕೆ. ಕೆ. ಗಂಗಾಧರನ್) ವಸಂತ ಪ್ರಕಾಶನ ಬೆಂಗಳೂರು

೬. ಕಮಲಾದಾಸ್ ಕತೆಗಳು (೨೦೦೯) (ಅನು: ಕೆ.ಕೆ. ಗಂಗಾಧರನ್) ಲಂಕೇಶ್ ಪ್ರಕಾಶನ ಬೆಂಗಳೂರು

೭. ಕಮಲಾದಾಸ್‌ರವರ ನೀಳ್ಗಥೆಗಳು (೨೦೧೨) (ಅನು: ಡಾ. ಕೆ. ಪೂರ್ಣಿಮಾ ಭಟ್ ಹಾಗೂ ಕೆ.ಕೆ. ಗಂಗಾಧರನ್) ದಿವ್ಯಚಂದ್ರ ಪ್ರಕಾಶನ ಬೆಂಗಳೂರು

೮. ಕಮಲಾದಾಸ್ ಸಮಗ್ರ ಕಾದಂಬರಿಗಳು (೨೦೧೩) (ಅನು: ಡಾ. ಅಶೋಕ್ ಕುಮಾರ್) ಹೇಮಂತ ಸಾಹಿತ್ಯ ಬೆಂಗಳೂರು

೯. ಕೇರಳ ಕಾಂತಾಸಮ್ಮಿತ: ಮಲೆಯಾಳಂ ಕಥೆಗಳು (೨೦೧೯) (ಅನು: ಕಮಲಾ ಹೆಮ್ಮಿಗೆ) ಮನೋಹರ ಗ್ರಂಥಮಾಲಾ ಧಾರವಾಡ

೧೦. ತೃಕೋಟ್ಟೂರ್ ನೀಳ್ಗತೆಗಳು (೨೦೧೪) ಖಾದರ್ ಯು.ಎ. (ಅನು: ನಾ. ದಾಮೋದರ ಶೆಟ್ಟಿ) ಸಾಹಿತ್ಯ ಅಕಾದೆಮಿ ನವದೆಹಲಿ

೧೧. ನನ್ನ ಚೀರಾಳಜ್ಜನ ಕಡುಗತ್ತಿ ಮತ್ತು ಇತರ ಮಲಯಾಳಿ ಕಥೆಗಳು (೨೦೧೨) (ಅನು: ಪಾರ್ವತಿ ಜಿ. ಐತಾಳ್) ಶ್ರೀನಿವಾಸ ಪುಸ್ತಕ ಪ್ರಕಾಶನ ಬೆಂಗಳೂರು

೧೨. ನೆರಳು ಮರಗಳಿಲ್ಲದ ದಾರಿ (೨೦೧೭) ಸುಧೀರ ಕೆ.ಪಿ. (ಅನು: ಪಾರ್ವತಿ ಜಿ. ಐತಾಳ್) ದೇಸಿ ಪುಸ್ತಕ ಬೆಂಗಳೂರು

೧೩. ಬಶೀರ್ ಕಥೆಗಳು (೧೯೯೯) (ಅನು: ಮೋಹನ ಕುಂಟಾರ್) ಮಾ ಪ್ರಿಂಟ್ ಪಬ್ಲಿಶರ್ಸ್ ಬೆಂಗಳೂರು

೧೪. ಮಲಯಾಳದ ಪ್ರಸಿದ್ಧ ಪೆಣ್ ಕಥೆಗಳು (೨೦೧೬) (ಅನು: ಪಾರ್ವತಿ ಜಿ. ಐತಾಳ್) ದೇಸಿ ಪುಸ್ತಕ ಬೆಂಗಳೂರು

೧೫. ಮಲಯಾಳದ ೧೦ ಕಥೆಗಾರ್ತಿಯರು (೨೦೦೪) ಶ್ರೀದೇವಿ ಕೆ. ನಾಯರ್ (ಡಾ) (ಸಂ) (ಅನು: ಪ್ರೊ. ಪಾರ್ವತಿ ಜಿ. ಐತಾಳ್) ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ. ಬೆಂಗಳೂರು

೧೬. ವಾಸುದೇವನ್ ನಾಯರ್ ಕತೆಗಳು (೨೦೦೧) (ಅನು: ಮೋಹನ ಕುಂಟಾರ್) ಇಳಾ ಪ್ರಕಾಶನ ಬೆಂಗಳೂರು

೧೭. ವಾಸುದೇವನ್ ನಾಯರ್ ಕಥಾಗುಚ್ಛ (೨೦೧೬) (ಅನು: ಪಾರ್ವತಿ ಜಿ. ಐತಾಳ್) ಹೇಮಂತ ಸಾಹಿತ್ಯ ಬೆಂಗಳೂರು

ಆತ್ಮಕಥನಗಳು

೧. ಆಮೆನ್: ದಮನಿತ ದೀದಿಯ ಆತ್ಮಕಥನ (೨೦೧೬) ಸಿಸ್ಟರ್ ಜೆಸ್ಮಿ (ಅನು: ಲೂಶೀ) ಸೃಷ್ಟಿ ಪಬ್ಲಿಕೇಶನ್ ವಿಜಯನಗರ ಬೆಂಗಳೂರು

೨. ನೀರ್ ಮಾದಳ ಹೂ ಬಿಟ್ಟ ಕಾಲ (೨೦೦೯) ಕಮಲಾದಾಸ್ (ಅನು: ಪಾರ್ವತಿ ಜಿ. ಐತಾಳ) ಮನೋಹರ ಗ್ರಂಥಮಾಲಾ ಧಾರವಾಡ

ಅನುಬಂಧ ೨: ಪರಾಮರ್ಶನ ಗ್ರಂಥಗಳು

ಕನ್ನಡ ಕೃತಿಗಳು

೧. ಅಶೋಕ ಟಿ.ಪಿ. (೨೦೧೩) ವೈದೇಹಿ ಕಥನ, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ

೨. ಇಂದಿರಾ ಆರ್. (ಡಾ) (೨೦೦೨) ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೩. ಉಷಾ ಎಂ. (೨೦೧೨) ಭಾಷಾಂತರ ಮತ್ತು ಲಿಂಗ ರಾಜಕಾರಣ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೪. ಕಮಲಾ ಭಾಸಿನ್ (೨೦೦೧) ಹುಡುಗಿ ಎಂದರೆ ಏನು ಹುಡುಗ ಎಂದರೆ ಏನು, ಸಂವೇದಿ ಮಂಗಳೂರು

೫. ಕಾರಶ್ಶೇರಿ ಎಂ.ಎನ್., ವೈಕಂ ಮುಹಮ್ಮದ್ ಬಶೀರ್ (ಅನು : ಸಾರಾ ಅಬೂಬಕ್ಕರ್) (೨೦೧೫) ಸಾಹಿತ್ಯ ಅಕಾದೆಮಿ ನವದೆಹಲಿ

೬. ಕಿಶೋರಿ ನಾಯಕ್ ಕೆ (ಡಾ) (೧೯೯೯) ಸ್ತ್ರೀವಾದ ನೆಲೆಗಳು ಮತ್ತು ನಿಲುವುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೭. ಕೇಶವಶರ್ಮ ಕೆ. (ಡಾ) (೧೯೯೨) ಸ್ತ್ರೀವಾದಿ ವಿಮರ್ಶೆ, ಅನ್ವೇಷಣೆ ಪ್ರಕಾಶನ ಬೆಂಗಳೂರು

೮. ಗಾಯತ್ರಿ ನಾವಡ (ಡಾ) (೨೦೦೦) ಭಾರತೀಯ ಸ್ತ್ರೀವಾದ ಒಂದು ಸಂಕಥನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೯. ಗೀತಾ ಶೆಣೈ (೨೦೧೦) ಕತೆಯಾದಳು ಹುಡುಗಿ, ಕಾರ್ತಿಕ್ ಎಂಟರ್‌ಪ್ರೈಸಸ್ ಬೆಂಗಳೂರು

೧೦. ಜ್ಯೋತಿ ಶಶಿಕುಮಾರ್ (ಡಾ) (೨೦೦೭) ಮಹಿಳಾ ಸಾಮಾಜಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ

೧೧. ನಿಕೇತನ (ಡಾ) (೨೦೦೫) ಸ್ತ್ರೀದೃಷ್ಟಿ ರಾಶಿ ಪ್ರಕಾಶನ ಉಡುಪಿ

೧೨. ಪ್ರೀತಿ ಶುಭಚಂದ್ರ (ಡಾ) (೨೦೦೨) ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೧೩. ಮಲ್ಲಿನಾಥ ಎಸ್. ತಳವಾರ (ಡಾ) (೨೦೧೨) ಕಾರಂತರ ಸ್ತ್ರೀ ಪ್ರಪಂಚ, ಕಿಕ್ಕೇರಿ ಪಬ್ಲಿಕೇಷನ್ಸ್ ಬೆಂಗಳೂರು

೧೪. ಮಹೇಶ್ವರಿ ಯು. (೨೦೦೧) ಇದು ಮಾನುಷಿಯ ಓದು; ಶಿವರಾಮ ಕಾರಂತ ಅಧ್ಯಯನ ಕೇಂದ್ರ, ವಿವೇಕಾನಂದ ಕಾಲೇಜು ಪುತ್ತೂರು

೧೫. ಮಂಗಳಾ ಪ್ರಿಯದರ್ಶಿನಿ ಡಿ. (೨೦೦೭) ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಪ್ರವೇಶಿಕೆ, ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ಹಂಪಿ

೧೬. ಮೀರಾ ಎಲ್.ಜಿ. (೨೦೦೪) ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಬೆಂಗಳೂರು

೧೭. ಮನು ಚಕ್ರವರ್ತಿ ಎನ್. (ಸಂ) (೧೯೯೩) ಭಾರತೀಯ ಸ್ತ್ರೀವಾದ ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ

೧೮. ಮೋಹನ ಕುಂಟಾರ್ (ಡಾ) (೨೦೦೪) ಕೈರಳಿ, ಸಿ. ವಿ. ಜಿ. ಪಬ್ಲಿಕೇಷನ್ಸ್ ಬೆಂಗಳೂರು

೧೯. ಮೋಹನ ಕುಂಟಾರ್ (ಡಾ) (೨೦೦೬) ಕೇರಳ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೨೦. ಮೋಹನ ಕುಂಟಾರ್ (ಡಾ) (೨೦೧೦) ಭಾಷಾಂತರದ ವಿಭಿನ್ನ ನೆಲೆಗಳು, ಪಲ್ಲವ ಪ್ರಕಾಶನ ಬಳ್ಳಾರಿ

೨೧. ಮೋಹನ ಕುಂಟಾರ್ (ಡಾ) (೨೦೧೪) ಕನ್ನಡ ಮಲಯಾಳಂ ಭಾಷಾಂತರ ಪ್ರಕ್ರಿಯೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೨೨. ಮೋಹನ ಕುಂಟಾರ್ (ಡಾ) (೨೦೧೫) ಭಾಷಾಂತರ ಪ್ರಕ್ರಿಯೆ, ಯಾಜಿ ಪ್ರಕಾಶನ ಹೊಸಪೇಟೆ

೨೩. ರತ್ನಾವತಿ ಟಿ. (ಡಾ) (೨೦೦೯) ಮಲೆಯಾಳ ಸಾಹಿತ್ಯ ಕೃತಿಗಳ ಕನ್ನಡ ಅನುವಾದಗಳು–ಒಂದು ವಿಮರ್ಶಾತ್ಮಕ ಅಧ್ಯಯನ, ಕಣ್ಣೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧ (ಅಪ್ರಕಟಿತ)

೨೪. ವಿಜಯಾ ದಬ್ಬೆ (೧೯೮೯) ಮಹಿಳೆ ಸಾಹಿತ್ಯ ಸಮಾಜ, ರಚನಾ ಪ್ರಕಾಶನ, ಮೈಸೂರು

೨೫. ವಿವೇಕ ರೈ ಬಿ. ಎ. (ಡಾ) (೨೦೧೮) ಅಕ್ಕರ ಮನೆ, ಬಹುರೂಪಿ ಬೆಂಗಳೂರು

೨೬. ವೀಣಾ ಶಾಂತೇಶ್ವರ (ಡಾ) (೨೦೦೯) ಇಲ್ಲಿಂದ ಮುಂದೆಲ್ಲಿಗೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೨೭. ಶ್ರೀಮತಿ ಎಚ್.ಎಸ್. (ಡಾ) (೨೦೦೯) ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೨೮. ಸುಮಿತ್ರಾಬಾಯಿ ಬಿ.ಎನ್. (ಡಾ) (೧೯೯೫) ವಿಚಯ, ಇಳಾ ಪ್ರಕಾಶನ ಬೆಂಗಳೂರು

೨೯. ಸುಮಿತ್ರಾಬಾಯಿ ಬಿ.ಎನ್. (ಡಾ) (೨೦೦೦) ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೩೦. ಸುಮಿತ್ರಾಬಾಯಿ ಬಿ.ಎನ್. (ಡಾ) (೧೯೮೭) ಸಾರ್ವತ್ರಿಕದೆಡೆಗೆ, ಮಾನವ ಪ್ರಕಾಶನ ಹಾಸನ

೩೧. ಸುಮಿತ್ರಾಬಾಯಿ ಬಿ.ಎನ್. (ಡಾ) & ಎನ್ ಗಾಯತ್ರಿ (೧೯೯೫) ಸ್ತ್ರೀವಾದಿ ಪ್ರವೇಶಿಕೆ, ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು

೩೨. ಸುಮಿತ್ರಾ ಎಲ್.ಸಿ. (೨೦೧೪) ಓದಿನ ಸುಖ, ಅಕ್ಷರ ಪ್ರಕಾಶನ ಹೆಗ್ಗೋಡು

ಇಂಗ್ಲೀಷ್ ಕೃತಿ

೧. Parvathi G. Aithal (Dr) (೨೦೧೪) Karanth and Thakazhi (A Comparative Study from a feminist Perspective) Baraha Publishing House, Bangalore